ರಕ್ಷಣಾ ವಾಸ್ತುಶಿಲ್ಪ: ಗುಲಬರ್ಗಾ ಜಿಲ್ಲೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶಂಭುಲಿಂಗ ಎಸ್. ವಾಣಿ

ಮಾರ್ಗದರ್ಶಕರು

ಡಾ. ಸಿ. ಮಹದೇವ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,
ಸಮಾಜ ವಿಜ್ಞಾನಗಳ ನಿಕಾಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೦

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ರಕ್ಷಣಾ ವಾಸ್ತುಶಿಲ್ಪ: ಗುಲಬರ್ಗಾ ಜಿಲ್ಲೆ

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಮಹಾಪ್ರಬಂಧ

ಸಂಶೋಧಕರು

ಶಂಭುಲಿಂಗ ಎಸ್. ವಾಣಿ

ಮಾರ್ಗದರ್ಶಕರು

ಡಾ. ಸಿ. ಮಹದೇವ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,

ಸಮಾಜ ವಿಜ್ಞಾನಗಳ ನಿಕಾಯ,

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೦

ದೃಢೀಕರಣ ಪತ್ರ

ಶ್ರೀ ಶಂಭುಲಿಂಗ ಎಸ್. ವಾಣಿ ಇವರು **ರಕ್ಷಣಾ ವಾಸ್ತುಶಿಲ್ಪ: ಗುಲಬರ್ಗಾ ಜಿಲ್ಲೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

03/3/10.

ದಿನಾಂಕ: 03-3-2010.

ಸ್ಥಳ: ಹಂಪಿ

ಡಾ. ಸಿ. ಮಹದೇವ

ಮಾರ್ಗದರ್ಶಕರು ಹಾಗೂ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರಮಾಣ ಪತ್ರ

ರಕ್ಷಣಾ ವಾಸ್ತುಶಿಲ್ಪ: ಗುಲಬರ್ಗಾ ಜಿಲ್ಲೆ ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು **ಡಾ. ಸಿ. ಮಹದೇವ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 03. 3. 2010
ಸ್ಥಳ: ವಿದ್ಯಾರಣ್ಯ.

3/3/2010

ಶಂಭುಲಿಂಗ ಎಸ್. ವಾಣಿ
ಇತಿಹಾಸ ಉಪನ್ಯಾಸಕರು
ಸರಕಾರ ಮಹಾವಿದ್ಯಾಲಯ,
ಗುಲಬರ್ಗಾ.

ಕೃತಜ್ಞತೆಗಳು

ಈ ಮಹಾಪ್ರಬಂಧದ ರಚನೆಯ ಸಂದರ್ಭದಲ್ಲಿ ಹಲವರ ಸೂಕ್ತ ಮಾರ್ಗದರ್ಶನ ಸಹಾಯ, ಸಹಕಾರ ಹಾಗೂ ಬೆಂಬಲ ಅವಶ್ಯವಾಗಿತ್ತು. ಈ ನಿಟ್ಟಿನಲ್ಲಿ ಸಹಾಯ ಮಾಡಿರುವ ವಿಷಯ ಪರಿಣಿತರನ್ನು ಹಾಗೂ ಸ್ನೇಹಿತರನ್ನು ನೆನೆಯುವುದು, ಅವರಿಗೆ ಕೃತಜ್ಞತೆ ಸಲ್ಲಿಸುವುದು ನನ್ನ ಆಧ್ಯ ಕರ್ತವ್ಯವಾಗಿದೆ. ವಿದ್ಯಾರ್ಥಿ ದೆಸೆಯಿಂದಲೂ ನನಗೆ ಕಲೆ ಮತ್ತು ವಾಸ್ತು ಶಿಲ್ಪದಲ್ಲಿ ತುಂಬಾ ಆಸಕ್ತಿ ಮತ್ತು ಅಭಿರುಚಿ ಇತ್ತು. ಮುಖ್ಯವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ನಿರ್ಮಾಣಗೊಂಡ ಸ್ಮಾರಕಗಳ ಬಗ್ಗೆ ಅಧ್ಯಯನ ಮಾಡಬೇಕೆನ್ನುವುದು ನನ್ನ ಪ್ರಮುಖ ಗುರಿಯಾಗಿತ್ತು. ಕನ್ನಡ ವಿಶ್ವವಿದ್ಯಾಲಯ ಇದಕ್ಕೆ ಸೂಕ್ತವೆಂದು ತಿಳಿದು, ೨೦೦೫ರಲ್ಲಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಸಂಶೋಧನೆಗೆ ಹೆಸರು ನೊಂದಾಯಿಸಿಕೊಂಡು ಅಧ್ಯಯನ ಪ್ರಾರಂಭಿಸಿದೆನು. ಇಂತಹ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಿಗೂ, ಅಧ್ಯಯನಾಂಗದ ನಿರ್ದೇಶಕರಿಗೂ ಹಾಗೂ ವಿಭಾಗದ ಎಲ್ಲಾ ಪ್ರಾಧ್ಯಾಪಕ ವೃಂದದವರಿಗೂ ನಾನು ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಸಂಶೋಧನೆಗೆ ಮಾರ್ಗದರ್ಶಕರಾಗಲು ಒಪ್ಪಿಕೊಂಡಿರುವ ಡಾ. ಸಿ. ಮಹದೇವ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಇವರನ್ನು ನಾನು ಮರೆಯುವಂತಿಲ್ಲ. ಮೊದಲನೆಯ ಮಾರ್ಗಕರ್ಶಕರಾದ ಡಾ. ಬಾಲಸುಬ್ರಮಣ್ಯ ಅವರು ವಿಧಿವಶರಾಗಿರುವುದು ತುಂಬಾ ನೊವನ್ನುಂಟು ಮಾಡಿತು. ಈ ಸಂದರ್ಭದಲ್ಲಿ ನಾನು ಅವರನ್ನು ನೆನೆಯತ್ತ, ದೇವರು ಅವರ ಆತ್ಮಕ್ಕೆ ಶಾಂತಿ ನೀಡಲೆಂದು ಆ ಭಗವಂತನದಲ್ಲಿ ಪ್ರಾರ್ಥಿಸುತ್ತೇನೆ. ನಾನು ಅನ್ಯ ಮಾರ್ಗದರ್ಶಕ ಹುಡುಕಾಟದಲ್ಲಿದ್ದಾಗ, ನನ್ನ ಸಮಸ್ಯೆಯನ್ನು ಅರಿತುಕೊಂಡು ನನಗೆ ಮಾರ್ಗದರ್ಶಕರಾಗಲು ಒಪ್ಪಿಕೊಂಡಿರುವುದು ಡಾ. ಸಿ. ಮಹದೇವ ಸರ್ ಅವರಲ್ಲಿರುವ ದೊಡ್ಡಗುಣವೆ ಕಾರಣ, ಸಂಶೋಧನೆಯ ವಿದ್ಯಾರ್ಥಿಗಳ ಬಗ್ಗೆ ಅವರಿಗೆ ಅಪಾರ ಕಾಳಜಿ ಮತ್ತು ಅನುಕಂಪವಿದೆ. ಒಬ್ಬ ವಿದ್ಯಾರ್ಥಿಯ ಸಂಶೋಧನೆ ರದ್ದಾಗಬಾರದೆಂದು ನನ್ನನ್ನು ಕರೆದು ದೈರ್ಯ ತುಂಬಿ ಒಂದು ಹೊಸ ವಿಷಯವನ್ನು ಸೂಚಿಸಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟರು. ಡಾ. ಸಿ. ಮಹದೇವ ಅವರ ಮಾರ್ಗದರ್ಶನದಲ್ಲಿ ನಾನು ಕೈಕೊಂಡ ಸಂಶೋಧನೆಯು ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಗುಲಬರ್ಗಾ ಜಿಲ್ಲೆಯ ಸ್ಮಾರಕಗಳ ಬಗ್ಗೆ ಅಭಿರುಚಿ ಇರುವುದನ್ನು ಗಮನಿಸಿದ ಮಾರ್ಗದರ್ಶಕರು ನನಗೆ ಸೂಕ್ತ ವಿಷಯವನ್ನು ನೀಡಿ, ಅಧ್ಯಯನ ಕೈಗೊಳ್ಳುವಂತೆ ಸಹಕರಿಸಿದರು. ಇವರು ನೀಡಿರುವ ಸಲಹೆ, ಸೂಚನೆಗಳನ್ನು ಅಳವಡಿಸಿಕೊಂಡು ಅಧ್ಯಯನ ಪೂರ್ತಿಗೊಳಿಸಲಾಯಿತು. ಅಂತಹ ಮಾರ್ಗದರ್ಶಕರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ನನ್ನ ಪರಮ ಧರ್ಮವಾಗಿದೆ.

[illegible]

ವಿಭಾಗದ ಮುಖ್ಯಸ್ಥರಾದ ಡಾ. ಎಸ್.ವೈ. ಸೋಮಶೇಖರ ಅವರು ಹಾಗೂ ಪ್ರಾಧ್ಯಾಪಕರಾದ ಡಾ. ವಾಸುದೇವನ್, ಡಾ. ವಾಸುದೇವ ಬಡಿಗೇರ, ಶ್ರೀ ರಮೇಶ ನಾಯಕ ಅವರುಗಳು ನನಗೆ ಸಕಾಲದಲ್ಲಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ, ಸಂಶೋಧನೆಯಲ್ಲಿ ಸಹಕರಿಸಿರುವುದರಿಂದ ಅವರೆಲ್ಲರಿಗೂ ನನ್ನ ಅಭಿನಂದನೆಗಳು.

ನನಗೆ ಅರೆಕಾಲಿಕ ಸಂಶೋಧನೆಗೆ ಅನುಮತಿ ನೀಡಿ ಸಹಕರಿಸಿದ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೂ, ನಿರ್ದೇಶಕರಿಗೂ ಹಾಗೂ ಸಂಬಂದ ಪಟ್ಟ ಇಲಾಖೆಯ ಎಲ್ಲಾ ಅಧಿಕಾರಿ ವರ್ಗದವರಿಗೂ, ಅಭಿನಂದನೆಗಳು, ಹಾಗೆಯೇ ಸರಕಾರಿ ಪ್ರಥಮ ದರ್ಜೆ ಕಾಲೇಜು, ಜೇವರ್ಗಿಯಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಡಾ. ಸಿದ್ರಾಮಪ್ಪ ಅವರಾದಿ ಸರ್ ಅವರಿಗೂ ಮತ್ತು ಪ್ರಸ್ತುತ ಪ್ರಾಚಾರ್ಯರಾದ ಪ್ರೊ. ಎಸ್.ಎಸ್. ಹಿರೇಮಠ ಅವರು ಹಾಗೂ ಹಾಲಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಬಿ.ಪಿ. ಹೂಗಾರ ಅವರು ನನಗೆ ಸಂಶೋಧನೆ ಮಾಡಲು ಪ್ರೋತ್ಸಾಹಿಸಿ, ಸಹಕರಿಸಿರುವುದರಿಂದ ಅವರೆಲ್ಲರಿಗೂ ಕೃತಜ್ಞತೆಗಳು.

ಇನ್ನೂ ನನ್ನ ಅಧ್ಯಯನದಲ್ಲಿ ಸಂಪೂರ್ಣವಾಗಿ ಸಹಾಯ ಸಹಕಾರ ನೀಡಿರುವ ನನ್ನ ಧರ್ಮ ಪತ್ನಿಯಾದ ಶ್ರೀಮತಿ ಮಂಜುಳಾ ಎಸ್. ವಾಣಿ ಅವರನ್ನು, ಮರೆಯಲಾರೆ, ಅದೇ ರೀತಿ ನನ್ನ ಸಹೋದ್ಯೋಗಿ ಮಿತ್ರರಾದ ಡಾ. ಮಹದೇವ ಬಡಿಗೇರ, ಹಿರಿಯ ಶ್ರೇಣಿ ಉಪನ್ಯಾಸಕರು ಸ.ಪ್ರ.ದ.ಕಾ. ಜೇವರ್ಗಿ ಅವರು ನನಗೆ ಈ ಕಾರ್ಯದಲ್ಲಿ ಹಲವು ದೃಷ್ಟಿಯಿಂದ ಸಹಾಯ ಸಹಕಾರ ಮಾಡಿರುತ್ತಾರೆ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ನನ್ನ ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ಸಹಕರಿಸಿದ ಪ್ರಾಧ್ಯಾಪಕ ಮಿತ್ರರಾದ ಡಾ. ಶ್ರೀಶೈಲ್ ಬಿರಾದಾರ, ಡಾ. ಶಶಿಶೇಖರ ರೆಡ್ಡಿ, ಡಾ. ಸರ್ವೋದಯ ಶಿವಪುತ್ರ, ಡಾ. ಇಂದುಮತಿ ಪಾಟೀಲ, ಡಾ. ರಾಘವೇಂದ್ರ ಗುಡಗುಂಟಿ, ಡಾ. ಎಸ್.ಕೆ. ಅರುಣಿ, ಪ್ರೊ. ಎಂ.ಎಸ್. ಕುಂಬಾರ, ಪ್ರೊ. ಚಂದ್ರಶೇಖರ ಅನಾದಿ, ಪ್ರೊ. ಆತಿಯಾ ಪರ್ವಿನ ಹಾಗೂ ಇತರ ಸಹೋದ್ಯೋಗಿ ಮಿತ್ರರೆಲ್ಲರಿಗೂ ಮತ್ತು ಗುಲಬರ್ಗಾ ಜಿಲ್ಲಾ ಇತಿಹಾಸ ಆಸಕ್ತರ ಬಳಗದ ಎಲ್ಲ ಪದಾದಿಕಾರಿಗಳಿಗೂ ಧನ್ಯವಾದಗಳು.

ನನ್ನ ಸಂಶೋಧನೆಯ ಕಾರ್ಯದಲ್ಲಿ ಸಹಕರಿಸಿದ ಕುಟುಂಬ ಸದಸ್ಯರಿಗೂ ಹಾಗೂ ಮಕ್ಕಳಾದ ಚಿ. ಪ್ರಸಾದ ಮತ್ತು ಚಿ. ಪೃಥ್ವಿರಾಜ ಅವರುಗಳಿಗೆ ನನ್ನ ಕೃತಜ್ಞತೆಗಳು.

ಕೊನೆಯದಾಗಿ ನನ್ನ ಮಹಾ ಪ್ರಬಂಧವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿದ ಶ್ರೀ ಲಕ್ಷ್ಮಿ ಡಿ.ಟಿ.ಪಿ. ಸೆಂಟರನ ಮಾಲಿಕರಿಗೂ ಅಭಿನಂದನೆಗಳು.

ಶಂಭುಲಿಂಗ ಎಸ್. ವಾಣಿ

ಪರಿವಿಡಿ

ಸಂಕ್ಷೇಪಗಳ ವಿಸ್ತೃತ ರೂಪಗಳು

ಎ.ಕ.	:	ಎಫಿಗ್ರಫಿಯ ಕರ್ನಾಟಕ ಸಂಪುಟ
ಇ.ದ	:	ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಂಚಿಕೆ, ಬೆಂಗಳೂರು.
ಕ.ವಿ.ವಿ.	:	ಕನ್ನಡ ವಿಷಯ ವಿಶ್ವಕೋಶ
ಕ.ಚ.ಸಂ.	:	ಕರ್ನಾಟಕ ಚರಿತ್ರೆ ಸಂಪುಟಗಳು
ದ.ಕ.ಅ.ಮ.	:	ದಕ್ಷಿಣ ಕರ್ನಾಟಕದ ಅರಸು ಮನೆತನಗಳು
ಪ್ರಾ.ಶಾ.ಲೇ.ಸಂ.	:	ಪ್ರಾಚೀನ ಶಾಸನಗಳ ಲೇಖನ ಸಂಗ್ರಹ
D.A.I.E.K.	:	Defence Architecture in Early Karnataka
I.A.	:	Indian Antiqury
I.A.R.	:	Indian Archaealogy - A Review (New Delhi)
M.A.R.	:	Mysore Archaeological Report
Q.J.M.S.	:	Quarterly Journal of Mithic Society

ಗುಲಬರ್ಗಾ ಜಿಲ್ಲೆಯ ನಕಾಶೆ



ಗುಲಬರ್ಗಾ ಜಿಲ್ಲೆಯ ಪ್ರಮುಖ ಕೋಟೆಗಳು



೦೧) ಸನ್ನತಿ
೦೨) ಸಗರ
೦೩) ಮಳಖೇಡ
೦೪) ಅಲ್ಲೂರು
೦೫) ಸೇಡಂ
೦೬) ಅಡಕಿ
೦೭) ಮುಧೋಳ

೦೮) ನಾಗಾವಿ
೦೯) ದಂಡೋತಿ
೧೦) ಅಳ್ಳೊಳ್ಳಿ
೧೧) ಕೊಲ್ಲುರು
೧೨) ಗುಲಬರ್ಗಾ
೧೩) ಫಿರೋಜಾಬಾದ
೧೪) ಫರಹತಾಬಾದ

೧೫) ಹೊಲಕುಂದ
೧೬) ಶಹಾಪೂರ
೧೭) ಯಾದಗಿರಿ
೧೮) ಸುರಪುರ
೧೯) ವಾಗಣಗೇರಿ
೨೦) ವನದುರ್ಗ
೨೧) ರಾಯನಪಾಳಾ

೨೨) ಇಜೇರಿ
೨೩) ಚಿನ್ಮಳ್ಳಿ
೨೪) ಕಾಕಲವಾರ
೨೫) ಚಂಡ್ರಕಿ
೨೬) ಗುರಮಿಟಕಲ್
೨೭) ಚಿಂಚೋಳಿ
೨೮) ಬಂದರವಾಡ

ಅಧ್ಯಾಯ-೧

ಪ್ರಸ್ತಾವನೆ

ಜಗತ್ತಿನಲ್ಲಿ ಜೀವಿಸುವ ಪ್ರತಿಯೊಂದು ಜೀವಕೋಶವು ರಕ್ಷಣೆಯನ್ನು ಬಯಸುತ್ತದೆ. ರಕ್ಷಣೆಯಲ್ಲಿ ಎರಡು ಪ್ರಕಾರಗಳಿವೆ. ಒಂದು ನೈಸರ್ಗಿಕವಾದ ರಕ್ಷಣೆ ಮತ್ತೊಂದು ಸ್ವಯಂ ವ್ಯಕ್ತಿತ್ವದ ರಕ್ಷಣೆ. ದೇವರು ಕೆಲವು ಜೀವಿಗಳಿಗೆ ಶರೀರದ ಕೆಲವು ಭಾಗಗಳಲ್ಲಿ ರಕ್ಷಣಾತ್ಮಕವಾದ ಶಕ್ತಿಯನ್ನು ನೀಡಿರುತ್ತಾನೆ. ಅದರಿಂದ ಅವು ರಕ್ಷಣೆಯನ್ನು ಪಡೆದುಕೊಳ್ಳುತ್ತವೆ. ಉದಾಹರಣೆಗೆ ಬಸವನಹುಳು, ಆಮೆ, ಮುಳ್ಳಹಂದಿ, ಕಾಡೆಮ್ಮೆ ಮುಂತಾದ ಪ್ರಾಣಿಗಳು. ಈ ಪ್ರಾಣಿಗಳು ತಮ್ಮ ಕವಚದಿಂದ ರಕ್ಷಣೆಯನ್ನು ಪಡೆದುಕೊಳ್ಳುತ್ತದೆ. ಅದೆ ರೀತಿ ದೇವರು ಮಾನವನ ಅತಿಸೂಕ್ಷ್ಮವಾದ ಮೆದುಳಿನ ರಕ್ಷಣೆಗಾಗಿ ಭದ್ರವಾದ ತಲೆಬುರುಡೆಯನ್ನು ನೀಡಿದ್ದಾನೆ. ಮಾನವನ ಶರೀರ ರಚನೆಯಲ್ಲಿಯೆ ಇದು ಅತ್ಯಂತ ಭದ್ರವಾದ ಭಾಗವಾಗಿದೆ. ಮನಷ್ಯನು ನಿಧನಹೊಂದಿದ ನಂತರವೂ ಸುಮಾರು ವರ್ಷಗಳವರೆಗೆ ತಲೆ ಬುರುಡೆ ಉಳಿಯುತ್ತದೆ. ಅಂತಹ ಶಕ್ತಿ ದೇವರು ಅದಕ್ಕೆ ನೀಡಿದ್ದಾನೆ. ಇದನ್ನು ನಾವು ಇಲ್ಲಿ ಕೋಟೆಗೆ ಹೋಲಿಸಬಹುದು. ಸಾಮ್ರಾಜ್ಯ ಅವನತಿ ಹೊಂದಿದ ನಂತರವೂ ಅವರ ಕೋಟೆ ಮಾತ್ರ ಸುಮಾರು ವರ್ಷಗಳ ಕಾಲದವರೆಗೆ ಹಾಗೆ ಉಳಿದು ಕೊಂಡಿರುತ್ತದೆ. ಕೋಟೆಯು ಮಾನವನು ತನ್ನ ರಕ್ಷಣೆಗೆ ನಿರ್ಮಿಸಿಕೊಂಡಿರುವ ವ್ಯವಸ್ಥೆಯಾಗಿದೆ.

ಮಾನವನು ಭೂಮಿಯ ಮೇಲೆ ಹುಟ್ಟಿ ಬಂದಾಗಿನಿಂದ ಇಲ್ಲಿಯವರೆಗೆ ತನಗೆ ಅವಶ್ಯವಾಗಿರುವ ರಕ್ಷಣಾ ಕ್ರಮಗಳನ್ನು ಅಳವಡಿಸಿಕೊಂಡಿರುವುದು ನಾವು ಮಾನವನ ಹುಟ್ಟು ಮತ್ತು ವಿಕಾಸದಲ್ಲಿ ಕಾಣುತ್ತೇವೆ. ಪ್ರಕೃತಿಯಲ್ಲಿ ದೊರೆಯುವ ವಸ್ತುಗಳನ್ನು ಬಳಸಿಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳಲು ಆರಂಭಿಸಿದ ಆದಿಮಾನವನು ಪ್ರಾರಂಭದಲ್ಲಿ ಶರೀರದ ರಕ್ಷಣೆಗೆ ಮರದ ತೊಗಟೆ, ಪ್ರಾಣಿಗಳ ಚರ್ಮ ಹಾಗೂ ಗಿಡದ ತಪ್ಪಲುಗಳನ್ನು ಬಳಸಿಕೊಂಡು ಶರೀರಕ್ಕೆ ರಕ್ಷಣೆಯನ್ನು ಪಡೆದುಕೊಂಡನು. ಈ ಜನಾಂಗ ತಮಗೆ ಅವಶ್ಯವಿರುವ ವಸ್ತುಗಳು ಒಂದೆ ಕಡೆಗೆ ಲಭ್ಯವಾಗುವ ಸ್ಥಳಗಳಲ್ಲಿ ನೆಲೆನಿಂತು, ಕಲ್ಲು ಬಂಡೆಗಳ ಮಧ್ಯದಲ್ಲಿ ವಾಸಿಸತೊಡಗಿದನು ಇದು ಕ್ರಮೇಣವಾಗಿ ಗ್ರಾಮೀಣ ಬದುಕಿಗೆ ದಾರಿಮಾಡಿಕೊಟ್ಟಿತು. ತನ್ನ ಕುಟುಂಬದ ರಕ್ಷಣೆಗಾಗಿ ಮನೆಯನ್ನು, ಹಾಗೂ ಮನೆಗಳ ರಕ್ಷಣೆಗೆ ಗ್ರಾಮವನ್ನು, ಗ್ರಾಮಗಳ ರಕ್ಷಣೆಗೆ ಸುತ್ತಲು ರಕ್ಷಣಾ ಗೋಡೆಗಳನ್ನು ಹಾಗೂ ಇತರ ರಕ್ಷಣಾ ಕಟ್ಟಡಗಳನ್ನು ನಿರ್ಮಿಸಿಕೊಳ್ಳಲು ಪ್ರಾರಂಭಿಸಿದ ಇದರಿಂದ ಮುಂದೆ ರಾಜ್ಯಗಳ, ಸಾಮ್ರಾಜ್ಯಗಳಾಗಿ ಬೆಳವಣಿಗೆ ಹೊಂದಿದವು. ಇಲ್ಲಿ ರಕ್ಷಣೆ ಎನ್ನುವುದು ವಾಸ್ತವಿಕವಾಗಿ ಕೋಟೆ ಎನ್ನುವ ಅರ್ಥವನ್ನು ಒಳಗೊಂಡಿರುತ್ತದೆ.

ಪ್ರಾರಂಭದಲ್ಲಿ ಮಾನವನಿಗೆ ದುಷ್ಟ ಪ್ರಾಣಿಗಳಿಂದ, ವಿಷಜಂತುಗಳಿಂದ ಹಾಗೂ ನೈಸರ್ಗಿಕ ವಿಕೋಪಗಳಿಂದ ರಕ್ಷಣೆಯು ಅವಶ್ಯವಾಗಿತ್ತು. ಆದಕ್ಕೆ ಅನುಗುಣವಾಗಿ ರಕ್ಷಣಾ ವ್ಯವಸ್ಥೆಯನ್ನು

ಕೈಗೊಂಡನು. ಕಾಲಕ್ರಮಣವಾಗಿ ಆರ್ಥಿಕವಾಗಿ ಶ್ರೀಮಂತನಾದ ಮನುಷ್ಯನಿಗೆ ಕಳ್ಳರ ಹಾಗೂ ಶತ್ರುಗಳ ಭಯ ಉಂಟಾಯಿತು. ಆದ್ದರಿಂದ ತನಗೆ ಹೆಚ್ಚಿನ ರಕ್ಷಣೆಯ ಅವಶ್ಯಕತೆ ಇದೆ ಎಂದು ಅರಿತುಕೊಂಡು, ಭೌಗೋಳಿಕವಾಗಿ ಸೂಕ್ತ ಹಾಗೂ ರಕ್ಷಣಾತ್ಮಕವಾದ ಸ್ಥಳಗಳನ್ನು ಹುಡುಕುತ್ತಹೊರಟನು. ಅಂತಹ ಸ್ಥಳಗಳು ಲಭ್ಯವಾದಾಗ, ಆ ಸ್ಥಳಗಳಲ್ಲಿ ನೆಲೆನಿಂತನು. ಇನ್ನೂ ಕೆಲವು ಸಂದರ್ಭಗಳಲ್ಲಿ ವಿಶೇಷ ರಕ್ಷಣೆಯ ಕಡೆಗೆ ಗಮನ ಹರಿಸಿ ಕೋಟೆಗಳ ನಿರ್ಮಾಣಕಾರ್ಯದಲ್ಲಿ ತೊಡಗಿದರು. ಇದರಿಂದ ನಾಡಿನಾದ್ಯಂತ ಹಲವು ಬಗೆಯ ಕೋಟೆಗಳು ಬೆಳೆದು ಬಂದವು.

ದೇಶದಲ್ಲಿ ನಿರ್ಮಾಣಗೊಂಡ ಹಲವು ಪ್ರಮುಖ ಕೋಟೆಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಅಲ್ಲದೆ ಪ್ರಮುಖ ಮನೆತನಗಳ ಬಗ್ಗೆ ಸಂಶೋಧನೆಗಳು ಆಗಿವೆ. ಪ್ರಾದೇಶಿಕ ಇತಿಹಾಸದ ಪುನರ್‌ಚನೆಯ ಕಾರ್ಯದಲ್ಲಿ ಇಂತಹ ಸಂಶೋಧನೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸ್ಥಳಿಯ ಚರಿತ್ರೆಯ ಕಡೆಗೆ ಗಮನಹರಿಸಿದಾಗ ಇನ್ನೂ ಹೆಚ್ಚಿನ ಸಂಶೋಧನೆಗಳ ಅಗತ್ಯ ಕಂಡು ಬರುತ್ತದೆ. ಇಲ್ಲಿ ಸಂಶೋಧಕನು ಮೂಲಾಧಾರಗಳ ಕೊರತೆ ಅನುಭವಿಸ ಬೇಕಾಗುತ್ತದೆ. ಏಕೆಂದರೆ ಸ್ಥಳಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ಕೇವಲ ಮೌಖಿಕ ಆಧಾರಗಳು ಹಾಗೂ ಕೈಫಿಯತ್ತುಗಳಲ್ಲಿ ಮಾಹಿತಿ ಲಭ್ಯವಾಗುತ್ತದೆ.[೧] ಗುಲಬರ್ಗಾದಲ್ಲಿ ಆಳ್ವಿಕೆ ಮಾಡಿರುವ ಬಹಮನಿಯರು ಮೂಲತಃ ಪರ್ಶಿಯನರಾದ್ದರಿಂದ ಅವರ ಎಲ್ಲಾ ಸಾಹಿತ್ಯಿಕ ಮೂಲಾಧಾರಗಳು ಅರೆಬಿಕ್ ಮತ್ತು ಪರ್ಶಿಯನ್ ಭಾಷೆಯಲ್ಲಿವೆ. ಇವುಗಳ ಭಾಷಂತರದ ಕೊರತೆಯಿಂದ ಸಂಶೋಧನೆಯಲ್ಲಿ ನಿರ್ಧಿಷ್ಟ ಉತ್ತರ ಕಂಡುಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಸ್ಥಳಿಯ ಚರಿತ್ರೆಯನ್ನು ಪುನರನಿರ್ಮಾಣಗೊಳಿಸುವ ಅಗತ್ಯವಿದೆ. ಇದರಿಂದ ಸ್ಥಳಿಯ ವಿಷಯಗಳಾದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಅಲ್ಲದೆ ದೇಶದ ಇತಿಹಾಸದಲ್ಲಿ ಇನ್ನಷ್ಟು ಸ್ಪಷ್ಟತೆಯನ್ನು ಕಂಡು ಕೊಳ್ಳಲು ಸಾಧ್ಯವಾಗುತ್ತದೆ.

ಕ್ರಿ.ಶ. ೨೦೦೫ರಲ್ಲಿ ಸೇಡಂನಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾಡೆಮಿ (ರಿ)ಯ ೧೯ನೇ ವಾರ್ಷಿಕ ಸಮ್ಮೇಳನದಲ್ಲಿ ಸಮ್ಮೇಳನದ .ಅಧ್ಯಕ್ಷರಾದ ಪ್ರೊ. ಬಿ.ವಿ.ಶಿರೂರ ನಿವೃತ್ತ ಕನ್ನಡ ಪ್ರಾಧ್ಯಾಪಕರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರು ಗುಲಬರ್ಗಾ ವಿಶ್ವವಿದ್ಯಾಲಯವು ಪರಿಪೂರ್ಣವಾದ ಇತಿಹಾಸ ವಿಭಾಗವನ್ನು ಹೊಂದಿದ್ದರೂ ಸ್ಥಳಿಯ ಚರಿತ್ರೆಯ ಕುರಿತು ಗಮನ ಹರಿಸಿಲ್ಲ ಹಾಗೂ ಹೆಚ್ಚಿನ ಸಂಶೋಧನೆಗಳು ನಡೆದಿಲ್ಲವೆಂದು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.[೨] ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಸ್ಥಳಿಯ ವಿಷಯಕ್ಕೆ ಒತ್ತು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿದೆ. ಕ್ರಿ.ಶ ೨೦೦೭ ರಂದು "ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ಎನ್ನುವ ವಿಷಯ ಕುರಿತು ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಇವರು ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ ವಿಚಾರ ಸಂಕೀರ್ಣದಲ್ಲಿ[೩] ಹಿರಿಯ

ವಿದ್ವಾಂಸರು, ತರುಣ ಸಂಶೋಧಕರು ಹಾಗೂ ವಿಷಯ ಆಸಕ್ತರು ಗುಲಬರ್ಗಾ ಜಿಲ್ಲೆಯ ಇತಿಹಾಸ ಕುರಿತು ಲೇಖನಗಳನ್ನು ಮಂಡಿಸಿದರು. ಈ ಎಲ್ಲಾ ಲೇಖನಗಳ ಸಂಗ್ರಹದ ಸಂಕಲನವು ಸಂಶೋಧಕರಿಗೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ.

ಪ್ರಸ್ತುತ ಸಂಶೋಧನೆಯು 'ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆ' ಎನ್ನುವ ಶಿರೋನಾಮವನ್ನು ಹೊಂದಿರುವುದರಿಂದ, ಇದುವರೆಗೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಕೋಟೆಗಳ ಕುರಿತು ನಡೆದ ಅಧ್ಯಯನಗಳನ್ನು ಪರಮಾರ್ಶಿಸಿ, ಕೋಟೆ ಪದದ ಅರ್ಥ ಮತ್ತು ಸ್ವರೂಪ ಕುರಿತು ಮಾಹಿತಿ ಪಡೆದು ಕೊಂಡು, ಅವುಗಳೊಂದಿಗೆ ಸ್ಥಳೀಯ ಕೋಟೆಗಳನ್ನು ಹೊಲಿಸಿ, ಅಧ್ಯಯನ ಕೈಗೊಳ್ಳಲಾಗಿದೆ. ಅಲ್ಲದೆ ರಕ್ಷಣೆಗೆ ಸಂಬಂಧಿಸಿದ ಇತರ ಸ್ಮಾರಕಗಳಾದ ದೇವಾಲಯ, ಮಸೀದಿ, ಅರಮನೆ, ಆಶ್ರಯತಾಣಗಳು ಮುಂತಾದವುಗಳು. ರಾಜ್ಯದ ಅಥವಾ ರಾಜನ ಹಾಗೂ ಆತನ ಪರಿವಾರದ ರಕ್ಷಣೆಯಲ್ಲಿ ಎಷ್ಟರ ಮಟ್ಟಿಗೆ ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವುದನು ಕುರಿತು ಚರ್ಚಿಸಲಾಗಿದೆ. ಒಟ್ಟಿನಲ್ಲಿ ರಕ್ಷಣಾ ವಾಸ್ತುಶಿಲ್ಪ ಎಂದರೆ ರಕ್ಷಣೆಗೆ ಸಂಬಂಧಿಸಿದ ಎಲ್ಲಾ ಬಗೆಯ ಕಟ್ಟಡಗಳ ಆಧ್ಯಯನವೆಂದು ತಿಳಿದುಕೊಂಡು ಅವುಗಳ ಮಾಹಿತಿ ಸಂಗ್ರಹಿಸಲಾಗಿದೆ.

ರಾಜ್ಯದ ರಕ್ಷಣೆಯಲ್ಲಿ ಕೋಟೆಗಳ ಪಾತ್ರ ಪ್ರಮುಖವಾಗಿದೆ. ಯುದ್ಧನೀತಿಯು ಬದಲಾದಂತೆ ಕೋಟೆಗಳ ರಚನಾ ಶೈಲಿಯಲ್ಲಿ ಬದಲಾವಣೆಗಳಾದವು. ಇತಿಹಾಸ ರಚನೆಗೆ ರಕ್ಷಣಾ ಸ್ಮಾರಕಗಳು ಪ್ರಮುಖವಾದ ಪ್ರಾಕ್ತನಶಾಸ್ತ್ರಧಾರಗಳಾಗಿವೆ. ಅಲ್ಲದೆ ಸಾಂಸ್ಕೃತಿಕ ಇತಿಹಾಸದ ಅಧ್ಯಯನದಲ್ಲಿ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ. ಶತಶತಮಾನಗಳಿಂದ ಮಳೆ, ಗಾಳಿ, ಬಿಸಿಲಿಗೆ ಮೈಯೊಡ್ಡಿನಿಂತಿರುವ ಕೋಟೆಗಳು ವಿನಾಶದ ಅಂಚಿನಲ್ಲಿವೆ, ಕೋಟೆಯ ಕಾಳಗವು ಸಂಪೂರ್ಣವಾಗಿ ಕೋಟೆಯ ಭದ್ರತೆಯನ್ನೆ ಅವಲಂಬಿಸಿರುತ್ತದೆ. ಅಂತಹ ಕಾಳಗಗಳನ್ನು ಎದುರಿಸಿ ತಮ್ಮ ದೊರೆಯನ್ನು ರಕ್ಷಿಸಿರುವ ಕೋಟೆಗಳು ಇಂದು ತಮ್ಮನ್ನು ತಾವು ರಕ್ಷಿಸಿಕೊಳ್ಳದ ಸ್ಥಿತಿಗೆ ತಲುಪಿವೆ. ಈ ಕೋಟೆಗಳು ಸಂಪೂರ್ಣವಾಗಿ ನಾಶಹೊಂದುವ ಮುನ್ನ ಅವುಗಳನ್ನು ದಾಖಲಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವ ಪ್ರಯತ್ನ ಪ್ರಸ್ತುತ ಅಧ್ಯಯನವು ಹೊಂದಿರುತ್ತದೆ.

೧.೧. ಅಧ್ಯಯನದ ಉದ್ದೇಶ

ಸಂಶೋಧಕನಿಗೆ ತನ್ನ ಸಂಶೋಧನೆಯ ಉದ್ದೇಶವು ಅತಿ ಪ್ರಮುಖವಾದದು, ಸಂಶೋಧನೆಯ ವಿಷಯವನ್ನು ಆಯ್ಕೆ ಮಾಡಿಕೊಳ್ಳುವ ಪೂರ್ವದಲ್ಲಿ ಯಾವ ಉದ್ದೇಶಕ್ಕಾಗಿ ಇದನ್ನು ಆಯ್ಕೆ ಮಾಡಿ ಕೊಳ್ಳಬೇಕು. ಹಾಗೂ ಇದರಿಂದ ಸಮಾಜಕ್ಕೆ ಅಥವಾ ಮುಂದಿನ ತಲೆಮಾರಿನ ಜನಾಂಗಕ್ಕೆ ಏನನ್ನು ಹೇಳಬಹುದೆನ್ನುವ ಉದ್ದೇಶ ಸಂಶೋಧನೆಯು ಹೊಂದಿರಬೇಕು. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಗುಲಬರ್ಗಾ ಜಿಲ್ಲೆಯ ಕೋಟೆಗಳು ಎಂದ ತಕ್ಷಣ ಎಲ್ಲರ ಗಮನಕ್ಕೆ ಬರುವ

ಕೋಟೆಗಳು ಗುಲಬರ್ಗಾ, ಶಹಾಪೂರ, ಸುರಪೂರ, ಯಾದಗಿರ ಹಾಗೂ ಇನ್ನೂ ಕೆಲವು ಕೋಟೆಗಳ ಹೆಸರುಗಳು ಮಾತ್ರ. ಆದರೆ ಪ್ರಸ್ತುತ ಸಂಶೋಧನೆಯಲ್ಲಿ ಸುಮಾರು ೩೦ಕ್ಕೂ ಹೆಚ್ಚು ಕೋಟೆಗಳ ಬಗ್ಗೆ ಚರ್ಚಿಸಲಾಗಿದೆ. ಅಲ್ಲದೆ ಹದಿನೈದು ಗ್ರಾಮಗಳಲ್ಲಿ ಗ್ರಾಮರಕ್ಷಣ ಕೋಟೆ ಇರುವುದನ್ನು ಗುರುತಿಸಲಾಗಿದೆ. ಒಟ್ಟನಲ್ಲಿ ಸುಮಾರು ೪೦ಕ್ಕೂ ಹೆಚ್ಚಿನ ಕೋಟೆಗಳು ಗುಲಬರ್ಗಾ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಈ ಎಲ್ಲಾ ಕೋಟೆಗಳ ಹೆಸರುಗಳನ್ನು ಹೇಳಿದಾಗ ಗುಲಬರ್ಗಾ ಜಿಲ್ಲೆಯ ಇತಿಹಾಸದ ಆಸಕ್ತರಿಗೆ ಆಶ್ಚರ್ಯ ಉಂಟಾಗುತ್ತದೆ. ಇವುಗಳಲ್ಲಿ ಎಲ್ಲಾ ಪ್ರಕಾರದ ಕೋಟೆಗಳು ಇರುವುದು ಅತಿ ಮಹತ್ವದ ಸಂಗತಿಯಾಗಿದೆ. ವಿಶೇಷವಾಗಿ ಭಾರತದ ಪ್ರಾಚೀನ ಕಾಲದಲ್ಲಿ ನಿರ್ಮಿಸಿರುವ ಕೋಟೆಗಳಲ್ಲಿ ಒಂದಾದ ಶಾತವಾಹನರ ಕಾಲದ ಸನ್ನತಿ ಕೋಟೆಯು ಗುಲಬರ್ಗಾ ಜಿಲ್ಲೆಯಲ್ಲಿದೆ. ಅಲ್ಲಿಂದ ಆಧುನಿಕ ಕಾಲದ ವರೆಗೆ ನಿರ್ಮಾಣಗೊಂಡಿರುವ ಹಲವು ಕೋಟೆಗಳು ನಮಗೆ ಲಭ್ಯವಾಗುತ್ತವೆ.

ಪುರಾಣಕಾಲದಲ್ಲಿ ನಿರ್ಮಾಣಗೊಂಡ 'ಸಗರ' ಕೋಟೆಯ ಕುರಿತು ಸಾಹಿತ್ಯದಲ್ಲಿ ಉಲ್ಲೇಖಗಳಿವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಸಗರದಲ್ಲಿ ಕ್ಷೇತ್ರಅಧ್ಯಯನ ಕಾರ್ಯಕೈಗೊಂಡು, ಕೋಟೆಗೆ ಸಂಬಂಧಿಸಿದ ಸ್ಥಳಗಳನ್ನು ಗುರುತಿಸಲಾಗಿದೆ. ಈ ವಿಷಯ ಹಲವು ಸ್ಥಳೀಯರಲ್ಲಿ ಸೋಜಿಗವನ್ನುಂಟುಮಾಡಿತು. ಸ್ಥಳಿಯರಿಗೆ ತಮ್ಮ ಗ್ರಾಮಗಳ ಮಹತ್ವವನ್ನು ತಿಳಿಸಿಕೊಡುವುದರ ಜೊತೆಗೆ ಮುಂದಿನ ದಿನಗಳಲ್ಲಿ ಇದರ ಕುರಿತು ಹೆಚ್ಚಿನ ಸಂಶೋಧನೆ ಹಾಗೂ ಉತ್ಖನನ ನಡೆಸಿದರೆ ಇನ್ನೂ ಹೆಚ್ಚಿನ ವಿಷಯ ಬೆಳಕಿಗೆ ಬರಬಹುದೆನ್ನುವ ಉದ್ದೇಶವಿದೆ. ಭೀಮಾನದಿಯ ದಂಡೆಯ ಮೇಲೆ ಬರುವ ಕೊಲ್ಲೂರು ಕೋಟೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಕೋಟೆಯು ಬೆಳಕಿಗೆಬಾರದೆ ಇರುವುದು ದುರಾದೃಷ್ಟಕರವಾದ ಸಂಗತಿಯಾಗಿದೆ. ಇಂತಹ ಕೋಟೆಗಳ ಕುರಿತು ಇಲ್ಲಿ ಮಾಹಿತಿ ನೀಡಲಾಗಿದೆ.

ಗುಲಬರ್ಗಾ ಕೋಟೆ ಒಳಗಡೆ ಇರುವ ಹಲವು ರಕ್ಷಣಾಸಂಬಂಧಿ ಸ್ಮಾರಕಗಳ ಮಹತ್ವಕುರಿತು ಹೇಳಲಾಗಿದೆ. ಕೋಟೆಯ ಒಳಗಡೆ ಕಾಲಿಮಸಿದಿ, ನೆಲಮಾಳಿಗೆಯಕಟ್ಟಡ, ಆನೆಗಳ ತರಬೇತಿಯ ಸ್ಥಳಗಳ ಕುರಿತು ಸಂಶೋಧನೆಯಲ್ಲಿ ಹೇಳಲಾಗಿದೆ. ಇದುವರೆಗೆ ಬರಹಗಾರರು ಇಂತಹ ಅಂಶಗಳ ಕಡೆಗೆ ಗಮನ ಹರಿಸಿರಲಿಲ್ಲ. ಈ ವಿಷಯವನ್ನು ಬೆಳಕಿಗೆ ತರುವ ಉದ್ದೇಶ ಪ್ರಸ್ತುತ ಸಂಶೋಧನೆಯು ಹೊಂದಿದೆ. ಕೇಂದ್ರ ಪುರಾತತ್ವ ಇಲಾಖೆ ಹಾಗೂ ರಾಜ್ಯಪ್ರವಾಸೊಧ್ಯಮ ಇಲಾಖೆಗಳು ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದರೆ ಗುಲಬರ್ಗಾ ಜಿಲ್ಲೆಯ ಕೋಟೆಗಳಿಗೆ ಇನ್ನಷ್ಟು ಮಹತ್ವ ಬರುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ೧೮ನೆಯ ಶತಮಾನದಲ್ಲಿ ನಿರ್ಮಿಸಿದ ಹಲವು ಮಣ್ಣಿನ ಕೋಟೆಗಳಿವೆ. ಗುರುಮಿಟಕಲ್ ಹಾಗೂ ಸೇಡಂ ತಾಲೂಕಿನ ಗಡಿ ಬಾಗಗಳಲ್ಲಿ ಇಂತಹ ಕೋಟೆಗಳು ಕಂಡು ಬರುತ್ತವೆ. ಇವುಗಳ ಕುರಿತು ಪ್ರಸ್ತುತ ಸಂಶೋಧನೆಯಲ್ಲಿ ಹೆಚ್ಚಿನ ಮಾಹಿತಿ ನೀಡಲಾಗಿದೆ. ಏಕೆಂದರೆ ಇನ್ನೂ ಕೆಲವು

ದಶಕಗಳ ನಂತರ ನಮಗೆ 'ಮಣ್ಣಿನಕೋಟೆ'ಯನ್ನು ನೋಡಲು ಅವುಗಳ ಯಾವುದೇ ಅವಶೇಷಗಳು ಕೂಡ ದೊರೆಯುವದಿಲ್ಲ. ಅವಸಾನದ ಅಂಚಿನಲ್ಲಿರುವ ಈ ಕೋಟೆಗಳ ಛಾಯಾಚಿತ್ರ ಮತ್ತು ಅದಕ್ಕೆ ಸಂಬಂಧಿಸಿದ ವಿವರಣೆ ಪ್ರಸ್ತುತ ಅಧ್ಯಯನದಲ್ಲಿ ನೀಡಲಾಗಿದೆ. ಇದರಿಂದ ಮುಂದಿನ ಜನಾಂಗಕ್ಕೆ ಮಣ್ಣಿನ ಕೋಟೆ ಕುರಿತು ಮಾಹಿತಿ ನೀಡುವ ಉದ್ದೇಶವು ಈ ಸಂಶೋಧನೆಯು ಒಳಗೊಂಡಿದೆ. ಕೆಲವು ಗ್ರಾಮಗಳಲ್ಲಿ ಮಣ್ಣಿನ ಕೋಟೆಯ ಭಾಗಗಳು ಕಂಡು ಬರುತ್ತವೆ. ಅವು ಸಹ ಸ್ಥಳೀಯರ ನಿರ್ಲಕ್ಷದಿಂದ ಹಾಗೂ ದುರುದ್ದೇಶದಿಂದ ನಾಶ ಹೊಂದುತ್ತಲಿವೆ. ಇಂತಹ ಕೋಟೆಗಳಿಗೆ ಯಾವುದೇ ರೀತಿಯಿಂದ ರಕ್ಷಣೆ ನೀಡಿದರೂ ಅವು ಮಳೆಯಿಂದ ನಾಶಹೊಂದುತ್ತವೆ. ಇದನ್ನು ಅರಿತುಕೊಂಡು ಇವುಗಳು ನಾಶಹೊಂದುವ ಪೂರ್ವದಲ್ಲಿ, ಅವುಗಳ ಕುರಿತು ಮಾಹಿತಿ ನೀಡಲಾಗಿದೆ.

ಗ್ರಾಮ ರಕ್ಷಣೆಗೆ ಸಂಬಂಧಿಸಿದಂತೆ ಇನ್ನೂ ಕೆಲವು ಕಟ್ಟಡಗಳಿವೆ, ಅವುಗಳೆಂದರೆ 'ಹುಡೆ' 'ವಾಡೆ' 'ಅಗಸಿ' ಹಾಗೂ ಕಾವಲುಗೋಪುರಗಳ ಕಡೆಗೆ ಗಮನಹರಿಸಿ ಅವುಗಳ ಮಹತ್ವವನ್ನು ಕುರಿತು ಹೇಳಲಾಗಿದೆ. ಪ್ರಾಚೀನ ಹಿನ್ನೆಲೆ ಇರುವ ಪ್ರತಿಯೊಂದು ಗ್ರಾಮಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ಹುಡೆವುಗಳು ಕಂಡು ಬರುತ್ತವೆ. ಸಂಪೂರ್ಣವಾಗಿ ಸ್ಥಳೀಯರ ಹಾಗೂ ಸರಕಾರದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಈ ಕಟ್ಟಡಗಳ ಮಹತ್ವವನ್ನು ಸಮಾಜಕ್ಕೆ ಹೇಳುವ ಉದ್ದೇಶ ಈ ಸಂಶೋಧನೆಯು ಒಳಗೊಂಡಿರುತ್ತದೆ. ಅತ್ಯಂತ ಸುಸ್ಥಿತಿಯಲ್ಲಿರುವ ಹುಡೆವುಗಳು ಗ್ರಾಮಸ್ಥರ ನಿರ್ಲಕ್ಷ್ಯದಿಂದ ನಾಶಹೊಂದುತ್ತಿವೆ. ಅವುಗಳ ರಕ್ಷಣೆಯ ಕಡೆಗೆ ಗಮನಹರಿಸಿದರೆ ಅವುಗಳು ಇನ್ನೂ ಹಲವು ಶತಮಾನಗಳನರೆಗೆ ತಮ್ಮ ಇತಿಹಾಸವನ್ನು ಮುಂದುವರೆಯಿಸಿಕೊಂಡು ಹೋಗುತ್ತವೆ. ಅಂತಹ ಸ್ಮಾರಕಗಳ ಕುರಿತು ಮಾಹಿತಿ ನೀಡುವ ಉದ್ದೇಶದಿಂದ ಪ್ರಸ್ತುತ ಸಂಶೋಧನೆಯಲ್ಲಿ 'ಗ್ರಾಮರಕ್ಷಣಾ ವಾಸ್ತುಶಿಲ್ಪ' ಎನ್ನುವ ಅಧ್ಯಾಯದಲ್ಲಿ ಹುಡೆವುಗಳ ಹುಟ್ಟು, ಬೆಳವಣಿಗೆ, ಕಾರ್ಯವೈಖರಿ ಹಾಗೂ ಮಹತ್ವವನ್ನು ಕುರಿತು ಚರ್ಚಿಸಲಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಕೇವಲ ಕೋಟೆಗಳನ್ನು ಕುರಿತು ಹೇಳದೆ ಅದರ ಜೊತೆಯಲ್ಲಿ ರಕ್ಷಣಾ ಸಂಬಂಧಿ ಇತರ ಸ್ಮಾರಕಗಳಾದ ದೇವಾಲಯ, ಅರಮನೆ, ಕಾವಲುಗೋಪುರ, ಮದ್ದಿನ ಮನೆ, ತೋಪುಗಳು, ನೀರಿನ ಆಶ್ರಯ ತಾಣಗಳನ್ನು ಕುರಿತು ಹೇಳಲಾಗಿದೆ. ಇದರಿಂದ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ರಕ್ಷಣಾ ಕಟ್ಟಡಗಳ ಸಮಗ್ರ ಮಾಹಿತಿಯನ್ನು ಒಂದೆ ಕಡೆಗೆ ಒದಗಿಸುವ ಉದ್ದೇಶದಿಂದ ಹಾಗೂ ಜಿಲ್ಲೆಯ ಪ್ರವಾಸಿಗಳಿಗೆ ಹಾಗೂ ಮಾರ್ಗದರ್ಶಕರಿಗೆ ಇವುಗಳ ಮಾಹಿತಿಯನ್ನು ಒದಗಿಸುವ ಉದ್ದೇಶದಿಂದ ಈ ವಿಷಯವನ್ನು ಆಯ್ದುಕೊಳ್ಳಲಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಕಾಲಗಣನೆಯು ಇತಿಹಾಸದಲ್ಲಿ ಅತಿ ಮಹತ್ವದ ಸ್ಥಾನ ಹೊಂದಿರುವಂತೆ, ಸಂಶೋಧನೆಗೂ ಸಹ ಕಾಲದ ಮೀತಿ ಅವಶ್ಯಕವಾಗಿದೆ. ನಾವು ಕೈಗೊಳ್ಳುವ ಸಂಶೋಧನೆಯು ಭೌಗೋಳಿಕ ವ್ಯಾಪ್ತಿ ಮತ್ತು ಕಾಲದ ವ್ಯಾಪ್ತಿಗೆ ಒಳಪಡಬೇಕು. ಅಂದಾಗ ವಿಷಯವನ್ನು ಅತಿ ಸೂಕ್ಷ್ಮವಾಗಿ ನಿರೂಪಿಸಲು ಸಾಧ್ಯವಾಗುತ್ತದೆ. ಇದರಿಂದ ಸಂಶೋಧನೆಯಲ್ಲಿ ಆಗಬಹುದಾದ ಲೋಪದೋಷಗಳನ್ನು ತಡೆಹಿಡಿಯಬಹುದು. ಸಂಬಂಧಪಟ್ಟ ವಿಷಯದ ಕಡೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತದೆ. ನಾವು ಆಯ್ಕೆ ಮಾಡಿಕೊಂಡಿರುವ ವಿಷಯವನ್ನು ಒಂದು ಚೌಕಟ್ಟಿನಲ್ಲಿ ಅಳವಡಿಸಿಕೊಂಡು, ಅದಕ್ಕೆ ಒಂದು ಸೀಮಾರೇಖೆಯನ್ನು ಹಾಕಿಕೊಂಡಾಗ ಕ್ಷೇತ್ರಅಧ್ಯಯನಕಾರ್ಯ ಮತ್ತು ಮಾಹಿತಿಸಂಗ್ರಹ ಕಾರ್ಯ ಸುಲಭವಾಗುತ್ತದೆ. ಇದರಿಂದ ನಿಖರವಾದ ಮತ್ತು ಮೌಲ್ಯಾಧಾರಿತ ಇತಿಹಾಸ ಪುನರ್‌ರಚಿಸಲು ಸಾಧ್ಯವಾಗುತ್ತದೆ.

'ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ' ಜಿಲ್ಲೆ ಎನ್ನುವ ಸಂಶೋಧನೆಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಎಲ್ಲಾ ತಾಲೂಕಿನಲ್ಲಿ ಪ್ರಾಚೀನ ಕಾಲದಿಂದ ೧೯ನೆಯ ಶತಮಾನದವರೆಗೆ ಬರುವ ರಕ್ಷಣ ಕಟ್ಟಡಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಗುಲಬರ್ಗಾ ತಾಲೂಕಿನ, ಗುಲಬರ್ಗಾ, ಫಿರೋಜಾಬಾದ್, ಪರಹತಾಬಾದ ಮತ್ತು ಹೊಳಕುಂದಾ ಕೋಟೆಗಳನ್ನು ಕುರಿತು ಚರ್ಚಿಸಲಾಗಿದೆ. ಶಹಪೂರ ತಾಲೂಕಿನಲ್ಲಿ ಬರುವ ಶಹಾಪೂರ, ಸಗರ ಮತ್ತು ವನದುರ್ಗ ಕೋಟೆಗಳನ್ನು, ಸುರಪುರ ತಾಲೂಕಿನಲ್ಲಿ ಬರುವ ಸುರಪುರ, ವಾಗಣಗೇರಿ, ರಾಯನ ಪಾಳ್ಯ, ಹಗರಟಗಿ, ಕೋಟೆಗಳು, ಚಿತ್ತಾಪುರ ತಾಲೂಕಿನ ಸನ್ನತಿ, ನಾಗಾವಿ, ಅಲ್ಲೂರ (ಬಿ), ದಂಡೋತಿ, ಕೊಲ್ಲೂರು, ಲಾಡಲಾಪುರ, ಅಳ್ಳೊಳ್ಳಿ ಕೋಟೆಗಳು, ಸೇಡಂ ತಾಲೂಕಿನ ಸೇಡಂ, ಮಳಖೇಡ, ಅಡಕಿ, ಹಂದರಕಿ, ಶಿಲಾರಕೋಟ ಮತ್ತು ಮುದೋಳ ಕೋಟೆಗಳು, ಯಾದಗಿರ ತಾಲೂಕಿನ ಯಾದಗಿರ, ಗುರಮಿಟಕಲ್, ಚಂಡ್ರಕಿ, ಕಾಕಲ್‌ವಾರ, ಇಟಕಲ್ ಕೋಟೆಗಳನ್ನು ಕುರಿತು ಚರ್ಚಿಸಲಾಗಿದೆ. ಅಫಜಲ್‌ಪುರ, ಆಳಂದ, ಜೇವರ್ಗಿ ಮತ್ತು ಚಿಂಚೋಳಿ ತಾಲೂಕುಗಳಲ್ಲಿ ಬರುವ ಗ್ರಾಮ ರಕ್ಷಣಾ ಕೋಟೆಗಳು, ಹುಡೆವುಗಳು, ವಾಡೆಗಳು, ಅರಮನೆಗಳು ಹಾಗೂ ಇತರ ರಕ್ಷಣಾ ವಾಸ್ತುಶಿಲ್ಪಗಳಲ್ಲಿ ಬರುವ ಪ್ರಮುಖ ಕಟ್ಟಡಗಳನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲಾ ಕೋಟೆಗಳು ಮತ್ತು ಹುಡೆವುಗಳು ಗುಲಬರ್ಗಾ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿರುತ್ತವೆ.

೨೦೦೫ರಲ್ಲಿ ಸಂಶೋಧನೆಗೆ ಹೆಸರು ನೊಂದಾಯಿಸಿಕೊಂಡು ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆ ಎನ್ನುವ ವಿಷಯವನ್ನು ಅಂತಿಮಗೊಳಿಸಿಕೊಂಡಾಗ ಗುಲಬರ್ಗಾ ಜಿಲ್ಲೆ ಹತ್ತು ತಾಲೂಕುಗಳನ್ನು ಒಳಗೊಂಡಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಬರುವ ಹತ್ತು ತಾಲೂಕಗಳ ಬಗ್ಗೆ ಕ್ಷೇತ್ರ ಅಧ್ಯಯನಕಾರ್ಯ ಕೈಗೊಂಡು ಮಾಹಿತಿಯನ್ನು ಸಂಗ್ರಹಿಸಿ, ಮಹಾಪ್ರಬಂಧದ ಪ್ರತಿಯನ್ನು ಸಿದ್ಧಪಡಿಸಿ ಮಾರ್ಗದರ್ಶಕರಿಂದ ಒಪ್ಪಿಗೆಯನ್ನು ಪಡೆದುಕೊಂಡು ಅಂತಿಮ ಸಾರಲೇಖವನ್ನು ಸಿದ್ಧಪಡಿಸಲಾಯಿತು. ಆದರೆ ಪ್ರಬಂದ

ಮಂಡಿಸುವ ಪೂರ್ವದಲ್ಲಿ ಗುಲಬರ್ಗಾ ಜಿಲ್ಲೆಯಿಂದ ಯಾದಗಿರ ತಾಲೂಕವನ್ನು ದಿನಾಂಕ ೩೦-೦೯-೨೦೦೯ರಂದು ಪ್ರತ್ಯೇಕ ಜಿಲ್ಲೆಯಾಗಿ ಸರಕಾರ ಆದೇಶ ಹೊರಡಿಸಿತು. ಶಹಾಪೂರ ಹಾಗೂ ಸುರಪುರ ತಾಲೂಕಗಳು ವಿಭಜನೆಗೊಂಡು ಯಾದಗಿರ ಜಿಲ್ಲೆಯಲ್ಲಿ ಸೇರ್ಪಡೆಯಾದವು. ಇದರಿಂದ ಜಿಲ್ಲೆಯ ಇತಿಹಾಸ, ಸಂಸ್ಕೃತಿ, ರಾಜಕೀಯ ಚರಿತ್ರೆ ಸಂಪೂರ್ಣವಾಗಿ ಪ್ರತ್ಯೇಕಗೊಂಡಿತು. ಆದರೆ ಪ್ರಸ್ತುತ ಸಂಶೋಧನೆಯು ವಿಭಜನೆಯ ಪೂರ್ವದ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಹತ್ತು ತಾಲೂಕುಗಳ ಕುರಿತು ಮಾಹಿತಿಯನ್ನು ಒಳಗೊಂಡಿರುತ್ತದೆ.

೧.೩. ಅಧ್ಯಯನ ವಿಧಾನ:

ಸಂಶೋಧನೆಯ ಅಧ್ಯಯನವು ನಿಗದಿತ ಅವಧಿಯಲ್ಲಿ ಮತ್ತು ಆಯ್ಕೆ ಮಾಡಿಕೊಂಡಿರುವ ಶೀರ್ಷಿಕೆಗೆ ಅನ್ವಯವಾಗುವಂತೆ ಎಲ್ಲಾ ವಿಷಯಗಳನ್ನು ಸಂಗ್ರಹಿಸಬೇಕಾದಾಗ ಅದಕ್ಕೆ ನಮ್ಮದೇ ಆದ ಅಧ್ಯಯನದ ವಿಧಾನ ಅನುಸರಿಸುವುದು ಅತಿ ಮಹತ್ವವಾಗಿರುತ್ತದೆ. ಅದರಲ್ಲಿ ಸಂಪೂರ್ಣವಾಗಿ ಕ್ಷೇತ್ರ ಅಧ್ಯಯನದ ಮೇಲೆ ಅವಲಂಬಿಸಿರುವ ವಿಷಯವಾಗಿರುವುದರಿಂದ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ. ವಿಷಯದ ಆಯ್ಕೆಯ ಮುನ್ನ ಜಿಲ್ಲೆಯ ಎಲ್ಲಾ ತಾಲೂಕಗಳಲ್ಲಿ ಬರುವ ಚಾರಿತ್ರಿಕ ಮಹತ್ವಹೊಂದಿರುವ ಗ್ರಾಮಗಳ ಪಟ್ಟಿ ಮಾಡಲಾಯಿತು. ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್‌ವನ್ನು ಆಕರ ಗ್ರಂಥವಾಗಿ ಬಳಸಿಕೊಳ್ಳಲಾಯಿತು. ಆದರೆ ಕೆಲವೊಂದು ಗ್ರಾಮಗಳ ಹೆಸರನ್ನು ಹೊರತು ಪಡಿಸಿ ಹೆಚ್ಚಿನ ಮಾಹಿತಿಯು ಗ್ಯಾಸೆಟಿಯರ್‌ನಲ್ಲಿ ಲಭ್ಯವಾಗುವುದಿಲ್ಲ. ಅಂಥಹ ಗ್ರಾಮಗಳ ಪ್ರತ್ಯಕ ಪಟ್ಟಿಯನ್ನು ತಯ್ಯಾರಿಸಲಾಯಿತು. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ ಕಛೇರಿಗೆ ಬೇಟಿ ನೀಡಿ, ಜಿಲ್ಲೆಯ ಚಾರಿತ್ರಿಕ ಹಿನ್ನೆಯಲೆಯುಳ್ಳ ಸ್ಥಳಗಳ ಮಾಹಿತಿ ಪಡೆದುಕೊಳ್ಳಲಾಯಿತು. ಇದುವರೆಗೆ ಗುಲಬರ್ಗಾ ಜಿಲ್ಲೆಯ ಇತಿಹಾಸಕ್ಕೆ ಸಂಬಂದಪಟ್ಟಂತೆ ನಡೆದ ಸಂಶೋಧನೆಗಳ ಪಟ್ಟಿ ಮಾಡಿಕೊಂಡು, ವಿವಿಧ ವಿಷಯ ತಜ್ಞರೊಂದಿಗೆ ಚರ್ಚಿಸಿ, ಅಂತಿಮವಾಗಿ ಈ ಕುರಿತು ಯಾವುದೇ ಸಂಶೋಧನೆಗಳ ನಡೆದಿರುವುದಿಲ್ಲವೆಂದು ದೃಢಪಡಿಸಿಕೊಂಡು ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು.

'ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ' ಜಿಲ್ಲೆ ಎನ್ನುವ ಸಂಶೋಧನೆಯಲ್ಲಿ ಯಾವ ಯಾವ ವಿಷಯಗಳನ್ನು ಒಳಗೊಂಡಿರಬೇಕು ಎನ್ನುವುದನ್ನು ಪಟ್ಟಿಯನ್ನು ಸಿದ್ಧಪಡಿಸಿಕೊಂಡು, ರಕ್ಷಣಾ ವಾಸ್ತುಶಿಲ್ಪ ಅಥವಾ ಕೋಟೆ-ಕೊತ್ತಲಗಳಿಗೆ ಸಂಬಂಧಪಟ್ಟ ವಿಷಯದ ಮೇಲೆ ಇದುವರೆಗೆ ಬಂದಿರುವ ಕೃತಿಗಳು, ಲೇಖನಗಳು, ಮಹಾಪ್ರಬಂಧಗಳನ್ನು, ಹಾಗೂ ಬೇರೆ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ವಸ್ತು ಸಂಗ್ರಹಾಲಯಗಳಿಗೆ, ಆಯ್.ಸಿ.ಎಚ್.ಆರ್. ಪ್ರಾದೇಶಿಕ ಕಛೇರಿ ಬೆಂಗಳೂರಿಗೆ ಬೇಟಿ ನೀಡಿ, ಗ್ರಂಥಗಳನ್ನು ಪರಾಮರ್ಶನ ಮಾಡಿ ನನ್ನ ವಿಷಯಕ್ಕೆ ಸಂಬಂಧಪಟ್ಟ ಅಂಶಗಳನ್ನು ಕುರಿತು ಮಾಹಿತಿ ಪಡೆದುಕೊಳ್ಳಲಾಯಿತು.

[illegible]

ಅಂತರಜಾಲದಲ್ಲಿ ದೊರೆಯುವ ಕೋಟೆಗಳ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಅಲ್ಲದೆ ಛಾಯಾಚಿತ್ರಗಳನ್ನು ಹೇಗೆ ತೆಗೆಯಬೇಕು ಎನ್ನುವ ವಿಷಯ ತಿಳಿದುಕೊಳ್ಳಲಾಯಿತು. ವಿಷಯಕ್ಕೆ ಸಂಬಂಧಿಸಿದ ಹಲವು ಕೃತಿಗಳು ನನಗೆ ಲಭ್ಯವಾಗಿರುವುದು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಡೆಕ್ಕನ್ ಕಾಲೇಜು ಪೂನಾ, ಉಸಮಾನಾಬಾದ ವಿಶ್ವವಿದ್ಯಾಲಯ ಹಾಗೂ ಸಾಲರ್‌ಜಂಗ್ ಮ್ಯೂಜಿಯಂ ಹೈದ್ರಾಬಾದ ಮತ್ತು ಆಯ್.ಸಿ.ಎಚ್.ಆರ್. ಪ್ರಾದೇಶಿಕ ಕಛೇರಿ ಬೆಂಗಳೂರುಗಳಲ್ಲಿ ನನಗೆ ಇಲ್ಲಿ ತುಂಬಾ ಉಪಯುಕ್ತವಾದ ಕೃತಿಗಳ ಲಭ್ಯವಾವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ – 'Forts of Andhra Pradesh'[೫], 'Studies on Fortification in India'[೬], 'Raichur Forts'[೭], 'Surpur Samsthan'[೮], 'Fort of Daulatabad'[೯] ಮುಂತಾದ ಕೃತಿಗಳಿಂದ ಮಾಹಿತಿ ಪಡೆದುಕೊಳ್ಳಲಾಯಿತು. ಅದೇ ರೀತಿ ಧಾರವಾಡ ವಿಶ್ವವಿದ್ಯಾಲಯದಿಂದ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜ್ಯಧಾನಿ ಪಟ್ಟಣಗಳು, ತಾಳಿಕೋಟೆ ಯುದ್ಧ, ಸನ್ನತಿ, ರಾಷ್ಟ್ರಕೂಟರ ಕಾಲದ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಎನ್ನುವ ಅಪ್ರಕಟಿತ ಮಹಾಪ್ರಭಂದಗಳು ಹಾಗೂ ಇತರ ಕೃತಿಗಳು ನನ್ನ ಅಧ್ಯಯನಕ್ಕೆ ಪೂರಕ ದಾಖಲೆಗಳನ್ನು ಒದಗಿಸಿದವು.

ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ್, ಜಿಲ್ಲಾ ದರ್ಶನ, ಲೇಖನಗಳು, ಪತ್ರಿಕಾ ವರದಿಗಳು ಮತ್ತು ಕೇಂದ್ರ ಸರಕಾರದ ಪುರಾತತ್ವ ಇಲಾಖೆ ಹಾಗೂ ರಾಜ್ಯ ಸರಕಾರದ ಪುರಾತತ್ವ ವಿಭಾಗ (ವಸ್ತು ಸಂಗ್ರಾಹಾಲಯ)ಗಳಿಂದ ಅವರ ವ್ಯಾಪ್ತಿಗೆ ಬರುವ ಕೋಟೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಯಿತು. ಕೊನೆಯದಾಗಿ ಭಾರತ ಸರ್ವೆಇಲಾಖೆಯ ವತಿಯಿಂದ ತಯಾರಿಸಿರುವ ಭೂಪಟಗಳನ್ನು ಸಂಗ್ರಹಿಸಿ ಅವುಗಳ ಆಧಾರದ ಮೇಲೆ ಕ್ಷೇತ್ರ ಕಾರ್ಯ ಪ್ರಾರಂಭಿಸಲಾಯಿತು.

ಗುಲಬರ್ಗಾ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವ ರಾಜಕೀಯ ಮನೆತನಗಳ ಬಗ್ಗೆ ಇದುವರೆಗೆ ಪ್ರಕಟಗೊಂಡ ಪುಸ್ತಕಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ಏಕೆಂದರೆ ರಾಜಕೀಯ ಹಿನ್ನೆಲೆಯನ್ನು ತಿಳಿದುಕೊಳ್ಳದೆ ಅವರ ಕಾಲದಲ್ಲಿ ನಿರ್ಮಿಸಿರುವ ರಕ್ಷಣಾ ಕಟ್ಟಡಗಳ ಬಗ್ಗೆ ವಿವರಣೆ ನೀಡುವುದು ಅಸಾಧ್ಯವಾದುದು. ಅಲ್ಲದೆ 'ಕೋಟೆಕಾಳಗ'ಗಳಲ್ಲಿ ರೂಪಿಸುವ ಯುದ್ಧ ತಂತ್ರ ಹಾಗೂ ಪ್ರತಿತಂತ್ರಗಳ ಕುರಿತು ಅವರ ಸೈನಿಕ ಸಾಧನೆಗಳಿಂದ ತಿಳಿದುಕೊಳ್ಳಬಹುದು. ಈ ಹಿನ್ನೆಲೆಯಲ್ಲಿ ಕರ್ನಾಟಕ ಚರಿತ್ರೆ ಸಂಪುಟಗಳು, ಕರ್ನಾಟಕ ಚರಿತ್ರೆ, ದಕ್ಷಿಣ ಭಾರತದ ಇತಿಹಾಸ, 'Malkhed through the ages'[೧೦], 'Karnataka through the ages', 'Early History of the Deccan'[೧೧], 'ಮರೆಯಲಾಗದ ಸುರಪುರ'[೧೨], 'ಸೇಡಮ್'[೧೩], 'ಸಗರನಾಡು ದರ್ಶನ', ತಾಲೂಕವಾರು ದರ್ಶನ ಮುಂತಾದ ಕೃತಿಗಳನ್ನು ಅಧ್ಯಯನ ಮಾಡಿ ಅವುಗಳಿಂದ ನನ್ನ ವಿಷಯಕ್ಕೆ ಅನುಗುಣವಾಗಿ ಮಾಹಿತಿ ಸಂಗ್ರಹಿಸಲಾಯಿತು.

ಕ್ಷೇತ್ರ ಅಧ್ಯಯನದಿಂದ ಕೂಡಿರುವ ನನ್ನ ಸಂಶೋಧನೆಯ ವಿಷಯಕ್ಕೆ ಒಳಪಡುವ ಪ್ರತಿಯೊಂದು ತಾಲೂಕಗಳಲ್ಲಿ ಬರುವ ಕೋಟೆಗಳಿಗೆ ಬೇಟಿ ನೀಡಲಾಯಿತು. ಅದಕ್ಕೂ ಮುನ್ನ ಅಲ್ಲಿ ಸಂಗ್ರಹಿಸಬೇಕಾದ ವಿಷಯಗಳ ಪಟ್ಟಿಯನ್ನು ಮೊದಲೇ ಸಿದ್ಧಪಡಿಸಿಕೊಂಡು ಅದರಲ್ಲಿ ವಿಷಯವನ್ನು ಭರ್ತಿ ಮಾಡಲಾಗುತ್ತಿತ್ತು. ಕೋಟೆಯ ಸ್ಥಳಿಯ ಹೆಸರು, ಅದಕ್ಕೆ ಸಂಬಂಧಿಸಿದ ಸ್ಥಳಿಯರ ಹೇಳಿಕೆಗಳು, ಕೋಟೆಯ ಸಮೀಪದಲ್ಲಿರುವ ಪ್ರಮುಖ ಸ್ಥಳಗಳು, ಅದರ ಪ್ರವೇಶ ದ್ವಾರಗಳ ದಿಕ್ಕುಗಳು ಹಾಗೂ ಒಟ್ಟು ಪ್ರವೇಶ ದ್ವಾರಗಳ ಸಂಖ್ಯೆ, ಕೋಟೆಯ ಕಾಲಮಾನ, ನಿರ್ಮಾಣಕ್ಕೆ ಬಳಸಿರುವ ಸಾಮಗ್ರಿಗಳು, ಕೋಟೆಯ ಪ್ರಸ್ತುತ ಸ್ಥಿತಿಗತಿ ಹಾಗೂ ಕೋಟೆಯ ಒಳಗಡೆ ಇರುವ ಇತರ ರಕ್ಷಣಾ ಸಂಬಂಧಿ ಸ್ಮಾರಕಗಳ ಬಗೆ ಮಾಹಿತಿ ಸಂಗ್ರಹಿಸಲಾಗುತ್ತಿತ್ತು. ಕೊನೆಯದಾಗಿ ಕೋಟೆಯ ರೇಖಾಚಿತ್ರ ಮತ್ತು ಎಲ್ಲಾ ಪ್ರಮುಖ ಭಾಗಗಳ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗುತ್ತಿತ್ತು. ಕ್ಷೇತ್ರ ಅಧ್ಯಯನದ ನಂತರ ಆ ಕೋಟೆಯಲ್ಲಿ ಸಂಗ್ರಹಿಸಿದ ಎಲ್ಲಾ ಮಾಹಿತಿಗಳ ವಿವರವನ್ನು ಬರೆದು, ಅದನ್ನು ಛಾಯಾಚಿತ್ರಕ್ಕೆ ಅನ್ವಯವಾಗುವಂತೆ ಜೋಡಿಸಿ, ಒಂದು ಪ್ರತ್ಯೇಕ ಕವರನಲ್ಲಿ ಹಾಕಿ ಇಡಲಾಗುತ್ತಿತ್ತು.

ಈ ರೀತಿ ಪ್ರತಿಯೊಂದು ಕೋಟೆಗೆ ಬೇಟಿ ನೀಡಿ ಅದರ ಬಗ್ಗೆ ವಿವರವಾದ ಮಾಹಿತಿಗಳನ್ನು ಸಂಗ್ರಹಿಸಲಾಯಿತು. ಮೊದಲೆ ಪ್ರಪತ್ರವನ್ನು ಸಿದ್ಧಪಡಿಸಿಕೊಂಡು, ಕ್ಯಾಮರಾವನ್ನು ಪರೀಕ್ಷಿಸಿಕೊಂಡು ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ತೊಡಗಲಾಗುತ್ತಿತ್ತು. ಏಕೆಂದರೆ, ನಾವು ಯಾವುದೇ ದೂರದ ಗಿರಿದುರ್ಗದಲ್ಲಿ ಕ್ಷೇತ್ರ ಅಧ್ಯಯನ ಮಾಡುವಾಗ ಅಸಮರ್ಪಕ ಮಾಹಿತಿ ಪಡೆದುಕೊಂಡು ಬಂದರೆ, ಬರವಣಿಗೆಯ ಕಾಲಕ್ಕೆ ತುಂಬಾ ತೊಂದರೆಯಾಗುತ್ತದೆ. ಅಲ್ಲದೆ ಮತ್ತೊಮ್ಮೆ ಆ ಕೋಟೆಗೆ ಬೇಟಿ ನೀಡುವುದು ಅಸಾಧ್ಯವಾದುದು. ಆದ್ದರಿಂದ ಈ ಎಲ್ಲಾ ವಿಷಯಗಳು ಗಮನದಲ್ಲಿಇಟ್ಟುಕೊಂಡು ಕಾರ್ಯನಿರ್ವಹಿಸಲಾಯಿತು. ಕೆಲವು ನಿರ್ಜನವಾದ ಪ್ರದೇಶದ ಕೋಟೆಗಳಲ್ಲಿ ಮತ್ತು ಗಿರಿದುರ್ಗಗಳ ಕ್ಷೇತ್ರ ಅಧ್ಯಯನದಲ್ಲಿ ಸ್ನೇಹಿತರ ಸಹಾಯದಿಂದ ಕೋಟೆಯ ಅಂಗ ಭಾಗಗಳನ್ನು ಅಳತೆ ಮಾಡಲಾಯಿತು. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಕ್ಷೇತ್ರಅಧ್ಯಯನಕಾರ್ಯ ತುಂಬಾ ಕಷ್ಟಕರ ಹಾಗೂ ಅಪಾಯಕಾರಿಯಾಗಿದೆ. ಪ್ರಸ್ತುತ ಗುಲಬರ್ಗಾ ಕೋಟೆಯ ದಕ್ಷಿಣ ಭಾಗದಲ್ಲಿ ದಟ್ಟವಾಗಿ ಬೆಳೆದಿರುವ ಸರಕಾರ ಜಾಲಿ ಕಂಟಿಯಲ್ಲಿ ಪ್ರವೇಶಿಸಿ ಸುಮಾರು ಎರಡು ತಾಸು ದಾರಿ ಕಾಣದೆ ಎಲ್ಲಾ ಕಡೆಗೆ ಮುಳ್ಳಿನಲ್ಲಿ ಸುತ್ತಾಡಿ ಗಾಯ ಮಾಡಿಕೊಳ್ಳಲಾಯಿತು. ಸುರಪುರ ಕೋಟೆಯ ದೇವದುರ್ಗ ಅಗಸಿಯ ಛಾಯಾ ಚಿತ್ರ ತೆಗೆಯಲು ಎತ್ತರವಾದ ಗೋಡೆಯನ್ನು ಹತ್ತಿ ನಿಂತಾಗ ಕೆಳಗಿನ ಕಲ್ಲು ಜಾರಿ ಕ್ಯಾಮರಾ ಒಡೆದುಹೋಯಿತು, ಮತ್ತು ನನ್ನ ಕಾಲಿನ ಮೊಳೆಯಲ್ಲಿ ಬಿರುಕು ಉಂಟಾಯಿತು. ಆಗ ಸ್ಥಳೀಯ ಸ್ನೇಹಿತರ ಸಹಾಯದಿಂದ ಗುಲಬರ್ಗಾಕ್ಕೆ ಬರಲಾಯಿತು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಮುಂದೆ ಕ್ಷೇತ್ರ ಅಧ್ಯಯನ ಕಾರ್ಯ ಮುಂದುವರೆಯಿಸಲಾಯಿತು.

[illegible]

ಕ್ಷೇತ್ರ ಅಧ್ಯಯನ ಕಾರ್ಯದ ಜೊತೆಯಲ್ಲಿ ಅದಕ್ಕೆ ಸಂಬಂಧಿಸಿದ ತಾಲೂಕ ದರ್ಶನಗಳು, ಸ್ಥಳನಾಮ ಕುರಿತು ರಚನೆಗೊಂಡ ಬರಹಗಳು, ಹಾಗೂ ಸ್ಥಳಿಯ ಸಂಚಿಕೆಗಳಿಂದ ಮಾಹಿತಿಯನ್ನು ಸಂಗ್ರಹಿಸಿಕೊಂಡು, ಅವುಗಳನ್ನು ಸಂದರ್ಭಕ್ಕೆ ಅನುಗುಣವಾಗಿ ಮಹಾಪ್ರಬಂಧದಲ್ಲಿ ಸೇರಿಸಲಾಯಿತು. ನನಗೆ ಮೊದಲಿನಿಂದಲು ಗುಲಬರ್ಗಾ ಜಿಲ್ಲೆಯ ಸ್ಮಾರಕಗಳ ಬಗ್ಗೆ ಆಸಕ್ತಿ ಇರುವುದರಿಂದ ಅವುಗಳ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳನ್ನು ಸಂಗ್ರಹಿಸಲಾಯಿತು. ಅಲ್ಲದೆ ಸ್ಥಳೀಯ ಚರಿತ್ರೆ ಕುರಿತು ನಡೆದ ವಿಶೇಷ ಉಪನ್ಯಾಸಗಳಲ್ಲಿ ಭಾಗವಹಿಸಿ ಮಾಹಿತಿ ಪಡೆದುಕೊಳ್ಳಲಾಯಿತು. ಈ ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನವನ್ನು ಕೈಗೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸಲಾಯಿತು. ಕೊನೆಯ ಭಾಗದಲ್ಲಿ ಅಧ್ಯಯನಕ್ಕೆ ಪೂರಕವಾಗುವಂತೆ ನಕ್ಷೆ, ಛಾಯಾಚಿತ್ರ, ಪದಕೋಶ, ಗ್ರಂಥಋಣ ಪಟ್ಟಿಗಳನ್ನು ಸಿದ್ಧಪಡಿಸಿ, ಅನುಬಂಧದಲ್ಲಿ ನೀಡಲಾಗಿದೆ.

೧.೪. ಅಧ್ಯಯನದ ಸಮೀಕ್ಷೆ:

ಕೋಟೆಗಳ ಕುರಿತು ಇದುವರೆಗೆ ಹೆಚ್ಚಿನ ಅಧ್ಯಯನಗಳು ನಡೆದಿರುವುದಿಲ್ಲ. ಕಲೆ ಮತ್ತು ವಾಸ್ತು ಶಿಲ್ಪಗಳ ಕೃತಿಗಳಲ್ಲಿ ಸಂದರ್ಭಾನುಸಾರವಾಗಿ ಕೋಟೆಗಳ ಕುರಿತು ವಿದ್ವಾಂಸರು ಚರ್ಚಿಸಿದ್ದಾರೆ. ಎಂ. ಚಿದಾನಂದಮೂರ್ತಿಯವರು ಬರೆದ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ[೧೪] ಎನ್ನುವ ಕೃತಿಗಳಲ್ಲಿ ಕೋಟೆ ಕಾಳಗಗಳನ್ನು ಕುರಿತು ಉಲ್ಲೇಖಿಸಿದ್ದಾರೆ. ಡಾ. ಬೆಟಗೇರಿ ಕೃಷ್ಣಶರ್ಮರ ಕರ್ನಾಟಕ ಜನಜೀವನ ಎನ್ನುವ ಕೃತಿಯಲ್ಲ ಕೋಟೆಗಳು ಮತ್ತು ಕೋಟೆಯ ಕಾಳಗಗಳನ್ನು ಕುರಿತು ಚರ್ಚಿಸಿದ್ದಾರೆ. ಹನುಮಾಕ್ಷಿ ಗೋಗಿಯವರು ಗುಲಬರ್ಗಾ ಜಿಲ್ಲಾ ಶಾಸನಗಳು[೧೫] ಎನ್ನುವ ಕೃತಿಯಲ್ಲಿ ಕೋಟೆಗೆ ಸಂಬಂಧಿಸಿದ ಅಥವಾ ರಕ್ಷಣಾ ವಾಸ್ತುಶಿಲ್ಪಶಿಲ್ಪಕ್ಕೆ ಸಂಬಂಧಪಟ್ಟ ಶಾಸನಗಳ ಕುರಿತು ವಿವರಣೆ ನೀಡಿದ್ದಾರೆ. ಶೇರವಾನಿ ಎಚ್.ಕೆ. ಮತ್ತು ಜೋಶಿಯವರ 'ಹಿಸ್ಟರಿ ಆಫ್ ಮೆಡಿವಲ್ ಡೆಕ್ಕನ್' ಎನ್ನುವ ಕೃತಿಯು ಜಿಲ್ಲೆಯ ಕೆಲವು ಕೋಟೆಗಳ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಡಾ. ರು.ಮ. ಷಡಕ್ಷರಯ್ಯನವರ ಕೃತಿಗಳು ಮತ್ತು ಲೇಖನಗಳು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳ ಬಗೆಗೆ ಮಾಹಿತಿಯನ್ನು ನೀಡುತ್ತವೆ[೧೬]. ಅದರಲ್ಲಿ ವಿಶೇಷವಾಗಿ ಮಳಖೇಡ ರಾಜಧಾನಿಯ ಕುರಿತು ಹೆಚ್ಚಿನ ವಿಷಯಗಳನ್ನು ಅವರು ಲೇಖನಗಳಲ್ಲಿ ಚರ್ಚಿಸಿದ್ದಾರೆ. ಡಾ. ಎಸ್.ಕೆ. ಜೋಶಿಯವರ 'ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ'[೧೭] ಎನ್ನುವ ಮಹಾಪ್ರಬಂಧವನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಮೊಟ್ಟಮೊದಲನೆಯ ಬಾರಿಗೆ ಕೋಟೆಗಳನ್ನು ಕಾಲಾನುಕ್ರಮದಲ್ಲಿ ಹಾಗೂ ಕ್ರಮಬದ್ಧವಾಗಿ ಚರ್ಚಿಸಿದ್ದಾರೆ. ಇದರಲ್ಲಿ ಕರ್ನಾಟಕದ ಪ್ರಾರಂಭಿಕ ಕೋಟೆಗಳಾದ ಗುಲಬರ್ಗಾ ಜಿಲ್ಲೆಯ 'ಸನ್ನತಿಕೋಟೆ' ಮತ್ತು 'ಮಳಖೇಡಕೋಟೆ'ಗಳ ಕುರಿತು ಮಾಹಿತಿ ನೀಡಲಾಗಿದೆ. ಆದ್ದರಿಂದ ಕೋಟೆಗಳ ಅಧ್ಯಯನಕ್ಕೆ ಇದೊಂದು ಪ್ರಮುಖ ಆಕರ ಕೃತಿಯಾಗಿದೆ.

[illegible]

'ಸ್ಟಡೀಜ್ ಆನ್ ಫೋರ್ಟಿಫಿಕೇಶನ್ ಇನ್ ಇಂಡಿಯಾ' ಎನ್ನುವ ಕೃತಿಯಲ್ಲಿ ೧೫ನೆಯ ಶತಮಾನದ ಗುಲಬರ್ಗಾ ವಿಭಾಗದಲ್ಲಿ ಬರುವ ಕೆಲವು ಕೋಟೆಗಳನ್ನು ಕುರಿತು ಚರ್ಚಿಸಲಾಗಿದೆ. ಅದರಲ್ಲಿ ಗುಲಬರ್ಗಾದ ಬಹಮನಿಯರ ಕೋಟೆಯ ವಿವಿಧ ಭಾಗಗಳ ರಚನೆ ಮತ್ತು ಅದರ ಅವಶ್ಯಕತೆಯನ್ನು ಹೇಳಲಾಗಿದೆ. ಯಾಜ್‌ಧಾನಿ.ಜಿ. ಯವರ 'ಬೀದರ ಆಂಡ್ ಇಟ್ಸ್ ಮಾನುಮೆಂಟ್ಸ್' ಎನ್ನುವ ಕೃತಿ ಹಾಗೂ 'ಅರ್ಲಿ ಹಿಸ್ಟರಿ ಆಫ್ ಡೆಕ್ಕನ್' ಎನ್ನುವ ಕೃತಿಯಲ್ಲಿ ರಕ್ಷಣಾ ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಕೋಟೆ, ಕೊತ್ತಲ, ಸೈನಿಕರ ನಿವಾಸಗಳು, ತೋಪುಗಳು, ಮುಂತಾದ ವಿಷಯಗಳನ್ನು ಕುರಿತು ಹೇಳಲಾಗಿದೆ. ಈ ಎರಡು ಕೃತಿಗಳು ಅಧ್ಯಯನಕ್ಕೆ ಸಹಾಯಕವಾಗುತ್ತವೆ. ಫಿಸರ್ ಕ್ಲವುಸ್‌ರವರು ಬರೆದ ಫಿರೋಜಾಬಾದ್ ಆನ್ ದ ಭೀಮಾ ಆಂಡ್ ಇಟ್ಸರ್ ಏನೆವಿರಾನ್ಸ್ ಎನ್ನುವ ಕೃತಿಯಲ್ಲಿ ಬಹಮನಿಯರ ಎರಡನೇಯ ರಾಜ್ಯಧಾನಿಯಾದ ಭೀಮಾ ನದಿಯ ದಂಡೆಯ ಮೇಲಿನ ಫಿರೋಜಾಬಾದ ಕೋಟೆಯ ಕುರಿತು ಹಾಗೂ ಕೋಟೆಯ ಸುತ್ತಮುತ್ತಲಿನ ಕಟ್ಟಡಗಳಾದ ಅರಮನೆ, ದ್ವಾರಬಾಗಿಲುಗಳು, ಸಭಾ ಭವನ, ಸೈನಿಕರ ನಿವಾಸಗಳು ಮುಂತಾದವುಗಳ ಬಗ್ಗೆ ವಿವರಣೆ ಇದೆ. ಇದು ಒಂದು ಕೋಟೆಯ ಸಮಗ್ರ ಅಧ್ಯಯನವಾಗಿದೆ. ಟಾಯ್ ಸಿಡ್‌ನಿಯವರ ಕೃತಿಗಳಾದ 'ದ ಪೋರ್ಟಿಫೀಕೇಶನ್ ಸಿಟೀಸ್ ಆಫ್ ಇಂಡಿಯಾ' ಹಾಗೂ "ಸ್ಟ್ರಾಂಗ್ ಹೊಲ್ಡ್ಸ್ ಆಪ್ ಇಂಡಿಯಾ" ಎನ್ನುವ ಕೃತಿಗಳು ಕ್ಷೇತ್ರ ಅಧ್ಯಯನ ಕೈಗೊಂಡ, ಮಾಹಿತಿ ಸಂಗ್ರಹಿಸಿ ರಚಿಸಲಾಗಿದೆ. ಇವುಗಳು ಕೋಟೆಯ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ನೀಡುತ್ತವೆ. ಅಲ್ಲದೆ ಜಿಲ್ಲೆಯ ಸುತ್ತಲಿನ ಕೋಟೆಯ ಕುರಿತು ಮಾಹಿತಿ ಇದೆ. ಈ ರೀತಿ ವಿದೇಶಿಯ ಪ್ರವಾಸಿ ಬರಹಗಾರರು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಪ್ರಮುಖ ಕೋಟೆಗಳ ಕುರಿತು ಮಾಹಿತಿಯನ್ನು ತಮ್ಮ ಪ್ರವಾಸಿ ಕಥನಗಳಲ್ಲಿ ನೀಡಿದ್ದಾರೆ. ಇವುಗಳು ಕೋಟೆಯ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ.

ಡಾ. ಚನ್ನಬಸಪ್ಪಾ ಪಾಟೀಲರು 'ಕರ್ನಾಟಕದ ಕೋಟೆಗಳು'[೧೮] ಎನ್ನುವ ಕೃತಿಯಲ್ಲಿ ಕರ್ನಾಟಕದಲ್ಲಿ ಬರುವ ಪ್ರಮುಖ ೫೦ ಕೋಟೆಗಳಲ್ಲಿ ಕ್ಷೇತ್ರ ಅಧ್ಯಯನ ಕಾರ್ಯ ಕೈಗೊಂಡು ಅಲ್ಲಿಯ ಕೋಟೆಗಳ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ. ಈ ಕೃತಿಯು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಸನ್ನತಿ, ಮಳಖೇಡ, ಯಾದಗಿರ, ಗುಲಬರ್ಗಾ, ಶಹಾಪುರ, ಸುರಪುರ, ವಾಗಣಗೇರಿ, ವನದುರ್ಗ, ಫಿರೋಜಾಬಾದ ಮುಂತಾದ ಕೋಟೆಗಳನ್ನು ಒಳಗೊಂಡಿದೆ. ಇದು ಸಂಶೋಧಕರಲ್ಲಿ ಹೆಚ್ಚಿನ ಆಸಕ್ತಿಯನ್ನು ಮೂಡಿಸಿ, ಕೋಟೆಯ ಕುರಿತು ಸಮಗ್ರವಾಗಿ ಅಧ್ಯಯನ ಕೈಗೊಳ್ಳಲು ಸಹಾಯಕವಾಗುತ್ತದೆ. ಈ ಹಿನ್ನಲೆಯಲ್ಲಿ ಸುಜಾತಾ ಮಲ್ಲನ ಗೌಡರ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು ಕೆ.ವಿ. ಮುದ್ದವೀರಪ್ಪಾರವರ ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ಜನಪದಿಯ ಅಧ್ಯಯನ, ಡಾ. ಶಿವಾನಂದ ಬೇಕಲ್‌ರವರ - ಪೋರ್ಟ್ಸ್ ಆಫ್ ಕೋಸ್ಟಲ್ ಕರ್ನಾಟಕ, ಡಾ. ಎಂ. ಕೋಟೇಶರವರ

ಬಳ್ಳಾರಿ ಜಿಲ್ಲೆಯ ಕೋಟೆ ಕೊತ್ತಲಗಳು, ಎಸ್. ತಿಪ್ಪೇಸ್ವಾಮಿಯ ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ. ಈ ಎಲ್ಲಾ ಅಧ್ಯಯನಗಳಲ್ಲಿ ಕೋಟೆಗಳ ಕುರಿತು ಮಾಹಿತಿ ನೀಡಲಾಗಿದೆ.

ಗುಲಬರ್ಗಾ ಜಿಲ್ಲೆಯ ಇತಿಹಾಸಕ್ಕೆ ಸಂಬಂಧಿಸಿದಂತೆ ಇದುವರೆಗೆ ಇಡಿಯಾಗಿ ಯಾವುದೇ ಅಧ್ಯಯನಗಳು, ನಡೆದಿಲ್ಲವೆಂದು ಹೇಳಬಹುದು. ಆದರೆ ಒಂದೊಂದು ತಾಲೂಕಿನಲ್ಲಿ ಬರುವ ಕೋಟೆಗಳ ಕುರಿತು ಅಥವಾ ಸ್ಮಾರಕಗಳ ಕುರಿತು ಬಿಡಿ ಬಿಡಿಯಾಗಿ ಅಧ್ಯಯನಗಳು ಜರುಗಿವೆ. ಅವುಗಳಲ್ಲಿ ನಾನು (ಶಂಭುಲಿಂಗ ಎಸ್. ವಾಣಿ) ೧೯೯೦ರಲ್ಲಿ ಎಂ.ಫಿಲ್. ಪದವಿಗಾಗಿ ಆಯ್ಕೆ ಮಾಡಿಕೊಂಡಿರುವ ವಿಷಯ 'ಗುಲಬರ್ಗಾ ಸಿಟಿ ಆ್ಯಂಡ ಇಟ್ಸ ಮಾನುಮೆಂಟ್ಸ್'ದಲ್ಲಿ ಗುಲಬರ್ಗಾ ಕೋಟೆಯನ್ನು ಕುರಿತು ಸಂಶೋಧನೆ ಕೈಗೊಳ್ಳಲಾಯಿತು. ಅಪ್ರಕಟಿತ ಈ ಪ್ರಬಂಧವು ನನ್ನ ಸಂಶೋಧನೆಗೆ ಪೂರಕವಾದ ದಾಖಲೆಗಳನ್ನು ಒದಗಿಸಿತು. ಹಾಗೆಯೆ ಕೃಷ್ಣರಾವ ಕಪಟರಾಳ 'ಕರ್ನಾಟಕ ಸಂಸ್ಕೃತಿಯ ಸಂಶೋಧನೆ' ಸುರಪುರ ಸಂಸ್ಥಾನದ ಇತಿಹಾಸ ಮತ್ತು ಅವರ ಇತರ ಲೇಖನಗಳಲ್ಲಿ, ಸುರಪುರ, ಶಹಾಪುರದಲ್ಲಿ ನಾಯಕರ ಕಾಲದಲ್ಲಿ ನಿರ್ಮಾಣಗೊಂಡ ಕೋಟೆಗಳ ಕುರಿತು ಸಂಧರ್ಭಾನುಸಾರವಾಗಿ ಚರ್ಚಿಸಲಾಗಿದೆ. ಡಾ. ಎಸ್.ಕೆ. ಅರುಣಿಯವರ 'ಹಿಸ್ಟರಿ ಆಂಡ ಕಲ್ಚರ್ ಆಫ್ ಸುರಪುರ ಸಂಸ್ಥಾನ, ನಾರ್ಥ ಕರ್ನಾಟಕ' ಎ.ಡಿ. 1650 ಟು 1858, ಪಿಎಚ್.ಡಿ.ಯ ಸಂಶೋಧನೆ ಮಹಾಪ್ರಬಂದದಲ್ಲಿ (ಅಪ್ರಕಟಿತ) ಸುರಪುರ ನಾಯಕ ಕಾಲದಲ್ಲಿ ನಿರ್ಮಾಣಗೊಂಡ ರಕ್ಷಣಾ ವಾಸ್ತುಶಿಲ್ಪ ಮತ್ತು ರಕ್ಷಣ ಸಂಬಂಧಿ ಕಟ್ಟಡಗಳ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಇವರ ಇತರ ಕೃತಿಗಳು ಹಾಗೂ ಲೇಖನಗಳು ಸಗರನಾಡಿನಲ್ಲಿ ಬರುವ ಸ್ಮಾರಕಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ.

ಪ್ರೊ. ರಂಗರಾಜ ವನದುರ್ಗ ಅವರ ಅಪ್ರಕಟಿತ ಮಹಾಪ್ರಬಂದ 'ಸುರಪುರ ಸಂಸ್ಥಾನ: ಒಂದು ಅಧ್ಯಯನ'ದಲ್ಲಿ ಸುರಪುರ ಸಂಸ್ಥಾನದ ಅಧಿಪತಿಗಳಾದ ಗೊಸಲ ವಂಶದ ನಾಯಕರ ರಾಜಕೀಯ ಮತ್ತು ಸಾಂಸ್ಕೃತಿಕ ಕೊಡುಗೆಗಳನ್ನು ಕುರಿತು ಹೇಳಲಾಗಿದೆ. ಜಿಲ್ಲೆಯ ಕುರಿತು ಪ್ರಕಟಗೊಂಡ ತಾಲೂಕದರ್ಶನಗಳು, ಗುಲಬರ್ಗಾ ಜಿಲ್ಲೆಯ ಹಾಗೂ ಕರ್ನಾಟಕ ರಾಜ್ಯದ ಗ್ಯಾಸೇಟಿಯರ್‌ಗಳು, ಸಗರ ನಾಡು ದರ್ಶನ, ಸನ್ನತಿಯ ಉತ್ಖನನದ ವರದಿಗಳನ್ನು ಹಾಗೂ ಪತ್ರಿಕೆಯಲ್ಲಿ ಪ್ರಕಟಗೊಂಡ ಬಿಡಿ ಬಿಡಿ ಲೇಖನಗಳಲ್ಲಿ ಗುಲಬರ್ಗಾ ಜಿಲ್ಲೆಯ ಕೋಟೆಗಳ ಬಗ್ಗೆ ಉಲ್ಲೇಖಗಳಿವೆ.

೨೦೦೬ರಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು ಇವರು ಏರ್ಪಡಿಸಿದ "ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ" ವಿಷಯದ ವಿಚಾರ ಸಂಕೀರ್ಣದಲ್ಲಿ ಮಂಡಿಸಿರುವ ಲೇಖನಗಳಲ್ಲಿ ಕೆಲವು ಲೇಖನಗಳು ಗುಲಬರ್ಗಾ ಜಿಲ್ಲೆಯ ಕೋಟೆಗಳು ಮತ್ತು ರಕ್ಷಣಾ ವಾಸ್ತುಶಿಲ್ಪಗಳ ಕುರಿತಾಗಿವೆ. ಅವುಗಳು ಸಹ ಸಂಶೋಧನೆಗೆ ಪೂರಕ ದಾಖಲೆಗಳನ್ನು ಒದಗಿಸುತ್ತವೆ.

ಈ ಮೇಲಿನ ಎಲ್ಲಾ ಮಹಾಪ್ರಬಂಧಗಳು, ಕೃತಿಗಳು ಲೇಖನಗಳು ಉತ್ಖನನದ ವರದಿಗಳು ಮತ್ತು ಪತ್ರಿಕಾ ವರದಿಗಳು ಸಾಂಧರ್ಬಿಕವಾಗಿ ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

೧.೫. ಅಧ್ಯಯನದ ಸ್ವರೂಪ:

ಪ್ರಸ್ತುತ ಸಂಶೋಧನೆಯ ವಿಷಯವಾದ ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆ ಎನ್ನುವ ಮಹಾಪ್ರಬಂಧವನ್ನು ಪ್ರಮುಖವಾಗಿ ಏಳು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲಿ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಅಲ್ಲಿ ಸಂಬಂಧಪಟ್ಟ ವಿಷಯವನ್ನು ಚರ್ಚಿಸಲಾಗಿದೆ. ಅಧ್ಯಯನದ ಮಹತ್ವ, ಉದ್ದೇಶ ಮತ್ತು ವ್ಯಾಪ್ತಿಯನ್ನು ಮೊದಲನೆಯ ಅಧ್ಯಾಯವಾದ ಪ್ರಸ್ತಾವನೆಯಲ್ಲಿ ಹೇಳಲಾಗಿದೆ. ಈ ವಿಷಯ ಕುರಿತು ಹಿಂದೆ ನಡೆದ ಅಧ್ಯಯನಗಳನ್ನು ಆಕರಗಳಾಗಿ ಬಳಸಿಕೊಂಡು ವಿಷಯವನ್ನು ಪ್ರಸ್ತಾಪಿಸಲಾಗಿದೆ. ವಿಶೇಷವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳು ಮತ್ತು ಗ್ರಾಮ ರಕ್ಷಣಾ ವಾಸ್ತುಶಿಲ್ಪಗಳನ್ನು ಪ್ರಮುಖವಾಗಿಟ್ಟುಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಗುಲಬರ್ಗಾ ಜಿಲ್ಲೆಯು ಕರ್ನಾಟಕದ ಉತ್ತರ ಭಾಗದಲ್ಲಿದ್ದು, ೧೯೫೬ರಲ್ಲಿ ರಾಜ್ಯಗಳ ಪುನರ್‌ವಿಂಗಡನೆಯಾದಾಗ ಹೈದ್ರಾಬಾದ ಕರ್ನಾಟಕ ಪ್ರದೇಶದಿಂದ ಮೈಸೂರು ಕರ್ನಾಟಕಕ್ಕೆ ಸೇರಿದ ಮೂರು ಜಿಲ್ಲೆಗಳಲ್ಲಿ ಗುಲಬರ್ಗಾ ಒಂದಾಗಿದೆ. ಆಂದ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ಗಡಿ ಭಾಗಗಳಿಗೆ ಅಂಟಿಕೊಂಡುವ ಜಿಲ್ಲೆಯಲ್ಲಿ ಮರಾಠಿ ಮತ್ತು ತೆಲಗು ಭಾಷೆಗಳ ಪ್ರಭಾವದಿಂದ ಗಡಿ ಭಾಗದ ಗ್ರಾಮಗಳಲ್ಲಿ ಜನರು ಕನ್ನಡ, ತೆಲಗು ಮತ್ತು ಮರಾಠಿ ಭಾಷೆಗಳನ್ನು ಮಾತನಾಡುತ್ತಾರೆ. ಸಂತರು, ಶರಣರು ಮತ್ತು ದಾಸರು ಜನರಲ್ಲಿ ಐಕ್ಯತೆಯನ್ನು ಮೂಡಿಸಲು ಶ್ರಮಿಸಿದರು. ಆದ್ದರಿಂದ ಗುಲಬರ್ಗಾ ಜಿಲ್ಲೆಯು ಸಂಸ್ಕೃತಿಯ ಸಮ್ಮಿಲನದ ಕೇಂದ್ರ ಸ್ಥಳವಾಗಿದೆ. ಈ ಜಿಲ್ಲೆಯು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ತನ್ನದೆಯಾದ ಮಹತ್ವವನ್ನು ಹೊಂದಿದೆ. ಪ್ರಾಗೈತಿಹಾಸಿಕ ಕಾಲದ ಹಲವು ಜನವಸತಿಯ ನಿವೇಶನಗಳು ಸುರಪುರ ಜೇವರ್ಗಿ, ಆಳಂದ ಮತ್ತು ಯಾದಗಿರ ತಾಲೂಕುಗಳಲ್ಲಿ ಲಭ್ಯವಾಗಿವೆ. ಅದರಲ್ಲಿ ಪ್ರಮುಖವಾಗಿ ಹುಣಸಗಿ, ಹಾಗರಗುಂಡಿ, ಜವಳಿ, ಗುರುಮಿಟಕಲ್‌ಗಳಲ್ಲಿ ನಿವೇಶನಗಳು ದೊರೆತಿವೆ. ಈ ಎಲ್ಲಾ ಅಂಶಗಳು ಜಿಲ್ಲೆಯ ಇತಿಹಾಸವನ್ನು ಪ್ರಾಚೀನದತ್ತ ಕೊಂಡಯ್ಯುತ್ತವೆ.

ಗುಲಬರ್ಗಾ ಜಿಲ್ಲೆಯು ೨೦೦೧ರ ಜನಗಣತಿಯ ಪ್ರಕಾರ ೩೧,೩೦,೯೨೨ ಜನಸಂಖ್ಯೆಯನ್ನು ಹೊಂದಿದ್ದು ೧೬,೧೭೪ ಚ.ಕೀ.ಮಿ. ವಿಸ್ತೀರ್ಣವಾಗಿದೆ. ಇದು ರಾಜ್ಯದ ಶೇ. ೮.೪೬ ರಷ್ಟು ಪ್ರದೇಶವನ್ನು ಒಳಗೊಂಡಿದೆ. ಭೌಗೋಳಿಕ ವಿಸ್ತೀರ್ಣದಲ್ಲಿ ಇದು ರಾಜ್ಯದ ಎರಡನೆಯ ದೊಡ್ಡ ಜಿಲ್ಲೆಯಾಗಿದೆ. ಆಡಳಿತದ ಅನುಕೂಲಕ್ಕಾಗಿ ಹತ್ತು ತಾಲೂಕಗಳಾಗಿ, ವಿಂಗಡಿಸಲಾಗಿದೆ. ಪ್ರಸ್ತುತ ಅಧ್ಯಯನವು ಜಿಲ್ಲೆಯಲ್ಲಿ ಬರುವ ಹತ್ತು ತಾಲೂಕಗಳ ರಾಜಕೀಯ ಸ್ಥಿತಿಗತಿ ಮತ್ತು ರಕ್ಷಣಾ ವ್ಯವಸ್ಥೆಯ ಅಧ್ಯಯನ ಕೈಗೊಳ್ಳಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಸಂಶೋಧನೆಯ ಶೀರ್ಷಿಕೆಯ ಅರ್ಥ ಮತ್ತು ಮಹತ್ವವನ್ನು ಕುರಿತು ಹೇಳಲಾಗಿದೆ. ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆ ಎನ್ನುವ ವಿಷಯ ಕುರಿತು ಇದುವರೆಗೆ ನಡೆದ ಬಿಡಿ ಬಿಡಿ ಅಧ್ಯಯನಗಳನ್ನು ಗಮನಿಸಿ, ಇಡೀ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ರಾಜಕೀಯ ಮತ್ತು ರಕ್ಷಣೆಯ ವಿಷಯಗಳ ಸಮಗ್ರ ಅಧ್ಯಯನ ಕೈಗೊಳ್ಳಲಾಗಿದೆ. ಈ ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳನ್ನು ಕುರಿತು ಮೊದಲನೆಯ ಅಧ್ಯಾಯದಲ್ಲಿ ಹೇಳಲಾಗಿದೆ.

ಎರಡನೆಯ ಅಧ್ಯಾಯವು ಗುಲಬರ್ಗಾ ಜಿಲ್ಲೆಯಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆಳ್ವಿಕೆ ಮಾಡಿರುವ ರಾಜಕೀಯ ಮನೆತನಗಳ ಮಹತ್ವದ ಸಾಧನೆಗಳನ್ನು ಕುರಿತು ಚರ್ಚಿಸಲಾಗಿದೆ. ಶಾತವಾಹನರಿಂದ ನಿಜಾಮ್‌ಶಾಹಿ ಮನೆತನದವರೆಗೆ ಬರುವ ಸುಮಾರು ೨೦ ಪ್ರಮುಖ ಮನೆತನಗಳು ಹಾಗೂ ಕೆಲವು ಸಾಮಂತ ಮನೆತನಗಳು ಜಿಲ್ಲೆಗೆ ನೀಡಿರುವ ಕೊಡುಗೆಗಳನ್ನು ಕುರಿತು ವಿವರಿಸಲಾಗಿದೆ. ಅದರಲ್ಲಿ ವಿಶೇಷವಾಗಿ ಮಳಖೇಡದ ರಾಷ್ಟ್ರಕೂಟರು[೨೦], ಗುಲಬರ್ಗಾ ಬಹಮನಿಯರು[೨೧] ಮತ್ತು ಸುರಪುರದ ನಾಯಕರು[೨೨] ಜಿಲ್ಲೆಯಲ್ಲಿ ಆಳಿರುವ ಪ್ರಮುಖ ರಾಜಕೀಯ ಮನೆತನಗಳಾಗಿವೆ. ಆದ್ದರಿಂದ ಇವರ ರಾಜಕೀಯ ಚರಿತ್ರೆಗೆ ಹೆಚ್ಚಿನ ಗಮನಹರಿಸಲಾಗಿದೆ. ಈ ಅಧ್ಯಯವು ಶಾತವಾಹನರಿಂದ ಹೈದ್ರಾಬಾದ ಕರ್ನಾಟಕ ವಿಮೋಚನೆ (೧೯೪೮)ಯವರೆಗಿನ ಪ್ರಮುಖ ರಾಜಕೀಯ ಘಟನೆಗಳನ್ನು ಒಳಗೊಂಡಿದೆ.

ಮೂರನೆಯ ಅಧ್ಯಾಯವು 'ರಕ್ಷಣಾ ವಾಸ್ತುಶಿಲ್ಪ' ಕುರಿತು ವಿವರಣೆಯನ್ನು ಒಳಗೊಂಡಿರುತ್ತದೆ. ರಕ್ಷಣಾ ವಾಸ್ತುಶಿಲ್ಪಶಿಲ್ಪದಲ್ಲಿ ಪ್ರಮುಖವಾಗಿ ಬರುವ ಕೋಟೆಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಾಗಿದೆ. ಕೋಟೆಯ ಅರ್ಥ, ಮಹತ್ವ ಮತ್ತು ಬೇರೆ ಬೇರೆ ವಿದ್ವಾಂಸರು ಹೇಳಿರುವ ವ್ಯಾಖ್ಯಾನಗಳನ್ನು ಕುರಿತು ಹೇಳಲಾಗಿದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಕೋಟೆಗಳು ಬೆಳೆದು ಬಂದ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ. ಅದರಲ್ಲಿ ವಿಶೇಷವಾಗಿ ಗುಲಬರ್ಗಾ ಜಿಲ್ಲೆಯಲ್ಲಿ ಕೋಟೆಗಳ ನಿರ್ಮಾಣದ ಕುರಿತು ಸಮಗ್ರ ಮಾಹಿತಿ ನೀಡಲಾಗಿದೆ. ಕೊನೆಯದಾಗಿ ಕೋಟೆಗಳ ಲಕ್ಷಣಗಳು ಹಾಗೂ ನಿರ್ಮಾಣಕ್ಕೆ ಅವಶ್ಯಕವಾಗಿರುವ ಅಂಶಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯನದಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಪ್ರಮುಖ ಕೋಟೆಗಳನ್ನು ಕುರಿತು ಚರ್ಚಿಸಲಾಗಿದೆ. ಜಿಲ್ಲೆಯ ವಿವಿಧ ಭಾಗಗಳಲ್ಲಿ ಆಳ್ವಿಕೆ ಮಾಡಿರುವ ರಾಜಕೀಯ ಮನೆತನಗಳು ತಮಗೆ ಅನುಕೂಲವಾಗುವಂತೆ ಕೋಟೆಗಳನ್ನು ನಿರ್ಮಿಸಿಕೊಂಡರು ಅಂತಹ ಕೋಟೆಗಳಲ್ಲಿ ಸನ್ನತಿ, ನಾಗಾವಿ, ಮಳಖೇಡ, ಗುಲಬರ್ಗಾ, ಫಿರೋಜಾಬಾದ, ಶಹಾಪುರ, ಸಗರ, ವನದುರ್ಗ, ಸುರಪುರ, ವಾಗಣಗೇರಿ, ರಾಯನಪಾಳ್ಯ, ಯಾದಗಿರ, ಗುರಮಿಟಕಲ್, ಚಂದ್ರಕಿ ಮುಂತಾದ ಕೋಟೆಗಳಲ್ಲಿ ಕ್ಷೇತ್ರ ಅಧ್ಯಯನ ಕಾರ್ಯ ಕೈಗೊಂಡು ಅದರಲ್ಲಿ ಸಂಗ್ರಹಿಸಿದ ವಿಶೇಷ ಮಾಹಿತಿಗಳನ್ನು ಕುರಿತು ಈ ಅಧ್ಯಯನದಲ್ಲಿ

ಚರ್ಚಿಸಲಾಗಿದೆ. ಅಲ್ಲದೆ ಕೆಲವು ಕೋಟೆಗಳನ್ನು ಪುನರ್‌ನಿರ್ಮಾಣಗೊಳಿಸುವಾಗ ಕಂಡು ಬಂದ ಲೋಪದೋಷಗಳನ್ನು ಕುರಿತು ಹೇಳಲಾಗಿದೆ. ಕಾಲ ಘಟ್ಟಕೆ ಅನುಗುಣವಾಗಿ ಕೋಟೆಗಳನ್ನು ವಿಂಗಡಿಸಿ, ಅವರ ನಿರ್ಮಾಣದ ಹಿನ್ನೆಲೆ ನಿವೇಶನದ ಮಹತ್ವ, ನಿರ್ಮಾಣಕ್ಕೆ ಬಳಸಿರುವ ವಸ್ತುಗಳು ಹಾಗೂ ಕೋಟೆಯಲ್ಲಿ ಬರುವ ಎಲ್ಲಾ ಮಹತ್ವದ ಕಟ್ಟಡಗಳ ಕುರಿತು ವಿವರಣೆ ನೀಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ರಕ್ಷಣಾ ಸಂಬಂಧಿ ವಾಸ್ತುಶಿಲ್ಪಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಾಗಿದೆ. ಇವುಗಳ ಬಗ್ಗೆ ನಾಲ್ಕನೆಯ ಅಧ್ಯಾಯದಲ್ಲಿ ಕೋಟೆಗಳೊಂದಿಗೆ ಸಂಕ್ಷಿಪ್ತವಾಗಿ ಹೇಳಲಾಗಿದೆ. ಆದರೆ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಪ್ರಮುಖ ಕೋಟೆಗಳಲ್ಲಿ ರಚನೆಗೊಂಡಿರುವ ರಕ್ಷಣೆಗೆ ಸಂಬಂಧಪಟ್ಟ ಕೊತ್ತಳ (ಬುರುಜು), ಅರಮನೆಗಳು, ದೇವಾಲಯ, ಪ್ರಾರ್ಥನಾ ಸ್ಥಳಗಳು (ಮಸೀದಿಗಳು) ಸೈನಿಕರ ನಿವಾಸಗಳು, ನೀರಿನ ಆಶ್ರಯ ತಾಣಗಳು, ಮದ್ದಿನ ಮನೆಗಳು, ಕಣಜಗಳು, ತೋಪುಗಳು ಮುಂತಾದ ರಕ್ಷಣಾ ಕಟ್ಟಡಗಳ ಬಗ್ಗೆ ವಿವರಣೆ ನೀಡಲಾಗಿದೆ. ಕ್ಷೇತ್ರಅಧ್ಯಯನ ಕಾರ್ಯದಲ್ಲಿ ಪ್ರತಿಯೊಂದು ಕೋಟೆಯಲ್ಲಿ ಕಂಡುಕೊಂಡ ಈ ಸ್ಮಾರಕಗಳ ಕುರಿತು ಹುಟ್ಟು ಮತ್ತು ಬೆಳವಣಿಗೆಯನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಹಲವು ಗ್ರಾಮಗಳಲ್ಲಿ ಕಂಡು ಬಂದ ಪ್ರವೇಶದ್ವಾರ, ಹುಡೆವು, ಕಾವಲುಗೋಪುರಗಳ ಬಗ್ಗೆ ಮಾಹಿತಿ ಸಂಗ್ರಹಿಸಿ, ಅವುಗಳ ಕುರಿತು ಮಾಹಿತಿ ನೀಡಲಾಗಿದೆ. ಇವುಗಳು ಗ್ರಾಮಗಳ ರಕ್ಷಣೆಗಾಗಿ ನಿರ್ಮಿಸಿರುವ ರಕ್ಷಣಾ ಕಟ್ಟಡಗಳಾಗಿರುವುದರಿಂದ ಇವುಗಳ ಬಗೆಗೆ ಹೆಚ್ಚಿನ ಮಾಹಿತಿಯನ್ನು ನೀಡಲಾಗಿದೆ. ಪ್ರತಿ ತಾಲೂಕುಗಳಲ್ಲಿ ಬರುವ ಪ್ರಮುಖ ಹುಡೆವು ವಾಡೆ ಹಾಗೂ ಕಾವಲುಗೋಪುರಗಳ ಕುರಿತು ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪವಾಗಿದ್ದು, ಇಡಿ ಅಧ್ಯಯನದ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಕಂಡು ಕೊಂಡ ಪ್ರಮುಖ ಸಂಗತಿಗಳನ್ನು ಕುರಿತು ಇಲ್ಲಿ ಸಮಿಕರಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ಕೋಟೆಗಳ ನಿರ್ವಹಣಾ ಪಟ್ಟಿ ಕೋಟೆಗಳ ನಕ್ಷೆ, ಛಾಯಾ ಚಿತ್ರಗಳು ಪದಕೋಶ ಮತ್ತು ಆಕರ ಕೃತಿಗಳ ಬಗ್ಗೆ ಅನುಬಂಧದಲ್ಲಿ ನೀಡಲಾಗಿದೆ.

ಅಡಿಟಿಪ್ಪಣಿಗಳು:

೧. ಕಲಬುರ್ಗಿ, ಎಂ.ಎಂ., ೧೯೯೪ - ಕರ್ನಾಟಕದ ಕೈಪಿಯತ್ತುಗಳು.

೨. ಶಿರೂರ, ಬಿ.ಬಿ., ೨೦೦೫ - ಕರ್ನಾಟಕ ಇತಿಹಾಸ ಅಕಾಡೆಮಿ (ರಿ)ಯ ೧೯ನೇಯ ವಾರ್ಷಿಕ ಸಮ್ಮೇಳನದ ಅಧ್ಯಕ್ಷಿಯ ಭಾಷಣ, ಪು. ೩.

೩. ಗೋಪಾಲ, ಆರ್., ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨-೩.

೪. Vijayalaxmi K.S. (Ed.) 2006 - Studies in Karnataka History and Culture, p. 139.

೫. Ramachandra Murthy, N.S., 1996 - Forts of Andhra Pradesh.

೬. Singh, A.P., Forts and Fortification in India.

೭. Suguna Sharma, 1998 - Raichur Fort.

೮. Aruni, S.K., 2004 - Surpur Samsthana Historical and Archeological Study, Poligar State in South India, p. 150.

೯. Qureshi Dulari, 2004 - Forts of Daulatabad, p. 64.

೧೦.Biradar Shrishail, 1993 - Malkhed through the ages, unpublished M.Phil. Dissertation, Gulbarga University, Gulbarga, pp. 3-4.

೧೧.G. Yazdani, 1960 - Early History of the Deccan.

೧೨.ಎ. ಕೃಷ್ಣ ಸುರಪುರ, ೧೯೮೫ - ಸಗರನಾಡು ದರ್ಶನ, ಪು. ೧೦-೧೧.

೧೩.ಶ್ರೀಶೈಲ್ ಬಿರಾದಾರ, ೨೦೦೫ - ಸೇಡಮ್, ಪು. ೧.

೧೪.ಎಂ. ಚಿದಾನಂದ. ಮೂರ್ತಿ. - ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ

೧೫.ಹನುಮಕ್ಷಿ ಗೋಗಿ - ಗುಲಬರ್ಗಾ ಜಿಲ್ಲೆಯ ಶಾಸನಗಳು, ಪು. ೭-೮.

೧೬.ಗೋಪಾಲ್, ಆರ್. ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.

೧೭.Joshi, S.K. 1985 - Defence Architecture in Early Karnataka, pp. 70-74.

೧೮.ಪಾಟೀಲ್ ಚನ್ನಬಸಪ್ಪ, ೧೯೯೭ - ಕರ್ನಾಟಕದ ಕೋಟೆಗಳು, ಪು. ೨.

೧೯.ಎಸ್. ತಿಪ್ಪೇಸ್ವಾಮಿ, ೨೦೦೪ - ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ.

೨೦.Altekar, A.S. - The Rashtrakutas, p. 8.

೨೧.Sherwani, H.K., 1998 - The Bhamanis of the Deccan, p. 18.

೨೨.ಕೃಷ್ಣಮಾಚಾರ್ಯ, ಬಿ., ೨೦೦೩ - ಮರೆಯಲಾಗದ ಸುರಪುರ ರಾಜದ ಚರಿತ್ರೆ, ಪು. ೧೨.

ಅಧ್ಯಾಯ-೨

ಗುಲಬರ್ಗಾ ಜಿಲ್ಲೆಯ ಭೌಗೋಳಿಕ ಮತ್ತು ರಾಜಕೀಯ ಚರಿತ್ರೆ

ದಕ್ಷಿಣ ಭಾರತದಲ್ಲಿರುವ ಕರ್ನಾಟಕದ ಉತ್ತರ ಭಾಗದಲ್ಲಿ ಬರುವ ಎರಡನೆಯ ಜಿಲ್ಲೆ ಗುಲಬರ್ಗಾ; ಉತ್ತರದಲ್ಲಿ ಬೀದರ, ದಕ್ಷಿಣದಲ್ಲಿ ರಾಯಚೂರು, ಬಿಜಾಪೂರ ಹಾಗೂ ಬಳ್ಳಾರಿ ಜಿಲ್ಲೆಗಳು ಗುಲಬರ್ಗಾ ಜಿಲ್ಲೆಗೆ ಗಡಿಗಳಾಗಿವೆ ಹಾಗೂ ಮಹಾರಾಷ್ಟ್ರದ ಸೊಲ್ಲಾಪೂರ ಹಾಗೂ ಉಸ್ಮಾನಾಬಾದ ಮತ್ತು ಆಂಧ್ರಪ್ರದೇಶದ ಮೆದಕ್, ಮಹಿಬೂಬನಗರ ಗಡಿಗಳು ಜಿಲ್ಲೆಯ ಗಡಿಗಳೊಂದಿಗೆ ಹೊಂದಿಕೊಂಡಿವೆ. ಕ್ರಿ.ಶ. ೧೯೫೬ರಲ್ಲಿ ರಾಜ್ಯ ಪುನರವಿಂಗಡನೆಯ ನಂತರ ಹೈದ್ರಾಬಾದ ಕರ್ನಾಟಕದಿಂದ ಬೇರ್ಪಟ್ಟ ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. ಜಿಲ್ಲೆಯ ಸಮತಟ್ಟಾದ ಪ್ರದೇಶವು ೭೬;೦೪ ಮತ್ತು ೭೭;೪೨ ಪೂರ್ವರೇಖಾಂಶ ಹಾಗೂ ೧೬ ೧೨ ಮತ್ತು ೧೭ ೪೬ ಉತ್ತರ ಅಕ್ಷಾಂಶ ಇವುಗಳ ಮಧ್ಯದಲ್ಲಿದೆ.[೧] ಜಿಲ್ಲೆಯ ದಕ್ಷಿಣ ಭಾಗದಲ್ಲಿ ಕೃಷ್ಣಾನದಿ, ಪಶ್ಚಿಮ ಭಾಗದಲ್ಲಿ ಭೀಮಾನದಿಯು ಹರಿಯುತ್ತದೆ. ಅಲ್ಲದೆ ಭೀಮಾನದಿಯ ಉಪನದಿಗಳಾದ ಅಮರ್ಜಾನದಿಯು ಮಹಾರಾಷ್ಟ್ರದ ಉಮರ್ಗಾ ತಾಲೂಕಿನಿಂದ ಜಿಲ್ಲೆಯ ಆಳಂದ ತಾಲೂಕಿನ ನೀರ್ಗುಡಿ ಗ್ರಾಮದ ಹತ್ತಿರ ಪ್ರವೇಶಿಸುತ್ತದೆ.[೨] ಕಾಗಿಣಾ ನದಿಯ ಆಂಧ್ರಪ್ರದೇಶದ ಕೋಹಿರ್‌ದಲ್ಲಿ ಹುಟ್ಟಿ ಜಿಲ್ಲೆಯ ಸೇಡಂ ತಾಲೂಕಿನ ಗಡಿಯಲ್ಲಿ ಬಂದು ಸೇರುತ್ತದೆ.[೩] ಮುಲ್ಲಾಮಾರಿ ನದಿಯು ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಮಟೌಲ್ ಬಳಿ ಹುಟ್ಟಿ, ಜಿಲ್ಲೆಯ ಕಿನ್ನಿ ಗ್ರಾಮವನ್ನು ಬಂದು ಸೇರುತ್ತದೆ.[೪] ಬೆಣ್ಣೆತೊರೆ ನದಿಯು ಮಹಾರಾಷ್ಟ್ರದ ಮಲೆಗಾಂವ ಗ್ರಾಮದ ಬಳಿಹುಟ್ಟಿ ಜಿಲ್ಲೆಯ ಆಳಂದ ತಾಲೂಕಿನ ಹಿಪ್ಪರಗಿ ಗ್ರಾಮದ ಬಳಿ ಬಂದು ಸೇರುತ್ತದೆ.[೫] ಬೋರಿ ನದಿಯು ಮಹಾರಾಷ್ಟ್ರದ ಸೋಲ್ಲಾಪುರದ ಎರಡು ದೊಡ್ಡ ಹಳ್ಳಗಳು ಸೇರಿ ಬೋರಿ ನದಿಯಾಗುತ್ತದೆ. ಈ ನದಿಯು ಅಫಜಲಪುರ ತಾಲೂಕಿನ ಜೋಡಿ ಕುರಡ್ ಗ್ರಾಮದ ಬಳಿ ಬಂದು ಸೇರುತ್ತದೆ.

೨.೧. ಪೌರಾಣಿಕ ಹಿನ್ನೆಲೆ:

ಗುಲಬರ್ಗಾ ಜಿಲ್ಲೆಯ ಹಲವು ಪ್ರದೇಶಗಳಿಗೆ ಪೌರಾಣಿಕ ಹಿನ್ನೆಲೆ ಇದೆ.[೬] ಶಹಾಪೂರ, ಸುರಪೂರ ಹಾಗೂ ಜೇವರ್ಗಿ ತಾಲೂಕಿನ ನಡುವಣ ಪ್ರದೇಶವನ್ನು **"ಸಗರನಾಡು"** ಎಂದು ಕರೆಯುತ್ತಾರೆ.[೭] ಈ ಪ್ರದೇಶವನ್ನು ಸಗರ ಚಕ್ರವರ್ತಿ ಎನ್ನುವ ಪೌರಾಣಿಕ ಪುರುಷನು ಆಳುತ್ತಿದ್ದನೆಂದು ಉಲ್ಲೇಖಗಳಿವೆ. ಅದೇ ರೀತಿ ಜಿಲ್ಲೆಯ 'ಛಾಯಾಭಗವತಿ'ಯು ಪೌರಾಣಿಕ ಹಿನ್ನೆಲೆಯಿಂದ ಕೂಡಿದೆ. ಸೂರ್ಯದೇವನು ತನ್ನ ಎರಡನೆಯ ಹೆಂಡತಿಯಾದ ಛಾಯಾದೇವಿಯನ್ನು ಇಲ್ಲೆ ವಿವಾಹವಾದನು. ನಿಜಸ್ಥಿತಿಯನ್ನು ತಿಳಿದ ನಂತರ ಸೂರ್ಯದೇವನು ಆಕೆಯನ್ನು ತ್ಯಜಿಸಿ ತನ್ನ ಮೊದಲನೆಯ ಹೆಂಡತಿಯಾದ ಸಂಮಜ್ಞಳನ್ನು ಇವೆ ಸ್ಥಳದಲ್ಲಿ ಕೂಡಿಕೊಂಡನೆಂದು ನಂಬಿಕೆ ಇದೆ.[೮]

ಅಮರಸಿಂಹನ **'ಅಮರಕೋಶ'**, ಮಂಗಳಷ್ಟಕಶ್ಲೋಕ, ಮತ್ಸ್ಯ, ಬ್ರಹ್ಮ ಮತ್ತು ವಾಮನ ಪುರಾಣಗಳಲ್ಲಿ ಭೀಮಾನದಿಯ ವಿವರಣೆ ಇದೆ. ಪುರಾಣಗಳಲ್ಲಿ ಇದನ್ನು **'ಪವಿತ್ರನದಿ'** ಅಥವಾ **'ಮಹಾನದಿ'** ಎಂದು ಕರೆಯಲಾಗಿದೆ. ಸನ್ನತಿಯು ರಾಮಸೀತೆಯರು ಮುನಿನಾರಾಯಣ ಹಾಗೂ ಚಂದ್ರಲಾಂಬರಾಗಿ ಇಲ್ಲಿ ಅವತರಿಸಿದ್ದರೆಂದು ಪುರಾಣಗಳಲ್ಲಿ ಹೇಳಲಾಗಿದೆ. ಇಲ್ಲಿಯ ಸೇತು ರಾಜನು ಸೀತೆಯನ್ನು ಕೆಣಕಿ ಶಾಪಕ್ಕೆ ಗುರಿಯಾದನು. ಈ ಕುರಿತು ಶಂಕರಾಚಾರ್ಯರು ತಮ್ಮ ಶ್ಲೋಕಗಳಲ್ಲಿ ಇಲ್ಲಿಯ ಮಹತ್ವವನ್ನು ವಿವರಿಸಿದ್ದಾರೆ.

೨.೨. ಪ್ರಾಗೈತಿಹಾಸಿಕ ಕಾಲ:

ಜಿಲ್ಲೆಯಲ್ಲಿ ಹರಿಯುವ ಭೀಮಾನದಿ ಹಾಗೂ ಅದರ ಉಪ ನದಿಗಳಿಂದ ಇಲ್ಲಿಯ ನೈಸರ್ಗಿಕ ಸಂಪತ್ತು ಅಧಿಕವಾಗಿದೆ. ಇಲ್ಲಿ ತಾಮ್ರ, ಕಬ್ಬಿಣ ಹಾಗೂ ಇತರ ಖನಿಜ ಸಂಪತ್ತು ಅಪರಾವಾಗಿದೆ. ಆದ್ದರಿಂದ ಪ್ರಾಚೀನ ಕಾಲದಿಂದ ಇಲ್ಲಿ ಜನ ವಸತಿ ಆರಂಭವಾಯಿತೆಂದು ಗುರುತಿಸಲಾಗಿದೆ. ಕ್ರಿ.ಶ. ೧೯ನೇ ಶತಮಾನದ ಉತ್ತರಾರ್ಧದದಲ್ಲಿ ರಾಬರ್ಟ ಬ್ರೂಸ್‌ಫೋರ್ಟ ಎಂಬ ಭೂ ವಿಜ್ಞಾನಿಯು ಸುರಪುರ ತಾಲೂಕಿನ ಕೃಷ್ಣಾನದಿಯ ದಂಡೆಯ ಮೇಲೆ ಏಡೆನಹಳ್ಳಿಯಲ್ಲಿ ಆದಿಹಳೆ ಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಪತ್ತೆ ಮಾಡಿದರು.[೯] ಕ್ರಿ.ಶ. ೧೯೭೦ರ ನಂತರ ನಡೆದ ಸಂಶೋಧನೆಯಲ್ಲಿ ಹಲವು ನೆಲೆಗಳನ್ನು ಶೋಧಿಸಲಾಗಿದೆ.

ಕೆ. ಪದಯ್ಯನವರು ಸುರುಪುರ ಪ್ರದೇಶದಲ್ಲಿ ಉತ್ಖನನ ಮಾಡಿ ನೂತನ ಶಿಲಾಯುಗದ ಸಾಂಸ್ಕೃತಿಕ ಅವಶೇಷಗಳನ್ನು ಪತ್ತೆ ಮಾಡಿದ್ದಾರೆ.[೧೦] ಪ್ರೊ॥ ಅ.ಸುಂದರ ಅವರು ಗುಲಬರ್ಗಾ ಜಿಲ್ಲೆಯ ಹಲವು ಭಾಗಗಳಲ್ಲಿ ಸಂಶೋಧನೆ ಕೈಗೊಂಡು ನೂತನ ಶಿಲಾಯುಗದ ಸಾಂಸ್ಕೃತಿಕ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ.[೧೧] ಮೆಡೋಸ್ ಟೈಲರ್ ಅವರು ಜೇವರ್ಗಿ ತಾಲೂಕಿನ ಕೆಲವು ಗ್ರಾಮಗಳಲ್ಲಿ ಕಬ್ಬಿಣಯುಗದ ಬೃಹತ ಶಿಲಾಸಂಸ್ಕೃತಿಯನ್ನು ಪತ್ತೆ ಮಾಡಿದ್ದಾರೆ.[೧೨] ಕಪಟರಾಳ ಕೃಷ್ಣರಾಯರು ಕರ್ನಾಟಕದ ಆದಿಇತಿಹಾಸಕಾಲದ ಇತಿಹಾಸ ಹಾಗೂ ಸನ್ನತಿಯ ಬೌದ್ಧ ನೆಲೆಗಳನ್ನು ಹಾಗೂ ಶಾಸನಗಳನ್ನು ಶೋಧ ಮಾಡಿದ್ದಾರೆ.[೧೩] ಅದೇ ರೀತಿ ಎಸ್.ಶೇಷಾದ್ರಿ ಪಿ.ಬಿ. ದೇಸಾಯಿ, ಎಂ.ಎಸ್. ನಾಗರಾಜರಾವ ಮುಂತಾದ ಇತಿಹಾಸಕಾರರು ಇಲ್ಲಿ ತಾವು ಪತ್ತೆ ಹಚ್ಚಿರುವ ನೆಲೆಗಳನ್ನು ಲೇಖನಗಳಲ್ಲಿ ಪ್ರಕಟ ಮಾಡಿದ್ದಾರೆ. ಜಿಲ್ಲೆಯಲ್ಲಿ ಶೋಧಗೊಂಡ ಹಲವು ಇತಿಹಾಸ ಪೂರ್ವದ ನೆಲೆಗಳ ಆಧಾರದ ಮೇಲೆ ಇದು ಪ್ರಾಚೀನ ಐತಿಹಾಸಿಕ ಪರಂಪರೆಯನ್ನು ಹೊಂದಿರುವುದು ಕಂಡು ಬರುತ್ತದೆ.

೨.೩ ಹಳೆಯ ಶಿಲಾಯುಗ:

ಕರ್ನಾಟಕದ ಮಾಂಜರಾ, ಕಾರಂಜ,[೧೪] ಭೀಮಾ, ಕೃಷ್ಣಾ, ಮಲಪ್ರಭಾ, ತುಂಗಭದ್ರಾ ಹೇಮಾವತಿ, ಕಾವೇರಿ, ನೇತ್ರಾವತಿ ಮುಂತಾದ ನದಿ ಕೊಳ್ಳಗಳಲ್ಲಿ ಹಲವಾರು ಹಳೆ ಶಿಲಾಯುಗದ ನೆಲೆಗಳಿವೆ.

[illegible]

ಇಲ್ಲಿಯ ನಿವಾಸಿಗಳು ನದಿಗಳಲ್ಲಿ ದೊರೆಯುವ ಬಂಡೆಕಲ್ಲುಗಳು ಹಾಗೂ ತುಂಡು ಕಲ್ಲುಗಳನ್ನು ಉಪಕರಣಗಳನ್ನಾಗಿ ಮಾಡಿಕೊಂಡರು.[೧೫] ಕೃಷ್ಣಾ ಕೊಳ್ಳದ ಕೆಳ ಪ್ರದೇಶದಲ್ಲಿ ದೊರೆಯುವ 'ಶೇದಿ' ಕಲ್ಲಿನಿಂದ ಉಪಕರಣಗಳನ್ನು ಮಾಡಿಕೊಳ್ಳುತ್ತಿದ್ದರು.[೧೬] ಇಂತಹ ಉಪಕರಣಗಳನ್ನು ಗುಲಬರ್ಗಾ ಜಿಲ್ಲೆಯ ಶೋರಾಪುರ ತಾಲೂಕಿನ ಹುಣಸಗಿ, ಯಡಿಪುರಗಳಲ್ಲಿ ತಯ್ಯಾರಿಸುತ್ತಿದ್ದರು. ಭೀಮಾಸಂಗಮ ಪ್ರದೇಶದಲ್ಲಿ ಆದಿ ಹಳೆ ಶಿಲಾಯುಗದ ವಸ್ತುಗಳನ್ನು ತಯ್ಯಾರಿಸಲು ಭೀಮಾ ಶ್ರೇಣಿಯ ಸುಣ್ಣದ ಕಲ್ಲನ್ನು ಬಳಸಲಾಗುತ್ತಿತ್ತು. ಈ ರೀತಿಯ ಕಲ್ಲಿನಲ್ಲಿ ರಚಿತವಾದ ಉಪಕರಣಗಳು ಭಾರತದಲ್ಲಿ ಪತ್ತೆಯಾಗಿರುವುದು ದೊರತದ್ದು ಹುಣಸಗಿಯಲ್ಲಿ.

ಹಳೆಯ ಶಿಲಾಯುಗದ ನಿವೇಶನಗಳು ಹುಣಸಗಿ,[೧೭] ಯಡಿಯಪುರಗಳಾಗಿವೆ.[೧೮] ಇಲ್ಲಿಯ ಜನರು ತಮ್ಮ ಜೀವನೋಪಾಯಕ್ಕಾಗಿ ಕಾಡು ಪ್ರಾಣಿಗಳನ್ನು ಬೇಟೆಯಾಡುವುದು ಒಂದು ಪ್ರಮುಖ ಕಸುಬಾಗಿತ್ತು. ಆ ಕಾಲದ ಸಸ್ಯಗಳು ಅವಶೇಷಗಳು ದೊರೆತಿಲ್ಲ. ಪ್ರಾಣಿಗಳ ಪಳಿಯುಳಿಕೆಯು ವಿರಳವಾಗಿದೆ. ಬೈಚಬಾಳಕೊಳ್ಳ,[೧೯] ಹುಣಸಗಿ, ಘಟಪ್ರಭಾಕೊಳ್ಳ,[೨೦] ತುಂಗಭದ್ರದ ನಿಟ್ಟೂರು,[೨೧] ಬೆಳಗಾವಿ ಜಿಲ್ಲೆಯ ಕೃಷ್ಣಾ ಕೊಳ್ಳಗಳಲ್ಲಿ ಈ ನಿವೇಶನಗಳಿಂದ ಆಶ್ಟೂಲಿ ಹಂತದ ಪ್ರಾಣಿಗಳ ಪಳಿಯುಳಿಕೆಗಳು, ನೆರೆಮಣ್ಣಿನಲ್ಲಿ ದೊರೆತಿವೆ. ಅವುಗಳಲ್ಲಿ ಕಾಡು ದನ, ಎಮ್ಮೆ, ಆನೆ, ಕಾಡುಕತ್ತೆ, ಈ ವರ್ಗದ ಪ್ರಾಣಿಗಳ ಪಳಿಯುಳಿಕೆಗಳು ಲಭ್ಯವಾಗಿವೆ.

ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಹುಣಸಗಿಯಲ್ಲಿ ಪ್ರೊ.ಕೆ.ಪದ್ದಯ್ಯನವರು ಉತ್ಖನನ ಮಾಡಿ, ಸುಮಾರು ೪೫ ಕ್ಕಿಂತಲೂ ಹೆಚ್ಚು ನಿವೇಶನಗಳನ್ನು ಪತ್ತೆ ಹಚ್ಚಿದ್ದಾರೆ.[೨೨] ಸುಮಾರು ೨೫ ನಿವೇಶನಗಳು ಗ್ರಾಮಗಳ ಸಮೀಪದಲ್ಲಿ ದೊರೆತಿವೆ. ಇಲ್ಲಿ ದೊರೆತ ಉಪಕರಣಗಳೆಂದರೆ, ಕೈಕೊಡಲಿ, ಮಚ್ಚುಗಳು, ಸುತ್ತಿಗೆಗಳು ಬಹುಮುಖದ ಆಯುಧಗಳು ಭರ್ಚಿಮೊನೆಗಳು, ಬಂಡಿಗಲ್ಲುಗಳು ಮುಂತಾದವುಗಳು ಇವರದು ಅಲೆಮಾರಿ ಜೀವನವಾಗಿತ್ತು.[೨೩] ಬೇಸಿಗೆಯಲ್ಲಿ ಈ ನಿವೇಶನಗಳಲ್ಲಿ ವಾಸವಾಗಿದ್ದು, ಉಳಿದ ಕಾಲದಲ್ಲಿ ಬೇರೆ ಕಡೆಗೆ ಹೋಗುತ್ತಿದ್ದರು.

ಯಡಿಯಾಪುರವು ಬೈಚಬಾಳ ಹಳ್ಳದ ಸಮೀಪದಲ್ಲಿದೆ. ಸುರಪುರ ಸಮೀಪದ ನದಿಯ ಸಂಗಮದಲ್ಲಿ ಸುಮಾರು ೫೦೦ ಮನೆಗಳ ಅವಶೇಷಗಳು ಲಭ್ಯವಾಗಿವೆ. ಹುಣಸಗಿಯ ಮಾದರಿಯಂತಹ ಉಪಕರಣಗಳು ಇಲ್ಲಿ ದೊರೆತಿವೆ.

[illegible]

ಅ ಗುಲಬರ್ಗಾ ಜಿಲ್ಲಿಯ ಶಿಲಾಯುಗ ಕಾಲದ ಮಹತ್ವದ ನಿವೇಶನಗಳ ಪಟ್ಟಿ.

ಕ್ರ.ಸಂ.	ನಿವೇಶನ	ನದಿಕೊಳ್ಳ	ತಾಲೂಕು	ಆಕರ
೧.	ಹುಣಸಗಿ	ಹುಣಸಗಿ	ಸುರಪುರು	ಪದ್ದಯ್ಯ ಕೆ. ೧೯೮೭
೨.	ಗುಲಬಾಳ	ಹುಣಸಗಿ	ಸುರಪುರು	ಪದ್ದಯ್ಯ ಕೆ. ೧೯೮೭
೩.	ಬನಹಟ್ಟಿ	ಹುಣಸಗಿ	ಸುರಪುರು	ಪದ್ದಯ್ಯ ಕೆ. ೧೯೮೭
೪.	ಫತ್ತೇಪುರ	ಬೈಚಬಾಳ	ಸುರಪುರು	ಪದ್ದಯ್ಯ ಕೆ. ೧೯೮೭
೧.	ಯಡಿಯಾಪುರ	ಹುಣಸಗಿ	ಸುರಪುರು	ಪದ್ದಯ್ಯ ಕೆ. ೧೯೮೭

ಬ ಮಧ್ಯ ಶಿಲಾಯುಗದ ನಿವೇಶನಗಳು

ಕ್ರ.ಸಂ.	ನಿವೇಶನ	ನದಿಕೊಳ್ಳ	ತಾಲುಕು	ಆಕರ
೧.	ಹಾಗರಗುಂಡಿ	ಭೀಮಾ	ಜೇವರ್ಗಿ	ಪದ್ದಯ್ಯಾ ಕೆ.
೨.	ಕುಪಿ	ಭೀಮಾ	ಜೇವರ್ಗಿ	ಪದ್ದಯ್ಯಾ ಕೆ.
೩.	ದೇವಪುರ	ಭೀಮಾ	ಜೇವರ್ಗಿ	ಪದ್ದಯ್ಯಾ ಕೆ.
೪.	ಹುಣಸಗಿ	ಹುಣಸಗಿ	ಸುರಪುರ	ಪದ್ದಯ್ಯಾ ಕೆ.
೫.	ಕಲದೇವನಹಳ್ಳಿ	ಹುಣಸಗಿ	ಸುರಪುರ	ಪದ್ದಯ್ಯಾ ಕೆ.
೬.	ವಚ್ಚಾಳ	ಹುಣಸಗಿ	ಸುರಪುರ	ಪದ್ದಯ್ಯಾ ಕೆ.
೭.	ಫತೇಪುರ	ಬೈಚಬಾಳ	ಸುರಪುರ	ಪದ್ದಯ್ಯಾ ಕೆ.
೮.	ಜವಳಿ	ಅಮರಜಾ	ಆಳಂದ	ನಾಗರಾಜು-೧೯೭೧
೯.	ಗುರಮಿಟಕಲ್	ಅಮರಜಾ	ಯಾದಗಿರ	ನಾಗರಾಜು-೧೯೭೧

ಕೆ. ಅಂತಿಮ ಶಿಲಾಯುಗದ ನಿವೇಶನಗಳು

ಕ್ರ.ಸಂ.	ನಿವೇಶನಗಳು	ನದಿಕೊಳ್ಳ	ತಾಲೂಕು	ಆಕರ
೧.	ಮರಳಭಾವಿ	ಸುರಪುರಸಂಗಮ	ಸುರಪುರ	ಪದ್ದಯ್ಯಾ ಕೆ. ೧೯೭೦

೨.೪. ಪೂರ್ವಭಾವಿ ಇತಿಹಾಸ ಕಾಲದ ಬೂದಿ ದಿನ್ನೆಗಳು

ಭೀಮಾ-ಕೃಷ್ಣಾ-ತುಂಗಭದ್ರ ನದಿಗಳ ಮಧ್ಯದ ಪ್ರದೇಶಗಳಲ್ಲಿ ಕುತೂಹಲ ಕೆರಳಿಸುವ ಹಲವಾರು ಬೂದಿ ದಿನ್ನೆಗಳಿವೆ. ಇದರ ಸಮೀಪದಲ್ಲಿ ಶಿಲಾಯುಗ, ತಾಮ್ರ ಶಿಲಾಯುಗ, ನವಶಿಲಾಯುಗ ಕಬ್ಬಿಣದ ಯುಗ ಹಾಗೂ ಬೃಹತ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ದೊರೆತಿವೆ. ೧೯೬೨-೬೩ರಲ್ಲಿ ಬೂದಿಹಾಳ (ಸುರಪುರ ತಾಲೂಕ) ದಲ್ಲಿ ಉತ್ಖನನ ನಡೆಯಿತು.[೨೪] ಇಲ್ಲಿಯ ಬೂದಿ ದಿನ್ನೆಗಳ ಸಾಂಸ್ಕೃತಿಕ ವಿಷಯ ಇನ್ನೂ ಬೆಳಕಿಗೆ ಬಂದಿಲ್ಲ. ಇವುಗಳ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳು ಇರುವುದಿಲ್ಲ.[೨೫] ಕ್ರಿ.ಶ. ೧೯೫೦ರ ನಂತರ ಹಲವು ಬೂದಿ ದಿನ್ನೆಗಳನ್ನು ಸಂಶೋಧಿಸಲಾಯಿತು. ಇದುವರೆಗೆ

ಕರ್ನಾಟಕದಲ್ಲಿ ಒಟ್ಟು ೪೨ ದಿನ್ನೆಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಗುಲಬರ್ಗಾ ಜಿಲ್ಲೆಯ ತಡಬಿಡಿ (ಕೃಷ್ಣಾ-ಭೀಮಾ ಸಂಗಮ) ಹಾಗೂ ಬೂದಿಹಾಳ ಪ್ರಮುಖವಾಗಿವೆ.[೩೬] ಬೂದಿದಿನ್ನೆಗಳ ಸಮೀಪದಲ್ಲಿ ಎಲ್ಲಾ ಕಾಲಮಾನದ ಜನ ವಸತಿ ಹೆಚ್ಚಿನ ಪ್ರಮಾಣದಲ್ಲಿತ್ತು. ಜಿಲ್ಲೆಯ ಕೊಡೆಕಲ್ಲು, ಕುಪ್ಪಗಲ್ಲು, ಕುಡಚಿ, ತೆರೆದಾಳ, ಶಾಕಾಪುರ ಮುಂತಾದ ಕಡೆಗಳಲ್ಲಿ ಈ ದಿನ್ನೆಗಳು ಕಂಡು ಬರುತ್ತವೆ.[೩೭]

ರಾಜಕೀಯ ಚರಿತ್ರೆ

೨.೧.೧. ಮೌರ್ಯರು:

ಕ್ರಿ.ಶ. ೧೯೯೦ರಲ್ಲಿ ಗುಲಬರ್ಗಾ ಜಿಲ್ಲೆಯ ಸಂಶೋಧನೆಗೆ ಮಹತ್ವ ವರ್ಷವಾಗಿದೆ. ಜಿಲ್ಲೆಯಲ್ಲಿ ಶಾತವಾಹನರ ಕಾಲದ ಬೌದ್ಧಸ್ತೂಪ, ಶಿಲ್ಪಗಳು ಹಾಗೂ ಶಾಸನಗಳು ಲಭ್ಯವಾಗಿವೆ. ಅದೇ ರೀತಿ ಸನ್ನತಿಯಲ್ಲಿ ಅಶೋಕ ಚಕ್ರವರ್ತಿಯ ಬೃಹತ್ ಬಂಡೆ ಶಾಸನಗಳು ಲಭ್ಯವಾಗಿವೆ. ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆಗೆ ಸಂಬಂಧಿಸಿದ ಹಲವು ಮಾಹಿತಿಗಳು ಲಭ್ಯವಾಗಿವೆ. ಮೌರ್ಯ ಅರಸರು ದಖ್ಖನ್ ಪ್ರಸ್ಥ ಭೂಮಿಯ ಕರ್ನಾಟಕದ ಉತ್ತರ ಭಾಗದ ಗುಲಬರ್ಗಾ ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯ ವಿಸ್ತಾರಕ್ಕೆ ಒಳಪಡಿಸಿಕೊಂಡಿರುವುದು. ೧೩ನೇ ಹಾಗೂ ೧೪ನೇ ಬೃಹತ್ ಬಂಡೆಗಲ್ಲು ಶಾಸನ ಹಾಗೂ ಎರಡು ಕಳಿಂಗ ಶಾಸನಗಳ ಪ್ರತಿಗಳಲ್ಲಿ ಲಭ್ಯವಾಗಿದೆ.[೩೮] ಸನ್ನತಿಯ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯ ಬಗ್ಗೆ ವಿಶೇಷ ಮಾಹಿತಿಯನ್ನು ನೀಡುತ್ತವೆ. ಇದುವರೆಗೆ ಒಟ್ಟು ನಾಲ್ಕು ಶಾಸನಗಳು ಲಭ್ಯವಾಗಿವೆ.

ಮೌರ್ಯರ ಪೂರ್ವದಲ್ಲಿ ದಕ್ಷಿಣ ಭಾರತವನ್ನು ನಂದ ಅರಸ ಮಹಾಪದ್ಮನಂದನು ಇಲ್ಲಿಯ ಹಲವು ಕ್ಷತ್ರಿಯರನ್ನು ಸದೆ ಬಡಿದು ತನ್ನ ರಾಜ್ಯ ವಿಸ್ತಾರಗೊಳಿಸಿದ. ಇವರ ರಾಜ್ಯವು ದಕ್ಷಿಣದ ಕೃಷ್ಣಾ-ತುಂಗಭದ್ರದವರೆಗೆ ವಿಸ್ತಾರಗೊಂಡಿರುವ ವಿಷಯ ಹಲವು ಪುರಾಣದಲ್ಲಿ ಉಲ್ಲೇಖಿಸಲಾಗಿದೆ.[೩೯] ಚಂದ್ರಗುಪ್ತ ಮೌರ್ಯನು ನಂದರನ್ನು ಸೋಲಿಸಿದ ಪರಿಣಾಮವಾಗಿ ಅವರ ಕರ್ನಾಟಕದ ಪ್ರದೇಶಗಳು ಮೌರ್ಯರು ಆಳ್ವಿಕೆಗೆ ಒಳಪಟ್ಟವು. ೨೪ ವರ್ಷಗಳ ಕಾಲ ಆಳ್ವಿಕೆ ಮಾಡಿರುವ ಚಂದ್ರಗುಪ್ತನು ತನ್ನ ಕೊನೆಯ ಕಾಲದಲ್ಲಿ ಕರ್ನಾಟಕದ ಶ್ರವಣ ಬೆಳಗೋಳದ ಬೆಟ್ಟದಲ್ಲಿ ಬಂದು ನೆಲೆಸಿ ಇದೇ ಸ್ಥಳದಲ್ಲಿ ಸಾವನ್ನಪ್ಪಿರುವ ವಿಷಯ ಜೈನ ಸಾಹಿತ್ಯದಲ್ಲಿ ಉಲ್ಲೇಖಗೊಂಡಿವೆ.[೪೦] ಚಂದ್ರಗುಪ್ತ ಮೌರ್ಯನ ನಂತರ ಆತನ ಮಗ ಬಿಂದುಸಾರನು ಅಧಿಕಾರಕ್ಕೆ ಬಂದನು. ಇತನಿಗೆ ಅಜಾತಶತ್ರು ಎಂಬ ಬಿರುದು ಇದೆ. ಇತನ ಕಾಲದಲ್ಲಿ ದಕ್ಷಿಣ ಭಾರತದ ಹಲವು ಭಾಗಗಳು ಆತನ ಆಳ್ವಿಕೆಗೆ ಒಳಪಟ್ಟಿದ್ದವು.

ಕ್ರಿ.ಪೂ.೨೭೩ರಲ್ಲಿ ಅಧಿಕಾರಕ್ಕೆ ಬಂದ ಅಶೋಕನು ಕಳಿಂಗ ಯುದ್ಧದ ನಂತರ ತನ್ನ ರಾಜ್ಯವನ್ನು ದಕ್ಷಿಣದ ಕಳಿಂಗದವರೆಗೆ ವಿಸ್ತರಿಸಿದ. XIII ನೇ ಬಂಡೆಗಲ್ಲು ಶಾಸನದಲ್ಲಿ ಈ ಯುದ್ಧದ ಪರಿಣಾಮಗಳನ್ನು ಕುರಿತು ವಿವರಿಸಲಾಗಿದೆ.[೪೧] ಯುದ್ಧ ನಂತರ ಬೌದ್ಧ ಗುರವಿನ ಪ್ರಭಾವದಿಂದ ಅಶೋಕನು ಯುದ್ಧವನ್ನು

ತ್ಯಜಿಸಿ ಅಹಿಂಸಾ ಮಾರ್ಗವನ್ನು ಹಿಡಿದು ಬೌದ್ಧ ಧರ್ಮದ ಪ್ರಚಾರದಲ್ಲಿ ತೊಡಗಿದ,[೩೨] ಆತನ ಧರ್ಮ ಮಹಾಮಾತ್ರರು ಜಿಲ್ಲೆಯ ಹಲವು ಭಾಗಗಳಲ್ಲಿ ಸುತ್ತಾಡಿ ಧರ್ಮ ಪ್ರಚಾರ ಮಾಡಿದರು. ಅಶೋಕನ ಸಾಮ್ರಾಜ್ಯವನ್ನು ನಾಲ್ಕು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಅದರಲ್ಲಿ ದಕ್ಷಿಣ ಭಾರತದ ಭಾಗವನ್ನು 'ಸುವರ್ಣಗಿರಿ' ಎಂದು ಕರೆಯಲಾಗಿದೆ. ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತಿಯನ್ನು **'ಸುವರ್ಣಗಿರಿ'** ಎಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.[೩೩] ಭೀಮಾ ನದಿಯ ಬಲದಂಡೆಯ ಮೇಲೆ ಇರುವ ಸನ್ನತಿಯು ಪ್ರಾಚೀನ ಸುವರ್ಣಗಿರಿಯ ಎಲ್ಲಾ ಭೌಗೋಳಿಕ ಲಕ್ಷಣಗಳನ್ನು ಹೊಂದಿದೆ. ಈ ಪ್ರದೇಶದಲ್ಲಿ ಮೌರ್ಯ ಹಾಗೂ ಶಾತವಾಹನರಿಗೆ ಸಂಬಂಧಿಸಿದ ಹಲವು ಶಾಸನಗಳು ಪತ್ತೆಯಾಗಿವೆ.[೩೪] ಸನ್ನತಿಯಲ್ಲಿ ಕರ್ನಾಟಕ ಹಾಗೂ ಕೇಂದ್ರ ಸರಕಾರದ ಪುರಾತತ್ವ ಇಲಾಖೆಯ ನೇತೃತ್ವದಲ್ಲಿ ಕ್ರಿ.ಶ. ೧೯೮೫ರಲ್ಲಿ ನಡೆಸಿದ ಉತ್ಖನನಗಳಲ್ಲಿ ಹಲವಾರು ಅವಶೇಷಗಳು ದೊರೆತಿವೆ. ಇವೆಲ್ಲವೂ ಕ್ರಿ.ಪೂ.೧ನೇ ಶತಮಾನದಿಂದ ೨ನೇಯ ಶತಮಾನಕ್ಕೆ ಸಂಬಂಧಿಸಿದವುಗಳಾಗಿವೆ. ಉತ್ಖನನದಲ್ಲಿ ಕೆಲವು ಅಪರೂಪದ ಹಾಗೂ ವಿರಳವಾದ ಮೌರ್ಯಕಾಲದ ಒಂದು ಸಚಿತ್ರ ವೃತ್ತ ಶಿಲಾಫಲಕ ಹಾಗೂ ಇತರ ವಸ್ತುಗಳು ಲಭ್ಯವಾಗಿವೆ.[೩೫] ಉತ್ತರ ಕರ್ನಾಟಕದ ಗುಲಬರ್ಗಾ ಜಿಲ್ಲೆಯ ಸನ್ನತಿಯು ಮೌರ್ಯರ ಕಾಲದಲ್ಲಿ ಮಹತ್ವದ ಸ್ಥಾನದಲ್ಲಿತ್ತು.

'ಕನಗನಹಳ್ಳಿ' ಹಾಗೂ ಎಡೆನಹಳ್ಳಿಯ ಉತ್ಖನನದಲ್ಲಿ ಬೌದ್ಧಸ್ತೂಪಗಳು ದೊರೆತಿವೆ. ಅದರಲ್ಲಿ ಕನಗನ ಹಳ್ಳಿಯ ಒಂದು ಸ್ತೂಪದಲ್ಲಿ ಸುಮಾರು ೪೦ಕ್ಕೂ ಹೆಚ್ಚಿನ ಸುಣ್ಣದ ಕಲ್ಲಿನಲ್ಲಿ ಕೆತ್ತಿರುವ ಫಲಕಗಳು ದೊರೆತಿವೆ. ಅವುಗಳು ಅಶೋಕ ಹಾಗೂ ಬುದ್ಧನನ್ನು ಕುರಿತು ರಚಿಸಲಾಗಿದೆ.[೩೬] ಭಾರತದಲ್ಲಿಯೇ ಮೊಟ್ಟಮೊದಲ ಬಾರಿಗೆ ಅಶೋಕ ಮತ್ತು ಆತನ ರಾಣಿಯರ ಚಿತ್ರವಿರುವ ಫಲಕ ದೊರೆತಿರುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಮೂರು ಹಂತದಲ್ಲಿರುವ ಈ ಫಲಕದ ಕೆಳಭಾಗದಲ್ಲಿ ಕೆಲವು ನರ್ತಕಿಯರ ಚಿತ್ರಗಳಿವೆ. ಮಧ್ಯಭಾಗದಲ್ಲಿ ಅಶೋಕನು ತನ್ನ ಇಬ್ಬರು ರಾಣಿಯರ ಮಧ್ಯದಲ್ಲಿ ನಿಂತು, ಇಬ್ಬರ ಮೇಲೆ ಕೈಹಾಕಿಕೊಂಡು ನಿಂತಿರುವ ದೃಶ್ಯದ ಚಿತ್ರವಿದೆ. ಅಲ್ಲದೆ ಗೌತಮ ಬುದ್ದನ ವಿವಿಧ ಭಂಗಿಯ ಮೂರ್ತಿಶಿಲ್ಪಗಳು ಲಭ್ಯವಾಗಿವೆ. ಈ ಎಲ್ಲಾ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಮೌರ್ಯರ ಕಾಲದಲ್ಲಿ ಗುಲಬರ್ಗಾ ಜಿಲ್ಲೆಯು ಅತ್ಯಂತ ಪ್ರಮುಖ ಸ್ಥಾನ ಹೊಂದಿರುವಂತೆ ಕಂಡುಬರುತ್ತದೆ.

೨.೧.೨. ಶಾತವಾಹನರು

ದಕ್ಷಿಣ ಭಾರತದಲ್ಲಿ ಮೌರ್ಯರ ನಂತರ ಅವರ ಅಧಿಕಾರವನ್ನು ಮುಂದುವರೆಯಿಸಿಕೊಂಡು ಹೊದವರು ಶಾತವಹಾನರು. ಮೌರ್ಯರು ಅವನತಿಯ ನೂರು ವರ್ಷಗಳ ನಂತರ ಏಳಿಗೆ ಹೊಂದಿದರು. ಆದ್ದರಿಂದ ಮೌರ್ಯರಿಗೂ ಹಾಗೂ ಶಾತವಾಹನರಿಗೂ ಹಲವು ವಿಷಯಗಳಲ್ಲಿ ಹೊಲಿಕೆ ಇವೆ.[೩೭]

[illegible]

ಶಾತವಾಹನರ ಸಾಮ್ರಾಜ್ಯವು ಕರ್ನಾಟಕದ ಉತ್ತರ ಭಾಗದಿಂದ ನರ್ಮದಾ ನದಿಯ ತೀರದವರೆಗೆ ವಿಸ್ತಾರಗೊಂಡಿದೆ. ಈ ಮನೆತನದ ಮೂಲ ಪುರುಷ **'ಶಾತವಾಹನ'** ಈತನಿಂದ ಈ ಮನೆತನಕ್ಕೆ ಶಾತವಾಹನ ಎಂದು ಹೆಸರು ಬಂದಿದೆ.[೩೮] ಶಾಸನಗಳಲ್ಲಿ ಈ ಮನೆತನ ಅರಸರನ್ನು ಆಂಧ್ರಪ್ರದೇಶಕ್ಕೆ ಸೇರಿದವರೆಂದು ಉಲ್ಲೇಖಿಸಲಾಗಿದೆ. ಇವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ದಕ್ಷಿಣ ಭಾರತದ ಪಶ್ಚಿಮ ಭಾಗದಿಂದ ಆರಂಭಿಸಿ, ಪೂರ್ವ ಹಾಗೂ ದಕ್ಷಿಣ ಭಾಗಗಳವರೆಗೆ ವಿಸ್ತರಿಸಿದರು. ಇವುಗಳನ್ನು ಆಂಧ್ರ ಕರ್ನಾಟಕ ಎಂದು ಕರೆಯುತ್ತಾರೆ. ಪ್ರಸ್ತುತ ಬಳ್ಳಾರಿ ಪ್ರದೇಶವನ್ನು "ಶಾತವಾಹನ ರಾಷ್ಟ್ರ" ಎಂದು ಕರೆಯುತ್ತಾರೆ.[೩೯] ಈ ಮನೆತನದ ಮೂಲ ಪುರಷನಾದ ಸಿಮುಖನು ಹಲವು ರಾಜರುಗಳನ್ನು ಸೋಲಿಸಿ 'ರಾಜಾ ಸಿಮುಖ ಶಾತವಾಹನ' ಎಂದು ಬಿರುದು ಪಡೆದುಕೊಂಡನು. ಗೌತಮಿ ಪುತ್ರಶಾತಕರ್ಣಿಯು ಈ ಮನೆತನದ ಸರ್ವಶ್ರೇಷ್ಠ ಅರಸನಾಗಿದ್ದಾನೆ. ಶಾತವಾಹನರು ದಕ್ಷಿಣ ಭಾರತದಲ್ಲಿ ಮತ್ತೊಮ್ಮೆ ತಮ್ಮ ಸರ್ವಾಭೌಮತ್ವವನ್ನು ಸ್ಥಾಪಿಸಿದರು.

ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ಶಾತವಾಹನರಿಗೆ ಸಂಬಂಧಿಸಿದ ಹಲವು ಅವಶೇಷಗಳು ದೊರೆತಿವೆ. ಅವುಗಳಲ್ಲಿ ಜನವಸತಿಯ ಕಟ್ಟಡಗಳು, ಇಟ್ಟಿಗೆಯಿಂದ ನಿರ್ಮಿಸಿದ ರಕ್ಷಣೆ ಗೋಡೆ, ಕೋಟೆಯ ಒಳಗಡೆ ಹಲವು ಬಗೆಯ ಕಟ್ಟಡದ ಅವಶೇಷಗಳು ಲಭ್ಯವಾಗಿವೆ. ಸನ್ನತಿಯು ಮೌರ್ಯರ ಕಾಲಕ್ಕೆ ದೊಡ್ಡ ನಗರವಾಗಿದ್ದು, ಶಾತವಾಹನರ ಕಾಲಕ್ಕೆ ಮತ್ತಷ್ಟು ಪ್ರಗತಿಯನ್ನು ಹೊಂದಿತು. ಇಲ್ಲಿಯ ನಾಲ್ಕು ಶಾಸನಗಳು ನೇರವಾಗಿ ಶಾತವಾಹನರನ್ನು ಕುರಿತು ಉಲ್ಲೇಖಿಸುತ್ತಿವೆ. ಗೌತಮಿಪುತ್ರ ಶಾತಕರ್ಣಿಯ ನಂತರ ವಶಿಷ್ಟಪುತ್ರಪುಲಮಾಯಿ, ಯಜ್ಞಶ್ರೀ, ವಿಜಯ, ಚಂದಶ್ರೀ ಮತ್ತು ಪುಲೋಮ ಇವರು ಅನುಕ್ರಮವಾಗಿ ಆಳಿದರು. ಶಾತವಾಹನರ ನಂತರ ಅವರ ಸಾಮಂತರಾದ ಅಬೀರರು, ಇಕ್ಷ್ವಾಕುಗಳು ಮತ್ತು ಚುಟುಗಳು ಇವರ ಪ್ರಾಂತಗಳನ್ನು ಆಳಿದರು.

ಹಾಲನ ಗಥಾಸಪ್ತಸತಿ (ಗಥಾಸತ್ತಸ) ಯಲ್ಲಿ ಬರುವ ಜನ ಸಾಮಾನ್ಯರ ಜೀವನ ಶೈಲಿಯ ವರ್ಣನೆಯ ಸನ್ನತಿಯಲ್ಲಿ ದೊರೆತ ಅವಶೇಷಗಳಿಗೆ ಹೊಲಿಕೆ ಇದೆ. ಇದೊಂದು ನಗರ ಜೀವನದಿಂದ ಕೂಡಿದ ಪ್ರದೇಶವಾಗಿತ್ತೆಂದು ಕಂಡುಬರುತ್ತದೆ.

೨.೧.೩. ಬದಾಮಿ ಚಾಲುಕ್ಯರು:

ಕದಂಬರ ನಂತರ ಅಧಿಕಾರಕ್ಕೆ ಬಂದ ಬದಾಮಿ ಚಾಲುಕ್ಯರು ಕ್ರಿ.ಶ.೫೪೦ ರಿಂದ ೭೫೩ರ ವರೆಗೆ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದರು. ಇವರ ಸಾಮ್ರಾಜ್ಯವು ಕಾವೇರಿ ನದಿಯಿಂದ ನರ್ಮದಾ ನದಿಯವರೆಗೆ ವಿಸ್ತಾರಗೊಂಡಿತ್ತು. ಇಂದಿನ ಕರ್ನಾಟಕ, ಮಹಾರಾಷ್ಟ್ರ, ಗೋವಾ, ಗುಜರಾತಿನ ಕೆಲವು ಭಾಗಗಳು, ಮಧ್ಯಪ್ರದೇಶ, ಒರಿಸ್ಸಾ, ಆಂಧ್ರಪ್ರದೇಶ ಮತ್ತು ತಮಿಳನಾಡಿನ ಕೆಲವು ಭಾಗಗಳವರೆಗೆ ಅವರ ಅದಿಪತ್ಯ ವಿಸ್ತಾರಗೊಂಡಿತು.

ಗುಲಬರ್ಗಾ ಜಿಲ್ಲೆಯು ಅಪರೋಕ್ಷವಾಗಿ ಅವರ ಆಳ್ವಿಕೆಗೆ ಒಳಪಟ್ಟಿತ್ತು. ಆದರೆ ಇಲ್ಲಿ ಅವರ ಯಾವುದೇ ಶಾಸನ ಅಥವಾ ಸ್ಮಾರಕಗಳು ಲಭ್ಯವಾಗಿಲ್ಲ. ಗುಲಬರ್ಗಾ ಜಿಲ್ಲೆಯ ನಿಂಬರಗಿ ಗ್ರಾಮದಲ್ಲಿ ದೊರೆತ ಶಾಸನವು ಕ್ರಿ.ಶ.೧೧೩೪ರಲ್ಲಿ ಕಲ್ಯಾಣಿ ಚಾಲುಕ್ಯರ ಅರಸ ಮೂರನೆಯ ಸೋಮೇಶ್ವರನಿಗೆ ಸಂಬಂಧಿಸಿದೆ.[೪೧] ಇದರಲ್ಲಿ ಬದಾಮಿ ಚಾಲುಕ್ಯ ಅರಸ ವಿನಯಾದಿತ್ಯನು ಈ ಗ್ರಾಮವನ್ನು ಗ್ರಾಮದ ಒಡೆಯ ನಾರಾಯಣಾಚಾರ್ಯರಿಗೆ ದತ್ತಿ ಕೊಟ್ಟಿರುವ ವಿಷಯ ಉಲ್ಲೇಖವಿದೆ. ಐಹೊಳೆ ಶಾಸನದ ಪ್ರಕಾರ ಬದಾಮಿ ಚಾಲುಕ್ಯರ ಭವ್ಯ ಸಾಮ್ರಾಜ್ಯವು ೯೦,೦೦೦ ಗ್ರಾಮಗಳನ್ನು ಹೊಂದಿದ್ದು, ಅವುಗಳನ್ನು ಮೂರು ರಾಷ್ಟ್ರಗಳಾಗಿ ವಿಭಾಗಿಸಿರುವ ವಿಷಯದ ಉಲ್ಲೇಖವಿದೆ.[೪೨] ದಕ್ಷಿಣ ಭಾರತದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಬದಾಮಿ ಚಾಲುಕ್ಯರು ಅಪಾರಕೊಡುಗೆಗಳನ್ನು ನೀಡಿದ್ದಾರೆ. ಐಹೊಳೆಯು 'ದೇವಾಲಯಗಳತೊಟ್ಟಿಲು' ಎಂದು ಕರೆಯಲಾಗಿದೆ. ಇವರ ಕಾಲದಲ್ಲಿ ಆರಂಭವಾದ ದೇವಾಲಯಗಳ ರಚನೆಯನ್ನು ಮುಂದೆ ಬಂದ ಮನೆತನಗಳು ಇದೇ ಶೈಲಿಯಲ್ಲಿ ಮುಂದುವರೆಯಿಸಿಕೊಂಡು ಹೋದರು. ಅದರಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ರಾಷ್ಟ್ರಕೂಟರು ಬದಾಮಿ ಚಾಲುಕ್ಯರ ಆಡಳಿತ ವ್ಯವಸ್ಥೆಯನ್ನು ಮುಂದುವರೆಯಿಸಿಕೊಂಡು ಹೋದರು.

೨.೧.೪. ಮಳಖೇಡದ ರಾಷ್ಟ್ರಕೂಟರು

ದಕ್ಷಿಣ ಭಾರತದಲ್ಲಿ ಚಾಲುಕ್ಯರು ಅವನತಿ ಹೊಂದುತ್ತಿದ್ದಂತೆ ರಾಷ್ಟ್ರಕೂಟರು ಏಳಿಗೆ ಹೊಂದಿದರು. ಕ್ರಿ.ಶ. ೮ನೇ ಶತಮಾನದಿಂದ ೧೦ನೇ ಶತಮಾನದಮರೆಗೆ ಆಳಿರುವ ರಾಷ್ಟ್ರಕೂಟರು ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದರು. ತಮ್ಮ ಸಮಕಾಲೀನ ಅರಸರಾದ ಗುರ್ಜರ, ಪ್ರತಿಹಾರರು, ಪಾಲರು, ಗಂಗರು, ವೆಂಗಿಯ ಚಾಲುಕ್ಯರು, ಪಲ್ಲವರು, ಚೋಳರು ಮುಂತಾದವರನ್ನು ಸದೆಬಡೆದು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದರು.

ರಾಷ್ಟ್ರಕೂಟರ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. **'ರಾಷ್ಟ್ರ'** ಎಂದರೆ ಒಂದು ಭೌಗೋಳಿಕ ಪ್ರದೇಶ, ಅವುಗಳ ಅದಿಪತಿಗೆ **'ನಾಯಕ'** ಎಂದು ಪ್ರಾಚೀನ ಶಾಸನಗಳಲ್ಲಿ ಉಲ್ಲೇಖವಾಗಿದೆ. ಚಾಲುಕ್ಯರ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಹಲವು ರಾಷ್ಟ್ರಕೂಟಗಳ ಹೆಸರು ಉಲ್ಲೇಖವಾಗಿವೆ.[೪೩] ಅದರಲ್ಲಿ ಮಾನ್ಯಖೇಡದ ರಾಷ್ಟ್ರಕೂಟರು ಒಬ್ಬರಾಗಿದ್ದಾರೆ. ಇದುವರೆಗೆ ಲಭ್ಯವಾದ ಶಾಸನಗಳು ಇವರ ರಾಜ್ಯಧಾನಿ ಕುರಿತು ಸ್ಪಷ್ಟ ಮಾಹಿತಿಗಳು ಇರುವುದಿಲ್ಲ[೪೪] ಹಾಗೂ ಮೂಲ ಪುರುಷನ ಬಗ್ಗೆ ಒಮ್ಮತದ ಅಭಿಪ್ರಾಯಗಳು ಇರುವುದಿಲ್ಲ.[೪೫] ಆದರೆ ರಾಷ್ಟ್ರಕೂಟರ ಶಾಸನಗಳಲ್ಲಿ ಕನ್ನಡ ಭಾಷೆ ಮತ್ತು ಲಿಪಿಗಳಲ್ಲಿವೆ, ಕನ್ನಡದ ಅತ್ಯಂತ ಪ್ರಾಚೀನ ಕೃತಿಯಾದ ಕವಿರಾಜಮಾರ್ಗವು ಇವರ ಕಾಲದಲ್ಲಿ ರಚನೆಗೊಂಡಿದೆ. ಇವುಗಳ ಆಧಾರದಿಂದ ರಾಷ್ಟ್ರಕೂಟರು ಕನ್ನಡ ನಾಡಿನವರೆಂದು ಒಪ್ಪಿಕೊಳ್ಳಲಾಗಿದೆ.

[illegible]

ಕ್ರಿ.ಶ.೭೩೫-೭೫೬ರಲ್ಲಿ ರಾಷ್ಟ್ರಕೂಟ ಮನೆತನವು ದಂತಿದುರ್ಗನಿಂದ ಅಸ್ತಿತ್ವಕ್ಕೆ ಬಂದಿತು. ದಕ್ಷಿಣ ಭಾರತದ ರಾಜಕೀಯ ಸನ್ನಿವೇಶಗಳನ್ನು ಅರಿತುಕೊಂಡು, ಬದಾಮಿ ಚಾಲುಕ್ಯರಿಂದ ಸ್ವತಂತ್ರನಾಗಿ ರಾಷ್ಟ್ರಕೂಟ ಮನೆತನವನ್ನು ಸ್ಥಾಪಿಸಿದನು. ಇತನಿಗೆ ಮಹಾರಾಜ, ರಾಜಪರಮೇಶ್ವರ, ಪರಮಭಟ್ಟಾರಕ ಎನ್ನುವ ಬಿರುದುಗಳಿವೆ.[೪೬]

ಕ್ರಿ.ಶ. ೭೫೬ರಲ್ಲಿ ಒಂದನೆಯ ಕೃಷ್ಣನು ಅಧಿಕಾರಕ್ಕೆ ಬಂದನು. ಇತನು ಚಾಲುಕ್ಯರನ್ನು ಹಾಗೂ ಅವರ ಸಾಮಂತರನ್ನು ಸದೆ ಬಡೆದು ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ ಇತನ ಕಾಲದ ಎಲ್ಲೋರದ ಕೈಲಾಸನಾಥ ದೇವಾಲಯ ಅತ್ಯಂತ ಪ್ರಮುಖವಾಗಿವೆ. ಎರಡನೆಯ ಗೋವಿಂದನು (೭೭೪-೭೮೦) ಅಧಿಕಾರಕ್ಕೆ ಬಂದನು. ಈ ಕಾಲದಲ್ಲಿ ಸಹೋದರ ದ್ರುವನು ಬಂಡಾಯದ ಲಾಭ ಪಡೆದ ಸಾಮಂತರೆಲ್ಲರು ಸ್ವತಂತ್ರರಾಗಲು ಹವಣಿಸಿದರು. ದ್ರುವನ ಕ್ಷಿಪ್ರ ಕ್ರಾಂತಿಯಿಂದ ಅಧಿಕಾರಕ್ಕೆ ಬಂದನು. ಕ್ರಿ.ಶ.೭೮೦-೭೯೩ರಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯ ಹೆಚ್ಚಿನ ಪ್ರಗತಿ ಕಂಡಿತು. ಉತ್ತರ ಹಾಗೂ ದಕ್ಷಿಣ ಭಾಗಗಳ ದಂಡಯಾತ್ರೆಯಿಂದ ರಾಷ್ಟ್ರಕೂಟರ ಸಾಮ್ರಾಜ್ಯ ವಿಸ್ತಾರಗೊಂಡಿತು. ವೆಂಗಿಯ ಚಾಲುಕ್ಯರ ನಾಲ್ಕನೆಯ ವಿಷ್ಣುವರ್ಧನನ ಮೇಲೆ ಆಕ್ರಮಣ, ಗಂಗವಾಡಿಯ ಶಿವಮಾರನ ಮೇಲೆ ದಾಳಿ, ಪಲ್ಲವರ ಒಂದನೆಯ ನಂದಿವರ್ಮನ ಮೇಲೆ ಆಕ್ರಮಣ ಮಾಡಿ ಅವರ ಪ್ರದೇಶಗಳನ್ನು ಹಿಡಿದುಕೊಂಡನು.[೪೭] ಡಾ. ಅಲ್ಟೇಕರ ಅವರ ಪ್ರಕಾರ, ದ್ರುವನ ಕಾಲದಲ್ಲಿ ರಾಷ್ಟ್ರಕೂಟರು ಭರತ ಖಂಡದಲ್ಲಿ ಅತ್ಯಂತ ಶ್ರೇಷ್ಠ ಅರಸರಾಗಿದ್ದರು.

ಮೂರನೆಯ ಗೋವಿಂದನು (ಕ್ರಿ.ಶ.೭೯೩-೮೧೪) ರಾಷ್ಟ್ರಕೂಟ ಅರಸರಲ್ಲಿಯೇ ಶ್ರೇಷ್ಟ ಅರಸ, ತಂದೆಯಾದ ದ್ರುವನೊಂದಿಗೆ ಹಲವು ಯುದ್ಧಗಳಲ್ಲಿ ಭಾಗವಹಿಸಿ ಗೆಲುವು ತಂದು ಕೊಟ್ಟನು, ಆದ್ದರಿಂದ ದ್ರುವನು ತನ್ನ ಎರಡನೆಯ ಮಗನಾದ ಗೋವಿಂದನನ್ನು ತನ್ನ ಉತ್ತರಾಧಿಕಾರಿ ಎಂದು ಆಯ್ಕೆ ಮಾಡಿದನು. ಮೂರನೆಯ ಗೋವಿಂದನ ಕಾಲದಲ್ಲಿ ಗುಲಬರ್ಗಾ ಜಿಲ್ಲೆಯ ಮಾನ್ಯಖೇಟ ಅಥವಾ ಮಳಖೇಡ ಅವರ ರಾಜ್ಯಧಾನಿಯಾಗಿತ್ತೆಂದು ಕೆಲವು ಶಾಸನಗಳಲ್ಲಿ ಉಲ್ಲೇಖಗಳಿವೆ. ಅಮೋಘವರ್ಷನ ಕೆಲವು ಶಾಸನಗಳಲ್ಲಿ ಮಳಖೇಡ ರಾಜ್ಯ ಹಲವು ಕಟ್ಟಡಗಳನ್ನು ಹೊಂದಿತು. (ಕ್ರಿ.ಶ.೮೧೪) ಎಂದು ಉಲ್ಲೇಖಿಸಲಾಗಿದೆ.

ಇಂದ್ರನ ಹಿರಿಯ ಮಗನಾದ ಕಂಬನು ದಂಗೆ ಎದ್ದಾಗ, ಇತನ ಬೆಂಬಲಕ್ಕೆ ಕೆಲವು ಸಾಮಂತ ಅರಸರು ಬಂದರು. ಗೋವಿಂದನು ಈ ದಂಗೆಯನ್ನು ಧಮನಗೊಳಿಸಿ, ಇದರಲ್ಲಿ ತನಗೆ ಸಹಕರಿಸಿದ ತನ್ನ ಸಹೋದರನನ್ನು ಗುಜರಾತದ ರಾಜ್ಯಪಾಲನಾಗಿ ನೇಮಿಸಿದ. ದಕ್ಷಿಣ ಭಾರತದ ಯಶಸ್ವಿ ಆಕ್ರಮಣದ ನಂತರ ಉತ್ತರ ಭಾರತದ ದಂಡಯಾತ್ರೆಯನ್ನು ಆಯೋಜಿಸಿದ. ಇದರಿಂದ ರಾಷ್ಟ್ರಕೂಟರಿಗೆ ಯಾವುದೇ ಲಾಭಗಳು ಆಗಲಿಲ್ಲ. ಆದರೂ ಇವರ ಸಾಮ್ರಾಜ್ಯ ಗಂಗಾನದಿಯವರೆಗೆ ವಿಸ್ತಾರಗೊಂಡಿತು.

ಗೋವಿಂದನ ಗಜಗಳು ಗಂಗಾನದಿಯ ನೀರು ಕುಡಿದು ಬಂದವು ಎನ್ನುವ ವಿಷಯ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಸಹೋದರ ಇಂದ್ರನ ಸಹಾಯದಿಂದ ಗೂರ್ಜರ ಪ್ರತಿಹಾರರನ್ನು ಸೋಲಿಸಿದ, ನಾಗಭಟರನ್ನು ಕನೌಜದಲ್ಲಿ ಸದೆ ಬಡಿದ, ನಂತರ ಚಕ್ರಯುಧನನ್ನು ಸದೆಬಡಿದ ನಿರಂತರ ಹೋರಾಟಗಳಿಂದ ರಾಷ್ಟ್ರಕೂಟರ ಸಾಮ್ರಾಜ್ಯ ಹಿಮಾಲಯ ಪರ್ವತದವರೆಗೆ ವಿಸ್ತಾರಗೊಂಡಿತು.

ಉತ್ತರ ಭಾರತದ ದಂಡಯಾತ್ರೆಯಿಂದ ರಾಜ್ಯ ಧಾನಿಗೆ ಮರಳಿ ಮತ್ತೆ ದಕ್ಷಿಣ ಭಾರತದ ದಾಳಿ ಆರಂಭಿಸಿದ. ವೆಂಗಿಯ ಚಾಲುಕ್ಯರು ತಮ್ಮ ಹಿಂದಿನ ನೀತಿಯನ್ನು ಬಿಟ್ಟು ಸ್ವತಂತ್ರರಾದರು, ಚಾಲುಕ್ಯರ ವಿಜಯಾಧಿತ್ಯನು ರಾಷ್ಟ್ರಕೂಟರಿಂದ ಸ್ವತಂತ್ರನಾದನು. ಆಗ ಗೋವಿಂದನು ಚತುರ ನೀತಿಯಿಂದ ಅವರ ರಾಜ್ಯದಲ್ಲಿ ಯಾದವಿಕಲಹ ಉಂಟುಮಾಡಿ ಅವರ ಪ್ರಾಂತಗಳನ್ನು ವಶಪಡಿಸಿಕೊಂಡನು. ದಕ್ಷಿಣ ಭಾರತದ ಗಂಗರು, ಪಾಂಡ್ಯರು ಪಲ್ಲವರು ಹಾಗೂ ಚೋಳರು ರಾಷ್ಟ್ರಕೂಟರ ವಿರುದ್ಧ ಒಕ್ಕೂಟ ರಚಿಸಿಕೊಂಡರು. ಗೋವಿಂದನು ಈ ರಾಜ್ಯಗಳ ಮೇಲೆ ದಾಳಿ ಮಾಡಿ, ಪಾಂಡ್ಯರ ಮತ್ಸ್ಯ, ಚೋಳರ ವ್ಯಾಘ್ರ, ಗಂಗರ ಗಜ, ಪಲ್ಲವರ ವೃಷಭ, ಮತ್ತು ಚಾಲುಕ್ಯರ ವರಹಗಳನ್ನು ವಶಪಡಿಸಿಕೊಂಡನೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಭಯಭೀತನಾದ ಸಿಂಹಳದ ಅರಸನು ಗೋವಿಂದನ ಸಾರ್ವಭೌಮವನ್ನು ಒಪ್ಪಿಕೊಂಡು ಅಪಾರ ಉಡುಗೊರೆಗಳನ್ನು ಕಳುಹಿಸಿದ.

ಈ ಎಲ್ಲಾ ಸಾಧನೆಗಳಿಂದ ಗೋವಿಂದನಿಗೆ ಜಗತುಂಗ, ಜಗರುದ್ರ, ತ್ರಿಭುವನದವಳ, ಕೀರ್ತಿನಾರಾಯಣ ಮುಂತಾದ ಬಿರುದುಗಳಿದ್ದವು. ತನ್ನ ನಂತರ ಉತ್ತರಾಧಿಕಾರತ್ವದ ಸಲುವಾಗಿ ಯಾದವಿ ಕಲಹ ಉಂಟಾಗಭಾರದೆಂದು, ತನ್ನ ಮಗ ಅಮೋಘವರ್ಷನನ್ನು ನೇಮಿಸಿದ. ಇತನು ಅಪ್ರಾಪ್ತನಾದ್ದರಿಂದ ತನ್ನ ಅಳಿಯ ಕರ್ಕನನ್ನು ರಾಜ ಪ್ರತಿನಿಧಿಯನ್ನಾಗಿ ನೇಮಿಸಿದ. ಮೂರನೆಯ ಗೋವಿಂದನ ಕಾಲದಲ್ಲಿ ರಾಷ್ಟ್ರಕೂಟರ ಮನೆತನವು ದಕ್ಷಿಣ ಭಾರತದ ಶ್ರೇಷ್ಠಮನೆತನಗಳಲ್ಲಿ ಒಂದಾಗಿದೆ. ಬಹುಮುಖ ಪ್ರತಿಭೆಯುಳ್ಳ ಇತನು ಕ್ರಿ.ಶ.೮೧೪ರಲ್ಲಿ ಮರಣ ಹೊಂದಿದನು.

ಮೂರನೆಯ ಗೋವಿಂದನ ನಂತರ ಅಮೋಘವರ್ಷ ನೃಪತುಂಗನು (ಕ್ರಿ.ಶ.೮೧೪-೮೮೦) ಅಧಿಕಾರಕೆ ಬಂದನು. ಆದರೆ ಈತನು ಅಪ್ರಾಪ್ತನಾದರಿಂದ ಕರ್ಕಸುವರ್ಣನನ್ನು ರಾಜಪ್ರತಿನಿಧಿಯಾಗಿ ನೇಮಕ ಮಾಡಲಾಯಿತು. ಈ ಕಾಲದಲ್ಲಿ ಮೂರನೆಯ ಗೋವಿಂದನಿಂದ ಸೋತ ದಕ್ಷಿಣ ಭಾರತದ ಅರಸರೆಲ್ಲ ಒಂದಾಗಿ, ತಮ್ಮ ತಮ್ಮ ಪ್ರದೇಶಗಳನ್ನು ಮರಳಿ ಪಡೆಯಲು ಯತ್ನಿಸಿದರು. ವೆಂಗಿಯ ಚಾಲುಕ್ಯರು ತಮ್ಮ ಪ್ರದೇಶಗಳನ್ನು ಹಿಡಿದುಕೊಳ್ಳಲು ಉತ್ಸುಕರಾಗಿದ್ದರು. ಸಂಜನ ತಾಮ್ರ ಫಲಕದಲ್ಲಿ ಕ್ರಿ.ಶ.೮೧೯ರಿಂದ ೮೨೧ರ ವರೆಗಿನ ರಾಷ್ಟ್ರಕೂಟರ ಸ್ಥಿತಿಯನ್ನು ವಿವರಿಸಲಾಗಿದೆ. ಸುವರ್ಣವರ್ಷನ ಪರಾಕ್ರಮದಿಂದ ಅಮೋಘವರ್ಷನು ಸಿಂಹಾಸನದಲ್ಲಿ ಮುಂದುವರೆಯಲು ಸಹಾಯವಾಯಿತು ಎಂದು ಡಾ.ಪಿ.ಬಿ.ದೇಸಾಯಿಯವರು ಉಲ್ಲೇಖಿಸಿದ್ದಾರೆ.೫೫ ಕ್ರಿ.ಶ.೮೨೧ರಲ್ಲಿ ಇತನು ಬಲ ಮತ್ತು ಬುದ್ಧಿಯ

ಪ್ರದರ್ಶನದಿಂದ ಸಾಮ್ರಾಜ್ಯವನ್ನು ಮುನ್ನಡೆಸಿಕೊಂಡು ಹಾಗೂ ತನ್ನ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸುವಂತೆ ಮಾಡಿದನು. ಅಮೋಘವರ್ಷನು ತನ್ನ ಸಾಮ್ರಾಜ್ಯ ವಿಸ್ತಾರ ನೀತಿಯನ್ನು ಆರಂಭಿಸಿ ಮೊದಲು ವೆಂಗಿಯ ಚಾಲುಕ್ಯರನ್ನು ಸದೆಬಡೆದು ಅವರ ರಾಜ್ಯಧಾನಿಯನ್ನು ತನ್ನ ರಾಜ್ಯಧಾನಿಯಲ್ಲಿ ವಿಲೀನಗೊಳಿಸಿಕೊಂಡನು. ನಂತರ ಗಂಗರ ರಾಚಮಲ್ಲನೊಂದಿಗೆ ಯುದ್ಧವನ್ನು ಆರಂಭಿಸಿ, ಅವರೊಂದಿಗೆ ನಿರಂತರವಾಗಿ ೩೦ ವರ್ಷಗಳವರೆಗೆ ಸಂಘರ್ಷ ಮುಂದುವರೆಸಿದ. ರಾಷ್ಟ್ರಕೂಟರ ದಂಡನಾಯಕ ಬಂಕೇಶನು ಹಲವು ಹೋರಾಟಗಳಲ್ಲಿ ಗಂಗರನ್ನು ಸೋಲಿಸಿದ, ನೀತಿಮಾರ್ಗ ಎರೆಯಂಗನು ಬಂಕೇಶನ ದಾಳಿಗಳಿಗೆ ಪ್ರತಿ ದಾಳಿಯನ್ನು ಆರಂಭಿಸಿದ. ಎರಡು ಪಡೆಗಳ ನಿರಂತರ ಹೋರಾಟದಿಂದ ಬೇಸತ್ತು ಶಾಂತಿಗೆ ಮುಂದಾದನು. ಗಂಗರು ಸಂಧಿಗೆ ಮುಂದಾದ್ದರಿಂದ, ಅಮೋಘವರ್ಷನು ತನ್ನ ಮಗಳಾದ ಚಂದ್ರಲಬ್ಬೆಯನ್ನು ಗಂಗರಾಜಕುಮಾರ ಒಂದನೆ ಭೂತುಗನಿಗೆ ನೀಡಿ ವೈವಾಹಿಕ ಸಂಬಂಧಕ್ಕೆ ಮುಂದಾದನು. ಇದರಿಂದ ಸಂಘರ್ಷ ಕೊನೆಗೊಂಡಿತು. ತನ್ನ ಇನ್ನೊಬ್ಬ ಮಗಳಾದ ಶೀಲ ಮಹಾದೇವಿಯನ್ನು ಚಾಲುಕ್ಯರ ವಿಷ್ಣುವರ್ಧನನಿಗೆ ನೀಡಿ ವಿವಾಹ ಮಾಡಿದ. ಮತ್ತೊಬ್ಬ ಮಗಳನ್ನು ಪಲ್ಲವ ಅರಸ ನಂದಿವರ್ಮನಿಗೆ ನೀಡಿದ, ಈ ವೈವಾಹಿಕ ಸಂಬಂಧಗಳು ಗಂಗ ಪಲ್ಲವ, ಚಾಲುಕ್ಯ ಮತ್ತು ರಾಷ್ಟ್ರಕೂಟರಲ್ಲಿ ಮೈತ್ರಿಯನ್ನು ತಂದಿತು.

ಸಿರನೂರು ಮತ್ತು ನೀಲಗುಂದ ಶಾಸನಗಳ ಪ್ರಕಾರ ಅಮೋಘವರ್ಷನು ಅಂಗ, ವಂಗ, ಮಗದ ಮುಂತಾದ ರಾಜ್ಯಗಳನ್ನು ವಶಪಡಿಸಿಕೊಂಡು, ಪ್ರಜೆಗಳ ಬಗೆಗೆ ಅಪಾರ ಕಾಳಜಿ ಹೊಂದಿದ ಇತನು ಮಹಾಲಕ್ಷ್ಮೀ ದೇವರಿಗೆ ಬೆರಳನ್ನು ಅರ್ಪಿಸಿರುವ ವಿಷಯ ಸಂಜನ ಫಲಕದಲ್ಲಿ ಉಲ್ಲೇಖಿಸಲಾಗಿದೆ.

ಭಾರತಕ್ಕೆ ಬೇಟಿ ನೀಡಿದ ಸುಲೆಮಾನನು ರಾಷ್ಟ್ರಕೂಟರ ರಾಜ್ಯಧಾನಿಗೆ ಭೇಟಿ ನೀಡಿ, ಮಾನ್ಯಖೇಟನಗರವನ್ನು ಕುರಿತು ಜಗತ್ತಿನ ನಾಲ್ಕು ದೊಡ್ಡ ಸಾಮ್ರಾಜ್ಯಗಳಲ್ಲಿ ಇದು ಒಂದಾಗಿದೆ ಎಂದು ಉಲ್ಲೇಖಿಸಿದ್ದಾನೆ.[೫೬] ಇತನ ಕಾಲದಲ್ಲಿ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಅಪರಾ ಪ್ರಗತಿಯನ್ನು ಕಂಡಿತು. ಮಳಖೇಡನಗರ ಅವಶ್ಯವಿರುವ ಎಲ್ಲಾ ಕಟ್ಟಡಗಳನ್ನು ಹೊಂದಿತು. ಮಾನ್ಯಖೇಟನಗರ ಇಂದ್ರನ ರಾಜ್ಯವನ್ನು ಮೀರಿಸುತ್ತಿತ್ತು ಎಂದು ವಿವರಿಸಿದ್ದಾನೆ. ಈ ಕವಿರಾಜಮಾರ್ಗದ ಕರ್ತೃ ಶ್ರೀವಿಜಯ, ಅಮೋಘವರ್ಷನ ಆಸ್ಥಾನದಲ್ಲಿ ಇದ್ದು ಮಾನ್ಯಖೇಟ ಪಟ್ಟಣದ ರಚನೆ ಹಾಗೂ ಅದನ್ನು ರಾಜ್ಯಧಾನಿಯನ್ನಾಗಿ ಮಾಡಲು ಕೈಗೊಂಡ ವಿಶೇಷ ಕ್ರಮಗಳನ್ನು ಕುರಿತು ಉಲ್ಲೇಖಿಸಿದ್ದಾನೆ.

ಕೊನೆಯ ಕಾಲದಲ್ಲಿ ಇತನ ಮಗ ಕೃಷ್ಣನು ಅಧಿಕಾರಕ್ಕಾಗಿ ದಂಗೆ ಎದ್ದನು. ಇದನ್ನು ಅರಿತ ಅಮೋಘ ವರ್ಷನು ಕ್ರಿ.ಶ.೮೭೮ರಲ್ಲಿ ಕೃಷ್ಣನನ್ನು ಯುವ ರಾಜನನ್ನಾಗಿ ಆಯ್ಕೆ ಮಾಡಿ ಪಟ್ಟಾಭಿಷೇಕ ಮಾಡಿದನು. ತನ್ನ ೬೪ ವರ್ಷಗಳ ಸುದೀರ್ಘ ಆಳ್ವಿಕೆಯ ನಂತರ ಕ್ರಿ.ಶ.೮೮೦ರಲ್ಲಿ ಮರಣ ಹೊಂದಿದ.

ಇತನಿಗೆ ನೃಪತುಂಗ ವೀರನಾರಾಯಣ, ಅತಿಶಯದವಳ, ಧರ್ಮಮಾರ್ತಾಂಡ ಎಂಬ ಮುಂತಾದ ಬಿರುದುಗಳಿದ್ದವು.

ಅಮೋಘವರ್ಷನ ನಂತರ ಆತನ ಮಗನಾದ ಎರಡನೆಯ ಕೃಷ್ಣನು ಕ್ರಿ.ಶ.೮೮೦-೯೧೪ರಲ್ಲಿ ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಯು ದಂಗೆಗಳ ಕಾಲ. ಸಾಮಂತರಾದ ವೆಂಗಿಯ ಚಾಲುಕ್ಯರ ಯುದ್ಧಗಳನ್ನು ಸ್ವತಂತ್ರವಾಗಿ ಎದುರಿಸುವ ಶಕ್ತಿ ಇವನಲ್ಲಿ ಉಳಿಯಲಿಲ್ಲ. ಬೇರೆಯವರ ಸಹಾಯದಿಂದ ದಂಗೆಗಳನ್ನು ಅಡಗಿಸಿದನು. ಚೇದಿಗಳೊಂದಿಗೆ ವೈವಾಹಿಕ ಸಂಬಂಧ ಮಾಡಿಕೊಂಡು ಅವರ ಸಹಾಯ ಪಡೆದುಕೊಂಡನು. ವೆಮುಲವಾಡದ ಚಾಲುಕ್ಯ ವಂಶದ ಅರಸರ ಸಹಾಯದಿಂದ ವೆಂಗಿಯ ಚಾಲುಕ್ಯರನ್ನು ಸದೆ ಒಡೆದನು ಆದರೆ ಇಬ್ಬರ ನಡುವೆ ಯಾವುದೆ ನಿರ್ಣಾಯಕ ಯುದ್ದಗಳು ಸಂಭವಿಸಲಿಲ್ಲ. ಚೋಳರೊಂದಿಗೆ ವೈವಾಹಿಕ ಸಂಬಂಧ ಮಾಡಿಕೊಂಡು, ನಂತರ ಅವರೊಂದಿಗೆ ಹೋರಾಟದಲ್ಲಿ ವಿಫಲನಾದನು. ತನ್ನ ಪೂರ್ವಜರ ರಾಜ್ಯಗಳನ್ನು ರಕ್ಷಿಸುವಲ್ಲಿ ವಿಫಲನಾಗಿ, ಕ್ರಿ.ಶ.೯೧೪ರಲ್ಲಿ ಮರಣ ಹೊಂದಿದ.

ಕ್ರಿ.ಶ. ೯೧೪ರಿಂದ ೯೨೯ರವರೆಗೆ ಎರಡನೆಯ ಕೃಷ್ಣನ ಮೊಮ್ಮಗ ಮೂರನೆಯ ಇಂದ್ರನು ಅಧಿಕಾರಕ್ಕೆ ಬಂದನು. ಪ್ರಾರಂಭದ ವರ್ಷದಲ್ಲಿ ಉತ್ತರ ಭಾರತದ ಮೇಲೆ ದಾಳಿಗೈದು ಪಾರಮಾರರನ್ನು ಮತ್ತು ಕನೌಜದ ಅರಸರನ್ನು ಸೋಲಿಸಿದನು. ಕನೌಜದ ಆಕ್ರಮಣದಿಂದ ಉತ್ತರ ಭಾರತದಲ್ಲಿ ಮತ್ತೊಮ್ಮೆ ರಾಷ್ಟ್ರಕೂಟರ ಕೀರ್ತಿಹೆಚ್ಚಿತು. ವೆಂಗಿಯ ಚಾಲುಕ್ಯರ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡಿದ ಈತನು ತನ್ನ ಅನುಯಾಯಿ ಯುದ್ಧಮಲ್ಲನನ್ನು ಅಧಿಕಾರಕ್ಕೆ ತಂದನು. ಮತ್ತೊಮ್ಮೆ ವೆಂಗಿಯ ಚಾಲುಕ್ಯರು ರಾಷ್ಟ್ರಕೂಟರ ಸೌರ್ವಭೌಮತ್ವವನ್ನು ಒಪ್ಪಿಕೊಂಡರು.

ಮೂರನೆಯ ಇಂದ್ರನ ಮರಣದ ನಂತರ ರಾಷ್ಟ್ರಕೂಟರ ಪ್ರಭಾವ ಕಡಿಮೆಯಾಗತೊಡಗಿತು. ಉತ್ತರಾಧಿಕಾರಿಗಳಾದ ಎರಡನೆಯ ಅಮೋಘವರ್ಷ, ನಾಲ್ಕನೆಯ ಗೋವಿಂದ, ಮೂರನೆಯ ಅಮೋಘವರ್ಷ ನಂತರ ಮೂರನೆಯ ಕೃಷ್ಣನು ಅಧಿಕಾರಕ್ಕೆ ಬಂದನು.

ಮೂರನೆಯ ಕೃಷ್ಣನು ರಾಷ್ಟ್ರಕೂಟವಂಶದ ಕೊನೆಯ ಪ್ರಬಲ ಅರಸ.[೫೭] ಯುವ ರಾಜನಾಗಿದ್ದಾಗ ಇತನು ಅಪಾರ ಸಾಧನೆ ಗೈದ, ಅವುಗಳಲ್ಲಿ ಗಂಗವಾಡಿಯ ಮೇಲೆ ದಾಳಿ, ಕಲಚೂರಿಗಳ ಮೇಲೆ ಯುದ್ಧ, ಗರ್ಜರ ಪ್ರತಿಹಾರರ ಮೇಲೆ ದಾಳಿ ಮುಂತಾದವುಗಳು ಈತನು ಅಧಿಕಾರಕ್ಕೆ ಬರಲು ಸಹಾಯಕವಾದವು.[೫೮] ಅಧಿಕಾರಕ್ಕೆ ಬಂದ ನಂತರ ದಕ್ಷಿಣ ಭಾರತದ ಕಡೆಗೆ ಗಮನ ಹರಿಸಿ ಹಲವು ದಾಳಿಗಳನ್ನು ಮಾಡಿದನು. ಇತನಿಗೆ ಅಕಾಲವರ್ಷ ಎನ್ನುವ ಬಿರುದು ಇತ್ತು. ಚೋಳರ ಮೇಲೆ ದಾಳಿ, ಮಾಳವದ ಪಾರಮಾರರ ಮೇಲೆನ ದಾಳಿಗಳು ಪ್ರಮುಖವಾಗಿವೆ. ಈ ರೀತಿ ಮೂರನೆಯ ಕೃಷ್ಣನು ತನ್ನ ಪೂರ್ವಜರಂತೆ ಉತ್ತರ ಮತ್ತು ದಕ್ಷಿಣ ಭಾರತದ ಮೇಲೆ ನಿಯಂತ್ರಣ ಹೊಂದಿದ. ಕ್ರಿ.ಶ.೯೬೭ರಲ್ಲಿ

ಇತನು ನಿಧನ ಹೊಂದಿದ.[೫೯] ಗುಲಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟ ಅರಸ ಮುಮ್ಮಡಿ ಕೃಷ್ಣನ ಕಾಲದ ಕೆಲವು ಶಾಸನಗಳು ದೊರೆತಿವೆ. ಶಹಾಪೂರ ತಾಲೂಕಿನ ಶಿರವಾಳದಲ್ಲಿ ಕ್ರಿ.ಶ.೯೩೯ರ ಅಕಾಲವರ್ಷನ ಮುಮ್ಮಡಿ ಕೃಷ್ಣನ ಶಾಸನದಲ್ಲಿ ಸಗರನಾಡಿನ ಉಲ್ಲೇಖವಿದೆ.[೬೦] ಜೇವರ್ಗಿ ತಾಲೂಕಿನ ಆಂದೋಲಾದಲ್ಲಿರುವ ೯೫೮ರ ಶಾಸನದಲ್ಲಿ ಕನ್ನರದೇವ ಅಕಾಲವರ್ಷನು (ಕೃಷ್ಣ) ನವಖಂಡ ಪೃಥ್ವಿಯನ್ನು ಆಳುತ್ತಿದ್ದನೆಂದು ಉಲ್ಲೇಖವಿದೆ. ಚಿಂಚೋಳಿ ತಾಲೂಕಿನ ನಿಡಗುಂದದಲ್ಲಿಯ ಇತನ ಶಾಸನವು ಅಸ್ಪಷ್ಟವಾಗಿದೆ.

ಮೂರನೆಯ ಕೃಷ್ಣನ ನಂತರ ರಾಷ್ಟ್ರಕೂಟರ ಮನೆತನವು ಅವನತಿಯ ಹಂತ ತಲುಪಿತು. ಕ್ರಿ.ಶ.೯೬೭ರಿಂದ ೯೭೨ರ ಅವಧಿಯಲ್ಲಿ ಹಲವು ಸಾಮಂತರು ದಂಗೆ ಎದ್ದು ಸ್ವತಂತ್ರರಾದರು. ಪರಮಾರ ಅರಸ ಶ್ರೀಯಕ ಹರ್ಷನು ರಾಷ್ಟ್ರಕೂಟರ ಮೇಲೆ ದಾಳಿ ಮಾಡಿ ಅವರ ರಾಜ್ಯಧಾನಿ ಮಳಖೇಡವನ್ನು ಆಕ್ರಮಿಸಿದ ಮುಂದಿನ ಉತ್ತರಾಧಿಕಾರಿಗಳು ಅವರ ರಾಜ್ಯಧಾನಿ ರಕ್ಷಿಸುವಲ್ಲಿ ವಿಫಲರಾದರು. ಕಲ್ಯಾಣಿ ಚಾಲುಕ್ಯರು ಪ್ರಬಲರಾಗುತ್ತಿದ್ದಂತೆ ರಾಷ್ಟ್ರಕೂಟರು ದುರ್ಬಲರಾಗಿ ರಾಜಕೀಯದಿಂದ ನಿರ್ಗಮಿಸಿದರು.

೨.೧.೫. ಕಲ್ಯಾಣದ ಚಾಲುಕ್ಯರು:

ಬದಾಮಿ ಚಾಲುಕ್ಯರ ಮೂಲವನ್ನು ಹೊಂದಿರುವ ಕಲ್ಯಾಣಿ ಚಾಲುಕ್ಯರು ಬೀದರ ಜಿಲ್ಲೆಯ ಬಸವ ಕಲ್ಯಾಣದಿಂದ ಆಳಿದರು. ಪ್ರಾರಂಭದಲ್ಲಿ ಜಿಲ್ಲೆಯ ಯಾದಗಿರದಿಂದ ಆಳ್ವಿಕೆಯನ್ನು ಮಾಡಿರುವ ಇವರು ನಂತರ ಬಸವಕಲ್ಯಾಣವನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಇವರ ಆಳ್ವಿಕೆ ಕುರಿತು ಗುಲಬರ್ಗಾ ಜಿಲ್ಲೆಯಲ್ಲಿ ಇದುವರೆಗೆ ಕೆಲವು ಶಾಸನಗಳು ಪತ್ತೆಯಾಗಿವೆ. ಇವರ ಮೂಲ ಹಾಗೂ ಸ್ಥಾಪಕನ ಕುರಿತು ಹಲವು ಶಾಸನಗಳು ಪತ್ತೆಯಾಗಿವೆ. ಇವರ ಮೂಲದ ಹಾಗೂ ಸ್ಥಾಪಕನ ಕುರಿತು ಕೆಲವು ವಾದ ವಿವಾದಗಳಿವೆ.[೬೧]

ಕ್ರಿ.ಶ.೯೭೩-೯೯೭ರಲ್ಲಿ ಎರಡನೆಯ ತೈಲಪನು ಈ ಮನೆತನಯನ್ನು ಸ್ಥಾಪನೆಮಾಡಿದ, ರಾಷ್ಟ್ರಕೂಟರ ಹಾಗೂ ಪಾರಮಾರರ ಕಲಹದಲ್ಲಿ ತೈಲಪನು ಪಾರಮಾರರನ್ನು ಸಹಕರಿಸಿ, ರಾಷ್ಟ್ರಕೂಟರನ್ನು ಸದೆಬಡೆದನು. ನೀಲಕಂಠ ಶಾಸ್ತ್ರೀಯವರ ಪ್ರಕಾರ ತೈಲಪನು ರಾಷ್ಟ್ರಕೂಟರ ಮತ್ತು ಅವರ ಎಲ್ಲಾ ಸಾಮಂತರ ವಾರಸುದಾರರಾದನು. ತನ್ನ ಸೈನಿಕ ಸಾಧನೆಗಳಲ್ಲಿ ರಟ್ಟರನ್ನು, ಬನವಾಸಿಯ ಭೀಮರಸನನ್ನು, ಶಿಲಾಹಾರರನ್ನು ಸದೆಬಡೆದು ಅವರನ್ನು ತನ್ನ ಸಾಮಂತರನ್ನಾಗಿಸಿಕೊಂಡನು. ಚಿಂತಾಮಣಿಯ ಪ್ರಕಾರ ಮಾಳವದ ಅರಸ ವಾಕ್ಪತಿಮುಂಜನಿಂದ ೧೫ ಬಾರಿ ಸೋತು, ೧೬ನೆಯ ಬಾರಿಯ ದಾಳಿಯಲ್ಲಿ ತೈಲನು ಯಾದವರ ಸಹಾಯದಿಂದ ಅವರಿಗೆ ತಕ್ಕಪಾಠ ಕಲಿಸಿದನು. ಚೋಳರನ್ನು ಹಾಗೂ ರಾಷ್ಟ್ರಕೂಟರ ಸಾಮಂತರನ್ನು ಸದೆಬಡಿದು ತನ್ನ ಸಾಮ್ರಾಜ್ಯವನ್ನು ಉತ್ತರದಲ್ಲಿ ಗೋದಾವರಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೆ ಪೂರ್ವದಲ್ಲಿ ಆಂಧ್ರದಿಂದ ಪಶ್ಚಿಮದಲ್ಲಿ ಕೊಂಕಣದವರೆಗೆ ವಿಸ್ತರಿಸಿದನು.

[illegible]

[illegible]

[illegible]

[illegible]

ಎರಡನೆಯ ತೈಲನ ಮಗ ಸತ್ಯಾಶ್ರಯನು (ಕ್ರಿ.ಶ.೯೯೭-೧೦೦೮) ಅಧಿಕಾರಕ್ಕೆ ಬಂದನು. ತಂದೆಯಂತೆ ಆಕ್ರಮಣಕಾರಿಯಾದ ಇತನು ಚೋಳರೊಂದಿಗೆ ಗಂಗವಾಡಿ ಮತ್ತು ನೊಳಂಬವಾಡಿ ಯುದ್ಧಗಳನ್ನು ಮಾಡಿದನು. ಪಾರಮಾರರ ಹಾಗೂ ಕಲಚೂರಿಗಳ ಆಕ್ರಮಣದಲ್ಲಿ ವಿಫಲನಾದನು. ಆದರೆ ಶೀಲಹಾರರು ಮತ್ತು ಗುರ್ಜರ ಮೇಲಿನ ಆಕ್ರಮಣಗಳು ಯಶಸ್ವಿಯಾದವು. ಇತನಿಗೆ ಅಹಮಲ್ಲ, ಇರಿವೆಬೆಡಂಗ ಹಾಗೂ ಸಾಹಸಭೀಮ ಎನ್ನುವ ಬಿರುದುಗಳಿದ್ದವು. ಕ್ರಿ.ಶ.೧೦೦೮-೧೦೧೫ರ ವರೆಗೆ ಇತನ ಸಹೋದರನ ಮಗ ಐದನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದನು. ಈ ಕಾಲದಲ್ಲಿಯೂ ಪಾರಮಾರರೊಂದಿಗೆ ಹಾಗೂ ಚೋಳರೊಂದಿಗೆ ಯುದ್ಧ ನಡೆಯಿತು. ಮುಂದಿನ ಉತ್ತರಾಧಿಗಳ ಕಾಲದಲ್ಲಿ ಈ ಸಂಘರ್ಷ ಮುಂದುವರೆಯಿತು. ಜಯಸಿಂಹನ ಕಾಲದಲ್ಲಿ ಯಶಸ್ವಿ ದಾಳಿಗಳು ಸಂಭವಿಸಿದವು. (ಕ್ರಿ.ಶ.೧೦೨೦) ಇದರಿಂದ ಆತನಿಗೆ ಜಗದೇಕಮಲ್ಲ ಎಂಬ ಬಿರುದು ಬಂದಿತು.

ಕ್ರಿ.ಶ.೧೦೪೨ರಲ್ಲಿ ಅಧಿಕಾರಕ್ಕೆ ಬಂದ ಒಂದನೆಯ ಸೋಮೇಶ್ವರನು ಕಲ್ಯಾಣ ರಾಜ್ಯಧಾನಿಯನ್ನು ಪುನರನಿರ್ಮಾಣಗೊಳಿಸಿದ್ದನು. ಇಲ್ಲಿಯ ಕೋಟೆಯನ್ನು ಭದ್ರಗೊಳಿಸಿ ಹಲವು ರಕ್ಷಣಾ ಸ್ಮಾರಕಗಳನ್ನು ನಿರ್ಮಿಸಿದನು. ಚೋಳರು ಮತ್ತು ಪಾರಮಾರರ ಮೇಲಿನ ದಾಳಿಗಳು ಯಶಸ್ವಿಯಿಂದ ಕೂಡಿದವು. ನಂತರದ ಯುದ್ಧಗಳಲ್ಲಿ ಗುರ್ಜರು, ಕೋಸಲ, ಕಳಿಂಗ, ಮಗದ, ಕನೌಜ, ನೇಪಾಳ, ಪಾಂಚಾಲಿ ಮತ್ತು ಕುರುರಾಜ್ಯಗಳ ಮೇಲೆ ದಾಳಿಗೈದನು. ಈ ಕಾಲದಲ್ಲಿ ಮತ್ತೊಮ್ಮೆ ಚೋಳ ಚಾಲುಕ್ಯರ ಸಂಘರ್ಷ ಆರಂಭವಾಯಿತು. ಈ ಯುದ್ಧಗಳಲ್ಲಿ ಸೋಮೇಶ್ವರನ ಮಗ ವಿಕ್ರಮಾದಿತ್ಯನು ತಂದೆಯ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಯತ್ನಿಸಿ ವಿಫಲನಾದನು. ಕೊಲ್ಲಿಪಾಕ, ಕಂಪಲಿ, ಪುಂಡೂರಗಳಲ್ಲಿ ನಡೆದ ಯುದ್ಧಗಳಲ್ಲಿ ಚಾಲುಕ್ಯರು ಪರಾಜಯ ಹೊಂದಿದರು. ಚೋಳರ ಸೈನ್ಯ ಯಾದಗಿರ ಕೋಟೆಯನ್ನು ಮುತ್ತಿ ಚಾಲುಕ್ಯ ಸೈನ್ಯಯನ್ನು ಮತ್ತೊಮ್ಮೆ ಸದೆ ಬಡಿಯಿತು. ಯಾದಗಿರ ಯುದ್ಧದ ನೆನಪಿಗಾಗಿ ಅಲ್ಲಿ ವಿಜಯ ಸ್ತಂಭವನ್ನು ಸ್ಥಾಪಿಸಿದರು.[೩] ಮುಂದಿನ ಕೆಲವು ವರ್ಷಗಳಲ್ಲಿ ಚೋಳರನ್ನು ಇಲ್ಲಿಂದ ಹೊರಹಾಕಿದರು. ಅವರನ್ನು ಕಂಚಿಯವರೆಗೆ ಬೆನ್ನಟ್ಟಿಕೊಂಡು ಹೋಗಿ ಕಂಚಿಯನ್ನು ವಶಪಡಿಸಿಕೊಂಡರು.

ಜೇವರ್ಗಿ ತಾಲೂಕಿನ ಆಂದೋಲದಲ್ಲಿ ದೊರೆತ ಶಾಸನವು ಸೋಮೇಶ್ವರನು ಇಲ್ಲಿಯ ಚನ್ನ ಮಾಧವ ದೇವಾಲಯಕ್ಕೆ ದತ್ತಿ ನೀಡಿರುವ ವಿಷಯವನ್ನು ಉಲ್ಲೇಖಿಸುತ್ತದೆ.[೪] (ಕ್ರಿ.ಶ.೧೦೫೦) ಸುರಪುರ ತಾಲೂಕಿನ ಕೆಂಭಾವಿಯ ಸಿದ್ದೇಶ್ವರ ದೇವಾಲಯಕ್ಕೆ ದತ್ತಿ ನೀಡಿರುವ ವಿಷಯವಿದೆ. ಕೆಂಭಾವಿಯು ಸೋಮೇಶ್ವರನ ಕಾಲದಲ್ಲಿ ಕೆಂಭಾವಿ ೨೪ ಒಂದು ಪ್ರಮುಖ ಆಡಳಿತ ಘಟಕವಾಗಿತ್ತು. ಅಲ್ಲದೆ ಈತನ ಕಾಲದ ಚಿತ್ತಾಪೂರ ತಾಲೂಕಿನ ದಿಗ್ಗಾಂವಿ-೩೦೦, ರಲ್ಲಿ ಬ್ರಾಹ್ಮಣ ಪಂಡಿತರಿಂದ, ಮಹಾನ್ ಅಗ್ರಹಾರವಾಗಿತ್ತು ಎಂದು ಇಲ್ಲಿಯ ಶಾಸನದಲ್ಲಿ ಹೇಳಲಾಗಿದೆ. ಈ ಶಾಸನದಲ್ಲಿ ಚಾಲುಕ್ಯರ ವಂಶಾವಳಿಯನ್ನು ನೀಡಲಾಗಿದೆ. ಚಿತ್ತಾಪೂರ ತಾಲೂಕಿನ ನಾಗಾವಿಯಲ್ಲಿ ೬೦ ಕಂಬಗಳ ದೇವಾಲಯ

ಪ್ರಾಚೀನ ಕಾಲದ ಪ್ರಮುಖ ವಿದ್ಯಾಕೇಂದ್ರವಾಗಿತ್ತು ಎಂದು ಇಲ್ಲಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ. (೧೦೫೮). ಒಂದನೆಯ ಸೋಮೇಶ್ವರನ ೨೫ ವರ್ಷಗಳ ಆಳ್ವಿಕೆಯಲ್ಲಿ ಹಲವು ಯುದ್ಧಗಳಲ್ಲಿ ಜಯ-ಅಪಜಯ ಹೊಂದಿನು. ಇತನ ಆಳ್ವಿಕೆಯಲ್ಲಿ ಗುಲಬರ್ಗಾ ಜಿಲ್ಲೆಯ ಹಲವು ಭಾಗಗಳಲ್ಲಿ ದೇವಾಲಯಗಳನ್ನು ಅಗ್ರಹಾರ, ವಿದ್ಯಾಕೇಂದ್ರಗಳನ್ನು ನಿರ್ಮಿಸಿದನು.

ಕ್ರಿ.ಶ.೧೦೬೮-೧೦೭೬ರಲ್ಲಿ ಅಧಿಕಾರಕ್ಕೆ ಬಂದ ಎರಡನೆಯ ಸೋಮೇಶ್ವರನು ಮೊದಲನೆಯ ಸೋಮೇಶ್ವರ ಹಾಗೂ ಬಾಚಲಾದೇವಿಯರ ಮಗ ಆರನೆಯ ವಿಕ್ರಮಾದಿತ್ಯ ಹಾಗೂ ಜಯಸಿಂಗ ಈತನ ಸಹೋದರರು. ಚೋಳರೊಂದಿಗೆ ಯುದ್ಧಗಳನ್ನು ಯಶಸ್ವಿಯಾಗಿ ಎದುರಿಸಿದನು. ತನ್ನ ಸಹೋದರರನ್ನು ಗಡಿ ರಾಜ್ಯಗಳಿಗೆ ಪ್ರಾಂತಧಿಕಾರಿಗಳನ್ನಾಗಿ ನೇಮಿಸಿದ. ಕಿರಿಯ ಸಹೋದರ ಆರನೆಯ ವಿಕ್ರಮಾದಿತ್ಯನು ಮಹತ್ವಾಕಾಂಕ್ಷಿಯಾಗಿದ್ದು, ಸಹೋದರನ ವಿರುದ್ಧ ಚೋಳರಿಗೆ ಬೆಂಬಲಿಸಿ, ಅವರೊಂದಿಗೆ ಸಂಧಿ ಮಾಡಿಕೊಂಡು, ವೈವಾಹಿಕ ಸಂಬಂಧವನ್ನು ಏರ್ಪಡಿಸಿದ, ಚೋಳರ ಸಹಾಯದಿಂದ ಸಹೋದರನನ್ನು ಬದಿಗೊತ್ತಿ ಅಧಿಕಾರಕ್ಕೆ ಬಂದನು. ಒಳಸಂಚು ಮತ್ತು ಆಕ್ರಮಣ ನೀತಿಯಿಂದ ಕ್ರಿ.ಶ.೧೦೭೬ರಲ್ಲಿ ಸಹೋದರರನ್ನು ಬಂಧಿಸಿ, ಚಾಲುಕ್ಯ ಸಿಂಹಾಸನವನ್ನು ಏರಿದನು.

ಕ್ರಿ.ಶ.೧೦೭೬ರಲ್ಲಿ ಅಧಿಕಾರಕ್ಕೆ ಬಂದ ಆರನೆಯ ವಿಕ್ರಮಾತ್ಯನು ಈ ಮನೆತನದ ಸರ್ವಶ್ರೇಷ್ಠ ಅರಸ. ಇತನು ಅಧಿಕಾರಕ್ಕೆ ಬಂದ ವರ್ಷವನ್ನು (೧೦೭೬ ಫೆಬ್ರವರಿ ೨೬ರಂದು) ಚಾಲುಕ್ಯ **'ವಿಕ್ರಮಶಕೆ'**ಯನ್ನು ಆರಂಭಿಸಿದ ಈ ವಿಷಯ ಗದುಗಿನ ಶಾಸನದಲ್ಲಿ ಉಲ್ಲೇಖವಾಗಿದೆ. ತನ್ನ ಇನ್ನೊರ್ವ ಸಹೋದರನ ಮೇಲೆ ದಾಳಿಮಾಡಿ ಆತನನ್ನು ಸದೆ ಬಡಿದನು. ಮಾಳವಾದ ದಂಡಯಾತ್ರೆಯಲ್ಲಿ ಭಾಗವಹಿಸಿ ಅಲ್ಲಿ ತನ್ನ ಅನುಯಾಯಿಗಳನ್ನು ಅಧಿಕಾರಕ್ಕೆ ತಂದನು. ರಾಯಭಾಗ ಶಾಸನ ಹಾಗೂ ಲಕ್ಷ್ಮೇಶ್ವರ ಶಾಸನಗಳಲ್ಲಿ ಈತನ ಸೈನಿಕ ಸಾಧನೆಗಳನ್ನು ವಿವರಿಸಲಾಗಿದೆ. ವೆಂಗಿಯ ಚಾಲುಕ್ಯರ ಮೇಲೆ ಆಕ್ರಮಣ ಮಾಡಿ, ವೆಂಗಿಯನ್ನು ವಶಪಡಿಸಿಕೊಂಡ ಇದರಿಂದ ಚಾಲುಕ್ಯರ ಸಾಮ್ರಾಜ್ಯ ಪೂರ್ವ-ಪಶ್ಚಿಮಗಳ ಸಮುದ್ರಗಳವರೆಗೆ ವಿಸ್ತಾರಗೊಂಡಿತು. ಹೊಯ್ಸಳರ ಪ್ರಾರಂಭಿಕ ಅರಸರು ಚಾಲುಕ್ಯರೊಂದಿಗೆ ನಿಷ್ಠೆಯಿಂದ ಇದ್ದರು. ಆದರೆ ಮಹತ್ವಾಕಾಂಕ್ಷಿಯಾದ ವಿಷ್ಣುವರ್ಧನನು ಚಾಲುಕ್ಯ ಪ್ರದೇಶಗಳನ್ನು ಹಿಡಿದುಕೊಂಡನು. ಆರನೆಯ ವಿಕ್ರಮಾದಿತ್ಯನು ತನ್ನ ಎಲ್ಲಾ ಸಾಮಂತರೊಂದಿಗೆ ಕೂಡಿ ವಿಷ್ಣುವರ್ಧನನ ಮೇಲೆ ದಾಳಿಮಾಡಿ ಸೋಲಿಸಿದನು.

ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಹಲವು ಶಾಸನಗಳು ಗುಲಬರ್ಗಾ ಜಿಲ್ಲೆಯ ಕೆಲವು ಭಾಗಗಳಲ್ಲಿ ಲಭ್ಯವಾಗಿವೆ. ಸುರಪುರ ತಾಲೂಕಿನ ಏವೂರು (೧೦೭೮) ಶಾಸನದಲ್ಲಿ ತನ್ನ ದಂಡನಾಯಕನು ನಿರ್ಮಿಸಿದ ಸ್ವಯಂಭೂ ದೇವಾಲಯಕ್ಕೆ ತಾನು ದತ್ತಿ ನೀಡಿರುವ ವಿಷಯವನ್ನು ಕುರಿತು

ಉಲ್ಲೇಖಿಸುತ್ತದೆ. ಅಲ್ಲದೆ ಈ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯನು ಉತ್ತರ ಭಾಗಗಳಲ್ಲಿ ಕೈಗೊಂಡ ದಿಗ್ವಿಜಯಗಳನ್ನು ಹಾಗೂ ಆತನ ಆಡಳಿತ ವ್ಯವಸ್ಥೆಯನ್ನು ಕುರಿತು ವಿವರಿಸುತ್ತದೆ.

ಆಳಂದ ತಾಲೂಕಿನ ಶಾಸನದಲ್ಲಿ (೧೦೮೨) ೬ನೇಯ ವಿಕ್ರಮಾದಿತ್ಯನು ತನ್ನ ಉತ್ತರಾಧಿಕಾರಿಯಾದ ಯುವರಾಜ ಮಲ್ಲಿಕಾರ್ಜುನನಿಗೆ ಅಲಂದೆ ಸಾಸಿರ ನಾಡಿನ ಅಧಿಪತಿಯನ್ನಾಗಿ ನೇಮಿಸಿದ. ಅಲ್ಲದೆ ಇತನ ಅಂಗ ರಕ್ಷಕರನ್ನಾಗಿ ಪೆರ್ಗಡೆನಾಚರಸ ಹಾಗೂ ಸಾಮಂತ ಕಾಳಿದಾಸರನ್ನು ನೇಮಿಸಿದ. ಇವರು ಇಲ್ಲಿಯ ಸ್ವಯಂಭೂ ದೇವಸ್ಥಾನಕ್ಕೆ ಸೂರೇಶ್ವರ ಪಂಡಿತರನ್ನು ನೇಮಿಸಿ ಅವರಿಗೆ ಹಲವು ಗ್ರಾಮಗಳನ್ನು ದತ್ತಿ ನೀಡಿರುವ ವಿಷಯ ಈ ಶಾಸನವು ಒಳಗೊಂಡಿದೆ. ಸುರಪುರ ತಾಲೂಕಿನ ಬೈಚಬಾಳ ಶಾನದಲ್ಲಿ (೧೦೭೪) ಇತನ ದಂಡನಾಯಕ ರೇಬ್ಬಣಯ್ಯನು ಬಸವನ ಕೆರೆ ಹಾಗೂ ರಬ್ಬೇಶ್ವರ ದೇವಾಲಯವನ್ನು ನಿರ್ಮಿಸಿದ. ಅಲ್ಲದೆ ಕೆಂಭಾವಿ-೧೨ ವಿಭಾಗದ ಆಡಳಿತ ವ್ಯವಸ್ಥೆಯನ್ನು ಕುರಿತು ವಿವರಿಸಲಾಗಿದೆ. ಮುದನೂರು ಶಾಸನದಲ್ಲಿ ಇಲ್ಲಿಯ ಸುತ್ತಮುತ್ತಲಿನ ಸಾಮಂತರನ್ನು ಸದೆಬಡಿದು ತನ್ನ ಸಾಮಂತರನ್ನಾಗಿಸಿಕೊಂಡ ವಿಷಯ ಉಲ್ಲೇಖಿಸುತ್ತದೆ. ಗುಲಬರ್ಗಾ ಜಿಲ್ಲೆಯ ಹಲವು ಭಾಗಗಳಲ್ಲಿ ದೊರೆತ ಶಾಸನಗಳು, ೬ನೆಯ ವಿಕ್ರಮಾದಿತ್ಯನ ಕುರಿತು ಮಾಹಿತಿ ನೀಡುತ್ತವೆ.

ಆರನೆಯ ವಿಕ್ರಮಾದಿತ್ಯನು ಯಡ್ರಾಮಿ ಅಥವಾ ಏಳೆರಾಮೆಯಲ್ಲಿ ತ್ರಿಕೂಟ ದೇವಾಲಯವನ್ನು ನಿರ್ಮಿಸಿದ. ಅಲ್ಲದೆ ಮತ್ತೊಂದು ಶಾಸನದಲ್ಲಿ ಸಗರನಾಡಿನ ಮಹಾಮಾಂಡಲಿಕರಾದ ಹೇಹಯವಂಶದ ವಂಶಾವಳಿಯನ್ನು ಕುರಿತು ವಿವರಿಸಲಾಗಿದೆ. ಸುರಪುರದಲ್ಲಿ ಲಭ್ಯವಾದ ಕೆಲವು ಶಾಸನಗಳಲ್ಲಿ ತನ್ನ ರಾಣಿಯರಾದ ಪಟ್ಟಮಹಾದೇವಿ, ಮಲಯಮತಿದೇವಿ, ಶಿಲಾಹಾರ ರಾಜಪುತ್ರಿ ಚಂದ್ರಲಾದೇವಿ ಹಾಗೂ ಧಾರಾಲಾದೇವಿ ಹಾಗೂ ಇನ್ನಿತರ ರಾಣಿಯರ ಹೆಸರುಗಳು ಹಾಗೂ ಅವರ ರಾಜ್ಯಗಳ ಬಗ್ಗೆ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಹುಣಸೂರಿನ ಶಾಸನದಲ್ಲಿ (೧೧೨೦) ತನ್ನ ರಾಣಿಯಾದ ಮಲಯಮತಿ ದೇವಿಯ ಸೌಂದರ್ಯವನ್ನು ಕುರಿತು ಪ್ರಸ್ತಾವನೆ ಮಾಡಲಾಗಿದೆ. ಈ ರೀತಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ರಚಿಸಿದರು. ಹಲವು ಶಾಸನಗಳು ಜಿಲ್ಲೆಯಲ್ಲಿ ಲಭ್ಯವಾಗಿರುವುದರಿಂದ ಅವುಗಳಲ್ಲಿ ಆತನ ಆಡಳಿತ ವ್ಯವಸ್ಥೆ, ರಾಜಕೀಯ ಸಂಬಂಧ, ಧಾರ್ಮಿಕ ನೀತಿ ಹಾಗೂ ಇತರ ಕೊಡುಗೆಗಳನ್ನು ಕುರಿತು ಮಾಹಿತಿ ನೀಡುತ್ತವೆ. ಯಾದಗಿರ ಕೋಟೆಯಲ್ಲಿ ಜೈನ ವಿಗ್ರಹಗಳ ಸಮೀಪದಲ್ಲಿ ಇರುವ ಒಂದು ಬಂಡೆಗಲ್ಲು ಶಾಸನದಲ್ಲಿ ೬ನೇಯ ವಿಕ್ರಮಾದಿತ್ಯನ ಸೈನಿಕ ಸಾಧನೆಗಳನ್ನು ಮತ್ತು ಧಾರ್ಮಿಕ ನೀತಿಯನ್ನು ಕುರಿತು ವಿವರಿಸಲಾಗಿದೆ.

ಕ್ರಿ.ಶ.೧೧೨೭ರಿಂದ ೧೧೮೯ರ ವರೆಗೆ ಮೂರನೆಯ ಸೋಮೇಶ್ವರ ಎರಡನೆಯ ಜಗದೇಕಮಲ್ಲ, ಮೂರನೆಯ ತೈಲಪ ಮುಂತಾದ ಅರಸರು ಆಳ್ವಿಕೆ ಮಾಡಿದರು. ಮೂರನೆಯ ತೈಲಪನ ದುರ್ಬಲತೆಯ

ಲಾಭ ಪಡೆದ ಕಲಚೂರಿ ಮನೆತನದ ಬಿಜ್ಜಳನು ಆತನನ್ನು ಸದೆ ಬಡಿದು ತಮ್ಮ ಆಳ್ವಿಕೆಯನ್ನು ಆರಂಭಿಸಿದನು. ಹೀಗಾಗಿ ಕಲ್ಯಾಣಿ ಚಾಲುಕ್ಯರ ಆಳ್ವಿಕೆಯು ಕ್ರಿ.ಶ.೧೧೮೯ರಲ್ಲಿ ಕೊನೆಗೊಂಡಿತು.

೨.೧.೬. ಹೈಹಯರು

ಕಲ್ಯಾಣಿ ಚಾಲುಕ್ಯರ ನಂತರ ಅವರ ಅನೇಕ ಸಾಮಂತರು ಸ್ವತಂತ್ರರಾಗಿ ಅಧಿಕಾರ ಪ್ರಾರಂಭಿಸಿದರು. ಅವರಲ್ಲಿ ಮಹಾಮಂಡಲೇಶ್ವರರಾದ ಅರಳು ಮುನ್ನೂರಿನ ಹೈಹಯರು ಒಬ್ಬರಾಗಿದ್ದಾರೆ.[೬೫] ಇವರು ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಅಲ್ಲೂರು (ಬಿ) ತಮ್ಮ ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಕ್ರಿ.ಶ.೧೦೫೦ ರಿಂದ ೧೨೧೨ರವರೆ ಆಳ್ವಿಕೆ ಮಾಡಿದರು. ಕ್ರಿ.ಶ.೧೧ನೆಯ ಶತಮಾನದಲ್ಲಿ ಹೈಹಯರ ಉಚ್ಛ್ರಾಯ ಸ್ಥಿತಿಯಲ್ಲಿದ್ದು,[೬೬] ತಮ್ಮ ಸಾಮ್ರಾಜ್ಯವನ್ನು ಹಲವು ಪ್ರದೇಶಗಳಿಗೆ ವಿಸ್ತರಿಸಿದರು. (ಅರಳು-೩೦೦)

ಹೈಹಯ ಮನೆತನದ ಮೂಲ ಸ್ಥಾನ **'ಮಹಿಷ್ಮತಿಪುರ'** ಎಂದು ಶಾಸನಗಳಲ್ಲಿ ಉಲ್ಲೇಖವಾಗಿದೆ. ಕಾಲಕ್ರಮೇಣ ಇವರು ಅಲ್ಲಿಂದ ಕುಂತಳದೇಶವನ್ನು ಪ್ರವೇಶಿಸಿ, ಪ್ರಸ್ತುತ ಸೇಡಂ ಪ್ರದೇಶದಲ್ಲಿ ಬಂದು ನೆಲೆಸಿದರು. ಸೇಡಂ, ಅಡಕಿ, ಹಂದರ್ಕಿ ಮುಂತಾದ ಸ್ಥಳಗಳಲ್ಲಿ ದೊರೆತ ಶಾಸನಗಳಲ್ಲಿ ಇವರನ್ನು **'ಮಹಿಷ್ಮತಿಪುರಾಧೀಶರರೆಂದು'** ಎಂದು ಕರೆಯಲಾಗಿದೆ. ಅಡಕಿ ಶಾಸನಗಳಲ್ಲಿ ಮಹಿಷ್ಮತಿಪುರವು ಗಂಗಾನದಿ ಹಾಗೂ ಹಾರಿಮಾತ್ರ ಪರ್ವತಗಳ ಮಧ್ಯದಲ್ಲಿ ಇದೆ ಎಂದು ಉಲ್ಲೇಖಿಸಲಾಗಿದೆ. ಹೈಹಯರ ಮನೆತನಕ್ಕೆ ಸಂಬಂಧಿಸಿದಂತೆ ಇದುವರೆಗೆ ಗುಲಬರ್ಗಾ ಜಿಲ್ಲೆಯಲ್ಲಿ ೨೦ ಕ್ಕಿಂತಲು ಹೆಚ್ಚಿನ ಶಾಸನಗಳು ಲಭ್ಯವಾಗಿವೆ. ಅದರಲ್ಲಿ ಅವರ ರಾಜ್ಯಧಾನಿಯ ಸಮೀಪದ ಸೇಡಂನಲ್ಲಿ ೭ ಶಾಸನಗಳು ಲಭ್ಯವಾಗಿವೆ. ಈ ಶಾಸನಗಳಲ್ಲಿ ಇವರ ವಂಶಾವಳಿ ಕುರಿತು ಹೇಳಲಾಗಿದೆ.[೬೭]

ಹೈಹಯರ ಮನೆತನ ಅರಸರು ಕಲ್ಯಾಣಿ ಚಾಲುಕ್ಯರ ಕಲಚೂರಿಯರ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಬಂದರು. ಇವರ ಕಾಲದಲ್ಲಿ ಸೇಡಂ ಪಟ್ಟಣವು ಒಂದು ಶ್ರೇಷ್ಠ ಅಗ್ರಹಾರವಾಗಿತ್ತು. ಇದರ ಬೆಳವಣಿಗೆಗಾಗಿ ಮತ್ತು ರಕ್ಷಣೆಗಾಗಿ ವಿಶೇಷ ಗಮನ ಹರಿಸಿದರು. ಧರ್ಮಪಾಲಕರಾದ ಇವರು ಹಂದರ್ಕಿಯಲ್ಲಿ ಲೋಕೇಶ್ವರ, ಆನೇಶ್ವರ ದೇವಾಲಯಗಳನ್ನು ನಿರ್ಮಿಸಿದರು. ಅದೇ ರೀತಿ ಇಂಗಳಕಿ, ಕೊಂಚರು, ಸೇಡಂ, ಅಲ್ಲೂರು, ಅಡಕಿ,[೬೮] ಮುಧೋಳ, ಕೊಡ್ಲಾ, ಶಿಲಾರಕೋಟ[೬೯] ಮತ್ತು ಕೋಟಗಾಂ ಮುಂತಾದ ಕಡೆಗಳಲ್ಲಿ ಕೋಟೆಗಳನ್ನು ನಿರ್ಮಿಸಿ, ತಮ್ಮ ಆಡಳಿತವನ್ನು ಭದ್ರಪಡಿಸಿಕೊಂಡರು. ಸೇಡಂ ಕೋಟೆಯ ಉತ್ತರ ದಿಕ್ಕಿನ ದ್ವಾರವನ್ನು ಹೈಹಯರ ಸೈನಾಪತಿ ಚಂಡಿರಾಜನು ನಿರ್ಮಿಸಿದನೆಂದು ಅಲ್ಲಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೭೦]

[illegible]

[illegible]

[illegible]

[illegible]

[illegible]

೨.೧.೭.ಕಲ್ಯಾಣದ ಕಲಚೂರಿಗಳು (ಕಲಚೂರ್ಯರು)

ಕ್ರಿ.ಶ.೧೨ನೇ ಶತಮಾನದಲ್ಲಿ ಕಲ್ಯಾಣಿ ಚಾಲುಕ್ಯರ ಅವನತಿಯ ನಂತರ ಕಲ್ಯಾಣದಲ್ಲಿ ಕಲಚೂರಿಗಳು ಏಳಿಗೆ ಹೊಂದಿದರು.[೨೧] ಇವರು ಸ್ವತಂತ್ರವಾಗಿ ಆಳಿರುವ ಅವಧಿಯ ಅತ್ಯಲ್ಪವಾಗಿದ್ದರೂ ಇವರ ಕೊಡುಗೆ ಅಪಾರವಾಗಿದೆ. ಸಾಮಾಜಿಕ, ಧಾರ್ಮಿಕ ರಂಗದಲ್ಲಿ ಕಂಡುಬಂದ ಕ್ರಾಂತಿಯನ್ನು ಎದುರಿಸುವ ಶಕ್ತಿ ಇವರಲ್ಲಿ ಇರಲಿಲ್ಲ. ಆದ್ದರಿಂದ ಕೇವಲ ೨೫ ವರ್ಷಗಳ ಆಳ್ವಿಕೆಯಲ್ಲಿ ಇವರು ಅಂತ್ಯಗೊಂಡರು. ಕಲಚೂರಿಗಳ ಚಟುವಟಿಕೆಗಳನ್ನು ತಿಳಿದುಕೊಳ್ಳಲು ನಮಗೆ ಗುಲಬರ್ಗಾ ಜಿಲ್ಲೆಯ ಹಲವು ಭಾಗಗಳಲ್ಲಿ ದೊರೆತ ಅವರ ಶಾಸನಗಳು ಆಧಾರಗಳಾಗಿವೆ.

ಕಲಚೂರಿಯರು ತಮ್ಮ ಶಾಸನಗಳಲ್ಲಿ ಕೇಟಚೂರಿ, ಕಲಡಚೂರಿ, ಕಲಿಚೂರಿ ಎಂಬ ಪದಗಳಿಂದ ಗುರುತಿಸಿಕೊಂಡಿದ್ದಾರೆ. ಇವರ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಬಂದಳಿಕೆ ಶಾಸನದಲ್ಲಿ (೧೧೭೪) ಕಲಚೂರಿ ಎಂಬ ಪದದಿಂದ ಈ ಮನೆತನವನ್ನು ಕರ್ನಾಟಕದಲ್ಲಿ ಗುರುತಿಸಲಾಗಿದೆ. ಈ ವಂಶದ ಮೂಲ ಪುರಷರ ಬಗ್ಗೆ ಸ್ಪಷ್ಟ ಮಾಹಿತಿಗಳಿಲ್ಲ. ತಮ್ಮ ಶಾಸನಗಳಲ್ಲಿ ತಮ್ಮನ್ನು ಕಾಲಂಜರಾ ಪುರವರಾಧೀಶ್ವರರು ಎಂದು ಕರೆದುಕೊಂಡಿದ್ದಾರೆ,[೨೨] ಇದರಿಂದ ಅವರ ಮೂಲ ಮಧ್ಯಭಾರತವೆಂದು ಹೇಳಬಹುದಾಗಿದೆ. ಆದರೆ ಕಲ್ಯಾಣಿ ಚಾಲುಕ್ಯರ ಮಾಂಡಳಿಕರು ಮತ್ತು ಸಂಬಂಧಿಗಳಾದ ಇವರು ಕ್ರಿ.ಶ.೧೧೧೬ರಲ್ಲಿ ರಾಜಕೀಯದಲ್ಲಿ ಪ್ರಬಲಸ್ಥಾನ ಹೊಂದಿದ್ದರು. ಈ ಮನೆತನದ ಅತ್ಯಂತ ಪ್ರಮುಖ ಅರಸರೆಂದರೆ, ಎರಡನೆಯ ಬಿಜ್ಜಳ, ಸೋಲ್ಲಾಪೂರದಲ್ಲಿ ದೊರೆತ ಶಾಸನಗಳು ಬಿಜ್ಜಳನ ಸಹೋದರರ, ಉತ್ತರಾಧಿಕಾರಿಗಳ ಬಗ್ಗೆ ವಿವರಿಸುತ್ತದೆ. ಈ ಶಾಸನಗಳಲ್ಲಿ ಅವರು ತಮ್ಮನ್ನು ಮಹಾಮಾಂಡಲೇಶ್ವರರೆಂದು ಕರೆದುಕೊಂಡಿದ್ದಾರೆ.[೨೩] ಎರಡನೆಯ ಬಿಜ್ಜಳನು ಕ್ರಿ.ಶ.೧೧೫೬ರಲ್ಲಿ ತರಿಕಾಡನಾಡು, ಕರಾಡು ೪೦೦೦, ತರ್ದವಾಡಿ-೧೦೦೦ ಗಳ ಮಾಂಡಳಿಕರಾಗಿ ಕ್ರಿ.ಶ.೧೧೫೭ರಲ್ಲಿ ಸ್ವತಂತ್ರನಾದನು. ಈತನಿಗೆ ಮಹಾರಾಜಾಧಿರಾಜ ಕಾಲಂಜಪುರವರಾಧೀಶ್ವರ ಸುವರ್ಣವೃಷಭಧ್ವಜ ಎನ್ನುವ ಮುಂತಾದ ಬಿರುದುಗಳಿದ್ದವು.[೨೪]

ಎರಡನೆಯ ಬಿಜ್ಜಳನು (೧೧೫೬ ರಿಂದ ೧೧೬೮)ರ ವರೆಗೆ ಆಳಿದನು. ಹಲವು ಸಾಮಂತರ ಸಹಾಯದೊಂದಿಗೆ ಬಿಜ್ಜಳನು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಚಾಲುಕ್ಯ ಕುಟುಂಬದ ಹಲವರನ್ನು ಕೊಲೆ ಮಾಡುವುದರ ಮೂಲಕ ಕಲಚೂರಿ ಅರಸರು ಚಾಲುಕ್ಯ ಅರಸರ ಎಲ್ಲಾ ಪ್ರದೇಶಗಳನ್ನು ಹಿಡಿದುಕೊಂಡರು. ಬಿಜ್ಜಳನು ತನ್ನ ನಿರಂತರ ದಂಡ ಯಾತ್ರೆಗಳಲ್ಲಿ ಹೊಯ್ಸಳ ನರಸಿಂಗ, ಉಚ್ಚಂಗಿಯ ವಿಜಯ ಪಾಂಡ್ಯ, ಸೇವುಣರು, ಚೋಳರು, ಆಂಧ್ರದ ಜೋಡರು, ಕಳಿಂಗದ ಗಂಗ ರಾಜನನ್ನು, ಗುಜರಾತಿನ ಕುಮಾರ ಚಾಲುಕ್ಯಪಾಲರನ್ನು ಸೋಲಿಸಿದನು. ಕ್ರಿ.ಶ.೧೧೪೨ರ ಶಾಸನದಲ್ಲಿ ಬಿಜ್ಜಳನನ್ನು **'ಕೋಣೆಪಾಲ'** ಎಂದು ಕರೆಯಲಾಗಿದೆ.[೨೫]

[illegible]

ಬಿಜ್ಜಳ ಮತ್ತು ಬಸವಣ್ಣನವರು ಸಮಕಾಲೀನರು. ಅರಸನು ಬಸವಣ್ಣನವರ ಸಹೋದರಿ ಪದ್ಮಾವತಿಯನ್ನು ವಿವಾಹವಾದ ನಂತರ ಆಡಳಿತ ಎಲ್ಲಾ ಅಧಿಕಾರಗಳನ್ನು ಬಸವಣ್ಣನವರಿಗೆ ವಹಿಸಿಕೊಟ್ಟನು.[೭೬] ಬಸವಣ್ಣನವರ ನೇತೃತ್ವದಲ್ಲಿ ವೀರಶೈವಜಾಗೃತಿಕಲ್ಯಾಣ ಆಂದೋಲನ ಆರಂಭವಾಯಿತು. ಇದರಲ್ಲಿ ಕಾಯಕದ ಮಹತ್ವವನ್ನು ಕುರಿತು ವಿವರಿಸಲಾಗಿದೆ. ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸಿ, ಅಂತರಜಾತಿ ವಿವಾಹ ಏರ್ಪಡಿಸಿದರು.[೭೭] ಇದರಿಂದಾಗಿ ಕಲ್ಯಾಣದ ರಾಜಕೀಯದಲ್ಲಿ ಗೊಂದಲ ಉಂಟಾಯಿತು. ಈ ಕೋಲಾಹಲ ಕೊನೆಗೆ ಬಿಜ್ಜಳನನ್ನು ಬಲಿ ತೆಗೆದುಕೊಂಡಿತು.[೭೮]

ಬಿಜ್ಜಳನ ನಂತರ ೧೧೬೭ರಲ್ಲಿ ಆತನ ಹಿರಿಯ ಮಗ ಸೋವೀದೇವನು ಅಧಿಕಾರಕ್ಕೆ ಬಂದನು. ಇತನ ಕಾಲದಲ್ಲಿ ರಾಜಕೀಯ ಕ್ಷೋಭೆ ಮುಂದುವರೆಯಿತು. ಇತನ ಆಳ್ವಿಕೆಯ ಉದ್ದಕ್ಕೂ, ಆಂತರಿಕ ಕಲಹ, ಒಳಸಂಚು, ಬಂಡಾಯಗಳಿಂದ ತುಂಬಿಕೊಂಡತ್ತು. ಅಲ್ಲದೆ ಸಹೋದರ ಕರ್ಣನು ಅಧಿಕಾರಕ್ಕಾಗಿ ಯತ್ನಿಸಿದ. ಆದ್ದರಿಂದ ರಾಜಧಾನಿಯನ್ನು ಕಲ್ಯಾಣದಿಂದ ಮಂಗಲಿವೇಡ, ಮೊದೆಗನೂರು, ಸೆಲೆಯಹಳ್ಳಿ ಮತ್ತೆ ಮುಂಗಲಿ ವೇಡ ಗಳಿಗೆ ಸ್ಥಳಾಂತರಿಸಿದ. ಈ ಕಾಲದಲ್ಲಿ ಕಲ್ಯಾಣದ ಕಲಚೂರಿಯರ ಮನೆತನ ಒಡೆದು ಉಪಮನೆತನಗಳಾದವು. ನಂತರ ಅಧಿಕಾರಕ್ಕೆ ಬಂದ ಸಂಕಮನು ಹಲವು ದಂಡನಾಯಕರ ಬೆಂಬಲದೊಂದಿಗೆ ರಾಜ್ಯವಿಸ್ತಾರ ಕಾರ್ಯದಲ್ಲಿ ತೊಡಗಿದ.[೭೯] ಕ್ರಿ.ಶ.೧೧೮೩ರಲ್ಲಿ ದಂಡನಾಯಕ ಬರ್ಮ ಅಥವಾ ಬರ್ಮರಸರಿಂದ ಅಧಿಕಾರವನ್ನೆಲ್ಲ ಕಲ್ಯಾಣಿಚಾಲುಕ್ಯವಂಶದ ೪ನೇಯ ಸೋಮೇಶ್ವರನು ವಶಪಡಿಸಿಕೊಂಡನು. ಹೀಗೆ ಕಲ್ಯಾಣಿಯ ಚಾಲುಕ್ಯರ ೨೩ ವರ್ಷದ ಆಳ್ವಿಕೆಯು ಅಂತ್ಯಗೊಂಡಿತು. ಕ್ರಿ.ಶ. ೧೧೮೫ರಿಂದ ೧೧೯೩ರ ವರೆಗೆ ಕಲಚೂರಿಯರ ಆಳ್ವಿಕೆ ಮುಂದುವರೆದಿರುವುದು ಕೆಲವು ಶಾಸನಗಳಲ್ಲಿ ಕಂಡು ಬರುತ್ತದೆ. ಆದರೆ ಅವರೆಲ್ಲರೂ ರಾಜ್ಯವಿಲ್ಲದ ರಾಜರುಗಳಾಗಿ ಆಳ್ವಿಕೆ ಮಾಡಿರಬಹುದು.[೮೦]

ಕಲಚೂರಿಯ ಆಳ್ವಿಕೆಗೆ ಸಂಬಂಧಿಸಿದಂತೆ ಜಿಲ್ಲೆಯ ಹಲವು ಭಾಗಗಳಲ್ಲಿ ಶಾಸನಗಳು ಲಭ್ಯವಿವೆ. ಇವುಗಳಲ್ಲಿ ಅವರು ನಿರ್ಮಿಸಿರುವ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಾದ ದೇವಾಲಯಗಳು, ನೀರಿನ ಸಂಗ್ರಹ, ಅರಮನೆ ಮುಂತಾದವುಗಳ ವಿವರವಿದೆ. ಸೇಡಂ ತಾಲೂಕಿನ ಅಡಕಿಯಲ್ಲಿ ಸೋವಿದೇನು ಚನ್ನಪಾರ್ಶ್ವನಾಥನ ದೇವಾಲಯ ನಿರ್ಮಿಸಿ ಅದಕ್ಕೆ ದತ್ತಿ ನೀಡಿರುವ ವಿಷಯವಿದೆ. ಅದೇ ರೀತಿ ಅಫಜಲಪುರದ ಅತ್ತನೂರು, ಚಿನಮಳ್ಳಿಗಳ ಶಾಸನಗಳಲ್ಲಿ ದೇವಾಲಯಕ್ಕೆ ದತ್ತಿ ನೀಡಿರುವ ಉಲ್ಲೇಖಗಳಿವೆ.

ಸುರಪುರ ತಾಲೂಕಿನ ಚಿಕ್ಕಮುದನೂರನ ಶಾಸನಗಳಲ್ಲಿ ಸೋವಿದೇವರಸರ ದಂಡನಾಯಕ ಬರ್ಮದೇವರಸನು ಲಕ್ಷ್ಮಣೇಶ್ವರ ದೇವಸ್ಥಾನದ ನಿರ್ಮಾಣಕ್ಕೆ ದಾನದತ್ತಿ ನೀಡಿರುವ ವಿಷಯವನ್ನು ಉಲ್ಲೇಖಿಸಲಾಗಿದೆ. ಚಿತ್ತಾಪೂರದ ಕಾಳಗಿಯ ಶಾಸನದಲ್ಲಿ ದಂಡನಾಯಕ ಮಾದವಯ್ಯನ ಆಡಳಿತವನ್ನು ಕುರಿತು ವಿವರಿಸುತ್ತದೆ,[೮೧] ಅಲ್ಲದೆ ಕಾಳಗೆಯನ್ನು ರಾಜ್ಯಧಾನಿಯೆಂದು ಉಲ್ಲೇಖಿಸಲಾಗಿದೆ.

ಮಳಖೇಡ ಶಾಸನದಲ್ಲಿ ಸಂಕದೇವನು ಹೈಹಯ ವಂಶದ ವೀರ ಬಿಜ್ಜರಸನು ಹರಿಯ ದಂಡನಾಯಕ ಹಾಗೂ ಇತರ ಮಹಾಜನರ ಸಮ್ಮುಖದಲ್ಲಿ ಮಳಖೇಡ ಅಗ್ರಹಾರದ ಅಭಿವೃದ್ಧಿಗೆ ಹಲವು ಗ್ರಾಮಗಳನ್ನು ದತ್ತಿ ನೀಡಿದನು.[೮೨] ಈ ರೀತಿ ಹಲವು ಶಾಸನಗಳು ಕಲಚೂರಿಗಳ ಆಳ್ವಿಕೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸುತ್ತದೆ.

೨.೧.೮. ದೇವಗಿರಿಯ ಸೇವುಣರು:

ಕಲ್ಯಾಣಿಯ ಕಲಚೂರಿಯವರು ಅವನತಿ ಹೊಂದಿದ ನಂತರ ದೇವಗಿರಿ ಯಾದವರ ಆಳ್ವಿಕೆ ಆರಂಭವಾಯಿತು. ೧೨ನೆಯ ಶತಮಾನದ ಉತ್ತಾರಾರ್ಧದಲ್ಲಿ ಏಳಿಗೆ ಹೊಂದಿದ ಇವರು ಎರಡು ಶತಮಾನಗಳ ಹಿಂದೆ ಕರ್ನಾಟಕದ ರಾಜಕೀಯ ರಂಗದಲ್ಲಿ ಕಾಣಿಸಿಕೊಂಡಿದ್ದರು. ಚಾಲುಕ್ಯರು, ಹೊಯ್ಸಳರು ಮತ್ತು ಸೇವುಣರು ಪುರಸ್ಪರ ಪ್ರತಿಸ್ಪರ್ಧಿಗಳಾದರು. ಇವರ ಮೂಲದ ಬಗ್ಗೆ ಹಲವು ಪೌರಾಣಿಕ ಕತೆಗಳಿವೆ. ಇವುಗಳಿಗೂ ಮತ್ತು ಶಾಸನಗಳಿಗೆ ಹೊಲಿಕೆ ಇರುವುದಿಲ್ಲ. **'ಸೇವುಣ'** ಎಂಬ ಶಾಸನಗಳಲ್ಲಿ **'ಸೇವುಣ'** ಎಂಬ ಪದದ ವಿಕೃತ ರೂಪ ಸದ್ಗುಣವಾಗಿದೆ. ಈ ಮನೆತನದ ಮೊದಲನೆಯ ಅರಸ ಸೇವುಣಚಂದ್ರ.

ಸೇವುಣಚಂದ್ರನಿಂದ ಈ ಮನೆತನಕ್ಕೆ ಸೇವುಣ ಎಂಬ ಹೆಸರು ಬಂದಿದೆ. ಆತನು ಆಳಿರುವ ರಾಜ್ಯಕ್ಕೆ ಸೇವುಣರಾಜ್ಯವೆಂದು ಕರೆಯಲಾಗಿದೆ. ಇವರ ರಾಜ್ಯಧಾನಿ ಮಹಾರಾಷ್ಟ್ರದ ನಾಸಿಕ ಜಿಲ್ಲೆಯ ಸಿನ್ನಾರ್, ರಾಷ್ಟ್ರಕೂಟರ ಸಮಕಾಲೀನವರಾದ ಈ ಮನೆತನದ ಅರಸರು ಮೊದಲು ಅವರ ಮಾಂಡಲೀಕರಾಗಿದ್ದರು. ಇವರು ಅಮೋಘವರ್ಷ ನೃಪತುಂಗನ ಸಮಕಾಲೀನ ಅರಸನಾಗಿದನೆಂದು ತಿಳಿದುಬರುತ್ತದೆ. ಇತನ ನಂತರ ದಡಿಯಪ್ಪನು, ಭಿಲ್ಲಮನೂ, ರಾಜುಗಿಯು ಕ್ರಮವಾಗಿ ಆಳಿದರು. ವಡ್ಡಿಗನು ಈ ಮನೆತನದ ಸ್ವತಂತ್ರ ಅರಸ, ಮೂರನೆ ಕೃಷ್ಣನ (೯೩೬-೯೬೭) ಸಮಕಾಲೀನ ಅರಸ. ಸಾಮಂತರಾದ ಸೇವುಣರು ವೈವಾಹಿಕ ಸಂಬಂಧದೊಂದಿಗೆ ತಮ್ಮ ಸ್ನಾನ ಭದ್ರಪಡಿಸಿಕೊಂಡರು. ಎರಡನೆಯ ಬಿಲ್ಲಮನು ಈ ಮನೆತನದ ಪ್ರಮುಖ ಅರಸ. ರಾಷ್ಟ್ರಕೂಟರ ಅವನತಿಯ ಲಾಭ ಪಡೆದು ತನ್ನ ಸ್ಥಾನದ ಭದ್ರತೆಗೆ ಕ್ರಮಕೈಗೊಂಡನು. ಬಿಲ್ಲಮನು ಶಿಲಹಾರರೊಂದಿಗೆ ಒಳ್ಳೆಯ ಸಂಬಂಧ ಮುಂದುವರೆಸಿದ.[೮೩] ಚಾಲುಕ್ಯರೊಂದಿಗೆ ಹಲವು ಯುದ್ಧಗಳು ನಡೆದವು.[೮೪] ಧಾರವಾಡ ಜಿಲ್ಲೆಯ ಚಿಕ್ಕೂರ ಶಾಸನದಲ್ಲಿ ಈ ಸಾಧನೆಯ ವಿವರಣೆ ಇದೆ.[೮೫] ಬಿಲ್ಲಮನು ಈ ಯುದ್ದದಲ್ಲಿ ಪಾರಮಾರ ಅರಸ ಮುಂಜನನ್ನು ಸಂಹರಿಸಿದ ಕೀರ್ತಿ ಇವನಿಗೆ ಸಲ್ಲುತ್ತದೆ ಎಂದು ಹೇಳಲಾಗಿದೆ. ಇತನಿಗೆ ಸೆಲ್ಲವೆಡಂಗ ಎಂಬ ಬಿರುದು ಇತ್ತು.[೮೬] ಬಿಲ್ಲಮನು ರಾಷ್ಟ್ರಕೂಟ ಮನೆತನದ ಮಹಿಳೆಯಾದ ಲಚ್ಚಿಯವ್ವಳೊಂದಿಗೆ ವಿವಾಹವಾದನು.[೮೭] ಇತನ ನಂತರ ವೆಸುಗಿ (೧೦೦೫-೧೦೧೫) ಮೂರನೆ ಬಿಲ್ಲಮ (೧೦೧೫-೫೫)

[illegible]

[illegible]

[illegible]

ಇತನ ಆಳ್ವಿಕೆಯ ಕಾಲದಲ್ಲಿ ರಾಷ್ಟ್ರಕೂಟರ ಮನೆತನ ಸ್ವಲ್ಪ ವಿಸ್ತಾರಗೊಂಡಿತು. ಐದನೆಯ ಬಿಲ್ಲಮನ ಆಗಮನದವರೆಗೆ ಸೇವುಣರ ರಾಜಕೀಯ ಸ್ಥಿತಿಯು ಅಸ್ತಿರಗೊಂಡಿತು.

ಐದನೆಯ ಬಿಲ್ಲಮ (೧೧೭೩-೧೧೯೨) ದೇವಗಿರಿಯ ಸೇವುಣ ಮನೆತನದಲ್ಲಿ ಅತ್ಯಂತ ಪ್ರಬಲ ದೊರೆ ಆದ್ದರಿಂದ ಇತನನ್ನೆ ಈ ಮನೆತನದ ನಿಜವಾದ ಸ್ಥಾಪಕನೆಂದು ಕರೆಯಲಾಗಿದೆ. ಸೇನಾಪತಿಯ ಸಹಾಯದೊಂದಿಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಬಿಜ್ಜಳನ ಆಳ್ವಿಕೆ ಅಂತ್ಯಗೊಂಡನಂತರ ಇತನು ಚಾಲುಕ್ಯರ ಚಕ್ರಾಧಿಪತ್ಯವನ್ನು ಮನ್ನಿಸದೆ, ನಾಲ್ಕನೆಯ ಸೋಮೇಶ್ವರನ ದಾಳಿಗಳನ್ನು ತಡೆಹಿಡಿದನು. ೧೧೮೬-೮೭ರಲ್ಲಿ ಸಾರ್ವಭೌಮನೆಂದು ಸಾರಿಕೊಂಡ ಇತನು ತನ್ನ ಬಲಾಢ್ಯ ಸೈನ್ಯದೊಂದಿಗೆ ದಂಡಯಾತ್ರೆಗಳನ್ನು ಆರಂಭಿಸಿ, ಮಾಳವಾದ ಪಾರಮಾರ ಅರಸ ವಿಂಧ್ಯವರ್ಮನನ್ನು ಸದೆ ಬಡಿದ, ಗುಜರಾತ ಮತ್ತು ಮಾರವಾಡದ ಮೇಲೆ ದಾಳಿ ಮಾಡಿ ಚಾಲುಕ್ಯರು ಮತ್ತೆ ಚಹಮಾನರನ್ನು ಸದೆ ಬಡಿದನು.[೮೮] ಕಲ್ಯಾಣಿ ಚಾಲುಕ್ಯರ ಅವನತಿಯನ್ನು ಕಂಡು ಅವರ ರಾಜಧಾನಿಯನ್ನೆ ಆಕ್ರಮಿಸಲು ಗುಲಬರ್ಗಾ ಜಿಲ್ಲೆಯ ಕುಪ್ಪದಲ್ಲಿ ಎರಡು ಸೈನ್ಯಕ್ಕೂ ಹೋರಾಟ ಸಂಭವಿಸಿತು. ಈ ಯುದ್ಧ ಸೇವುಣರಿಗೆ ಅಪಜಯ ತಂದುಕೊಟ್ಟಿತು. ಇದರ ಲಾಭ ಪಡೆದ ಹೊಯ್ಸಳರು ಕಲ್ಯಾಣ ಹಿಡಿದಕೊಂಡರು.[೮೯]

ಬಿಲ್ಲಣನು ಕಲ್ಯಾಣಕ್ಕೆ ಆಗಮಿಸಿ ಹೊಯ್ಸಳರಿಂದ ಕಲ್ಯಾಣ ವಶಪಡಿಸಿಕೊಂಡನೆಂದು ಹೇಮಾದ್ರಿಯಿಂದ ತಿಳಿದು ಬರುತ್ತಾರೆ. ಮುಂದಿನ ಯುದ್ಧಗಳಲ್ಲಿ ಹೊಯ್ಸಳರನ್ನು ಹಲವು ಕಡೆ ಸೋಲಿಸಿದ. ಕ್ರಿ.ಶ. ೧೧೯೧ರಲ್ಲಿ IIIನೇ ಬಲ್ಲಾಳನ ಕಾಲದಲ್ಲಿ ನಡೆದ ಯುದ್ಧಗಳಲ್ಲಿ ಬಿಲ್ಲಮನು ಸೋತನು.[೯೦] ಯುದ್ಧದ ನಂತರ ರಾಜಧಾನಿಗೆ ಆಗಮಿಸಿ ಕ್ರಿ.ಶ ೧೧೯೨ರಲ್ಲಿ ನಿಧನ ಹೊಂದಿದೆ. ಈತನ ನಂತರ ಅವನ ಮಗ ಜೈತುಗಿಯು ಅಧಿಕಾರಕ್ಕೆ ಬಂದನು (೧೧೯೨-೧೧೯೯). ಇತನು ಹೊಯ್ಸಳರೊಂದಿಗೆ ಯುದ್ಧ ಮಾಡದೇ ಕಾಕತೀಯರೊಂದಿಗೆ ಯುದ್ಧ ಮುಂದುವರೆಸಿದ ನಂತರ ಮಾಳವದ ಪಾರಮಾರರ ಮೇಲೆ ದಾಳಿ ಮಾಡಿ ಕೆಲವು ಬಿರುದುಗಳನ್ನು ಪಡೆದನು. ಇತನ ನಂತರ ಸಿಂಘಣನು ಅಧಿಕಾರಕ್ಕೆ ಬಂದು (೧೧೯೯).[೯೧]

ಎರಡನೆಯ ಸಿಂಘಣನು (೧೧೯೯-೧೨೪೭) ಅಧಿಕಾರಕ್ಕೆ ಬಂದನು. ಇತನ ಕಾಲದಲ್ಲಿ ಸೇವಣ ರಾಜ್ಯವು ಅಪಾರ ಪ್ರಗತಿ ಕಂಡಿತು. ಇತನಿಗೆ ಸಿಂಘಣ, ಸಿಂಹಣ, ಸಿಂಗಣ್ಣ ಎಂಬ ಹೆಸರುಗಳಿವೆ. ತನ್ನ ಪೂರ್ವಜರ ಮೇಲಿನ ಸೇಡು ತೀರಿಸಿಕೊಳ್ಳಲು IIIನೇ ಬಲ್ಲಾಳನ ಮೇಲೆ ದಾಳಿಗೈದ, ಮೊದಲು ಅವರ ಹಲವು ಸಾಮಂತರನ್ನು ಸದೆ ಬಡಿದು, ಅವರನ್ನು ತನ್ನ ಸಾಮಂತರನ್ನಾಗಿಸಿಕೊಂಡ, ಮುಂದಿನ ಯುದ್ಧದಲ್ಲಿ IIನೇ ಬಲ್ಲಾಳನನ್ನು ಸದೆ ಬಡಿದನು. ಇದರಿಂದ ಅವರ ಇತರ ಸಾಮಂತರಾದ ಸಿಂಧರು, ಮೊರಟರು, ಹೈಹಯರು, ಅಭೀರರು ಇವರ ಸಾಮಂತರಾದರು. ಬಲ್ಲಾಳನ ಮಗ ಇಮ್ಮಡಿ ನರಸಿಂಗನು ಸೇವಣರ ಮೇಲೆ ದಾಳಿ ಮಾಡಿ ವಿಫಲನಾದನು. ಕ್ರಿ.ಶ. ೧೨೩೯-೪೭ರ ವರೆಗೆ ಸಿಂಘಣನು ಹಲವು ಪ್ರಾಂತಗಳನ್ನು

ಹಿಡಿದುಕೊಂಡನು. ನಂತರ ಉತ್ತರದ ಮೇಲೆ ದಂಡಯಾತ್ರೆ ಆರಂಭಿಸಿ, ಮಾಳವ, ಚಹಮಾನ, ಚಾಲುಕ್ಯ ರಾಜ್ಯಗಳನ್ನು ವಶಪಡಿಸಿಕೊಂಡನು. ಆದರೆ ಈ ಉತ್ತರಭಾರತದ ಪ್ರದೇಶಗಳಿಂದ ಸಿಂಘಣನಿಗೆ ಯಾವುದೇ ಲಾಭವಾಗಲಿಲ್ಲ.

ಸಿಂಘಣನ ನಂತರ ಕೃಷ್ಣ (೧೨೪೭-೬೨) ಮಹಾದೇವ (೧೨೬೨-೭೧) ರಾಮಚಂದ್ರ (೧೨೭೧-೧೩೧೧) ನಿರಂತರವಾಗಿ ಆಳ್ವಿಕೆ ಮಾಡಿದರು. ಇವರ ಕಾಲದಲ್ಲಿ ಸೇವುಣರ ಮನೆತನವು ಅವನತಿ ಹೊಂದುತ್ತಾ ನಡೆಯಿತು. ೧೨೯೬ರಲ್ಲಿ ಅಲ್ಲಾವುದ್ದೀನ ಖಿಲ್ಜಿಯು ಸೇವುಣರ ರಾಜ್ಯದ ಮೇಲೆ ದಾಳಿ ಮಾಡಿದನು. ಆದರೆ ಸೇವುಣ ಅರಸ ರಾಮಚಂದ್ರನು ವೀರಾವೇಶದಿಂದ ಹೋರಾಡಿ ಸೋತನು. ಅಲ್ಲದೆ ಆತನ ಮಗ ಸಿಂಘಣನು ಹೀನಾಯವಾಗಿ ಸೋತನು. ಇದೆ ಕಾಲಕ್ಕೆ ಕಾಕತೀಯರು ಮತ್ತು ಹೊಯ್ಸಳರು ಸೇವುಣರ ಮೇಲೆ ದಾಳಿ ಆರಂಭಿಸಿ ಅವರನ್ನು ದುರ್ಬಲರನ್ನಾಗಿಸಿದರು. ಮಲ್ಲಿಕಾಪುರನ ನೇತೃತ್ವ ದಾಳಿಯಿಂದ ಈ ರಾಜ್ಯ ಮತ್ತಷ್ಟು ದುರ್ಬಲಗೊಂಡಿತು. ರಾಮಚಂದ್ರನನ್ನು ಯುದ್ಧದಲ್ಲಿ ಸೆರೆ ಹಿಡಿದು ದೆಹಲಿಗೆ ಕಳುಹಿಸಲಾಯಿತು. ಆರು ತಿಂಗಳ ನಂತರ ಆತನನ್ನು ತನ್ನ ಪ್ರತಿನಿಧಿಯಾಗಿ ದೇವಗಿರಿಗೆ ಕಳುಹಿಸಲಾಯಿತು. ಅಲ್ಲಾವುದ್ದೀನನು ಮುಂದಿನ ದಾಳಿಗಳಲ್ಲಿ ದಕ್ಷಿಣದ ಇತರ ರಾಜ್ಯಗಳನ್ನು ವಶಪಡಿಸಿಕೊಂಡನು. ಮೂರನೆಯ ಸಿಂಘಣನು ದೆಹಲಿಯ ಸುಲ್ತಾನರಿಂದ ಸ್ವತಂತ್ರನಾಗಲು ಯತ್ನಿಸಿ, ವಿಫಲನಾದನು. ಕ್ರಿ.ಶ.೧೩೩೬ರಲ್ಲಿ ಅಲ್ಲಾವುದ್ದೀನನ ಮರಣದ ನಂತರ ಮತ್ತೆ ಸೇವುಣ ಅರಸರು ಮತ್ತು ದಂಡ ನಾಯಕರು ಸ್ವತಂತ್ರರಾಗಲು ಯತ್ನಿಸಿದರು. ಆದರೆ ಮಹಮ್ಮದ-ಬಿನ್-ತುಘಲಕನ ಕಾಲದಲ್ಲಿ ದೇವಗಿರಿ ಅವರ ಆಳ್ವಿಕೆಗೆ ಒಳಪಟ್ಟಿತ್ತು.[೨]

ಗುಲಬರ್ಗಾ ಜಿಲ್ಲೆಯಲ್ಲಿ ಸೇವುಣರ ಕಾಲದ ಹಲವು ಶಾಸನಗಳು ದೊರೆತಿವೆ. ಶಹಾಪೂರ ತಾಲೂಕಿನ ಶಿರವಾಳದ ಶಾಸನದಲ್ಲಿ (೧೧೮೯) ದಲ್ಲಿ ಬಿಲ್ಲಮನು ತರ್ದವಾಡಿಯ ಶಿಲಾರರ ಮೇಲೆ ಆಕ್ರಮಣ ಮಾಡಿ ಅದನ್ನು ವಶಪಡಿಸಿಕೊಂಡ ಬಳಿಕ ಶ್ರೇಷ್ಠ ಸಿರಿವೊಳಲಿ (ಶಿರವಾಳ) ಸಿದ್ದನಾಥ ದೇವರಿಗೆ ದಾನ ನೀಡಿದ ವಿವರವನ್ನು ಒಳಗೊಂಡಿದೆ. ಇದು ಪ್ರಾಚೀನ ಕಾಲದಿಂದಲೂ ಶೈವ ಧರ್ಮದ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ.[೩]

ಚಿತ್ತಾಪೂರ ತಾಲೂಕಿನ ಇಂಗಳಗೆಯ ಶಾಸನವು (೧೨೦೯) ಸಿಂಘಣನ ಇಲ್ಲಿಯ ಪಂಚ ಪೀಠ ದೇವಸ್ಥಾನದ ಕುರಿತು ಉಲ್ಲೇಖಗಳಿವೆ. ಅದೆ ರೀತಿ ಹಗರಟಗೆಯ ಶಾಸನವು ಸಿಂಘಣನು (೧೨೩೧) ಹಲವು ದೇವಸ್ಥಾನಗಳಿಗೆ ನೀಡಿರುವ ಭೂದತ್ತಿ ಮತ್ತು ಅಲ್ಲಿಯ ವ್ಯಾಪಾರಸ್ಥರು ದೇವರಿಗೆ ಅರ್ಪಿಸಿರುವ ಧಾನದತ್ತಿಯನ್ನು ಕುರಿತು ವಿವರಿಸುತ್ತದೆ. ಸಗರನಾಡಿನಲ್ಲಿ ದೊರೆತ ಶಾಸನಗಳಲ್ಲಿ ಸಗರ-೩೦೦, ಸಗರ, ೫೦೦ ಎಂದು ಉಲ್ಲೇಖಿಸಲಾಗಿದೆ. ಇದರಲ್ಲಿ ಸಗರದ ಸಮೀಪದ ಆನೆದತ್ತಿ (ಅಂದೋಲ) ಯಲ್ಲಿ ಸಕಲ ಪ್ರಾಣಿಗಳ ಸಂರಕ್ಷಣೆಗಾಗಿ ನಾಗರಕೆರೆಯನ್ನು ನಿರ್ಮಿಸಿದರಂದು ಉಲ್ಲೇಖಿಸಲಾಗಿದೆ. ಅಫಜಲಪುರದ

ಚಿನ್ಮಳ್ಳಿಯ ಶಾಸನವು ರಾಮಚಂದ್ರದೇವನು (೧೨೯೨) ತನ್ನ ವಿಜಯದ ಪ್ರತೀಕವಾಗಿ ಚಿಲ್ಲಮೆತ್ರಿಯು ದಕ್ಷಿಣ ಕೈಲಾಸ ಎಂದು ಇಲ್ಲಿಯ ಮಲ್ಲಿಕಾರ್ಜುನನ ಆರಾಧ್ಯದೈವರಿಗೆ ಬೂ ದತ್ತಿ ನೀಡಿರುವ ವಿಷಯ ಈ ಶಾಸನದಲ್ಲಿದೆ. ದೇವಗಿರಿಯ ಯಾದವರ ಅವನತಿಯ ನಂತರ ಕರ್ನಾಟಕದ ರಾಜಕೀಯದಲ್ಲಿ ಮುಸ್ಲಿಂ ಆಗಮನ ಆರಂಭವಾಯಿತು. ಅದರಲ್ಲಿ ಗುಲಬರ್ಗಾ ನಗರವು ಮುಸ್ಲಿಂ ಆಳ್ವಿಕೆಯ ಪ್ರಮುಖ ಸ್ಥಳವಾಯಿತು.

೨.೨. ಮುಸ್ಲಿಂ ದಾಳಿಗಳು:

ದೆಹಲಿಯ ಸುಲ್ತಾನರ ಸಾಮ್ರಾಜ್ಯವು ೧೨೦೬ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಅದು ಪ್ರಾರಂಭದಲ್ಲಿ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು. ಮುಂದಿನ ಒಂದು ಶತಕದ ನಂತರ ಮಲ್ಲಿಕಾಪುರನ ನೇತೃತ್ವದ ದಾಳಿಗಳು ದಕ್ಷಿಣ ಭಾರತವನ್ನು ಪ್ರಮುಖವಾಗಿಟ್ಟುಕೊಂಡು ಮುಂದುವರೆದವು.[೯೪] ಆತನ ಉದ್ದೇಶ ದಕ್ಷಿಣ ಭಾರತದಲ್ಲಿ ಅಧಿಕಾರ ಸ್ಥಾಪನೆಯಾಗಿರಲಿಲ್ಲ. ಇಲ್ಲಿಯ ಅಪಾರ ಸಂಪತ್ತು ಲೂಟಿ ಮಾಡಲು ಕ್ರಿ.ಶ.೧೩೦೭ ರಿಂದ ೧೩೧೩ರವರೆಗೆ ದಾಳಿಗಳನ್ನು ಮಾಡಿದನು. ದೇವಗಿರಿಯ ರಾಮಚಂದ್ರದೇವನ ಮೇಲೆ ದಾಳಿ ಮಾಡಿ ಆತನಿಂದ ಕಪ್ಪಕಾಣಿಕೆಯನ್ನು ವಸೂಲಿಮಾಡಿದ. ಇದರ ಲಾಭ ಪಡೆದ ಅಲ್ಲಾವುದ್ದೀನನು ತನ್ನ ದಂಡನಾಯಕ ಮಲ್ಲಿಕಾಪೂರನ ನೇತೃತ್ವದಲ್ಲಿ ನಿರಂತರ ದಂಡಯಾತ್ರೆಗಳನ್ನು ಆಯೋಜಿಸಿದ, ಅವುಗಳಲ್ಲಿ ಕ್ರಿ.ಶ. ೧೩೦೯ರಲ್ಲಿ ವಾರಂಗಲಿನ ಪ್ರತಾಪರುದ್ರದೇವನ ಮೇಲೆ, ಕ್ರಿ.ಶ.೧೩೧೦ರಲ್ಲಿ ದ್ವಾರ ಸಮುದ್ರದ ಹೊಯ್ಸಳರ ಮೂರನೆಯ ಬಲ್ಲಾಳನ ಮೇಲೆ, ಹಾಗೂ ಕ್ರಿ.ಶ. ೧೩೧೧ರಲ್ಲಿ ಮಧುರೆಯ ಪಾಂಡ್ಯರ ವೀರ ಪಾಂಡ್ಯ ಮತ್ತು ಸುಂದರ ಪಾಂಡ್ಯರ ರಾಜ್ಯದ ಮೇಲೆ ದಾಳಿ ಮಾಡಿ ದಕ್ಷಿಣ ಭಾರತದ ರಾಜಕೀಯವನ್ನು ಅಸ್ಥಿರಗೊಳಿಸಿದನು.[೯೭] ಕ್ರಿ.ಶ.೧೩೧೩ರಲ್ಲಿ ಮಲ್ಲಿಕಾಪೂರನ್ನು ದೇವಗಿರಿಯ ಮೇಲೆ ದಾಳಿ ಮಾಡಲು ಮತ್ತೊಮ್ಮೆ ಅಲ್ಲಾವುದ್ದೀನನು ಸೈನ್ಯ ಸಮೇತ ಕಳಹಿಸಿದನು. ಶಂಕರದೇವನು ಹೋರಾಟದಲ್ಲಿ ಹತನಾದನಂತರ ಮುಸ್ಲಿಂ ಸೈನ್ಯ ಕಲಬುರ್ಗಿ, ಮುದಗಲ್, ರಾಯಚೂರು ಮುಂತಾದ ಕೋಟೆಗಳನ್ನು ಲೂಟಿಮಾಡಿ ದೆಹಲಿಗೆ ಹಿಂದುರಿಗಿತು.[೯೮]

ಅಲ್ಲಾವುದ್ದೀನನು ವಾಸ್ತವಿಕ ದೃಷ್ಟಿಕೋನವುಳ್ಳವನಾಗಿದ್ದು, ಗೆದ್ದುಕೊಂಡ ದಕ್ಷಿಣದ ರಾಜ್ಯಗಳನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳದೆ, ಸೋತ ಹಿಂದೂ ಅರಸರು ತನ್ನ ಸಾರ್ವಭೌಮತ್ವವನ್ನು ಒಪ್ಪಿಕೊಂಡು, ಕಪ್ಪ ಕಾಣಿಕೆಯನ್ನು ನೀಡಲು ಮುಂದಾದರೆ ಅಂತ ಅರಸರಿಗೆ ಅವರ ರಾಜ್ಯಗಳನ್ನು ಮರಳಿ ನೀಡಿದ. ದಾಳಿಯ ಕಾಲಕ್ಕೆ ಮಲ್ಲಿಕಾಪೂರನು ದಕ್ಷಿಣದ ಅನೇಕ ಶ್ರೀಮಂತ ನಗರಗಳನ್ನು, ದೇವಾಲಯಗಳನ್ನು ಕೊಳ್ಳೆ ಹೊಡೆದು ಸಂಪತ್ತನ್ನು ಸೂರೆಗೊಂಡನು. ಈ ದಾಳಿಗಳು ಹಿಂದೂ ಜನತೆಯಲ್ಲಿ ತೀವ್ರ ಅತೃಪ್ತಿಯನ್ನು ತಂದಿತು. ದೇವಗಿರಿಯ ಮೇಲಿನ ನಿರಂತರ ದಾಳಿಗಳಿಂದ ಇಲ್ಲಿಯ ಹಿಂದೂ ಅಸ್ತಿತ್ವ ಮಾಯಗೊಂಡು ಮುಂದೆ ದೌಲತಾಬಾದ ಎಂಬ ಹೆಸರಿನಿಂದ ಪ್ರಾಮುಖ್ಯತೆಯನ್ನು ಪಡೆಯಿತು.

ಮಹಮ್ಮದ-ಬಿನ್-ತುಘಲಕನ ಕಾಲದಲ್ಲಿ (ಕ್ರಿ.ಶ.೧೩೨೫-೫೧) ದಕ್ಷಿಣ ಭಾರತದ ರಾಜಕೀಯದಲ್ಲಿ ಹಲವು ಬದಲಾವಣೆಗಳು ಆರಂಭವಾದವು. ದಕ್ಷಿಣ ಭಾರತದ ಮೇಲೆ ಹಿಡಿತ ಸಾಧಿಸಲು ಯತ್ನಿಸಿದ ಮಹಮ್ಮದನು ಇಲ್ಲಿ ಹಲವು ದಂಗೆಗಳನ್ನು ಎದುರಿಸಬೇಕಾಯಿತು. ಸಣ್ಣಪುಟ್ಟ ಸಂಸ್ಥಾನಗಳು ದಂಗೆ ಎದ್ದು ಸ್ವತಂತ್ರರಾಗಲು ಹವಣಿಸಿದರು. ದಕ್ಷಿಣದ ದಂಗೆಗಳನ್ನು ಎದುರಿಸಲು ತನ್ನ ಸಂಬಂಧಿ ಬಹಾವುದ್‌ದೀನ ಗುರುಷಪನನ್ನು ಇಲ್ಲಿಯ ರಾಜ್ಯಪಾಲನನ್ನಾಗಿ ನೇಮಿಸಿದನು.[೯೯] ಆದರೆ ದುರಾದೃಷ್ಟದ ಸಂಗತಿ ಎಂದರೆ ದೆಹಲಿಯ ವಿರುದ್ಧ ದಂಗೆ ಎದ್ದವರಲ್ಲಿ ಇತನೆ ಮೊದಲಿಗನು. ಸಗರ ನಾಡಿನ ಗೌವರ್ನರನಾದ ಇತನು ಪ್ರಬಲ ಸೈನ್ಯದೊಂದಿಗೆ ಗುಲಬರ್ಗಾ ಜಿಲ್ಲೆಯ ಸುತ್ತಲಿನ ರಾಜ್ಯಗಳನ್ನು ವಶಪಡಿಸಿಕೊಂಡು, ದೆಹಲಿಯ ಸೈನ್ಯಕ್ಕೆ ಒಂದು ಪ್ರಬಲ ಶಕ್ತಿಯಾಗಿ ಪರಿಣಮಿಸಿದ ಸಗರನಾಡನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸ್ವತಂತ್ರ ಆಳ್ವಿಕೆ ಆರಂಭಿಸಿದ. ಸ್ಥಳೀಯ ಕಂಪಿಲರಾಯನ ಸ್ನೇಹ ಸಹಕಾರದಿಂದ ರಾಜ್ಯವನ್ನು ಬಲಪಡಿಸಿದ. ಇದನ್ನರಿತ ತುಘಲಕನು ಮಲಿಕ ಅಹಮ್ಮದನನ್ನು ರಾಯಭಾರಿಯನ್ನಾಗಿ ನೇಮಿಸಿದ ಆದರೆ ಬಹಾವುದ್ದೀನನು ಕಂಪಿಲರಾಯನ ಸಹಾಯದಿಂದ ತನ್ನ ಸ್ಥಾನ ಭದ್ರಪಡಿಸಿಕೊಂಡನು. ಕಂಪಿಲನ ರಾಜ್ಯವು ಇಂದಿನ ರಾಯಚೂರ ಜಿಲ್ಲೆಯಾಗಿದೆ. ಕೊನೆಗೆ ಮಹಮ್ಮದ-ಬಿನ್-ತುಘಲಕನು ಸೈನ್ಯ ಸಮೇತ ದಕ್ಷಿಣಕ್ಕೆ ಆಗಮಿಸಿದ ಹೊಸಪೇಟೆಯ ಬಳಿ ಸಂಭವಿಸಿದ ಭೀಕರ ಕದನದಲ್ಲಿ ಸುಲ್ತಾನನ್ನು ಸೋಲನು ಅನುಭವಿಸಿದ, ಅವಮಾನದ ಸೇಡು ತೀರಿಸಿಕೊಳ್ಳಲು ಮಲ್ಲಿಕ್‌ನ ನೇತೃತ್ವದಲ್ಲಿ ಬಲಾಡ್ಯ ಸೈನ್ಯವನ್ನು ಕಳುಹಿಸಿದ, ಮುಂದಿನ ಹೋರಾಟದಲ್ಲಿ ಬಹಾವುದ್ದೀನನ್ನು ಸೆರೆಹಿಡಿದು ದೆಹಲಿಗೆ ಕಳುಹಿಸಲಾಯಿತು.

ತುಘಲಕನ ಆಳ್ವಿಕೆಯ ಕಾಲಕ್ಕೆ ಸುರಪುರವನ್ನು **'ಶೋರಾಪೂರ'** ಎಂದು ಪುನರ್‌ನಾಮಕಾರಣ ಮಾಡಲಾಯಿತು. ಅಲ್ಲದೆ ಶಹಾಪೂರ ನಗರವನ್ನು ತನ್ನ ಆಡಳಿತದ ಕೇಂದ್ರ ಸ್ಥಳವನ್ನಾಗಿಸಿಮಾಡಿಕೊಂಡನು. ಕ್ರಿ.ಶ.೧೩೧೬ರ ಶಾಸನದ ಪ್ರಕಾರ ಶಹಾಪೂರ (ಉಸ್ತಾದಾಬಾದ್) ನಲ್ಲಿ ತುಘಲಕನು ಕೋಟೆಯನ್ನು ನಿರ್ಮಿಸಿರುವ ಕುರಿತು ಉಲ್ಲೇಖವಿದೆ.[೧೦೦] ದಕ್ಷಿಣ ಭಾರತದಲ್ಲಿ ತುಘಲಕ್ ಶೈಲಿಯ ಕಟ್ಟಡಗಳು ಆರಂಭವಾದವು. ಈ ಎಲ್ಲಾ ಕಾರಣಗಳಿಂದಾಗಿ ತುಘಲಕನು ತನ್ನ ರಾಜಧಾನಿಯನ್ನು ದೌಲತಾಬಾದ್‌ನಿಂದ ದೆಹಲಿಗೆ ವರ್ಗಾಯಿಸಿದ. ಗುಲಬರ್ಗಾ ಜಿಲ್ಲೆಯ ಸುರಪುರ ಹಾಗೂ ಶಹಾಪೂರಗಳಲ್ಲಿ ತುಘಲಕನ ಕಾಲದಲ್ಲಿ ಹಲವು ಕಟ್ಟಡಗಳು ರಚನೆಯಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ದೆಹಲಿಯ ಸುಲ್ತಾನರು ಪ್ರತ್ಯೇಕವಾಗಿ ಹಾಗೂ ಅಪ್ರತ್ಯಕ್ಷವಾಗಿ ಗುಲಬರ್ಗಾ ಜಿಲ್ಲೆಯ ಮೇಲೆ ಪ್ರಭಾವ ಬೀರಿದರು.

೨.೩. ವಿಜಯನಗರ ಸಾಮ್ರಾಜ್ಯ

ಕ್ರಿ.ಶ.೧೩೩೬ರಲ್ಲಿ ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರಾಯರಿಂದ ತುಂಗಭದ್ರನದಿಯ ದಂಡೆಯ ಮೇಲೆ, ಪಂಪಾಕ್ಷೇತ್ರದಲ್ಲಿ ವಿಜಯನಗರ ಸಾಮ್ರಾಜ್ಯವು ಆಸ್ತಿತ್ವಕ್ಕೆ ಬಂದಿತು.[೧೦೧] ಇದರ ಉದ್ದೇಶ ಮುಸ್ಲಿಂರ ದಾಳಿಯಿಂದ ತತ್ತರಿಸುತ್ತಿದ್ದ ಹಿಂದೂ ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆ ಕ್ರಿ.ಶ.೧೩೪೭ರಲ್ಲಿ ಸ್ಥಾಪನೆಗೊಂಡ ಮುಸ್ಲಿಂ ಸಾಮ್ರಾಜ್ಯದ ವಿರುದ್ಧ ಗಮನಹರಿಸಿದ ವಿಜಯನಗರದ ಅರಸರು ನಿರಂತರ ಸಂಘರ್ಷದಲ್ಲಿ ತೊಡಗಿದರು. ಒಂದನೆಯ ಮಹಮ್ಮದ ಶಹಾ (ಕ್ರಿ.ಶ. ೧೩೫೮-೧೩೭೫) ನ ಕಾಲದಿಂದ ನಿರಂತರ ಯುದ್ದಗಳು ನಡೆದವು. ಆದ್ದರಿಂದ ವಿಜಯನಗರದ ಅರಸರು ಮೇಲಿಂದ ಮೇಲೆ ಗುಲಬರ್ಗಾದ ಕಡೆಗೆ ತಮ್ಮ ಗಮನಹರಿಸಿದರು. ಕ್ರಿ.ಶ.೧೩೬೪ರಲ್ಲಿ ಎರಡೂ ಸೈನ್ಯಕ್ಕೆ ಮುದಗಲ್‌ನಲ್ಲಿ ಹೋರಾಟ ಸಂಭವಿಸಿತು.[೧೦೨] ಆದರೆ ಒಪ್ಪಂದದ ಮೂಲಕ ತಾತ್ಕಾಲಿಕವಾಗಿ ಯುದ್ಧ ನಿಂತಿತು. ಕ್ರಿ.ಶ. ೧೩೭೭ರಲ್ಲಿ ಮತ್ತೆ ಬಹಮನಿಯರೊಂದಿಗೆ ನಿರಂತರ ಹೋರಾಟ ಸಂಭವಿಸಿತು. ಈ ಅವಧಿಯಲ್ಲಿ ನಡೆದ ಯುದ್ಧಗಳು ಎರಡು ಪಡೆಗಳಿಗೆ ಅಪಾರ ಹಾನಿಯನ್ನುಂಟು ಮಾಡಿತು. ಕ್ರಿ.ಶ.೧೩೯೫ರ ರಂಗಿನ ಹೋರಾಟದಲ್ಲಿ ವಿಜಯನಗರ ಸೈನ್ಯವೂ ಗೋವಾದ ಮೇಲೆ ಹತೋಟಿಯನ್ನು ಪಡೆದುಕೊಂಡಿತು. ರಾಯಚೂರ ಮುತ್ತಿಗೆಯಲ್ಲಿ ಸುಲ್ತಾನರು ರಾಯನ ಸೈನ್ಯವನ್ನು ಸೋಲಿಸಿದರು. ಕೃಷ್ಣದೇವರಾಯನ ಆಳ್ವಿಕೆಯ ಮುಂಚೆ ವಿಜಯನಗರದ ಅರಸರು ಗುಲಬರ್ಗಾದ ಮೇಲೆ ಹತೋಟಿ ಸಾಧಿಸಿರುವ ವಿಷಯ ಕುರಿತು ಯಾವುದೆ ಮೂಲಾಧಾರಗಳು ಲಭ್ಯವಾಗಿಲ್ಲ. ಕೃಷ್ಣದೇವರಾಯನ ಆಳ್ವಿಕೆಯ ಕುರಿತು ಗುಲಬರ್ಗಾ ಜಿಲ್ಲೆಯಲ್ಲಿ ಶಾಸನಗಳು ಲಭ್ಯವಾಗಿವೆ.

ಕ್ರಿ.ಶ.೧೩೯೮ರಲ್ಲಿ ಸಾಗರದ ಜಮಿನದಾರ ದಂಗೆ ಎದ್ದಿರುವ ಪ್ರಯುಕ್ತ ಇದಕ್ಕೆ ಕೃಷ್ಣದೇವರಾಯನ ಬೆಂಬಲವಿದೆ ಎಂದು ಭಾವಿಸಿದ ಫಿರೋಜ್ ಶಹಾನು ವಿಜಯನಗರದೊಂದಿಗೆ ಸಂಘರ್ಷ ಆರಂಭಿಸಿದ, ರಾಯನು ಬಹಮನಿಯರ ಆಳ್ವಿಕೆಗೆ ಸೇರಿದ ಬಿಜಾಪೂರವನ್ನು ವಶಪಡಿಸಿಕೊಳ್ಳಲು ಯತ್ನಿಸಿದನು. ಮುದಗಲ್, ರಾಯಚೂರ ಮತ್ತು ದೋ ಅಬ್‌ಗಳು ವಿಜಯನಗರದ ವಶವಾದವು.[೧೦೩] ಮುಂದಿನ ಆಕ್ರಮಣದಲ್ಲಿ ಕಲಬುರ್ಗಿಯ ಕೋಟೆಯನ್ನು ಮುತ್ತಿ ಅದನ್ನು ವಶಪಡಿಸಿಕೊಳ್ಳಲಾಯಿತು. ಇದೇ ಉತ್ಸಾಹದಲ್ಲಿ ಬೀದರ ಕೋಟೆಯನ್ನು ಮುತ್ತಿ, ಅಲ್ಲಿಯ ಪ್ರಧಾನಿಯ ವಶದಲ್ಲಿದ್ದ ಸುಲ್ತಾನ ಮಹಮ್ಮದನನ್ನು ಬಿಡುಗಡೆ ಮಾಡಿ ಆತನನ್ನು ಸಿಂಹಾಸನ ಮೇಲೆ ಕೂಡಿಸಿದನು. ಇದರ ಪ್ರತೀಕವಾಗಿ ಕೃಷ್ಣದೇವರಾಯನಿಗೆ **'ಯವನ ಪ್ರತಿಷ್ಠಾಪನಾಚಾರ್ಯ'** ಎಂಬ ಬಿರುದು ಬಂದಿತು.[೧೦೪] ಕ್ರಿ.ಶ. ೧೫೨೦ರಲ್ಲಿ ಬಹಮನಿ ಸುಲ್ತಾರಿಗೆ ಸಂಬಂಧಿಸಿದ ರಾಯಚೂರ ಕೋಟೆಯನ್ನು ವಶಪಡಿಸಿಕೊಂಡನು. ೧೫೨೩ರಲ್ಲಿ ಕೃಷ್ಣದೇವರಾಯನು ತನ್ನ ಸೈನ್ಯದೊಡನೆ ಗುಲಬರ್ಗಾವನ್ನು ಪ್ರವೇಶಿಸಿ ಮತ್ತೊಮ್ಮೆ ಈ ಪ್ರಾಂತಗಳನ್ನು ಹಿಡಿದುಕೊಂಡನು.[೧೦೫] ಕೃಷ್ಣದೇವರಾಯನು ಆಳ್ವಿಕೆಯ ನಂತರ ಅಧಿಕಾರಕ್ಕೆ ಬಂದ ವಿಜಯನಗರದ ಅರಸರು ಗುಲಬರ್ಗಾ

[illegible]

ಪ್ರದೇಶಗಳ ಮೇಲೆ ಹತೋಟಿ ಸಾಧಿಸುವಲ್ಲಿ ವಿಫಲರಾದರು. ಇದೆ ಸಂದರ್ಭಕ್ಕೆ ಬಹಮನಿಯ ಸಾಮ್ರಾಜ್ಯವು ಐದು ಶಾಹಿ ರಾಜ್ಯಗಳಾಗಿ ವಿಭಜನೆ ಹೊಂದಿತು. ಮುಂದಿನ ದಿನಗಳಲ್ಲಿ ಬಿಜಾಪೂರದ ಆದಿಲ್‌ಶಾಹಿಗಳು ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದರು. ಆದ್ದರಿಂದ ಕಾಲಕ್ರಮೇಣ ಗುಲಬರ್ಗಾ ರಾಜಕೀಯ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು. ಕ್ರಿ.ಶ.೧೫೩೦ರಿಂದ ೧೫೬೫ರ ವರೆಗಿನ ಅವಧಿಯಲ್ಲಿ ವಿಜಯನಗರದ ರಾಯರು ಮುಸ್ಲಿಂ ಒಕ್ಕೂಟದ ವಿರುದ್ಧ ಹೋರಾಡಬೇಕಾಯಿತು. ಕ್ರಿ.ಶ.೧೫೬೫ರ ರಕ್ಕಸತಂಗಡಗಿ (ತಾಳಿಕೋಟೆ) ಯುದ್ದದಿಂದ ವಿಜಯನಗರ ತನ್ನ ಪ್ರಾಬಲ್ಯವನ್ನು ಕಳೆದುಕೊಂಡಿತು. ಬನ್ನಿಹಟ್ಟಿಯು ಗುಲಬರ್ಗಾ ಜಿಲ್ಲೆಯಲ್ಲಿ ಬರುತ್ತಿತ್ತು ಎನ್ನುವುದು ಪಿ.ಎಂ.ಜ್ಯೋಷಿಯವರ ಅಭಿಪ್ರಾಯವಾಗಿದೆ. ವಿಜಯ ನಗರದ ಅರಸರು ಹಲವು ದಶಕಗಳವರೆಗೆ ಆಳ್ವಿಕೆ ಮಾಡಿದರು, ಅದು ಗುಲಬರ್ಗಾ ಜಿಲ್ಲೆಯ ಮೇಲೆ ಯಾವುದೇ ನೇರವಾದ ಪರಿಣಾಮಗಳನ್ನು ಬೀರಲಿಲ್ಲ.

೨.೪. ಬಹಮನಿ ಸಾಮ್ರಾಜ್ಯ:

ಅಲ್ಲಾವುದ್ದೀನ ಖಿಲ್ಜಿಯ ದಕ್ಷಿಣ ಭಾರತದ ದಂಡಯಾತ್ರೆಯ ಪರಿಣಾಮದಿಂದ ವಿಜಯನಗರ ಮತ್ತು ಬಹಮನಿ ಸಾಮ್ರಾಜ್ಯಗಳು ಅಸ್ತಿತ್ವಕ್ಕೆ ಬಂದವು. ಕ್ರಿ.ಶ.೧೨೯೬ರಲ್ಲಿ ಅಲ್ಲಾವುದ್ಧೀನನು ದಕ್ಷಿಣದ ರಾಜ್ಯಗಳ ಮೇಲೆ ದಾಳಿ ಮಾಡಿ ಇಲ್ಲಿಯ ಸಂಪತ್ತಿನಿಂದ ತನ್ನ ಚಿಕ್ಕಪ್ಪನನ್ನು ಕೊಂದುಹಾಕಿ ತಾನೆ ಅಧಿಕಾರಕ್ಕೆ ಬಂದನು. ಆತನ ನಿರಂತರ ದಾಳಿಯಿಂದ ಇಲ್ಲಿಯ ರಾಜ್ಯಗಳು ತತ್ತರಿಸಿದವು. ಈ ಕುರಿತು ಕವಿ ಅಮೀರ ಖುಸ್ರೋ ವಿವರಿಸಿದ್ದಾನೆ.[೧೦೬] ಇಸಾಮಿಯ ಪ್ರಕಾರ ಪ್ರತಿಯೊಬ್ಬರ ಮನೆಗಳು ಬೆಳ್ಳಿ, ಬಂಗಾರ, ಮುತ್ತು, ರತ್ನಗಳಿಂದ ತುಂಬಿತ್ತು. ಆರ್ಥಿಕ ದೃಷ್ಟಿಯಿಂದ ಬಲಶಾಲಿಯಾದ ಈ ರಾಜ್ಯಗಳಿಗೆ ಸೈನಿಕ ಬಲ ಇರದಿದ್ದರೆ ಆ ರಾಜ್ಯಗಳು ಅವನತಿ ಹೊಂದುತ್ತವೆ ಎಂದು ಹೇಳಿದ್ದಾನೆ.[೧೦೭]

ಕ್ರಿ.ಶ. ೧೨೯೯ರಿಂದ ೧೩೧೩ರ ವರೆಗೆ ಮಲ್ಲಿಕಾಪೂರನ ನೇತೃತ್ವದ ದಾಳಿಗಳು ದಕ್ಷಿಣದ ಪ್ರಬಲ ರಾಜ್ಯಗಳನ್ನು ಅವನತಿಗೊಳಿಸಿತು. ಅಲ್ಲಾವುದ್ದೀನ ಖಿಲ್ಜಿಯ ಮರಣದ ನಂತರ ಆತನ ಮಗ ಕುತ್ಬುದ್ದೀನ ಮುಭಾರಕ ದಕ್ಷಿಣದ ರಾಜ್ಯಗಳ ಮೇಲೆ ಲೂಟಿ ಮುಂದುವರೆಸಿದ ಇದರಿಂದ ದೆಹಲಿಯ ರಾಜಕೀಯ ಹದಗೆಟ್ಟಿತು. ಸುಲ್ತಾನರ ವಿರುದ್ಧ ದಂಡನಾಯಕರು ಸ್ವತಂತ್ರರಾಗಲು ಹವಣಿಸಿದರು. ಇಂತಹ ಸ್ಥಿತಿಯಲ್ಲಿ ಕ್ರಿ.ಶ.೧೩೨೧ರಲ್ಲಿ ಖಿಲ್ಜಿಗಳ ಆಳ್ವಿಕೆ ಅಂತ್ಯಗೊಂಡು ತುಘಲಕ ಮನೆತನ ಅಧಿಕಾರಕ್ಕೆ ಅಧಿಕಾರಕ್ಕೆ ಬಂದಿತು.

ಫಕರುದ್ದೀನ ಜುನ್ನಾಖಾನ (೧೩೨೪-೧೩೫೧) ಮಹಮ್ಮದ-ಬಿನ್ ತುಘಲಕ ಎಂದು ಬಿರುದು ಪಡೆದು ದೆಹಲಿಯ ಸಿಂಹಾಸನವನ್ನೇರಿದ. ಪರಸ್ಪರ ವಿರುದ್ಧಗುಣದ ಈ ವ್ಯಕ್ತಿಯ ಕಾಲದಲ್ಲಿ ಹಲವು ದಂಗೆಗಳಾದವು. ೨೫ ವರ್ಷ ಆಳ್ವಿಕೆಯಲ್ಲಿ ೨೩ ಪ್ರಬಲ ದಂಗೆಗಳಾದವು. ಅವುಗಳಲ್ಲಿ ದಕ್ಷಿಣ ಭಾರತದ ಗವರ್ನರಗಳ ದಂಗೆಗಳು ಹೊಸ ರಾಜ್ಯದ ಆಸ್ತಿತ್ವಕ್ಕೆ ದಾರಿ ಮಾಡಿಕೊಟ್ಟಿತು. ಕ್ರಿ.ಶ.೧೩೨೮ರ ಅವಧಿಯವರೆಗೆ ಇತನು ಕೃಷ್ಣಾನದಿಯಿಂದ ತುಂಗಭದ್ರದವರೆಗೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವಲ್ಲಿ

[illegible]

ಯಶಸ್ವಿಯಾದನು.[೧೦೮] ತನ್ನ ರಾಜಧಾನಿಯನ್ನು ದೇವಗಿರಿ (ದೌಲತಾಬಾದ)ಗೆ ವರ್ಗಾಯಿಸಿ ಇದನ್ನು ರಾಜಧಾನಿಯನ್ನಾಗಿ ಮಾಡಿಕೊಂಡನು.[೧೦೯] ದಕ್ಷಿಣ ಪ್ರಾಂತಗಳಿಗೆ ಕುತಲುಗ್‌ಖಾನನನ್ನು ಗೌರ್ನರ್‌ನನ್ನಾಗಿ ನೇಮಿಸಿದ. ಇತನು ಸಮರ್ಥ, ಶೂರ ಮತ್ತು ದಕ್ಷ ಆಡಳಿತಗಾರನಾಗಿದ್ದ. ಆದರೆ ಇತನ ವಿರುದ್ಧ ಒಂದು ಗುಂಪು ಹುಟ್ಟಿಕೊಂಡಾಗ ಕ್ರಿ.ಶ.೧೩೪೫ರಲ್ಲಿ ದೆಹಲಿಗೆ ಮರಳಿ ಕರೆಯಿಸಿಕೊಳ್ಳಲಾಯಿತು.

ದಕ್ಷಿಣದ ೨೩ ಪ್ರಾಂತಗಳ ಆಡಳಿತ ನೋಡಿಕೊಳ್ಳಲು ಕ್ರಮಬದ್ಧವಾಗಿ ಐನ್-ವುಲ್-ಮುಲ್ಕ, ಇಮಾದ-ವುಲ್-ಮುಲ್ಕ, ಅಜಿಜ್-ವುದ್ದ-ದೀನಕಮರ ಮತ್ತು ಇಸ್ಮಾಯಿಲ್ ಶಹಾರನ್ನು ಪ್ರಾಂತಾಧಿಕಾರಿಗಳಾಗಿ ನೇಮಿಸಲಾಯಿತು.[೧೧೦] ಇಸ್ಮೈಯಿಲ್‌ಶಹಾನು ತನ ಅಧಿಕಾರಿಗಳಾದ ನೂರ್‌ವುದ್ದೀನ್ ಮತ್ತು ಜಾಫರ್‌ಖಾನರಿಗೆ ಖ್ವಾಜಾ-ಇ-ಜಹಾನ್ ಮತ್ತು ಹಸನ್ ಎಂಬ ಬಿರುದನ್ನು ನೀಡಿ ಅವರ ಸಹಾಯದಿಂದ ಕ್ರಮೇಣವಾಗಿ ದಕ್ಷಿಣದಲ್ಲಿ ಸ್ವತಂತ್ರನಾಗಲು ಯತ್ನಿಸಿ ಯಶಸ್ವಿಯಾದನು. ಜಾಫರಖಾನನು ಸಾಗರ ಕಡೆಗೆ ಹೊರಟು, ದೆಹಲಿಯ ಸೈನ್ಯವನ್ನು ಸದೆ ಬಡಿದನು. ಖ್ವಾಜಾನ ಸೈನ್ಯದೊಡನೆ ಸೇರಿ ಗುಲಬರ್ಗಾ ಮುತ್ತಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ. ಇಲ್ಲಿಯ ಸಿಕಂದರ್‌ನನ್ನು ಸದೆ ಬಡಿದು, ತಮ್ಮ ನಾಯಕನಾದ ಇಸ್ಮಾಯಿಲ್ ಶಾಹನ ಸಹಾಯಕೆ ದೌಲತಾಬಾದ್‌ಗೆ ಹೋರಟನು. ಈ ಹೋರಾಟದಲ್ಲಿ ಖ್ವಾಜಾ-ಇ-ಜಹಾನನು ಮಡಿದನು. ದೆಹಲಿ ಸೈನ್ಯದ ದಂಡನಾಯಕರಾದ ಮಲಿಕ್‌ಜೌಹಾರ ಮತ್ತು ಸರತೇಜ್‌ರೊಂದಿಗೆ ಜಾಫರಖಾನನು ಹೋರಾಟ ಮಾಡಿದ, ಗುಲಬರ್ಗಾದ ಮೇಲ್ವಿಚಾರಕನಾದ ಸರತೇಜನನ್ನು **'ಸಿಂಧಥಾನ್'** ಮತ್ತು **'ಧಾರಖೇರಾ'** ಯುದ್ಧದಲ್ಲಿ ಜಾಫರನು ಸೋಲಿಸಿ, ಆತನನ್ನು ಹತ್ಯೆ ಮಾಡಿದ. ಜೌಹಾರನನ್ನು ದೌಲತಾಬಾದ್ ಯುದ್ಧದಲ್ಲಿ ಸೋಲಿಸಿ, ಇಬ್ಬರಿಗಿಂತ ಶ್ರೇಷ್ಠನಾಯಕನಾದ, ದಕ್ಷಿಣದ ಎಲ್ಲಾ ಪ್ರಾಂತಾಧಿಕಾರಿಗಳು ಇತನನ್ನು ತಮ್ಮ ನಾಯಕನೆಂದು ಆಯ್ಕೆ ಮಾಡಿಕೊಂಡರು. ಇಸ್ಮಾಯಿಲ್‌ನು ಇದಕ್ಕೆ ಸಮ್ಮತಿಸಿದ್ದರಿಂದ ಕ್ರಿ.ಶ.೧೩೪೭ ಆಗಸ್ಟ್ ೧೧ರಂದು ದೌಲತಾಬಾದನಲ್ಲಿ **'ಅಲ್ಲಾವುದ್ದೀನಹಸನ್‌ಬಹಮನಶಹಾ'** ಎಂದು ಬಿರುದು ಪಡೆದು ಪಟ್ಟಾಭಿಷಕ್ತನಾದನು.[೧೧೧] ಈ ಕುರಿತು ದೌಲತಾಬಾದನ ಕೋಟೆಯ ಒಂದು ಶಾಸನದಲ್ಲಿ ಉಲ್ಲೇವಿದೆ.

೨.೪.೧. ಅಲ್ಲಾವುದ್ದೀನ್ ಹಸನ್ ಬಹಮನ್ ಶಹಾ (೧೩೪೭-೧೩೫೮)

ಬಹಮನಿ ರಾಜ್ಯದ ಸ್ಥಾಪಕನಾದ ಅಲ್ಲಾವುದ್ದೀನನ ಆರಂಭಿಕ ಜೀವನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಇತನ ಮೂಲ ಹೆಸರು ಅಸ್ಪಷ್ಟವಾಗಿದೆ. ಆದರೆ ಫೆರಿಸ್ತಾನು ತನ್ನ ಕೃತಿಯಲ್ಲಿ **'ಜಾಫರಖಾನ'** ಎಂದು ಕರೆದಿದ್ದಾನೆ.[೧೧೨] ಅಲ್ಲದೆ ಇತನು ಕ್ರಿ.ಶ.೧೨೯೦ರಲ್ಲಿ ಜನಿಸಿದ, ಉದ್ಯೋಗ ಹುಡುಕುತ್ತಾ ಮುಲ್ತಾನದಿಂದ ದೆಹಲಿಗೆ ವಲಸೆ ಬಂದು ಬ್ರಾಹ್ಮಣನ ಮನೆಯಲ್ಲಿ ಸೇವೆಗೆ ಸೇರಿಕೊಂಡನು. ಇತನ ನಿಷ್ಠೆ ಮತ್ತು ಸತತ ಪರಿಶ್ರಮವನ್ನು ಕಂಡ ಬ್ರಾಹ್ಮಣನು ಭವಿಷ್ಯ ವಿದ್ಯೆಯನ್ನು ಬಲ್ಲವನಾಗಿದ್ದನು. ನೀನು ಮುಂದೆ ರಾಜನಾಗುವ ಯೋಗವನ್ನು ಹೊಂದಿರುವುದಾಗಿ ಹೇಳಿದ, ಈ ಕಥೆಯು ಫೆರಿಸ್ತಾ ಮತ್ತು

ತುರುಖಿರಾತ್-ವುಲ್-ಮುಲ್ಕ್‌ನಲ್ಲಿ ಒಂದೇ ರೀತಿಯಾಗಿವೆ. ಇದಕ್ಕೆ ನಿಜಾಮುದ್ದೀನ ಅಹಮದನ ಕೃತಿಯು ಸಹಾಯಕವಾಗಿದೆ. ಆಧುನಿಕ ಲೇಖಕರಾದ ಅಹಮದ, ರಜಿಸ್ ಹಜಿಬವುದ್ದೀನ್ ಮತ್ತು ಇಸಾಮಿಯವರು ಇತನು ಪರ್ಶಿಯಾದ ಸಸನಿದಅರಸ ಬಹಮನಶಹಾನ ಮಗ ಇಸ್‌ಫದಿಯಾರನ ಮಗನು ಎಂದು ತಮ್ಮ ಲೇಖನಗಳಲ್ಲಿ ಉಲ್ಲೇಖಿಸಿದ್ದಾರೆ.

ಪುರೋಹಿತ ಗಂಗು ಮಹಮ್ಮದ ಬಿನ್ ತುಘಲಕನಿಗೆ ಪರಿಚಯಿಸಿ ಆತನ ಆಸ್ಥಾನದ ಸೇವೆಗೆ ಸೇರಿಸಿದ[೧೧೩] ಇತನ ಸಹಾಯದಿಂದ ಹಸನ ದೆಹಲಿಯಲ್ಲಿ ಸೇವೆಗೆ ಸೇರಿಕೊಂಡು ಕಾಲಕ್ರಮೇಣ ಉನ್ನತ ಹುದ್ದೆಯನ್ನು ಪಡೆದುಕೊಂಡ, ದೆಹಲಿಯ ರಾಜಕೀಯ ಗೊಂದಲ,[೧೧೪] ರಾಜಧಾನಿಯ ಬದಲಾವಣೆಯಿಂದ ಬೇಸತ್ತ ಸರದಾರರು ದಂಗೆ ಎದ್ದು ಸ್ವತಂತ್ರರಾಗಿ ಜಾಫರ್‌ಖಾನನನ್ನು ತಮ್ಮ ನಾಯಕನೆಂದು ಆಯ್ಕೆ ಮಾಡಿಕೊಂಡರು.[೧೧೫]

ಇತಿಹಾಸಕಾರರು ಇದರ ಸ್ಥಾಪಕನು ಮೂಲತಃಹ ವಿದೇಶಿಯನು ಎನ್ನುವುದನ್ನು ಕೈಬಿಡಲು ಯತ್ನಿಸಿ, ಅದರ ಜೀವನ ದೆಹಲಿಯಿಂದಲೆ ಆರಂಭಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿ ಫೇರಿಸ್ತಾನ ಕಥೆ ನಂಬಬೇಕಾಗುತ್ತದೆ. ಅಲ್ಲದೆ ಇತನು ಶೇಕ್ ಸಿರಾಜುದ್ದೀನ ಜುನೈಯಿದಿ ಎಂಬ ಸೂಫಿಸಂತರ ಶಿಷ್ಯನಾಗಿದ್ದನು.[೧೧೬] ಅಲ್ಲಾವುದ್ದೀನನು ಪಟ್ಟಾಭಿಷೇಕ್ತನಾದ ನಂತರ ಕೆಲವು ರಾಜ್ಯಗಳನ್ನು ವಶಪಡಿಸಿಕೊಂಡು, ಸ್ಥಳೀಯರ ಹಾಗೂ ದೆಹಲಿಯ ಸಮಸ್ಯೆಯನ್ನು ಹಂತ ಹಂತವಾಗಿ ಬಗೆಹರಿಸಿಕೊಂಡನು. ಶಂಸುದ್ದೀನ ಇಸ್ಮೈಲ್‌ಮುಖ್‌ನನ್ನು ತನ್ನ ಆಪ್ತ ಕಾರ್ಯದರ್ಶಿಯನ್ನಾಗಿ, ಮಲಿಕ್ ಸೈಫುದ್ದೀನ್ ಘೋರಿಯೊಂದಿಗೆ ವೈವಾಹಿಕ ಸಂಬಂಧವನ್ನು ಮಾಡಿಕೊಂಡು, ಅವರ ಸೇವೆಯನ್ನು ತನ್ನ ರಾಜ್ಯಕ್ಕೆ ವರ್ಗಾಯಿಸಿದ. ಘೋರಿಯ ಮಾರ್ಗದರ್ಶನದಂತೆ ಸುತ್ತಲಿನ ಸಂಸ್ಥಾನಗಳಾದ ಕಲ್ಯಾಣ, ತೆಲಂಗಾಣ, ಗುಲಬರ್ಗಾ ಮುಂತಾದ ಪ್ರಾಂತಗಳನ್ನು ವಶಪಡಿಸಿಕೊಂಡನು. ಕೋಟಗಿರ ಮೇಲೆ ಗುರಷಪ್‌ನನ್ನು, ರಜಿಯುದ್ದೀನನನ್ನು, ಮಹೇಂದಿ ಮತ್ತು ಅಕಲ್‌ಕೋಟ,[೧೧೭] ಕೀರಖಾನನನ್ನು ಕಲ್ಯಾಣ,[೧೧೮] ಸಿಕಂದರ ಖಾನನು ಬೀದರ ಮತ್ತು ಮಳಖೇಡಗಳನ್ನು ತುಘಲಕ್‌ರಿಂದ ವಶಪಡಿಸಿಕೊಂಡರು.[೧೧೯] ಕ್ರಮೇಣ ಇತನ ರಾಜ್ಯ ಮಳಖೇಡದಿಂದ ವಾರಂಗಲ್‌ವರೆಗೆ ವಿಸ್ತರಿಸಿದ ವಾರಂಗಲ್‌ನ ಕಾಪನಾಯಕನು ಹಸನನ ಸಾರ್ವಭೌಮತ್ವ ಒಪ್ಪಿಕೊಂಡನು. ರಾಜ ನೀತಿಯ ಕೌಶಲ್ಯದಿಂದ ಸ್ಥಳೀಯ ಅಮೀರರ ದಂಗೆಯನ್ನು ದಮನಗೊಳಿಸಿದ.

ಗುಲಬರ್ಗಾದ ಅನ್ನಪೋಚರೆಡ್ಡಿಯು ತುಘಲಕನ ಪರವಾಗಿ ಹಸನನ ವಿರುದ್ಧ ದಂಗೆ ಆರಂಭಿಸಿದ. ಈ ದಂಗೆಯನ್ನು ಆತನ ದಂಡನಾಯಕರು ಯಶಸ್ವಿಯಾಗಿ ಎದುರಿಸಿದರು. ಸಾಗರದ ಮಹಮ್ಮದ ಜಿನ್ ಆಲಂನ ದಂಗೆಯನ್ನು ಬಗೆಹರಿಸಲು ಸ್ವಂತ ಅಲ್ಲವುದ್ದೀನನನೆ ದೌಲತಾಬಾದನಿಂದ ಆಗಮಿಸಿದ, ಆದರೆ ಕ್ರಿ.ಶ.೧೩೫೧ರಲ್ಲಿ ಮಹಮ್ಮದ ಬೀನ ತುಘಲಕನ ಸಾವು ಇತನಿಗೆ ಸಂತೋಷ ತಂದಿತು.

ಗುಲಬರ್ಗಾವನ್ನು ವಶಪಡಿಸಿಕೊಂಡ ನಂತರ ಅಲ್ಲಾವುದ್ದೀನನು ಇದನ್ನು ತನ್ನ ರಾಜಕೀಯ ಮತ್ತು ಆಡಳಿತಾತ್ಮಕ ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡು ಬಂಡುಕೋರ ಕೀರಖಾನನಿಂದ ಕಲ್ಯಾಣ ಗೆದ್ದು, ಬೀದರ ಹಿಡಿದು ಕೊಳ್ಳಲು ಯತ್ನಿಸಿದಾಗ ಸಿಕಂದರಖಾನನ ನೇತೃತ್ವದಲ್ಲಿ ಆತನ ದಂಗೆಯನ್ನು ಸದೆ ಬಡಿದು ಬೀದರನ ಸೆರೆಯಲ್ಲಿಡಲಾಯಿತು. ಇತನು ಹಿಂದೆ ಸುಲ್ತಾನನ ಆಪ್ತ ಮಿತ್ರನಾಗಿದ್ದನು ಅದನ್ನು ಗಮನಿಸದೆ ಆತನ ತಲೆಕತ್ತರಿಸಲಾಯಿತು. ರಾಜ್ಯದ್ರೋಹಕ್ಕೆ ಇದೆ ಶಿಕ್ಷೆ ಎಂದು ಸಾರಿದ.

ಗುಲಬರ್ಗಾ ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡು ಇದಕ್ಕೆ **'ಅಹಸನಾಬಾದ'** ಎಂದು ಕರೆಯಲಾಯಿತು.[೧೨೦] ಇಲ್ಲಿಯ ಕೋಟೆಯನ್ನು ಬಲಪಡಿಸಿ, ಕೆಲವು ಕಟ್ಟಡಗಳ ನಿರ್ಮಾಣ ಕಾರ್ಯ ಆರಂಭಿಸಿದ. ಅಲ್ಲದೆ ಸ್ಥಳೀಯರ ಸಮಸ್ಯೆಯಿಂದ ಮುಕ್ತನಾಗಲು ಅವರನ್ನು ರಾಜಕುಮಾರನ ಮಧುವೆಗೆ ಆಮಂತ್ರಿಸಿ ಗುಲಬರ್ಗಾದ ಪ್ರಜೆಗಳ ಮೆಚ್ಚುಗೆಯನ್ನು ಪಡೆದುಕೊಂಡನು. ಕ್ರಿ.ಶ. ೧೩೫೮ ರಲ್ಲಿ ತನ್ನ ೭೬ನೆಯ ವಯಸ್ಸಿನಲ್ಲಿ ಮರಣ ಹೊಂದಿದ.[೧೨೧] ಆತನಿಗೆ ಮೂರು ಜನ ಮಕ್ಕಳು ಮಹಮ್ಮದ, ಮಹಮೂದ ಮತ್ತು ದಾವುದ್ ಇವರನ್ನು ರಾಜ್ಯದ ರಕ್ಷಣೆ, ಬೆಳವಣಿಗೆ ಮತ್ತು ವಿಸ್ತರಣೆ ಕುರಿತು ಹೇಳಿದ ಅಲ್ಲಾವುದ್ದೀನನು ತನ್ನ ಮುಂದಿನ ಯೋಜನೆಗಳನ್ನು ಮಕ್ಕಳಿಗೆ ವಹಿಸಿಕೊಟ್ಟು ಕೊನೆಯ ಉಸಿರೆಳೆದನು.[೧೨೨]

೨.೪.೨. ಸುಲ್ತಾನ ಒಂದನೆ ಮುಹಮ್ಮದ (೧೩೫೮-೧೩೭೫)

ಜಾಫರ ಖಾನನ ಹಿರಿಯ ಮಗನಾದ ಬಹಮನ್ ಶಹಾನು ತಂದೆಯ ನಿಧನದ ನಂತರ ಕ್ರಿ.ಶ.೧೩೫೮ ಫೆಬ್ರವರಿ ೧ರಂದು ಗುಲಬರ್ಗಾದಲ್ಲಿ ಪಟ್ಟಾಭೀಷೆಕ್ತನಾಗಿ ಮುಹಮ್ಮದ ಶಹಾ ಎಂದು ಬಿರುದು ಪಡೆದು ಆಳ್ವಿಕೆ ಆರಂಭಿಸಿದ. ಶಾಂತಿ ಮತ್ತು ಶಿಸ್ತಿನ ಮನೋಭಾವದ ಸುಲ್ತಾನನು ಹಲವು ಬದಲಾವೆಗಳನ್ನು ತಂದನು. ಇತನ ಕಾಲದಲ್ಲಿ ಸಾಮ್ರಾಜ್ಯ ವಿಸ್ತಾರ ಮತ್ತು ಪ್ರಗತಿಯಾಯಿತು. ಭಾರತದ ಯುದ್ಧ ಪದ್ಧತಿಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿದನು. ಸಿಡಿಮದ್ದಿನ ಬಳಕೆಯಿಂದ ಯುದ್ಧದಲ್ಲಿ ಹೊಸ ಇತಿಹಾಸ ಆರಂಭವಾಯಿತು.

ತೆಲಂಗಾಣ ಅರಸ ಕಪ್ಪಯನಾಯಕ ಮತ್ತು ವಿಜಯನಗರದ ರಾಜ ಬುಕ್ಕರಾಯರು ದೆಹಲಿಯ ಫಿರೋಜ ತಘಲಕ್‌ನೊಂದಿಗೆ ಒಪ್ಪಂದ ಮಾಡಿಕೊಂಡು ಬಹಮನಿ ರಾಜ್ಯದ ಮೇಲೆ ದಾಳಿ ಮಾಡಲು ಯೋಚಿಸಿದರು. ಆದರೆ ಮೊಹಮ್ಮದ ಜಾಣತನದಿಂದ ವರ್ತಿಸಿ ಮೊದಲು ತೆಲಂಗಾಣ ವಶಪಡಿಸಿಕೊಂಡು ನಂತರ ವಿಜಯನಗರದೊಂದಿಗೆ ಮುದಗಲ್‌ದಲ್ಲಿ ಹೋರಾಡಿ ಯಶಸ್ವಿಯಾದನು.[೧೨೩] ಯುದ್ಧ ನಿಂತು ಎರಡು ರಾಜ್ಯಗಳಲ್ಲಿ ಶಾಂತಿ ಏರ್ಪಟ್ಟಿತು. ಇದು ಬಹುದಿನ ಉಳಿಯದೆ ಮುಂದೆ ಹಲವು ಕಾರಣಗಳಿಗಾಗಿ ಸಂಘರ್ಷ ಆರಂಭವಾಯಿತು. ಇತನ ಕಾಲದಲ್ಲಿ ನಡೆದ ಬೆಹ್ರಾಂಖಾನನ ದಂಗೆಯು ಪ್ರಮುಖವಾಗಿದೆ. ಇದಕ್ಕೆ ಸೂಫಿಸಂತ ಶೇಖ್ ಜೈನುದ್ದೀನನು ಸುಲ್ತಾನನನ್ನು

ದುರ್ವತನೆಯಿಂದ ಬೇಸತ್ತು ದಂಗೆಗೆ ಪ್ರಚೋದಿಸಿದ ನಂತರ ಸುಲ್ತಾನನ ಸನ್ಮಾರ್ಗಕ್ಕೆ ತರುವವಲ್ಲಿ ಯಶಸ್ವಿಯಾಗಿ ಸುಲ್ತಾನ ಮತ್ತು ಸಂತರು ನಿಕಟ ಮಿತ್ರರಾದರು. ಮಧ್ಯಕಾಲೀನ ಅವಧಿಯಲ್ಲಿ ಸಂತರು, ಸೂಫಿಗಳು ಗುಲಬರ್ಗಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೆಲವು ಸಂದರ್ಭಗಳಲ್ಲಿ ಸುಲ್ತಾನನಿಗೆ ಸಂತರು ಮಾರ್ಗದರ್ಶಕರಾಗಿದ್ದರು.[೧೨೪]

ಸುಲ್ತಾನನು ಸಾರ್ವಜನಿಕ ದರ್ಬಾರನಲ್ಲಿ ಕೆಲವು ಸಲ ಅನುಚಿತವಾಗಿ ನಡೆದುಕೊಳ್ಳುತ್ತಿದ್ದ. ಇಂತಹ ಸಂದರ್ಭದಲ್ಲಿ ಯಾರು ಆತನಿಗೆ ತಿಳುವಳಿಕೆ ಹೇಳುತ್ತಿರಲಿಲ್ಲ. ಆದರೆ ಆತನ ಮಾವ ಸೈಫುದ್ದೀನ ಘೋರಿ (ಪ್ರಧಾನ ಮಂತ್ರಿ) ಆತನಿಗೆ ಬುದ್ದಿವಾದ ಹೇಳಿ ದರ್ಬಾರಿನಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿ ಹೇಳಿದ.[೧೨೫] ಆದರೂ ಕೆಲವು ಸಂದರ್ಭಗಳಲ್ಲಿ ಇತರರ ವಿರುದ್ಧ ಚಟುವಟಿಕೆಗಳಲ್ಲಿ ತೊಡಗುತಿದ್ದ.

ದಕ್ಷಿಣ ಭಾರತದಲ್ಲಿ ಸಿಡಿಮದ್ದು ಬಳಕೆ ಕ್ರಿ.ಶ. ೧೩೬೫-೬೬ರಲ್ಲಿ ಇತನ ಕಾಲದಲ್ಲಿ ಆರಂಭವಾಯಿತು. ಇದರಿಂದ ಯುದ್ಧದಲ್ಲಿ ಹಲವು ಬಗೆಯ ತೋಪುಗಳನ್ನು ಬಳಸಲಾಯಿತು. ಇದರ ಬಳಕೆಗೆ ಟರ್ಕಿ ಮತ್ತು ಚೀನಿಯರು ಹೆಸರುವಾಸಿಯಾಗಿದ್ದರು. ಅವರನ್ನು ಬಹಮನಿ ಸಾಮ್ರಾಜ್ಯದ ಸೇವೆಗೆ ಸೇರಿಸಿಕೊಳ್ಳಲಾಯಿತು. ವಿಜಯ ನಗರದ ರಾಯರು ಈ ತಂತ್ರಜ್ಞಾನ ನಂತರ ಅಳವಡಿಸಿಕೊಂಡರು. ಇದರಿಂದ ರಕ್ಷಣಾ ವಾಸ್ತುಶಿಲ್ಪದಲ್ಲಿ ಕ್ರಾಂತಿಕಾರಕ ಬದಲಾವಣೆ ಆರಂಭವಾಯಿತು.[೧೨೬] ಕೋಟೆ ನಿರ್ಮಾಣದಲ್ಲಿ ಗೋಡೆಯ ದಪ್ಪವನ್ನು ಹೆಚ್ಚಿಸಲಾಯಿತು. ಪ್ರವೇಶದ್ವಾರದ ಮುಂದೆ ಎತ್ತರವಾದ ಹಾಗೂ ದಪ್ಪನೆಯ ರಕ್ಷಣಾ ಗೋಡೆ ನಿರ್ಮಿಸಲಾಯಿತು. ಯುರೋಪಿಮಾದರಿಯಂತೆ ಭಾರದಲ್ಲೂ ರಕ್ಷಣಾ ಸ್ಮಾರಕಗಳು ಬದಲಾವಣೆಗೊಂಡವು. ಇತನ ಕಾಲದಲ್ಲಿ ಮೂರು ಪ್ರಮುಖ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಅವುಗಳಲ್ಲಿ ಕೋಟೆಯ ಒಳಗಡೆಯ ಜಾಮೀ ಮಸೀದಿ, ಶಹಾಬಜಾರ ಮಸೀದಿ ಮತ್ತು ಉಸಮಾನಾಬಾದದ ಹಜರತ್‌ಶಸುದ್ದೀನ್‌ನ ಗೋರಿ ಇವುಗಳ ನಿರ್ಮಾಣದಲ್ಲಿ ದೇಶಿಯ ಮತ್ತು ವಿದೇಶಿಯ ಕುಶಲ ಕಾರ್ಮಿಕರನ್ನು ಬಳಸಿಕೊಂಡು ಕಾರ್ಯನಿರ್ವಹಿಸಿದರು. ಆದ್ದರಿಂದ ಇಂತಹ ಶೈಲಿಯ ಕಟ್ಟಡಗಳಿಗೆ **'ದಖ್ಖನಶೈಲಿ'** ಎಂದು ಕರೆಯುತ್ತಾರೆ. ಇಂತಹ ಕಟ್ಟಡಗಳು ಭಾರತದ ಹವಾಗುಣಕ್ಕೆ ಸೂಕ್ತವಲ್ಲದಿದ್ದರೂ ಸ್ಪೇನ್ ಮತ್ತು ಟರ್ಕಿಯ ಮಾದರಿಯಲ್ಲಿ ನಿರ್ಮಿಸಲಾಯಿತು.

ಫೆರಿಸ್ತಾ ಹೇಳುವಂತೆ ಮುಹಮ್ಮದನ ಕೊನೆಯ ಕಾಲವು ಅತ್ಯಂತ ಶಾಂತಿ ಮತ್ತು ಸುವ್ಯವಸ್ಥೆಯಿಂದ ಕೂಡಿತ್ತು. ಸೋತು ಶರಣಾಗತರಾದ ಎಲ್ಲಾ ರಾಜ್ಯಗಳು ಪ್ರತಿ ವರ್ಷ ಕಪ್ಪು ಕಾಣಿಕೆಯನ್ನು ಸಲ್ಲಿಸುತ್ತಿದ್ದವು. ಸುಲ್ತಾನನು ೨೧.೪.೧೩೭೫ರ ನಿಧನ ಹೊಂದಿದನು.[೧೨೭] ತಂದೆಯ ಸಮಾಧಿಯ ಪಕ್ಕದಲ್ಲಿ ಸಮಾದಿ ಮಾಡಲಾಯಿತು. ಇತನ ಸಮಾಧಿಯ ಮೇಲೆ ಕುರಾನಿನ ಸಾಲುಗಳಿವೆ ಎಂದು ಹೇಳಲಾಗಿದೆ.[೧೨೮] ಆದರೆ ಪ್ರಸ್ತುತ ಯಾವುದೆ ಅಕ್ಷರದ ಸಾಲುಗಳು ಅದರ ಮೇಲೆ ಕಂಡು ಬರುವುದಿಲ್ಲ.

೨.೪.೩. ಅಲ್ಲಾವುದ್ದೀನ ಮುಜಾಹಿದ್ (೧೩೭೫-೭೮):

ಒಂದನೆ ಮಹಮ್ಮದ ಶಾಹನ ಮಗನಾದ ಅಲ್ಲಾವುದ್ದೀನ ಮುಜಾಹಿದನು (ಮೆಲಿಕ್ ಸೈಫುದ್ದೀನ ಘೋರಿಯ ಮಗಳ ಮಗ) ೨೧.೩.೧೩೭೫ರಲ್ಲಿ ಅಧಿಕಾರಕ್ಕೆ ಬಂದನು. ಆತನಿಗೆ ೧೯ ವರ್ಷ ವಯಸ್ಸು, ಮೂರು ವರ್ಷದ ಆಳ್ವಿಕೆಯಲ್ಲಿ ಇತನ ಕೊಲೆಯಾಯಿತು (೧೬.೧೪.೧೩೭೮). ಬಹಮನಿ ಸಾಮ್ರಾಜ್ಯದಲ್ಲಿ ಕುತಂತ್ರ ಹಾಗೂ ಒಳಸಂಚಿನಿಂದ ಕೂಡಿದ ಗೊಂದಲಯಮಯಕಾಲ ಆರಂಭವಾಯಿತು. ಮತ್ತೊಂದು ಪ್ರಮುಖ ಸಮಸ್ಯೆ ಎಂದರೆ ಅಫಕಿಗಳು ಅಫಕಿಯೇತರರ (ದೇಶಿಯ-ವಿದೇಶಿಯ) ನಡುವೆ ಸಂಘರ್ಷ ಆರಂಭವಾಯಿತು.

ಈತನ ಅಧಿಕಾರ ಗ್ರಹಣ ಕಾಲಕ್ಕೆ ತನ್ನ ಗುರು ಶೇಖ-ಸಿರಾಜ್-ವುದ್-ದಿನ್ ಜುನೈದಿಯ ರುಮಾಲು ಮತ್ತು ಅಂಗಿ ಹಾಕಿಕೊಂಡು ಪಟ್ಟವೇರಿದ ಆದರೂ ದುರಾದೃಷ್ಟ ಆತನ ಕೊಲೆ ಸಂಭವಿಸಿತು.[೧೨೯] ಇತನು ಉತ್ತಮ ತರಬೇತಿ ಹೊಂದಿದ ವ್ಯಕ್ತಿ ಯುದ್ಧ ಮತ್ತು ಶಾಂತಿ ಕಾಲದ ಎಲ್ಲಾ ಶಿಕ್ಷಣ ಬಲ್ಲವನಾಗಿದ್ದನು. ಟರ್ಕಿ ಮತ್ತು ಪರ್ಶಿಯನ್ ಭಾಷೆಗಳ ಪ್ರಭುತ್ವ ಹೊಂದಿದ, ಕುದುರೆ ಸವಾರಿ, ಬೇಟೆ, ಬಿಲ್ಲುವಿದ್ಯೆ, ಖಡ್ಗ ಮಸೆತ, ಮುಂತಾದ ಕಲೆ ಬಲ್ಲವನಾಗಿದ್ದನು.[೧೩೦] ಇತನ ಗಟ್ಟಿಮುಟ್ಟಾದ ಶರೀರದಿಂದಾಗಿ ಇತನಿಗೆ ಹಿಂದೂಗಳು **'ಬಲವಂತ'** ಎಂದು ಕರೆಯುತ್ತಿದ್ದರು.[೧೩೧] ಮಲ್ಲ ಯುದ್ಧಗಾರನಾದ ಇತನು ಒಂದು ಸಲ ಎದುರಾಳಿ ಮುಬಾರಕ್‌ನ ಕತ್ತಿನ ಮೂಳೆಯನ್ನು ಮುರಿದು ಹಾಕಿದ. ವಿಜಯನಗರದೊಂದಿಗೆ ಯುದ್ಧದಲ್ಲಿದ್ದಾಗ ಕಾಡಿನಲ್ಲಿ ಒಂದು ಸಿಂಹವನ್ನು ಬಾಣದಿಂದ ಹೊಡೆದು ಕೊಂದ, ಇಲ್ಲದಿದ್ದರೆ ಅದರೊಂದಿಗೆ ಖಡ್ಗದಿಂದ ಹೋರಾಡಲು ಸಿದ್ದನಿದ್ದ. ಇತನ ಎಲ್ಲಾ ಕೆಲಸ ಕಾರ್ಯಗಳಿಗೆ ತನ್ನ ತಾತ ಮತ್ತು ಪ್ರಧಾನಿಯಾದ ಸೈಫುದ್ದೀನ ಘೋರಿಯ ಸಲಹೆಗಳನ್ನು ಪಡೆಯುತ್ತಿದ್ದ.

ಕ್ರಿ.ಶ. ೧೩೭೭ರಲ್ಲಿ ವಿಜಯನಗರದೊಂದಿಗೆ, ಸುದೀರ್ಘ ಸಂಘರ್ಷ ಆರಂಭವಾಯಿತು. ಎರಡು ಕಡೆಯಲ್ಲಿ ಅಪಾರ ಹಾನಿ ಸಂಭವಿಸಿತು.[೧೩೨] ಕೆಲಕಾಲ ರಾಯನು ಅರಣ್ಯದಲ್ಲಿ ತಲೆಮರೆಸಿಕೊಂಡು ನಂತರ ಸೈನ್ಯ ಸಂಘಟಿಸಿಕೊಂಡು ಹೋರಾಟ ಮುಂದುವರೆಸಿದ. ಇದರಲ್ಲಿ ಬಹಮನಿಯರ ದಂಡನಾಯಕ ಮುಬಾರಕ್ ಖಾನ ಹತನಾದನು. ಸುಲ್ತಾನನ ಮಲಸಹೋದರ ದಾವೂದನು ಹೋರಾಟ ಮುಂದುವರೆಸಿ ಯಶಸ್ವಿ ಹೊಂದಿದನು. ಆದರೆ ವಿಜಯನಗರವನ್ನು ಸಂಪೂರ್ಣವಾಗಿ ಸದೆ ಬಡಿಯುವುದು ಅಸಾಧ್ಯ ಎಂದು ತಿಳಿದುಕೊಂಡನು. ವಿಜಯನಗರದ ದಂಡಯಾತ್ರೆಯಿಂದ ಮರಳಿ ಬರುವಾಗ ಮಾರ್ಗದಲ್ಲಿ ಬೇಟೆಗೆ ಹೋಗಿ ಬಂದು ಬಿಡಾರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, ಹಿಂದೆ ಮಲ್ಲಯುದ್ಧದಲ್ಲಿ ಸೋತ ಮುಬಾರಕನ ಮಗ ಮಾಸೂದ್ ಖಾನನು ಇರಿದು ಕೊಂದನು. ಈ ಕೊಲೆಯಲ್ಲಿ ದಾವುದನ ಕೈವಾಡವಿತ್ತು. ಮೂರು ವರ್ಷಗಳ ಕ್ರಾಂತಿಕಾರಕ ಆಡಳಿತ ಅಂತಗೊಂಡಿತು.

೨.೪.೪. ಒಂದನೆಯ ದಾವೂದ್ ಶಹಾ (೧೬.೪.೧೩೭೮ ರಿಂದ ೨೧.೫.೧೩೭೮)

ಮುಜಾಹಿದನ್ ಕೊಲೆಯ ನಂತರ ದಾವೂದನು ತನ್ನಷ್ಟಕ್ಕೆ ತಾನೆ ಸುಲ್ತಾನನೆಂದು ೧೩೭೮ರಲ್ಲಿ ಘೋಷಿಸಿಕೊಂಡನು. ಹಿಂದಿನ ಸುಲ್ತಾನನ ಕೊಲೆಯ ಹಿನ್ನೆಲೆಯನ್ನು ತಿಳಿದುಕೊಂಡ ಸಾಮಂತರು ಸ್ವತಂತ್ರರಾಗಲು ಯತ್ನಿಸಿ, ಬಹಮನಿಯರಿಗೆ ನೀಡುವ ಕಪ್ಪು ಕಾಣಿಕೆಯನ್ನು ನಿಲ್ಲಿಸಿದರು. ವಿಜಯನಗರ ಎರಡನೆಯ ಹರಿಹರನು ಬಹಮನಿಯರನ್ನು ತನ್ನ ಗಡಿಯಿಂದ ಹೊರ ತಳ್ಳಿ, ತುಂಗಭದ್ರ ದಂಡೆಯ ಮೇಲೆ ಸಾರ್ವಭಮತ್ವ ಸ್ಥಾಪಿಸಿದ, ಅಲ್ಲದೆ ವಿಜಯನಗರ ಸೈನ್ಯ ರಾಯಚೂರ ಕೋಟೆ ಮುತ್ತಿತ್ತು. ರಾಜಧಾನಿ ಗುಲಬಗಾದಲ್ಲಿ ರಾಜಕಿಯ ಒಳಸಂಚು ಪಿತೂರಿ, ತಾಂಡವಾಡುತ್ತಿತ್ತು. ಅರಸು ಪರಿವಾರದಲ್ಲಿ ಎರಡು ಗುಂಪುಗಳಾದವು. ಒಂದು ದಾವೂದನನ್ನು ಬೆಂಬಲಿಸಿದರೆ, ಮತ್ತೊಂದು ಗುಂಪು ಮುಜಾಹಿನನ ಸಹೋದರಿ ರೂಹಾಪರಿವಾರದಘಾಗಳ ನೇತೃತ್ವದಲ್ಲಿ[೧೩೩] ದಾವುದನ ಸ್ಥಾನದಲ್ಲಿ ಕಿರಿಯ ಸಹೋದರ ಮೊಹಮ್ಮದನನ್ನು ತರಲು ಗುಂಪು ಪ್ರಯತ್ನಿಸಿತು. ಅದಕ್ಕೆ ಸೈಫೂದ್ದೀನ ಘೋರಿಯು ಸಮ್ಮತಿಸಿದ.

ಒಳಸಂಚುಗಾರರು ಪರವಾರಳ ರಾಜ ಸೇವಕನಾದ ಬಕಾನನ್ನು ಬಳಸಿಕೊಂಡು ದಾವುದನು ೨೧.೫.೧೩೭೮ರ ಶುಕ್ರವಾರ ಕೋಟೆಯ ಒಳಗಡೆಯ ದೊಡ್ಡ ಮಸೀದಿಯಲ್ಲಿ ಪ್ರಾರ್ಥನೆ ಮುಗಿಸಿಕೊಂಡು ಬರುವಾಗ ಬಕಾನು ಖಡ್ಗದಿಂದ ಇರಿದು ಕೊಂದನು. ಇದುವೆ ದೇವರ ನ್ಯಾಯ, ಪರವಾರಳ ಗುಂಪು ಈ ಒಳಸಂಚಿನಲ್ಲಿ ಯಶಸ್ವಿಯಾಯಿತು. ೩೫ ದಿನಗಳ ಇತನ ಆಳ್ವಿಕೆಯು ಕೊಲೆಯ ಮೂಲಕ ಅಂತ್ಯಗೊಂಡಿತು.

೨.೪.೫. ಎರಡನೆಯ ಮುಹಮ್ಮದ (೧೩೭೮-೧೩೯೭)

ಎರಡನೆಯ ಮುಹಮ್ಮದ ಶಹಾನು[೧೩೪] ದಾವುದನ ಕೊಲೆಯ ನಂತರ ಅಧಿಕಾರಕ್ಕೆ ಬಂದನು. ಪರವಾರ ಆಗಾಳ ಸಹಾಯದಿಂದ ಅಧಿಕಾರಕ್ಕೆ ಬಂದ, ಇತನು ಸೈಫುದ್ದೀನ ಘೋರಿಯನ್ನು ಸುಲ್ತಾನನ ಪ್ರಧಾನಿಯನ್ನಾಗಿ ನೇಮಿಸಿದಳು. ಇತನು ಅಧಿಕಾರಕ್ಕೆ ಬಂದಾಗಿನಿಂದ ಶಾಂತಿ ನೆಲೆಸಿತು. ಸುಸಂಸ್ಕೃತ ವ್ಯಕ್ತಿಯಾದ ಇತನು ಯುದ್ಧವನ್ನು ಅಂತ್ಯಗೊಳಿಸಿ ನೆರೆಯ ರಾಜ್ಯಗಳೊಂದಿಗೆ ಒಳ್ಳೆಯ ಸಂಬಂಧವನ್ನು ಮುಂದುವರೆಸಿದ. ಆದರೆ ರಾಜಕೀಯ ಸಂಘರ್ಷ ಅಂತ್ಯಗೊಳಿಸಲು ಸಾಧ್ಯವಾಗಲಿಲ್ಲ. ಇದರ ಲಾಭಪಡೆದ ವಿಜಯನಗರದ ಎರಡನೆಯ ಹರಿಹರನು ಬಹಮನಿಯ ಸೈನ್ಯವನ್ನು ಗೋವಾದಿಂದ ಹೊರಹಾಕಿದನು. ಆದೋನಿ, ತೆಲಂಗಾಣ ಮುಂತಾದ ಪ್ರದೇಶಗಳ ಮೇಲೆ ಪ್ರಭುತ್ವ ಸ್ಥಾಪಿಸಲು ಸಂಘರ್ಷ ಮುಂದುವರೆಯಿಸಿದರು. ಕ್ರಿ.ಶ. ೧೩೯೫ರ ರಂಗಿನಿ ಹೋರಾಟದಲ್ಲಿ ವಿಜಯನಗರ ಸೈನ್ಯ ಯಶಸ್ವಿ ಹೊಂದಿತು. ಇದೆ ಕಾಲಕ್ಕೆ ಹರಿಹರನು ಸ್ವಂತ ರಾಯಚೂರ ಮುತ್ತಿಗೆ ಹಾಕಿ ವಿಫಲನಾಗಿ ಸುಲ್ತಾನನಿಗೆ ಕಪ್ಪು ಕಾಣಿಕೆ ನೀಡಲು ಒಪ್ಪಿದ. ಇತನ ಕಾಲದಲ್ಲಿ ಕಲೆ ಮತ್ತು ಸಾಹಿತ್ಯ ಅಪಾರವಾಗಿ ಬೆಳವಣಿಗೆ ಹೊಂದಿತು. ಅರೇಬಿಕ ಮತ್ತು ಪರ್ಶಿಯನ ಬರಹಗಾರನಾದ ಇತನು ಹಲವು ಕಾವ್ಯಗಳನ್ನು ಬರೆದನು.

ಒಬ್ಬ ತತ್ವಜ್ಞಾನಿಯಾದ ಇತನು ಹಲವು ತತ್ವಜ್ಞಾನಿಗಳಿಗೆ ಆಶ್ರಯನೀಡಿದ. ಇತನಿಗೆ **'ದಕ್ಷಿಣದಅರಿಸ್ಟಾಟಲ್'** ಎಂದು ಕರೆಯುತ್ತಾರೆ. ಶ್ರೇಷ್ಠ ಕವಿ 'ಫೈಜುಲ್ಲಾ ಅಂಜು' ಇತನ ಆಸ್ಥಾನದ ಒಬ್ಬ ಶ್ರೇಷ್ಠ ಕವಿ. ಮಹಮ್ಮದನು ತನ್ನ ಪ್ರಜೆಗಳ ಅಭಿವೃದ್ಧಿಗಾಗಿ ಶ್ರಮಿಸಿದ. ನಗರ ಮತ್ತು ಹಳ್ಳಿಗಳ ಜನ ನೆಮ್ಮದಿಯಿಂದ ಇದ್ದರು. ಮಧ್ಯ ಮಾರಾಟ ಮತ್ತು ಕುಡಿತಕ್ಕೆ ನಿಷೇದಾಜ್ಞೆ ಜಾರಿಗೆ ತಂದನು. ಸ್ಥಳಿಯ ಅಧಿಕಾರಿಗಳ ವರದಿಯ ಪ್ರಕಾರ ಕೆಲವು ತೆರಿಗೆಗಳನ್ನು ರದ್ದುಗೊಳಿಸಿದ, ಬರಗಾಲದಲ್ಲಿ ಪುಕ್ಕಟೆಯಾಗಿ ಕಾಳುಗಳ ವಿತರಣೆ ಮಾಡಲು ಆಗ್ನೇ ಜಾರಿಗೊಳಿಸಿದ.

೨.೪.೬. ಎರಡನೆಯ ಶಂಸುದ್ದೀನ್ ದಾವೂದ್ (೧೪.೬.೧೩೯೭–೧೫.೧೧.೧೩೯೭)

ತಗಲ್‌ಚಿನನು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಎರಡನೆಯ ಶುಸುದ್ದೀನ ದಾವೂದನನ್ನು ಸುಲ್ತಾನನ್ನಾಗಿ ಮಾಡಿ ಆತನ ತಾಯಿಯು ರಕ್ಷಕಳಾಗಿ ನಿಂತಳು. ತಗಲ್‌ಚಿನನ ದುಷ್ಟಕೃತ್ಯಗಳಿಂದ ಬೆಸತ್ತ ನಿಷ್ಠಾವಂತ ಬಹಮನಿ ಅಧಿಕಾರಿಗಳು ಮತ್ತು ಸಂಬಂಧಿಗಳಾದ ಫಿರೋಜ ಮತ್ತು ಅಹಮ್ಮದರು ಆತನ ವಿರುದ್ದ ಚಟುವಟಿಕೆ ಆರಂಭಿಸಿದರು. ಇದನ್ನರಿತ ತಗಲ್‌ಚಿನನು ಸುಲ್ತಾನ ಮೇಲೆ ಒತ್ತಡತಂದು ರಾಜಮಾತೆಯಿಂದ ಇವರು ದ್ರೋಹಿಗಳು ಇವರನ್ನು ಬಂದನದಲ್ಲಿಡುವಂತೆ ಆಜ್ಞೆ ಹೊರಡಿಸಿದನು. ರಾಜಮಾತೆಯ ಆದೇಶ ಬರುತ್ತಿದ್ದಂತೆ ಇಬ್ಬರು ಸಹೋದರರು ಸಾಗರಕ್ಕೆ ಓಡಿದರು. ತಗಲ್‌ಚಿನನ ವಿರುದ್ಧ ಒಂದು ವಿಶೇಷ ಪಡೆಕಟ್ಟಿ ಗುಲಬರ್ಗಾದ ಮೇಲೆ ದಾಳಿ ಮಾಡಿದರು. ಆಗ ಸ್ಥಳಿಯರು ಸಹಾಯ ಮಾಡಲಿಲ್ಲ. ಇಬ್ಬರು ಸಹೋದರರು ಸೋತು ಮತ್ತೆ ಸಾಗರಕ್ಕೆ ಓಡಿದರು.

ಮುಂದಿನ ದಿನಗಳಲ್ಲಿ ಇಬ್ಬರು ಸಹೋದರರು ಮೈತ್ರಿಮಾರ್ಗವನ್ನು ಅನುಸರಿಸಿ. ರಾಜಮಾತೆಯಲ್ಲಿ ಕ್ಷಮೆ ಬೇಡಿ ಮತ್ತೆ ಗುಲಬರ್ಗಾಕ್ಕೆ ಬಂದು ಜೀವನ ಆರಂಭಿಸಿದರು. ಇಲ್ಲಿ ತಗಲ್‌ಚಿನನ ವಿರುದ್ಧ ಒಂದು ಒಳಸಂಚು ಪಡೆ ರೂಪಗೊಂಡಿತ್ತು. ಅದರಲ್ಲಿ ಸೇರಿದ ಸಹೋದರರು ಒಂದು ದಿನ ೩೦೦ ಜನರೊಂದಿಗೆ ದರ್ಬಾರಿಗೆ ಹೋಗಿ ತಗಲ್‌ಚಿನನ್ನು ಸಂಹರಿಸಿದರು. ಸುಲ್ತಾನ ಶಂಸುದ್ದೀನನನ್ನು ಸೆರೆಹಿಡಿದು ಕಣ್ಣುಗಳನ್ನು ಕಿಳಿಸಿದರು, ತಾನು ತಾಯಿಯೊಂದಿಗೆ ಮಕ್ಕಾಗೆ ಹೋಗುತ್ತೇನೆಂದು ವಿನಂತಿಸಿಕೊಂಡಾಗ ಆತನಿಗೆ ಅವಕಾಶ ನೀಡಲಾಯಿತು. ಇತನ ಆಳ್ವಿಕೆಯು ಕೇವಲ ಐದು ತಿಂಗಳಲ್ಲಿ ಅಂತ್ಯಗೊಂಡಿತು. ಶಂಸುದ್ದೀನನು ೧೪೧೪ರಲ್ಲಿ ಮದಿನಾದಲ್ಲಿ ನಿಧನ ಹೊಂದಿದ.[೧೩೫] ಕಲೆ ವಾಸ್ತು ಶಿಲ್ಪದಲ್ಲಿ ಆಸಕ್ತಿಯುಳ್ಳ ಸುಲ್ತಾನನು ಗುಲಬರ್ಗಾ, ಬೀದರ, ಕಂದಹಾರ, ಐಲಚಿಪುರ, ದೌಲತಾಬಾದ, ಚೌಲ ಮತ್ತು ಮುಂತಾದ ದೊಡ್ಡ ಪಟ್ಟಣಗಳಲ್ಲಿ ಹಲವು ಕಟ್ಟಡಗಳನ್ನು ನಿರ್ಮಿಸಿದನು. ಬಡವರು, ಅನಾಥರು ಅಂಧರ ಮತ್ತು ನಿರ್ಗತಿಕರಿಗೆ ಮುಕ್ತಿ ಹಸ್ತದಿಂದ ಸಹಾಯ ಸಹಕಾರ ಮಾಡುತ್ತಿದ್ದ.[೧೩೬]

[illegible]

ಹಲವು ವರ್ಷಗಳ ಕಾಲ ಮಹಮ್ಮದನಿಗೆ ಮಕ್ಕಳಾಗಲಿಲ್ಲ. ಆದ್ದರಿಂದ ಆತನು ತನ್ನ ಸಹೋದರಳಿಯ ಮತ್ತು ಮುಂದೆ ಅಳಿಯನು ಆದ ಫಿರೋಜ್‌ನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಿಸಿದ.[೧೩೭] ಆದರೆ ಮುಂದೆ ಮಹಮ್ಮದನಿಗೆ ಘಿಯಾಸುದ್ದೀನ ಮತ್ತು ಶಂಸುದ್ದೀನ್ ಎಂಬ ಇಬ್ಬರು ಗಂಡು ಮಕ್ಕಳು ಜನಿಸಿದರು. ಆದ್ದರಿಂದ ಹಿಂದೆ ಮಾಡಿದ ವ್ಯವಸ್ಥೆಯ ರದ್ದಾಯಿತು. ಇತನ ಆಳ್ವಿಕೆಯು ೧೯ ವರ್ಷ, ೯ ತಿಂಗಳು ಮತ್ತು ೨೪ ದಿನಗಳ ನಂತರ ಅಂತ್ಯಗೊಂಡು ಕ್ರಿ.ಶ. ೧೩೯೭ ಎಪ್ರಿಲ್ ೨೦ ರಂದು ನಿಧನ ಹೊಂದಿದ.೩ ಇದಕ್ಕಿಂತ ಒಂದು ದಿನ ಮುಂಚೆ ಮಲಿಕ್ ಸೈಫುದ್ದೀನ್ ಘೋರಿಯು ನಿಧನ ಹೊಂದಿದ್ದ.[೧೩೮] ಮೊದಲನೆಯ ಸುಲ್ತಾನನಿಂದ ಇಲ್ಲಿಯವರೆಗೆ ಸುಮಾರು ಅರ್ಧ ಶತಕದವರೆಗೆ ಪ್ರಧಾನಿಯಾಗಿದ್ದು, ಅಪಾರ ಸೇವೆಯನ್ನು ಸಲ್ಲಿಸಿದ ದೌಲತಾಬಾದನಿಂದ ರಾಜ್ಯಧಾನಿಯನ್ನು ಗುಲಬರ್ಗಾಕ್ಕೆ ವರ್ಗಾಯಿಸಿ ಅದರ ಸಂರಕ್ಷನಾಗಿ ಕಾರ್ಯನಿರ್ವಹಿಸಿದ. ಇತನು ತನ್ನ ೧೦೭ನೇ ವಯಸ್ಸಿನಲ್ಲಿ ಮರಣ ಹೊಂದಿದ.[೧೩೯]

೨.೪.೭. ಘಿಯಾಸುದ್ದೀನ್ ತಹಂತನ್ (೨೦.೪.೧೩೯೭ ರಿಂದ ೧೪.೬.೧೩೮೭)

ಮಹಮ್ಮದ ಶಹಾನ ಹಿರಿಯ ಮಗ ಘಿಯಾಸುದ್ದೀನನು ತಂದೆಯ ನಿಧನದ ನಂತರ ತನ್ನ ೧೭ನೆಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದನು.[೧೪೦] ಎಲ್ಲಾ ಹಿರಿಯ ಕಿರಿಯ ಅಧಿಕಾರಿಗಳನ್ನು, ಸಾಮಂತರನ್ನು ಸಂಬಂಧಿಗಳನ್ನು ತನ್ನ ವಿಶ್ವಾಸಕ್ಕೆ ತೆಗೆದುಕೊಂಡು ಮೆಚ್ಚುಗೆಯನ್ನು ಪಡೆದನು. ಇತನ ತಂದೆಯ ಅನುಯಾಯಿಗಳು ಎಲ್ಲರು ಇತನನ್ನು ಬೆಂಬಲಿಸಿದರು. ಅದರಲ್ಲಿ ಈಗಾಗಲೆ ಸುಲ್ತಾನ ಪದವಿಗೆ ನಿಯುಕ್ತನಾದ ಫಿರೋಜ ಮತ್ತು ಆತನ ಸಹೋದರ ಅಹಮದನು ಆತನನ್ನು ಬೆಂಬಲಿಸಿದರು.

ಇತನ ಕಾಲದಲ್ಲಿ ಪರ್ಶಿಯಾದಿಂದ ಬಂದವರಿಗೆ ಗುಲಬರ್ಗಾದಲ್ಲಿ ಉನ್ನತ ಹುದ್ದೆಗಳನ್ನು ನೀಡಿದ, ಇದು ಸ್ಥಳಿಯರಿಗೆ ತೃಪ್ತಿದಾಯಕವಾಗಿರಲಿಲ್ಲ. ಅದರಲ್ಲಿ ಸ್ಥಳಿಯ ಕುಲಿನ ವರ್ಗದ ವ್ಯಕ್ತಿ 'ತಗಲ್‌ಚಿನ್' ತಾನು ಘೋರಿಯ ನಂತರ ಪ್ರಧಾನಿಯಾಗುವ ಕನಸು ಕಾಣುತ್ತಿದ್ದ, ಈ ಅವಕಾಶ ತಪ್ಪಿದಾಗ ಸುಲ್ತಾನನಿಗೆ ತನ್ನ ಸುಂದರ ಮಗಳ ಆಸೆ ಹಚ್ಚಿ ಮೊಸದ ಬಲೆಗೆ ಹಾಕಿ ಅಧಿಕಾರ ಕಳೆದುಕೊಳ್ಳುವ ಹಾಗೆ ಮಾಡಿದ. ಒಂದು ಕುಟಿಲೋಪಾಯದಲ್ಲಿ ಆತನನ್ನು ಅವಮಾನಿತನನ್ನಾಗಿ ಮಾಡಿ, ಸೆರೆ ಹಿಡಿದು ಸಾಗರದ ಕೋಟೆಯಲ್ಲಿ ಇರಿಸಿದ. ಆತನ ಕಣ್ಣುಗಳನ್ನು ಕಿಳಿಸಿ, ಅಪಾರ ಕಷ್ಟವನ್ನು ನೀಡಿ ಬಂದನದಲ್ಲೆ ೯ನೇ ಜೂನ್ ೧೩೯೭ರಲ್ಲಿ ಸುಲ್ತಾನನು ಸಾವನ್ನಪ್ಪಿದ. ಇತನು ಕೇವಲ ಒಂದು ತಿಂಗಳ ೨೦ ದಿನ ಮಾತ್ರ ಆಳ್ವಿಕೆ ಮಾಡಿದ.[೧೪೧]

೨.೪.೮. ೨ನೆಯ ಶಂಸುದ್ದೀನ್ ದಾವೂದ್ ೧೪.೬.೧೩೯೭ ರಿಂದ ೧೫.೧೧.೧೩೯೭

ಶಂಸುದ್ದೀನನು ತನ್ನ ೧೫ನೆಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದನು. ಇದೇ ಕಾಲಕ್ಕೆ ಜಗಲ್‌ಚಿನ್‌ನು ಪ್ರಧಾನಿಯಾಗಿ ಕಾರ್ಯ ಆರಂಭಿಸಿದ.[೧೪೨] ಬಹಮನಿ ಸಾಮ್ರಾಜ್ಯದ ವಾರಸುಧಾರನಾಗಿ

ಆಯ್ಕೆಯಾದ ಫಿರೋಜನು ಹಿಂದಿನ ಒಪ್ಪಂದ ಬಿಟ್ಟು ತಾನು ಹೊಸ ದೊರೆಗೆ ನಿಷ್ಠನಾಗಿದ್ದ. ಇದನ್ನು ತಿಳಿದುಕೊಂಡು ಪ್ರಧಾನಿ ಜಗಲ್‌ಚಿನನು ಫಿರೋಜಶಹಾನಿಂದ ತನಗೆ ಆಗಬಹುದಾದ ತೊಂದರೆಗಳನ್ನು ಅರಿತುಕೊಂಡು ಇಬ್ಬರು ಸಹೋದರರನ್ನು ಸೆರೆ ಮನೆಗೆ ತಳ್ಳಬೇಕೆಂದು ಶಂಸುದ್ದೀನನ ಮೇಲೆ ಒತ್ತಡ ತಂದನು. ಸುಲ್ತಾನನ ವಿಧವೆ ತಾಯಿ ಮಖ್ದುಂ-ಎ-ಜಹಾನಳ ಮನ ಒಲಿಸಲು ಯತ್ನಿಸಿ, ಇಬ್ಬರು ಸಹೋದರರಿಗೆ ಮರಣದಂಡನೆ ವಿಧಿಸಬೇಕೆಂದು ಒತ್ತಡ ತಂದನು. ಈ ರಹಸ್ಯವನ್ನು ಅರಿತ ಫಿರೋಜ ಮತ್ತು ಆತನ ಸಹೋದರ ಅಹಮ್ಮದನು ಅಲ್ಲಿಂದ ತಲೆಮರೆಸಿಕೊಂಡು ಸಾಗರಕ್ಕೆ ಹೋದರು. ಅಲ್ಲಿಂದಲೆ ಜಗಲ್‌ಚಿನ್‌ನನ್ನು ತೆಗೆದು ಹಾಕಲು ಪ್ರಯತ್ನಿಸಿ ವಿಫಲರಾದರು. ನಂತರ ತಮ್ಮ ನೇತೃತ್ವದಲ್ಲಿ ಒಂದು ಸೈನ್ಯ ಕಟ್ಟಿಕೊಂಡು ಗುಲಬರ್ಗಾಕ್ಕೆ ಸಮೀಪದ **'ಮರತುರ'** ಬಳಿ ಯುದ್ಧ ಮಾಡಿದರು. ಇದನ್ನು ಮಕಿರಲ್ ಯುದ್ಧ ಅಥವಾ ಮರತೂರ ಯುದ್ದ ಎಂದು ಕರೆಯುತ್ತಾರೆ.[೧೪೩] ಯುದ್ಧದಲ್ಲಿ ಜಗಲ್‌ಚಿನನಿಂದ ಅಸಮಾಧನಗೊಂಡ ಜನರು ತಮಗೆ ಸಹಕರಿಸುತ್ತಾರೆ ಎಂದು ತಿಳಿದು ಹೋರಾಟ ಮಾಡಿದರು. ಆದರೆ ಯಾರ ಸಹಾಯ-ಸಹಕಾರ ದೊರೆಯದೆ ಇದ್ದರಿಂದ ಅನಿವಾರ್ಯವಾಗಿ ಶಹಾ ಸಹೋದರರು ವಿಫಲರಾಗಿ ಮತ್ತೆ ಸಾಗರಕ್ಕೆ ಓಡಿದರು.

ಕೆಲ ತಿಂಗಳ ನಂತರ ಸಹೋದರರು ಸುಲ್ತಾನನೊಂದಿಗೆ ಒಪ್ಪಂದಕ್ಕೆ ಮುಂದಾಗಿ, ತಮ್ಮ ಅಪರಾಧಕ್ಕೆ ಮನ್ನಿಸಬೇಕೆಂದು ಮತ್ತು ತಮಗೆ ಗುಲಬರ್ಗಾದಲ್ಲಿ ನೆಲೆ ನಿಲ್ಲಲು ಅವಕಾಶ ನೀಡಬೇಕೆಂದು ಕೋರಿದರು. ಇಬ್ಬರ ನಡುವೆ ಒಂದು ಒಪ್ಪಂದ ಏರ್ಪಟ್ಟಿತು ಇದರಿಂದ ಫಿರೋಜ್‌ಶಹಾ ಮತ್ತು ಆತನ ಸಹೋದರನಿಗೆ ಭದ್ರತೆ ದೊರೆಯಿತು.

ಗುಲಬರ್ಗಾಕ್ಕೆ ಬಂದು ಜೀವನ ಆರಂಭಿಸಿದ ಸಹೋದರರು ಕೆಲ ದಿನಗಳ ನಂತರ ಫಿರೋಜನ ಹೆಂಡತಿಗೆ ರಾಜಮಾತೆಯು ಒಂದು ಸಂದರ್ಭದಲ್ಲಿ ಅವಮಾನ ಮಾಡಿದರು. ಇದರಲ್ಲಿ ತಗಲ್‌ಚಿನನ ಕೈವಾಡವಿತ್ತು. ಇದರ ವಿವರಣೆ ಪಡೆಯಲು ಫಿರೋಜನು ೧೨ ಜನರೊಂದಿಗೆ ಗುಲಬರ್ಗಾ ದರ್ಬಾರಕ್ಕೆ ಹೋದನು. ಅದಕ್ಕೆ ಮುಂಚೆ ತನ್ನ ರಕ್ಷಣೆಯ ವ್ಯವಸ್ಥೆಗಾಗಿ ಮೂರು ನೂರು ಜನ ಶಸ್ತ್ರಾಸ್ತ್ರ ಪಡೆಯನ್ನು ತಯ್ಯಾರಿಸಿಕೊಂಡು ಅವರಿಗೆ ನಂತರ ಬರಲು ಸೂಚಿಸಿದ. ದರ್ಬಾರದ ಹೊರಗಡೆ ಅಹಮ್ಮದಖಾನನಿಗೂ ಮತ್ತು ಕಾವಲುಗಾರರಿಗೂ ಹೋರಾಟ ಆರಂಭವಾಯಿತು. ತಗಲ್‌ಚಿನ್ನನ ಮಗನನ್ನು ಕೊಲೆಗೈದು ಅಹಮದನು ದರ್ಬಾರ ಪ್ರವೇಶಿಸಿದ. ದರ್ಬಾರಿನ ಒಳಗಡೆ ಎಲ್ಲವು ಅವ್ಯವಸ್ಥೆಯಿಂದ ಕೂಡಿತ್ತು. ಒಳಗಡೆ ಸುಲ್ತಾನನಿಗೂ ಅಧಿಕಾರಿಗಳಿಗೂ ವಾದವಿವಾದ ಆರಂಭವಾಯಿತು. ಶಂಸುದ್ದೀನ್‌ನು ಅರಮನೆಯಲ್ಲಿ ಓಡಿದ, ಅದೆ ಕ್ಷಣದಲ್ಲಿ ಫಿರೋಜನು ಸಿಂಹಾಸನವನ್ನು ಏರಿದ, ಸುಲ್ತಾನ ಮತ್ತು ತಗಲ್‌ಚಿನನನ್ನ ಬಂಧಿಸಲು ಆಜ್ಞೆ ಹೊರಡಿಸಿದ. ಬಂಧನಕ್ಕೆ ವಿರೋದಿಸಿ ಹೋರಾಟ ಆರಂಭಿಸಿದ ಪ್ರಧಾನಿಯನ್ನು ಫಿರೋಜ ಶಹಾನ ಸೈನಿಕರು ಹತ್ಯೆ ಮಾಡಿದರು. ಸುಲ್ತಾನನು ಈ ಹೋರಾಟದಲ್ಲಿ

[illegible]

ಕಣ್ಣುಗಳನ್ನು ಕಳೆದುಕೊಂಡನು ಸುಲ್ತಾನನು ಮತ್ತು ರಾಜಮಾತೆಯರ ವಿನಂತಿಯ ಮೇರೆಗೆ ಅವರನ್ನು ಮಕ್ಕಾಯಾತ್ರೆಗೆ ಕಳುಹಿಸಲಾಯಿತು. ರಾಜಮಾತೆಗೆ ೫೦೦ ಬಂಗಾರದ ನಾಣ್ಯಗಳ ವರ್ಷಾಶನ ನೀಡಲಾಯಿತು. ಶಂಸುದ್ದೀನನು ಮಕ್ಕಾದಲ್ಲಿ ೧೫.೧೧.೧೩೯೭ರಲ್ಲಿ ನಿಧನ ಹೊಂದಿದನೆಂದು ಫೇರಿಸ್ತಾ ವಿವರಿಸಿದ್ದಾನೆ.[೧೪೪] ಭಾರತದಲ್ಲಿ ಮುಸ್ಲಿಂರ ಸಂಖ್ಯೆ ಕಡಿಮೆ ಇರುವುದರಿಂದ ಗುಲಾಮರು ಸಹ ಅಧಿಕಾರಕ್ಕೆ ಬರುವ ಸಾಧ್ಯತೆಗಳಿದ್ದವು. ಆದ್ದರಿಂದ ಫಿರೋಜನು ಸಂಬಂಧಿಯಾದರಿಂದ ಇತನು ಸೂಕ್ತ ವ್ಯಕ್ತಿಯಾಗಿದ್ದನು.[೧೪೫]

೨.೪.೯. ತಾಜುದ್ದೀನ ಫಿರೋಜ್ ಶಹಾ (೧೩೯೭-೧೪೨೨):

ತಾಜುದ್ದೀನ್ ಫಿರೋಜ ೧೬.೧೧.೧೩೯೭ರಲ್ಲಿ ಅಧಿಕಾರಕ್ಕೆ ಬಂದನು.[೧೪೬] ಬಹಮನಿ ಸುಲ್ತಾನನಲ್ಲಿ ಇವನು ಒಬ್ಬ ಅತ್ಯುತ್ತಮ ದೊರೆ. ಭಾರತದ ಶ್ರೇಷ್ಠ ದೊರೆಗಳ ಸಾಲಿನಲ್ಲಿ ಸೇರಲು ಇತನಿಗೆ ಎಲ್ಲಾ ಅರ್ಹತೆಗಳಿದ್ದವು. ಸಾಮ್ರಾಜ್ಯ ವಿಸ್ತಾರ, ಸ್ಥಾನ ಭದ್ರತೆ ಮತ್ತು ಶಾಂತಿಯುತ ಆಡಳಿತಗಾರನಾದ ಇತನು ಕಾಲದಲ್ಲಿ ಬಹಮನಿ ಸಾಮ್ರಾಜ್ಯವು ಅತ್ಯುನ್ನತ ಸ್ಥಾನ ತಲುಪಿತು.

ಬರಹಾನ್-ಇ-ಮಾಸಿಕ ಕೃತಿಯಲ್ಲಿ ಫಿರೋಜ್‌ನನ್ನು ಕುರಿತು ಈ ರೀತಿ ಹೇಳಲಾಗಿದೆ: "ಫಿರೋಜ್‌ನು ಘನವಂತ ಅರಸ, ತನ್ನ ಖಡ್ಗಬಲದಿಂದ ರಾಜ್ಯವಿಸ್ತರಿಸಿ, ಬುದ್ದಿ ಮತ್ತೆಯಿಂದ ರಾಜ್ಯ ಅಭಿವೃದ್ಧಿಗೊಳಿಸಿ ತನ್ನ ಆಸ್ಥಾನದಲ್ಲಿ ವಿದ್ಯಾವಂತರಿಗೆ, ಪಂಡಿತರಿಗೆ ಅವಕಾಶ ನೀಡಿದ" ತುರುಖಿರಾತ್ ಉಲ್ ಮುಲ್ಕ ಕೃತಿಯಲ್ಲಿ ಸುಲ್ತಾನ ಫಿರೋಜನು ಒಳ್ಳೆಯ ವ್ಯಕ್ತಿ, ವಿದ್ಯಾವಂತ ದೊರೆ. ಇತನು ಕುರಾನಿನ ವಾಕ್ಯಗಳನ್ನು ಬರೆದು ಮಾರಾಟ ಮಾಡಿದ ಬಂದ ಹಣದಿಂದ ಜೀವನ ನಡೆಯಿಸುತ್ತಿದ್ದ. ಇತನ ರಾಣಿಯರು ಅರಮನೆಯಲ್ಲಿ ಬಟ್ಟೆ ಕಸೂತಿ ಮಾಡುತ್ತಿದ್ದರು. ಫಿರೋಜ ಶಹನು ಯುದ್ಧ ಮತ್ತು ಶಾಂತಿಯಲ್ಲಿ ಚತುರ. ಯುದ್ಧ ಭೂಮಿಯಲ್ಲಿ ಚತುರ ನೀತಿಗಳನ್ನು ಏರ್ಪಡಿಸಿ ಗೆಲುವು ಸಾಧಿಸುತ್ತಿದ್ದ. ಇತನ ಕಾಲದಲ್ಲಿ ವಿಜಯ ನಗರದ ರಾಯರೊಂದಿಗೆ ನಿರಂತರ ಸಂಘರ್ಷ ಮುಂದುವರೆಯಿತು.[೧೪೭] ಕ್ರಿ.ಶ. ೧೩೯೮ರಲ್ಲಿ ಸ್ಥಳೀಯ ಸಾಗರದ ಜಮೀನ್ದಾರ ಮತ್ತು ಖೇರ್ಲಾದ ಸಾಮಂತರ ದಂಗೆ ಎದ್ದರು, ಇದರ ಹಿಂದೆ ರಾಯನ ಕೈವಾಡವಿದೆ ಎಂದು ಶಂಕಿಸಿದ ಸುಲ್ತಾನನು ಅವರ ವೈರಿ ಬೈರೋನ್‌ಸಿಂಗ್‌ನಿಗೆ ಬೆಂಬಲಿಸಲು ಆರಂಭಿಸಿದರು.

ಈ ಕಾರಣದಿಂದ ಬುಕ್ಕನು ಪ್ರಬಲ ಸೈನ್ಯದೊಂದಿಗೆ ಯುದ್ಧಕ್ಕೆ ಸಿದ್ಧನಾಗಿ ಹೊರಟ ಎರಡು ಪಡೆಗಳು ಮುದಗಲ್ ಮತ್ತು ರಾಯಚೂರಗಳಲ್ಲಿ ಪರಸ್ಪರ ಸ್ಪಂದಿಸಿದವು. ಬಹಮನಿ ಸೈನ್ಯಕ್ಕೆ ಅಪಾರ ಹಾನಿ ಸಂಭವಿಸಿತು. ಮಳೆಯ ಆರಂಭದಿಂದ ಎರಡು ಪಡೆಗಳು ಕಷ್ಟ-ನಷ್ಟ ಅನುಭವಿಸಿದವು. ಕೃಷ್ಣ ನದಿಯ ಪ್ರವಾಹದಿಂದ ಎರಡು ಪಕ್ಷಗಳು ತೊಂದರೆ ಅನುಭವಿಸಿದವು. ಫಿರೋಜನ ದಂಡನಾಯಕ ಖಾಜೀಸಿರಾಜ್ ೫೦೦ ಅಶ್ವಾರೋಹಿಗಳೊಂದಿಗೆ ರಾತ್ರಿಯಲ್ಲಿ ವಿಜಯನಗರದ ಸೇನೆಯ ಮೇಲೆ ದಾಳಿ

[illegible]

ಮಾಡಿ, ಶಿಬಿರದ ಮೇಲ್ವಿಚಾರಕನನ್ನು ಕೊಂದು, ಅರಣ್ಯದಲ್ಲಿ ತೆಲೆಮರೆಸಿಕೊಂಡನು. ಇದರಿಂದ ಉತ್ತೇಜಿತರಾದ ಬಹಮನಿ ಸೈನ್ಯ ವಿಜಯನಗರದ ರಾಜ್ಯಧಾನಿಯವರೆಗೆ ಬೆನ್ನಟಿತು. ಅನಿವಾರ್ಯವಾಗಿ ರಾಯಹರಿಹರನು ಒಪ್ಪಂದಕ್ಕೆ ಮುಂದಾದನು. ಈ ಒಪ್ಪಂದದ ಪ್ರಕಾರ ರಾಯನು ಫಿರೋಜ್ ಶಹಾನಿಗೆ ಹತ್ತು ಲಕ್ಷ ಹಣ ನೀಡಬೇಕು, ಹಾಗೂ ಯುದ್ಧ ಕೈದಿಗಳನನ್ನು ಬಿಡಗಡೆ ಮಾಡುವುದಾಗಿತ್ತು.[೧೪೮] ಇದರಿಂದ ಎರಡು ರಾಜ್ಯಗಳ ನಡುವಿನ ಸಂಘರ್ಷ ನಿಂತಿತು. ವಿಜಯನಗರದಿಂದ ಮರಳಿದ ಸುಲ್ತಾನನು ಭೀಮಾ ನದಿ ತೀರದ ಮೇಲೆ ಕೆಲ ಕಾಲ ತಂಗಿದನು. ಈ ಸ್ಥಳ ಆತನಿಗೆ ಅತ್ಯಂತ ಸೂಕ್ತವೆನಿಸಿತು. ಆದ್ದರಿಂದ ಮುಂದಿನ ದಿನಗಳಲ್ಲಿ ತನ್ನ ರಾಜ್ಯಧಾನಿಯನ್ನು ಇಲ್ಲಿಗೆ ಸ್ಥಳಾಂತರಿಸಲು ಯೋಚಿಸಿ, ಅಲ್ಲಿ ಅವಶ್ಯವಿರುವ ಎಲ್ಲಾ ಕಟ್ಟಡಗಳನ್ನು ಕಟ್ಟಲು ಆರಂಭಿಸಿದ. ಮುಂದಿನ ೮-೧೦ ವರ್ಷಗಳಲ್ಲಿ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿ **'ಫಿರೋಜಾಬಾದ'** ಎಂದು ನಾಮಕರಣ ಮಾಡಿದೆ.[೧೪೯]

ಕ್ರಿ.ಶ. ೧೩೯೯ರಲ್ಲಿ ಫಿರೋಜ್‌ನು ಖೇರ್ಲಾದ ನರಸಿಂಗರಾಯನ ವಿರುದ್ಧ ದಂಡಯಾತ್ರೆ ಆರಂಭಿಸಿದ.[೧೫೦] ಇದಕ್ಕೆ ಕಾರಣ ಆತನಿಂದ ಕಪ್ಪು ಕಾಣಿಕೆಯನ್ನು ಪಡೆದು ತನಗೆ ನಿಷ್ಠೆಯಿಂದ ಇರುವಂತೆ ಮಾಡುವುದಾಗಿತ್ತು. ಈ ಯುದ್ಧದಲ್ಲಿ ಬಹಮನಿ ಪಡೆಯ ಶ್ರೇಷ್ಠ ಹೋರಾಟಗಾರರಾದ ರುಸ್ತುಂಖಾನ, ಬಹಾದೂರಖಾನ್, ದಿಲಾವರ್‌ಖಾನ ಮುಂತಾದ ನಾಯಕರು ಹತರಾದರು. ಆದರೆ ಕೊನೆಯ ಹಂತಲ್ಲಿ ಗೆಲುವು ಬಹಮನಿಯ ಸೈನ್ಯ ಗೆಲುವು ಸಾಧಿಸಿತು. ಎರಡು ತಿಂಗಳ ಹೋರಾಟದಲ್ಲಿ ಅಪಾರ ಹಾನಿಯೊಂದಿಗೆ ಖೇರ್ಲಾದ ನರಸಿಂಗ ರಾಯನು ಸೋತು ಒಪ್ಪಂದಕ್ಕೆ ಮುಂದಾದನು - ಒಪ್ಪಂದದ ಪ್ರಕಾರ ಯುದ್ಧ ನಷ್ಟದ ಬದಲಿಗೆ ೪೦ ಆನೆಗಳು, ಐದು ಮಣ ಬಂಗಾರ ೧೦ ಮಣ ಬೆಳ್ಳಿ ಕೊಡಲು ಸೂಚಿಸಲಾಯಿತು. ಖೇರ್ಲಾದ ಅರಸನಿಗೆ ಅವಮಾನಿತನನ್ನಾಗಿ ಮಾಡದೆ ಆತನಿಗೆ ಹಿಂದಿನ ಸ್ಥಾನಮಾನಗಳನ್ನು ಮರಳಿ ನೀಡಲಾಯಿತು.

ಮೂರನೆಯದಾಗಿ ಫಿರೋಜನು ತನ್ನ ಸೈನ್ಯವನ್ನು ತೆಲಂಗಾಣದ ಮೇಲೆ ಸಾಗಿಸಿದ, ಇಲ್ಲಿಯ ವೆಲ್ಲಮರು ಬಹಮನಿಯರ ಪಕ್ಷದಲ್ಲಿದ್ದರೆ, ವೇಮರು ವಿಜಯ ನಗರದ ಪರವಾಗಿದ್ದರು. ಕಾಟಿಯವೆಮ್ಮನ ಕಾಲದಲ್ಲಿ ಹರಿಹರನೊಂದಿಗೆ ಒಳ್ಳೆಯ ಸಂಬಂಧವಿತ್ತು. ಇದರಿಂದ ಕ್ರೋದಗೊಂಡ ಬಹಮನಿಯರು ಈ ಮೈತ್ರಿಯನ್ನು ಮುರಿಯಲು ಫಿರೋಜ್‌ನು ದಂಡೆಯಾತ್ರೆ ಆರಂಭಿಸಿದರು. ರಾಜಮಂಡ್ರಿಯ ಕೋಟೆಯನ್ನು ಮುತ್ತಿ ಅದನ್ನು ವಶಪಡಿಸಿಕೊಂಡನು. ಮುಂದಿನ ಹೋರಾಟದಲ್ಲಿ ತೆಲಂಗಾಣದ ಪ್ರಾಂತಗಳು ಗೆಲ್ಲಲು ಸಾಧ್ಯವಾಗದೆ, ಫಿರೋಜನು ಗುಲಬರ್ಗಾಕ್ಕೆ ಹಿಂದುರಿಗಿದ.

ಫಿರೋಜ್‌ನ ಕಾಲದ ಪ್ರಮುಖ ಸಾಧನೆಯೆಂದರೆ ಭಾರತವನ್ನು ತೈಮೂರಿನ ದಾಳಿಯಿಂದ ರಕ್ಷಿಸಿರುವುದು. ಸಮರಖಂಡದ ತೈಮುರನು ದೆಹಲಿಯ ಮೇಲೆ ದಾಳಿ ಮಾಡುವ ವಿಷಯ ತಿಳಿದ ಸುಲ್ತಾನನು ಆತನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಅಮೂಲ್ಯವಾದ ಕಾಣಿಕೆಯೊಂದಿಗೆ ಕಳುಹಿಸಿದ.

[illegible]

ಒಂದು ವೇಳೆ ಈ ಸುದ್ದಿ ನಿಜವಾದರೆ ಸುಲ್ತಾನನು ತಾನೆ ದೆಹಲಿಗೆ ಬಂದು ಆತನನ್ನು ಸ್ವಾಗತಿಸುವುದಕ್ಕೆ ಹೇಳಿದ. ಇದರಿಂದ ಸಂತೋಷ ಭರಿತನಾದ ತೈಮೂರನು ಒಂದು ಆದೇಶ ಹೊರಡಿಸಿದ (ಫರಮಾನ) "ಫಿರೋಜನು ನನ್ನ ಸ್ವಂತ ಮಗ"[೧೫೧] ಇತನು ರಾಜತ್ವದ ಎಲ್ಲಾ ಬಿರುದು ಹೊಂದಬಹುದು ದಕ್ಷಿಣ ಭಾರತದ ಒಡೆಯನೆಂದು ಸಾರಿದ. ಇದರಿಂದ ಭಾರತದಲ್ಲಿ ಬಹಮನಿ ಸುಲ್ತಾನನ ಕೀರ್ತಿ ಹೆಚ್ಚಿತು. ಈ ವಿಷಯ ಭಾರತ ತಮ್ಮ ವಿರೋಧಿಗಳಿಗೆ ತಿಳಿಸಿರುವುದರಿಂದ ಫಿರೋಜನ ಕೀರ್ತಿ ಮತ್ತಷ್ಟು ಹೆಚ್ಚಿತು. ಈ ವಿಷಯ ವಿಜಯನಗರದ ರಾಯರಿಗೂ ಉದ್ದೇಶ ಪೂರ್ವಕವಾಗಿ ತಿಳಿಸಿದರು.

ದಕ್ಷಿಣದ ಮತ್ತು ಉತ್ತರ ಭಾರತದ ಅರಸರಿಗೆ ಬಹಮನಿಯರ ಸಾಮರ್ಥ್ಯ ಕೇವಲ ಗುಲಬರ್ಗಾಕ್ಕೆ ಸೀಮಿತವಾಗಿಲ್ಲ, ಸಮರಖಂಡದವರೆಗೆ ಅವರ ಪ್ರಭಾವವಿದೆ ಎಂದು ತಿಳಿದು ಬರುತ್ತದೆ. ಮುಂಗೋಪಿಯಾದ ತೈಮೂರನು ಭಾರತವನ್ನು ಪ್ರವೇಶಿಸಿದರೆ ಅದರಿಂದ ತುಂಬಾ ಹಾನಿ ಸಂಭವಿಸುತ್ತಿತ್ತು. ಇದನ್ನು ಅರಿತ ಫಿರೋಜ್‌ನು ಮುಂದಾಲೋಚನೆಯಿಂದ ಈ ಕ್ರಮ ಕೈಗೊಂಡನು. ಆತನ ಆದೇಶದಿಂದ ಮಾಳವ ಮತ್ತು ಗುಜರಾತ ಗುಲಬರ್ಗಾದ ಅಧೀನಕ್ಕೆ ಒಳಪಟ್ಟವು.

ಕ್ರಿ.ಶ. ೧೪೦೬ರಲ್ಲಿ ಮತ್ತೆ ವಿಜಯನಗರದೊಂದಿಗೆ ಸಂಘರ್ಷ ಆರಂಭವಾಯಿತು. ಒಂದನೆಯ ದೇವರಾಯನ ಪ್ರೇಮ ಪ್ರಕರಣದಿಂದ ಯುದ್ಧ ಆರಂಭವಾಯಿತು.[೧೫೨] ಬಹಮನಿ ರಾಜ್ಯಕ್ಕೆ ಸೇರಿದ ಒಬ್ಬ ಮುಸ್ಲಿಂ ಅಕ್ಕಸಾಲಿಗನ ಮಗಳ ಸೌಂದರ್ಯವನ್ನು ಕೇಳಿ ಆಕೆಯನ್ನು[೧೫೩] ಪಡೆಯಲು ೫೦,೦೦೦ ಸಾವಿರ ಸೇನೆಯೊಂದಿಗೆ ಮುದಗಲ್ ಮೇಲೆ ಮುತ್ತಿಗೆ ಹಾಕಿ ಆ ಹುಡಗಿಯನ್ನು ಪಡೆಯಲು ಹೊರಟ. ಹುಡಗಿಯ ತಂದೆಯು ಸುಲ್ತಾನನ ರಕ್ಷಣೆ ಬೇಡಿದ. ವಿಜಯನಗರದ ಸೈನ್ಯದ ದಾಳಿಯ ವಿಷಯ ತಿಳಿದ ಆಕೆ ಕಾಡಿಗೆ ಓಡಿ ಹೋದಳು. ಈ ದಂಡ ಯಾತ್ರೆಯ ನಾಯಕ ಪೌಲದಖಾನನು ವಿಜಯನಗರದ ಸೈನ್ಯವನ್ನು ಸದೆ ಬಡೆದು ಎಲ್ಲಾ ವರದಿ ಫಿರೋಜ್‌ನಿಗೆ ತಿಳಿಸಿದ. ಅಕ್ಕಸಾಲಿಗನ ಮಗಳಾದ "ಪ್ರಥಾಳ"ಳ ಸೌಂದರ್ಯ, ಆಕೆಯ ನೃತ್ಯ, ಸಂಗೀತ ಮತ್ತು ಚಿತ್ರಕಲೆಯಿಂದ ಹಲವರನ್ನು ಆಕರ್ಷಿಸಿದಳು. ಮೊದಲನೆಯ ಯೋಜನೆಯಂತೆ ಆಕೆಯು ವಿಜಯನಗರದ ಸೈನಿಕರಿಗೆ ಸಿಗದೆ ಇದ್ದಾಗ ದೇವರಾಯನ್ನು ಆಕೆಯನ್ನು ಹೇಗಾದರೂ ಮಾಡಿ ಹೊತ್ತುಕೊಂಡು ಬರಬೇಕು. ಆಕೆಯು ಮನೆಯನ್ನು ಧ್ವಂಸಗೊಳಿಸಿ ಎಂದು ಆದೇಶಿಸಿದ, ಈ ಕಾರ್ಯಾಚರಣೆಯಲ್ಲಿ ಮುದಗಲ್ ಮತ್ತು ಅದರ ಮಾರ್ಗದ ಹಲವು ಮುಸ್ಲಿಂ ಪ್ರಾರ್ಥನಾಲಯಗಳು ಹಾಳುಗೊಂಡವು.[೧೫೪] ಇವು ಯುದ್ಧಕ್ಕೆ ಕಾರಣವಾಯಿತು. ಈ ಹುಡುಗಿಯ ಹೆಸರಿನ ಬಗ್ಗೆ ಹಲವು ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ.[೧೫೫]

ಕ್ರಿ.ಶ. ೧೪೦೭ರಲ್ಲಿ ಸುಲ್ತಾನನ ನೇತೃತ್ವದ ಸೈನ್ಯ ವಿಜಯನಗರದ ಮೇಲೆ ದಂಡೆತ್ತಿ ಹೊರಟು ವಿಜಯನಗರಕ್ಕೆ ಮುತ್ತಿಗೆ ಹಾಕಿತು. ಕೋಟೆ ಗೆಲ್ಲಲ್ಲು ಅನಿವಾರ್ಯವಾದಾಗ, ತನ್ನ ಸೈನ್ಯ ಎರಡು ಭಾಗ ಮಾಡಿ ಹೊರಾಟ ಆರಂಭಿಸಿದ. ದೇವರಾಯನು ಗುಜರಾತ, ಮಾಳವ, ಖಾನಂ ದೇಶಗಳ ಸಹಾಯ

ಕೇಳಿ ವಿಫಲನಾದ, ಯುದ್ಧದಲ್ಲಿ ತನ್ನ ಒಂದೊಂದು ಕೋಟೆಗಳು ಬಹಮನಿಯರ ವಶವಾಗುತ್ತಿರುವುದನ್ನು ಕಂಡ ರಾಯನು ಒಪ್ಪಂದಕ್ಕೆ ಮುಂದಾದನು. ಒಪ್ಪಂದ ಪ್ರಕಾರ ರಾಯನು ತನ್ನ ಮಗಳನ್ನು ಸುಲ್ತಾನನಿಗೆ ನೀಡಿ ಮದುವೆ ಮಾಡಬೇಕು. ಹತ್ತು ಲಕ್ಷ ರೂ. ನೀಡಬೇಕು ಮತ್ತು ಬಂಗಾರ, ಮುತ್ತು ರತ್ನಗಳು ನೀಡಬೇಕು, ಅಲ್ಲದೆ ತಾನು ಗೆದ್ದುಕೊಂಡ ಬಂಕಾಪುರವು ವರದಕ್ಷಣೆಯಾಗಿ ಬಿಡಬೇಕು. ದೇವರಾಯನು ಸುಲ್ತಾನ ಫಿರೋಜನನ್ನು ಆತ್ಮಿಯವಾಗಿ ಬರಮಾಡಿಕೊಂಡು. ಈ ವಿವಾಹವು ದಕ್ಷಿಣದ ಇತಿಹಾಸದಲ್ಲಿ ಹೊಸ ಅಧ್ಯಯ ಆರಂಭಿಸಿತು.[೧೫೬] ಸುಲ್ತಾನನ ಸೈನ್ಯ ಓರಿಸ್ಸಾದವರೆಗೆ ಆಕ್ರಮಿಸಿತು. ಮತ್ತೆ ತೆಲಂಗಾಣದ ವಿಷಯವಾಗಿ ಇಬ್ಬರಲ್ಲಿ ಮನಸ್ಥಾಪ ಉಂಟಾಯಿತು. ಮುಂದಿನ ಹೋರಾಟದಲ್ಲಿ ಬಹಮನಿ ಪಡೆಗೆ ಹಿನ್ನಡೆ ಉಂಟಾಯಿತು. ಇದೆ ಹೋರಾಟದಲ್ಲಿ ಫಿರೋಜ್‌ನ ಗುರು ಫಜ್ಲುಲ್ಲಾ ಇಂಜುನನ್ನು ಒಬ್ಬ ಹಿಂದೂ ಸೈನಿಕ ಕೊಂದನು.[೧೫೭] ಫಿರೋಜನು ಹೋರಾಟ ಮುಂದುವರೆಯಿಸದೆ ರಾಜ್ಯಧಾನಿಗೆ ಮರಳಿದ.

ಸುಲ್ತಾನನಿಗೆ ಉತ್ತರಾಧಿಕಾರತ್ವದ ಸಮಸ್ಯೆ ಪ್ರಮುಖವಾಗಿತ್ತು. ತನ್ನ ಸಹೋದರನಾದ ಅಹಮ್ಮದನು ಗೇಸುದರಾಜರ್ ಬೆಂಬಲದೊಂದಿಗೆ ಸುಲ್ತಾನ ಪದವಿ ಪೆಯುವ ಕಾತುರದಲ್ಲಿದ್ದನು. ಸಹೋದರನನ್ನು ದೂರಸರಿಸದೆ ತನ್ನ ಮಗನನ್ನು ಅಧಿಕಾರಕ್ಕೆ ತರಲು ಸಾಧ್ಯವಿಲ್ಲ. ಈ ವಿಷಯದ ತೊಳಲಾಟದಲ್ಲಿ ಫಿರೋಜನು ತನ್ನ ಸಹೋದರನ ಕಣ್ಣು ಕಿಳಿಸಿ ಬಂಧನದಲ್ಲಿ ಇಡಲು ತೀರ್ಮಾನಿಸಿದ. ಇದನ್ನು ತಿಳಿದ ಅಹಮ್ಮದ ಗುರುವಿನ ಆಶಿರ್ವಾದ ಪಡೆದು ಖಾನಾಪುರಕ್ಕೆ ಓಡಿದ. ಇತನ ರಾಜಕೀಯ ವಿರೋಧಿಗಳಾದ ಫಿರೋಜನ ಅಧಿಕಾರಿಗಳು ೨೦ ಸಾವಿರ ಸೈನ್ಯದೊಂದಿಗೆ ಅಹಮ್ಮದನ ಮೇಲೆ ದಾಳಿ ಮಾಡಿದರು. ಈ ದಾಳಿಯಲ್ಲಿ ಫಿರೋಜನ ಸೈನ್ಯಕ್ಕೆ ಸೋಲುಂಟಾಯತು. ಅಹಮ್ಮದನನ್ನು ಯುದ್ಧ ಭೂಮಿಯಲ್ಲಿ ರಾಜನೆಂದು ಘೋಷಿಸಲಾಯಿತು. ಇದರಿಂದ ಪ್ರಭಾವಿತನಾಗಿ ಅಹಮ್ಮದನು ರಾಜಧಾನಿ ಗುಲಬರ್ಗಾದತ್ತ ಧಾವಿಸಿದನು. ಫಿರೋಜ್‌ನ ಉಳಿದ ಸೈನ್ಯ ಅಹಮ್ಮದನ ಪಕ್ಷವಹಿಸಿತು. ಕ್ಷಿಪ್ರ ರಾಜಕೀಯ ಬೆಳವಣಿಗೆಯಿಂದ ಬೇಸತ್ತ ಫಿರೋಜ್‌ನು ಅದೆ ಕೊರಗಿನಲ್ಲಿ ಸಾವಿನ ಹಾಸಿಗೆ ಹಿಡಿದ, ಗುಲಬರ್ಗಾ ಅರಮನೆಯಲ್ಲಿ ೨೨.೯.೧೪೨೨ರಲ್ಲಿ ಇಬ್ಬರು ಸಹೋದರರು ಬೇಟಿಯಾಗಿ ಒಬ್ಬರನ್ನೊಬ್ಬರು ಅಪ್ಪಿಕೊಂಡು ಕಣ್ಣಿರು ಸುರಿಸಿದರು. ಸುಲ್ತಾನ ಫಿರೋಜ್ ಶಹನು ತನ್ನ ಮಗನನ್ನು ಸರಿಯಾಗಿ ನೋಡಿಕೊಳ್ಳುವಂತೆ ಹೇಳಿ ಫಿರೋಜ್‌ನು ೨೮.೯.೧೯೨೨ರಂದು ಕೊನೆ ಉಸಿರು ಎಳೆದನು. ಇತನ ಸಾವಿನ ಸುತ್ತಲು ಹಲವು ಕಥೆಗಳು ಹಣೆದುಕೊಂಡಿವೆ.[೧೫೮]

ಫಿರೋಜನು ಸುಸಂಸ್ಕೃತ ಮತ್ತು ಶ್ರೇಷ್ಠ ಪಂಡಿತನಾಗಿದ್ದರಿಂದ ಇತನನ್ನು ಇತಿಹಾಸಕಾರರು 'ಸುಲ್ತಾನ್-ಇ-ಫಿಸಿಯನ್' ಎಂದು ಕರೆದಿದ್ದಾರೆ.[೧೫೯] ಉದಾರಿ, ಸಹೃದಯವಂತನಾಗಿದ್ದ ಇತನು ಹಿಂದೂ-ಮುಸ್ಲಿಂರ ಮೆಚ್ಚುಗೆ ಪಡೆದ ಮೊದಲನೆಯ ಬಹಮನಿಯ ಅರಸ. ಸ್ವಂತ ಕವಿ, ಬರಹಗಾರ ಮತ್ತು ಸಾಹಿತಿಯಾದ ಇತನ ಅಕ್ಷರಗಳು ಅತ್ಯಂತ ಸುಂದರವಾಗಿದ್ದವು. ಇತನ ಆಸ್ಥಾನವು ಶ್ರೇಷ್ಠ

ಸಾಹಿತಿಗಳಾದ ಫೈಜುಲ್ಲಾ ಇಂಜು, ಮುಲ್ಲಾ ಸುರಹಿಂದ್ ಮುಂತಾದವರಿಂದ ಪರ್ಶಿಯನ್ ಲೇಖಕರಿಂದ ಕೂಡಿತ್ತು. ದೇಶ ವಿದೇಶಗಳಿಂದ ಹೆಚ್ಚಿನ ಸಂಖ್ಯೆಯ ಬರಹಗಾರರು ಬಂದು ಇಲ್ಲಿ ನೆಲೆಸಿದರು. ಸುಲ್ತಾನನು ತತ್ವಜ್ಞಾನ, ಇತಿಹಾಸ, ಗಣಿತ, ರೇಖಾಗಣಿತ ವಿಷಯಗಳಲ್ಲಿ ಪರಿಣಿತನಾಗಿದ್ದ. ರಾಜ್ಯಧಾನಿ ಗುಲಬರ್ಗಾದಲ್ಲಿ ಈ ವಿಷಯದ ಮೇಲೆ ವಾರಕ್ಕೆ ಮೂರು ದಿನ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದನು.[೯೦] ಕವಿತೆಗಳಲ್ಲಿ ಇತನಿಗೆ **'ಉರಜಿ'** ಮತ್ತು **'ಫಿರೋಜಿ'** ಎಂಬ ಅಂಕಿತ ನಾಮಗಳಿದ್ದವು. ಫೇರಿಸ್ತಾನು ಫಿರೋಜನ ಕವಿತೆಯ ಕೆಲವು ಸಾಲುಗಳಲ್ಲಿ ಈ ಹೆಸರನ್ನು ಉಲ್ಲೇಖಿಸಿರುವುದು ಹೇಳಲಾಗಿದೆ. ಇತನು ಪರ್ಶಿಯನ್ ಅರೆಬಿಕ್ ಮತ್ತು ಟರ್ಕಿಯ ಭಾಷೆಯ ಜೊತೆಗೆ ಕನ್ನಡ, ತೆಲಗು, ಮರಾಠಿ, ಗುಜರಾತಿ, ಬೆಂಗಾಲಿ ಮತ್ತು ಇತರ ಭಾಷೆಗಳನ್ನು ಬಲ್ಲವನಾಗಿದ್ದನ. ಹಾಗೆಯೆ ಇತನ ಅರಮನೆ ಹಲವು ಜನಾಂಗದ ಮಹಿಳೆಯರನ್ನು ಒಳಗೊಂಡಿತು. ಆಯಾ ಮಹಿಳೆಯರೊಂದಿಗೆ ಅವರವರ ಭಾಷೆಯಲ್ಲಿ ಮಾತನಾಡುತ್ತಿದ್ದ.

ಫಿರೋಜ್ ಶಹನು ಕಲೆ ಮತ್ತು ವಾಸ್ತು ಶಿಲ್ಪಕ್ಕೆ ವಿಶೇಷ ಗಮನ ನೀಡಿ. ಹೆಚ್ಚಿನ ಪ್ರಗತಿ ಸಾಧಿಸಿದ. ಇತನ ಕಾಲದಲ್ಲಿ ನಿರ್ಮಾಣಗೊಂಡ ಕಟ್ಟಡಗಳಲ್ಲಿ ವಿದೇಶಿಯ ಪ್ರಭಾವವನ್ನು ಕಾಣಬಹುದು. ಅಲ್ಲದೆ ಹಿಂದೂಗಳ ಪ್ರಭಾವದಿಂದ ಮುಸ್ಲಿಂರ ಶೈಲಿಯಲ್ಲಿ ಬದಲಾವಣೆ ಆರಂಭವಾಯಿತು. ಹಲವು ಶೈಲಿಗಳ ಮಿಶ್ರಣಕ್ಕೆ ಉತ್ತಮ ಉದಾಹರಣೆಯೆಂದರೆ ಫಿರೋಜ್ ಷಹನ ಘೋರಿ. ಇದು ಗುಲಬರ್ಗಾದಲ್ಲಿಯ ಒಂದು ಶ್ರೇಷ್ಠ ಉದಾಹರಣೆಯಾಗಿದೆ.[೯೧] ಈ ಕಾಲದಲ್ಲಿ ರಚನೆಗೊಂಡ ಕಟ್ಟಡಗಳು **'ಪರ್ಶಿಯೋಬಹಮನಿಶೈಲಿ'** ಎಂದು ಕರೆಯಲಾಗಿದೆ. ಬಹಮನಿಯರ ಪ್ರಾರಂಭಿಕ ಕಟ್ಟಡಗಳು ತುಘಲಕ್ ಶೈಲಿಯಲ್ಲಿದ್ದವು. ಆದರೆ ಇತನ ಕಾಲದಲ್ಲಿ ರಚನೆಯಾದ ಕಟ್ಟಡಗಳು ಸಮಿಶ್ರವಾಗಿ ಹಾಗೂ ಹೆಚ್ಚಿನ ಅಲಂಕಾರಕವಾಗಿವೆ.

ಗುಲಬರ್ಗಾ ರಾಜ್ಯಧಾನಿಯಲ್ಲಿ ಹಲವು ವೈಭಯುತವಾದ ಕಟ್ಟಡಗಳನ್ನು ನಿರ್ಮಿಸಿದ. ಭೀಮಾ ತೀರದ ಬಳಿ 'ಪಿರೋಜಾಬಾದ' ಎನ್ನುವ ಸುಂದರವಾದ ನಗರ ನಿರ್ಮಿಸಿದ. ಪೂರ್ವ ನಿಯೋಜಿತ ನಗರ, ವಿಶಾಲವಾದ ಬೀದಿಗಳು, ನದಿಯ ಸಮೀಪದಲ್ಲಿ ಕಟ್ಟಿಸಿರುವ ಕೋಟೆ ಅತ್ಯಂತ ಮಹತ್ವದ್ದಾಗಿದೆ. ಕ್ರಿ.ಶ. ೧೪೦೭ರಲ್ಲಿ ಭೀಮಾ ತೀರದಲ್ಲಿ ಖಗೋಳಾಲಯ ಕಟ್ಟಿಸಿದ. ಈ ಕಟ್ಟಡ **'ಹಸನ್‌ಗಿಲಾನಿ'** ಸಾವಿನಿಂದಾಗಿ ಪರಿಪೂರ್ಣಗೊಳ್ಳಲಿಲ್ಲ. ಇತನು ಈ ಕಟ್ಟಡದ ಮೇಲ್ವಿಚಾರಕನಾಗಿದ್ದನು. ಫಿರೋಜ ಶಹಾನ ಕಾಲದಲ್ಲಿ ಗುಲಬರ್ಗಾ ಮತ್ತು ಫಿರೋಜಾಬಾದನಲ್ಲಿ ಹಲವು ರಕ್ಷಣಾತ್ಮಕ ಕಟ್ಟಡಗಳನ್ನು ನಿರ್ಮಿಸಿಲಾಯಿತು.

೨.೪.೧೦. ಸೈಯದ ಮಹಮ್ಮದ ಗೇಸೂ ದರಾಜ್:

ಬಹಮನಿಗಳ ಆಳ್ವಿಕೆಯ ಕಾಲದಲ್ಲಿ ರಾಜಕೀಯ ಮತ್ತು ಧಾರ್ಮಿಕ ಇತಿಹಾಸದಲ್ಲಿ ಅತ್ಯಂತ ಪ್ರಭಾವಿ ಪುರುಷರೆಂದರೆ ಗೇಸೂದರಾಜ್ ಒಬ್ಬರು. ಇವರನ್ನು ಹೊರತು ಪಡಿಸಿ ಬಹಮನಿ ಇತಿಹಾಸ

ಅಪರಿಪೂರ್ಣ. ಇವರ ಕುರಿತು ಹಲವು ಇತಿಹಾಸಕಾರರು ಬಹಮನಿಯ ಅರಸರೊಂದಿಗೆ ಇವರ ಜೀವನ ಮತ್ತು ಭೋದನೆ ವಿವರಿಸಿದ್ದಾರೆ. ಇವರು ಕಿ.ಶ. ೧೩೨೧ರಲ್ಲಿ ದೆಹಲಿಯಲ್ಲಿ ಜನಿಸಿದರು. ತಂದೆ ಸೈಯದ್ ಯೂಸುಫ್ ಹುಸೈನಿ (ಸೈಯದ್ ರಾಜಾ) ತಾಯಿ ಫಾತಿಮಾ. ಮಹಮ್ಮದ ಬಿನ್ ತುಘಲಕನು ರಾಜ್ಯಧಾನಿಯನ್ನು ದೆಹಲಿಯಿಂದ ದೇವಗಿರಿಗೆ ವರ್ಗಾಯಿಸಿದಾಗ ಇವರ ಕುಟುಂಬದ ಸದಸ್ಯರು ದೇವಗಿರಿಗೆ ಆಗಮಿಸಿದರು. ಆಗ ಗೇಸೂ ದರಾಜ್‌ರಿಗೆ ೭ ವರ್ಷ ವಯಸ್ಸು. ಇವರು ಮೂಲತಹ ಹೆರತ್‌ನಿಂದ ವಲಸೆ ಬಂದವರು. ಹಲವು ಸಾ.ಉ ಸಂತರೊಂದಿಗೆ ಇವರು ಬಂದು ನೆಲೆಸಿದರು. ಅಲ್ಲಿಂದ ಖುಲದಾಬಾದಗೆ ಹೋಗಿ ನೆಲೆನಿಂತರು. ಮೂರು ವರ್ಷದ ನಂತರ ತಂದೆ ನಿಧನ ಹೊಂದಿದರು. ಆಗ ಖ್ವಾಜಾ ಸಾಹೇಬರಿಗೆ ೧೦ ವರ್ಷ ವಯಸ್ಸು. ಇವರ ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು ಇತನು ದೌಲತಾಬಾದ ಗೌರ್‍ನರನಾಗಿದ್ದನು. ಹೀಗಾಗಿ ಖ್ವಾಜಾರಿಗೆ ಒಳ್ಳೆಯ ಶಿಕ್ಷಣ ಲಭ್ಯವಾಯಿತು. ಅದರಲ್ಲಿ ವಿಶೇಷವಾಗಿ ಧಾರ್ಮಿಕ ಶಿಕ್ಷಣ. ತಂದೆಯ ಕಾಲದಲ್ಲಿ ಹಲವರಿಂದ ಆಕರ್ಷಿತರಾಗಿದ್ದ ಇವರು ಕೊನೆಗೆ ದೆಹಲಿಯ ಚಿರಾಗರ ಆಶ್ರಯದಲ್ಲಿ ಬೆಳೆದರು ಪ್ರತಿ ದಿನ ಹಲವು ಪವಾಡಗಳಿಂದ ಖ್ಯಾತಿಗಳಿಸಿರದರು. ೧೫ನೆಯ ವರ್ಷದಲ್ಲಿ ಚಿರಾಗರನ್ನು ತಮ್ಮ ನಾಯಕನೆಂದು ಆಯ್ಕೆ ಮಾಡಿಕೊಂಡು ಅವರ ಮಾರ್ಗದರ್ಶನದಲ್ಲಿ ಬೆಳೆದರು. ತಮ್ಮ ಗುರು ಎಂದು ಆಯ್ಕೆ ಮಾಡಿಕೊಂಡರು. ಗುರು ಶಿಷ್ಯರಲ್ಲಿ ಒಳ್ಳೆಯ ಸಂಬಂಧ ಬೆಳೆಯಿತು. ಇವರ ವಿಚಾರಗಳನ್ನು ಕಂಡು ಚಿರಾಗರ ಮನಸ್ಸಿನಲ್ಲಿ ಕ್ರಾಂತಿ ಉಂಟಾಯಿತು.

ನಾಸಿರುದ್ದೀನ ಚಿರಾಗರು ಅನಾರೋಗ್ಯದಿಂದ ಬಳಲುತ್ತಿದ್ದಾಗ ಅವರಿಗೆ ಉತ್ತರಾಧಿಕಾರತ್ವದ ಸಮಸ್ಯೆ ಕಾಡಿತು. ಗುಣಮುಖರಾದಾಗ ಅವರು ತನ್ನ ನಂತರ ಖ್ವಾಜಾ ಬಂದೇ ನವಾಜರೆ ತಮ್ಮ ಉತ್ತರಾಧಿಕಾರಿ ಎಂದು ಸಾರಿದರು (೧೩೫೬). ಖ್ವಾಜಾ ಸಾಹೇಬರು ಆದ್ಯಾತ್ಮಿಕ ಶಕ್ತಿ ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಿತು. ಇವರ ಕೀರ್ತಿ ಶರವೇಗದಲ್ಲಿ ದೆಹಲಿಯ ಸುತ್ತಲು ಆವರಿಸಿಕೊಂಡಿತು. ಅವರ ಶಕ್ತಿಯನ್ನು ಪರೀಕ್ಷಿಸಲು ಬಂದ ಹಲವರು ಅವರ ಅನುಯಾಯಿಯಾದರು. ಇಸ್ಲಾಂ ಧರ್ಮದ ಪ್ರಮುಖರೆಲ್ಲರೂ ಇವರ ಶಕ್ತಿಯನ್ನು ಅರಿತರು. ಅವರಲ್ಲಿ ನಾಸೀರುದ್ದೀನ ಖಾಸಿಮ್ ಒಬ್ಬರು.

ದೆಹಲಿಯ ಅರಸರು ತಮ್ಮ ಖಜಾನೆಯ ಸಂಪತ್ತನ್ನು ಕಳೆದುಕೊಂಡಾಗ ಅನಿವಾರ್ಯವಾಗಿ ಚಿರಾಗರ ಶಿಷ್ಯರನ್ನು ಬೇಟಿ ಮಾಡಿ ಇವರ ಸಹಾಯದಿಂದ ಮತ್ತೆ ಖಜಾನೆಯನ್ನು ಮರಳಿ ಪಡೆದರು ಇದರಿಂದ ದೆಹಲಿ ಅರಸ ತುಂಬಾ ಪ್ರಭಾವಿತನಾದನು. ದೆಹಲಿಯ ಪುರಾನಾ ಕಿಲ್ಲಾದ ಸಂಪತ್ತಿನ ಶೋಧನೆಯಿಂದ ಇವರ ಕೀರ್ತಿ ಎಲ್ಲಾ ಕಡೆಗೂ ಹಬ್ಬಿತು.

ಕ್ರಿ.ಶ. ೧೩೯೮ರಲ್ಲಿ ಮತ್ತೆ ದೆಹಲಿಯ ಮೇಲೆ ತೈಮೂರನ ದಾಳಿ ಆರಂಭವಾಯಿತು. ಆಗ ಇವರಿಗೆ ೮ ವರ್ಷ ವಯಸ್ಸು. ಇವರು ದಕ್ಷಿಣಕ್ಕೆ ಹೋಗಲು ನಿರ್ಧರಿಸಿದರು. ಬಹಮನಿ ಸುಲ್ತಾನ ಫಿರೋಜ್‌ಶಹನು ಶೇಖ ನಾಸಿರುದ್ದಿನರ ಶಿಷ್ಯ. ಅದೆ ನಂಬಿಕೆ ಗೇಸೂದರಜರ ಮೇಲೆ ಇಟ್ಟಿದ್ದ, ಆದ್ದರಿಂದ

ಇವರನ್ನು ದೆಹಲಿಯಿಂದ ಗುಲಬರ್ಗಾಕ್ಕೆ ಅತ್ಯಂತ ಸಂತೋಷದಿಂದ ಬರಮಾಡಿಕೊಂಡು ಅವರಿಗೆ ಅಪಾರ ಪ್ರಮಾಣದ ಜಾಗಿರ ನೀಡಿದ. ನಂತರ ಗುಲಬರ್ಗಾದಲ್ಲಿ ಅವರ ಧಾರ್ಮಿಕ ಚಟುವಟಿಕೆಗಳು ನಡೆದವು.

ಫಿರೋಜಶಹನ ಉತ್ತರಾಧಿಕಾರತ್ವದ ಪ್ರಶ್ನೆ ಬಂದಾಗ ಗೇಸೂದರಜ್ ಮತ್ತು ಸುಲ್ತಾನರಲ್ಲಿ ಭಿನ್ನಾಭಿಪ್ರಾಯ ಆರಂಭವಾಯಿತು. ಅವರು ಫಿರೋಜ್‌ನ ಸಹೋದರ ಅಹಮ್ಮದನನನು ಬೆಂಬಲಿಸಿದರೆ, ಫಿರೋಜ ತನ್ನ ಮಗನಾದ ಹಸನನನ್ನು ಬೆಂಬಲಿಸಿದ ಅಹಮ್ಮದನು ಖ್ವಾಜಾ ಬಂದೇ ನವಾಜರಿಂದ ಬೆಂಬಲ ಪಡೆದು ಮುಂದಿನ ಉತ್ತರಾಧಿಕಾರಿಯೆಂದು ಆಯ್ಕೆಗೊಂಡು ಹೋರಾಟದ ನಂತರ ಬಹಮನಿಯ ಸುಲ್ತಾನನಾದನು. ಖ್ವಾಜಾ ಸಾಹೇಬರು ದಕ್ಷಿಣ ಭಾರತದಲ್ಲಿ ಹೆಸರು ವಾಸಿಯಾದರು. ಇವರ ಶಿಷ್ಯರು ಹಿಂದು, ಮುಸ್ಲಿಂ ಮತ್ತು ಇತರ ಧರ್ಮಿಯರಾಗಿದ್ದರೂ, ಇವರು ದಕ್ಷಿಣ ಭಾರತಿಯರಿಗೆ ಮಹಮ್ಮದ ಪೈಗಂಬರರಾಗಿದ್ದಾರೆಂದು ಅವರ ಅನುಯಾಯಿಗಳು ಹೇಳಿದ್ದಾರೆ. ಇವರು ಕ್ರಿ.ಶ. ೧೪೨೨ರಲ್ಲಿ ನಿಧನ ಹೊಂದಿದರು (೮೨೫ವಿ.ಹೆಚ). ಇವರ ಅನುಯಾಯಿ ಸುಲ್ತಾನ ಅಹಮ್ಮದನು ಅವರಿಗಾಗಿ ಒಂದು ಬೃಹತ್ ಸಮಾಧಿಯನ್ನು ಗುಲಬರ್ಗಾದಲ್ಲಿ ನಿರ್ಮಿಸಿದ. ಇದು ಭಾರತದಲ್ಲಿಯೆ ಸೂಫಿ ಸಂತರಿಗಾಗಿ ನಿರ್ಮಿಸಿರುವ ಸಮಾಧಿಗಳಲ್ಲಿಯೇ ಅತ್ಯಂತ ದೊಡ್ಡ ಸಮಾದಿಯಾಗಿದೆ.

ಖ್ವಾಜಾ ಬಂದೆ ನವಾಜರು ೧೦೫ ವರ್ಷ ಬದುಕಿದ್ದು ಅವರು ೧೦೪ ಕೃತಿಗಳನ್ನು ರಚಿಸಿದರು, ಅವರು ದಕ್ಷಿಣ ಭಾರತದ ಗುಲಬರ್ಗಾದಲ್ಲಿ ೨೪ ವರ್ಷ ನೆಲೆನಿಂತರು. ಈ ಅವಧಿಯಲ್ಲಿ ಅವರು ಅಪಾರ ಅನುಯಾಯಿಗಳನ್ನು ಹೊಂದಿದರು. ಹಿಂದು ಸಾಧು-ಸಂತರೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಇವರ ಸಮಕಾಲೀನ ಹಿಂದೂ ಸಂತ 'ಸಿದ್ದಯ್ಯಪ್ಪಾ' ಖ್ವಾಜಾರಷ್ಟೇ ಪ್ರಭಾವಿ ವ್ಯಕ್ತಿ. ಇಬ್ಬರಲ್ಲಿ ಪವಾಡಗಳು ನಡೆದು ಹೋದವು. ಅಂದಿನಿಂದ ಇಂದಿನವರೆಗೂ ಎರಡು ಧರ್ಮದ ಅನುಯಾಯಿಗಳಲ್ಲಿ ಒಳ್ಳೆಯ ಸಂಬಂಧವಿದೆ. ಖ್ವಾಜಾರು ತಮ್ಮ ಪವಾಡಗಳಿಂದ ಹಲವರನ್ನು ತಮ್ಮ ಶಿಷ್ಯರನ್ನಾಗಿಸಿಕೊಂಡರು. ಉದಾಹರಣೆಗೆ ಒಬ್ಬ ಮಹಿಳೆ ತನ್ನ ಮಗು ಸಾವನ್ನಪ್ಪಿದೆ ಎಂದು ನಾಟಕ ಮಾಡಿ, ನಂತರ ಮಗುವನ್ನು ಕಳೆದುಕೊಂಡಳು. ಖ್ವಾಜಾರ ಪ್ರಮುಖ ಕೃತಿಗಳೆಂದರೆ, ಕುರಾನಿನ ಕುರಿತು ವ್ಯಾಖ್ಯಾನ, ಪ್ರವಾದಿ ಪರಂಪರೆಯ ಕುರಿತು ಮಾಪಿರಿಯೇಲ್ ಅನ್ವರ ಮೇಲೆ ವ್ಯಾಖ್ಯಾನವಿದೆ.[೧೨] ಹಲವು ಸಂತರು ಬರೆದ ಕೃತಿಗಳ ಮೇಲೆ ವಿವರಣೆ, ಉದಾಹರಣೆಗಎ ಕುಷ್ಕರನ್ ರಿಸಾಲಾ ಮೇಲೆ ವ್ಯಾಖ್ಯಾನ. ಶೇಖ್ ಅಬ್ದುಲ್ ಕಾದಿರ್ ಗಿಲಾನಿಯ ರಿಸಾಲ ಮೇಲೆ ವ್ಯಾಖ್ಯಾನ ಮತ್ತು ಹಲವು ಕವಿತೆಗಳ ಸಂಗ್ರಹವಾದ "ಅನಿಸುಲ್ ಉಪಶಾಕ್" ಮತ್ತು ಪತ್ರಗಳ ಸಂಗ್ರಹ[೧೩] **'ಮಕ್ತುಬತ್'** ಈ ಎಲ್ಲಾ ಕೃತಿಗಳಿಂದ ಅವರ ಸಾಹಿತ್ಯ ಸೃಷ್ಠಿಯ ಸಾಮರ್ಥ್ಯದ ಪರಿಚಯವಾಗುತ್ತದೆ. ಇವರು ಒಂದು **'ಅನುಭಾವಿಪಂತ'**ವನ್ನು ಹುಟ್ಟು ಹಾಕಿದರು. ಶರಿಯತ್ ಮತ್ತು ತರೀಕತ್‌ಗಳ ನಡುವೆ ಸಮತೋಲನ ಕಾಯ್ದುಕೊಂಡು ಬರಲು ಯತ್ನಿಸಿದರು. ಹಿಂದೂ ಪುರಾಣಗಳು, ಸಂಸ್ಕೃತ ಕೃತಿಗಳು, ದಾಸರ ವಚನಗಳನ್ನು ಸರಿಯಾಗಿ ಬಲ್ಲವರಾಗಿದ್ದರು.

ದಕ್ಷಿಣ ಭಾರತದ ಜನರಿಗೆ ಇವರು ಆದ್ಯಾತ್ಮಿಕ ಶಕ್ತಿಯಾದರು. ಸುಸಂಸ್ಕೃತರು, ವಿದ್ಯಾವಂತರು ಇವರ ಕೃತಿಗಳನ್ನು ಅಧ್ಯಯನ ಮಾಡಿದರು. ಅವರು ಗುಲಬರ್ಗಾ ಕೋಟೆಯ 'ಖಂಕ'ಗಳಲ್ಲಿ ಜನಸಾಮಾನ್ಯರಿಗೆ ಭೋದನೆ ಮಾಡುತ್ತಿದ್ದರು. ಇವರ ಶಿಷ್ಯಂದಿರಲ್ಲಿ ಹಲವು ಬಗೆಗಳಿವೆ. ತಮ್ಮ ಜೀವನವನ್ನು ಇವರಿಗಾಗಿ ಮಿಸಲ್ಲಿಟ್ಟ ಹಲವು ಕುಟುಂಬಗಳು ಇವರ ಪವಾಡ ಶಕ್ತಿಗಳಿಗೆ ಮಾರುಹೋದವರು ಕರುಣೆ ದಯೆ ಇರುವ ಇವರು ಮಾನವಿಯ ಜನಾಂಗವನ್ನು ಪ್ರೀತಿಸುತ್ತಿದ್ದರು.

ಈ ರೀತಿ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಖ್ವಾಜಾ ಬಂದೇ ನವಾಜರ ಪ್ರಭಾವ ಪ್ರಮುಖವಾಗಿದೆ. ಪ್ರಸ್ತುತ ದೇಶದ ನಾನಾ ಭಾಗಗಳಿಂದ ಅವರ ಅನುಯಾಯಿಗಳು 'ಉರ್ಸ್' ದಿನದಂದು ಆಗಮಿಸಿ ಭಕ್ತಿ ನಮಗ ಸಲ್ಲಿಸುತ್ತಾರೆ. ಇವರಿಂದ ಜನರಿಗೆ ಬಹಮನಿ ರಾಜ್ಯದ ಕಲ್ಪನೆ ಬರುತ್ತದೆ.

೨.೪.೧೧. ಮಲಿಕ್ ಸೈಫುದ್ದೀನ್ ಘೋರಿ:

ಮಲಿಕ ಸೈಫುದ್ದೀನ ಘೋರಿಯು ಬಹಮನಿಯರ ಆಳ್ವಿಕೆಯಲ್ಲಿ ಮಿನುಗುವ ನಕ್ಷತ್ರದಂತೆ ಕಂಗೊಳಿಸುತ್ತಾನೆ. ಪ್ರಾರಂಭದ ಸುಲ್ತಾನ ಹಸನಬಹಮನ್‌ಶಹಾ (೧೩೪೭-೧೩೫೮) ನಿಂದ ೨ನೆ ಮಹಮ್ಮದ್ (೧೩೭೮-೯೭) ರವರೆಗೆ ಪ್ರಧಾನಿಯಾಗಿ, ದಂಡನಾಯಕನಾಗಿ ಅಫಾರ ಸೇವೆ ಸಲ್ಲಿಸಿದ. ಆರು ಜನ ಸುಲ್ತಾನರ ಪ್ರಧಾನಿಯಾದ ಇತನು ಆಗಿನ ಎಲ್ಲಾ ರಾಜಕೀಯ ವಿದ್ಯಮಾನಗಳನ್ನು ಬಲ್ಲವನಾಗಿದ್ದ. ತನ್ನ ಮಕ್ಕಳನ್ನು ಸುಲ್ತಾನರಿಗೆ ನೀಡಿ ವಿವಾಹ ಮಾಡಿದ್ದರಿಂದ ಈತನ ಸ್ಥಾನ ಮತ್ತಷ್ಟು ಭದ್ರಗೊಂಡಿತು. ಗುಲಬರ್ಗಾದ ಪ್ರಧಾನ ಮಂತ್ರಿಯಾದ ಇತನು ಆಡಳಿತದ ಸುಧಾರಕನಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದನು. ರಾಜಕೀಯ ಏರಿಳಿತಗಳ ಮಧ್ಯ ಬಹಮನಿ ಸಾಮ್ರಾಜ್ಯದ ರಕ್ಷಣೆಗೆ ಯತ್ನಿಸಿದ.

ಇತನ ಆರಂಭಿಕ ಜೀವನವು ಅಲ್ಲಾವುದ್ದೀನ ಹಸನ್‌ನ್ನಂತೆ ಹಣೆಯಲಾಗಿದೆ. ಆದರೆ ಇತನು ಶ್ರೇಷ್ಠ ಸೇನಾನಿಯಾಗಿ ಎಲ್ಲರಿಗೂ ಪರಿಚಿತನಾಗಿದ್ದಾನೆ. ಇತನ ಹೆಸರಿನ ಉಲ್ಲೇಖಕದ ಒಂದು ಶಾಸನವು ಕಂದಹಾರ ಕೋಟೆಯಲ್ಲಿದೆ. ಅದರಲ್ಲಿ ಈ ಕೋಟೆಯನ್ನು ಸೈಫುದ್ದೀನ ಘೋರಿ ನಿರ್ಮಿಸಿದನೆಂದು ಹೇಳಲಾಗಿದೆ. ಕಂದಹಾರದ ಮೇಲೆ ಹಿಡಿತ ಸಾಧಿಸಿದ ನಂತರ ಇತನಿಗೆ ಸೈಫುದ್ ದೌಲಾ ಎಂದು ಕರೆಯಲಾಗಿದೆ.[೧೬] ನಂತರ ದಕ್ಷಿಣ ಭಾರತಕ್ಕೆ ಬಂದು ಬಹಮನಿಯಲ್ಲಿ ಸೇವೆ ಸೇರಿಕೊಂಡು ಬೀದರ ಮತ್ತು ಕಂದಹಾರ ಆಕ್ರಮಣದಲ್ಲಿ ಅಪಾರ ಸಾಧನೆಗೈದು ಅಲ್ಲಾವುದ್ದೀನ ಹಸನನು ಸುಲ್ತಾನನಾದ ನಂತರ ಇತನು ಮಂತ್ರಿಯಾದ. ಈ ಕಾಲದಲ್ಲಿ ಜನಾನುರಾಗಿಯಾದ. ಇತನ ಕಾಲದಲ್ಲಿ ಗುಲಬರ್ಗಾ ರಾಜ್ಯಧಾನಿಯೂ ಎಲ್ಲಾ ದಿಕ್ಕಿನಲ್ಲಿ ವಿಸ್ತಾರಗೊಂಡಿತು.[೭೪]

ಮಹಮ್ಮದ ಶಹಾ ೧ನ ಕಾಲಕ್ಕೆ ಪ್ರಧಾನಿಯಾಗಿ ನೇಮಕಗೊಂಡ. ಇತನ ಸಾವಿನವರೆಗೂ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ. ಬಹಮನಿ ಸಾಮ್ರಾಜ್ಯವನ್ನು ಉತ್ತುಂಗ ಶಿಖರಕ್ಕೆರಿಸಿದ. ದುರ್ಬಲರ ಆಗಮನ ಕಾಲಕ್ಕೆ ಬಹಮನಿ ರಾಜ್ಯದ ರಕ್ಷಕನಾಗಿ ಕಾರ್ಯನಿರ್ವಹಿಸಿದ. ಮಹಮ್ಮದ ಶಹಾ ೧ನು

[illegible]

ತೆಲಂಗಾಣಿಯರ ಯುದ್ಧದಲ್ಲಿ ಅಪಾರ ಕಷ್ಟನಷ್ಟ ಅನುಭವಿಸಿದ ಆದರೆ ಘೋರಿಯ ಆಗಮನದಿಂದ ಬಹಮನಿಯರು ತೆಲಂಗಾಣವನ್ನು ಹಿಡಿದುಕೊಂಡರು. ಆಧೋನಿ ಮತ್ತು ವಿಜಯನಗರದೊಂದಿಗೆ ದೃಷ್ಟ ನಿರ್ಧಾರ ಕೈಗೊಂಡು ಅವರು ತಮ್ಮ ರಾಜ್ಯದ ಮೇಲೆ ದೃಷ್ಠಿ ಹಾಕದಂತೆ ಮಾಡಿದ. ಸೈಫುದ್ದಿನ ಘೋರಿಯು ಉತ್ತಮ ಆಡಳಿತಗಾರನಾಗಿದ್ದು, ಸಾಮ್ರಾಜ್ಯವನ್ನು ಹಲವು ಭಾಗಗಳಲ್ಲಿ (ತರಫದಾರ) ವಿಂಗಡಿಸಿ ಜನರು ಶಾಂತಿ ನೆಮ್ಮದಿಯಿಂದ ಇರುವಂತೆ ಮಾಡಿದ. ಎರಡನೆಯ ಮಹಮ್ಮದ ಶಹಾನ ಕಾಲಕ್ಕೆ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ. ಶಿಕ್ಷಣದ ಬೆಳವಣಿಗೆಗೆ ಹಲವು ಯೋಜನೆಗಳನನು ರೂಪಿಸಿದ. ಹಿಂದೂ ಮತ್ತು ಮುಸ್ಲಿಂ ಪ್ರಜೆಗಳ ನಾಯಕನಾಗಿ ಮೆಚ್ಚುಗೆ ಪಡೆದ, ಬಹಮನಿಯ ಸುಲ್ತಾನರಲ್ಲಿ ಯಾದವಿ ಕಲಹ ನಡೆದಾಗ ಇತನು ನ್ಯಾಯ ಸಮ್ಮತ ವ್ಯಕ್ತಿಗೆ ಬೆಂಬಲಿಸಿದ. ಇದರಿಂದ ಇತನ ಸ್ಥಾನ ಬಹಮನಿಯರ ಇತಿಹಾಸದಲ್ಲಿ ಭದ್ರವಾಗಿ ಉಳಿದುಕೊಂಡಿದೆ.

ಬಹಮನಿ ರಾಜ್ಯ ("ಗುಲಬರ್ಗಾ ಹಂತದಲ್ಲಿ") ಘೋರಿಯು ಅಪಾರ ಸೇವೆ ಸಲ್ಲಿಸಿದ್ದಾನೆ. ಇತನು ದಂಡನಾಯಕನಾಗಿದ್ದಾಗ ಗುಲಬರ್ಗಾ ಕೋಟೆಯನ್ನು ಉತ್ತಮ ರೀತಿಯಲ್ಲಿ ಬಲಪಡಿಸಿದ. ಈ ಎಲ್ಲಾ ಕಾರಣಗಳಿಂದ ಇತನ ಕುರಿತು ಸಂಕ್ಷಿಪ್ತವಾಗಿ ತಿಳಿದುಕೊಳ್ಳುವುದು ಅವಶ್ಯವಾಗಿದೆ.

೨.೫. ಬೀದರ:

ಪ್ರಸ್ತುತ ಅಧ್ಯಯನವು ಗುಲಬರ್ಗಾ ಜಿಲ್ಲೆಗೆ ಸೀಮಿತವಾಗಿರುವುದರಿಂದ ಗುಲಬರ್ಗಾ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವ ರಾಜಕೀಯ ಮನೆತನಗಳ ಅಧ್ಯಯನ ಪ್ರಮುಖವಾಗಿದೆ. ಕ್ರಿ.ಶ. ೧೪೨೨ರಲ್ಲಿ ಬಹಮನಿ ರಾಜ್ಯವು ನೆರೆಯ ಬೀದರ ಜಿಲ್ಲೆಗೆ ವರ್ಗಾವಣೆಗೊಂಡಿತು. ಕ್ರಿ.ಶ. ೧೪೨೨ ರಿಂದ ೧೫೩೮ರವರೆಗೆ ಬೀದರ ರಾಜ್ಯಧಾನಿಯನ್ನಾಗಿ ಮಾಡಿಕೊಂಡು,[೧೬೫] ೯ ಜನ ಸುಲ್ತಾನರು ಆಳ್ವಿಕೆ ಮಾಡಿದರು. ಈ ಅವಧಿಯಲ್ಲಿ ಬಹಮನಿ ರಾಜ್ಯವು ಉತ್ತುಂಗ ಶಿಖರವನ್ನು ಕಂಡು ಕೊನೆಗೆ ಐದು ಶಾಹಿ ರಾಜ್ಯಗಳಾಗಿ ಸ್ವತಂತ್ರ್ಯ ಆಳ್ವಿಕೆ ಆರಂಭವಾಯಿತು.

ಬೀದರವನ್ನು ಆಳಿರುವ ಸುಲ್ತಾನರ ರಾಜಕೀಯ ಇತಿಹಾಸವನ್ನು ಇಲ್ಲಿ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ರಾಜ್ಯಧಾನಿಯ ವರ್ಗಾವಣೆಯ ನಂತರ ಬಹಮನಿಯರ ಮೊದಲನೆಯ ರಾಜ್ಯಧಾನಿ ಗುಲಬರ್ಗಾ ಮತ್ತು ಎರಡನೆಯ ರಾಜ್ಯಧಾನಿ ಫೀರೋಜಾಬಾದ ಸಂಪೂರ್ಣವಾಗಿ ನಿರ್ಲಕ್ಷಿಸಲಾಯಿತು. ಮತ್ತೆ ಬಿಜಾಪುರದ ಆದಿಲ್ ಶಾಹಿಗಳ ಕಾಲದಲ್ಲಿ ಇದು ಪುನರ್‌ನಿರ್ಮಾಣಗೊಂಡಿತು.

೨.೫.೧. ಸುಲ್ತಾನ ಅಹಮ್ಮದ ಶಹಾ ವಾಲಿ ಬಹಮನಿ ೧೪೨೨-೧೪೩೬:

ಫಿರೋಜ್‌ಶಹಾನ ಸಹೋದರ ಅಹಮ್ಮದನು ಗೇಜು ದರಾಜರ ಬೆಂಬಲದಿಂದ ಅಧಿಕಾರ ಗದ್ದುಗೆಯನ್ನು ಏರಿದ. ಗುಲಬರ್ಗಾ ರಾಜ್ಯ ಆಗ ಗೊಂದಲದ ಬೀಡಾಗಿತ್ತು. ಒಳಸಂಚು, ಪಿತೂರಿ, ಕೋಲೆಗಳ ಕೇಂದ್ರವಾಗಿತ್ತು. ಆದ್ದರಿಂದ ರಾಜ್ಯಧಾನಿ ಗುಲಬರ್ಗಾದಿಂದ ಬೀದರಗೆ ಸ್ಥಳಾಂತರಿಸುವುದು

ಅನಿವಾರ್ಯವಾಗಿತ್ತು. ಬೀದರ ರಾಜ್ಯದಲ್ಲಿ ಶಾಂತಿ ಮತ್ತು ನೆಮ್ಮದಿಯಿಂದ ಕೆಲ ಕಾಲ ಬಹಮನಿ ರಾಜ್ಯ ಮುಂದುವರೆಯಿತು.

ಅಹಮ್ಮದನ ಕಾಲದಲ್ಲಿ ವಿಜಯನಗರ ಮತ್ತು ತೆಲಂಗಾಣದ ಅರಸರೊಂದಿಗೆ ಯುದ್ಧ ಮುಂದುವರೆಯಿತು. ಇತನು ಗುಜರಾತ ರಾಜ್ಯದ ಕೆಲಭಾಗ ಮತ್ತು ಪಶ್ಚಿಮ ದಿಕ್ಕಿನ ಪ್ರಾಂತಗಳ ಮೇಲೆ ದಾಳಿ ಮಾಡಿ ತನ್ನ ಸಾಮ್ರಾಜ್ಯ ವಿಸ್ತರಿಸಿದ.[೧೬೬] ಇತನ ಕಾಲದಲ್ಲಿ ಶಿಕ್ಷಣ ಮತ್ತು ಸಾಹಿತ್ಯ ಅಪಾರ ಪ್ರಗತಿ ಸಾಧಿಸಿತು. ಪರ್ಶಿಯಾದ ಕಿರ್ಮಾನದ ಹಲವು ಬರಹಗಾರರು ಬಹಮನಿ ರಾಜ್ಯಕ್ಕೆ ಆಗಮಿಸಿದರು. "ಶೇಖ್ ಅಜರೈ" ಬೀದರ ಅರಮನೆಯನ್ನು ತನ್ನ ಕೃತಿ "ಬಹಮನ್ ನಾಮಾ"ದಲ್ಲಿ ವಿವರಿಸಿದ್ದಾನೆ. ಇದಕ್ಕಾಗಿ ಅಹಮ್ಮದ ೨,೦೦,೦೦೦ ಡೆಕ್ಕನ ಟಂಕಾಗಳನ್ನು ಕಾಣಿಕೆಯಾಗಿ ನೀಡಿದ. ಗುಜರಾತ ದಂಡಯಾತ್ರೆಯ ನಂತರ ಬೀದರ ನಗರವನ್ನು ನಿರ್ಮಾಣಗೊಳಿಸಿದ. ಅಂದಿನಿಂದ ಬೀದರ ಬಹಮನಿಯರ ಕೇಂದ್ರ ಸ್ಥಳವಾಯಿತು. ನಂತರ ಗುಲಬರ್ಗಾದಿಂದ ಎಲ್ಲಾ ಆಡಳಿತ ಯಂತ್ರ ಬೀದರಗೆ ಸ್ಥಳಾಂತರಗೊಂಡಿತು ಎಂದು ಬರ್‌ಹಾನ-ಇ-ಮಾಸಿರ್ ಮತ್ತು ತುರುಖಿರಾತ್-ಉಲ್-ಮುಲ್ಕನಲ್ಲಿ ವಿವರಿಸಲಾಗಿದೆ. ಇತನ ಮಗ ಮಹಮ್ಮದನ ನೇತೃತ್ವದಲ್ಲಿ ಕೋಟೆ, ಅದರ ಒಳಗಡೆ ಸಭಾಭವನ, 'ಸೋಲಾಕಂಬ ಮಸೀದಿ' (೧೪೨೪) ಮುಂತಾದ ರಕ್ಷಣಾ ಸಂಬಂಧಿ ಮತ್ತು ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿ ಅದಕ್ಕೆ **'ಮುಮದಾಬಾದ'** ಎಂದು ಮರುನಾಮಕರಣಗೊಳಿಸಲಾಯಿತು.[೧೬೭] ಇತನು ಕ್ರಿ.ಶ. ೧೪೩೬ ಫೆಬ್ರುವರಿಯಲ್ಲಿ ಮರಣ ಹೊಂದಿದನು.

೨.೫.೨. ಅಲ್ಲಾವುದ್ದೀನ ಶಹಾ ಬಹಮನಿ II ೧೪೩೬-೧೪೫೮:

ಅಹಮ್ಮದ ಉತ್ತರಾಧಿಕಾರಿಯಾಗಿ ಎಡನೆಯ ಅಲ್ಲಾವುದ್ದೀನ ಶಹನು ೧೪೩೬ರಲ್ಲಿ ಅಧಿಕಾರಕ್ಕೆ ಬಂದನು. ಹೆಚ್ಚಿನ ಅವಧಿ ಯುದ್ಧದಲ್ಲಿ ಕಳೆದನು. ಅಲ್ಲದೆ ವಿಲಾಸಿಯಾದ ಇತನು ಪ್ರಜೆಗಳ ಯೋಗ ಕ್ಷೇಮ ಮರೆಯಲಿಲ್ಲ. ಇತನ ಕಾಲದಲ್ಲಿ ಹಲವು ಕಟ್ಟಡಗಳು ನಿರ್ಮಾಣಗೊಂಡವು. ಆಸ್ಪತ್ರೆಯ ಕಟ್ಟಡ ವಿಶೇಷವಾಗಿದೆ. ಇಸ್ಲಾಂ ಕಾನೂನು ಅಸ್ತಿತ್ವಕ್ಕೆ ಬಂದವು. ಈ ಕಾಲದಲ್ಲಿ ಅಫಕಿಸ್-ನಾನ್‌ಅಫಿಕಿಸ್ ಸಮಸ್ಯೆ ಗಂಭಿರವಾಗಿ ಪರಿಣಮಿಸ ತೊಡಗಿತು. ವೈವಾಹಿಕ ಸಂಬಂಧದಿಂದ ಈ ಸಮಸ್ಯೆ ಬಗೆಹರಿಸಿಕೊಳ್ಳಲು ಯತ್ನಿಸಿ. ಕಲೆ-ವಾಸ್ತು ಶಿಲ್ಪದಲ್ಲಿ ಆಸಕ್ತಿ ಇದ್ದ ಇತನು ಹಲವು ಕಟ್ಟಡಗಳನ್ನು ನಿರ್ಮಿಸಿದ. ಅರಮನೆ, ಆಸ್ಪತ್ರೆ, ಕಾವಲುಗೋಪುರ ಪ್ರಮುಖವಾಗಿವೆ. ಇತನು ೧೪೬೧ರಲ್ಲಿ ನಿಧನ ಹೊಂದಿದ.[೧೬೮]

೨.೫.೩. ನಿಜಾಮ್ ಶಹ ಬಹಮನಿ ೧೪೬೧-೧೪೬೩:

ಹುಮಾಯುನ್ ಶಹಾನ ನಿಧನದ ನಂತರ ೧೪೬೧ರಲ್ಲಿ ನಿಜಾಮ ಶಹಾನು ಅಧಿಕಾರಕ್ಕೆ ಬಂದನು. ಇತನು ಅಪ್ರಾಪ್ತನಾದ್ದರಿಂದ 'ರಾಜಮಾತೆ' ಎಲ್ಲಾ ಅಧಿಕಾರ ವಹಿಸಿಕೊಂಡಳು. ಶ್ರೇಷ್ಠ ಮಹಿಳೆಯಾದ

ಇಕೆಯು ಮಹಮ್ಮದ ಗವಾನ ಮತ್ತು ಖ್ವಾಜಾ-ಇ-ಜಹಾನರ ಸೇವೆಯಿಂದ ರಾಜ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಿದಳು. ಸುಲ್ತಾನನು ೧೪೬೩ರಲ್ಲಿ ಆಕಸ್ಮಿಕ ಸಾವನ್ನಪ್ಪಿದರಿಂದ ರಾಜಮಾತೆಯು 'ತ್ರಿಕೂಟ' ಸದಸ್ಯರ ಆಳ್ವಿಕೆ ಆರಂಭಿಸಿದಳು. ಈ ಕಾಲದಲ್ಲಿ ಒಳಸಂಚಿನಿಂದ ತ್ರಿಕೂಟ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. 'ಮಹಮ್ಮದ ಶಹಾನು' ಅಧಿಕಾರಕ್ಕೆ ಬಂದ ನಂತರ ಈ ಒಳಸಂಚು ಮಾಯವಾಯಿತು.

೨.೫.೪. ಮಹಮದ ಶಹಾ III ೧೪೬೩-೧೪೮೨:

ಮಹಮ್ಮದ ಶಹಾ IIIನೇ ಅಧಿಕಾರಕ್ಕೆ ಬಂದ ನಂತರ ರಾಜ್ಯವಿಸ್ತರಣೆಗೊಂಡಿತು. ಗವಾನನು ಈ ರಾಜ್ಯಕ್ಕೆ ಅಪಾರ ಸೇವೆ ಸಲ್ಲಿಸಿದ. ಬಹಮನಿ ರಾಜ್ಯವು ಅಪಾರ ವಿಸ್ತರಣೆಗೊಂಡಿದ್ದು ಇತನ ಕಾಲದಲ್ಲಿ ಗೆದ್ದುಕೊಂಡ ಪ್ರದೇಶಗಳನ್ನು ನಾಲ್ಕು ಭಾಗಗಳಾಗಿ (ತರಫ್) ವಿಂಗಡಿಸಿದ. ಬೀದರ ರಾಜ್ಯ ಹಲವು ಪ್ರಾಂತಗಳನ್ನು ಒಳಗೊಂಡಿತು. ಸೈನ್ಯಾಡಳಿತ ವ್ಯವಸ್ಥೆಗೆ ಹೆಚ್ಚಿನ ಗಮನ ಹರಿಸಿದ ಇತನು ಸೈನ್ಯದ ಸಂಘಟನೆ, ಭರ್ತಿ, ಕಾರ್ಯಾಚರಣೆಯಲ್ಲಿ ಹಲವು ಬದಲಾವಣೆಗಳನ್ನು ತಂದನು. ಕೆಲವು ಪ್ರಾಂತಗಳಲ್ಲಿ ಕೋಟೆಗಳನ್ನು ಸ್ಥಾಪಿಸಿ ಅವುಗಳನ್ನು ತರಫದಾರರಿಗೆ ನೀಡಿದ. ಮಹಮ್ಮದ ಆಳ್ವಿಕೆಯಲ್ಲಿ ಎಲ್ಲಾ ರಂಗಗಳು ಪ್ರಗತಿ ಹೊಂದಿದವು. ಎಲ್ಲಾ ಬದಲಾವಣೆಯಲ್ಲಿ ಮಹಮ್ಮದ ಗವಾನ ಪಾತ್ರ ಪ್ರಮುಖವಾಗಿದೆ.

೧೪೮೨ರಲ್ಲಿ ಮಹಮ್ಮದ ಗವಾನನ ಕೋಲೆಯಿಂದ ಬಹಮನಿ ರಾಜ್ಯ ಅವನತಿಯ ಹಂತ ತಲುಪಿತು. ಆದ್ದರಿಂದ ಸುಲ್ತಾನನು ತನ್ನ ಮಗ ರಾಜಕುಮಾರ ಮುಹಮ್ಮದನನ್ನು ಉತ್ತರಾಧಿಕಾರಿ ಎಂದು ಸಾರಿದ. ಕ್ರಿ.ಶ. ೧೪೮೨ ಮಾರ್ಚ ೨೪ರಂದು ಸಾವನ್ನಪ್ಪಿದ.

೨.೫.೫. ಮಹಮುದ ಶಹಾ ಬಹಮನಿ ೧೪೮೨-೧೫೧೮:

ಕ್ರಿ.ಶ. ೧೪೮೨ ಮೂರನೆಯ ಮಹಮ್ಮುದ ಶಹಾ ಮರಣ ಹೊಂದಿದ ನಂತರ ಆತನ ಅಲ್ಪ ವಯಸ್ಸಿನ ಮಗ ಮಹಮುದನು ಅಧಿಕಾರಕ್ಕೆ ಬಂದನು. ಗವಾನನ ಮರಣದ ನಂತರ ಪರದೇಶಿ ಮುಸ್ಲಿಂರು ತಮ್ಮ ಹುದ್ದೆಗೆ ರಾಜನಾಮೆ ನೀಡಿ ಸ್ವದೇಶಕ್ಕೆ ಮರಳಿದರು. ದೇಶಿಯ ಮುಸ್ಲಿಂರಲ್ಲಿ ಅರಾಜಕತೆ ಉಂಟಾಯಿತು. ದೇಶದಲ್ಲಿ ಕೊಲೆ, ಸುಲಿಗೆ, ಒಳಸಂಚು ಆರಂಭವಾಯಿತು. ಮಹಮುದನು ತನ್ನ ರಾಜ್ಯದ ರಕ್ಷಣೆಗಾಗಿ ಯತ್ನಿಸಿದ. ಆದರೆ ಕ್ಷಾತ್ರ ಬಲವಿಲ್ಲದ ಸುಲ್ತಾನನ ವಿರುದ್ಧ ಹಲವು ಸಾಮಂತರು ಸ್ವತಂತ್ರ್ಯರಾದರು. ಅವರಲ್ಲಿ ಪ್ರಮುಖರಾದವರೆಂದರೆ ಕ್ರಿ.ಶ. ೧೪೯೧ರಲ್ಲಿ ಯುಸುಫ್ ಆದಿಲ್ ಶಹಾ ಬಿರಜಾಪುರದಲ್ಲಿ[೧೬] ೧೪೯೦ರಲ್ಲಿ ನಿಜಾಮ್-ಉಲ್-ಮುಲ್ಕನು ಅಹಮ್ಮದನಗರದಲ್ಲಿ, ೧೪೯೦ರಲ್ಲಿ ಕುತುಬ್ ಶಹನು ಗೋಲಕೊಂಡದಲ್ಲಿ ಬಹಮನಿಯರಿಂದ ಸ್ವತಂತ್ರರಾದರು. ಖಾಸಿಮ್ ಬರೀದನು ೧೪೮೬ರಲ್ಲಿ ದಂಗೆ ಎದ್ದು ಬೀದರ ಕೋಟೆಯ್ನು ಮುತ್ತಿದ, ಸುಲ್ತಾನನ ವಿರುದ್ಧ ರಾಯರ

[illegible]

ಸಹಾಯ ಕೇಳಿದ, ಅಲ್ಲದೆ ನೆರೆಯ ಸಂಸ್ಥಾನಗಳಿಂದ ಸಹಾಯ ಪಡೆದು ಬಹಮನಿ ಸಾಮ್ರಾಜ್ಯವನ್ನು ದುರ್ಬಲಗೊಳಿಸಿದ.

ಕ್ರಿ.ಶ. ೧೪೯೩ರಲ್ಲಿ ಗೋವಾ ಪ್ರಾಂತಾಧಿಕಾರಿಯಾದ ಬಹಾದ್ದೂರಖಾನ ಗಿಲಾನಿಯು ಬಹಮನಿಯರ ವಿರುದ್ಧ ದಂಗೆ ಎದ್ದ. ಯೂಸೂಫ್ ಆಧಿಲ್ ಖಾನ (ಮಹಮ್ಮದ ಗವಾನನ ಮಗ) ಸುಲ್ತಾನನಿಗೆ ನಿಷ್ಠ ತೋರಿದ್ದರಿಂದ ಬಹಮನಿ ಸಾಮ್ರಾಜ್ಯ ಕೆಲಕಾಲ ಮುಂದುವರೆಯಿತು. ಆದರೆ ದುರ್ಬಲ ಸುಲ್ತಾನನ ವಿರುದ್ಧ ಇತನು ಸ್ವಂತಂತ್ರನಾಗಲು ಯತ್ನಿಸಿ ಕ್ರಿ.ಶ. ೧೫೧೦ರಲ್ಲಿ ಮಡಿದ[೨೦] ವಿದೇಶಿಯ ಆಕ್ರಮಣಗಳು ಆರಂಭವಾದವು ಪೋರ್ಚುಗಿಸರು ಗೋವಾ ಹಿಡಿದುಕೊಂಡರು.

೨.೫.೬. IVನೇ ಅಹಮ್ಮದ ೧೫೧೮-೨೦

ಮಹಮ್ಮದನು ೧೫೧೮ರಲ್ಲಿ ನಿಧನ ಹೊಂದಿದ. ಇತನ ಮಗ ಅಹಮ್ಮದ ಶಹಾ ೨ನು ಅಧಿಕಾರಕ್ಕೆ ಬಂದನು. ಇತನ ಕಾಲ ಸಂಪೂರ್ಣ ಅವನಿಗಂತ ತಲುಪಿತು ೧೫೨೦ರಲ್ಲಿ ಇತ ಮರಣ ಹೊಂದಿದ.

೨.೫.೭. ಅಲ್ಲಾವುದ್ದೀನ ಶಹಾ ಬಹಮನಿ II ೧೫೨೦-೧೫೨೩

೨ನೇ ಅಹಮ್ಮದ ಶಹನ ನಿಧನದ ನಂತರ (೧೫೨೦) ಹದಿನಾಲ್ಕು ದಿನಗಳ ಕಾಲ ಸಿಂಹಾಸನ ಖಾಲಿ ಉಳಿಯಿತು. ಇದರಿಂದ ಅಮಿರಬರಿದನು ತಾನೆ ಸುಲ್ತಾನನೆಂದು ಘೋಷಿಸಿಕೊಂಡ. ಆದರೆ ಮುಂದಿನ ರಾಜಕೀಯ ಸನ್ನಿವೇಶಗಳನ್ನು ನೆನೆಸಿಕೊಂಡು ತನ್ನ ಸ್ಥಾನಕ್ಕೆ ಅಲ್ಲಾವುದ್ದೀನನ್ನು ಕುಳ್ಳರಿಸಿ ತಾನೆ ಅಧಿಕಾರ ಆರಂಭಿಸಿದ. ಇತನ ನಂತರ ಬಹಮನಿಯ ಉತ್ತರಾಧಿಕಾರಿಗಳು ಬಹಳ ಕಾಲ ಉಳಿಯಲಿಲ್ಲ. ವಾಲಿವುಲ್ಲಾ ಶಹಾ ೧೫೨೩-೧೫೨೬೧ ಕಲಿಮುಲ್ಲಾ ಶಹಾ ೧೫೨೬-೧೫೩೮೨, ಬಾಬರನು ದೆಹಲಿಯಲ್ಲಿ ಪಟ್ಟಾಭಿಷೇಕನಾದ ನಂತರ ದಕ್ಷಿಣದ ರಾಜಕೀಯ ಸ್ಥಿತಿ ಸಂಪೂರ್ಣ ಬದಲಾವಣೆಗೊಂಡಿತು. ಬಹಮನಿ ಸಾಮ್ರಾಜ್ಯ ಅವನತಿ ಹೊಂದಿ, ಐದು ಪ್ರಾಂತಗಳಾಗಿ ವಿಭಜನೆ ಹೊಂದಿತು. ಅವುಗಳೆಂದರೆ, ಬೀದರ, ಬೇರಾರ, ಗೋಲ್ಕೊಂಡಾ, ಅಹಮ್ಮದ ನಗರ ಮತ್ತು ಬಿಜಾಪುರ.

೨.೫.೮. ಮಹಮೂದ ಗವಾನ (೧೪೫೩ ರಿಂದ ೧೪೮೨)

ಗುಲಬರ್ಗಾ ರಾಜ್ಯದಲ್ಲಿ ಸೈಪುದ್ದೀನ ಘೋರಿ ಮತ್ತು ಖ್ವಾಜಾ ಬಂದೇನವಾಜರು ಸುಲ್ತಾನರಲ್ಲದಿದ್ದರು, ಬಹಮಿನಯರ ರಾಜಕೀಯದಲ್ಲಿ ಮಹತ್ವ ಪಾತ್ರ ವಹಿಸಿರುವಂತೆ ಬೀದರ ರಾಜ್ಯದಲ್ಲಿ ಮಹಮೂದ ಗವಾನನು ಮಹತ್ವದ ಪಾತ್ರ ವಹಿಸಿದ್ದಾನೆ, ಇತನಿಗೆ **'ನಡೆದಾಡುವ ಲೇಖನಿ'** ಎಂದು ಕರೆಯುತ್ತಾರೆ.

ಗವಾನನು ಇರಾನದ 'ಗಿಲಾನ್'ದಲ್ಲಿ ೧೪೧೧ರಲ್ಲಿ ಜನಿಸಿದ. ಶ್ರೀಮಂತ ಮನೆತನದಲ್ಲಿ ಜನಿಸಿದ ಇತನು ಉತ್ತಮ ಶಿಕ್ಷಣ ಪಡೆದನು. ಇತನ ಮೂಲ ಹೆಸರು ಇಮಾದ್‌ವುದ್ದೀನ್ ಮಹಮ್ಮದ.

ಗಿಲಾನದಿಂದ ಕೈರೊ, ಅಲ್ಲಿಂದ ಮುಮದಾಬಾದ (ಬೀದರ)ಗೆ ಬಂದು ನೆಲೆಸಿದ. ಎರಡನೆಯ ಅಹಮ್ಮದ ಶಹಾನು ಇತನ ಪ್ರತಿಭೆಗೆ ಮೆಚ್ಚಿ ಉನ್ನತ ಹುದ್ದೆಯನ್ನು ನೀಡಿದ. ಕೊನೆಗೆ ಪ್ರಧಾನ ಮಂತ್ರಿ ಹುದ್ದೆಗೆ ನೇಮಕ ಮಾಡಿದನು. ಗವಾನನು ಕ್ರಿ.ಶ. ೧೪೮೧ರವರೆಗೆ ಬಹಮನಿ ಸಾಮ್ರಾಜ್ಯಕ್ಕೆ ಅಪಾರ ಸೇವೆ ಸಲ್ಲಿಸಿದ. ಶಿಕ್ಷಣ, ಸಾಹಿತ್ಯ, ಕಲೆ ವಾಸ್ತು ಶಿಲ್ಪದಲ್ಲಿ ಆಸಕ್ತಿ ಹೊಂದಿರುವ ಗವಾನನು ಬಹಮನಿ ಸಾಮ್ರಾಜ್ಯದ ಕೀರ್ತಿ ಉತ್ತುಂಗ ಶಿಖರಕ್ಕೇರಿಸಿದ. ಇತನ ಕಾಲದಲ್ಲಿ ನಿರ್ಮಾಣಗೊಂಡ ಗವಾನ ಕಾಲೇಜು ಅಥವಾ ಮದರಸಾ ಇತನ ಹೆಸರನ್ನು ಚಿರಸ್ಥಾಯಿಗೊಳಿಸಿದ. ಬಹಮನಿ ಸಾಮ್ರಾಜ್ಯದ ಆಡಳಿತವನ್ನು ವೈಜ್ಞಾನಿಕ ತಳಹದಿಯ ಮೇಲೆ ಸುಧಾರಣೆಗೊಳಿಸಿ, ರಾಜ್ಯಕ್ಕೆ ಹೆಚ್ಚಿನ ಪ್ರಮಾಣದ ತೆರಿಗೆ ಬರುವಂತೆ ಮಾಡಿದ. ಕ್ರಿ.ಶ. ೧೪೮೧ರಲ್ಲಿ ಇತನ ವಿರುದ್ಧ ನಡೆದ ಒಳಸಂಚಿನಲ್ಲಿ ವಿರೋದಿಗಳು ಯಶಸ್ವಿ ಹೊಂದಿದರು. ಹೀಗಾಗಿ ತನ್ನ ೭೮ನೇಯ ವಯಸ್ಸಿನಲ್ಲಿ ಸಾವನ್ನಪ್ಪಿದ.

೨.೬. ಬಿಜಾಪುರದ ಆದಿಲ್ ಶಾಹಿಗಳು (೧೪೯೦-೧೬೮೬):

ಬಹಮನಿ ರಾಜ್ಯವು ಪತನಗೊಂಡ ನಂತರ ಗುಲಬರ್ಗಾ ಜಿಲ್ಲೆಯ ಮೇಲೆ ಆದಿಲ್‌ಶಾಹಿಗಳು ಅಧಿಕಾರ ಸ್ಥಾಪಿಸಿದರು. ೧೪೮೭ರಲ್ಲಿ ಬಿಜಾಪೂರ ಪ್ರಾಂತಾಧಿಕಾರಿಯಾದ ಯೊಸುಫ ಆದಿಲ್‌ಖಾನನು ಬೇರಾರನಿಂದ ಪ್ರತ್ಯಕಗೊಂಡು ಸ್ವತಂತ್ರನಾಗಿ ತನ್ನ ಹೆಸರಿನಲ್ಲಿ ಕುತಬಾ ಪಠಿಸಿದ ಆದರೆ 'ಶಹಾ' ಎಂಬ ಬಿರುದು ಪಡೆಯಲಿಲ್ಲ. ಇತನ ಮೊಮ್ಮಗ 'ಇಬ್ರಾಹಿಂ'ನು ಸುಲ್ತಾನನೆಂದು ಘೋಷಿಸಿಕೊಂಡನು (೧೫೩೮-೫೯). ದಕ್ಷಿಣ ಭಾರತದಲ್ಲಿ 'ಆದಿಲ್‌ಶಾಹಿ' ಮನೆತನದ ಸ್ಥಾಪಕನಾದ ಇತನು ಸಾಮ್ರಾಜ್ಯವನ್ನು ರಕ್ಷಿಸಿ ಬೆಳೆಸಿದ. ವಿಜಯನಗರದೊಂದಿಗಿನ ಯುದ್ಧದಲ್ಲಿ ಇತನು ನಿಧನ ಹೊಂದಿದ ಇತನ ಸಮಾಧಿಯು ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಗೋಗಿಯಲ್ಲಿದೆ.[೭೧]

೨.೬.೧. ಇಸ್ಮಾಲ್ ಆದಿಲ್ ಖಾನ್ (೧೫೧೦-೧೫೩೪):

ಯೂಸುಫನ ಮಗ ಇಸ್ಮಾಯಿಲ್‌ನ ದಂಗೆಯ ನಂತರ ಅಧಿಕಾರಕ್ಕೆ ಬಂದ ಆತನು ಅಪ್ರಾಪ್ತನಾದ್ದರಿಂದ ಕಮಾಲ್‌ಖಾನನು ಬೀದರನಿಂದ ಬಿಜಾಪುರಕ್ಕೆ ಹೋಗಿ ಆಡಳಿತ ನಿರ್ವಹಿಸತೊಡಗಿದ. ಸುಲ್ತಾನನ ದುರ್ಬಲತೆಯ ಲಾಭ ಪಡೆದು ತಾನೆ ಕೀರಿಟ ಧರಿಸಲು ಯತ್ನಿಸಿದ. ರಾಜಕೀಯ ಗೊಂದಲ ಒಳಸಂಚಿನಿಂದ ಕೂಡಿದ ವಾತಾವರಣ ಸಂಪೂರ್ಣ ಕೊಲಾಹಲಗೊಂಡಿತು. ಇಸ್ಮಾಯಿಲ್ನು ರಾಜ್ಯ ಬಿಟ್ಟು ಮಕ್ಕಾಯಾತ್ರೆಗೆ ತೆರಳಲು ಸಿದ್ಧನಾದಗ ಆತನನ್ನು ಕ್ಷಮಿಸಲಾಯಿತು. ಆದರೆ ಮುಂದಿನ ಚಟುವಟಿಕೆಯಲ್ಲಿ ಕಮಾಲ್‌ಖಾನನ ಕೊಲೆಯಾಯಿತು. ಆತನ ಅನುಯಾಯಿಗಳು ರಾಜ್ಯದಲ್ಲಿ ದಂಗೆ ಎಳಲು ಯತ್ನಿಸಿದರು. ಇದರ ಲಾಭ ಪಡೆದು ನೆರೆಯ ಅರಸರು ಬಹಮನಿಯರ ಪ್ರಾಂತಗಳನ್ನು ಹಿಡಿದುಕೊಂಡರು ಅಲ್ಲದೆ ಕೆಲವುಸ ಸಾಮಂತರು ಸ್ವಾತಂತ್ರರಾದರು. ಗುಲಬರ್ಗಾದ ಅಮೀರರು ಈ ಪ್ರಾಂತವನ್ನು ಹಿಡಿದುಕೊಂಡರು.

ಇಸ್ಮಾಯಿಲ್‌ನು ತನ್ನ ಸೈನಿಕ ಕಾರ್ಯಾಚರಣೆಯನ್ನು ಆರಂಭಿಸಿ, ಕಳೆದುಕೊಂಡ ಪ್ರಾಂತಗಳನನು ಮರಳಿ ಪಡೆಯಲು ಯತ್ನಿಸಿದ. ಈ ಕಾಲದ ಪ್ರಮುಖ ಘಟನೆಗಳೆಂದರೆ, ವಿಜಯನಗರದ ಕೃಷ್ಣದೇವರಾಯನೊಂದಿಗೆ ಸಂಬಂಧ, ಅಮೀರಬರೀದನೊಂದಿಗೆ ಸಂಬಂಧ, ಈ ಘಟನೆಗಳು ಪ್ರಮುಖವಾಗಿವೆ. ಇತನು ಕೊನೆಯ ಕಾಲದಲ್ಲಿ ಅನಾರೋಗ್ಯದಿಂದ ಬಳಲಿ ಕ್ರಿ.ಶ. ೧೫೩೪ ಅಗಸ್ಟ ೨೭ರಂದು ಸಾವನ್ನಪ್ಪಿದ ಇತನನ್ನು ಸಾಗರದಲ್ಲಿ ಸಮಾಧಿ ಮಾಡಲಾಯಿತು.

೨.೬.೨. ಮಲ್ಲು ಆದಿಲ್ ಖಾನ (೧೫೩೪-೩೫):

ಇಸ್ಮಾಲ್‌ನು ನಿಧನದ ನಂತರ ಆತನ ಹಿರಿಯ ಮಗ ಮಲ್ಲು ಖಾನನು ತಂದೆಯ ಸಲಹೆಯಂತೆ ಅಧಿಕಾರಕ್ಕೆ ಬಂದನು. ಇತನು ವಿಷಯ ಲಂಪಟ ಸುಲ್ತಾನನಾದ್ದರಿಂದ ಎಲ್ಲರ ಬೆಂಬಲ ಕಳೆದುಕೊಂಡು, ಕೊನೆಗೆ ತನ್ನ ಹುದ್ದೆಯನ್ನು ಕಳೆದುಕೊಂಡ. ಇತನ ಸ್ಥಾನದಲ್ಲಿ ಇತನ ಕಿರಿಯ ಸಹೋದರ ಇಬ್ರಾಹಿಂನನ್ನು ತರಲಾಯಿತು. ಕ್ರಿ.ಶ. ೧೫೩೫ರಲ್ಲಿ ಇಬ್ರಾಹಿಂನು ಅಧಿಕಾರಕ್ಕೆ ಬಂದನು.

೨.೬.೩. ಇಬ್ರಾಹಿಂ ಆದಿಲ್ ಶಹಾ-I (೧೫೩೫-೫೭):

ಇಬ್ರಾಹಿಂನು ೧೫ನೇಯ ವಯಸ್ಸಿನಲ್ಲಿ ಅಧಿಕಾರಕ್ಕೆ ಬಂದನು. ಆತನ ಪ್ರಧಾನಿ ಅಜಾದ ಖಾನನು ಮುಂದಿನ ೫ ವರ್ಷಗಳ ಆಳ್ವಿಕೆ ಮಾಡಿದನು. ಇತನ ಅಧಿಕಾರ ಅವಧಿಯಲ್ಲಿ ವಿಜಯನಗರದೊಂದಿಗೆ ಸಂಬಂಧ, ಬರೀದ ಮತ್ತು ಕುತುಬ್ ಶಾಹಿಗಳೊಂದಿಗೆ ಯುದ್ಧ, ಪೋರ್ಚಗಿಸರು ಮುನ್ನಡೆ ಸಾಧಿಸದಂತೆ ಎಚ್ಚರಿಕೆ ವಹಿಸುವುದು ಮತ್ತು ರಾಜ್ಯದ ಪ್ರಗತಿಗಾಗಿ ಶ್ರಮಿಸುವುದು ಇತನ ಪ್ರಮುಖ ಕರ್ತವ್ಯವಾಗಿತ್ತು. ಕ್ರಿ.ಶ. ೧೫೩೬ರಲ್ಲಿ ವಿಜಯನಗರ ಆಂತರಿಕ ಬಿಕ್ಕಟ್ಟಿನಲ್ಲಿ ಆಮಂತ್ರಣದ ಮೇರಿಗೆ ಮಧ್ಯ ಪ್ರವೇಶಿಸಿ, ಸಮಸ್ಯೆಯನ್ನು ಧಮನಗೊಳಿಸಿ ನಂತರ ಆಧೋನಿಯನ್ನು ವಶಪಡಿಸಿಕೊಂಡ. ಬಹಮನಿಯ ಕೊನೆಯ ಸುಲ್ತಾನ ಕಲಿಮುಲ್ಲಾಶಹಾನು ೧೫೩೬ರಲ್ಲಿ ನಿಧನ ಹೊಂದಿದ ನಂತರ ಬಿಜಾಪುರ ಸುಲ್ತಾನರು 'ಶಹಾ' ಬಿರುದು ಧರಿಸಿ ಪರಿಪೂರ್ಣ ಸ್ವತಂತ್ರರಾದರು. ವಿಜಯನಗರದೊಂದಿಗೆ ಒಳ್ಳೆಯ ಸಂಬಂಧ ಮುಂದುವರೆಯಿತು.

ಅಹಮ್ಮದನಗರದೊಂದಿಗಿನ ಯುದ್ಧದಲ್ಲಿ ಗುಲಬರ್ಗಾ ಕೋಟೆ ಸುಲ್ತಾನನಿಗೆ ಆಶ್ರಯ ನೀಡಿಲು. ಪೋರ್ಚುಗೀಸರೊಂದಿಗೆ ಯುದ್ಧ ಆರಂಭವಾದಾಗ ಆದಿಲ್ ಶಹಗಳ ವಿರುದ್ಧ ಒಂದು ಒಳಸಂಚು ರೂಪಗೊಂಡಿತು. ಅಹಮ್ಮದ ನಗರದೊಂದಿಗೆ ಯುದ್ಧ ಮಾಡಿ ಬರುವಾಗ ಸೋಲಾಪುರದ ಬಳಿ ಎಲ್ಲಾ ಶತ್ರುಗಳು ಒಂದಾಗಿ ಹೋರಾಟ ಮಾಡಿ, ಮೇಲುಗೈಯಿ ಸಾಧಿಸಿದರು. ವಿಜಯನಗರ ರಾಯರು ಇದರಲ್ಲಿ ಇದರಲ್ಲಿ ಸೇರಿಕೊಂಡು ಹಿಂದಿನ ಸೇಡು ತೀರಿಸಿಕೊಂಡರು. ಶತ್ರುಗಳೆಲ್ಲರು ಒಂದಾಗಿ ಬಿಜಾಪುರವನ್ನೆ ಧ್ವಂಶಮಾಡಲು ಯೋಚಿಸಿದರು. ಆದರೆ ಸುಲ್ತಾನನು ಇದೆ ಕಾಲಕ್ಕೆ ಆಕಸ್ಮಿಕ ಕಾಯಿಲೆ ಬಿದ್ದು ಕ್ರಿ.ಶ. ೧೫೫೩ ಡಿಸೆಂಬರ ೩೦ ರಂದು ಇಬ್ರಾಹಿಂ ಆದಿಲ್ ಶಹಾ ನಿಧನ ಹೊಂದಿದನು.

೨.೬.೪. ಒಂದನೆಯ ಅಲಿ ಆದಿಲ್ ಶಹಾ (೧೫೫೮-೧೫೮೦):

ಇತನು ಅಧಿಕಾರಕ್ಕೆ ಬಂದಾಗ ಸೋಲಾಪುರ, ಕಲ್ಯಾಣ ವಶಪಡಿಸಿಕೊಂಡು ಬೀದರ, ಗೋಲ್ಕುಂಡಾ, ಅಹಮ್ಮದನಗರಗಳ ಸುಲ್ತಾನರನ್ನು ಸದೆ ಬಡಿಯುವುದು ಮತ್ತು ಪೋರ್ಚುಗೀಸರ ವಶವಾದ ಪ್ರಾಂತಗಳನ್ನು ಮರಳಿ ಪಡೆಯುವುದು ಇತನ ಪ್ರಮುಖ ಕರ್ತವ್ಯವಾಗಿತ್ತು. ಕ್ರಿ.ಶ. ೧೫೫೯ ರಿಂದ ೧೫೬೧ರವರೆಗೆ ನಿರಂತರ ಯುದ್ಧದಲ್ಲಿ ಕಳೆದನು. ಇದರಲ್ಲಿ ರಾಮರಾಯನು ಪ್ರಮುಖ ಪಾತ್ರ ವಹಿಸಿದನು. ರಾಮರಾಯನ ಸಹಾಯದಿಂದ ಕಲ್ಯಾಣ ವಶಪಡಿಸಿಕೊಂಡರು. ಒಪ್ಪಂದ ಪ್ರಕಾರ ಗುಲಬರ್ಗಾ ಜಿಲ್ಲೆಯ ಯಾದಗಿರ ಸಮೇತ ಹಲವು ಪ್ರಾಂತಗಳು ರಾಮರಾಯನು ಪಡೆದನು. ರಾಮರಾಯನ ಅಹ:ಭಾವದಿಂದ ಶಾಹಿ ಮನೆತನಗಳು ಎಚ್ಚೆತ್ತವು.

ತಮ್ಮ ತಾತ್ಕಾಲಿಕ ಭೇದ ಮರೆತು ವೈವಾಹಿಕ ಸಂಬಂಧ ಮಾಡಿಕೊಂಡರು. ಉದಾ: ಹುಸೇನ್ ನಿಜಾಮ ಶಹನ ಮಗಳಾದ ಚಾಂದಬೀಬಿಯನ್ನು ಆದಿಲ್ ಶಹನು ಮದುವೆಯಾದನು. ಈ ರೀತಿಯ ವೈವಾಹಿಕ ಸಂಬಂಧದಿಂದ ಇಬ್ರಾಹಿಂ ಕುತುಬ್ ಶಹ, ಹುಸೇನ ನಿಜಾಮ ಶಹರು ಒಂದಾಗಿ ೧೫೬೫ ಜನವೇರಿ ೨೩ರಂದು ತಾಳಿಕೋಟೆ (ರಕಸ ತಂಗಡಿ)ಯಲ್ಲಿ ವಿಜಯನಗರದೊಂದಿಗೆ ಘೋರಯುದ್ಧ ಮಾಡಿ, ರಾಮರಾಯನ ಸೈನ್ಯವನ್ನು ಸದೆಬಡಿದರು. ರಾಮರಾಯಸೋತು ಯುದ್ಧದಲ್ಲಿ ಮರಣ ಹೊಂದಿದ.

ಕ್ರಿ.ಶ. ೧೫೭೦ರಲ್ಲಿ ಒಪ್ಪಂದ ಮುರಿದು ಮತ್ತೆ ಆಂತರಿಕ ಯುದ್ಧ ಆರಂಭವಾಯಿತು. ಇದರಲ್ಲಿ ಅಲಿ ಆದಿಲ್ ಶಹನು ಮತ್ತೆ ಹೆಚ್ಚಿನ ಪ್ರಾಂತಗಳನ್ನು ಹಿಡಿದುಕೊಂಡನು. ಮೊಗಲ್ ಚಕ್ರವರ್ತಿ ಅಕ್ಬರನೊಂದಿಗೆ ಒಳ್ಳೆಯ ಸಂಬಂಧ ಹೊಂದಿದ ಕ್ರಿ.ಶ. ೧೫೮೦ರಲ್ಲಿ ಇತನ ಸೇವಕನು ಸುಲ್ತಾನನನ್ನು ಇರಿದುಕೊಂಡನು.

ಗುಲಬರ್ಗಾ ಕೋಟೆಯ ಪಶ್ಚಿಮ ಗೋಡೆಯಲ್ಲಿ ಇರುವ ಒಂದು ಶಾಸನದ ಪ್ರಕಾರ "ಇಲ್ಲಿಯ ಬುರ್ಜದೌಲತ್" ಎಂಬ ಕಟ್ಟಡವು ಅಲಿ ಆದಿಲ್ ಶಹನ ಅಧಿಕಾರಿ ಅರಬ್‌ಖಾನನು ಸುಲ್ತಾನನ ಆದೇಶದ ಮೇರಿಗೆ ನಿರ್ಮಿಸಿದನೆಂದು ಅದರಲ್ಲಿ ಉಲ್ಲೇಖಿಸಲಾಗಿದೆ.[೧೨] ಅದೇ ರೀತಿ ಕೋಟೆಯ ಎರಡು ಗೋಡಗಳ ಮಧ್ಯದಲ್ಲಿ (ಪಶ್ಚಿಮ ಭಾಗ) ಇರುವ ಬಾವಿಯನ್ನು ಕ್ರಿ.ಶ. ೧೫೬೧-೬೨ರಲ್ಲಿ ಸುಲ್ತಾನನ ಆದೇಶದ ಮೇರೆಗೆ ನಿರ್ಮಿಸಲಾಗಿದೆ. ಅದೇ ರೀತಿ ಕೋಟೆಯ ಬುರ್ಜನ ಮೇಲೆ ಇರುವ ಮತ್ತೊಂದು ಶಾಸನದಲ್ಲಿ 'ಅಹಸನಾಬಾದ ನಗರದ ಕಿಲ್ಲೆಯನ್ನು ಇತನ ಅಧಿಕಾರಿಯಾದ ಬಾಬಾಜೀಬಾಬಿತ್‌ಅಲಿಯ ಆದೇಶದ ಮೇರಿಗೆ ಕ್ರಿ.ಶ. ೧೫೭೩-೪೦೪' ಕಟ್ಟಿಸಿದನೆಂದು ಹೇಳಲಾಗಿದೆ. ಗುಲಬರ್ಗಾ ಕೋಟೆಯಲ್ಲಿ ಭವನವನ್ನು ಇತನೇ ರಚಿಸಿದನೆಂದು ಮತ್ತೊಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ (೧೫೭೩-೭೪).

೨.೬.೫. ಎರಡನೆಯ ಇಬ್ರಾಹಿಂ ಆದಿಲ್ ಶಹ (ಕ್ರಿ.ಶ. ೧೫೮೦-೧೬೨೭):

ಬಿಜಾಪುರದ ಆದಿಲ್ ಶಾಹಿಗಳ ಇತಿಹಾಸದಲ್ಲಿಯೆ ಎರಡನೆಯ ಇಬ್ರಾಹಿಂ ಆದಿಲ್ ಶಹನು ಅತ್ಯಂತ ಶ್ರೇಷ್ಠ ದೊರೆ. ಸುಮಾರು ಅರ್ಧ ಶತಮಾನದವರೆಗೆ ಆಳಿದ ಇತನ ಅವಧಿಯಲ್ಲಿ ಹಲವು ಮಹತ್ವದ ಬದಲಾವಣೆಗಳಾದವು. ಕಲೆ, ವಾಸ್ತುಶಿಲ್ಪ, ಸಾಹಿತ್ಯ, ಶಿಕ್ಷಣ, ಆಡಳಿತ ಅತ್ಯಂತ ಉತ್ತುಂಗ ಶಿಖರಕ್ಕೇರಿದವು. ಇತನು ಅಪ್ರಾಪ್ತ ವಯಸ್ಸಿನವನಾದ್ದರಿಂದ ಚಾಂದಬೀಬಿಯು ಆಡಳಿತ ನೋಡಿಕೊಂಡು ಹೋದಳು. ಕ್ರಿ.ಶ. ೧೫೮೯ರಲ್ಲಿ ಇಬ್ರಾಹಂ ಆದಿಲ್ ಶಹನು ಸ್ವಾತಂತ್ರ ಆಳ್ವಿಕೆ ಆರಂಭಿಸಿದನು.

ಇತನ ಕಾಲದ ಮಹತ್ವ ಘಟನೆಗಳೆಂದರೆ, ಅಹಮ್ಮದ ನಗರದ ಮೇಲೆ ದಾಳಿ, ಮೊಗಲರೊಂದಿಗೆ ಸಂಘರ್ಷ, ಬೀದರ, ಆದೋನಿ ಮತ್ತು ಕರ್ನೂಲಗಳ ವಶ ಮುಂತಾದವುಗಳಿಂದ ತಾನೊಬ್ಬ ಶ್ರೇಷ್ಠ ಹೋರಾಟಗಾರನೆಂದು ತೋರಿಸಿಕೊಟ್ಟ. ಇತನು ಕ್ರಿ.ಶ. ೧೬೨೭ ಸೆಪ್ಟೆಂಬರ ೧೨ರಂದು ಮರಣ ಹೊಂದಿದ. ಇತನಿಗೆ **'ತಾಜುವುದ್ದೀನ್‌ಅಬುಲ್‌ಮುಜಫರ'** ಎಂಬ ಬಿರುದು ಇತ್ತೆಂದು ಗುಲಬರ್ಗಾ ಕೋಟೆಯ ಗಜದ್ವಾರದ ಬಳಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೧೭೩] ದೊರೆಯ ಆದೇಶದಂತೆ ಮೊಹಮ್ಮದ ಹೈದರನು ಇಲ್ಲಿ ಒಂದು ಬುರ್ಜನ್ನು ಕಟ್ಟಿಸಿದನು.

ಗುಲಬರ್ಗಾ ಕೋಟೆಯ ಒಳಗಡೆ ಇರುವ ಬೃಹತ್ ಬುರ್ಜನ್ನು (ಕಾವಲುಗೋಪುರ) ಮತ್ತು ಅಲ್ಲಿ ಒಂದು ಭಾವಿಯನ್ನು ಕಟ್ಟಿಸಿದನು. ಅಲ್ಲದೆ ನಯಬತ್‌ಬುರಜ್ (ಹನುಮಾನ ಬುರುಜ) ಕ್ರಿ.ಶ. ೧೬೦೯-೧೦ ರಲ್ಲಿ ಮಲಿಕ್ ಯಾಕುತ್ ದೊರೆಯ ಹೆಸರಿನಲ್ಲಿ ನಿರ್ಮಿಸಿದ. ಅಲ್ಲದೆ ಕೋಟೆಯ ಪಶ್ಚಿಮ ಭಾಗದಲ್ಲಿರುವ ೨೫ ಅಡಿ ಉದ್ದನೆಯ ತೋಪಿನ ಸಲುವಾಗಿ **'ನವರಸ್‌ಬುರ್ಜ'**ನ್ನು ಎರಡನೆಯ ಇಬ್ರಾಹಿಂ ಆದಿಲ್ ಶಹನ ಕಾಲದಲ್ಲಿ ಪೂರ್ಣಗೊಳಿಸಿದ (೧೬೨೩-೨೪). ಈ ರೀತಿ ಗುಲಬರ್ಗಾ ಕೋಟೆಯ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳು ಇಬ್ರಾಹಿಂ ಆದಿಲ್ ಶಹನ ಅನುಮತಿಯಂತೆ ನಿರ್ಮಿಸಲಾಗಿದೆ.

ಗುಲಬರ್ಗಾ ಕೋಟೆಯ ಕೆಲವು ಭಾಗಗಳನ್ನು ಪುನರ್‌ನಿರ್ಮಾಣಗೊಳಿಸಲಾಯಿತು. ಇತನ ಕಾಲದಲ್ಲಿ ಗುಲಬರ್ಗಾ ಆಡಳಿತವನ್ನು ನಿರ್ವಹಿಸಿಕೊಂಡು ಹೋಗಲು ಹಲವು ಅಧಿಕಾರಿಗಳನ್ನು ನೇಮಿಸಿದ. ಅದೇ ರೀತಿ ಗುಲಬರ್ಗಾ ಜಿಲ್ಲೆಯ ಗೋಗಿ, ಸಗರ, ಶಹಪುರ, ವಾಗಣಗೇರಿ ಮುಂತಾದ ಕಡೆಯಲ್ಲಿ ದೊರೆತ ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಇಲ್ಲಿ ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳು ಆದಿಲ್ ಶಾಹಿಗಳ ಕಾಲದಲ್ಲಿ ನಿರ್ಮಾಣಗೊಂಡಿರುವ ವಿಷಯವನ್ನು ಕುರಿತು ಉಲ್ಲೇಖಿಸುತ್ತವೆ.

೨.೬.೬. ಮಹಮ್ಮದ ಆದಿಲ್‌ಶಹ (೧೬೨೭-೧೬೬೬):

ಎರಡನೆ ಇಬ್ರಾಹಿಂ ಆದಿಲ್ ಶಹನ ನಂತರ ಆತನ ಎರಡನೆಯ ಮಗ ಮಹಮ್ಮದನು ಅಧಿಕಾರಕ್ಕೆ ಬಂದನು. ಆದಿಲ್‌ಶಾಹಿಗಳಲ್ಲಿ ಯಾದವಿ ಕಲಹ ಆರಂಭವಾಯಿತು. ಹೀಗಾಗಿ ಮಹ್ಮದನು ಆಂತರಿಕ ಮತ್ತು ಬಾಹ್ಯ ಕಲಹದಲ್ಲಿ ತೊಡಗಿದ. ಆದರಲ್ಲಿ ವಿಶೇಷವಾಗಿ ಮೊಗಲರ ಷಹಾಜಾಹನನು

ದಕ್ಷಿಣದ ಮೇಲೆ ಪ್ರಭುತ್ವ ಸಾಧಿಸಲು ಯತ್ನಿಸಿದ. ಈ ಎಲ್ಲಾ ಸಮಸ್ಯೆಗಳ ಮಧ್ಯದಲ್ಲಿ ಮಹಮ್ಮದನು ಅತ್ಯಂತ ವಿವೇಚನೆಯಿಂದ ರಾಜ್ಯವಾಳಿದನು. ಇತನ ಕಾಲದ ಮಹತ್ವದ ಸಾಧನೆ ಎಂದರೆ ಜಗತ್ಪ್ರಸಿದ್ಧವಾದ ಗೋಲಗುಮ್ಮಟವನ್ನು ನಿರ್ಮಿಸಿ ವಿಶ್ವವಿಖ್ಯಾತನೆನಿಸಿಕೊಂಡನು.

ಮೊಗಲರ ಶಕ್ತಿ ಸಾಮರ್ಥ್ಯವನ್ನು ಅರಿತುಕೊಂಡ ಮಹಮ್ಮದನು ಅವರೊಂದಿಗೆ ಯುದ್ಧದ ಗೋಜಿಗೆ ಹೋಗದೆ ಶಾಂತಿಯಿಂದ ಪ್ರದೇಶಗಳನ್ನು ಹಂಚಿಕೊಂಡರು. ಅದರಲ್ಲಿ ಭೀಮಾ ನದಿಯ ಉತ್ತರ ಭಾಗದ ಕೋಟೆಗಳು ಮೊಗಲರಿಗೆ, ದಕ್ಷಿಣ ಭಾಗದ ಕೋಟೆಗಳು ಆದಿಲ್‌ಶಾಹಿಗಳಿಗೆ ಎಂದು ನಿರ್ಧರಿಸಲಾಯಿತು. ಆದರೆ ಕೆಲಕಾಲ ನಂತರ ಷಹಾಜಹಾನನು ಈ ಒಪ್ಪಂದವನ್ನು ಮುರಿದು ಧಾರವಾಡ ಮುತ್ತಿದ. ಇದರಿಂದ ಕ್ರೋದಗೊಂಡ ಆದಿಲ್ ಶಹನು ಮೊಗಲರೊಂದಿಗೆ ಹೋರಾಟ ಆರಂಭಿಸಿದ.

ಮುಂದಿನ ಹೋರಾಟದಲ್ಲಿ ಮೊಗಲರ ವಿರುದ್ದ ಬಿಜಾಪೂರ ಸೈನ್ಯ ನಿರ್ಣಯಕ ಹೋರಾಟ ಮಾಡಿತು. ಸೋತ ಮೊಗಲರು ನಿರಂತರ ಹೋರಾಟ ಆರಂಭಿಸಿದರು. ಶಹಾಜಹಾನನು ಹಲವು ದಂಡನಾಯಕರನ್ನು ಬಿಜಾಪೂರಕ್ಕೆ ಕಳಿಸಿದ ಕೊಲೆ, ಸೂಲಿಗೆ, ದರೋಡೆ ಮೂಲಕ ಬಿಜಾಪೂರದ ಜನತೆಗೆ ತಲ್ಲಣಗೊಳಿಸಿದ. ಇದರಿಂದ ಬೆಸತ್ತ ಮಹಮ್ಮದನು ಶಾಂತಿ ಸಂಧಾನಕ್ಕೆ ಮುಂದಾದನು. ೧೬೩೬ರಲ್ಲಿ ಒಪ್ಪಂದದ ಮೂಲಕ ಯುದ್ಧ ನಿಂತಿತು.

ವಿಜಯನಗರದ ಪತನದ ನಂತರ ದಕ್ಷಿಣ ಭಾರತದಲ್ಲಿ ತಲೆ ಎತ್ತಿದ ಹಲವು ಸಂಸ್ಥಾನಗಳು ಹುಟ್ಟಿಕೊಂಡವು. ಇವುಗಳನ್ನು ವಶಪಡಿಸಿಕೊಳ್ಳಲು ನಿರಂತರವಾಗಿ ನಾಲ್ಕು ದಂಡ ಯಾತ್ರೆಗಳನ್ನು ಕೈಗೊಂಡು ತನ್ನ ಸಾಮ್ರಾಜ್ಯ ವಿಸ್ತರಿಸಿದ. ಈ ಕಾಲಕ್ಕೆ ಮಹಾರಾಷ್ಟ್ರದಲ್ಲಿ ಶಿವಾಜಿ ನೇತೃತ್ವದಲ್ಲಿ ಮರಾಠರು ಏಳಿಗೆ ಹೊಂದಿದರು. ಇದು ಮಹಮ್ಮದನಿಗೆ ತೊಂದರೆ ದಾಯಕವಾಯಿತು. ಪೋರ್ತುಗೀಜರೊಂದಿಗೆ ಕಠಿಣ ಕ್ರಮ ಜರುಗಿಸಿದ್ದರಿಂದ ಅವರು ಶಾಂತಿ ಒಪ್ಪಂದಕ್ಕೆ ಮುಂದಾದರು. ಕ್ರಿ.ಶ. ೧೬೫೬ರಲ್ಲಿ ಇತನ ಆಳ್ವಿಕೆ ಅಂತ್ಯಗೊಂಡಿತು.

೨.೬.೭. ಎರಡನೆಯ ಅಲಿ ಆದಿಲ್‌ಶಹ (೧೬೫೬-೭೨):

ಇತನ ಆಳ್ವಿಕೆಯ ಕಾಲಕ್ಕೆ ಆದಿಲ್‌ಶಹಿಗಳ ಅವನತಿ ಆರಂಭವಾಯಿತು. ಶಿವಾಜಿ ಮತ್ತು ಔರಂಗಜೇಬರ ದಾಳಿಗಳಿಂದ ಬಿಜಾಪುರ ವಿನಾಶದ ಹಂತ ತಲುಪಿತು. ಕ್ರಿ.ಶ. ೧೬೫೨-೫೭ರ ಅವಧಿಯಲ್ಲಿ ಮೊಗಲರ ದಕ್ಷಿಣದ ಪ್ರತಿನಿಧಿಯಾದ ಔರಂಗಜೇಬನು, ಬಿಜಾಪುರದ ಮೇಲೆ ದಾಳಿ ಮಾಡಿ ಅವರ ಅಧೀನದಲ್ಲಿರುವ ಬೀದರ, ಕಲ್ಯಾಣ ಮತ್ತು ಕಲಬುರ್ಗಿಯ ಕೋಟೆಯನ್ನು ವಶಪಡಿಸಿಕೊಂಡನು. ಈ ಯುದ್ಧದಲ್ಲಿ ಆದಿಲ್‌ಶಾಹಿಗಳು ತಮ್ಮ ಹಲವು ಕೋಟೆಗಳನ್ನು ಮತ್ತು ಪ್ರಮುಖ ಪ್ರಾಂತಗಳನ್ನು ಕಳೆದುಕೊಂಡರು. ಔರಂಗಜೇಬನು ದೆಹಲಿಗೆ ಹೋದ ನಂತರ ಶಿವಾಜಿಯು ಬಿಜಾಪುರದ ಅಫಜಲ್

ಖಾನನನ್ನು ಕೊಲೆಗೈದು, ತನ್ನ ಸ್ಥಾನ ಹೆಚ್ಚಿಸಿಕೊಂಡನು. ಶಿವಾಜಿಯು ಬಿಜಾಪುರ ಕೋಟೆಯನ್ನು ಮುತ್ತಿದಾಗ ಸುಲ್ತಾನನು ಅವನೊಂದಿಗೆ ಒಪ್ಪಂದಕ್ಕೆ ಸಿದ್ಧನಾದ.

ಔರಂಗಜೇಬನು ಮೊಗಲ್ ಸಿಂಹಾಸನವನ್ನೇರಿದ ನಂತರ ತನ್ನ ದಂಡನಾಯಕ ರಾಣಾಜಯ ಸಿಂಗನ ನೇತೃತ್ವದಲ್ಲಿ ಬಿಜಾಪುರದ ಮೇಲೆ ದಾಳಿ ಮಾಡಲು ಆದೇಶಿಸಿದ. ಈ ದಂಡ ಯಾತ್ರೆಗಳನ್ನು ಎದುರಿಸುತ್ತಾ ಅಲಿ ಆದಿಲ್ ಶಹ ೧೬೭೨ರಲ್ಲಿ ನಿಧನ ಹೊಂದಿದ. ಇತನ ಕಾಲದಲ್ಲಿ ಆದಿಲ್ ಶಾಹಿಗಳು ತಮ್ಮ ಹಲವು ಪ್ರಾಂತಗಳನನು ಕಳೆದುಕೊಂಡರು.

೨.೬.೮. ಸಿಕಂದರ ಆದಿಲ್ ಶಹ ೧೬೭೨-೧೬೮೬:

ಎರಡನೆಯ ಆದಿಲ್‌ಶಹನ ಮರಣದ ನಂತರ ಕ್ರಿ.ಶ. ೧೬೭೨ರಲ್ಲಿ ಆತನ ಐದು ವರ್ಷದ ಮಗನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಇದರ ಲಾಭ ಪಡೆದ ಪ್ರಮುಖರು ಉನ್ನತ ಹುದ್ದೆ ಪಡೆಯಲು ಸಂಚು ನಡೆಸಿದರು. ಇದೇ ಕಾಲಕ್ಕೆ ಔರಂಗಜೇಬ ಮತ್ತು ಶಿವಾಜಿಯರು ಬಿಜಾಪುರದ ಪ್ರಾಂತಗಳನ್ನು ಹಿಡಿದುಕೊಂಡರು. ಮೊಗಲರನ್ನು ಸದೆ ಬಡಿಯಲು ಮರಾಠರು ಮತ್ತು ಆದಿಲ್ ಶಾಹಿಗಳು ಒಂದಾದರು ಈ ಹೋರಾಟಗಳು ಮೊಗಲರಿಗೆ ಹಾನಿಯನ್ನುಂಟು ಮಾಡಿತು. ಕ್ರಿ.ಶ.೧೬೮೦ರಲ್ಲಿ ಶಿವಾಜಿಯ ನಿಧನದಿಂದ ಮೊಗಲರು ಮತ್ತು ಆದಿಲ್ ಶಹಿಗಳು ಸಮಾಧಾನಪಟ್ಟರು.

ಕ್ರಿ.ಶ. ೧೬೮೫ ರಿಂದ ೧೬೮೬ರವರೆಗೆ ಮೊಗಲರು ಬಿಜಾಪುರವನ್ನು ಮುತ್ತಿದರು. ಕೋಟೆ ಭೇದಿಸಲು ಸಾಧ್ಯವಾಗಲಿಲ್ಲ. ಆಗ ಔರಂಗಜೇಬನು ಮತ್ತೊಮ್ಮೆ ಶಹಾಪೂರ ಮಾರ್ಗವಾಗಿ ಬಿಜಾಪುರಕ್ಕೆ ಬಂದು ಮುತ್ತಿಗೆ ಮುಂದುವರೆಸಿದ. ೧೬೮೬ ಜುಲೈ ೩ ರಿಂದ ಸೆಪ್ಟೆಂಬರ ೯ರವರೆಗೆ ಮುತ್ತಿಗೆ ಹಾಕಿದರು. **ಕೊನೆಗೆ** ಅನಿವಾರ್ಯವಾಗಿ ಸಿಕಂದರಆದಿಲ್‌ಶಹನು **ಕೋಟೆಯ** ಹೊರಗೆ ಬಂದು ಔರಂಗಜೇಬನಿಗೆ ಶರಣಾಗತನಾದರು. ಇತನನ್ನು ಬಂಧಿಸಿ ದೌಲತಾಬಾದ ಸೆರೆಮನೆಯಲ್ಲಿ ಇಡಲಾಯಿತು. ಇತನು ಕ್ರಿ.ಶ. ೧೭೦೦ರಲ್ಲಿ ಸೆರೆಮನೆಯಲ್ಲಿ ಸಾವನ್ನಪ್ಪಿದ ಅಲ್ಲಿಗೆ ಆದಿಲ್ ಶಹಾ ಆಳ್ವಿಕೆ ಕೊನೆಗೊಂಡಿತು.

೨.೭. ಮೊಗಲರ ದಾಳಿಗಳು:

ಕ್ರಿ.ಶ. ೧೫೨೬ರಲ್ಲಿ ಉತ್ತರ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಮೊಗಲ್ ಸಾಮ್ರಾಜ್ಯವು ೧೫೯೧ರವರೆಗೆ ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು. ಅಕ್ಬರನ ಕೊನೆಯ ಕಾಲದಲ್ಲಿ ತನ್ನ ದಕ್ಷಿಣ ಭಾರತದ ನೀತಿಯಲ್ಲಿ ದಕ್ಷಿಣದ ರಾಜ್ಯಗಳಿಗೆ ಒಂದು ಸಂದೇಶವನ್ನು ಕಳುಹಿಸಿದ. "ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಿ ಇಲ್ಲದಿದ್ದರೆ ಯುದ್ಧಕ್ಕೆ ಸಿದ್ಧರಾಗಬೇಕು". ಆಗ ದಕ್ಷಿಣದ ಕೆಲವು ರಾಜ್ಯಗಳು ಮೊಗಲರ ಆಳ್ವಿಕೆಗೆ ಒಳಪಟ್ಟವು ಆದರೆ ಜಹಾಂಗೀರ ಮತ್ತು ಷಹಜಹಾನನ ಕಾಲದಲ್ಲಿ ದಕ್ಷಿಣದ ಕಡೆಗೆ ವಿಶೇಷ ಗಮನ ಹರಿಸಿ, ಇಲ್ಲಿ ಶಿಯಾ ರಾಜ್ಯಗಳ ಮೇಲೆ ನಿರಂತರ ದಾಳಿ ಆರಂಭಿಸಿ ಅವುಗಳನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡನು. ಅಹಮ್ಮದನಗರ, ಗೋಲ್ಕೊಂಡ ಮತ್ತು ಬಿಜಾಪುರ ರಾಜ್ಯಗಳ ಮೇಲೆ

ಷಹಾಜಹಾನನ ದಾಳಿಗಳು ಅತ್ಯಂತ ಕ್ರೂರವಾಗಿದ್ದು, ಗೆದ್ದ ಈ ರಾಜ್ಯಗಳ ಮೇಲೆ ತನ್ನ ಮಗ ಔರಂಗಜೇಬನನ್ನು ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದ. ಔರಂಗಜೇಬನ ನೇತೃತ್ವದ ದಾಳಿಗಳು ಅತ್ಯಂತ ಕುತಂತ್ರ ತನದಿಂದ ಕೂಡಿದವು. ಕ್ರಿ.ಶ. ೧೫೫೭ರಲ್ಲಿ ಬಿಜಾಪುರದ ಮೇಲೆ ದಾಳಿ, ಬೀದರ ಆಕ್ರಮಣ ಮತ್ತು ಕಲ್ಯಾಣಗಳನ್ನು ವಶಪಡಿಸಿಕೊಂಡನು. ಷಹಾಜಹಾನನು ಔರಂಗಜೇಬನಿಗೆ ಪೂರ್ಣ ಸ್ವಾತಂತ್ರ್ಯ ನೀಡಿದನು. ಬಿಜಾಪುರದ ಮೇಲಿನ ದಾಳಿಯಲ್ಲಿ ಅಪಾರ ಸಂಪತ್ತು ಸಂಗ್ರಹಿಸಿದ.[೧೭೪] ಈ ದಾಳಿಯಲ್ಲಿ ಔರಂಗಜೇಬನು ಗುಲಬರ್ಗಾವನ್ನು ವಶಪಡಿಸಿಕೊಂಡನು. ಕ್ರಿ.ಶ. ೧೬೫೭ರಲ್ಲಿ ಬೀದರ ನಗರವನ್ನು ಆಕ್ರಮಿಸಿಕೊಳ್ಳಲು ತನ್ನ ದಂಡನಾಯಕನಾದ ಮಹಬತ್‌ಖಾನನ್ನು ಕಳುಹಿಸಿದ. ಇತನ ನೇತೃತ್ವದ ದಾಳಿಯಲ್ಲಿ ಮತ್ತೊಮ್ಮೆ ಗುಲಬರ್ಗಾ ಮತ್ತು ಕಲ್ಯಾಣ ನಗರವನ್ನು ವಶಪಡಿಸಿಕೊಳ್ಳಲಾಯಿತು. ಮೊಗಲ ಸೈನ್ಯದ ಎದರು ಬಿಜಾಪುರದ ಸೈನ್ಯವು ತನ್ನ ಪ್ರದೇಶಗಳನ್ನು ರಕ್ಷಿಸಿಕೊಳ್ಳಲು ವಿಫಲವಾಯಿತು.

ಷಹಾಜಹನನು ಅನಾರೋಗ್ಯದಿಂದ ಬಳಲುತ್ತಿದ್ದಾಗ, ಔರಂಗಜೇಬನು ಗುಲಬರ್ಗಾ ಮತ್ತು ಕಲ್ಯಾಣ ಮಾರ್ಗವಾಗಿ ದೆಹಲಿಗೆ ತೆರಳಲು ಯೋಚಿಸಿದ, ಹೋಗುವ ಪೂರ್ವದಲ್ಲಿ ದಕ್ಷಿಣ ಭಾರತದ ಪ್ರಬಲ ಶಕ್ತಿಗಳೊಂದಿಗೆ ಗುಪ್ತ ಒಪ್ಪಂದಗಳನ್ನು ಮಾಡಿಕೊಂಡು ಸೈನ್ಯ ಸಮೇತ ಹೋರಟ, ತನ್ನ ಉಳಿದ ಸಹೋದರರರನ್ನು ಸ್ವಾರ್ಥಕ್ಕಾಗಿ ಬಳಸಿಕೊಂಡು ತಂದೆಯ ವಿರುದ್ಧ ಒಳಸಂಚು ರೂಪಿಸಿದ. ಈ ಅವಧಿಯಲ್ಲಿ ಮತ್ತೊಮ್ಮೆ ಆದಿಲ್ ಶಾಹಿಗಳ ಅಧಿಕಾರಕ್ಕೆ ಬಂದರು. ಎರಡನೆಯ ಆದಿಲ್‌ಶಹಾನ ಕಾಲಕ್ಕೆ (೧೬೫೬-೭೨) ರಾಜ್ಯಕೀಯ ಸ್ಥಿರತೆ ಉಂಟಾಯಿತು. ಆದರೆ ಇತನ ಉತ್ತರಾಧಿಕಾರಗಳ ಕಾಲಕ್ಕೆ ವಿಜಾಪೂರದ ಆದಿಲ್ ಷಹಿಗಳ ಪತನ ಆರಂಭವಾಯಿತು. ಇದರ ಲಾಭ ಪಡೆದುಕೊಂಡ ಮೊಗಲ್ ದಕ್ಷಿಣ ಭಾರತದ ಪ್ರಾತಿನಿಧಿಯಾದ ಬಹದ್ದೂರಖಾನನು ಆದಿಲ್‌ಷಹನ ಪ್ರದೇಶ ಹಿಡಿದುಕೊಳ್ಳಲು ಆರಂಭಿಸಿದ ಕ್ರಿ.ಶ. ೧೬೭೭ರಲ್ಲಿ ಗುಲಬರ್ಗಾವನ್ನು ವಶಪಡಿಸಿಕೊಂಡನು.[೧೭೫] ಮುಂದಿನ ಹೋರಾಟಗಳಲ್ಲಿ ಸುರಪುರ, ಶಹಾಪೂರ, ಸಗರನಾಡು ಮುಂತಾದ ಪ್ರದೇಶಗಳನ್ನು ವಶಪಡಿಸಿಕೊಂಡನು. ಇದೇ ಕಾಲಕ್ಕೆ ಸುರಪುರದ ನಾಯಕರು (ಬೇಡರು) ಸ್ವಾತಂತ್ರ್ಯ ಹೊಂದಿದರು. ಇದರಿಂದ ಔರಂಗಜೇಬನಿಗೆ ತುಂಬಾ ತೊಂದರೆಯಾಯಿತು. ಔರಂಗಜೇಬನು ಚಕ್ರವರ್ತಿಯಾದ ನಂತರ ಸತತ ೨೫ ವರ್ಷಗಳ ಹೋರಾಟದ ಬಳಿಕ ಮತ್ತೊಮ್ಮೆ ಮೊಗಲರು ದಕ್ಷಿಣದ ಮೇಲೆ ತಮ್ಮ ಪ್ರಭುತ್ವ ಸ್ಥಾಪಿಸಿದರು.

೨.೮. ಸುರಪುರ ರಾಜಕೀಯ ಇತಿಹಾಸ:

ಸುರಪುರವನ್ನು ಆಳಿರುವ ಅರಸರು **'ಗೋಸಲ ವಂಶಸ್ಥರು'** ಇವರು ಪ್ರಾರಂಭದಲ್ಲಿ ಗೋವುಗಳನ್ನು ಸಲಹುತ್ತಿದ್ದರು. ಆದ್ದರಿಂದ ಇವರಿಗೆ ಗೋಸಲವಂಶ ಎಂಬ ಹೆಸರು ಬಂದಿದೆ.[೧೭೬] ಬೇಡರಲ್ಲಿ 'ಗೋಸಲರು' ಎಂಬ ಒಂದು ವಂಶವಿದೆ. ಇವರ ಪೂರ್ವಜರು ದಕ್ಷಿಣದಿಂದ ವಲಸೆ ಬಂದು ಕೆಲವು ಪ್ರಾಂತಗಳಲ್ಲಿ ನೆಲೆನಿಂತು ಕ್ರಮೇಣ ಪ್ರಬಲರಾದರು. ಇವರ ಮೂಲ ಪುರುಷ ನರಸಿಂಹ ನಾಯಕ, ಇವನ

ಮಗ ವೀರ ಬೋಮ್ಮನಾಯಕ, ಸಿಂಗಪ್ಪ ನಾಯಕ, ಒಡೇರನಾಯಕ, ಇವನ ಮಗ ಕಲ್ಲಪ್ಪನಾಯಕ ಇವರೆಲ್ಲರು ಹಲವೆಡೆ ಸೈನಿಕ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಕಲ್ಲಪ್ಪ ನಾಯಕನಿಂದ ಈ ಮನೆತನದ ಇತಿಹಾಸ ಆರಂಭವಾಗುತ್ತದೆ. ಇತನು ತನ್ನ ಮಕ್ಕಳೊಂದಿಗೆ ಮುದಗಲ್‌ನ ಕಿಲ್ಲೇದಾರನನ್ನು ಬೇಟಿಯಾಗಿ ಅಲ್ಲೇ ನೆಲೆನಿಂತನು. ಆತನ ಏಳು ಜನ ಮಕ್ಕಳೊಂದಿಗೆ ಈ ವಂಶ ಮುಂದುವರೆಯುತ್ತದೆ. ಇವರುಗಳ ಕಾಲದಲ್ಲಿ ಒಬ್ಬೊಬ್ಬರು ಒಂದೊಂದು ಪ್ರಾಂತ ಹಿಡಿದುಕೊಂಡು ಪ್ರಬಲರಾದರು. ಮುಂದೆ ಈ ವಂಶ ಹೆಮ್ಮರವಾಗಿ ಬೆಳೆದು ಪ್ರಮುಖ ಎರಡು ಬಣಗಳಾದವು. ಗಡ್ಡಿಪಿಡ್ಡ ನಾಯಕ ಮತ್ತು ಲಿಂಗನಾಯಕ (ಗುಡಗುಂಟಿ).

ಗೋಸಲ ವಂಶದ ಮೂಲದ ಬಗ್ಗೆ ಮರಾಠಿ ಕೈಫಿಯತ್ತುಗಳು ಪ್ರಾಚೀನ ಸಾಹಿತ್ಯದಲ್ಲಿ ಮತ್ತು ತೆಲಗು ಸಾಹಿತ್ಯದಲ್ಲಿಯ ಹೇಳಿಕೆಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ತೆಲಗು ಮೂಲದಲ್ಲಿ ಈ ವಂಶದ ಮೂಲ ಪುರುಷ 'ಗುಹನು' ತನ್ನ ವಂಶವನ್ನು ಅನೇಕ ಶಾಖೆಗಳಲ್ಲಿ ವಿಸ್ತರಿಸಿದನು. ಅದರಲ್ಲಿ ಗೋಸಲವಂಶ (ಕೋಸಲವಂಶ)ದವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ.

೨.೮.೧. ಗಡ್ಡಿ ಪಿಡ್ಡ ನಾಯಕ (೧೬೩೬-೧೬೬೬):

ಸುರಪುರ ಸಂಸ್ಥಾನದ ಮೂಲ ಪುರುಷ ಅಥವಾ ಸ್ಥಾಪಕ ಗಡ್ಡಿಪಿಡ್ಡ ನಾಯಕ ಇತನ ವಂಶವನ್ನು ಗೋಸಲವಂಶ ಎಂದು ಕರೆಯುತ್ತಾರೆ. ಗಡ್ಡಿ ಎಂದರೆ ಕಕ್ಕೇರಿಯ ಸಮೀಪ ಹಾಗೂ ಕೃಷ್ಣಾ ನದಿಯ ಸಮೀಪದ ಅನೇಕ ಸಣ್ಣ ಪುಟ್ಟ ನಡುಗಡ್ಡೆಗಳು. ಒಟ್ಟು ಆರು ಗಡ್ಡಿಗಳ ಅಧಿಪತಿಯಾದ ಜಕಪ್ಪ ದೇಸಾಯಿ ಇತನ ವಂಶಸ್ಥರಾದ ಲಿಂಗನಾಯಕ ಮತ್ತು ಪಿಡ್ಡ ನಾಯಕ ಇಬ್ಬರು ಒಂದು 'ಗಡ್ಡಿ'ಯಲ್ಲಿದ್ದರು. ಆದ್ದರಿಂದ ಇವರ ಹೆಸರಿನ ಮುಂದೆ 'ಗಡ್ಡಿ' ಎಂಬ ಹೆಸರು ಬಂದಿದೆ. ಅಲ್ಲದೆ ಕೆಲವು ಕೈಫಿಯತ್ತುಗಳಲ್ಲಿ ಪಿಡ್ಡ ನಾಯಕನಿಗೆ ಗಡ್ಡ ಇದ್ದರಿಂದ ಆತನಿಗೆ ಗಡ್ಡ ಅಥವಾ (ಗಡ್ಡಿ) ಪಿಡ್ಡ ನಾಯಕ ಎಂದು ಹೆಸರು ಬಂದಿದೆ ಎಂದು ಉಲ್ಲೇಖವಿದೆ.[೧೬]

ಇತನ ಆಳ್ವಿಕೆಯ ಬಗ್ಗೆ ಹಲವು ಭಿನ್ನಾಭಿಪ್ರಾಯಗಳಿವೆ. ಬಿಜಾಪುರ ಸಂಸ್ಥಾನದ ದಾಖಲೆಗಳು, ಮೊಗಲರ ದಾಖಲೆಗಳು ಮತ್ತು ಇತರ ಸನದುಗಳಲ್ಲಿ ಇತನ ಹೆಸರು ಉಲ್ಲೇಖವಾಗಿದೆ. ಇತನು ೧೬೫೬ರಲ್ಲಿ ಪಾಮನಾಯಕನ ನಿಧನದ ನಂತರ ಅಧಿಕಾರಕ್ಕೆ ಬಂದನು. ಪರಾಕ್ರಮಿಯಾದ ಇತನು ವಾಗನಗೇರಿ ಮತ್ತು ದೇವಪುರಗಳನ್ನು ವಶಪಡಿಸಿಕೊಂಡನು. ವಾಗಣಗೇರಿ, ಶಹಪುರ ಮತ್ತು ಸಗರ ಕೋಟೆಯಲ್ಲಿ ೧೨೦೦ ಸೈನ್ಯ ಸಂಗ್ರಹಿಸಿದ. ಮೊಗಲ್ ಚಕ್ರವರ್ತಿ ಔರಂಗ ಜೇಬನ ಆಳ್ವಿಕೆಗೆ ಒಳಪಟ್ಟ ಎರಡು ಕೋಟೆಯನ್ನು ಹಿಡಿದುಕೊಂಡನು.

ಬಿಜಾಪುರದ ಸುಲ್ತಾನರು ಗಡ್ಡ ಪಿಡ್ಡ ನಾಯಕನನ್ನು ನೇರವಾಗಿ ಸೆರೆ ಹಿಡಿಯಲು ಸಾಧ್ಯವಿಲ್ಲವೆಂದು ತಿಳಿದು, ಒಂದು ಶೌರ್ಯ ಪ್ರದರ್ಶನದ ಕಾಳಗವನ್ನು ಏರ್ಪಡಿಸಿ ೯ ಲಕ್ಷ ರೂಪಾಯಿ

ಬಹುಮಾನ ಘೋಷಿಸಿದರು. ಇದರಿಂದ ಕೆರಳಿದ ನಾಯಕನು ಅದರಲ್ಲಿ ಭಾಗವಹಿಸಿ ನಿರಾಯುಧನಾಗಿ ಮದಗಜವನ್ನು ಬೇಟೆಯಾದಿ ಬಹುಮಾನ ಮತ್ತು ಹಲವು ಪ್ರಾಂತಗಳನ್ನು ಇನಾಮ ಆಗಿ ಪಡೆದುಕೊಂಡನು. ಕ್ರಿ.ಶ. ೧೬೬೪ರಲ್ಲಿ ಗಡ್ಡಿ ಪಿಡ್ಡ ನಾಯಕನು ವಾಗಣಗೇರಿಯಲ್ಲಿ ದರ್ಬಾರ ಭವನವನ್ನು ನಿರ್ಮಿಸಿ, ಭವನವನ್ನು ನಿರ್ಮಿಸಿ, ಹಲವು ಕೆರೆ ಕಾಲುವೆಗಳನ್ನು ತೊಡಿಸಿದ ಹಲವು ಜನ ಸಮರ್ಥರಿಗೆ ಉನ್ನತ ಹುದ್ದೆಗಳನ್ನು ನೀಡಿದ. ಇತನು ತನ್ನ ಸೈನ್ಯದಲ್ಲಿ ೧೨ ಸಾವಿರ ಕುದುರೆ ಸವಾರರನ್ನು ಒಂದು ಲಕ್ಷ ಸೈನಿಕರನ್ನು ಸಜ್ಜುಗೊಳಿಸಿದ. ಗಡ್ಡಿ ಪಿಡ್ಡ ನಾಯಕನು ತನ್ನ ಸಹೋದರ ಲಿಂಗನಾಯಕನಿಂದ ಬೇರೆಯಾಗಿ ತನ್ನ ಹೆಂಡಂದಿರು ಮತ್ತು ಪರಿವಾರದೊಂದಿಗೆ ಹಲವು ಪ್ರದೇಶಗಳಲ್ಲಿ ಹೋದನು. ಇಜೇರಿ, ಕನ್ನಾಕೊಳ್ಳೂರು, ಮಾಲಗತ್ತಿ ಮುಂತಾದವುಗಳನ್ನು ಹಿಡಿದುಕೊಂಡನು. ಕರ್ಶಿಹಳ್ಳಿಯನ್ನು ಹಿಡಿದುಕೊಂಡು ಅದಕ್ಕೆ ವಾಗಿನಗಿರಿ ಎಂದು ಹೆಸರಿಟ್ಟು ಅಲ್ಲಿ ಕೋಟೆ ಕಟ್ಟಿಸಿದ. ನಂತರ ಶಹಪೂರ ವಶಪಡಿಸಿಕೊಂಡು ಅದಕ್ಕೆ 'ಸಗರ' ಎಂದು ಹೆಸರಿಸಿ ಅಲ್ಲಿ ಒಂದು ಕೋಟೆಯನ್ನು ಕಟ್ಟಿಸಿದ. ಬೀದರ, ಮತ್ತು ಕಲ್ಯಾಣಗಳನ್ನು ಮುತ್ತಿ ಅಲ್ಲಿಯ ಕೋಟೆಯನ್ನು ವಶಪಡಿಸಿಕೊಂಡ. ಆದರೆ ಈ ಹೋರಾಟದಲ್ಲಿ ಮೊಗಲರು ಯಶಸ್ವಿ ಹೊಂದಿದರು. ಗಡ್ಡಿ ಪಿಡ್ಡನಾಯಕ ಮತ್ತು ಆತನ ಮಗ ಪಾಮನಾಯಕರ ನೇತೃತ್ವದಲ್ಲಿ ಹಲವು ಹೋರಾಟಗಳನ್ನು ಮಾಡಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಕ್ರಿ.ಶ. ೧೬೫೬ರಲ್ಲಿ ವಾಗಿನಗಿರಿಯಲ್ಲಿ ಭದ್ರ ಬುನಾದಿ ಹಾಕಿದ.[೧೭೮] ಗಡ್ಡಿ ಪಿಡ್ಡ ನಾಯಕನಿಗೆ ಹಲವು ಜನ ಹೆಂಡರಿದ್ದರು. ಆದರೆ ಯಾರಿಂದಲು ಪುತ್ರಯೋಗ ಸಿಗಲಿಲ್ಲ. ಸಹೋದರನ ಮಗನಾದ ಪಾಪನಾಯಕನನ್ನು ದತ್ತು ಪುತ್ರನೆಂದು ಸ್ವೀಕರಿಸಿದ. ಲಿಂಗನಾಯಕನ ೬ ಜನ ಮಕ್ಕಳಲ್ಲಿ ಇತನು ಒಬ್ಬ ತಂದೆಯಂತೆ ಶೂರನು, ಪರಾಕ್ರಮಿಯು ಆದ ಇತನನ್ನು ಮುಂದಿನ ತನ್ನ ಉತ್ತರಾಧಿಕಾರಿಯೆಂದು ಆಯ್ಕೆ ಮಾಡಿಕೊಂಡು, ಕ್ರಿ.ಶ. ೧೬೬೬ರಲ್ಲಿ ನಿಧನ ಹೊಂದಿದ.

೨.೮.೨. ಪಾಮನಾಯಕ ೧೬೬೬-೧೬೮೭:

ಗಡ್ಡಿ ಪಿಡ್ಡನಾಯಕನು ತನ್ನ ಸಹೋದರನ ಐದನೆಯ ಮಗನಾದ ಪಾಮನಾಯಕನನ್ನು ತನ್ನ ಉತ್ತರಾಧಿಕಾರಿಯೆಂದು ನೇಮಿಸಿ ನಿಧನ ಹೊಂದಿದ. ಇತನ ಕಾಲನಿರ್ಣಯದ ಬಗ್ಗೆ ಸ್ಪಷ್ಟ ದಾಖಲೆಗಳಿಲ್ಲ. ಔರಂಗಜೇಬನ ಕಾಲದ ದಾಖಲೆಗಳ ಪ್ರಕಾರ ಇತನು ಕ್ರಿ.ಶ.೧೬೬೬ ರಿಂದ ೧೬೮೮ರವರೆಗೆ ಆಳಿದನೆಂದು ಉಲ್ಲೇಖಗಳಿವೆ.

ವಾಗಣಗೇರಿಯನ್ನು ತನ್ನ ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಹೊಸ ಆಡಳಿತ ಆರಂಭಿಸಿದ. ೧೨ ಸಾವಿರ ಬೇಡರ ಸುಸಜ್ಜಿತ ಪಡೆಯನ್ನು ಕಟ್ಟಿ ಅದನ್ನು ವಾಗಣಗೇರಿ, ಶಹಪೂರ ಮತ್ತು ಸಗರದಲ್ಲಿ ಇರಿಸಿದ. ಹಲವು ಕಡೆಗಳಲ್ಲಿ ಕೆರೆ-ಕಾಲುವೆ, ಗೋಪುರ ಮತ್ತು ಹೊಸ ಕೋಟೆಗಳನ್ನು ಕಟ್ಟಿಸಿ, ಅಲ್ಲಿ ಸುಸಜ್ಜಿತ ಬಂದೂಕ ಧಾರಿಗಳನ್ನು ಇರಿಸಿದ. ಬಿಜಾಪುರ ಪಡೆಯೊಂದಿಗೆ ನಿರಂತರ ಯುದ್ಧದಲ್ಲಿ

ತೊಡಗಿದ. ಇತನ ಪ್ರಮುಖ ಹೋರಾಟಗಳೆಂದರೆ ೧೬೮೦ರಲ್ಲಿ ಮೊಗಲ್ ಸೈನ್ಯಕ್ಕೂ ಮತ್ತು ಬೇಡರ ಪಡೆಗೂ ನಿರ್ಣಾಯಕ ಹೋರಾಟ ಸಂಭವಿಸಿತು. ೧೬೬೪ರಲ್ಲಿ ಸ್ವಂತ ಶಿವಾಜಿಯ ಸೈನ್ಯವನ್ನು ಸದೆಬಡೆದ ಕೀರ್ತಿ ಇತನದಾಗಿದೆ.

ಮೊಗಲರ ಸೇನಾ ನಾಯಕರು ದಕ್ಷಿಣದ ಮೇಲೆ ಹಿಡಿತ ಸಾಧಿಸುವಲ್ಲಿ ವಿಫಲರಾಗಲು ಪ್ರಮುಖ ಕಾರಣವೆಂದರೆ, ಇಲ್ಲಿನ ಬೇಡರ ಪಡೆ ಸೇನಾಪತಿ ದಿಲೇರಖಾನನು ನಿರಂತರ ಪ್ರಯತ್ನದಿಂದ ಪಾಮನಾಯಕನು ಎದೆಗುಂದದೆ ಹೋರಾಟ ಆತನನ್ನು ಹತಗೊಳಿಸಿದ. ಮುಂದಿನ ದಿನಗಳಲ್ಲಿ ಬಿಜಾಪೂರಕ್ಕೆ ಅನಿವಾರ್ಯ ಸಂದರ್ಭಗಳು ಬಂದಾಗ ಇತನ ಸಹಾಯ-ಸಹಕಾರದಿಂದ ಅಲ್ಲಿಯ ರಾಜಕೀಯ ಭದ್ರಗೊಂಡಿತು. ಕ್ರಿ.ಶ. ೧೬೮೭ರಲ್ಲಿ ಔರಂಗಜೇಬನು ಪಾಮನಾಯಕನನ್ನು ಗೆಲ್ಲಲೆಬೇಕೆಂದು ದೃಢನಿರ್ಧಾರ ಕೈಗೊಂಡು ಸಗರವನ್ನು ಮುತ್ತಿ, ಕೊಲೆ, ಸುಲಿಗೆ, ಲೂಟಿ, ದರೋಡೆ ಮುಂದುವರೆಸಿದರು. ಬಿಜಾಪುರ, ಗೊವಳಕಂಡದ ಶರಣಾಗತಿಯನ್ನು ಯೋಚಿಸಿ ಪಾಮನಾಯಕನು ಒಪ್ಪಂದಕ್ಕೆ ಮುಂದಾದನು. ಕ್ರಿ.ಶ. ೧೬೮೭ರಲ್ಲಿ ಸಗರ ಕೋಟೆಯನ್ನು ಮೊಗಲರಿಗೆ ವಹಿಸಿದ. ಈತನನ್ನು ದೆಹಲಿಗೆ ಕರೆದುಕೊಂಡ ಹೋಗಲಾಯಿತು. ಇತನ ಮಗನಿಗೆ 'ಮನ್ಸಸಬ್' (ಜಹಾಗೀರ್) ನೀಡಿ ದೆಹಲಿಗೆ ಹೋರಟು ಹೋಗಿ ಅಲ್ಲಿಯೆ ೫ ದಿನಗಳ ನಂತರ ದೆಹಲಿಯಲ್ಲಿ ಮೃತನಾದನು (೨೭.೧೨.೧೬೮೭).

ಪಾಮನಾಯಕನು ವಾಗಣಗೇರಿಯನ್ನು ಒಂದು ಸೈನಿಕ ಶಕ್ತಿಯನ್ನಾಗಿಸಿದ, ಸೈನ್ಯ, ಫಿರಂಗಿ, ಯುದ್ಧದ ಸಾಮಗ್ರಿಗಳು ಸುರಕ್ಷಿತವಾಗಿಡಲು ಇಲ್ಲೊಂದು ಕೋಟೆ ಕಟ್ಟಿಸಿದ. ಇಲ್ಲಿಗೆ ಸಮೀಪದ ಚಿಕ್ಕನ ಹಳ್ಳಿಯಲ್ಲಿ ಒಂದು ಹುಡೆವು ನಿರ್ಮಿಸಿದ. ಹಲವು ಜನ ಸುಭೆದಾರರನ್ನು ನೇಮಿಸಿ, ತನ್ನ ರಾಜ್ಯಕ್ಕೆ ಭದ್ರತೆ ನೀಡಿದ. ಹೆಂಡತಿಯ ಹೆಸರಿನಲ್ಲಿ ಹೊಸ ನಗರ **'ಅಮ್ಮಾನಾಗತಿ'**, **'ಅಮ್ಮಾಪುರ'** ಹಾಗೂ ಕೆರೆ-ಕಾಲುವೆ, ಸೇತುವೆ ಮತ್ತು ಆಣೆಕಟ್ಟುಗಳನ್ನು ನಿರ್ಮಿಸಿದ. ಅಲ್ಲದೆ ವಾಗಣಗೇರಿ ಕೋಟೆಯಲ್ಲಿಯ ಗೋಪಾಲ ಸ್ವಾಮಿ ದೇವಾಲಯ ನಿರ್ಮಿಸಿದ, ತಿರುಪತಿಯ ವೆಂಕಟೇಶ್ವರ ಆರಾಧಕನಾದ ಪಾಮನಾಯಕನು ದೇವರಿಗೆ ಎರಡು ಗ್ರಾಮಗಳನ್ನು ನೀಡಿದ. ಅಂದಿನಿಂದ ಇಂದಿನವರೆಗೆ ತಿರುಪತಿಯ ದೇವರಿಗೆ ಮೊದಲನೆಯ ಅರ್ಚನೆಯು ಈ ರಾಜಮನೆತನದ ಹೆಸರಿನಲ್ಲಿ ನಡೆಯುತ್ತದೆ.

೨.೮.೩. ಪೀತಾಂಬರ ಬಹಿರಿ ಪಿಡ್ಡ ನಾಯಕ (೧೬೮೭-೧೭೨೬):

ಪಾಮನಾಯಕನು ನಿಧನ ಹೊಂದಿದ ನಂತರ ಆತನ ದತ್ತು ಪುತ್ರನಾದ ಪಿಡ್ಡನಾಯಕನು ಅಧಿಕಾರಕ್ಕೆ ಬಂದನು. ವೈವಾಹಿಕ ಸಂಬಂಧದಿಂದ ನೆರೆಯ ಐದು ಪ್ರಾಂತಗಳೊಂದಿಗೆ ಉತ್ತಮ ಸಂಬಂಧ ಏರ್ಪಡಿಸಿದ ತನ್ನ ಸ್ಥಾನ ಭದ್ರಪಡಿಸಿಕೊಂಡನು.

ಬಿಜಾಪುರದ ಸರದಾರನು ಮರಾಠರ ಮೇಲೆ ದಾಳಿ ಮಾಡಲು ಹೊಂಚು ಹಾಕಿದನು, ಆಗ ಬೇಡರ ಪಡೆ ಸೈನ್ಯದ ಮುಂಭಾಗದಲ್ಲಿ ನಿಂತು ಗುಂಡಿನ ಸುರಿಮಳೆಗೈದರು. ಶತ್ರುಗಳ ಆನೆಗಳು ಅವರ

[illegible]

ಸೈನ್ಯವನ್ನೇ ಹಾಳು ಮಾಡಿದವು. ಮೊಗಲರ ಸೇನಾ ನಾಯಕನ ಸಹಾಯದಿಂದ ಮರಾಠರು ಹಿಂದೆ ಹಿಂದೆ ಸರಿದು ಕೊನೆಗೆ ಮೊಗಲರ ಮೇಲೆ ದಾಳಿ ಮಾಡಿದರು. ಅದೆ ಕಾಲಕ್ಕೆ ಬೇಡರ ಪಡೆ ಶೀಘ್ರ ಹೋರಾಟ ಮಾಡಿತು. ಮೊಗಲರು ಭಯ ಭೀತರಾಗಿ ಓಡಲಾರಂಭಿಸಿದರು. ಕ್ರಿ.ಶ. ೧೬೮೯-೯೧ರವರೆಗೆ ಪಿಡ್ಡ ನಾಯಕನು ತನ್ನ ಸ್ಥಿತಿಯನ್ನು ಸುಧಾರಿಸಿಕೊಂಡು, ಮೊಗಲರಿಗೆ ಹಿಂದೆ ಕಳೆದುಕೊಂಡ ಪ್ರಾಂತಗಳನ್ನು ಮರುವಶಪಡಿಸಿಕೊಂಡು ಕಲಬುರ್ಗಿ, ವಿಜಾಪುರ, ರಾಯಚೂರ, ಸಗರದ ಸುತ್ತ ಮುತ್ತಲಿನ ಪ್ರಾಂತಗಳು ಪಿಡನಾಯಕನ ವಶವಾದವು.[೧೭೬] ಈ ಕುರಿತು ಆತನ ಅಧಿಕಾರಿಗಳು ಔರಂಗಜೇಬನಿಗೆ ವರದಿ ಸಲ್ಲಿಸಿದವು. ಕ್ರಿ.ಶ. ೧೬೯೧ರಲ್ಲಿ ಔರಂಗಜೇಬನ ಸೈನ್ಯ ವಾಗಿಣಗೇರಿ ತಲುಪಿತು. ಈ ಎಲ್ಲಾ ದಂಡ ಯಾತ್ರೆಗಳು ವಿಫಲವಾದವು. ಆಜಮನು ಒಂದು ವರ್ಷದ ಮುತ್ತಿಗೆಯಲ್ಲಿ ಬೆಸತ್ತ ಪಿಡ್ಡನಾಯಕನು ಸಂಧಿ ಬಯಸಿದನು. ಕ್ರಿ.ಶ. ೧೬೯೩ರ ಒಪ್ಪಂದದ ಪ್ರಕಾರ ಯುದ್ಧ ನಿಂತಿತು. ಔರಂಗಜೇಬನ ದ್ವಂದ ನೀತಿಯಿಂದ ಮತ್ತೆ ಯುದ್ಧ ಆರಂಭವಾಯಿತು. ಬೇಡರ ಸೈನ್ಯ ಪ್ರತಿನಿತ್ಯ ಮೊಗಲರ ಮೇಲೆ ಗುಂಡುಹಾರಿಸುತ್ತಿತ್ತು. ಲಾಲಟೇಕಡಿ (ಕೆಂಪು ಮೊರಡಿ)[೧೮೦] ಎತ್ತರವಾದ ಸೈನಿಕ ಶಿಬಿರವನ್ನು ಬೇಡರಿಂದ ಹಿಡಿದುಕೊಳ್ಳಲು ಯತ್ನಿಸಿದ ಮೊಗಲರು ಅವರ ಮೇಲೆ ದಾಳಿ ಮಾಡಿದರು. ನಾಲ್ಕು ಕಡೆಯಿಂದ ಇದನ್ನು ಮುತ್ತಿದ ಮೊಗಲರ ಸೈನ್ಯ ಬೇಡರ ದಾಳಿಯಿಂದ ತತ್ತರಿಸಿತು. ಇಲ್ಲಿಯ ಅವಮಾನದಿಂದ ಔರಂಗಜೇಬನು ಇನ್ನೊಮ್ಮೆ ಇಂತಹ ಸಾಹಸಕ್ಕೆ ಕೈ ಹಾಕಲಿಲ್ಲ. ಈ ಪ್ರದೇಶದಲ್ಲಿ ಎರಡು ಪಡೆಗಳು ಬಿಡಾರ ಹುಡಿದವು.

ಪಿಡ್ಡ ನಾಯಕನ ಸಹಾಯಕ್ಕೆ ಮರಾಠ ನಾಯಕರು ೬೦೦೦ ಸಾವಿರ ಸೈನ್ಯದೊಂದಿಗೆ ಆಗಮಿಸಿದರು. ಹಲವು ನಾಯಕರು ಸೈನ್ಯ ಸಹಾಯಕ್ಕೆ ಬಂದಿರುವುದರಿಂದ ಪಿಡ್ಡ ನಾಯಕನ ಸೈನ್ಯ ೭೪ ಸಾವಿರ ಮೀರಿತ್ತು.[೧೮೧] ಔರಂಗಜೇಬನು ಒಂದು ಲಕ್ಷ ಸೈನ್ಯದೊಂದಿಗೆ ದಾಳಿ ಮಾಡಿದನು. ಆಗ ಪಿಡ್ಡ ನಾಯಕನು ಕೋಟೆಯಲ್ಲಿದ್ದ ಮರಾಠ ಕುಟುಂಬಗಳನ್ನು ರಕ್ಷಿಸಿದನು. ಆಕಡೆ ಯುದ್ಧ ನಡೆಯುತ್ತಿದ್ದಾಗ, ಬೇಡರ ಸೈನಿಕರು ಮರಾಠ ಮಹಿಳೆಯರನ್ನು ತಮ್ಮ ಕುದುರೆಗಳ ಮೇಲೆ ಹತ್ತಿಸಿಕೊಂಡು ದಿಡ್ಡಿ ಬಾಗಿಲಿನಿಂದ ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು.

ನಿರಂತರ ಹೋರಾಟದಿಂದ ಮರಾಠರು ಬೇಸತ್ತು ನಿರ್ಗಮಿಸಲು ತಿರ್ಮಾನಿಸಿದರು. ಆದರೂ ಕೆಲಕಾಲ ಹೆಚ್ಚಿನ ಹಣ ಪಡೆದು ಯುದ್ಧ ಮುಂದುವರೆಸಿದರು, ಆದರೆ ಮುಂದೆ ತಮ್ಮವರ ಮೋಸದ ಕೃತ್ಯದಿಂದ ಜಿಗುಪ್ಸೆಗೊಂಡ ಮರಾಠರು ಯುದ್ಧದಿಂದ ನಿರ್ಗಮಿಸಿದರು. ಮರಾಠರು ನಿರ್ಗಮಿಸಿದ ನಂತರ ಔರಂಗಜೇಬನ ವಿಷಯದಿಂದ ಬೇಡರ ಪ್ರದೇಶಗಳ ಮೇಲೆ ಆಕ್ರಮಣ ಆರಂಭಿಸಿದ. ಬೇಡರು ಎಷ್ಟೇ ಶೌರ್ಯದಿಂದ ಹೋರಾಡಿದರು ಮೊಗಲರನ್ನು ತಡೆಯಲು ಸಾಧ್ಯವಾಲಿಲ್ಲ, ಮೊದಲ ತಳವಾರಗೇರಿಯನ್ನು ಹಿಡಿದುಕೊಂಡು, ವಾಗಿನಗೇರಿಯನ್ನು ಹಿಡಿಯಲು ಯತ್ನಿಸಿದರು, ಅಲ್ಲಿಯ ತೋಪುಗಳು ಎಷ್ಟೇ ಶಬ್ದ ಮಾಡಿದರು, ಮೊಗಲರು ಹಿಂದೆ ಸರಿಯಲಿಲ್ಲ.

ಮುಂದಿನ ಹೋರಾಟದಲ್ಲಿ ತಮಗೆ ಸೋಲು ಖಂಡಿತವೆಂದು ಅರಿತ ಪಿಡ್ಡ ನಾಯಕನು ಆ ಕಡೆ ಹೋರಾಟ ಮುಂದುವರೆಸಲು ಆದೇಶಿಸಿ, ಬೇರೆ ಮಾರ್ಗದಿಂದ (ದಿಡ್ಡಿ) ಪರಿವಾರ ಸಮೇತ ಹೋರಟು ಹೋದರು. ರಾತ್ರಿ ಹೊತ್ತಿಗೆ ಗುಂಡಿನ ಶಬ್ದ ನಿಂತಾಗ ಮೊಗಲರು ಕೋಟೆ ಪ್ರವೇಶಿಸಿ, ಲೂಟಿ ಆರಂಭಿಸಿದರು. ಮೊಗಲ ಸೈನಿಕರು ಕೋಟೆಯಲ್ಲಿ ಬೆಂಕಿ ಹಚ್ಚಿದರು. ಬೆಂಕಿ ಮದ್ದಿನ ಮನೆಗೆ ಸಮೀಪಿಸಿ, ಬಯಾನಕ ಶಬ್ದದಿಂದ ಸ್ಫೋಟಗೊಂಡಿತು. ಕೋಟೆ ಒಳಗಿನ ಸೈನ್ಯ ಹಾಗೂ ಯುದ್ಧ ಸಾಮಗ್ರಿಗಳು ಭಸ್ಮಗೊಂಡಿತು.

ಔರಂಗಜೇಬನು ವಾಗಣಗಿರಿಯನ್ನು ವಶಪಡಿಸಿಕೊಂಡ ನಂತರ ಅಲ್ಲಿಯ ಗೋಪಾಲ ಸ್ವಾಮಿ ದೇವಾಲಯ ಧ್ವಂಶಗೊಳಿಸಿ, ಅದೇ ಸ್ಥಳದಲ್ಲಿ ಮಸೀದಿಯನ್ನು ನಿರ್ಮಿಸಿದ. ಅಲ್ಲದೆ ಕೋಟೆಯ ಮಧ್ಯದಲ್ಲಿ ಕಮಾನು ನಿರ್ಮಿಸಿದ್ದರಿಂದ ಇದು ಮುಂದು ಪಡು ಕೋಟೆಯಾಗಿ ಮಾರ್ಪಟ್ಟಿತು. ಈ ಸಾಧನೆ ಕುರಿತು ಅಲ್ಲಿ ಒಂದು ಶಾಸನ ನಿಲ್ಲಿಸಿದ.[೧೮] ಈ ಸಾಧನೆಯು ಕ್ರಿ.ಶ. ೧೭೦೫ ಫೆಬ್ರುವರಿಯಿಂದ ಮೇವರೆಗೆ ಸಂಬಂಧಿಸಿರಬಹುದು. ಈ ಶಾಸನದ ವಿವರಣೆ ಹೀಗಿದೆ ಧರ್ಮ ರಕ್ಷಕನಾದ ಸುಲ್ತಾನನು ತನ್ನ ಆಳ್ವಿಕೆಯ ೪೯ನೇ ವರ್ಷದಲ್ಲಿ ಈ (೧೭೦೬) ಸಾಧನೆಗೈದನೆಂದು ಉಲ್ಲೇಖಿಸುತ್ತದೆ. ಪಿಡ್ಡ ನಾಯಕನು ವಾಗಣಗಿರಿಯನ್ನು ಕಳೆದುಕೊಂಡು ಎಮ್ಮಿಗುಡ್ಡವನ್ನು ತಲುಪಿದ. ಕ್ರಿ.ಶ. ೧೭೦೭ರಲ್ಲಿ ಔರಂಗಜೇಬನ, ನಿಧನ ಹೊಂದಿದ ನಂತರ ವಾಗಣಗೇರಿಯನ್ನು ವಶಪಡಿಸಿಕೊಂಡು, ಇದನ್ನು ಪುನರ್‌ಸ್ಥಾಪಿಸಿ, ಕೆಲಕಾಲದ ನಂತರ ಸುರಪುರವನ್ನು ನಿರ್ಮಿಸಿದ. ಇದೇ ಮುಂದೆ ರಾಜಧಾನಿಯಾಯಿತು. ಈ ಕುರಿತು ಕೈಫಿಯತ್ತು ಮತ್ತು ಸಾಹಿತ್ಯ ಕೃತಿಗಳಲ್ಲಿ ವ್ಯತ್ಯಾಸವಿದೆ. ಆದರೆ ೧೭೦೭ರಲ್ಲಿ ಪಿಡ್ಡ ನಾಯಕನು 'ಸುರಪುರ' ಸ್ಥಾಪಿಸಿದನೆಂದು ಎಲ್ಲಾ ಕೃತಿಗಳಲ್ಲಿ ಹೇಳಲಾಗಿದೆ. ಸುರಪುರ ಎಂದರೆ 'ದೇವರನಗರ' (೧೭೧೦)ರಲ್ಲಿ ಅಸ್ತಿತ್ವಕ್ಕೆ ಬಂದಿತು.

ಸುರಪುರವು ಕಲಬುರ್ಗಿ ಜಿಲ್ಲೆಯ ಒಂದು ತಾಲೂಕ. ಇದು ಬೆಟ್ಟದಿಂದ ಆವರಿಸಿಕೊಂಡಿದೆ. ಇದಕ್ಕೆ ನಿಸರ್ಗವೆ ದುರ್ಗವನ್ನು ಕಲ್ಪಿಸಿಕೊಟ್ಟಿದೆ. ಆದ್ದರಿಂದ ಪಿಡ್ಡ ನಾಯಕನು ಇದನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡನು. ಇಲ್ಲಿಯ ಭೂಮಿಯನ್ನು ಅಳೆದು, ಅದನ್ನು ಹಲವು ಕೆರಿಗಳಾಗಿ ವಿಂಗಡಿಸಿದ. ಅಲ್ಲಿ ತನ್ನ ಜನ ವಾಸಿಸಲು ಅವಕಾಶ ಮಾಡಿಕೊಟ್ಟ. ಅವುಗಳೆಂದರೆ - ನಡುಗೇರಿ, ಮ್ಯಾಗೇರಿ, ಹುಂಡೇವಜೇರಗೇರಿ, ದೊಡ್ಡಗೇರಿ, ಜಗ್ಗದಗೇರಿ, ಹುಲಕಲ್ಲಗೇರಿ, ರಾಮಪುರಕೇರಿ, ಬೋಯಿಗೇರಿ, ಕುರಬಗೇರಿ, ಗುರಿಕಾರ ಗೇರಿ, ಸರಸಬಡಗೇರಿ, ಗಂಟಿನಾಯಕನಗೇರಿ, ಗೋನಾಲಕೇರಿ, ಪಲ್ಲೇದ ಕೇರಿ. ಪ್ರತಿಯೊಂದು ಕೇರಿಯಲ್ಲಿ ತನ್ನ ಜನರಿಗೆ ಅನುಕೂಲವಾಗುವಂತೆ ಹಲವು ಕಟ್ಟಡಗಳನ್ನು ನಿರ್ಮಿಸಿದ. ಇದರ ರಕ್ಷಣೆಗಾಗಿ ೭ ಚೌಕಿಗಳನ್ನು ನೇಮಿಸಿದ ಪ್ರತಿ ಚೌಕಿಗೆ ೧೬ ಕುದುರೆ ಸವಾರರು, ೫೦ ಕುದುರೆಗಳಿದ್ದವು ಪಿಡ್ಡನಾಯಕನ ತನ್ನ ಕೊನೆಯ ಕಾಲದಲ್ಲಿ ಎಲ್ಲವನ್ನು ಸಂಪಾದಿಸಿಕೊಂಡನು. ಎಲ್ಲಾ

[illegible]

ಕೇರಿಗಳಲ್ಲಿ ಆಂಜನೇಯ ದೇವಸ್ಥಾನ ಸ್ಥಾಪಿಸಿದರೆ, ನಡುಗೇರಿಯಲ್ಲಿ ಗೋಪಾಲಸ್ವಾಮಿ ದೇವಸ್ಥಾನವನ್ನು ನಿರ್ಮಿಸಿದ.

೨.೮.೪. ಎರಡನೆಯ ಪಾಮಾನಾಯಕ ೧೭೨೭-೧೭೪೧:

ಪಿತಾಂಬರಿ ಬಹರಿ ಪಿಡ್ಡನಾಯಕನು ನಿಧನದ ನಂತರ ಆತನ ಹಿರಿಯ ಮಗ ಪಾಮನಾಯಕನು ಕ್ರಿ.ಶ.೧೭೨೭ರಲ್ಲಿ ಅಧಿಕಾರಕ್ಕೆ ಬಂದನು. ೧೭೦೭ರ ನಂತರ ಮೊಗಲರು ದಕ್ಷಿಣ ಭಾರತದ ಮೇಲೆ ಹತೋಟಿ ಕಳೆದುಕೊಂಡರು. ನಿಜಾಮನು ಮೊಗಲರಿಗೆ ತೋರಿಕೆಗೆ ನಿಷ್ಠೆಯಿಂದ ಇದ್ದನು. ಇದರ ಲಾಭ ಪಡೆದು ಪೇಶ್ವೆಗಳು, ನಿಜಾಮನು ಮತ್ತು ಇತರ ಸ್ವತಂತ್ರರಾದರು. ಪಾಮನಾಯಕನು ನಿಜಾಮನೊಂದಿಗೆ ಸ್ನೇಹ ಬೆಳೆಸಿದನು. ಆನೆಗುಂದಿಯ ನಾಯಕರನ್ನು ದಂಡಿಸಿದನು. ನಿಜಾಮನಿಗೆ ಹಲವು ಕಾರ್ಯಗಳಲ್ಲಿ ಸಹಕರಿಸಿದ.

ಕನಕಗಿರಿಯ ಹಿರೆನಾಯಕನು ಪಾಮನಾಯಕನನ್ನು ವಿರೋಧಿಸಿದಕ್ಕಾಗಿ ಕಷ್ಟ ನಷ್ಟ ಅನುಭವಿಸಿದ. ಕೊನೆಗೆ ಆತನನ್ನು ಸೆರೆ ಹಿಡಿದು ತೋಪಿನ ಬಾಯಿಗೆ ನೀಡಲಾಯಿತು. ಇದರಿಂದ ಇತನ ಬಗ್ಗೆ ಸಾಮಂತರು ಭಯ ಭೀತರಾದರು. ಇತನ ಸಾಧನೆಗೆ ಮೆಚ್ಚಿದ ನಿಜಾಮನು ಇತನಗೆ ಹಲವು ಸೌಲಭ್ಯಗಳನ್ನು ನೀಡಿದ. ಅತ್ಯಂತ ದಕ್ಷತೆಯಿಂದ ಸುಮಾರು ೧೪ ವರ್ಷ ರಾಜ್ಯಭಾರ ಮಾಡಿ ಕ್ರಿ.ಶ.೧೭೪೧ರಲ್ಲಿ ಮರಣ ಹೊಂದಿದನು.

೨.೮.೫. ರಾಜಾಪಿಡ್ಡ ನಾಯಕ (೧೭೪೧-೧೭೪೬):

ಎರಡನೆ ಪಾಮನಾಯಕನ ನಂತರ ಆತನ ಮಗ ಪಿಡ್ಡ ನಾಯಕನು ಅಧಿಕಾರಕ್ಕೆ ಬಂದನು. ಇತನ ನಾಲ್ಕು ವರ್ಷದ ಆಳ್ವಿಕೆಯಲ್ಲಿ ಮಹತ್ವದ ಸಾಧನೆಗಳು ಸಂಭವಿಸಲಿಲ್ಲ. ಇತನು ವನದುರ್ಗದಲ್ಲಿ ಒಂದು ಕೋಟೆಯನ್ನು ನಿರ್ಮಿಸಿದ. ಸಂಸ್ಥಾನದ ಭದ್ರಬುನಾದಿಯನ್ನು ಕಾಪಾಡಿಕೊಂಡು ಬಂದು ಕ್ರಿ.ಶ. ೧೭೪೬ರಲ್ಲಿ ನಿಧನ ಹೊಂದಿದ.

೨.೮.೬. ಮೊಂಡಗೈ ವೆಂಕಟಪ್ಪ ನಾಯಕ (೧೭೪೭-೧೭೫೨):

ಮೂರನೆಯ ಪಿಡ್ಡ ನಾಯಕನಿಗೆ ಮಕ್ಕಳಿಲ್ಲದ್ದರಿಂದ ಆತನ ಸಹೋದರ ವೆಂಕಟಪ್ಪ ನಾಯಕನು ಅಧಿಕಾರಕ್ಕೆ ಬಂದನು. ಇತನ ಎಡಗೈ ಕತ್ತರಿಸಿದ್ದರಿಂದ ಇತನಿಗೆ ಮೊಂಡಗೈ ವೆಂಕಟಪ್ಪ ನಾಯಕನೆಂದು ಹೆಸರು ಬಂದಿತು. ತನ್ನ ಒಂದು ಕೈಗೆ ಕಬ್ಬಿಣದ ಕೈ ಮತ್ತು ಹಸ್ತ, ಬೆರಳಗಳನ್ನು ಮಾಡಿಸಿ ಯಾವಾಗಲು ಅದನ್ನೇ ಧರಿಸುತ್ತಿದ್ದ ಯುದ್ಧದಲ್ಲಿ ಇದೆ ಕೇಯಲ್ಲಿ ಖಡ್ಗ ಹಿಡಿದು ಹೋರಾಡುತ್ತಿದ್ದ. ಆರಂಭದ ದಾಳಿಯಲ್ಲಿ ಹಲವು ಪ್ರಾಂತಗಳನ್ನು ಹಿಡಿದುಕೊಂಡು ಸಂಪತ್ತು ಸಂಗ್ರಹಿಸಿ, ತನ್ನ ಸ್ಥಾನ ಭದ್ರಪಡಿಸಿಕೊಂಡನು.

ವೆಂಕಟಪ್ಪ ನಾಯಕನು ಪಾಂಡಿಚರಿ (ಪುಡಚರಿ) ಯುದ್ಧದಲ್ಲಿ ತನ್ನ ಸಾಹಸ ಮತ್ತು ಹೋರಾಟ ನೀತಿಯನ್ನು ತೋರಿಸಿದ. ಆರ್ಕಾಟದ ನವಾಬ ಹುದ್ದೆಗೆ ನಾಸರಜಂಗ ಮತ್ತು ಮುಜಾಫರ ಜಂಗರಲ್ಲಿ

ತೀವ್ರ ಪೈಪೋಟಿ ಆರಂಭವಾದಾಗ ಇಬ್ಬರು ತಮ್ಮ ತಮ್ಮ ಬೆಂಬಲಿಗರ ಸಹಾಯ ಯಾಚಿದರು. ಹೀಗಾಗಿ ವೆಂಕಟಪ್ಪ ನಾಯಕನು ನಾಸಿರಜಂಗನ ವಿನಂತಿಯ ಮೇರಿಗೆ ಎರಡು ಕರಾರುಗಳನ್ನು ಹಾಕಿ, ಯುದ್ಧದಲ್ಲಿ ಭಾಗವಹಿಸಿದ. ೧೨೦೦೦ ಬೇಡರ ಪಡೆ, ೬೦೦ ಕೋಟಕಾರರೊಂದಿಗೆ ಪಾಂಡಿಚರಿ ತಲುಪಿದ ನಾಯಕನು ನಾಸರಜಂಗನ ಸಂಯುಕ್ತ ಸೈನ್ಯ ಸಂಪೂರ್ಣವಾಗಿ ಹಿಂದೆ ಸರಿದಾಗ, ತಮ್ಮ ಪಡೆಯೊಂದಿಗೆ ಯುದ್ಧ ಆರಂಭಿಸಿದ. ಪಾಂಡಿಚರಿ ಕೋಟೆಯಿಂದ ಎಷ್ಟೆ ಪ್ರತಿರೋದ ಬಂದರು ವೀರಾವೇಶದಿಂದ ಹೋರಾಡಿದ ವೆಂಕಟಪ್ಪ ನಾಯಕನ ಸೈನ್ಯ ಯಶಸ್ವಿ ಹೊಂದಿ, ಕೋಟೆಯನ್ನು ತಮ್ಮ ಆಧಿನಕ್ಕೆ ತೆಗೆದುಕೊಂಡು ಅಲ್ಲಿ ತನ್ನ ಹನುಮ-ದ್ವಜ ಹಾರಿಸಿದ. ಯುದ್ಧದ ಗೆಲವು ತಿಳಿಸಿದ ನಾಸಿರಜಂಗನು ವೆಂಕಟಪ್ಪನಾಯಕನನ್ನು ಅಪ್ಪಿಕೊಂಡು, ಆತನಿಗೆ ಅಪಾರ ಹಣ ನೀಡಿದ. ಈ ಯುದ್ಧದಲ್ಲಿ ವೆಂಕಟಪ್ಪ ನಾಯಕನು ತನ್ನ ಆಪ್ತರನ್ನು ಕಳೆದುಕೊಂಡ ಇದರಿಂದ ಆತನಿಗೆ ತುಂಬಾ ದು:ಖವಾಯಿತು. ಆರು ತಿಂಗಳ ನಂತರ ತನ್ನ ಉಳಿದ ಸೈನ್ಯದೊಂದಿಗೆ ಸುರಪುರಕ್ಕೆ ಬಂದನು.

ಸುರಪುರವನ್ನು ಪುನರ್‌ನಿರ್ಮಾಣಗೊಳಿಸಿದ. ಇದರ ಪ್ರವೇಶಕ್ಕೆ ಐದು ದ್ವಾರ (ಅಗಸಿ) ಬಾಗಿಲುಗಳನ್ನು ನಿರ್ಮಿಸಿದ. ೧. **ಸೀಬಾರಬಂಡಿ ಅಗಸಿ,** ೨. **ದೇವಪುರ ಅಗಸಿ,** ೩. **ಕಪ್ಪಲ ಬೆಂಚಿಯ ಅಗಸಿ,** ೪. **ಸಿದ್ದಾಪುರ ಅಗಸಿ,** ೫. **ರಂಗಮ್ಮಪೇಟ ಅಗಸಿ** ಮತ್ತು **ವೆಂಕಟಾಪುರ ದಿಡ್ಡಿ.** ಪ್ರತಿಯೊಂದು ದ್ವಾರದ ರಕ್ಷಣೆಗಾಗಿ ಒಂದೊಂದು ಸುಸಜ್ಜಿತ ಪಡೆಯನ್ನು ನಿಲ್ಲಿಸಿದ. ಶತ್ರುಗಳು ಸರಳವಾಗಿ ಪ್ರವೇಶಿಸುವ ಕಡೆಗೆ ಹೆಚ್ಚಿನ ಸೈನ್ಯ ಮತ್ತು ಹೆಚ್ಚಿನ ಸಂಖ್ಯೆಯ ತೋಪುಗಳನ್ನು ನಿಲ್ಲಿಸಿದ. ಗ್ರಾಮದ ಸುತ್ತಮುತ್ತಲು ಏಳು ಚೌಕಿಗಳಿದ್ದವು. ಸುರಪುರದಿಂದ ೧೦-೧೫ ಕೀ.ಮಿ. ದೂರದಲ್ಲಿ ವಾಗಿನಗೇರಿ ಕೋಟೆ, ವನದುರ್ಗ ಕೋಟೆ, ಚಂದನ ಕೇರಿ ಕೋಟೆ ಮತ್ತು ರಾಯನಪಾಳ್ಯಯಲ್ಲಿ ಕೋಟೆಗಳನ್ನು ನಿರ್ಮಿಸಿ ಅಲ್ಲಿ ಒಬ್ಬೊಬ್ಬ ಸುಭೆದಾರರು ಅವರ ಕೈಯಲ್ಲಿ ಶಾಶ್ವತ ಸೈನ್ಯವನ್ನು ಇರಿಸಿದ. ಇದರಿಂದ ಸುರಪುರ ನಗರಕ್ಕೆ ಯಾವ ಕಡೆಯಿಂದಲೂ ತೊಂದರೆಯಾಗದಂತೆ ರಕ್ಷಣಾ ಕ್ರಮಗಳನ್ನು ಜರುಗಿಸಿದ.

ಕೋಟಕಾರರು ಎಂದರೆ ಕೋಟೆಯನ್ನು ಕಾವಲು ಮಾಡುವ ವಿಶೇಷ ಜನಾಂಗ. ಸುರಪುರದಲ್ಲಿ ಇವರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದಾರೆ. ಪ್ರತಿಯೊಬ್ಬ ಕೋಟಕಾರನ ಬಳಿ, ಉಡುವು, ರೇಶ್ಮೆಯ ಹಗ್ಗ ಮ್ತು ಮರಗಾಲುಗಳು ಅಗಲವಾದ ಕತ್ತಿ, ಢಾಲುಗಳು ಅರಸರಿಂದ ಪಡೆದ ವಸ್ತುಗಳು ಇರುತ್ತಿದ್ದವು. ಇವರು ನೇರವಾಗಿ ಅರಸರ ಆಧಿನಕ್ಕೆ ಒಳಪಡುತ್ತಿದ್ದರು. ಯುದ್ಧದಲ್ಲಿ ಅರಸನ ರಕ್ಷಣೆಯ ಜವಾಬ್ದಾರಿ ಇವರದಾಗಿತ್ತು (ಅಂಗರಕ್ಷಕರು) ಇವರ ಆಹಾರ, ುಡುಗೆ ತೊಡಿಗೆ ವಿಶೇಷತೆಯಿಂದ ಕೂಡಿದೆ. ಇವರಿಂದ ಗ್ರಾಮದ ಜನತೆಗೆ ತೊಂದರೆಯಾಬಹುದೆಂದು ಇವರ ಮೇಲೆ ನಿಗಾ ಇಡಲು ಶಸ್ತ್ರಾಧಾರಿಗಳಾದ ಬೇಡರ ಪಡೆ ಇರುತ್ತಿತ್ತು. ಏಕೆಂದರೆ ಕೂಟಕಾರರು ಸ್ವಭಾವತ: ಕ್ರೂರರು, ಅಸಂಸ್ಕೃತರು, ಯುದ್ಧದಲ್ಲಿ

[illegible]

ಇವರು ಶತ್ರುಗಳನ್ನು ಹಿಡಿದು ತಮ್ಮ ತಲೆಯಿಂದ ಅವರ ತಲೆಗೆ ಹೊಡೆದು ಅದನ್ನು ಒಡೆದು ಹಾಕುತ್ತಿದ್ದರು. ಇವರ ಸಾಹಸ ಕುರಿತು ಹಲವು ಐತಿಹ್ಯಗಳಿವೆ.

ವೆಂಕಟಪ್ಪನಾಯಕನ ಕಾಲದಲ್ಲಿ ಸುರಪುರ ಪಟ್ಟಣ ಮತ್ತು ಸುತ್ತಮುತ್ತಲಿನ ಕೋಟೆಗಳ ರಕ್ಷಣೆಗೆ ಒಟ್ಟು ೧೨ ಸಾವಿರ ಸೈನಿಕ ಪಡೆ ಇರುತ್ತಿತ್ತು. ಇವರೆಲ್ಲರ ಮೇಲ್ವಿಚಾರಕ ಗುರಿಕಾರನಾಗಿರುತ್ತಿದ್ದ. ಇತನು ರಾಜ ಪ್ರತಿನಿಧಿ, ಬೇಡರ ಕುಟುಂಬದಲ್ಲಿ ಒಂದು ಗಂಡು ಮಗು ಜನಿಸಿದರೆ, ಆ ಮಗುವಿನ ರಕ್ಷಣೆಗೆ ಸಂಸ್ಥಾನದಿಂದ ಹಣ ನೀಡುತ್ತಿದ್ದರು. ಆದ್ದರಿಂದ ಆತನು ಪ್ರೌಢಾವಸ್ಥೆಗೆ ಬಂದಾಗ ಸಂಸ್ಥಾನದ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿದ್ದ. ಸಕಲ ವಿದ್ಯಾಗಳಲ್ಲಿ ಪರೀಣಿತಿಯನ್ನು ಪಡೆದುಕೊಂಡ ನಂತರ ಇವರು ಬೇಡರ ಪಡೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆದ್ದರಿಂದ ಈ ಪಡೆಯು ೧೨,೦೦೦ ದಿಂದ ೫೦,೦೦೦ದವರೆಗೆ ರಾಜ್ಯದ ರಕ್ಷಣೆಗಾಗಿ ಸಿದ್ಧವಾಗುತ್ತಿತ್ತು.

ವೆಂಕಟಪ್ಪನಾಯಕನು ಹಿಂದಿನ ಅರಮನೆಯನ್ನು ಬಿಟ್ಟು ಮತ್ತೊಂದು ಅರಮನೆಯನ್ನು ನಿರ್ಮಿಸಿದನು, ಅದನ್ನು ಹಳೆ ದರಬಾರ್ ಎಂದು ಕರೆಯುತ್ತಾರೆ. ಅಲ್ಲಿದೆ ಕೊಡೆಕಲ್ಲಿನಲ್ಲಿ ಗೋಪಾಲಸ್ವಾಮಿಯ ದೇವಾಲಯವನ್ನು ನಿರ್ಮಿಸಿ ಅದರ ದಿನ ನಿತ್ಯದ ಕಾರ್ಯಚಟುವಟಿಕೆಗಳಿವೆ ೬೦ ಬಿಘೇ ಭೂಮಿಯನ್ನು ಕೊಟ್ಟನು. ಹೀರೆಮುದನೂರಿನಲ್ಲಿ ರಾಮತೀರ್ಥ ಮತ್ತು ಲಕ್ಷ್ಮಣ ತೀರ್ಥ ಎಂಬ ಎರಡು ತೀರ್ಥಗಳನ್ನು ನಿರ್ಮಿಸಿದನು ಮತ್ತು ಇಲ್ಲಿ ಒಂದು ಗೋಪಾಲಸ್ವಾಮಿ ದೇವಾಲಯವನ್ನು ನಿರ್ಮಿಸಿ, ಅದಕ್ಕೆ ೧೧೦ ಬಿಘೇ ಇನಾಮ ನೀಡಿದ. ತನ್ನ ತಾಯಿ ಮತ್ತು ಇತರರ ಹೆಸರಿನಲ್ಲಿ ರುಕ್ಮಾಪುರ ಮತ್ತು ಸತ್ಯಮ್ಮನ ಪೇಟೆ ಎನ್ನುವ ಗ್ರಾಮಗಳನ್ನು ನಿರ್ಮಿಸಿದ. ಈ ರೀತಿ ವೆಂಕಟಪ್ಪನಾಯಕನ ಕಾಲದಲ್ಲಿ ರಕ್ಷಣೆಗೆ ಸಂಬಂಧಿಸಿದಂತೆ ಹಲವು ಕಾರ್ಯಗಳು ಜರುಗಿದವು.

ವೆಂಕಟಪ್ಪನಾಯಕನಿಗೆ ಗಂಡು ಮಕ್ಕಳಿಲ್ಲದ್ದರಿಂದ ಗುಡಗುಂಟಿ ಮನೆತನದ ಮಗುವನ್ನು ದತ್ತು ಪಡೆಯಲು ಯೋಚಿಸಿದ. ಆದರೆ ಇದಕ್ಕೆ ದರ್ಬಾರಿನ ಸದಸ್ಯರು ವಿರೋದ ಬಂದಾಗ ತಾತ್ಕಾಲಿಕ ಸುಮ್ಮನಾಗಿ, ಎಲ್ಲರ ಒತ್ತಾಯದ ಮೇರಿಗೆ ಸಹೋದರನ ಮಗನಾದ ರಮಣಪ್ಪ ನಾಯಕನನ್ನು ಮುಂದಿನ ಉತ್ತರಾಧಿಕಾರಿ ಎಂದು ಸೂಚಿಸಲಾಯಿತು.[೧೮೩] ವೆಂಕಟಪ್ಪನಾಯಕನು ಗಂಡು ಸಂತತಿ ಇಲ್ಲದೆ ಕ್ರಿ.ಶ. ೧೭೫೨ರಲ್ಲಿ ಮರಣ ಹೊಂದಿದೆ.

೨.೮.೭. ಮೂರನೆಯ ಪಾಮನಾಯಕ ೧೭೫೨-೧೭೭೪:

ಮೊಂಡಗೈಯ ವೆಂಕಟಪ್ಪನಾಯಕನ ನಿಧನದ ನಂತರ, ರಮಣಪ್ಪಾ ನಾಯಕನನ್ನು ಎಲ್ಲಾ ಸರದಾರರು ಸೇರಿ ಅಧಿಕಾರಕ್ಕೆ ತಂದರು. ಇತನು ವಯೋವೃದ್ಧನಾದರಿಂದ ಕೇವಲ ಐದು ತಿಂಗಳ ರಾಜ್ಯಭಾರ ಮಾಡಿ, ತನ್ನ ಮಗ ಪಾಮನಾಯಕನನ್ನು ಅಧಿಕಾರಕ್ಕೆ ತಂದನು.

ಬಹುಮುಖ ಪ್ರತಿಭೆಯುಳ್ಳ ಇತನು ಪೇಶ್ವೆ ಮತ್ತು ನಿಜಾಮರೊಂದಿಗೆ ರಾಜಕೀಯ ಚತುರ ನೀತಿಯನ್ನು ಹೊಂದಿದನು. ಇದರಿಂದ ಅವರನ್ನು ತನ್ನ ಹತೋಟಿಯಲ್ಲಿಟ್ಟುಕೊಂಡನು. ದೇವದುರ್ಗದ ನಾಯಕ ಕಿರಿಚನಾಯಕನನಿಗೆ ತಕ್ಕ ಪಾಠ ಕಲಿಸಿದ. ಸುರಪುರದ ೧೪ ಓಣಿಗಳ ೧೭೯೨ ಬೇಡರು ಪಾಮಾ ನಾಯಕನ ವಿರುದ್ಧ ದಂಗೆ ಎದ್ದರು. ಈ ದಂಗೆಯನ್ನು ದಿವಾನರಾದ ನಿಷ್ಠಿ ಕಡಲಪ್ಪನವರ ಸಲಹೆಯಂತೆ ದಂಗೆ ಕೋರರನ್ನು ಸೆರೆ ಹಿಡಿಯಲು ಯತ್ನಿಸಿದರು, ಅದರಲ್ಲಿ ಕೆಲವರು ನಿಧನ ಹೊಂದಿದರು ಮತ್ತೆ ಕೆಲವರು ತಲೆಮರೆಯಿಸಿಕೊಂಡರು. ಉಳಿದವರು ತಲೆಮರೆಯಿಸಿಕೊಂಡರು. ದಂಗೆಕೋರರು ಗುಡಗುಂಟಿಯಲ್ಲಿ ಆಶ್ರಯ ಪಡೆದಿರುವುದನ್ನು ತಿಳಿದ ನಾಯಕರು ಅದರ ಮೇಲೆ ದಾಳಿ ಮಾಡಿ ಕೆಲವರನ್ನು ಸೆರೆ ಹಿಡಿದರು. ಇತನ ಕಾಲದಲ್ಲಿ ತನ್ನ ರಾಜ್ಯದ ರಕ್ಷಣೆಗಾಗಿ ದರಬಾರಿನ ದಕ್ಷಿಣಕ್ಕೆ ಎರಡು ಕುದುರೆಪಾಗಾ, ಆನೆಯಪಾಗಾ, ಒಂಟೆಯಪಾಗಾಗಳನ್ನು ನಿರ್ಮಿಸಿದನು. ದಂಡಿನ ವ್ಯವಸ್ಥೆಗೆ ವಿಶೇಷ ಕ್ರಮ ಅಳವಡಿಸಿಕೊಂಡು ಕುದುರೆಗಳ ಪಾಗ, ಆನೆಗಳು, ಒಂಟೆಗಳು, ಸವಾರಿ, ತೋಪುಗಳ ನಿರ್ಮಾಣ, ಬೇಡರ ಜನಾಂಗದ ಸೇವೆಯನ್ನು ವ್ಯವಸ್ಥಿತವಾಗಿ ನಿರ್ಮಿಸಿದ. ಈ ಕಾಲದಲ್ಲಿ ಚಿತ್ರಕಲೆಯ ಬೆಳವಣಿಗೆ ಆರಂಭವಾಗಿ ಅದು ಮುಂದೆ ಚಿತ್ರಕಲೆಯ ಸುವರ್ಣಯುಗಕ್ಕೆ ದಾರಿ ಮಾಡಿ ಕೊಟ್ಟಿತು. ಪಾಮನಾಯಕನು ಕ್ರಿ.ಶ. ೧೭೭೧ರಲ್ಲಿ ರೋಗಗ್ರಹಸ್ಥನಾಗಿ, ಕ್ರಿ.ಶ. ೧೭೭೩ರಲ್ಲಿ ನಿಧನ ಹೊಂದಿದ.

೨.೮.೮. ಎರಡನೆಯ ವೆಂಕಟಪ್ಪ ನಾಯಕ ೧೭೭೩-೧೮೦೨:

ಎರಡನೆಯ ವೆಂಕಟಪ್ಪ ನಾಯಕನು ಕ್ರಿ.ಶ. ೧೭೭೩ರಲ್ಲಿ ಅಧಿಕಾರಕ್ಕೆ ಬಂದನು. ಇತನ ಕಾಲದ ಪ್ರಮುಖ ಘಟನೆಗಳೆಂದರೆ ಪೇಶ್ವೆಯರೊಂದಿಗೆ ಪುನರ್ ಯುದ್ಧ ಆರಂಭಿಸಿದ್ದು. ಇಬ್ಬರಿಗೂ ಗುಡಗುಂಟಿಯಲ್ಲಿ ಯುದ್ಧ ಸಂಭವಿಸಿತು. ಎರಡು ಪಡೆಗಳಿಗೆ ಅಪಾರ ಹಾನಿ ಸಂಭವಿಸಿತು. ಕೊನೆಗೆ ಇಬ್ಬರು ಹಿಂದಿನ ಒಪ್ಪಂದಕ್ಕೆ ಬದ್ದರಾಗಿರುವಂತೆ ಒಪ್ಪಂದಕ್ಕೆ ಸಹಿ ಹಾಕಿದರು. ನಿಜಾಮನಿಗೂ ಮತ್ತು ಮರಾಠರಿಗೂ ಆರಂಭದಿಂದಲ್ಲಿ ವೈರತ್ವ ಇತ್ತು. ಮತ್ತೊಂದು ಯುದ್ಧದ ಅನಿವಾರ್ಯತೆ ಇದ್ದಾಗ ನಿಜಾಮನು ವೆಂಕಟಪ್ಪ ನಾಯಕನಿಗೆ ಪತ್ರ ಬರೆದು ಸಹಾಯ ಕೇಳಿದ. ಯುದ್ಧದಲ್ಲಿ ಸಹಕರಿಸಿದ ವೆಂಕಟಪ್ಪ ನಾಯಕನಿಗೆ ನಿಜಾಮನು ಚಿತ್ತಾಪೂರ, ಮಳಖೇಡ, ಕಲಬುರ್ಗಿ, ಸೇಡಂ, ಕಮಲಾಪೂರ, ಚಿಂಚೋಳಿ, ಯಾದಗಿರ ಮುಂತಾದ ಪ್ರದೇಶಗಳಿಂದ ಎರಡು ಲಕ್ಷ ತೆರಿಗೆ ಬರುವ ಪ್ರಾಂತಗಳನ್ನು ನೀಡಿದ.

ನಿಷ್ಠಿ ವೀರಪ್ಪನವರು ಸುರಪುರದ ಕೋಟೆಯ ರಕ್ಷಣೆಗಾಗಿ ಅವಶ್ಯವಿರುವ ಕಡೆಯಲ್ಲಿ ಕಂದಕ ನಿರ್ಮಿಸುವ ಕಾರ್ಯ ಆರಂಭಿಸಿದ. ಕೃಷ್ಣಾ ನದಿಯಿಂದ ಕಂದಕಕ್ಕೆ ನೀರು ಸರಬರಾಜು ಮಾಡಲಾಯಿತು. ಮಾರ್ಗದಲ್ಲಿ ಬರುವ ಹಳ್ಳಿಗಳ ಕೃಷಿಗೆ ಈ ನೀರಿನ ಬಳಕೆ ಮಾಡಿಕೊಳ್ಳಲು ಯೋಜನೆಯನ್ನು ರೂಪಿಸಿದ. ಕ್ರಿ.ಶ. ೧೭೯೪-೯೫ರಲ್ಲಿ ಏಳು ಪಾಳ್ಯದ ಮೇಲೆ ಯುದ್ಧ ಸಾರಿದನು. ಅದರಲ್ಲಿ ದೇವದುರ್ಗದ ಕೊಳ್ಳಿ

[illegible]

ರಂಗಪ್ಪನಾಯಕನ ಪ್ರಕರಣವು ಪ್ರಮುಖವಾಗಿದೆ. ಈ ಯುದ್ಧ ಕುರಿತು ಲೋಕಯ್ಯಾ ತನ್ನ ಗ್ರಂಥದಲಲಿ ಈ ರೀತಿ ವಿವರಿಸಿದ್ದಾನೆ.

"ಸಂಗರವು ಗೈವುತ್ತ ಸಾಲು ಫಿ
ರಂಗಿ ಗುಂಡುಗಳೆಸಿಯೆ ಪರಹೃದ
ಯಂಗಳೆಸಿಯಲ್ಲಿವರು ದಿವ್ಯ ಫರಂಗುಗಳ ಕಿತ್ತಿ।
ಭಂಗ ಬಡಿಸಲು ನೋಡಿ ಕೊಳ್ಳೀ
ರಂಗ ನಿಲ್ಲದೆ ಅಂಜಿ ಓಡಿದವು
ತ್ತುಂಗ ಮದ್ದಿನ ಮಾಲು ಸೇರಿದ ಸರ್ವ ಸಹಿತದಲಿ।"[೧೮೪]

ಪಿಂಡಾರಿಯವರೊಂದಿಗೆ ಯುದ್ಧ, ಪೇಶ್ವೆಗಳೊಂದಿಗೆ ಬೋನ್ಹಾಳದಲ್ಲಿ ಯುದ್ಧ, ಖರ್ದೆ ಯುದ್ಧದಲ್ಲಿ ಸುರಪುರ ಸೈನ್ಯವು ಪ್ರಮುಖ ಪಾತ್ರವಹಿಸಿತು. ಈ ಕುರಿತು ಲೋಕಯ್ಯನವರು ಯಾವುದೇ ವಿವರಣೆ ನೀಡಿಲ್ಲ. ಇದನ್ನು ಕೈಫಿಯತ್‌ಗಳಲ್ಲಿ ವಿವರಿಸಿಲಾಗಿದೆ.[೨೨೫] ಮತ್ತು ಶಹಾಪೂರದ ಕಿಲ್ಲೆಯನ್ನು ಕ್ರಿ.ಶ. ೧೭೯೫ ಮರಳಿ ವಶಪಡಿಸಿಕೊಂಡನು. ಅಲ್ಲದೆ ಗುಡುಗಂಟಿಯ ಮೇಲೆ ದಾಳಿಯ ವಿವರವನ್ನು ಲೋಕಯ್ಯನ ಗ್ರಂಥದಲ್ಲಿ ವಿವರಿಸಲಾಗಿದೆ.

ವೆಂಕಟಪ್ಪನಾಯಕನ ಕಾಲದಲ್ಲಿ ಹಲವು ಜನೋಪಯೋಗಿ ಕಾರ್ಯಗಳು ಕೈಗೊಳ್ಳಲಾಯಿತು. ಹಲವು ಕೆರೆಗಳು, ಬಾವಿಗಳು, ಹೊಸ ನಗರಗಳನ್ನು ನಿರ್ಮಿಸಿದನು. ಹೊಸಕೇರಿಯಲ್ಲಿ ಅರಸನು ತನ್ನ ಬೇಟೆಯ ಕಾಲದಲ್ಲಿ ವಿಶ್ರಾಂತಿಗಾಗಿ ಒಂದು ಅರಮನೆಯನ್ನು ಕಟ್ಟಿಸಿದನು. ರಕ್ಷಣೆಗಾಗಿ ಹಲವು ಕಡೆಯ ಮದ್ದಿನ ಮಹಲಗಳನ್ನು ಕಟ್ಟಿಸಿದನು. ಗುಂಡುಗಳ ತಯ್ಯಾರಿಯ ಸ್ಥಳಗಳನ್ನು, ಮತ್ತು ಹಲವು ರಕ್ಷಣಾ ವಾಸ್ತುಶಿಲ್ಪಶಿಲ್ಪಗಳನ್ನು ನಿರ್ಮಿಸಿದ. ಈ ಎಲ್ಲಾ ಸಾಧನೆಗಳಿಂದ ವೆಂಕಟಪ್ಪನಾಯಕನಿಗೆ ಹಲವು ಬಿರುದುಗಳಿದ್ದವು. ಉದಾ: ಮಾಹಾರಾಜಾಧಿರಾಜ, ರಾಜಕಂಠೀರವ, ಹನುಮದ್ವಜರಾಯ ಮುಂತಾದವು, ಒಟ್ಟಿನಲ್ಲಿ ಇತನ ಕಾಲದಲ್ಲಿ ಸುರಪುರ ಸಂಸ್ಥಾನ ಅಪಾರ ಪ್ರಗತಿಯನ್ನು ಕಂಡಿತು.

೨.೮.೯. ರಾಣಿ ಕಾಂತಮ್ಮ ೧೮೦೧-೧೮೦೩:

ರಾಜಕೀಯ ಅರಾಜಕತೆಯಿಂದಾಗಿ ಮತ್ತು ವಾರಸುಧಾರರು ಇಲ್ಲದ ಪ್ರಯುಕ್ತ ರಾಣಿ ಕಾಂತಮ್ಮಳು ತನ್ನ ಮೃತ ಮಗನ ಮಗಳನ್ನು ಅಧಿಕಾರಕ್ಕೆ ತರಲು ತಾನೆ ತಾತ್ಕಾಲಿಕ ಅಧಿಕಾರ ವಹಿಸಿಕೊಂಡಳು. ಮಹಿಳೆಯ ಆಳ್ವಿಕೆಯನ್ನು ವಿರೋಧಿಸಿ ರಾಜ್ಯದಲ್ಲಿ ಎರಡು ಗುಂಪುಗಳಾದವು. ಕರ್ನೂಲಿನ ಪಿಡ್ಡನಾಯಕನನ್ನು ಸುರಪುರ ಸಂಸ್ಥಾನಕ್ಕೆ ತರಲು ತೀರ್ವ ಪೈಪೋಟಿಖ ಆರಂಭವಾಯಿತು. ಆಗ ರಾಜ ಸಂಬಂದಿ ಅಪ್ಪಪ್ಪ ನಾಯಕನು ಶಾಂತಮ್ಮ ಹಾಗೂ ಪಿಡ್ಡನಾಯಕರ ಕಲಹ ಬಗೆಹರಿಸಿದ, ಒಪ್ಪಂದದಂತೆ ಪಿಡ್ಡ ನಾಯಕನು ಅಧಿಕಾರಕ್ಕೆ ಬಂದನು.

೨.೮.೧೦. ರಾಜಾ ಪಿಡ್ಡ ನಾಯಕ ೧೮೦೩-೧೮೧೮:

ರಾಜಾ ಪಿಡ್ಡ ನಾಯಕನು ಅಧಿಕಾರಕ್ಕೆ ಬಂದ ನಂತರ ತನ್ನ ಆಪ್ತನಾದ ತಿಮ್ಮಪ್ಪನನ್ನು ಬಂದಿಖಾನೆಯಿಂದ ಅತಿ ಜಾಣ್ಮೆಯಿಂದ ಬಿಡಗಡೆ ಮಾಡಿದ. ತಿಮ್ಮಪ್ಪನ ನೇತೃತ್ವದಲ್ಲಿ ದಂಡಯಾತ್ರೆ ಆಯೋಜಿಸಿ, ಯಾದಗಿರ, ಕೊಯಲ್‌ಕೊಂಡ, ಚಿಂಚೋಳಿ, ಗುರುಮಟಕಲ್, ಬೀದರ ಕೋಟೆ ಅಕ್ಕಲಕೋಟೆ ವಿಜಾಪೂರ, ಬಾಗೆವಾಡಿ, ಎಳಮೇಲಿ, ತಾಳಿಕೋಟೆ, ನಾಲ್ವತ್ವಾಡ ಈ ಎಲ್ಲಾ ಪ್ರದೇಶಗ ತೆರಿಗೆ ವಸೂಲಿ (ಸರದೇಶ ಗತಿ, ಗೌಡಕಿ) ಅಧಿಕಾರ ಪಡೆದುಕೊಂಡನು. ದಂಡಯಾತ್ರೆಯಲ್ಲಿ ವಸೂಲಿ ಮಾಡಿದ ಎಲ್ಲಾ ಸಂಪತ್ತು ತನ್ನ ನಾಯಕನಿಗೆ ನೀಡಿ ಮತ್ತಷ್ಟು ನಿಷ್ಠೆಯನ್ನು ಗಳಿಸಿಕೊಂಡ.

ರಾಜ ಪಿಡ್ಡ ನಾಯಕನ ಕಾಲದಲ್ಲಿ ದೇವದುರ್ಗ, ಇಜೇರಿ, ಕೋಟೆಗಳನ್ನು ಕ್ರಿ.ಶ. ೧೮೧೧ರಲ್ಲಿ ಪುನರ್ ನಿರ್ಮಿಸಿದ. ಈ ಕಾಲದಲ್ಲಿ ಸುರಪುರ ಪ್ರದೇಶದಲ್ಲಿ ಗರುಡಾ ಕಲೆಯು ಅಪಾರವಾಗಿ ಬೆಳೆದು ಬಂದಿತು. ಕ್ರಿ.ಶ. ೧೮೧೮ರಲ್ಲಿ ರಾಜಾ ಪಿಡ್ಡ ನಾಯಕನು ನಿಧನ ಹೊಂದಿದ. ಕೃಷ್ಣಪ್ಪ ನಾಯಕನು ಉದಾರಿಯು ಧರ್ಮ ನಿಷ್ಟನು ಆಗಿದ್ದನು. ಶಿಕ್ಷಣ ಪ್ರೇಮಿಯಾದ ಇತನು ಅಗ್ರಹಾರಗಳನ್ನು ನಿರ್ಮಿಸಿದನು. ಹಲವು ಜನೋಪಯೋಗಿ ಮತ್ತು ಲೋಕೋಪಯೋಗಿ ಕಾರ್ಯಗಳಿಂದ ಜನಮೆಚ್ಚುಗೆ ಪಡೆದನು. ಕ್ರಿ.ಶ. ೧೮೪೨ರಲ್ಲಿ ಬ್ರಿಟಿಷರ ಕ್ಯಾಪ್ಟನ್ ಗ್ರೀಸ್ಲೆಯೊಂದಿಗೆ ಒಪ್ಪಂದದ ಕೆಲವೇ ದಿನಗಳಲ್ಲಿ ಇತನು ೧೮೪೨ರಲ್ಲಿ ಮರಣ ಹೊಂದಿದನು (೧೨೫೨ ಫಸಲಿ).

೨.೮.೧೧. ರಾಜಾ ವೆಂಕಟಪ್ಪ ನಾಯಕ ೧೮೧೮ ರಿಂದ ೧೮೨೭:

ಮುಮ್ಮಡಿ ರಾಜಾ ದೆವೇಂದ್ರವೆಂಕಟಪ್ಪನಾಯಕನು ನಾಲ್ವಡಿಪಿಡ್ಡನಾಯಕನ ನಂತರ ಕ್ರಿ.ಶ.೧೮೧೮ರಲ್ಲಿ ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದನು. ಇತನು ಅಧಿಕಾರಕ್ಕೆ ಬರುವ ಕಾಲದಲ್ಲಿ ಹಲವು ಆಂತರಿಕ ತೊಂದರೆಗಳಿದ್ದವೂ. ಅಲ್ಲದೆ ಬ್ರಿಟಿಷರು, ಪೇಶ್ವಗಳು ಮತ್ತು ನಿಜಾಮರು ಸುರಪುರ ಸಂಸ್ಥಾನದ ವಿರುದ್ಧ ಕಾರ್ಯ ಚಟುವಟಿಕಯಲ್ಲಿದ್ದರು. ವೆಂಕಟಪ್ಪನಾಯಕನು ಸ್ವಂತ ಪಂಡಿತನಾಗಿದ್ದೂ ಆತನ ಹೆಂಡತಿ ಯೋದ ರಾಣಿ ರಂಗಮ್ಮಳ, ಒಳ್ಳೆಯ ಕವಯತ್ರಿಯಾಗಿದ್ದಳು. ಕಿತ್ತೂರ ಸಂಸ್ಥಾನ ಪತನ ಹೊಂದಿದ ನಂತರ ಅಲ್ಲಿಯ ಸುಮಾರು ೩೦೦ ಜನ ದೇಶಾಭಿಮಾನಿ ಸೈನಿಕರನ್ನು ಸುರಪುರಕ್ಕೆ ಕರೆ ತರಲಾಯಿತು. ಈತನ ಕಾಲದಲ್ಲಿ ಸಾಹಿತ್ಯ ಅಪಾರ ಪ್ರಮಾಣದಲ್ಲಿ ಬೆಳೆದು ಬಂದಿತು. ಈ ಕುರಿತು ಲೋಕಯ್ಯನವರು ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಒಂಬತ್ತು ವರ್ಷಗಳ ಕಾಲ ರಾಜ್ಯ ಭಾರ ಮಾಡಿದ ಇತನು ೧೮೨೭ರಂದು ನಿಧನ ಹೊಂದಿದ.

೨.೮.೧೨. ರಾಜಾಕೃಷ್ಣಪ್ಪ ನಾಯಕ ೧೮೨೭-೪೩:

ದೇವೆಂದ್ರ ವೆಂಕಟಪ್ಪ ನಾಯಕನ ನಂತರ ಆತನ ಹಿರಿಯ ಮಗ ರಾಜಾಕೃಷ್ಣಪ್ಪ ನಾಯಕನು ಸುರಪುರ ಸಂಸ್ಥಾನದಲ್ಲಿ ಅಧಿಕಾರಕ್ಕೆ ಬಂದನು. ಇದನ್ನು ವಿರೋದಿಸಿದ ಮಲ ಸಹೋದರ ಹನುಮಪ್ಪ

ನಾಯಕನು ಯಾದವಿ ಕಲಹ ಆರಂಭಿಸಿದ ಕೊನೆಗೆ ನ್ಯಾಯಾಲಯದ ತೀರ್ಪಿನಂತೆ ಕೃಷ್ಣನಾಯಕನೆ ಅಧಿಕಾರಕ್ಕೆ ಬಂದನು. ಆದರೂ ಇದನ್ನು ವಿರೋಧಿಸಿದ ಹನುಮಪ್ಪ ನಾಯಕನು ಹಲವು ಪ್ರದೇಶಗಳನ್ನು ಹಿಡಿದುಕೊಂಡನು. ನೆರೆಯ ಅರಸರು ಸಹೋದರ ಆಂತರಿಕ ಕಲಹದ ಲಾಭ ಪಡೆಯಲು ಯತ್ನಿಸಿದರು.

೨.೮.೧೩. ನಾಲ್ವಡಿ ರಾಜಾ ವೆಂಕಟಪ್ಪ ನಾಯಕ ಕ್ರಿ.ಶ. ೧೮೪೩-೧೮೫೮:

ಕೃಷ್ಣಪ್ಪ ನಾಯಕನು ನಿಧನ ಹೊಂದಿದಾಗ ಆತನ ಮಗ ವೆಂಕಟಪ್ಪ ನಾಯಕನಿಗೆ ೮ ವರ್ಷ ವಯಸ್ಸು. ಆದ್ದರಿಂದ ರಾಣಿ ಈಶ್ವರಮ್ಮ ರಾಜ್ಯದ ಕಾರ್ಯಭಾರ ವಹಿಸಿಕೊಂಡಳು. ರಾಜನ ನಿಧನದ ಪೂರ್ವದಲ್ಲಿ ಅಧಿಕಾರಕ್ಕಾಗಿ ಇತರ ರಾಣಿಯರು ಬೇರೆ ಬೇರೆ ಆಲೋಚಿಸಿದಾಗ ಕೊನೆಗೆ ಈಶ್ವರಮ್ಮಳಿಗೆ ಗಂಡು ಸಂತಾನ ಜನಿಸಿದ್ದರಿಂದ ಎಲ್ಲಾ ವಿಚಾರಗಳು ವಿಫಲವಾದವು.

ಮತ್ತೊಂದು ಕಡೆ ಕ್ಯಾಪ್ಟನ್ ಸುರಪುರದ ಆಂತರಿಕ ಆಡಳಿತದಲ್ಲಿ ಅಪಮಾನಗೊಂಡು ತನ್ನ ಹುದ್ದೆಗೆ ರಾಜನಾಮೆ ನೀಡಿ ಸ್ವದೇಶಕ್ಕೆ ಮರಳಿದ ಮೇಲೆ ಆಸ್ಥಳದಲ್ಲಿ ಕ್ಯಾಪ್ಟನ್ ಟೇಲರನು ಅಧಿಕಾರಕ್ಕೆ ಬಂದನು. ಇತನು ಸುರಪುರ ವಿಷಯದಲ್ಲಿ ಅತ್ಯಂತ ಜಾಗರುಕತೆಯಿಂದ ವರ್ತಿಸಿ, ಅವರಿಂದಾದ ತಪ್ಪುಗಳು ಮತ್ತು ಹಿಂದಿನ ಅಧಿಕಾರಿಗಳಿಂದಾದ ಲೋಪ ದೋಷಗಳನನು ವಿವರಿಸಿ, ಮುಂದೆ ಸುರಪುರದಿಂದ ಹೆಚ್ಚಿನ ಹಣ ವಸೂಲಿ ಮಾಡುವುದಿಲ್ಲವೆಂದು ಭರವಸೆ ನೀಡಿದ. ಅಲ್ಲದೆ ವಾರ್ಷಿಕ ಕಪ್ಪನ್ನು ನಿಗದಿಪಡಿಸಿದ. ರಾಣಿ ಈಶ್ವರಮ್ಮಳ ದುಂದು ವೆಚ್ಚ ಮತ್ತು ಚನ್ನಬಸಪ್ಪನೊಂದಿಗೆ ಕೂಡಿಕೊಂಡು ರಾಜ ಮರ್ಯಾದೆಗೆ ಧಕ್ಕೆ ಬರುವಂತೆ ನಡೆದುಕೊಂಡಳು. ಆದ್ದರಿಂದ ಬ್ರಿಟಿಷ ಅಧಿಕಾರಿಗಳು ಒಂದು ಆದೇಶ ಹೊರಡಿಸಿ, ಚನ್ನಬಸಪ್ಪನಿಂದ ರಾಣಿಯನ್ನು ವಿಮುಕ್ತಿಗೊಳಿಸಿದರು. ಅಲ್ಲದೆ ರಾಜಕುಮಾರನು ಪ್ರಾಪ್ತ ವಯಸ್ಸಿಗೆ ಬರುವವರೆಗೆ ಅಧಿಕಾರವನ್ನು ಪಿಡ್ಡ ನಾಯಕನಿಗೆ ವಹಿಸಲಾಯಿತು.

ವೆಂಕಟಪ್ಪ ನಾಯಕನು ಪ್ರಾಪ್ತನಾದ ನಂತರ ಪಟ್ಟಾಭಿಷೇಕ ಕಾರ್ಯ ನಿಗದಿಯಾಯಿತು. ಪಿಡ್ಡನಾಯಕನು ತನ್ನ ಅಧಿಕಾರ ಉಳಿಸಿಕೊಳ್ಳಲು ಸಂಚು ರೂಪಿಸಿದ. ಆದರೆ ಟೇಲರನ್ ಮಧ್ಯಸ್ಥಿಕೆಯಿಂದ ವೆಂಕಟಪ್ಪನಾಯಕನು ಅಧಿಕಾರಕ್ಕೆ ಬಂದನು. ಇತನ ಕಾಲದಲ್ಲಿ ಸಗರನಾಡು ಸಂಸ್ಕೃತಿಕವಾಗಿ ಶ್ರೀಮಂತಗೊಂಡಿತು. ಇದನ್ನು ಸಹಿಸದ ವಿರೋಧಿಗಳು ಮುಂದಿನ ಮಹಾನವಮಿಯ ಸಂದರ್ಭದಲ್ಲಿ ರಾಜನೆ ಕೊಲೆಯ ಸಂಚು ನಡೆಯಿತು. ಇದರಲ್ಲಿ ಪಿಡ್ಡನಾಯಕನ ಪಾತ್ರವಿದೆ ಎಂದು ಅರಿತ ಟೇಲರನು ಮಧ್ಯಸ್ಥಿಕೆ ವಹಿಸಿ ರಾಜನ ರಕ್ಷಣಾ ಜವಾಬ್ದಾರಿಯನ್ನು ವಹಿಸಿಕೊಂಡನು. ಆತನಿಗೆ ಒಳ್ಳೆಯ ಶಿಕ್ಷಣ, ಓದು, ಬರಹ, ಮುಂತಾದ ಕೆಲಸಗಳು ಸುಗಮವಾಗಿ ಸಾಗಿದವು. ಕ್ರಿ.ಶ. ೧೮೪೪ರಲ್ಲಿ ಟೇಲರನು ತನಗಾಗಿ ಬಂಗಲೇಯನ್ನು ನಿರ್ಮಿಸಿದನು. ಈ ರೀತಿ ಟೇಲರನು ಸುರಪುರದ ಬೆವಣಿಗೆಯಲ್ಲಿ ಅಪಾರವಾಗಿ ಶ್ರಮಿಸಿದ.

[illegible]

ರಾಣಿಯು ಟೇಲರ್‌ನ ವಿರುದ್ಧ ಸೇಡು ತೀರಿಸಿಕೊಳ್ಳಲು ಎಷ್ಟೆ ಯೋಚಿಸಿದರೂ ಸಾಧ್ಯವಾಗಲಿಲ್ಲ. ರೆಸಿಡೆಂಟನು ಒಂದು ಸಲ ಸುರಪುರಕ್ಕೆ ಜೊತೆ ನೀಡಿದಾಗ ಎಲ್ಲಾ ವಿಷಯಗಳು ಬಗೆಹರಿದವು. ಕ್ರಿ.ಶ. ೧೮೫೩ರಲ್ಲಿ ರಾಜಾ ವೆಂಕಟಪ್ಪ ನಾಯಕನು ಪ್ರಾಪ್ತ ವಯಸ್ಸಿಗೆ ಬಂದಾಗ, ಬ್ರಿಟಿಷ ಸರಕಾರದ ಅನುಮತಿಯನ್ನು ಪಡೆದುಕೊಂಡು ಆತನಿಗೆ ಸುರಪುರ ಸಂಸ್ಥಾನದ ಮೇಲೆ ಕುಳ್ಳರಿಸಲಾಯಿತು. ಆದರೆ ಆತನ ಆಸ್ಥಾನದಲ್ಲಿ ಟೇಲರನು ಮುಂದುವರೆದನು. ಕೆಲ ವರ್ಷಗಳ ನಂತರ ಸುರಪುರ ಸಂಸ್ಥಾನದ ಆರ್ಥಿಕ ಸ್ಥಿತಿ ಹದಗೆಟ್ಟಾಗ ಬ್ರಿಟಿಷ ಸರಕಾರದ ಆದೇಶದಂತೆ ಟೇಲರ್‌ನು ರಾಜ್ಯದ ಅಧಿಕಾರವನ್ನು ಹಸ್ತಾಂತರಿಸಿದನು. ಡಾಲಹೌಸಿ ಕಾಲದಲ್ಲಿ ಮತ್ತೊಮ್ಮೆ ಬ್ರಿಟಿಷರು ಸುರಪುರ ವಶಪಡಿಸಿಕೊಳ್ಳಲು ಯತ್ನಿಸಿ, ವಿಫಲರಾದರು. ಕ್ರಿ.ಶ. ೧೮೫೩ರಲ್ಲಿ ಟೇಲರ್‌ನು ದರ್ಬಾರನ್ನು ಸೇರಿಸಿ ಎಲ್ಲರ ಸಮ್ಮುಖದಲ್ಲಿ ರಾಜನನ್ನು ಗೌರವಿಸಿ, ರಾಜ ಮುದ್ರೆಯನ್ನು ವೆಂಕಟಪ್ಪ ನಾಯಕನಿಗೆ ನೀಡಿದನು. ಟೇಲರ್‌ನು ಸುರಪುರದಿಂದ ನಿರ್ಗಮಿಸಿದ. ಆತನ ಬಂಗಲೆಯನ್ನು ನಾಯಕನು ೨೦,೦೦೦ ರೂ. ಗಳಿಗೆ ಖರೀದಿಸಿದ.

ವೆಂಕಟಪ್ಪ ನಾಯಕನು ರಾಜನಾದಾಗ ಇಡಿ ದೇಶದಲ್ಲಿ ಬ್ರಿಟಿಷರ ವಿರುದ್ಧ ಚಳುವಳಿ ಆರಂಭವಾಗಿತ್ತು. ಇದರಲ್ಲಿ ಕರ್ನಾಟಕದಲ್ಲಿ ಧೋಂಡಿಯಾ ವಾಘ, ಸಂಗೊಳ್ಳಿರಾಯಣ್ಣ, ನರಗುಂದದ ಬಾಬಾ ಸಾಹೇಬ, ಮುಂಡರಗಿಯ ಭೀಮರಾಯ ಮುಂತಾದವರು ಬ್ರಿಟಿಷರ ವಿರುದ್ಧ ಹೋರಾಟ ಆರಂಭಿಸಿದರು. ೧೮೫೭ರಲ್ಲಿ ಝಾಂಸಿ, ಮೀರತ್, ದಿಲ್ಲಿ, ಕಾನ್ಪುರ, ಲಕ್ನೋ, ಔದ್, ಗ್ವಾಲಿಯರ್ ಮುಂತಾದವುಗಳು ಬ್ರಿಟಿಷರ ವಶವಾದವು. ಅದರಂತೆ ದಕ್ಷಿಣದ ಹಲವು ರಾಜ್ಯಗಳು ಬ್ರಿಟಿಷರ ವಶವಾದವು. ಕ್ರಿ.ಶ. ೧೮೫೮ರಲ್ಲಿ ಬ್ರಿಟಿಷ ಕ್ಯಾಪ್ಟನ ವಿಂಡಹ್ಯಾಮನಿ. ಲಿಂಗಸೂರ ಸಮೀಪ ಬಂದು ಠಾಣೆ ಹೂಡಿದನು. ೭.೨.೧೮೫೮ರಂದು ಸುರಪುರದ ದಾಳಿಯಲ್ಲಿ ಎರಡು ಕಡೆಗೆ ಅಪಾರ ಹಾನಿ ಸಂಭವಿಸಿತು. ಕ್ಯಾ ಹೂಗ್‌ನ ನೇತೃತ್ವದಲ್ಲಿ ಮತ್ತಷ್ಟು ಸೈನ್ಯ ಒಂದು ಸೇರಿಕೊಂಡಿತು. ಸುರಪುರದ ವೆಂಕಟಾಪುರದಿಡ್ಡಿ, ಶಿಬಾರದಿಡ್ಡಿಗಳನ್ನು ಬ್ರಿಟಿಷರು ಪ್ರವೇಶಿಸುತ್ತಿದ್ದಾಗ ಘೋರ ಯುದ್ಧ ಸಂಭವಿಸಿತು.

ಸುರಪುರ ಮುತ್ತಿಗೆಯಲ್ಲಿ ಬ್ರಿಟಿಷ ಅಧಿಕಾರಿ ಕ್ಯಾಪ್ಟನ್ ನ್ಯೂಬೆರಿ ನಿಧನ ಹೊಂದಿದ. ಇಡಿ ದಿನ ಯುದ್ಧ ನಡೆಯಿತು. ಆದರೆ ಸುರಪುರದ ಅಧಿಕಾರಿಗಳು ಆಂಗ್ಲರ ಒಳಸಂಚಿಗೆ ಬಲಿಯಾಗಿ ರಾಜನಿಗೆ ದ್ರೋಹ ಬಗೆದರು. ಯುದ್ಧ ಮುಂದುವರೆಯಿಸುವುದು ಅಸಾಧ್ಯವಾಯಿತು. ಅನಿವಾರ್ಯವಾಗಿ ಅರಸನು ಹೈದ್ರಾಬಾದಿಗೆ ತೆರಳಿದ ಅಲ್ಲಿಯ ಸಿಕಂದರ ನಿಜಾಮನು ಮೋಸದಿಂದ ರಾಜನನ್ನು ಸೆರೆ ಹಿಡಿದು ಸಿಕಂದರಾಬಾದಿನ ಜೈಲಿನಲ್ಲಿ ಇರಿಸಿದ. ಆಗ ಟೇಲರ್ ರಾಜನನ್ನು ಬೇಟಿ ಮಾಡಿದ, ಅಲ್ಲಿಯ ಸಂಭಾಷಣೆಯಲ್ಲಿ ತಾನೊಬ್ಬ ಸ್ವಾಭಿಮಾನಿ ಎಂದು ತೋರಿಸಿಕೊಟ್ಟನು.

[illegible]

[illegible]

[illegible]

ಮತ್ತೊಂದು ಸಂದರ್ಭದಲ್ಲಿ ಟೇಲರ್‌ನು ರಾಜನನ್ನು ಬೇಟಿಯಾದಾಗ "ನನ್ನನ್ನು ಹೇಡಿಗಳಂತೆ ಗಲ್ಲಿಗೆ ಹಾಕಬೇಡಿ ತೋಪಿನ ಬಾಯಿಗೆ ಇಟ್ಟು ಹಾರಿಸಿರಿ. ನಾನು ಅಂಜುವುದಿಲ್ಲ, ಒಬ್ಬ ಸಾಮಾನ್ಯ ಬೇಡನು ಸಹ ಅವಮಾನವನ್ನು ಸಹಿಸುವುದಿಲ್ಲ, ನಾನಂತೂ ರಾಜ" ಎಂದು ಹೇಳಿದ.[೧೮೫]

ಮಿಲಟರಿ ನ್ಯಾಯಾಲಯದಲ್ಲಿ ರಾಜನ ವಿರುದ್ಧ ವಿಚಾರಣೆ ನಡೆಯಿತು. ಬ್ರಿಟಿಷರು ಹೇಗಾದರೂ ಮಾಡಿ ನಾಯಕ ನನ್ನ ಸದೆ ಬಡಿಯಬೇಕು ಇಲ್ಲದಿದ್ದರೆ ನಮಗೆ ದಕ್ಷಿಣ ಭಾರತದಲ್ಲಿ ಉಳಿಗಾಲವಿಲ್ಲವೆಂದು ಯೋಚಿಸಿದರು. ಆತನಿಗೆ ರಾಜದ್ರೋಹಿ ಎಂದು ತೀರ್ಮಾನಿಸಿ ಮರಣ ದಂಡನೆ ವಿಧಿಸಿತು. ಆದರೆ ರೆಸಿಡೆಂಟ ಮತ್ತು ಇತರ ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಮರದಂಡನೆಯಿಂದ ಸೆರೆವಾಸ ಶಿಕ್ಷೆ ವಿಧಿಸಿತು, ನಂತರ ನಾಲ್ಕು ವರ್ಷ ಮದ್ರಾಸ ಸಮೀಪದ ಜೈಲಿನಲ್ಲಿ ಆತನ ಇಷ್ಟದ ಹೆಂಡತಿಯೊಂದಿಗೆ ಇರಲು ತಿರ್ಮಾನಿಸಿತು. ಇಲ್ಲಿ ನಿಷ್ಠೆಯನ್ನು ತೋರಿದ ರಾಜನಿಗೆ ಬಿಡುಗಡೆ ಆದೇಶ ನೀಡಿದರು. ಆತನನ್ನು ಸೆರೆಯಿಂದ ಕರೆತರುವಾಗ ಸಿಕಿಂದರಾಬಾದ ಸಮೀಪದ ಬಿಡಾರದಲ್ಲಿ ರಾತ್ರಿ ವಿಶ್ರಾಂತಿ ಪಡೆಯುತ್ತಿದ್ದಾಗ ಗುಂಡಿನ ಶಬ್ದ ಕೇಳಿ ಬಂದಿತು. ಅಷ್ಟರಲ್ಲಿ ಕಾವಲುಗಾರರು ಬಂದು ನೋಡಿದಾಗ ವೆಂಕಟಪ್ಪನಾಯಕನು ಗುಂಡು ಹೊಡೆದು ಕೊಂಡು ಆತ್ಮಹತ್ಯ ಮಾಡಿಕೊಂಡು ವೀರ ಮರಣವನ್ನು ಅಪ್ಪಿದ, ಇತನ ಸಾವಿನಿಂದ ೨೨೨ ವರ್ಷಗಳ ಕಾಲ ಸುರಪುರದಲ್ಲಿ ಆಳ್ವಿಕೆ ಮಾಡಿರುವ ಗೋಸಲ ವಂಶ ಕೊನೆಗೊಂಡಿತು. ವೆಂಕಟಪ್ಪ ನಾಯಕನು ದೇಶ ಪ್ರೇಮ, ಭಾರತದ ಬಂಧ ವಿಮುಕ್ತಗಾಗಿ ನಿರಂತರ ಶ್ರಮಿಸಿದ. ಆದ್ದರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರಪುರ ಪ್ರಮುಖ ಕೇಂದ್ರ ಸ್ಥಳವಾಗಿತ್ತು.

ವೆಂಕಟಪ್ಪ ನಾಯಕನ ನಿಧನದ ನಂತರ ಬ್ರಿಟಿಷರು ಸುರಪುರ ಸಂಸ್ಥಾನವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ನಂತರದಲ್ಲಿ ಇದನ್ನು ನಿಜಾಮನಿಗೆ ನೀಡಲಾಯಿತು. ರಾಜನ ಹೆಂಡತಿ ಮತ್ತು ಸಂಬಂಧಿಕರು ಸುರಪುರವನ್ನು ಮರಳಿ ಪಡೆಯಲು ಯತ್ನಿಸಿದರು. ಕ್ರಿ.ಶ. ೧೯೦೬ರಲ್ಲಿ ರಾಣಿ ರಂಗಮ್ಮಳಿಗೆ ಹಿಂದಿನ ಗ್ರಾಮಗಳ ಜಾಗಿರ ದೊರೆಯಿತು. ೧೯೫೨ರಲ್ಲಿ ಮತ್ತೆ ಸಂಸ್ಥಾನವು ಸ್ವತಂತ್ರವಾದ ಸ್ಥಾನಮಾನಗಳನ್ನು ಹೊಂದಿತು. ರಾಜ ವೆಂಕಟಪ್ಪ ನಾಯಕನ ಜೊತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸುರಪುರದ ಹಲವು ವ್ಯಕ್ತಿಗಳು ಭಾಗವಹಿಸಿ ತಮ್ಮ ಪ್ರಾಣವನ್ನು ಕಳೆದುಕೊಂಡರು. ಸುಮಾರು ೮೮ ಜನರ ವಿವರವಿದೆ. ಇವುಗಳಲ್ಲದೆ ಇನ್ನೂ ಕೆಲವು ಹೆಸರುಗಳ ವಿವರ ಲಭ್ಯವಾಗಿದೆ. ಕೆಲವರು ಮೃತಪಟ್ಟಿರುವ ವಿವರವಿದೆ.[೨೨೮]

೨.೯. ೧೮೫೮ರ ನಂತರ ಸುರಪುರ ರಾಜವಂಶ:

ಕ್ರಿ.ಶ. ೧೮೯೦ರಲ್ಲಿ ರಾಣಿ ರಂಗಮ್ಮಳು ತನ್ನ ಸಂಸ್ಥಾನ ಪಡೆಯಲು ಹೌಸ್ ಆಪ್ ಕಿಮನ್ಸ್‌ಗೆ ಮನವಿ ಸಲ್ಲಿಸಿದಳು. ರಾಣಿಯ ಅರ್ಜಿ ತಿರಸ್ಕೃತವಾಯಿತು. ಹಿರಿಯರ ಸಲಹೆಯಂತೆ ರಾಣಿ ಕೃಷ್ಣಪ್ಪ ನಾಯಕನನ್ನು ದತ್ತು ಸ್ವೀಕರಿಸಿದ, ಕ್ರಿ.ಶ. ೧೯೫೨ರಲ್ಲಿ ಹೈದ್ರಾಬಾದ ಕರ್ನಾಟಕ ವಿಮೋಚನೆಯ ನಂತರ.

ರಾಜಾ ಪಿಡ್ಡ ನಾಯಕ ಹಾಗೂ ಬ್ಯಾರಿಸ್ಟರ ರಾಜಾ ವೆಂಕಟಪ್ಪನಾಯಕರು ಅಧಿಕಾರಕ್ಕೆ ಬಂದರು. ಇಬ್ಬರು ಸುರಪುರ ಸಂಸ್ಥಾನವನ್ನು ಆಳಿದರು. ಅವರಲ್ಲಿ ಬ್ಯಾರಿಸ್ಟರ ರಾಜಾ ವೆಂಕಟಪ್ಪಾ ನಾಯಕರ ಹೈದ್ರಾಬಾದ ಹಾಗೂ ಲಂಡನ್‌ನಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಲಂಡನ್ನಿನಿಂದ ಬ್ಯಾರಿಸ್ಟರ ಪದವಿ ಪಡೆದರು. ಕ್ರಿ.ಶ. ೧೯೪೮ರಲ್ಲಿ ಇವರು ರಜಾಕಾರರಿಂದ ಅನ್ಯಾಯವಾಗುತ್ತಿದ್ದುದನ್ನು ಕಂಡು, ಅವರ ವಿರುದ್ಧ ಹೋರಾಟಕ್ಕೆ ಇಳಿದರು. ತಾಳಿಕೋಟೆ ಕ್ಯಾಂಪನ ಮೂಲಕ ಇವರು ಕಾರ್ಯನಿರ್ವಹಿಸುತ್ತಿದ್ದರು. ಮಿಲಟರಿ ಕಾರ್ಯಾಚರಣೆಯಿಂದ ಹೈದ್ರಾಬಾದ ಕರ್ನಾಟಕ ವಿಮೋಚನೆಗೊಳಿಸಿ, ಭಾರತ ಸ್ವತಂತ್ರದಲ್ಲಿ ಈ ಭಾಗ ವಿಲಿನವಾಗುವುದಕ್ಕೆ ಇವರ ಪಾತ್ರ ಅಮೋಘವಾದುದು. ಈ ರೀತಿ ಸುರಪುರ ಸಂಸ್ಥಾನವು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಒಂದು ಪ್ರಮುಖ ಸಂಸ್ಥಾನವಾಗಿದೆ.

೨.೧೦. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಿಲ್ಲೆಯ ಪಾತ್ರ:

ಈಸ್ಟ ಇಂಡಿಯಾ ಕಂಪನಿಯ ಆಡಳಿತ ಭಾರತದಲ್ಲಿ ಭದ್ರಗೊಂಡ ನಂತರ ೧೮೧೮ರಲ್ಲಿ ಹೈದ್ರಾಬಾದ ಸಂಸ್ಥಾನದ ಮೇಲೆ ತಮ್ಮ ತೋಟಿಯನ್ನು ಸ್ಥಾಪಿಸಿದರು. ಆದರೆ ಗುಲಬರ್ಗಾ ಜಿಲ್ಲೆಯ ಸುರಪುರ ಸಂಸ್ಥಾನದ ನಾಯಕರು ಕಂಪನಿಯ ಆಡಳಿತಕ್ಕೆ ಒಳಪಡದೆ, ಅವರ ವಿರುದ್ಧದ ಚಟುವಟಿಕೆಯಲ್ಲಿ ತೊಡಗಿದರು. ನಾಲ್ವಡಿಯ ವೆಂಕಟಪ್ಪನಾಯಕ ಅಪ್ರಾಪ್ತನಾದ್ದರಿಂದ ಇದೆ ಸೂಕ್ತ ಸಮಯವೆಂದು ಬ್ರಿಟಿಷರು ನಿಜಾಮನ ಮಧ್ಯಸ್ಥಿಕೆಯಿಂದ ಸುರಪುರದ ಆಡಳಿತದಲ್ಲಿ ಹಸ್ತಕ್ಷೇಪ ಆರಂಭಿಸಿದರು. ಮೆಡೋಸ್ ಟೈಲರನನ್ನು ರಾಜಪ್ರತಿನಿಧಿಯನ್ನಾಗಿ ನೇಮಿಸಿ, ಇತನ ಮೂಲಕ ಜಿಲ್ಲೆಯ ಸಂಪೂರ್ಣ ಮಾಹಿತಿ ಸಂಗ್ರಹಿಸಲಾಯಿತು. ಕ್ರಿ.ಶ.೧೮೫೨ರಲ್ಲಿ ಮುಂಬೈಯಿ ಇನಾಮ್ ಕಮಿಷನ್ ಮೂಲಕ ಬ್ರಿಟಿಷರು ಸ್ಥಳಿಯ ಎಲ್ಲಾ ಸಂಸ್ಥಾನಗಳ ಆಸ್ತಿ ಪಾಸ್ತಿಗಳ ವಿವರ ಸಂಗ್ರಹಿಸಲಾಯಿತು. ಮುಂದೆ ಬಂದ ಡಾಲಹೌಸಿಯು ಈ ವರದಿಯನ್ನು ಆಧಾರವಾಗಿಟ್ಟುಕೊಂಡು ವಾರ್ಷಿಕ ೨೦,೦೦೦ ರೂ. ಗಿಂತ ಹೆಚ್ಚಿನ ಆದಾಯವುಳ್ಳ ಎಲ್ಲಾ ಸಂಸ್ಥಾನಗಳನ್ನು ಕಬಳಿಸಲು ಯೋಚಿಸಿದನು. ಆಗ ಸುರಪುರ ಸಂಸ್ಥಾನ ಈ ನೀತಿಯನ್ನು ಖಂಡಿಸಿ ಬ್ರಿಟಿಷರ ವಿರೋದ ಚಟುವಟಿಕೆ ಆರಂಭಿಸಿದರು. ವೆಂಕಟಪ್ಪನಾಯಕನು ಡಾಲಹೌಸಿಯ ನೀತಿಯನ್ನು ವಿರೋಧಿಸಿದನು. ಆದರೆ ತನಗೆ ಉತ್ತರಾಧಿಕಾರಿಗಳಿಲ್ಲವೆಂಬ ಕೊರಗು ಆತನಲ್ಲಿತ್ತು. ಸುರಪುರ ನಾಯಕರ ನೀತಿಯನ್ನು ಅನುಮಾನದಿಂದ ಕಂಡ ಬ್ರಿಟಿಷರು, ಗುಪ್ತವಾಗಿ ಮಾಹಿತಿ ಸಂಗ್ರಹಿಸಿ ಕ್ಯಾಪ್ಟನ್ ಬ್ಯಾರಿಯ ನೇತೃತ್ವದಲ್ಲಿ ಸುರಪುರದ ಮೇಲೆ ಸೈನ್ಯ ಸಾಗಿಸಲಾಯಿತು. ಆದರೆ ಈ ಹೋರಾಟದಲ್ಲಿ ಬ್ರಿಟಿಷರ ಸೈನ್ಯ ಸೋಲನ್ನು ಅನುಭವಿಸಿತು, ಅಲ್ಲದೆ ತನ್ನ ನಾಯಕ ಕ್ಯಾಪ್ಟನ್ ಬ್ಯಾರಿಯನ್ನು ಕಳೆದುಕೊಂಡಿತು. ಇದರಿಂದ ಕ್ರೋದಗೊಂಡ ಭಿಟಿಷರು ಮತ್ತಷ್ಟು ಸೇನೆಯೊಂದಿಗೆ ಸುರಪುರ ಕೋಟೆಯನ್ನು ಮುತ್ತಿದರು. ಆದರೆ ಬೇಡರ ಪಡೆಯನ್ನು ಮೊಸತನದಿಂದ ಪರಾಭವಗೊಳಿಸಿದರು. ರಾಜವೆಂಕಟಪ್ಪನಾಯಕನನ್ನು ಇದರಿಂದ ಅವಮಾನಿತನಾಗಿ ತನ್ನಷ್ಟಕ್ಕೆ ತಾನೆ ಗುಂಡು ಹಾರಿಸಿಕೊಂಡು

ಸಾವನ್ನಪ್ಪಿದ ಬ್ರಿಟಿಷರು ವಶಪಡಿಸಿಕೊಂಡು ಸುರಪುರ ಸಂಸ್ಥಾನವನ್ನು ಕ್ರಿ.ಶ.೧೮೫೮ರಲ್ಲಿ ನಿಜಾಮನ ಆಧಿನಕ್ಕೆ ಒಪ್ಪಿಸಲಾಯಿತು.

ಕ್ರಿ.ಶ.೧೮೬೮ರ ನಂತರ ಗುಲಬರ್ಗಾ ಜಿಲ್ಲೆಯು ಅಪರೋಕ್ಷವಾಗಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ದಕ್ಷಿಣದ ಕೇಂದ್ರಭಾಗವಾದ ಹೈದ್ರಾಬಾದ ಮೂಲಕ ಬ್ರಿಟಿಷರು ಕರ್ನಾಟಕದ ಬೀದರ, ಗುಲಬರ್ಗಾ ಮತ್ತು ರಾಯಚೂರುಗಳನ್ನು ಹಿಡಿದುಕೊಂಡರು. ಅಂದಿನಿಂದ ೧೯೩೮ರವರೆಗಿನ ಸ್ವಾತಂತ್ರ್ಯದ ಆಂದೋಲನಗಳು ಗುಲಬರ್ಗಾ ಜಿಲ್ಲೆಯಲ್ಲಿ ಅಷ್ಟೊಂದು ಪ್ರಮುಖವಾಗಿ ನಡೆಯಲಿಲ್ಲ. ಅದರೆ ವಿದೇಶಿಯ ವಸ್ತುಗಳ ಬಹಿಷ್ಕಾರ ಆಂದೋಲನ, ಖಾದಿಯ ಪ್ರಚಾರ, ಹರಿಜನರ ಏಳಿಗೆ ಮುಂತಾದ ರಚನಾತ್ಮಕ ಕಾರ್ಯಗಳು ನಡೆದವು.

೧೮೫೭ರ ಸಿಪಾಯಿದಂಗೆ ಅಥವಾ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಗುಲಬರ್ಗಾ ಜಿಲ್ಲೆಯ ಯಾವ ಭಾಗಗಳಲ್ಲಿ ಪ್ರತಿಧ್ವನಿಸಲಿಲ್ಲ ಕಾರಣ ನಿಜಾಮನ ಆದಿನದಲ್ಲಿದ ಈ ಭಾಗಗಳು ದಂಗೆಯಿಂದ ದೂರ ಉಳಿದವು. ಆದರೆ ದಂಗೆಯ ದುಷ್ಪರಿಣಾಮಗಳಿಂದ ಜಿಲ್ಲೆಯ ಆರ್ಥಿಕ ಸ್ಥಿತಿಗತಿ ತುಂಬಾ ಚಿಂತಾಜನಕವಾಯಿತು. ಮೊದಲನೆಯ ಸಾಲರಜಂಗನ ಕಾಲದಲ್ಲಿ ಹಲವು ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಅದರಲ್ಲಿ ಆಂಗ್ಲ ಮತ್ತು ಉರ್ದು ಶಿಕ್ಷಣ ಪದ್ಧತಿಯು ಜಾರಿಗೆ ತರಲಾಯಿತು. ಈ ಭಾಗದ ಜನರಲ್ಲಿ ಜಾಗೃತಿಯನ್ನುಂಟು ಮಾಡಲು ಹಲವು ಜನ ರಾಷ್ಟ್ರೀಯ ನಾಯಕರು ಹೈದ್ರಾಬಾದನಲ್ಲಿ ಬಂದು ನೆಲೆನಿಂತರು. ಕ್ರಿ.ಶ. ೧೯೨೪ರಲ್ಲಿ ಮಹಾತ್ಮಗಾಂಧಿಜಿಯವರು ಬೆಳಗಾಂವ ಕಾಂಗ್ರೇಸ್ಸಿನ ಅಧ್ಯಕ್ಷರಾದ ಬಳಿಕ ಇಲ್ಲಿಯ ಜನರಲ್ಲಿ ಸ್ವಾತಂತ್ರ್ಯದ ಆಶೋತ್ತರಗಳು ಮಾಡಿದವು ೧೯೨೧-೨೨ರಲ್ಲಿ ಗುಲಬರ್ಗಾದಲ್ಲಿ ಹಿಂದೂ-ಮುಸ್ಲಿಂರ ಪ್ರಬಲ ದಂಗೆಯಾಯಿತು. ಆದ್ದರಿಂದ ಈ ಭಾಗದ ಜನರಲ್ಲಿ ವಿಶ್ವಾಸ ಮೂಡಿಸಲು ಗಾಂಧಿಜೀಯವರು ೧೯೨೭ರಲ್ಲಿ ಗುಲಬರ್ಗಾಕ್ಕೆ ಬೇಟಿ ನೀಡಿ, ದಾಳಿಗೆ ಒಳಗಾದ ಶರಣಬಸವೇಶ್ವರ ದೇವಸ್ಥಾನಕ್ಕೆ ಬೇಟಿ ನೀಡಿದರು. ಈ ಕುರಿತು ಗಾಂಧೀಜಿಯವರು ಹರಿಜನ ಪತ್ರಿಕೆಯಲ್ಲಿ "ಗುಲಬರ್ಗಾ ಗಾನ್ ಮ್ಯಾಡ್" ಎಂಬ ಲೇಖನವನ್ನು ಬರೆದು ಪ್ರಕಟಿಸಿದರು. ಇದರಿಂದ ಚಳುವಳಿಗಾರರು ಮುಂದೆ ದಂಗೆಯನ್ನು ನಿಲ್ಲಿಸಿ, ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಿದರು. ೧೯೩೧-೩೨ರಲ್ಲಿ ಖಾದಿಯ ಚಳವಳಿ ಜಿಲ್ಲೆಯಲ್ಲಿ ಆರಂಭವಾಯಿತು.

೧೯೩೮ರ ನಂತರ ಚಳುವಳಿಗಾರರ ಮೇಲೆ ಆರ್ಯ ಸಮಾಜವು ಪ್ರಭಾವವನ್ನುಂಟು ಮಾಡಿತು. ವಿವಿಧ ಧರ್ಮದ ಜನತೆಯಲ್ಲಿ ಐಕ್ಯತೆಯನ್ನು ಮೂಡಿಸಿ ಎಲ್ಲರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿತು. ಹೈದ್ರಾಬಾದದಲ್ಲಿ ಹಿಂದೂಗಳ ವಿರುದ್ಧ ಸಂಭವಿಸುತ್ತಿದ್ದ ಅನ್ಯಾಯಗಳ ವಿರುದ್ಧ ಆರ್ಯ ಸಮಾಜವು ತನ್ನ ಹೋರಾಟ ಆರಂಭಿಸಿತು. ಧಾರ್ಮಿಕ ಮೆರವಣಿಗೆಗಳ ನಿಷೇದದ ವಿರುದ್ಧ ಗಲಭೆಗಳು ಸಂಭವಿಸುತ್ತಿದ್ದವು. ಇಂತಹ ಘಟನೆಗಳು ಗುಲಬರ್ಗಾ ಜಿಲ್ಲೆಯ ಹಲವು ಕಡೆ

ನಡೆದವು. ೧೯೩೮ರಲ್ಲಿ ಗುಲಬರ್ಗಾದಲ್ಲಿ ಹಿಂದೂ ಮಹಾಸಭಾದ ಅಧಿವೇಶನ ಸಂಘಟಿಸಲಾಯಿತು. ಆದರೆ ವಿಷಯವನ್ನು ಅರಿತುಕೊಂಡ ಬ್ರಿಟಿಷರು ನಿಜಾಮನ ಮೂಲಕ ಅದರ ನಾಯಕ ಬಾಪಟ್‌ರನ್ನು ಬಂಧಿಸಲಾಯಿತು. ಇದರಿಂದ ಕ್ರೋದಗೊಂಡ ರಮಾನಂದ ತೀರ್ಥರು ಹೈದ್ರಾಬಾದ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಸಂಚರಿಸಿ ರಾಷ್ಟ್ರೀಯ ಆಂದೋಲನ ಅರಿವು ಮೂಡಿಸಿದರು. ಸುರಕ್ಷಿತರು, ಸ್ವಾಭಿಮಾನಿಗಳು ಮತ್ತು ದೇಶ ಭಕ್ತರಾದ ರಮಾನಂದ ತೀರ್ಥರು ಹೈದ್ರಾಬಾದ ರಾಜ್ಯದಲ್ಲಿ ಸಂಚರಿಸಿ, ನಿಜಾಮರ ಮತ್ತು ಬ್ರಿಟಿಷರ ನೀತಿಯನ್ನು ವಿರೋಧಿಸಿದರು. ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿಕೊಂಡರು. ಇವರು ಮೂಲತಃಹ ಗುಲಬರ್ಗಾ ಜಿಲ್ಲೆಯವರೆಂಬ ಅಭಿಪ್ರಾಯಗಳಿವೆ. ಹಲವು ಸ್ಥಳಿಯರ ಸಹಾಯ. ಸಹಕಾರದೊಂದಿಗೆ ಆಂದೋಲನ ಆರಂಭಿಸಿದ ರಮಾನಂದ ತೀರ್ಥರು, ಹೈದ್ರಾಬಾದದಲ್ಲಿ ವಾಸವಾಗಿರುವ ಕನ್ನಡಿಗರಿಗೆ ರಕ್ಷಣೆಯನ್ನು ನೀಡಲು ಮುಂದಾದರು. ೧೯೩೮ರಲ್ಲಿ ನಡೆದ ಹೈದ್ರಾಬಾದ ಸ್ಟೇಟ್ ಕಾಂಗ್ರೇಸ್ ಅಧಿವೇಶನ ನ್ಯಾಯ ಭಾಹಿರವಾದುದೆಂದ ಚಳುವಳಿಕಾರರನ್ನು ಸೆರೆಹಿಡಿಯಲಾಯಿತು. ಆದರೆ ರಮಾನಂದರು ಕಾಂಗ್ರೇಸ್‌ಗೆ ಮಾನ್ಯತೆ ನೀಡಬೇಕೆಂದು ಸರಕಾರದ ಮೇಲೆ ಒತ್ತಡ ತಂದರು. ಕೊನೆಗೆ ಹಿಂದೂ ಮಹಾಸಭಾ ಮತ್ತು ಆರ್ಯ ಸಮಾಜದ ಸಂಯುಕ್ತ ಹೋರಾಟದಲ್ಲಿ ನಿಜಾಮ ಸರಕಾರ ಕೆಲವು ಕಡೆಗೆ ಕಾಂಗ್ರೇಸ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡಿತು. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ರಾಷ್ಟ್ರೀಯ ಆಂದೋಲನವನ್ನು ಜಾರಿಗೆ ತರುವ ಗುರಿ ಈ ಸಂಸ್ಥೆ ಹೊಂದಿತು. ಹರ್ಡೇಕರ ಮಂಜಪ್ಪನವರ ನೇತೃತ್ವದಲ್ಲಿ ಜಾರಿಗೆ ಬಂದ ಹಲವು ರಾಷ್ಟ್ರೀಯ ಕಾರ್ಯಕ್ರಮಗಳು ಗುಲಬರ್ಗಾದಲ್ಲಿ ಜಾರಿಗೆ ಬಂದವು. ೧೯೩೨ರಲ್ಲಿ ಗುಲಬರ್ಗಾದಲ್ಲಿ ಖಾದಿ ಭಂಡಾರ ಸ್ಥಾಪನೆಗೊಂಡಿತು. ಇದರ ಮೂಲಕ ಸ್ವದೇಶಿಯ ಆಂದೋಲನ ಜಿಲ್ಲೆಯಾದ್ಯಂತ ಜಾರಿಗೆ ಬಂದಿತು.

ಜಿಲ್ಲೆಯ ಹೋರಾಟಗಾರರಾದ ದತ್ತಾತ್ರೇಯ ಅವರಾಧಿ, ದೇವುಳಗಾಂವಕರ್, ಕೊಳುರು ಮಲ್ಲಪ್ಪ, ನಾರಾಯಣರಾವ, ಸರದಾರ ಶರಣಗೌಡ ಇನಾಮ್‌ದಾರ, ಜಗನ್ನಾಥರಾವ ಚಂಡರ್ಕಿ, ಕಕ್ಕೇರಿ ಹನುಮಂತರಾವ, ಅಣ್ಣಾರಾವ ಪಾಟೀಲ, ಮುಂತಾದವರು ಸ್ವತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದರು.[೧೮೬]

ಬಂಗಾಳ ವಿಭಜನೆಯನ್ನು ವಿರೋಧಿಸಿ ಎಸ್.ವಿ. ಬ್ಯಾನರ್ಜಿಯವರ ನೇತೃತ್ವದಲ್ಲಿ ಚಳುವಳಿ ಆರಂಭಗೊಂಡು ಮುಂದೆ ತೀವ್ರವಾದಿಗಳು ಮತ್ತು ಕ್ರಾಂತಿಕಾರರ ಪ್ರಭಾವಕ್ಕೆ ಒಳಗಾಯಿತು. ಕೃಷ್ಣಕುಮಾರರು ತಮ್ಮ ಪತ್ರಿಕೆ 'ಸಂಜೀವಿನಿ'ಯಲ್ಲಿ ಬ್ರಿಟಿಷ ವಸ್ತುಗಳ ಭಹಿಷ್ಕಾರ ಕುರಿತು ಲೇಖನ ಪ್ರಕಟಿಸಿದರು.[೧೮೭] ಇದರಿಂದ ಪ್ರಭಾವಿತರಾದ ನಾಯಕರು ಬೆಂಗಾಲದಿಂದ ಗಂಗಾನದಿಗೆ ಬರಿಗಾಲಿನಲ್ಲಿ ನಡೆದುಕೊಂಡು ಹೋಗಿ ಪವಿತ್ರ ಗಂಗೆಯ ಸ್ನಾನ ಮುಗಿಸಿಕೊಂಡು ಒಂದು ದಿನದ ಉಪವಾಸ ಮತ್ತು ಅಕ್ಟೋಬರ ೧೬ ರಂದು ರಾಷ್ಟ್ರೀಯ ಶೋಕ ದಿನಾಚರಣೆ ಆರಂಭಿಸಿದರು. ರವೀಂದ್ರನಾಥ ಠಾಗೋರರು

ಬರೆದ "ಅಮರ್ ಸೋನರ್ ಬಂಗ್ಲಾ" ಎನ್ನುವ ಕವನವು ಎಲ್ಲರನ್ನು ಒಂದು ಗೂಡಿಸಿತು. ಇದೆ ಹಿನ್ನೆಲೆಯಲ್ಲಿ 'ವಂದೇ ಮಾತರಂ' ಎನ್ನುವ ಗೀತೆಯ ರಾಷ್ಟ್ರೀಯ ಗೀತೆಯಾಯಿತು. ಈ ಗೀತೆಯು ಉಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಇಸ್ಲಾಂ ಧರ್ಮದ ಪ್ರಾರ್ಥನಾ ಗೀತೆಯನ್ನು ನಿರಾಕರಿಸಿ ವಂದೆ ಮಾತರಂ ಗೀತೆಯನ್ನು ಒತ್ತಾಯ ಪೂರ್ವಕವಾಗಿ ಹಾಡಿದರು. ಈ ಹೋರಾಟದ ನಾಯಕತ್ವವನ್ನು ರಾಮಚಂದ್ರರಾವ ವಹಿಸಿಕೊಂಡಿದ್ದರು. ಇದರಿಂದ ಸ್ಫೂರ್ತಿ ಪಡೆದ ಯುವಕರು ಗುಲಬರ್ಗಾದಲ್ಲಿ 'ವಂದೇ ಮಾತರಂ' ಚಳುವಳಿಯನು ಆರಂಭಿಸಿದರು. ಇದಕ್ಕೆ ಸ್ಫೂರ್ತಿ ನೀಡಿದ ಪ್ರೌಢ ಶಾಲೆಯ ಉಪಾದ್ಯಾಯರಾದ 'ಧಾರವಾಡಕರ್ ಮಾಸ್ತರ' ಅವರು ಹಿಂದೂ ವಿದ್ಯಾರ್ಥಿಗಳಿಗೆ ಈ ಗೀತೆಯನ್ನು ಹಾಡಲು ಅವಕಾಶ ಮಾಡಿಕೊಟ್ಟರು. ಧಾರವಾಡಕರರನ್ನು ಬಂಧಿಸಲಾಯಿತು. ಇದರಿದ ಜಿಲ್ಲೆಯ ಹಲವು ಭಾಗಗಳಲ್ಲಿ ಒಂದೆ ಮಾತರಂ ಆಂದೋಲನ ಚುರುಕುಗೊಂಡಿತು. ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದ ಹಲವು ವಿದ್ಯಾರ್ಥಿಗಳಿಗೆ ಈ ಗೀತೆಯನ್ನು ಹಾಡಿರುವುದಕ್ಕೆ ಹೊರಹಾಕಲಾಯಿತು.

ಗುಲಬರ್ಗಾದ ಅನೇಕ ವಿದ್ಯಾರ್ಥಿಗಳು ಉಸ್ಮಾನಿಯಾಬಾದ ವಿಶ್ವವಿದ್ಯಾಲಯದಿಂದ ಹೊರಬಂದು ನಾಗಪೂರ ಸೇರಿಕೊಂಡರು. ಈ ವಿಷಯ ಕುರಿತು ಗಾಂಧಿಜಿಯವರ ಗಮನಕ್ಕೆ ತರಲು ಜಿಲ್ಲೆಯ ನಾಯಕರು ಮದ್ರಾಸಿಗೆ ಹೋದರು. ಅವರ ಮಾರ್ಗದರ್ಶನದಂತೆ ೧೯೪೦ರಲ್ಲಿ ಸಂಸ್ಥಾನಿಕ ಕಾಂಗ್ರೆಸ್ಸಿನ ನಾಯಕರ ನೇತೃತ್ವದಲ್ಲಿ ಆಂದೋಲನ ಆರಂಭವಾಯಿತು. ಹೈದ್ರಾಬಾದ ಕಾಂಗ್ರೇಸ್ ಸಂಸ್ಥೆಯು ಪ್ರಾರಂಭವಾಗುತ್ತಿದ್ದಂತೆ. ಎರಡನೆಯ ಜಾಗತಿಕ ಯುದ್ಧದಿಂದ ತನ್ನ ಕಾರ್ಯ ಚಟುವಟಿಕೆ ಮೊಟಕುಗೊಳಿಸಿ, ಎಲ್ಲಾ ನಾಯಕರು ಗುಲಬರ್ಗಾದಲ್ಲಿ ಸಭೆ ಸೇರಿ "ಈ ಸಂಸ್ಥೆಗೆ ಕರ್ನಾಟಕ ಪರಿಷತ್ತು" ಎಂದು ಹೆಸರಿಸಿದರು.

ಆರ್ಯ ಸಮಾಜದ ಚಳವಳಿಗಳನ್ನು ನಿಯಂತ್ರಿಸಲು ಹೈದ್ರಾಬಾದಿನ ಮಹಮ್ಮದ ಸಿದ್ದಿಕಿವು "ಇತ್ತೇಹಾದ್-ಉಲ್-ಮುಸ್ಲಿಮಿನ್" ಎಂಬ ಬಂಡಾಯಗಾರ ಸಂಸ್ಥೆಯನ್ನು ಹುಟ್ಟಿಹಾಕಿದ. ಇದರ ಮತ್ತೊಬ್ಬ ನಾಯಕ ಖಾಸಿಂ ರಜ್‌ವಿಯು ಆರ್ಯ ಸಮಾಜದ ಚಟುವಟಿಕೆಗಳನ್ನು ನಿಯಂತ್ರಿಸಲು ತೀವ್ರ ಪ್ರತಿರೋಧ ಒಡ್ಡಿದ. ೧೯೪೫ ಎಪ್ರಿಲ್ ೨೨ ರಿಂದ ೨೪ರವರೆಗೆ ಗುಲಬರ್ಗಾದಲ್ಲಿ ಆರ್ಯ ಸಮಾಜದ ನಾಲ್ಕನೆಯ ಅಧೀವೇಶನ ಆಯೋಜಿಸಲಾಯಿತು ಇದೆ ಸಂದರ್ಭದಲ್ಲಿ ರಜ್‌ವಿ ನೇತೃತ್ವದ ಮುಸ್ಲಿಂ ಪಡೆಯು ಆರ್ಯ ಸಮಾಜದ ಹಲವು ನಾಯಕರನ್ನು ತೀವ್ರವಾಗಿ ಹಿಂಸೆಗೆ ಗುರಿ ಪಡಿಸಿದ. ಪೋಲಿಸರ ಲಾಟಿ ಪ್ರವಾಹದ ವಿಷಯ ಜಿಲ್ಲೆಯ ಎಲ್ಲಾ ಕಡೆಗೆ ಪ್ರಚಾರಗೊಂಡತು ಇದರಿಂದ ಪ್ರತಿಯೊಬ್ಬರಲ್ಲಿ ರಾಷ್ಟ್ರೀಯ ಭಾವನೆ ಮೂಡಿತು. ೧೯೪೬ರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಇವರು ಹೈದ್ರಾಬಾದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮತ್ತೆ ಶಾಂತಿಯ ವಾತಾವರಣ ಏರ್ಪಟ್ಟಿತು.

೧೯೪೨ರಲ್ಲಿ ಆರಂಭವಾದ ಕ್ವಿಟ್ ಇಂಡಿಯಾ ಚಳುವಳಿಯ ಪ್ರಭಾವದಿಂದ ನಿಜಾಮರು ಒಂದು ಶಾಂತಿ ಸಂಧಾನಕ್ಕೆ ಮುಂದಾಗಿ, ತಮ್ಮ ಸರಕಾರದ ಪ್ರತಿ ನಿಧಿ ಸಭೆಯಲ್ಲಿ ಹಿಂದೂ ಮತ್ತು ಮುಸ್ಲಿಂರಿಗೆ ಸಮಾನ ಸ್ಥಾನಗಳನ್ನು ನೀಡಿದರು.

೧೯೪೨ ಅಗಸ್ಟ ೮ರಂದು ಬಾಂಬೆ ಕಾಂಗ್ರೇಸ್ ಅಧಿವೇಶನದಲ್ಲಿ ನೆಹರು ಅವರು ಕ್ವಿಟ್ ಇಂಡಿಯಾ ಚಳುವಳಿಯ ನಿರ್ಣಯವನ್ನು ಮಂಡಿಸಿದರು.[೧೮೮] ಆದ ಬ್ರಿಟಿಷ ಸರಕಾರ ಹಲವು ನಾಯಕರನ್ನು ಬಂಧಿಸಲು ಆಜ್ಞೆ ಹೊರಡಿಸಿತು. ಪೋಲಿಸರ ಗೊಲಿಬಾರದಿಂದ ಸಹಸ್ರಾರು ಜನರು ಸಾವನ್ನಪ್ಪಿದರು. ನೆಹರು ಅವರು ಹೈದ್ರಾಬಾದ ಕಾಂಗ್ರೇಸ್ ಮೇಲೆ ಹೇರಿದ ನಿಷೇದಾಜ್ಞಗಳನ್ನು ರದ್ದು ಪಡಿಸಬೇಕೆಂದು ನಿಜಾಮನಿಗೆ ಪತ್ರ ಬರೆದರು. ಸ್ಥಳಿಯ ಪ್ರಮುಖರು ಗಾಂಧೀಜಿಯವರು ಕೊಟ್ಟ ಕರೆಯ ಹಿನ್ನೆಲೆಯಲ್ಲಿ ರಮಾನಂದರ ನಾಯಕತ್ವದಲ್ಲಿ ಹೋರಾಟ ಆರಂಭಿಸಿದರು. ಅದೇ ರೀತಿ ಗಾಂಧಿಯವರ "ಮಾಡು ಇಲ್ಲವೆ ಮಡಿ" ಎನ್ನುವ ಕರೆಯನ್ನು ಸಹ ಜಾರಿಗೆ ತರಲಾಯಿತು. ಆದರೆ ಈ ಯಾವ ಚಳುವಳಿಗಳು ಜಿಲ್ಲೆಯಲ್ಲಿ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಲಿಲ್ಲ. ಏಕೆಂದರೆ ನಿಜಾಮನ ಪ್ರತಿಬಂಧಕಾಜ್ಞೆಗಳು ಹಲವರನ್ನು ಬಂಧಿಸಿತು. ಇದಕ್ಕೆ ಪರ್ಯಾಯವಾಗಿ ಗುಲಬರ್ಗಾದಲ್ಲಿ ಗಣೇಶ ಉತ್ಸವದ ಮೂಲಕ ಚಳುವಳಿಗೆ ಚಾಲನೆ ನೀಡಲಾಯಿತು. ನಿಜಾಮನ ಗೂಡಾಚಾರರು ಉತ್ಸವದಲ್ಲಿ ಭಾಗವಹಿಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ಬಂಧಿಸಿದರು. ಸುಮಾರು ೨೫ ರಿಂದ ೩೦ ಜನ ಗುಲಬರ್ಗಾದ ಪ್ರಮುಖ ನಾಯಕರನನು ಬಂಧಿಸಲಾಯಿತು. ಕ್ವಿಟ್ ಇಂಡಿಯಾ ಚಳುವಳಿಯು ತಮ್ಮ ಗಡಿಯನ್ನು ಪ್ರವೇಶಿಸದಂತೆ ನಿಜಾಮ ಸರಕಾರ ಎಷ್ಟೇ ಬಿಗಿಭದ್ರ ಕ್ರಮಗಳನ್ನು ಕೈಗೊಂಡರು. ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಮನೆ ಮಾಡಿಕೊಂಡಿತು.

ಕ್ವಿಟ್ ಇಂಡಿಯಾ ಚಳುವಳಿಯ ಪ್ರಭಾವದಿಂದ ಹಾಗೂ ಅಂತರರಾಷ್ಟ್ರೀಯ ಒತ್ತಡದಿಂದ ಬ್ರಿಟಿಷ ಸರಕಾರ ಅಧಿಕಾರ ಹಸ್ತಾಂತರಕ್ಕೆ ಯೋಜನೆಯನ್ನು ಸಿದ್ಧಪಡಿಸಿತು. ಈ ವಿಷಯ ಕುರಿತು ಸ್ಥಳಿಯ ಸಂಸ್ಥಾನಿಕರ ಅಭಿಪ್ರಾಯ ಸಂಗ್ರಹಿಸಲಾಗಿ ಅದರಲ್ಲಿ ಕೆಲವರು ಭಾರತ ಒಕ್ಕೂಟವನ್ನು ಸೇರಬಯಸಿದರೆ ಮತ್ತೆ ಕೆಲವರು ವಿರೋಧಿಸಿದರು. ಅದರಲ್ಲಿ ಹೈದ್ರಾಬಾದ ನಿಜಾಮರು ಸ್ವತಂತ್ರವಾಗಿ ಉಳಿಯ ಬಯಸಿದ.

ಇಂಗ್ಲೇಂಡಿನ ಕಾರ್ಮಿಕ ಪಕ್ಷದ ಪ್ರಧಾನಿ ಆಟ್ಲಿಯವರು ಅಧಿಕಾರಕ್ಕೆ ಬಂದ ನಂತರ ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿಟ್ಟನಲ್ಲಿ ಯೋಚಿಸಿ, ಮೌಂಟ್ ಬ್ಯಾಟನ್‌ನನ್ನು ವೈಸರಾಯ ನನ್ನಾಗಿ ನೇಮಿಸಲಾಯಿತು. ಭಾರತದ ವಿಭಜನೆಯೊಂದಿಗೆ ಅಗಸ್ಟ ೧೫, ೧೯೪೭ರಂದು ಭಾರತವು ವಿದೇಶಿಯ ಆಳ್ವಿಕೆಯಿಂದ ವಿಮೋಚನೆಗೊಂಡಿತು. ಆದರೆ ಹೈದ್ರಾಬಾದ ಕರ್ನಾಟಕವೆಂದು ಕರೆಯಲ್ಪಡುವ

ಗುಲಬರ್ಗಾ, ಬೀದರ, ರಾಯಚೂರು ಜಿಲ್ಲೆಗಳು ಮಾತ್ರ ನಿಜಾಮನ ಆಳ್ವಿಕೆಯಲ್ಲಿ ಮುಂದುವರೆದವು. ಈ ಜನತೆಯು ತಮ್ಮ ಹಕ್ಕು ಭದ್ರತೆಗಳಿಗೆ ರಜಾಕಾರರೊಂದಿಗೆ ಘೋರ ಹೋರಾಟ ಆರಂಭಿಸಿತು.

೨.೧೦. ರಜಾಕಾರರ ಆಳ್ವಿಕೆ (ನಿಜಾಮರ ಆಧಿಕಾರ):

ಹೈದ್ರಾಬಾದ ರಾಜ್ಯದ ಸ್ಥಾಪಕ ಮೀರ್ ಕಮುರುದ್ದೀನ್ ಬಿನ್ ಕಿಲೀಚ್‌ಖಾನ್. ಇತನ ತಂದೆ ಗಾಜಿಯೋದ್ದೀನ್‌ಖಾನ್ ಮೊಗಲ ಚಕ್ರವರ್ತಿ ಔರಂಗಜೇಬನ ಸೇನಾಧಿಪತಿಯಾಗಿದ್ದ. ಕ್ರಿ.ಶ. ೧೭೧೩ರಲ್ಲಿ ಇತನು ದಕ್ಷಿಣ ಭಾರತದ ಸುಭೇದಾರನಾಗಿ ನೇಮಕ ಹೊಂದಿದ. ಆಗ ಇತನು 'ನಿಜಾಮ್-ಉಲ್-ಮುಲ್ಕ್ ಫಿರೋಜ್‌ಜಂಗ್' ಎಂಬ ಬಿರುದಿನಿಂದ ಪ್ರಖ್ಯಾತಿ ಹೊಂದಿದ. ಸಾಮ್ರಾಟ ಮಹಮ್ಮದ ಶಹನ ಕಾಲಕ್ಕೆ "ಆಸಫ್‌ಜಹಾ"[೧೮೯] ಎಂಬ ಬಿರುದು ಸೇರಿಸಿಕೊಂಡರು, ಅಂದಿನಿಂದ ಅವರನ್ನು 'ಅಸಫಝು' ಮನೆತನದವರು ಎಂದು ಕರೆಯಲಾಯಿತು. ಕ್ರಿ.ಶ. ೧೭೨೪ರಲ್ಲಿ ಮೀರ ಕಮುರುದ್ದೀನ್‌ನು ಮೊಗಲರಿಂದ ಸ್ವಾತಂತ್ರ ಹೊಂದಿದನು. ನಂತರ ಬಂದ ಎಲ್ಲಾ ಅರಸರು ಸ್ವತಂತ್ರರಾಗಿ ಅಧಿಕಾರ ನಡೆಸಿದರು. ಕ್ರಿ.ಶ. ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷರ ಆಧೀನವಾಗಿ ವರ್ತಿಸಿದರು.

೨.೧೧. ನಿಜಾಮರ ವಂಶಾವಳಿ:

೧. ಮೀರ್ ಕಮುರುದ್ದೀನ್ ಬಿನ್ ಕಿಲೀಚ್‌ಖಾನ್ - ೧೭೨೪-೧೭೪೮

೨. ನವಾಬ್ ನಿಜಾಮ್ ಅಲೀಖಾನ - ೧೭೬೨-೧೮೦೩

೩. ಮೂರನೆ ನಿಜಾಮ ಸಿಕಂದರ್ ಶಹಾ ೧೮೦೩-೧೮೨೯

೪. ನಾಲ್ಕನೇ ನಿಜಾಮ ನಾಸಿರುದ್ದೌಲಾ ಬಹಾದ್ದೂರ - ೧೮೨೯-೧೮೫೭

೫. ಐದನೇ ನಿಜಾಮ ಅಫಜುಲುದ್ದೌಲಾ ಬಹಾದ್ದೂರ - ೧೮೫೭-೧೮೬೯

೬. ಆರನೇ ನಿಜಾಮ್ ಮೀರ ಮೆಹಬೂಬ್ ಅಲಿ - ೧೮೬೯-೧೯೧೧

೭. ಎಳನೇ ನಿಜಾಮ ಮೀರ್ ಉಸ್ಮಾನ್ ಅಲೀಖಾನ್ - ೧೯೧೧-೧೯೪೮

ಈ ಏಳು ಜನ ನಿಜಾಮರಲ್ಲಿ ಯಾರು ಪ್ರಮುಖ ಹೋರಾಟಗಾರರಲ್ಲ ಹಾಗೂ ಶ್ರೇಷ್ಠ ಆಡಳಿತಗಾರರೂ ಅಲ್ಲ.[೧೯೦] ಇದರ ಲಾಭ ಪಡೆದ ಬ್ರಿಟಿಷರು ತಮ್ಮ ರೆಸಿಡೆಂಟನ್ನು ಈ ರಾಜ್ಯದಲ್ಲಿ ನೇಮಿಸಿ ಇವರನ್ನು ದುರ್ಬಲರನ್ನಾಗಿಸಿದರು. ನಿಜಾಮ ಆಡಳಿತದಲ್ಲಿ ಕರ್ನಾಟಕ ರಾಜ್ಯದ ಉತ್ತರ ಭಾಗದಲ್ಲಿ ಬರುವ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಸೇರಿದ್ದವು. ಇವುಗಳ ವಿಮೋಚನೆಗಾಗಿ ೧೯೪೭ರ ನಂತರ ಶೀಘ್ರ ಹೋರಾಟ ಸಂಭವಿಸಿತು. ಈ ಹೋರಾಟದಲ್ಲಿ ಜಿಲ್ಲೆಯ ಹಲವು ನಾಯಕರು ಭಾಗವಹಿಸಿದರು.

ಸರ್ದಾರ್ ಶರಣಗೌಡ ಇನಾಮದಾರ ಶತ್ರುಗಳ ಮನೋಬಲವನ್ನು ಅರಿತುಕೊಂಡು ಹೋರಾಟ ಮುಂದುವರೆಸಿದರು. ನಿಜಾಮ ಸರಕಾರದ ದಬ್ಬಾಳಿಕೆಯ ವಿರುದ್ಧ ಸಶಸ್ತ್ರ ಹೋರಾಟ

ಮುಂದುವರೆಸಿದರು. **'ಸಿಂದಗಿ ಕ್ಯಾಂಪಿನ'** ನಾಯಕನಾಗಿ ಹಲವು ಜನ ಯುವಕರಿಗೆ ತರಬೇತಿಯನ್ನು ನೀಡಿ, ಜಿಲ್ಲೆಯ ಗಡಿಭಾಗಗಳಲ್ಲಿ ನಿಜಾಮ 'ರಜಾಕ' ಪಡೆಯನ್ನು ದೂಳಿಪಟಗೊಳಿಸಿದರು. **'ವಂದೇ ಮಾತರಂ'** ಚಳುವಳಿಯಲ್ಲಿ ಭಾಗವಹಿಸಿ ಹಲವು ಜನ ವಿದ್ಯಾರ್ಥಿಗಳನ್ನು ಇದರಲ್ಲಿ ಭಾಗವಹಿಸುವಂತೆ ಮಾಡಿದರು. ಇದರಿಂದ ಅಪಾರ ಕಷ್ಟ ನಷ್ಟ ಅನುಭವಿಸಿ ಶಿಕ್ಷೆಗೆ ಗುರಿಯಾದರು.[೧೯೧]

೧೯೩೯ರಲ್ಲಿ ಇವರು ಸುಭಾಷಚಂದ್ರ ಬೋಸ್‌ರನ್ನು **'ವಾಡಿ'**ಯಲ್ಲಿ ಭೇಟಿಯಾಗಿ ತಮ್ಮ ಕಾರ್ಯವೈಖರಿಯನ್ನು ವಿವರಿಸಿದರು. ೧೯೪೫ರಲ್ಲಿ ಸುರಪುರದಲ್ಲಿ ನಡೆದ **'ಕರ್ನಾಟಕ ಕಾನ್‌ಫರೆನ್ಸ್'**ನಲ್ಲಿ ಭಾವಹಿಸಿದರು. ಮುಂದೆ ಕಾಂಗ್ರೇಸ್ಸಿನಲ್ಲಿ ಸೇರ್ಪಡೆಯಾಗಿ **'ಗುಲಬರ್ಗಾ ಜಿಲ್ಲಾ ಕಾಂಗ್ರೇಸ್'** ಕಾರ್ಯದರ್ಶಿಯಾದರು. ನಿಜಾಮರು ಆಡಳಿತದಿಂದ ನಿರಾಶ್ರಿತರಾದವರಿಗೆ ಗುಲಬರ್ಗಾ ಮತ್ತು ಸೋಲ್ಲಾಪುರಗಳಲ್ಲಿ ಹಲವು ಶಿಬಿರಗಳನ್ನು ಸ್ಥಾಪಿಸಿದರು. ಸುರಪುರ, ಶಹಾಪೂರ ಮತ್ತು ಜೇವರ್ಗಿ ತಾಲೂಕಿನ ಹಲವು ಭಾಗಗಳಲ್ಲಿ ರಜಾಕರಕ ಪಡೆಯೊಂದಿಗೆ ನಿರಂತರ ಹೋರಾಟದಲ್ಲಿ ತೊಡಗಿದರು.

೧೯೪೮ರ ಬೊಂಬಾಯಿ ಕಾಂಗ್ರೆಸ್ ಅಧಿವೇಶನದಲಿ ಶರಣಗೌಡರು ತಮ್ಮ ಸ್ನೇಹಿತರೊಂದಿಗೆ ಭಾಗವಹಿಸಿದರು. ಅಲ್ಲಿ ಸರ್ದಾರ್ ಪಟೇಲರನ್ನು ಕಂಡು ಹೈದ್ರಾಬಾದ ಮೇಲೆ ಪೋಲೀಸ್ ಕಾರ್ಯಾಚರಣೆ ನಡೆಯಿಸಬೇಕೆಂದು ಮನವಿ ಸಲ್ಲಿಸಿದರು. ಮುಂದಿನ ಪೋಲಿಸ ಕಾರ್ಯಾಚರಣೆಯಲ್ಲಿ ಭಾರತ ಸೈನ್ಯಕ್ಕೆ ಮಾರ್ಗದರ್ಶಕರಾಗಿ ಸೋಲಾಪುರ ಮೂಲಕ ಗುಲಬರ್ಗಾ ನಗರಕ್ಕೆ ಬಂದರು. ಇವರು ಶಸ್ತ್ರಾಸ್ತ್ರ ಹಿಡಿದು ಹೋರಾಟ ಮಾಡದಿದ್ದರೆ ಸಾವಿರರು ಸಂಖ್ಯೆಯ ಜನರು ಸಾವನಪ್ಪುತ್ತಿದ್ದರು.

ನಿಜಾಮ ಸರಕಾರವು ಇವರನ್ನು ಹಿಡಿದುಕೊಟ್ಟವರಿಗೆ ೩೦,೦೦೦ ರೂಪಾಯಿ ಬಹುಮಾನ ಕೊಡುವುದಾಗಿ ಘೋಷಿಸಿತು. ಆದರೆ ಯಾರು ಅವರನ್ನು ಹಿಡಿಯಲಿಲ್ಲ ಮುಸಲ್ಮಾನರು ನಡೆಯಿಸುವು ದೇವಸ್ಥಾನಗಳ ಮೇಲಿನ ದಾಳಿಯನ್ನು ವಿರೋಧಿಸಿ ಅದಕ್ಕೆ ಪ್ರತಿಭಟನೆ ಒಡ್ಡುತ್ತಿದ್ದರು. ಜೇವರ್ಗಿ ತಾಲೂಕಿನ ಯಡ್ರಾಮಿಯ ರಾಮಮಂದಿರದ ಮೇಲೆ ದಾಳಿ ಮಾಡಿ ಅದನ್ನು ಮಸಿದಿಯನ್ನಾಗಿ ಪರಿವರ್ತಿಸಿದರು. ಆದರೆ ಶರಣಗೌಡರು ಅಲ್ಲಿ ಪುನಃ ಮಂದಿರ ಸ್ಥಾಪಿಸಿದರು. ಈ ರೀತಿ ಜಿಲ್ಲೆಯ ಹಲವು ಭಾಗಗಳಲ್ಲಿ ಸ್ವಾಮಿರಮಾನಂದ ತೀರ್ಥರ ಮಾರ್ಗದರ್ಶನದಲ್ಲಿ ಪ್ರತಿಭಟನೆ ಆರಂಭವಾಯಿತು.

೨.೧೨. ರಜಾಕಾರರೊಂದಿಗೆ ಸುರುಪುರದಲ್ಲಿ ಹೋರಾಟ:

ಗುಲಬರ್ಗಾ ಜಿಲ್ಲೆಯ ಸುರಪುರ 'ಬೇಡ' ಜನಾಂಗದ ಅರಸರ ರಾಜ್ಯಧಾನಿ. ಈ ಮನೆತನವು ಕನ್ನಡ ನಾಡು ನುಡಿ ಸಂಸ್ಕೃತಿಯ ಉಳಿವಿಗಾಗಿ ಸದಾ ಸಂಘರ್ಷಮಾಡುತ್ತಾ ಬಂದಿದೆ. ವಿಜಯನಗರದ ಅರಸರು ಇವರ ಶಕ್ತಿ ಸಾಮರ್ಥ್ಯವನ್ನು ತಿಳಿದುಕೊಂಡು ಇವರನ್ನು ತಮ್ಮ ಮಾಂಡಲೀಕರನ್ನಾಗಿ ಮಾಡಿಕೊಂಡರು.[೧೯೨] ಔರಂಗಜೇಬನು ಈ ಬೇಡ ಅರಸರೊಂದಿಗೆ ಸಂಘರ್ಷದಲ್ಲಿ ತೊಡಗಿ ಕಷ್ಟ-ನಷ್ಟ ಅನುಭವಿಸಿ ಬಿಜಾಪುರದ ಆದಿಲ್ ಶಾಹಿಗಳನ್ನು ಸದೆಬಡಿಯಲು ಔರಂಗಜೇಬನು ಬೇಡ ನಾಯಕರೊಂದಿಗೆ

ಒಪ್ಪಂದ ಮಾಡಿಕೊಂಡ ಪತ್ರ ಇಂದಿಗೂ ಸುರಪುರದಲ್ಲಿದೆ.[೧೯೩] ಈ ಪತ್ರದಲ್ಲಿ ನಾಯಕನನ್ನು ಕುರಿತು ಹೀಗೆ ಹೇಳಿದ "ನೀನು ಮುಸ್ಲಿಂನಾಗಿದ್ದರೆ ನನ್ನ ಬಂಧುವಾಗಿರುತ್ತಿದ್ದಿ, ಸುರಕ್ಷಿತನಾಗಿರುತ್ತಿದ್ದಿ, ಆದರೆ ನೀನು ಮುಸ್ಲಿಂಮನಾಗಿಲ್ಲದುದು ಖೇದದ ಸಂಗತಿ".[೧೯೪]

ನಿಜಾಮರ ಆಳ್ವಿಕೆಯ ಕಾಲಕ್ಕೆ ಸುರುಪುರದ ಸ್ಥಳಿಯರನ್ನು ಪೋಲಿಸ ಹುದ್ದೆಗೆ ನೇಮಿಸಲಾಗಿತ್ತು. ಇವರು ಸಹ ರಜಾಕರರಂತೆ ವರ್ತಿಸುತ್ತಿದ್ದರು. ಮುಸ್ಲಿಂ ಹಬ್ಬಗಳಲ್ಲಿ ಹಿಂದೂಗಳ ಸಹ ನಮಾಜು ಮಾಡಲು ಹೋಗಿ ಆ ಧರ್ಮಕ್ಕೆ ನಿಷ್ಟೆಯನ್ನು ತೋರಿಸಬೇಕು. ಮಹಮ್ಮದ ಅಲೀ ಗುತ್ತೇದಾರ್ ಎನ್ನುವ ರಜಾಕಾರನು ಬಂದೂಕನ್ನು ಇಟ್ಟು ಹಿಂದುಗಳಿಗೆ ಹೆದರಿಸುತ್ತಿದ್ದನು. ಕೆಲವು ಸಲ ಶ್ರೀಮಂತ ಹಿಂದೂಗಳ ಮನೆಗಳ ಮೇಲೆ ಲೂಟಿ ಮಾಡುತ್ತಿದ್ದನು. ಈ ರೀತಿ ಹಲವು ಮುಸ್ಲಿಂ ಮತ್ತು ಹಿಂದೂಗಳ ಮೇಲೆ ದೌರ್ಜನ್ಯ ಮಾಡುತ್ತಿದ್ದರು. ಮುಸ್ಲಿಂ 'ಪುಂಡರು' ದೇವಾಲಯಗಳನ್ನು ದ್ವಂಶಗೊಳಿಸುವುದು, ಅರ್ಚಕರಿಗೆ ಪಿಡಿಸುವುದು ಸಾಮಾನ್ಯವಾಗಿತ್ತು.[೧೯೫]

ಕ್ರಿ.ಶ.೧೯೪೭ ಅಗಸ್ಟ ೧೫ ರಂದು ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಸುರಪುರದಲ್ಲಿ ಒಂದೆ ದಿನದಲ್ಲಿ ೧೧೫ ಕಡೆಗೆ ಧ್ವಜಗಳನ್ನು ಹಾರಿಸಲಾಯಿತು. ಹಲವು ನಾಯಕರು ಸಂಭ್ರಮವನ್ನು ಆಚರಿಸಿದರು. ಒಂದೇ ದಿನದಲ್ಲಿ ಹಲವೆಡೆ ದ್ವಜಗಳನ್ನು ಹಾರಿಸಿದರು. ಈ ಕಾರ್ಯದಲ್ಲಿ ಹಲವು ಯುವಕರನ್ನು ಭಾಗವಹಿಸುವಂತೆ ಪ್ರೇರೇಪಿಸಿದರು. ರಜಾಕರೊಂದಿಗೆ ನಡೆದ ಗುಂಡಿನ ಕಾಳಗದಲ್ಲಿ ಹಲವರು ಮಡಿದರು. ಕ್ರಿ.ಶ. ೧೯೪೮ ಸೆಪ್ಟೆಂಬರ ೧೭ರಂದು ನಿಜಾಮ ಭಾರತ ಒಕ್ಕೂಟಕ್ಕೆ ಸೇರಿದ ನಂತರ ಹಿಂದೂಗಳ ತಮ್ಮ ಮೇಲಿನ ಸೇಡನ್ನು ತಿರಿಸಿಕೊಂಡರು.

೨.೧೩. ಹೈದ್ರಾಬಾದ ಕರ್ನಾಟಕ ವಿಮೋಚನೆ:

ಕ್ರಿ.ಶ. ೧೯೪೭ರ ಭಾರತದ ಸ್ವಾತಂತ್ರ್ಯದಲ್ಲಿ ಹೈದ್ರಾಬಾದ ಸಂಸ್ಥಾನ ವಿಲೀನವಾಗದೆ ಸ್ವತಂತ್ರವಾಗಿ ಉಳಿಯಲು ಯತ್ನಿಸಿತು. ಸ್ವಾಮಿ ರಮಾನಂದ ತೀರ್ಥರು ಮತ್ತು ನೆಹರು ಅವರು ಮೊದಲೆ ನಿರ್ಧರಿಸಿದಂತೆ ತ್ರಿವರ್ಣ ದ್ವಜವನ್ನು ಹೈದ್ರಾಬಾದ ಸುಲ್ತಾನ ಬಜಾರದ ಸಾರ್ವಜನಿಕ ಸ್ಥಳದಲ್ಲಿ ಹಾರಿಸಲಾಯಿತು. ಈ ಕಾರ್ಯದಲ್ಲಿ ಭಾಗವಹಿಸಿದ ಪ್ರಮುಖ ನಾಯಕರನ್ನು ನಿಜಾಮ ಸರಕಾರ ಬಂಧಿಸಿತು. ಈ ವಿಷಯ ಪ್ರಚಾರಗೊಳ್ಳುತ್ತಿದ್ದಂತೆ ಗುಲಬರ್ಗಾ ಜಿಲ್ಲೆಯ ಹಲವೆಡೆ ದಂಗೆಗಳು ಆರಂಭವಾದವು. ನಾರಾಯಣರಾವ ಭೀಮರಾವ ದೇಶಪಾಂಡೆಯವರ ನೇತೃತ್ವದಲ್ಲಿ ಅಗಸ್ಟ ೧೫ ರಂದು ಎಂ.ಎಸ್.ಕೆ.ಮಿಲ್.ನಲ್ಲಿ ದ್ವಾಜಾರೋಹಣ ನಡೆಯಿತು. ಆಗ ಅವರನ್ನು ಬಂದಿಸಿ ಸೆರೆಮನೆಗೆ ತಳ್ಳಲಾಯಿತು.

ಗುಲಬರ್ಗಾದಲ್ಲಿ ಹೋರಾಟಗಾರರು ನೂತನ ಮೈದಾನದಲ್ಲಿ ಫುಟಬಾಲ್ ಆಡುವ ನೆಪದಲ್ಲಿ ಜಮಾಯಿಸಿ ದ್ವಜಾರೋಹಣ ಮಾಡಿದರು. ಅನಿರುದ್ಧ ದೇಸಾಯಿಯವರ ನೇತೃತ್ವದಲ್ಲಿ ಸುಮಾರು ೫೦-

೬೦ ಜನ ವಿದ್ಯಾರ್ಥಿಗಳು ಸೇರಿ ಮೆಹಬೂಬಗುಲಶನ್ ಉದ್ಯಾನವನದಲ್ಲಿ ಬೆಳಿಗ್ಗೆ ೬ ಗಂಟೆಗೆ ಕಕ್ಕೇರಿ ಹನುಮಂತರಾಯರ ಮನೆ ಮೇಲೆ ದ್ವಜ ಹಾರಿಸಿದರು. ಈ ವಿಷಯ ತಿಳಿದ ಪೋಲಿಸರು ಅವರನ್ನು ಬಂಧಿಸಲು ಯತ್ನಿಸಿ ವಿಫಲರಾದರು.

ಕ್ರಿ.ಶ.೧೯೪೮ರಲ್ಲಿ ನಡೆದ ಎ.ಐ.ಸಿ.ಸಿ. ಅಧಿವೇಶನದಲ್ಲಿ ಗುಲಬರ್ಗಾದ ರಾಷ್ಟ್ರೀಯ ನಾಯಕರಾಗಿ ಭಾಗವಹಿಸಿ, ಹೈದ್ರಾಬಾದ ವಿಷಯವನ್ನು ಇತ್ಯರ್ಥ ಮಾಡಬೇಕೆಂದು ಅಂದಿನ ಗೃಹ ಮಂತ್ರಿಗಳಾದ ಸರದಾರ್ ಪಟೇಲರ ಮುಂದೆ ಕುಳಿತರು. ಇದರ ಬಗ್ಗೆ ಕೂಲಂಕುಶವಾಗಿ ಆಲೋಚಿಸಿ, ಎಲ್ಲಾ ವಿವರನ್ನು ಪಡೆದುಕೊಂಡು ದಕ್ಷಿಣ ಭಾರತದ ಸೇನಾ ಕಮ್ಯಾಂಡರರಾಗಿದ್ದ ಜನರಲ್ ರಾಜೇಂದ್ರ ಸಿಂಗನ ನಾಯಕತ್ವದಲ್ಲಿ ಅವಶ್ಯ ಕ್ರಮ ಕೈಗೊಳ್ಳಲು ಪಟೇಲರು ಅನುಮತಿ ನೀಡಿದರು. ಅದರ ಪ್ರಯುಕ್ತ ಭಾರತ ಸೇನಾ ತುಕಡಿಯು ದಿನಾಂಕ ೧೩ ಸೆಪ್ಟೆಂಬರ್ ೧೯೪೮ರಂದು ಜನರಲ್ ಚೌಧುರಿಯ ನೇತೃತ್ವದಲ್ಲಿ ಪೋಲೀಸ್ ಕಾರ್ಯಚರಣೆಯನ್ನು ಆರಂಭಿಸಿತು.[೧೯೬] ತನ್ನ ಸ್ಥಾನ ಭದ್ರತೆಗೆ ನಿಜಾಮನು ಏನೆ ಕ್ರಮ ಕೈಗೊಂಡರು ಯಶಸ್ವಿಯಾಗಲಿಲ್ಲ. ದಿನಾಂಕ ೧೭ ಸೆಪ್ಟೆಂಬರ ೧೯೪೮ರಂದು ಭಾರತದ ಸೈನ್ಯ ಹೈದ್ರಾಬಾದ ಪ್ರವೇಶಿಸಿತು. ಅನಿವಾರ್ಯವಾಗಿ ನಿಜಾಮನು ಭಾರತ ಒಕ್ಕೂಟದಲ್ಲಿ ಸೇರ್ಪಡೆಯಾದನು.[೧೯೭] ಇದರಿಂದ ಆಸಫ್ ಜಾಹಿ ಮನೆತನದ ಆಳ್ವಿಕೆ ಅಂತ್ಯಗೊಂಡಿತು.

ಟಿಪ್ಪಣಿಗಳು

೧. ಎಂ.ಬಿ ಪಾಟೀಲ, (ಸಂ.) ೧೯೯೭ - ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಪು. ೧.

೨. G. Yazdani (Ed.) The Early Hsitory and the Deccan, p. 11.

೩. ಶ್ರೀಶೈಲ್ ಬಿರಾದಾರ, ೨೦೦೫ - ಸೇಡಮ್ ಒಂದು ಸಾಂಸ್ಕೃತಿಕ ಅವಲೋಕನ, ಪು. ೩.

೪. G. Yazadani (Ed.), Op. Cit., p. 11.

೫. ಪಾಟೀಲ್ ಎಂ.ಬಿ., ೧೯೯೭ - ಪೂರ್ವೋಕ್ತ, ಪು. ೧.

೬. ಗೋಪಾಲ್, ಆರ್. (ಸಂ.), ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೩೦.

೭. Paddayya, K., 1979 - High Level gravels and related peliolithic cites of Shorapur Doab penansulal India, p. 95.

೮. Paddayya, K., 1979 - Excavation of the new Ashulian Occupation Cite Hunasagi, Penansular India, Quarter, pp. 139-156.

೯. Fort, R.B. 1976 - The Geological Features of the South Maratha Country and Idgicent District, Vol. I, p. 268.

೧೦. Paddayya, K. 1979 - Ibid, pp. 95-100.

೧೧. Ibid.

೧೨. Ibid.

೧೩. Paddayya, K. 1979 - The Stone Age cultural system of the Baichabal Valley, Gulbarga District Karnataka, pp. 77-100.

೧೪. ಷೇಕಅಲಿ ಬಿ. (ಸಂ.), ೧೯೯೭ - ಕರ್ನಾಟಕ ಚರಿತರೆ ಸಂಪುಟ-೧, ಪು. ೯೭.

೧೫. Fort R.B. 1976 - Op. Cit., p. 254.

೧೬. Paddayya K. 1979 - Op. Cit., p. 142.

೧೭. Ibid, p. 144.

೧೮. Ibid, pp. 97-99.

೧೯. Ibid, p. 80-82.

೨೦. Fort R.B. 1979 - Op. Cit., pp. 260-265.

೨೧. Sate, V.G. and Others, 1986 - Notes on Fasil Bhuvaids from Nittur District, Bellary, Karnataka, pp. 414-420.

೨೨. Paddayya, K. 1979 - Op. Cit., pp. 150-154.

೨೩. ಷೇಕ್ ಅಲಿ (ಸಂ.) ೧೯೯೭ - ಪೂರ್ವೋಕ್ತ, ಪು.. ೧೩೯.

೨೪. Paddayya, K. 1979 - Op. Cit., pp. 80-83.

೨೫. ಷೇಕ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೧೮೧ ಸಂಪುಟ-೧.

೨೬. ಅದೇ, ಪು. ೧೮೮.

೨೭. Paddayya K. 1973 - Further field excavation at Bhudihal, Gulbarga District, Karnataka, p. 53.

೨೮. Desai P.B. and Others, 1920 - A History of Karnataka, p. 35.

೨೯. ತೆಲಗಾವಿ ಲಕ್ಷ್ಮಣ, ೨೦೦೪ - ಮೌರ್ಯ ಮತ್ತು ಶಾತವಾಹನ ಯುಗ, ಪು. ೧೩-೧೪.

೩೦. ಷೇಕ ಅಲಿ ಬಿ. (ಸಂ.) ೧೯೭೯ - ಪುರ್ವೋಕ್ತ, ಪು. ೨೮೭.

೩೧. ಲಾಲಂಜಿ ಗೋಪಾಲ್ (ಅನು) ೧೯೮೩ - ಚಂದ್ರಗುಪ್ತ ಮೌರ್ಯ, ಪು. ೬೯.

೩೨. Sarkar D.C. 1957 - Inscription of Ashoka, p. 42.

೩೩. Ibid, p. 44.

೩೪. ತೆಲಗಾವಿ ಲಕ್ಷ್ಮಣ ೨೦೦೪ - ಪೂರ್ವೋಕ್ತ, ಪು. ೪೬.

೩೫. ತಾಳ್ತೆಜೆ ವಸಂತಕುಮಾರ, ೧೯೮೮ - ಕರ್ನಾಟಕದಲ್ಲಿ ಭೌದ್ಧ ಸಂಸ್ಕೃತಿ, ಪು. ೬೩.

೩೬. Talwar H.T. 1993-94 - An Interium Report on the Excavation at Sannatti, p.

೩೭. ತೆಲಗಾವಿ ಲಕ್ಷ್ಮಣ, ೨೦೦೪ - ಪೂರ್ವೋಕ್ತ, ಪು. ೧೦೪.

೩೮. ಅದೇ, ಪು. ೮೫.

೩೯. ಷೇಕ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೩೦೧.

೪೦. ಪಾಟೀಲ್ ಎಸ್. ಚನ್ನಬಸಪ್ಪ, ೧೯೯೯ - ಕರ್ನಾಟಕದ ಕೋಟೆಗಳು, ಪು. ೧೨-೧೩.

೪೧. ಪಾಟೀಲ್ ಎಂ.ಬಿ. (ಸಂ.) ೧೯೯೭ - ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಪು. ೪೫.

೪೨. ಷೇಕಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೪೫೮.

೪೩. ಷೇಕಅಲಿ ಬಿ. (ಸಂ.), ೧೯೯೭ - ಪೂರ್ವೋಕ್ತ, ಪು. ೩೬.

೪೪. ಶ್ಯಾಮಲ ರತ್ನ ಕುಮಾರಿ, ೧೯೯೨ - ರಾಷ್ಟ್ರಕೂಟ ರಾಜ್ಯ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಪು. ೧೨೯.

೪೫. ಸ್ವಾಮಿನಾಥನ್, ಎಸ್. ೨೦೦೦ - ರಾಷ್ಟ್ರಕೂಟರ ತಮಿಳ ಶಾಸನಗಳು, ಪು. ೨೫.

೪೬. ಹೂಗಾರ ಬಿ.ಪಿ., ೨೦೦೬ - ಕರ್ನಾಟಕ ಇತಿಹಾಸ, ಪು. ೮೬.

೪೭. ಸಂಕನಗೌಡ, ಎಸ್.ಬಿ. ಮತ್ತು ರವೀಂದ್ರ ಕೊಪ್ಪರ, ೧೯೯೬ - ಕರ್ನಾಟಕ ಇತಿಹಾಸ, ಪು. ೧೨೭.

೪೮. ಪಾಟೀಲ ಎಂ.ಬಿ. (ಸಂ.), ೧೯೯೭ - ಪೂರ್ವೋಕ್ತ, ಪು. ೪೬.

೪೯. ಷೇಕ ಅಲಿ, ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೪೪.

೫೦. ಅದೇ.

೫೧. ಅದೇ.

೫೨. ಅದೇ.

೫೩. ಅದೇ.

೫೪. Yazdani, G. 1985 – Op. cit., Vol. IV, p. 268.

೫೫. ಹೂಗಾರ ಬಿ.ಪಿ. ೨೦೦೬ - ಪೂರ್ವೋಕ್ತ, ಪು. ೯೦.

೫೬. Biradar Shrishail, 1993 - Malkhed through the ages - Unpublished M.Phil. Dissertation, pp. 4-5.

೫೭. ಗೋಪಾಲ್ ಆರ್., (ಸಂ.) ೨೦೦೭ - ಪೂವೋಕ್ತ, ಪು. ೨೪.

೫೮. Shrishail Biradar, 1993 - Op. Cit., p. 52.

೫೯. Ibid, p. 57.

೬೦. ಪಾಟೀಲ, ಎಂ.ಬಿ. (ಸಂ.) ಪೂರ್ವೋಕ್ತ, ಪು. ೪೬.

೬೧. Mahajan, V. 1960 - Ancient India, p. 56.

೬೨. ಬಿರಾದಾರ ಶ್ರೀಶೈಲ್ - ೨೦೦೯ - ಮಾನ್ಯಖೇಟದೆಡೆಗೆ ಐತಿಹಾಸಿಕ ನಡಿಗೆ, ಪು. ೫೪.

೬೩. ಪಾಟೀಲ್, ಎಂ.ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೫೧.

೬೪. ಅದೇ.

೬೫. ಗೋಪಾಲ್ ಆರ್. (ಸಂ.) ೨೦೦೭ - ಪೂರ್ವೋಕ್ತ, ಪು. ೩೬-೩೭.

೬೬. ಬಿರಾದಾರ ಶ್ರೀಶೈಲ್, ೨೦೦೫ - ಪೂವೋಕ್ತ, ಪು. ೧೩.

೬೭. ಅದೇ ಪು. ೧೪.

೬೮. ಪಾಟೀಲ್ ಎಂ.ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೬೭೭.

೬೯. ಮುಡಬಿ ಗುಂಡೇರಾವ, ೧೯೯೯ - ಸೇಡಂ ತಾಲೂಕಿನ ಐತಿಹಾಸಿಕ ಸ್ಮಾರಕಗಳು, ಪು. ೫೦.

೭೦. ಅದೇ.

೭೧. Ritti H.S. and Kumbar Anand, 1988 - Inscriptions from Solapur district, p. 56.

೭೨. Ibid, Inscription No. XI, XII, XIII.

೭೩. ನಂಜೇಗೌಡ ಎ.ಎಚ್. ೧೯೯೫ - ಕನ್ನಡ ಸಾಹಿತ್ಯ ಚರಿತ್ರೆ, ಪು. ೧೫೧.

೭೪. ಷೇಕ ಅಲಿ ಬಿ. (ಸಂ.) ೧೯೯೭ - ಕರ್ನಾಟಕ ಚರಿತ್ರೆ ಸಂ. ೨, ಪು. ೭೦.

೭೫. Desai P.B. and others (Ed.) 1970 - History of Karnataka from to Unification, p. 193.

೭೬. Desai, P.B. 1968 - Basaveshwar and His times, pp. 36-38.

೭೭. Saltore, R.N. 1989 - Encyclopaedia of Indian Culture, Vol. II, p. 637.

೭೮. Ibid.

೭೯. Gopal B.R., 1981 - The Chalukyas of Kalyan and Dharwad p. 378.

೮೦. ಷೇಕ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೬೨.

೮೧. ಪಾಟೀಲ ಎಂ.ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೫೫.

೮೨. ಅದೇ, ಪು. ೫೬.

೮೩. Indian Anticurry, Vol. 9, p. 34.

೮೪. ಮೇರುತುಂಗ - 'ಪ್ರಬಂಧ ಚಿಂತಾಮಣಿ' ತನ್ನ ಕೃತಿಯಲ್ಲಿ ಬಿಲ್ಲಮನ ಹದಿನಾರು ಯುದ್ಧಗಳನ್ನು ಮಾಡಿದ್ದಾನೆಂದು ವಿವರಣೆ ನೀಡಿದ್ದಾನೆ, ಪು. ೩೫-೩೬.

೮೫. Epigraphia India, Vol. 33, p. 131.

೮೬. Epigraphia India, Vol. 2, p. 218.

೮೭. ಷೇಕ ಅಲಿ ಬಿ. ಪೂರ್ವೋಕ್ತ, ೧೯೯೭ - ಪು. ೭೮.

೮೮. ಬುದ್ರಕ ಕಲಸ - ಫಲಕಗಳು, ಶಾಸನಗಳ ಸಂಪುಟ-೧೭, ಪು. ೧೧೭.

೮೯. ಹೂಗಾರ ಬಿ.ಪಿ. ೨೦೦೦ - ಕರ್ನಾಟಕ ಇತಿಹಾಸ, ಪು. ೧೪೫.

೯೦. Ritti Srinivas, 1973 - The Sevunas, pp. 83-86.

೯೧. Ibid, p. 102.

೯೨. Annual Report on India, 1962-63.

೯೩. ಪಾಟೀಲ ಎಂ.ಬಿ. (ಸಂ.) ಪೂರ್ವೋಕ್ತ, ಪು. ೫೮.

೯೪. ಅದೇ, ಪು. ೫೯.

೯೫. ಜೋಶಿ, ಡಿ.ಟಿ. ೧೯೯೦ - ಮಧ್ಯಕಾಲೀನ ಇತಿಹಾಸ, ಪು. ೫೪.

೯೬. ಅದೇ.

೯೭. ಅದೇ, ಪು. ೫೫.

೯೮. ಹೂಗಾರ ಬಿ.ಪಿ., ೨೦೦೨ - ಮಧ್ಯಕಾಲೀನ ಭಾರತ ಇತಿಹಾಸ, ಪು. ೬೯.

೯೯. Wani Shambuling S. 1990, Gulbarga City and its monuments, Unpublished M.Phil. Dissertation, Gulbarga University, Gulbarga, p. 24.

೧೦೦.ಸುರಪುರ ಕೃಷ್ಣ ಎ., ೧೯೮೫ - ಸಗರನಾಡು ದರ್ಶನ, ಪು. ೧೧.

೧೦೧.ಸದಾನಂದ ಕನವಳ್ಳಿ (ಅನು), ೧೯೯೨ - ಮರತುಹೋದ ಮಹಾ ಸಾಮ್ರಾಜ್ಯ, ವಿಜಯನಗರ, ಪು. ೧.

೧೦೨.ಕಾಮತ್ ಸೂರ್ಯನಾಥ, ೧೯೭೩ - ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಪು. ೧೫೨.

೧೦೩.ಹೂಗಾರ, ಬಿ.ಪಿ., ೨೦೦೦ - ಕರ್ನಾಟಕ ಇತಿಹಾಸ, ಪು. ೨೨೭-೨೨೮.

೧೦೪.ಪಾಟೀಲ ಎಂ.ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೫೯.

೧೦೫.ಸೋಮಶೇಖರ, ಎಸ್.ವೈ., ೨೦೦೯ - ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ಪು. ೧.

೧೦೬.ಷೇಕ ಅಲಿ ಬಿ., (ಸಂ.) ೧೯೯೭ - ಕರ್ನಾಟಕ ಚರಿತ್ರೆ, ಸಂಪುಟ ೪, ಪು. ೧೯.

೧೦೭.ಅದೇ, ಪು. ೨೧.

೧೦೮.Chopra P.N. and Others, 1979 - History of South India, Vol. II, p. 61.

೧೦೯.Sherwani, H.K. 1985 - The Bahamani's of the Deccan, p. 12.

೧೧೦.Chopra P.N. and Others, 1979 - Op. Cit., p. 63.

೧೧೧.Wani Sambuling S. 1990 - Op. Cit., p. 26.

೧೧೨.Ibid, pp. 27-28.

೧೧೩.Lean Pool, 1985 - Medieval India, p. 178.

೧೧೪.ಪ್ರಸಾದ ಈಶ್ವರಿ, ಮಧ್ಯಕಾಲೀನ ಭಾರತ, ಪು. ೨೪೦-೨೪೪.

೧೧೫.ಅದೇ, ಪು. ೨೫೦.

೧೧೬.ಷೇಕ್ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೨೬.

೧೧೭.Chopra P.N. and Others, 1979 - Op. Cit., p. 64.

೧೧೮.Ibid.

೧೧೯.Ibid.

೧೨೦.ಷೇಕ್ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೨೮.

೧೨೧.Chopra P.N. and Others, 1979 - Op. Cit., p. 65.

೧೨೨.ಪ್ರಸಾದ ಈಶ್ವರಿ, ಹಸನಗಂಗು ೧೩೫೯ರಲ್ಲಿ ನಿಧನ ಹೊಂದಿದನೆಂದು ಉಲ್ಲೇಖಿಸಿದ್ದಾರೆ. ಆದರೆ ಫೆರಿಸ್ತಾ ಮತ್ತು ಬುರಾಹನ್-ಇ-ಮಾಸಿರ್‌ನಲ್ಲಿ ೧೩೫೮ರಲ್ಲಿ ನಿಧನ ಹೊಂದಿದನೆಂದು ಹೇಳಲಾಗಿದೆ.

೧೨೩.ಸೋಮಶೇಖರ್ ಎಸ್.ವೈ. ೨೦೦೯ - ಪೂರ್ವೋಕ್ತ, ಪು. ೧೮೭.

೧೨೪.Wani Shambuling S. 1990 - Op. Cit., p. 28.

೧೨೫.Sherwani, H.K. 1985 - The Bahmanis of the Deccan, pp. 55-56.

೧೨೬.Ibid, p. 57.

೧೨೭.ಬರನಿ ಪ್ರಕಾರ ಮಹಮ್ಮದನು ೧೭ ಅಥವಾ ೧೮ ವರ್ಷ ೭ ತಿಂಗಳು ಆಳಿದ. ಆದರೆ ಅಬ್ದುಲ್ಲಾ ಇಲ್ ಮಖ್‌ನ್ - ಝುಫರುಲ್ ವಾಲಿಹಿ ಐ ಪು. ೧೫೫ನಲ್ಲಿ ಇತನ ಆಳ್ವಿಕೆ ೧೭ ವರ್ಷ ೭ ತಿಂಗಳು ಎಂದು ನಮೂದಿಸಲಾಗಿದೆ. ಆದರೆ ಫೇರಿಸ್ತಾನ ಇನ್ನೊಂದು ಲೇಖನದಲ್ಲಿ ಇತನ ಆಳ್ವಿಕೆಯು ೧೭ ವರ್ಷ ೮ ತಿಂಗಳು ೯ ದಿನಗಳು ಎಂದು ಹೇಳಲಾಗಿದೆ.

೧೨೮.ಫೇರಿಸ್ತಾನ ಕೃತಿಯಲ್ಲಿ ಮುಹಮ್ಮದನ ಘೋರಿಯ ಮೇಲೆ ಕುರಾನಿನ ಈ ವಾಕ್ಯವಿದೆ. ಶಾಂತಿಯಿಂದ ಇದ್ದವರ ಆತ್ಮ ದೇವರನ್ನು ತಲುಪುತ್ತದೆ. ಅದರಿಂದ ಒಳ್ಳೆಯದೆ ಆಗುತ್ತದೆ. ಕುರಾನಿನ - ಐಐ, ೨೭, ೨೮.

೧೨೯.Sherwani H.K. 1985 - Op. Cit., p. 82.

೧೩೦.ಅಬ್ದುಲ್ ಜಬ್ಬಾರ - ತದಾ ಪು. ೩೮೮ ಮತ್ತು ಪೆರಿಸ್ತಾನ ಬಹಮನ್ ನಾಮಾ.

೧೩೧.ಷೇಕ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೩೭.

೧೩೨.ಸೋಮಶೇಖರ, ಎಸ್.ವೈ. ೨೦೦೯ - ಪೂರ್ವೋಕ್ತ, ಪು. ೧೮೭.

೧೩೩.Sherwani H.K. 1985 - Op. Cit., p. 88.

೧೩೪.ಫೇರಿಸ್ತಾನು 'ಮಹಮ್ಮದ' ಎಂದು ಕರೆದಿದ್ದಾನೆ. ಆದರೆ ಬುರಹಾನ್-ಇ-ಮಾಸಿರದ ಕರ್ತೃ ಮಹಮ್ಮದನ ಫೆರಿಸ್ತಾನ ಹೇಳಿಕೆ ಸೂಕ್ತವಲ್ಲ. ಇದಕ್ಕೆ ನಾಣ್ಯಗಳಲ್ಲಿ ನಮೂದಿಸಿರುವ ಆದಾರಗಳ ಪ್ರಕಾರ ಮತ್ತು ತಜ್‌ಕಿ ರಾತ-ವುಲ್-ಮುಲಕ್ ಕೃತಿಯಲ್ಲಿ ಮಹಮೂದ ಎಂದು ಬಳಸಲಾಗಿದೆ.

೧೩೫.Sherwani, H.K. 1985 - Op. Cit.

೧೩೬.ಫೆರೀಸ್ತಾ-ಬುರಹಾನ್-ಇ-ಮಾಸಿರ್.

೧೩೭.ಷೇಕ ಅಲಿ ಬಿ. (ಸಂ.), ೧೯೯೭ - ಪೂರ್ವೋಕ್ತ, ಪು. ೩೮.

೧೩೮.ಪೆರೀಸ್ತಾನ ಈ ಮೇಲಿನ ವಿವರಣೆಯನ್ನು ತಜ್‌ಕಿರಾತ್-ವುಲ್-ಮುಲಕ್ ಕೃತಿಯಲ್ಲಿ ಕೈಬಿಟ್ಟು ಮಹಮ್ಮದನು ಕ್ರಿ.ಶ. ೧೩೯೯ರಲ್ಲಿ ನಿಧನ ಹೊಂದಿದನೆಂದು ಹೇಳಲಾಗಿದೆ.

೧೩೯.Gribels - History of Deccan, p. 54.

೧೪೦.ಬುರಹಾನ್-ಇ-ಮಾಸಿರ, ಕೃತಿಯಲ್ಲಿ ಇತನು ಕೇವಲ ೧೨ ವರ್ಷದಲ್ಲಿ ಅಧಿಕಾಕ್ಕೆ ಬಂದನೆಂದು ಹೇಳಲಾಗಿದೆ.

೧೪೧.Wani Shambuling S. 1990 - Op. Cit., p. 176.

೧೪೨.Qureshi - Admiistration of Sultanate of Delhi, p. 10.

೧೪೩.Sherwani, H.K. 1985, Op. Cit., p. 95.

೧೪೪.ಫೆರಿಸ್ತಾ - ತಾರಿಕ್-ಇ-ಪೆರಿಸ್ತಾ.

೧೪೫.Nizam - Some Aspects of Religion and Politics in INdia, during the 13th Century, p. 124.

೧೪೬.Speight, 1935, Coins of the Bahamani's Islamic Culture, p. 290.

೧೪೭.Ray B.S. - History of Vijayanagar, p. 20.

೧೪೮.Sherwani, H.K. 1985 - Op. Cit., pp. 106-107.

೧೪೯.ಪಾಟೀಲ, ಬಿ.ಎಂ. (ಸಂ.) ೧೯೯೭ - ಪೂರ್ವೋಕ್ತ, ಪು. ೬೪.

೧೫೦.Sherwani, H.K. 1985 - Op. Cit., p. 10.

೧೫೧.Sherwani, H.K. 1985 - Op. Cit., p. 111.

೧೫೨.ಷೇಕ ಅಲಿ ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೪೩.

೧೫೩.Chopra P.N. and Others, 1979 - Op. Cit., p. 68.

೧೫೪.Sherwani H.K. 1985 - Op. Cit., p. 112.

೧೫೫.ತಾಬ ಪುಲ್ - ಬಾಲಕಿಯ ಹೆಸರು ಪ್ರಥಳ ಆಗಿರಲಿಲ್ಲ ಎಂದು ಹೇಳಿದ್ದಾನೆ.

೧೫೬.Sherwani H.K. 1985 - Op. Cit., p. 113.

೧೫೭.ಜಾಹಿರುದ್ದೀನನು - ತನ್ನ ಕೃತಿಯಲ್ಲಿ ಪಿರೋಜ ಶಹಾನ ಸಾವಿನ ವಿವರವನ್ನು, ಪು. ೬೬೭೦ರಲ್ಲಿ ವಿವರಿಸಿದ್ದಾನೆ.

೧೫೮.ಫೇರಿಸ್ತಾ - ಫಿರೋಜ್‌ನನ್ನು ಕೊಲೆಗೈಯಲಾಯಿತು ಎಂದು ತನ್ನ ಕೃತಿಯಲ್ಲಿ ವಿವರಿಸಿದ್ದಾನೆ.

೧೫೯.ಪಾಟೀಲ್ ಎಂ.ಬಿ. (ಸಂ.) ೧೯೯೭ - ಪೂರ್ವೋಕ್ತ, ಪು. ೬೪.

೧೬೦.ಆಪ್ಟೆ, ಡಿ.ವಿ. ೧೯೩೪ - ಮುದ್ದೋಳ ಸಂಸ್ಥಾನಚ್ ಗೋರ್‌ಪಡೆ ಘರಾಚ್ ಇತಿಹಾಸ, ಪು. ೧೭-೩೬.

೧೬೧.R.H.A.D, 1925 -26 - ಫಿರೋಜ್ ಶಹಾನ ಗೋರಿ ಹಾಗೂ ಗೇಸು ದರಾಜರ ಸಮಾದಿಗಳ ಮೇಲಿನ ವಿವರಣೆ.

೧೬೨.ಷೇಕ ಅಲಿ. ಬಿ. (ಪ್ರ.ಸಂ) ೧೯೯೭ - ಕರ್ನಾಟಕ ಚರಿತ್ರೆ ಸಂಪುಟ ಮಾಲಿಕೆ ೪. ಪು.೨೭೨.

೧೬೩.ಅದೇ.

೧೬೪.Yazdani.G., 1960 - Mediveal History of Deccan. p.174.

೧೬೫.Toy Sidney., 1957 - The stongholds of India. p. 40.

೧೬೬.ಷೇಕ ಅಲಿ.ಬಿ. ೧೯೯೭ - ಪೂರ್ವೋಕ್ತ. ಪು.೪೬.

೧೬೭.ಗುರತಿ ವೆಂಕಟರಾವ್ ೧೯೮೭ - ಬಹಮನಿ ವಿಜಯನಗರ ಸಂಬಂಧಿ., I.C.H.R ಅಲಹಬಾದ ೨೬೪-೭೧.

೧೬೮.Gribble History of Deccan. p.73.

೧೬೯.ಹೂಗಾರ.ಬಿ.ಪಿ. ೨೦೦೬ - ಕರ್ನಾಟಕ ಇತಿಹಾಸ. ಪು.೨೭೮.

೧೭೦.Chopra P.N.m, (oth) 1979 - History of South India. Vol. II p.78.

೧೭೧.ರಂಜಾನ್ ದರ್ಗಾ. ೨೦೦೭ - ಭಾವೈಕ್ಯತೆಯ ಕನಸುಕಂಡ ಯೂಸುಫ್ ಆದಿಲ್ ಖಾನ ಪ್ರಜಾವಣಿ ಪತ್ರಿಕೆಯ ಲೇಖನ. ೧೩-೦೪-೨೦೦೭.

೧೭೨.M.Yaseen Quddusi and Sitaram Jagirdar.,2001 - Persian. Arabic and urdu Inscription in Karnataka. p.184.

೧೭೩.ಎಸ್.ಎಸ್.ವಾಣಿ. ೨೦೦೭ - ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಶಾಸನದ ವಿವರಣೆ.

೧೭೪.Aruni.S.K., 2004 - Surapur Samsthan, Historical and Archaeological study poligar state in south India. p.20.

೧೭೫.ಬಿ.ಕೃಷ್ಣಾಮಾಚಾರ್ಯ., ೨೦೦೩ - ಮರೆಯಲಾಗದ ಸುರಪುರ ರಾಜರ ಚರಿತ್ರೆ. ಪು. ೪೦ -೪೫.

೧೭೬.ಪುರಷಕಾರಿ ಲೋಕಯ್ಯ., - ಕೈಪಿಯತ್ತು. ಸಂ. ೨೫.

೧೭೭.ಬಾಸ್ಕರರಾವ ಮುಡಬೂಳ., ೨೦೦೧ - ಮರೆತು ಹೊದ ಸುರಪುರ ಇತಿಹಾಸ. ಪು. ೩.

೧೭೮.ಬಿ.ಕೃಷ್ಣಮಾಚಾರ್ಯ., ೨೦೦೩ - ಪೂರ್ವೋಕ್ತ ಪು. ೧೪.

೧೭೯.Sarkar Jadunath., 1923 - Modern Review. p. 59.

೧೮೦.Aruni.S.K., 2004 - op cit. p. 23.

೧೮೧.ಕೈಪಿಯತ್ತುಗಳಲ್ಲಿ ಪಿಡ್ಡನಾಯಕನ ಸೈನ್ಯ ೮೪೦೦೦ ಎಂದು ಉಲ್ಲೇಖಿಸಲಾಗಿದೆ.

೧೮೨.M.Yaseen. Quddusi and Sitaram Jagirdar.,2001 – op cit. p.187.

೧೮೩.ಪುರುಷಕಾರಿ ಲೋಕಯ್ಯ - ಕೈಪಿಯತ್ತು. ಸಂ. ೨೬.

೧೮೪.ಪುರುಷಕಾರಿ ಲೋಕಯ್ಯ - ಕೈಪಿಯತ್ತು. ಸಂ. ೫೧.

೧೮೫.ಟೇಲರ್ ಮೆಡೋಸನ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

೧೮೬.ಪಾಟೀಲ್.ಎಂ.ಬಿ., ೧೯೯೭- ಪೂರ್ವೋಕ್ತ ಪು. ೮೫.

೧೮೭.ಸದಶಿವ.ಕೆ., ೨೦೦೪ - ಆಧುನಿಕ ಭಾರತದ ಇತಿಹಾಸ. ಪು. ೨೯೧.

೧೮೮.ಮಜುಂದಾರ್.ಆರ್.ಸಿ., ೧೯೯೮ - ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ. (ಸಂ.೨೪) ಪು.೩೮೧.

೧೮೯.ಗೋಪಾಲರಾವ., ಹೇಜೀಬ್. ೨೦೦೧ - ಹೈದರಾಬಾದ ಮುಕ್ತಿ ಸಂಘರ್ಷ. ಪು.೭.

೧೯೦.ಅದೇ ಪು.೯.

೧೯೧.ಕೋಟೇನ ತೀರ್ಪು ಸೆಶನ್ ಕೋರ್ಟ ಗುಲಬರ್ಗಾ., ಕೇಸ. ನಂ. ೩೧/೨. ೧೯೫೦.

೧೯೨.ಪ್ರಜಾವಾಣಿ ಪತ್ರಿಕೆ., ೨೦೦೮ - ವಿಶೇಷ ಪುರವಣಿಗೆಯಲ್ಲಿ ಪ್ರಕಟವಾದ ಲೇಖನ. ದಿನಾಂಕ. ೦೬-೦೮-೨೦೦೮.

೧೯೩.ಕಪಟರಾಳ ಕೃಷ್ಣರಾಯರು., ೨೦೦೫ - ಪೂರ್ವೋಕ್ತ. ಪು. ೧೮-೧೯.

೧೯೪.ಪ್ರಜಾವಾಣಿ ಪತ್ರಿಕೆ., ೨೦೦೯ - ಜೌರಂಗ ಜೇಬನ ಹಸ್ತ ಪ್ರತಿ ಫರ್ಮಾನು. ದಿ. ೦೯-೦೯-೨೦೦೭.

೧೯೫.ಗೋಪಾಲರಾವ ಹೆಜಿಬ., ೨೦೦೫ - ಮೌಖಿಕ ಹೇಳಿಕೆ.

೧೯೬.Panjabi K.L., 1990. The Indomitable Sardar. pp. 219 -21.

೧೯೭.ಗೋಪಾಲರಾವ ಹೆಜಿಬ. ೨೦೦೧ -ಪೂರ್ವೋಕ್ತ ಪು. ೧೫೦.

ಅಧ್ಯಾಯ-೩

ರಕ್ಷಣಾ ವಾಸ್ತುಶಿಲ್ಪಶಿಲ್ಪ

೩.೧. ಕೋಟೆಯ ಅರ್ಥ:

ಪ್ರಾಚೀನ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ರಾಜ್ಯಗಳು ತಮ್ಮ ಭದ್ರತೆ ಮತ್ತು ರಕ್ಷಣೆಗಾಗಿ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಂಡವು. ರಾಜ್ಯಗಳ ಉದಯಕ್ಕಿಂತ ಮುಂಚೆ ಜನರು ಸಣ್ಣ ಸಣ್ಣ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅವರು ತಮ್ಮ ಜೀವನ ಮತ್ತು ಸಂಪತ್ತನ್ನು ಕಳ್ಳಕಾಕರಿಂದ ಹಾಗೂ ಕಾಡು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಗ್ರಾಮದ ಸುತ್ತಲು ರಕ್ಷಣೆಗಾಗಿ ಎತ್ತರವಾದ ಗೋಡೆಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇದನ್ನು "ರಕ್ಷಣಾ ಗೋಡೆ" ಅಥವಾ "ಕೋಟೆ" ಎಂದು ಕರೆಯುತ್ತಾರೆ. ಕೋಟೆಗೆ ಹಳೆಗನ್ನಡದಲ್ಲಿ "ಕೋಂಟೆ" ಎಂದು ಕರೆಯಲಾಗಿದೆ.[೧] ಶಬ್ದಕೋಶಗಳಲ್ಲಿ ಕೋಟೆಗೆ 'ಕಿಲ್ಲೆ'[೨] 'ದುರ್ಗ' 'ರಕ್ಷಣಾ ಗೋಡೆ' ಎಂಬ ಪದಗಳನ್ನು ಬಳಸಿದ್ದಾರೆ. ಸಂಸ್ಕೃತದಲ್ಲಿ 'ದುರ್ಗ', 'ದುಗ್ಗ', 'ಪುರ' ಎಂಬ ಮುಂತಾದ ಪದಗಳಿವೆ. "ದುರ್ಗಂ" ಎಂಬ ಪದವು ಅಜೇಯ ಅಥವಾ ಗೆಲ್ಲಲಾಗದ ಕೋಟೆಯನ್ನು ಸೂಚಿಸಲು ಬಳಸಲಾಗಿದೆ.[೩] ಪ್ರಾಚೀನ ಸಾಹಿತ್ಯದಲ್ಲಿ ಕೋಟೆಗಳಿಗೆ 'ಪುರ' ಎಂಬ ಅರ್ಥವಿದೆ. 'ಮಹಾಪುರ' ಎಂದರೆ ಭದ್ರವಾದ ಗೋಡೆಯನ್ನು ಹೊಂದಿರುವ ಪಟ್ಟಣ ಎಂದು ಅರ್ಥ.[೪]

ಕೋಟೆ ಕೊತ್ತಲು ಎಂಬ ಜೋಡಿ ಪದಗಳು ಒಂದೆ ಎಂದು ಕಂಡು ಬಂದರೂ ಶಬ್ದಕೋಶದಲ್ಲಿ ಬೇರೆ ಬೇರೆ ಅರ್ಥಗಳನ್ನು ಹೊಂದಿದೆ. ಕೊತ್ತಳ (ಲ)ದ ಉರ್ದು ವಿನ ಅರ್ಥ "ಬುರಜು", ಇವುಗಳು ಕೋಟೆಯ ರಕ್ಷಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ.[೫] ಜನಪದಿಯ ಸಾಹಿತ್ಯದಲ್ಲಿ ಕೋಟೆಯನ್ನು ಕ್ವಾಟೆ 'ಕ್ವಾಟಿ', 'ಕೋಟೆ' ಎಂದು ಕರೆಯಲಾಗಿದೆ.[೬]

೩.೨. ಕೋಟೆಯ ಮಹತ್ವ:

ಕೋಟೆಯ ಮಹತ್ವವನ್ನು ಕುರಿತು ಪ್ರಾಚೀನ ಸಾಹಿತ್ಯಗಳಾದ ಮಾನಸಾರ, ವಿಶ್ವಕರ್ಮನ ವಾಸ್ತು, ಶಿಲ್ಪರತ್ನ, ಮತ್ಸ್ಯಪುರಾಣ, ಮಾರ್ಕಂಡೆಯ ಪುರಾಣ, ವಿಷ್ಣು ಪುರಾಣ ಕೌಟಿಲ್ಯನ ಅರ್ಥಶಾಸ್ತ್ರ, ಮನುಸ್ಮೃತಿ, ಶುಕ್ರನ ನೀತಿಶಾಸ್ತ್ರ, ಬೃಹತ್‌ಸಂಹಿತೆ ಮುಂತಾದ ಕೃತಿಗಳಲ್ಲಿ ವಿವರಿಸಲಾಗಿದೆ. ಮನುವಿನ ಅಭಿಪ್ರಾಯದಲ್ಲಿ ಒಬ್ಬ ಬಿಲ್ಲುಗಾರ ಕೋಟೆಯ ಗೋಡೆಯ ರಕ್ಷಣೆಯಲ್ಲಿ ನಿಂತು ನೂರಾರು ಶತ್ರುಗಳೊಂದಿಗೆ ಹೋರಾಟ ಮಾಡಬಲ್ಲನು, ಅಂತಹ ಮಹತ್ವದ ಸ್ಥಳಗಳು ಕೋಟೆಯಲ್ಲಿ ಇರುತ್ತವೆ ಎಂದು ಹೇಳಿದ್ದಾನೆ[೭]. ಶುಕ್ಲನ ನೀತಿಶಾಸ್ತ್ರದಲ್ಲಿ 'ಕೋಟೆಯು' ರಾಜ್ಯದ ಸಪ್ತಾಂಗಗಳಲ್ಲಿ ಒಂದು ಪ್ರಮುಖವಾದ ಅಂಗವಾಗಿದೆ ಎಂದು ಉಲ್ಲೇಖಿಸಲಾಗಿದೆ.[೮] ಅಲ್ಲದೆ ಕೋಟೆಯನ್ನು ಅನೇಕ ಗಿಡಮರಗಳಿಂದ ಸಮೃದ್ಧಿಯಿರುವ ಪ್ರದೇಶದಲ್ಲಿ, ಧಾನ್ಯ ಸಮೃದ್ಧಿಯಾಗಿರುವ ಪ್ರದೇಶದಲ್ಲಿ ಹಾಗೂ ನೀರಿನಿಂದ ಆವೃತ್ತಿಯಾಗಿರುವ ಮಹತ್ವದ ಸ್ಥಳದಲ್ಲಿ ಕೋಟೆಯನ್ನು ನಿರ್ಮಿಸಬೇಕೆಂದು ಹೇಳಿದ್ದಾನೆ.[೯]

ಪಂಚತಂತ್ರದಲ್ಲಿ ಕೋಟೆಯ ಮಹತ್ವವನ್ನು ಕುರಿತು ಹೀಗೆ ಹೇಳಲಾಗಿದೆ: "ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಯುದ್ಧದಲ್ಲಿ ನಿರ್ವಹಿಸಲಾಗದ ಕಾರ್ಯವನ್ನು ರಾಜನು ಒಂದು ಕೋಟೆಯಿಂದ ನಿರ್ವಹಿಸುತ್ತಾನೆ."[೧೦] ಬೃಹಸ್ಪತಿಯು 'ರಾಜನೀತಿ'ಯಲ್ಲಿ 'ರಾಜನು ತನ್ನ ಪರಿವಾರ, ಜನರು ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ರಕ್ಷಣಾ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯು ಅತಿ ಅವಶ್ಯಕ ಎಂದು ಹೇಳಿದ್ದಾನೆ'.[೧೧] ಕೆಳದಿಯ ಲಿಂಗಣ್ಣ ಕವಿಯು ಶಿವತತ್ವರತ್ನಾಕರದಲ್ಲಿ "ಕೋಟೆಯಿಲ್ಲದ ರಾಜನು ವಿಷರಹಿತವಾದ ಹಾವಿನಂತೆ ಅಥವಾ ಮದರಹಿತವಾದ ಆನೆಯಂತೆ, ಅದನ್ನು ಯಾರಾದರೂ ಸುಲಭವಾಗಿ ವಶಪಡಿಸಿಕೊಳ್ಳಬಹುದು ಎಂದು ಕೋಟೆಯ ಮಹತ್ವವನ್ನು ಕುರಿತು ವಿವರಿಸಿದ್ದಾನೆ."[೧೨]

ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ'ದಲ್ಲಿ ರಾಜನು ರಾಜ್ಯದ ಗಡಿಯ ನಾಲ್ಕು ದಿಕ್ಕಿನಲ್ಲಿ ಶತ್ರುಗಳನ್ನು ತಡೆಯಲು ಸೂಕ್ತವಾದ ರಕ್ಷಣಾ ಗೋಡೆಯನ್ನು ನಿರ್ಮಿಸಿಕೊಳ್ಳಬೇಕು (ಕೋಟೆ) ಎಂದು ಹೇಳಿದ್ದಾನೆ.[೧೩] ಅಲ್ಲದೆ ರಾಜ್ಯದ ಸಪ್ತಾಂಗಗಳಲ್ಲಿ ಅತ್ಯಂತ ಪ್ರಮುಖವಾದ ಅಂಗ ಕೋಟೆ ಎಂದು ಹೇಳಿದ್ದಾನೆ. ಹರಿಹರನ **'ಗಿರಿಜಾ ಕಲ್ಯಾಣ**ದಲ್ಲಿ' ಕೋಟೆಯ ವರ್ಣನೆ ಅದರ ಮಹತ್ವ ಮತ್ತು ಕೋಟೆಯ ಒಳಗಡೆ ಅವಶ್ಯವಾಗಿ ಇರಬೇಕಾದ ಕಟ್ಟಡಗಳನ್ನು ಕುರಿತು ಹೇಳಲಾಗಿದೆ.[೧೪] ಒಂದು ವೇಳೆ ಕೋಟೆ ಕಾಳಗದಲ್ಲಿ ಕೋಟೆಯು ಅವನತಿ ಹೊಂದುವ ಸ್ಥತಿಯನ್ನು ಕಂಡ ಸೈನಿಕರು "ಕೋಟೆಯು ಬೀಳುವ ಸ್ಥಿತಿಗೆ ಬಂದಿದೆ ಎಂದು ಬಿಳಿಯ ವಸ್ತ್ರ" ಬಿಸುತ್ತಾ ನಡೆಯಬೇಕು. ಅಂದಾಗ ಕೋಟೆಯು ಉಳಿಯುತ್ತದೆ ಎಂದು ಚನ್ನವಿರ ಕವಿಯು "ಅನಂತನಾಥ ಪುರಾಣದಲ್ಲಿ ವಿವರಿಸಿದ್ದಾನೆ"[೧೫] ಸೋಲನ್ನು ಒಪ್ಪಿಕೊಂಡು ಯುದ್ಧ ನಿಲ್ಲಿಸುವುದಕ್ಕಾಗಿ ಈ ಕ್ರಮ ಕೈಕೊಳ್ಳಬೇಕು ಎಂದು ಹೇಳಲಾಗಿದೆ.

ಕನಕದಾಸರು ಕೋಟೆಯ ಮಹತ್ವವನ್ನು ತಮ್ಮ ಒಂದು ಪದ್ಯದಲ್ಲಿ ಈ ರೀತಿ ವಿವರಿಸಿದ್ದಾರೆ. "ಮದ್ದಾನೆಯ ಸೊಂಡಿಲ ಸಹಾಯದಿಂದ ಸೂಕಿ ಬಂದಿಸುವನು ಹರಿದಾದ ವಜ್ರದ ಆ ಗುಳಿಯ ಬಾಗಿಲುಳ್ಳ ಕೋಟೆಯನ್ನು ವರ್ಗಿಕರಿಸುವುದು ಎಂತಹ ಖ್ಯಾತ ಕವಿಗೂ ಸಾಧ್ಯವಿಲ್ಲವೆಂದು ಮೊಹನ ತರಂಗಿಣಿಯಲ್ಲಿರುವ ಒಂದು ಗದ್ಯಕ್ಕೆ ವಿವರಣೆ ನೀಡಲಾಗಿದೆ". ಅದರ ಅನುವಾದವನ್ನು ಎಸ್.ಎಸ್. ಕೋತಿನ ಅವರು ಮಾಡಿದ್ದಾರೆ.[೧೬]

ಯುದ್ಧ ಪದ್ಧತಿಯಲ್ಲಿ ಬದಲಾವಣೆಯಾದಂತೆ ಕೋಟೆಯ ನಿರ್ಮಾಣದಲ್ಲಿಯೂ ಬದಲಾವಣೆಯಾಯಿತು. ಇವುಗಳ ನಿರ್ಮಾಣಕ್ಕೆ ನೈಸರ್ಗಿಕವಾಗಿ ಲಭ್ಯವಾಗುವ ವಸ್ತುಗಳನ್ನು ಬಳಸಿಕೊಂಡು ರಕ್ಷಣೆಯನ್ನು ಪಡೆಯಲಾಯಿತು. ಶಕ್ತಿಯ ಪ್ರತೀಕವಾಗಿರುವ ಕೋಟೆಗಳು, ಆಳ್ವಿಕೆ ಮಾಡಿರುವ ರಾಜರುಗಳ ಹೋರಾಟ ಪರಂಪರೆಯನ್ನು ಒಳಗೊಂಡಿರುತ್ತದೆ. ಕೋಟೆಯ ಭದ್ರತೆಯ ಮೇಲೆ ಆ ರಾಜ್ಯದ ಆಡಳಿತ ನಿಂತಿರುತ್ತದೆ. ಆದ್ದರಿಂದ ಎಲ್ಲಾ ಅರಸು ಮನೆತನಗಳು ಕೋಟೆಯ ನಿರ್ಮಾಣದ ಕಡೆಗೆ ವಿಶೇಷಗಮನ ಹರಿಸಿದರು.[೧೭]

ಗುಲಬರ್ಗಾ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವ ಎಲ್ಲಾ ರಾಜ್ಯ ಮನೆತನಗಳು ಕೋಟೆಯ ಮಹತ್ವವನ್ನು ಅರಿತುಕೊಂಡು ತಮ್ಮ ಅನುಕೂಲತೆಗೆ ತಕ್ಕಂತೆ ಅವುಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದೇ ಪ್ರದೇಶದಲ್ಲಿ ಆಳ್ವಿಕೆಗೆ ಬಂದ ಮತ್ತೊಂದು ಮನೆತನದವರು ಮೊದಲಿನ ಕೋಟೆಯನ್ನು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಪುನರ್ ನಿರ್ಮಿಸಿಕೊಂಡಿದ್ದಾರೆ. ಅಂದರೆ ಕೋಟೆಯು ಕಾಲದಿಂದ ಕಾಲಕ್ಕೆ ತನ್ನ ಮಹತ್ವವನ್ನು ಕಳೆದುಕೊಂಡರೂ ಪುನರ್‌ನಿರ್ಮಿಸುವುದರ ಮೂಲಕ ಅದರ ಮಹತ್ವವನ್ನು ಕಾಪಾಡಿಕೊಂಡು ಬರಲಾಗುತ್ತದೆ. ಇಂತಹ ಹಲವು ಉದಾಹರಣೆಗಳು ನಮಗೆ ಗುಲಬರ್ಗಾ ಜಿಲ್ಲೆಯ ಕೋಟೆಗಳಲ್ಲಿ ಕಂಡು ಬರುತ್ತವೆ. ಪ್ರಸ್ತುತ ಗುಲಬರ್ಗಾದ ಮೂಲ ಕೋಟೆಯನ್ನು ಬಹಮನಿಯರು, ಬರೀದ ಶಾಹಿಗಳು, ಆದಿಲ್ ಶಾಹಿಗಳು ಮತ್ತು ನಿಜಾಮ ಶಾಹಿಗಳು ತಮ್ಮ ಅನಕೂಲಕ್ಕೆ ತಕ್ಕಂತೆ ಪುನರ್‌ನಿರ್ಮಾಣ ಮಾಡಿಕೊಂಡಿರುವುದನ್ನು ಕಾಣಬಹುದು.

ಯುದ್ಧದ ಆರಂಭಕ್ಕಿಂತ ಮುಂಚೆ ಜಯ ಹೊಂದಲು ಮೊದಲನೆಯ ದಿನ ಕೋಟೆಯಲ್ಲಿ ಯುದ್ಧ ಸಂಬಂಧಿಯ ಎಲ್ಲಾ ಸಾಮಗ್ರಿಗಳನ್ನು, ಕೋಟೆ, ಕೊತ್ತಲ, ಕಾವಲುಗೋಪುರ, ಪತಾಕೆಗಳನ್ನು ಪೂಜಿಸುತ್ತಿದ್ದರು. ಪ್ರಾಚೀನ ಕಾವ್ಯಗಳಲ್ಲಿ ಕೋಟೆಯಲ್ಲಿ ನಡೆಯುವ ಪೂಜಾ ವಿಧಾನ ಮತ್ತು ಪೂಜೆಗೆ ಬಳಸುವ ಸಾಮಗ್ರಿಗಳನ್ನು ಕುರಿತು ವಿವರಿಸಲಾಗಿದೆ.[೧೮] ಕೋಟೆಯ ಕೆಲವು ಭಾಗಗಳ ನಿರ್ಮಾಣಕ್ಕೆ ಬಲಿಯ ಅವಶ್ಯಕತೆ ಇದ್ದರೆ ಅಂತಹ ಭಾಗಕ್ಕೆ ಜೀವಂತ ವ್ಯಕ್ತಿಗಳನ್ನು ಅಥವಾ ಮಹಿಳೆಯರನ್ನು ಬಲಿಕೊಟ್ಟು ಆ ಭಾಗವನ್ನು ನಿರ್ಮಿಸಲಾಗುತ್ತದೆ. ಗುಲಬರ್ಗಾ ಕೋಟೆಯ ಪೂರ್ವ ದಿಕ್ಕಿನ ಕೊತ್ತಳ ಮತ್ತು ಭಾವಿಯ ನಿರ್ಮಾಣಕ್ಕೆ ಭೋರಾಬಾಯಿ ಎನ್ನುವ ಗರ್ಭಿಣಿ ಹೆಣ್ಣು ಮಗಳನ್ನು ಬಲಿಕೊಡಲಾಯಿತು ಎಂದು ಜನಪದ ಸಾಹಿತ್ಯದಲ್ಲಿ ಉಲ್ಲೇಖವಿದೆ. ಅಂದಿನಿಂದ ಇಂದಿನವರೆಗೂ ಅಲ್ಲಿ ಪ್ರತಿ ವರ್ಷ ಪೂಜೆ ನಡೆಯುತ್ತದೆ. ಇಂತಹ ಹಲವು ಅಂಶಗಳು ಪ್ರತಿಯೊಂದು ಕೋಟೆಯಲ್ಲಿ ಕಂಡು ಬರುತ್ತವೆ.[೧೯]

ಕೋಟೆಯ ಮಹತ್ವವನ್ನು ಕುರಿತು ಕವಿ ಹರಿಹರನು 'ಗಿರಿಜಾ ಕಲ್ಯಾಣ'ದಲ್ಲಿ ಈ ರೀತಿ ವಿವರಿಸಿದ್ದಾರೆ

ಪಳಕಿನ ಕೋಂಟೆ ಒಪ್ಪದನೆ ಬೇವಿನ ದಂಡೆ ನಭಕ್ಕೆಮೀರುವ
ಟ್ಟಳೆ ನಿರ್ಮಿಹೇಱು ಪಾರುವ ಪತಾಕೆ ವಿರಾಜಿತಗೊಂಡು
ಗೊಂಟಿನೊಳ್ ಬಳಸಿದ ಕೊತ್ತಳಂ ಸೊಣಾಯಿ ಪಾಳ್ವೆರಿ ಡೆಂಕಣಿ
ಸಾರ ಮಾರಿಯಗ್ಗಳಲಿಸುವ ಗೋಪುರಂ ಪುಲಮೊಗಂ ಮೆರುಗಂ
ಪುರದೊಳು ನಿರಂತರ

ಕಂಪಿಲರಾಯನ ದಂಡನಾಯಕ ಬೈಚಪ್ಪನು ಕೋಟೆಯನ್ನು ಸಿದ್ಧಮಾಡಿರುವ ಬಗೆಯನ್ನು ನಂಜುಂಡ ಕವಿಯು 'ರಾಮನಾಥ ಚರಿತೆ'ಯಲ್ಲಿ ಈ ಕೆಳಗಿನಂತೆ ವಿವರಿಸಿದ್ದಾನೆ.

[illegible]

ದಳವಾಡ ಸಹಿತ ಬೈಚಪ್ಪ ದುರ್ಗವ ಹೊಕ್ಕು
ತಳದವರ ಬಲಿಕೆಯನು
ಬಳಸಿ ಬಳಸಿ ನೋಡಿ ದುರ್ಗ ಸೌರಣೆಯನಂ
ದಲಸದೆ ಮಿಗೆ ಮೂಡಿಸಿದನು
ಆಗಳಾಳ್ವೇರಿ ಕೋಟೆ ಕೊತ್ತಳ ನೆಲದಿಡ್ಡಿ
ಮುಗಿಲಪ್ಪಣೆ ನೆಲಗಮ್ಮ
ಪ್ರಾಗಿಸಿ ಕೊಯಳಗಾಗಿಸಿಕೊಂಬ ಪಲಪುಲಿ
ಮೊಗಗಳನ್ನು ಮೂಡಿಸಿದನು

ಈ ಪದ್ಯದಲ್ಲಿ ಆಳುವ ಮನೆತನಗಳು ಅವಶ್ಯವಾಗಿ ಕೋಟೆಯನ್ನು ಕಟ್ಟಲೇಬೇಕು ಎಂದು ಹೇಳುತ್ತವೆ.

೩.೩. ಕೋಟೆಯ ವ್ಯಾಖ್ಯಾನಗಳು:

ಕೋಟೆಯ ಕುರಿತು ಕನ್ನಡ ಮತ್ತು ಇಂಗ್ಲೀಷ ನಿಘಂಟುಗಳಲ್ಲಿ ವಿವಿಧ ವ್ಯಾಖ್ಯಾನಗಳನ್ನು ನೀಡಲಾಗಿದೆ. ಅಲ್ಲದೆ ಇತಿಹಾಸಕಾರರು ಮತ್ತು ಸಂಶೋಧಕರು ಕೋಟೆ ಕೊತ್ತಲಗಳ ಕುರಿತು ಅಧ್ಯಯನ ನಡೆಸಿ ಅದಕ್ಕೆ ತಮ್ಮದೆಯಾದ ವ್ಯಾಖ್ಯಾನವನ್ನು ನೀಡಿದ್ದಾರೆ. ಅವುಗಳಲ್ಲಿ ಕೆಲವೊಂದು ವ್ಯಾಖ್ಯಾನಗಳನ್ನು ಇಲ್ಲಿ ವಿವರಿಸಲಾಗಿದೆ.

೧. **ಕನ್ನಡ ವಿಶ್ವಕೋಶ:** "ಕೋಟೆಯು ಯುದ್ದಗತಿಯ ನಿಯಂತ್ರಣ ಕೇಂದ್ರ ಹಾಗೂ ಯುದ್ಧ ವ್ಯವಸ್ಥೆಯ ನೇರ ಕೇಂದ್ರವಾಗಿದೆ"[೨೦]

೨. **ದಿ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ:** "ಕೋಟೆಯೆಂದರೆ ಶತ್ರುಗಳ ಆಕ್ರಮಣದ ಕಾಲದಲ್ಲಿ ಜನರನ್ನು ಮತ್ತು ರಾಜ್ಯವನ್ನು ರಕ್ಷಿಸಲು ನಿರ್ಮಿಸಿರುವ ಒಂದು ಭದ್ರವಾದ ಕಟ್ಟಡ"[೨೧]

೩. **ದಿ ಎನ್‌ಸೈಕ್ಲೋಪಿಡಿಯಾ ಅಮೇರಿಕಾ:** "ಕೋಟೆಯ ನಿರ್ಮಾಣವು ಮಾನವನ ಅತ್ಯಂತ ಪುರಾತನ ಹಾಗೂ ಪ್ರಾಚೀನ ಕಲೆಯಾಗಿದೆ"[೨೨]

೪. **ಜಿ.ಟಿ. ಡಾಟ್:** "ಪ್ರಾಚೀನ ಕಾಲದಲ್ಲಿ ರಾಜ್ಯಧಾನಿಯನ್ನು ರಕ್ಷಿಸುವ ಸಲುವಾಗಿ ನಿರ್ಮಿಸಿರುವ ರಕ್ಷಣಾ ಕಟ್ಟಡ".[೨೩]

೫. **ಎಸ್.ಕೆ. ಜ್ಯೋಶಿ:** "ಮಾನವನು ತನ್ನ ಪರಿಸರದ ಬೆಳವಣಿಗೆಯ ಹಂತದಲ್ಲಿ ತನ್ನನ್ನು ಮತ್ತು ಸಮುದಾಯವನ್ನು ಕಾಪಾಡಲು ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಳ್ಳಲು ನಿರ್ಮಿಸಿರುವ ಕಟ್ಟಡವೇ ಕೋಟೆ"[೨೪]

೬. **ಡಾ. ಸಿ.ಎಸ್. ಪಾಟೀಲ:** "ರಕ್ಷಣೆಗಾಗಿ ಆಯಕಟ್ಟಿನ ಸ್ಥಳದಲ್ಲಿ ಎತ್ತರವಾದ ರಕ್ಷಣಾ ಗೋಡೆಗಳನ್ನು ನಿರ್ಮಿಸುವುದು ಕೋಟೆ"ಎಂದು ವ್ಯಾಖ್ಯಾನಿಸಿದ್ದಾರೆ.[೨೫]

೭. **ಬೆಟಗೇರಿ ಕೃಷ್ಣಶರ್ಮ:** "ಪ್ರಾಚೀನ ಕಾಲದ ನಮ್ಮ ರಾಜಕೀಯ ವ್ಯವಸ್ಥೆಗೆ ನಗರ, ಗ್ರಾಮ, ಹಳ್ಳಿಗಳಿಗೆ ಕೋಟೆಗಳು ರಕ್ಷಣೆಯನ್ನು ಒದಗಿಸುತ್ತಿದ್ದ ಕಟ್ಟಡಗಳು" ಎಂದು ಹೇಳಿದ್ದಾರೆ[೨೬].

೩.೪. ಕೋಟೆಯ ಪ್ರಾಚೀನತೆ:

ವಿಶ್ವದಲ್ಲಿ ಕೋಟೆಯ ಪ್ರಾಚೀನತೆಯ ಕುರಿತು ಯೋಚಿಸಿದಾಗ ಕ್ರಿ.ಪೂ. ೨೦೦೦ಕ್ಕೂ ಹಿಂದೆ ನಮಗೆ ಪ್ರಾಚೀನ ಕೋಟೆಗಳ ಬಗ್ಗೆ ಮಾಹಿತಿ ಲಭ್ಯವಾಗುತ್ತವೆ. ಅವುಗಳಲ್ಲಿ 'ನಿನೆವಾ' ಬ್ಯಾಬಿಲೋನಿಯಾ, ಆಸ್ಸೀರಿಯಾ ಹಿಟೈಟ್ ಮುಂತಾದ ನಗರಗಳಲ್ಲಿ ೪೦ ಮೈಲ ಸುತ್ತಳತೆ, ೧೪೦ ಅಡಿ ಎತ್ತರ, ೩೦ ಅಡಿ ದಪ್ಪವಾದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಯಿತು.[೨೭] ಇನ್ನೂ ಕೆಲವು ನಗರಗಳಲ್ಲಿ ೧೩ ಅಡಿ ದಪ್ಪ ೩೪ ಅಡಿ ಎತ್ತರದಲ್ಲಿ ಕಲ್ಲಿನ ಬಲಿಷ್ಠ ಗೋಡೆಯನ್ನು ನಿರ್ಮಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ.[೨೮] ಭೂಮಧ್ಯ ಸಮುದ್ರದ ಜನರು ಕ್ರಿ.ಪೂ. ೬೦೦ರಲ್ಲಿ ಇಟ್ಟಿಗೆ ಮತ್ತು ಮಣ್ಣು ಬಳಸಿ ಕೋಟೆಯನ್ನು ಕಟ್ಟುವ ವಿಧಾನ ಬಲ್ಲವರಾಗಿದ್ದರು.[೨೯] ಕಾನ್‌ಸ್ಟ್ಯಾಂಟಿನೋಪಲ್ ನಗರದಲ್ಲಿ ೨೨೪ ಕಿ.ಮೀ. ಉದ್ದದ ಗೋಡೆ ಹಾಗೂ ೬೦ ಅಡಿ ಆಳದ ಕಂದಕವನ್ನು ನಿರ್ಮಿಸಲಾಯಿತು. ತುರ್ಕಿಯರು ಈ ನಗರದ ಮೇಲೆ ದಾಳಿ ಮಾಡಿದರೂ ಕೋಟೆಯನ್ನು ಧ್ವಂಸಗೊಳಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಇದರ ಗೋಡೆಯು ಅತ್ಯಂತ ದಪ್ಪವಾಗಿತ್ತು. ಎರಡು ಗೋಡೆಗಳ ಮದ್ಯದಲ್ಲಿ ಕಲ್ಲು ಮಣ್ಣು, ಇಟ್ಟಿಗೆ ಹಾಗೂ ಇತರ ವಸ್ತುಗಳನ್ನು ಹಾಕಿ ಗೋಡೆಯನ್ನು ಭದ್ರಗೊಳಿಸಲಾಗುತ್ತಿತ್ತು. ಈ ರೀತಿಯ ಭದ್ರವಾದ ಗೋಡೆಯನ್ನು ನಿರ್ಮಿಸುವ ಕಲೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ.[೩೦]

ಕೋಟೆಯ ನಿರ್ಮಾಣದ ಕಲೆಯಲ್ಲಿ ಪ್ರಾಚೀನ ರೋಮನರು ಅತ್ಯಂತ ಪರಿಣಿತರಾಗಿದ್ದರು. ಅಲ್ಲಿಯ 'ಹರ್ಡಿಯನ್ಸ' ಕೋಟೆಯು ಆಯತಾಕಾರದಲ್ಲಿ ಇದ್ದು ಅದು ೨೦ ಅಡಿ ದಪ್ಪನೆಯ ಗೋಡೆಯನ್ನು ಹೊಂದಿತ್ತು. ಇದರ ಸುತ್ತಲು ಆಳವಾದ ಕಂದಕ ಕಂಡು ಬರುತ್ತದೆ. ಈ ಕೋಟೆಯಲ್ಲಿ ಅವಶ್ಯವಿರುವ ಎಲ್ಲಾ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಲಾಗಿತ್ತು. ಉದಾ: ಸೈನಿಕರ ವಿಶ್ರಾಂತಿ ಸ್ಥಳಗಳು, ಕಣಜಗಳು, ನೀರಿನ ತಾಣಗಳು, ಕಾವಲುಗೋಪುರ ಮುಂತಾದವುಗಳು.[೩೧] ರಾಜ್ಯದ ಗಡಿಗಳನ್ನು ರಕ್ಷಿಸಲು ಈ ಕೋಟೆಯನ್ನು ನಿರ್ಮಿಸಲಾಯಿತು.[೩೨]

ಕ್ರಿ.ಪೂ. ೨೨೧ರಲ್ಲಿ ನಿರ್ಮಿಸಿರುವ ಚೀನಾದ ಉದ್ದನೆಯ ರಕ್ಷಣಾ ಗೋಡೆಯು ಕೋಟೆಯ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಇದನ್ನು ಮಂಗೋಲಿಯನ್ನರ ಆಕ್ರಮಣಗಳನ್ನು ತಡೆಯಲು ನಿರ್ಮಿಸಲಾಯಿತು.[೩೩] ಇದು ಹತ್ತು ವರ್ಷದ ಕಾಲಾವಧಿಯಲ್ಲಿ ಅಪಾರ ಸಂಖ್ಯೆಯ ಕಾರ್ಮಿಕರು ಸೇರಿ ನಿರ್ಮಿಸಿದ್ದಾರೆ. ಈ ಕೋಟೆ ಗೋಡೆಯು ೨೪ ಅಡಿ ಅಗಲ ೨೦ ಅಡಿ ಎತ್ತರ ಹಾಗೂ ಸುಮಾರು ೨೦೦೦ ಮೈಲು ಉದ್ದವಾಗಿದೆ.

ಕೋಟೆಯ ಗೋಡೆಯಲ್ಲಿ ಸುಮಾರು ೧೫,೦೦೦ ಗೋಪುರಗಳಿವೆ. ಇವುಗಳು ೪೦ ಅಡಿ ಎತ್ತರವಾಗಿವೆ. ಇವುಗಳ ಮಧ್ಯದಲ್ಲಿ ಅಲಲ್ಲಿ ೨೫೦೦ ಕಾವಲುಗೋಪುರಗಳಿವೆ. ಗೋಡೆಯ ಹೊರಭಾಗದಲ್ಲಿ ಮೂರು ಹಂತದ ಕಂದಕವನ್ನು ನಿರ್ಮಿಸಲಾಗಿದೆ.[೩೪]

ಕೋಟೆಗಳಲ್ಲಿಯ ಅತ್ಯಂತ ಬೃಹದಾಕಾರದ ಕೋಟೆಯು ರೋಮನ್ ಸಾಮ್ರಾಜ್ಯದಲ್ಲಿವೆ. ಇಲ್ಲಿಯ ಪ್ರತಿಯೊಂದು ಕೋಟೆಯು ವಾಸ್ತು ಶಾಸ್ತ್ರದ ಹಿನ್ನೆಲೆಯಿಂದ ನಿರ್ಮಿಸಲಾಗಿದೆ. ಈ ಕೋಟೆಗಳ ನಿರ್ಮಾಣದಲ್ಲಿ ವಿಶೇಷ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.[೩೫] ಇಂತಹ ಮತ್ತೊಂದು ಪ್ರಾಚೀನ ಕೋಟೆಯು "ಇಂಕಾ" ಸಾಮ್ರಾಜ್ಯದಲ್ಲಿ ನಿರ್ಮಿಸಲಾಗಿದೆ. ಈ ಕೋಟೆಯು ದೈತ್ಯಾಕಾರದಲ್ಲಿದ್ದು, ಅದರ ನಿರ್ಮಾಣಕ್ಕೆ ಬಳಸಿರುವ ಒಂದೊಂದು ಕಲ್ಲು ೨೦ ಅಡಿ ಎತ್ತರ ೧೦೦ ಟನ್‌ಗೂ ಹೆಚ್ಚಿನ ಭಾರವಾಗಿವೆ. ಇಂತಹ ಬೃಹತ್ ಶಿಲೆಗಳನ್ನು ಸರಿಯಾಗಿ ಕತ್ತರಿಸಿ, ಒಂದರ ಮೇಲೊಂದರಂತೆ ಜೋಡಿಸಲಾಗಿದೆ. ಇದರಿಂದ ಇದೊಂದು ಅದ್ಭುತವಾದ ಕೋಟೆ ಎಂದೆ ಕರೆಯಲಾಗಿದೆ.[೩೬]

೩.೫. ಭಾರತದ ಕೋಟೆಯ ಪ್ರಾಚೀನತೆ:

ಭಾರತದ ಇತಿಹಾಸ ಹರಪ್ಪ ಸಂಸ್ಕೃತಿಯಿಂದ ಆರಂಭವಾಗುವಂತೆ, ಭಾರತದ ಕೋಟೆಗಳ ಇತಿಹಾಸವೂ 'ಹರಪ್ಪ ರಕ್ಷಣಾ ಗೋಡೆಯಿಂದ' ಆರಂಭವಾಗುತ್ತದೆ. ಸರ್ ಜಾನ್ ಮಾರ್ಷಲ್, ಆರ್.ಡಿ. ಬ್ಯಾನರ್ಜಿ, ಮುಂತಾದವರ ನೇತೃತ್ವದಲ್ಲಿ ಆರಂಭವಾದ ಭೂ ಉತ್ಖನನದ ನಂತರ ಅದರ ನಾಲ್ಕನೆಯ ಹಂತದ ಉತ್ಖನನದಲ್ಲಿ ಪ್ರತಿಯೊಂದು ದೊಡ್ಡ ಪಟ್ಟಣದ ಸುತ್ತಲು ಇರುವ ರಕ್ಷಣಾ ಗೋಡೆಯನ್ನು ಪತ್ತೆ ಹಚ್ಚಲಾಗಿದೆ. ಹರಪ್ಪ, ಮಹೆಂಜೋದಾರೊ, ರೂಪಾರ್, ಕಾಲಿಬಂಗನ್, ಲೋಥಾಲ್, ಚುನಾಬ್ದಾರೊ ಮುಂತಾದ ಸ್ಥಳಗಳಲ್ಲಿ ಕೋಟೆ ಅಥವಾ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ಶೋಧಿಸಲಾಗಿದೆ.[೩೭] ಅವುಗಳಲ್ಲಿ 'ಕೋಟ್‌ದಿಜೆ'ಯ ಸುತ್ತಲು ಆಯತಾಕಾರದಲ್ಲಿ ಇಟ್ಟಿಗೆ ಹಾಗೂ ಮಣ್ಣಿನಿಂದ ನಿರ್ಮಿಸಿದ. ರಕ್ಷಣಾಗೋಡೆಯು ಲಭ್ಯವಾಗಿದೆ.[೩೮] ಹರಪ್ಪ, ಮಹೆಂಜೋದಾರೊ ನಗರಗಳ ಸುತ್ತಲು ಇರುವ ರಕ್ಷಣಾ ಗೋಡೆಯನ್ನು ಕೋಟೆ ಎಂದು ಗುರುತಿಸಲಾಗಿದೆ. ಆಳವಾದ ತಳಹದಿಯ ಮೇಲೆ ಒಣಗಿದ ಇಟ್ಟಿಗೆಗಳಿಂದ ಕೋಟೆಯನ್ನು ನಿರ್ಮಿಸಲಾಗಿದೆ.[೩೯]

ಭಾರತದಲ್ಲಿ ಕೋಟೆಗಳ ಎರಡನೆಯ ಹಂತವು ವೇದಗಳ ಕಾಲದಿಂದ ಆರಂಭವಾಗುತ್ತದೆ. ಇಂದ್ರ ಪ್ರಸ್ತದ ಪಾಂಡವರ ಕೋಟೆಯು ಅತ್ಯಂತ ಪ್ರಾಚೀನವಾಗಿದೆ. ಇದೇ ಸ್ಥಳದಲ್ಲಿ ಹುಮಾಯೂನನು ಕಟ್ಟಿಸಿದ ಕೋಟೆ ಇದೆ.[೪೦] ವೇದದಲ್ಲಿ 'ಪುರ' ಎನ್ನುವ ಪದವನ್ನು "ಕೋಟೆಯಿಂದ ಆವೃತ್ತವಾದ ಪಟ್ಟಣಕ್ಕೆ ಬಳಸಲಾಗಿದೆ."[೪೧] ಅಥರ್ವಣ ವೇದದಲ್ಲಿ ಕಲ್ಲಿನಿಂದ ನಿರ್ಮಿಸಿರುವ ಗೋಡೆಯನ್ನು "ವಿಪ್ರ" ಎಂದು ಕರೆಯಲಾಗಿದೆ.[೪೨]

ರಾಮಾಯಣ ಮತ್ತು ಮಹಾಭಾರತದಲ್ಲಿ ಕೋಟೆಗಳ ಉಲ್ಲೇಖ ಕಂಡು ಬರುತ್ತವೆ. ಚಂದ್ರಗುಪ್ತ ಮೌರ್ಯನ ಆಸ್ಥಾನಕ್ಕೆ ಬೇಟಿ ನೀಡಿದ ಮೇಗಸ್ಥಾನಿಸನು, ಪಾಟಲಿಪುತ್ರ ನಗರದ ಸುತ್ತಲು ಇರುವ ಕೋಟೆಯನ್ನು ವಿವರಿಸಿದ್ದಾನೆ.[೪೩] ಪಾಟಲಿ ಪುತ್ರದಲ್ಲಿ ಮೊದಲು ಕಟ್ಟಿಗೆಯಿಂದ ಆವೃತವಾದ ಕೋಟೆಯಿತ್ತು. ಆದರೆ ಆ ಕೋಟೆಯು ಬೆಂಕಿಗೆ ಆಹುತಿಯಾಗಿ ನಾಶಹೊಂದಿದ ನಂತರ ಕಲ್ಲಿನ ಕೋಟೆಯನ್ನು ನಿರ್ಮಿಸಲಾಯಿತು. ಪಾಟಲಿಪುತ್ರದ ಸುತ್ತಲಿನ ಭೂಉತ್ಖನನದಲ್ಲಿ ಕೋಟೆಗೆ ಸಂಬಂಧಿಸಿದ ಹಲವು ಅವಶೇಷಗಳು ಲಭ್ಯವಾಗಿವೆ.[೪೪] ಎಸ್.ಕೆ. ಜೋಶಿಯವರು ಪಾಟಲಿ ಪುತ್ರದ ಸುತ್ತಲಿನ ಕೋಟೆಗೆ ಕಂದಕವಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ.[೪೫]

ಈ ರೀತಿ ಭಾರತದಲ್ಲಿ ಕೋಟೆಗಳ ನಿರ್ಮಾಣಕ್ಕೆ ಅತ್ಯಂತ ಪ್ರಾಚೀನವಾದ ಹಿನ್ನೆಲೆ ಇದೆ. ಕಾಲಕ್ರಮೇಣ ಇವುಗಳ ನಿರ್ಮಾಣ ಕಲೆಯು ಭಾರತದ ಎಲ್ಲಾ ಕಡೆಯಲ್ಲಿ ಬೆಳಕಿಗೆ ಬಂದಿತು. ಭಾರತದ ಕೋಟೆಗಳಲ್ಲಿ ಅತ್ಯಂತ ಬಲಾಢ್ಯವಾದ ಕೋಟೆಗಳೆಂದರೆ, ಕಾಲಿಂಜರ್, ಬುಂದೇಲಖಂಡ, ಅಜಮೀರ್, ಗ್ವಾಲಿಯರ, ಚಿತ್ತೋಡ, ದೆಹಲಿ, ದೌಲತಾಬಾದ್ ಮುಂತಾದವುಗಳು.[೪೬] ಇದೆ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಹಲವು ಕೋಟೆಗಳು ಬೆಳೆದು ಬಂದವು.

೩.೬. ಕರ್ನಾಟಕದ ಪ್ರಾಚೀನ ಕೋಟೆಗಳು:

ಕರ್ನಾಟಕದಲ್ಲಿ ಕೋಟೆಗಳ ನಿರ್ಮಾಣದ ಆರಂಭವು ಸ್ಪಷ್ಟವಾಗಿ ಶಾತವಾಹನರ ಕಾಲಕ್ಕೆ ಆರಂಭವಾಯಿತು. ಕ್ರಿ.ಪೂ. ೨ನೆಯ ಶತಮಾನದಲ್ಲಿ ನಿರ್ಧಿಷ್ಟ ಆಕಾರದಲ್ಲಿ ತಯ್ಯಾರಿಸಿದ ಇಟ್ಟಿಗೆಗಳಿಂದ ಕೋಟೆಯ ನಿರ್ಮಾಣ ಆರಂಭವಾಯಿತು.[೪೭] ಕೋಟೆಯ ಒಳಗಡೆ ಹಲವು ರಕ್ಷಣಾಸಂಬಂಧಿ ಕಟ್ಟಡಗಳನ್ನು ಇರುವುದು ಇತ್ತಿಚಿನ ಉತ್ಖನನದಿಂದ ಪತ್ತೆಯಾಗಿದೆ. ಶಾತವಾಹನರಿಗೆ ಸಂಬಂಧಿಸಿದ ಕೋಟೆಯ ಅವಶೇಷಗಳು ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಸನ್ನತ್ತಿಯಲ್ಲಿ ಲಭ್ಯವಾಗಿವೆ. ೧೯೮೬ರಲ್ಲಿ ಸನ್ನತ್ತಿಯಲ್ಲಿ ನಡೆದ ಉತ್ಖನನದಲ್ಲಿ "ರಣಮಂಡಲ" ಅಥವಾ "ರಾಜವಾಡೆ" ಎಂದು ಕರೆಯುವ ರಕ್ಷಣಾ ಸಂಬಂಧಿ ಕಟ್ಟಡ ಲಭ್ಯವಾಗಿದೆ.[೪೮] ಇಲ್ಲಿ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ನದಿಯಿಂದ ರಕ್ಷಣೆ ದೊರೆಯುವುದನ್ನು ಗಮನದಲ್ಲಿಟ್ಟುಕೊಂಡು ಕೋಟೆಯನ್ನು ನಿರ್ಮಿಸಲಾಯಿತು. ಕೆಲ ಕಾಲಾಂತರ ಪ್ರತಿಷ್ಠಾನ (ಪೈಠಾಣ) ಮಂಗಳವೀಡು, ಮಾನ್ಯಖೇಡ, ಬನವಾಸಿ, ವಡಗಾಂವ, ಚಂದ್ರವಳ್ಳಿ, ಬ್ರಹ್ಮಗಿರಿ, ಮುಂತಾದ ಕಡೆಗಳಲ್ಲಿ ಕೋಟೆಗಳನ್ನು ನಿರ್ಮಿಸಲಾಯಿತು.[೪೯]

ಶಾತವಾಹನರ ನಂತರ ಅಧಿಕಾರಕ್ಕೆ ಬಂದ ಕದಂಬರು ಬನವಾಸಿಯನ್ನು ತಮ್ಮ ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಇಲ್ಲಿ ಕೋಟೆಯನ್ನು ನಿರ್ಮಿಸಿ ಆಳ್ವಿಕೆ ಮಾಡಿದರು. ಬದಾಮಿ ಚಾಲುಕ್ಯರ ಎರಡನೆಯ ಪುಲಕೇಶಿಯು ತನ್ನ ಒಂದು ಶಿಲಾಶಾಸನದಲ್ಲಿ ಕರ್ನಾಟಕದ ಪ್ರಾಚೀನ ಕೋಟೆಗಳನ್ನು ಕುರಿತು ಉಲ್ಲೇಖಿಸಿದ್ದಾನೆ.[೫೦] ಬದಾಮಿಯ ಕೋಟೆಯು ಎರಡು ಬೆಟ್ಟಗಳ ಮೇಲಿನ ಅಭೇದ್ಯವಾದ ಕೋಟೆಯಾಗಿದೆ.

[illegible]

ಕ್ರಿ.ಶ. ೫೪೩ರಲ್ಲಿ ಈ ಕೋಟೆಯನ್ನು ರಚಿಸಲಾಯಿತು. ಇದನ್ನು ಕಾಲಕ್ರಮೇಣ ಪುನರ್ ರಚಿಸಲಾಯಿತು. ಕೋಟೆಯ ನಿರ್ಮಾಣಕ್ಕೆ ದಿಮ್ಮಿಯ ಆಕಾರದ ಕಲ್ಲುಗಳನ್ನು ಬಳಸಲಾಗಿದೆ. ಇದರ ಪ್ರವೇಶ ದ್ವಾರಗಳು, ಒಳಗಡೆಯ ಕಾವಲುಗೋಪುರಗಳು ಮತ್ತು ರಕ್ಷಣಾಸಂಬಂಧಿ ಇತರ ಕಟ್ಟಡಗಳನ್ನು ನಿರ್ಮಿಸಲಾಯಿತು.[೫೧] ಕದಂಬರ ಆಳ್ವಿಕೆಯ ಕಾಲಕ್ಕೆ 'ಉಚ್ಚಂಗಿ ದುರ್ಗದ'ದಲ್ಲಿ ಕಲ್ಲಿನಿಂದ ನಿರ್ಮಿಸಿರುವ ಕೋಟೆಯಿದೆ. ಉಚ್ಚಂಗಿ ದುರ್ಗವನ್ನು ಕಲಿಯುಗದಲ್ಲಿ ಉತ್ತುಂಗಪರ್ವತ, ಎಂದು ಒಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೫೨] ಇಲ್ಲಿಯ ಕೋಟೆಯ ಕಂದಕವನ್ನು 'ಪಾತಾಳ' ಎಂದು ಕರೆಯಲಾಗಿದೆ. ಯುದ್ಧದಲ್ಲಿ ಈ ಕೋಟೆಯನ್ನು ವಶಪಡಿಸಿಕೊಂಡ ಅರಸರಿಗೆ 'ಅರಿಮಲ್ಲ' ಎಂಬ ಬಿರುದು ಬಂದಿತು.

ಕರ್ನಾಟಕದ ಕೋಟೆಗಳು ಸಾಮಾನ್ಯವಾಗಿ ನದಿಯ ತೀರದಲ್ಲಿ, ಬೆಟ್ಟದ ಮೇಲೆ ಹಾಗೂ ನೈಸರ್ಗಿಕ ಪರಿಸರವನ್ನು ಬಳಸಿಕೊಂಡು ನಿರ್ಮಿಸಲಾಗಿದೆ. ಉದಾಹರಣೆಗೆ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಸನ್ನತಿ ಕೋಟೆಯು ಭೀಮಾ ನದಿಯ ತೀರದಲ್ಲಿ ನಿರ್ಮಿಸಲಾಗಿದೆ. ಅದೇ ರೀತಿ ಮಳಖೇಡ ಕೋಟೆಯು ಕಾಗಿಣಾ ನದಿಯ ತೀರದಲ್ಲಿ ನಿರ್ಮಿಸಲಾಗಿದೆ.[೫೩] ಇನ್ನೂ ಕೆಲವು ಕೋಟೆಗಳು ಬೆಟ್ಟಗಳ ಮೇಲೆ ನಿರ್ಮಿಸಲಾಗಿದೆ. ದಟ್ಟವಾದ ಮರಗಳಿಂದ ಆವೃತ್ತವಾದ ಪ್ರದೇಶದಲ್ಲಿ ಕಟ್ಟಿರುವ ಕೋಟೆಯನ್ನು 'ವನದುರ್ಗ' ಎಂದು ಕರೆಯುತ್ತಾರೆ. ಶಹಾಪೂರ ತಾಲೂಕಿನಲ್ಲಿ 'ವನದುರ್ಗ' ಗ್ರಾಮದಲ್ಲಿ ಈ ಪ್ರಕಾರದ ಕೋಟೆಯಿದೆ.[೫೪]

ಈ ರೀತಿಯಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಕಾಲಕ್ರಮೇಣವಾಗಿ ಹಲವು ಬಗೆಯ ಕೋಟೆಗಳು ಬೆಳೆದು ಬಂದವು. ಅವುಗಳನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಹಂತದಲ್ಲಿ ಪ್ರಾಚೀನ ಕೋಟೆಗಳಾದ ಸನ್ನತಿ, ಮಾನ್ಯಖೇಡ, ಬದಾಮಿ, ಬನವಾಸಿ, ಚಂದ್ರವಳ್ಳಿ ಮುಂತಾದ ಕೋಟೆಗಳು ಬರುತ್ತವೆ. ಎರಡನೆಯ ಹಂತದಲ್ಲಿ ಬಸವಕಲ್ಯಾಣ, ಯಾದಗಿರ, ದ್ವಾರಸಮುದ್ರ, ಕೊಪ್ಪಳ, ವಿಜಯನಗರ ಮುಂತಾದವುಗಳು. ಮೂರನೆಯ ಹಂತದಲ್ಲಿ ಕೋಟೆಗಳಲ್ಲಿ ಗುಲಬರ್ಗಾ, ಬೀದರ, ಫಿರೋಜಾಬಾದ, ರಾಯಚೂರು, ಮುದಗಲ್, ಬಿಜಾಪೂರ, ಮುಂತಾದ ಕೋಟೆಗಳು ಬರುತ್ತವೆ. ಕೊನೆಯ ಹಂತದಲ್ಲಿ ೧೬ನೆಯ ಶತಮಾನದಿಂದ ೧೮ನೆಯ ಶತಮಾನದಲ್ಲಿ ನಿರ್ಮಿಸಿರುವ ಕೋಟೆಗಳಾದ ಚಿತ್ರದುರ್ಗ, ಶ್ರೀರಂಗಪಟ್ಟಣ, ಶಹಾಪೂರ, ಸುರಪುರ, ವನದುರ್ಗ, ಚಿನ್ಮಳ್ಳಿ, ಇಜೇರಿ, ಬೆಂಗಳೂರು, ಮೈಸೂರು ಮುಂತಾದ ಕೋಟೆಗಳು ಬರುತ್ತವೆ. ಇವುಗಳ ಮಧ್ಯದಲ್ಲಿ ಹಲವು ಕೋಟೆಗಳು ಪುನರ್‌ನಿರ್ಮಾಣಗೊಂಡಿವೆ. ಕಾಲದಿಂದ ಕಾಲಕ್ಕೆ ನಿರ್ಮಾಣಗೊಂಡಿರುವ ಕೋಟೆಗಳಲ್ಲಿ ಹಲವು ಬದಲಾವಣೆಗಳು ಕಂಡು ಬರುತ್ತದೆ. ಜಿಲ್ಲೆಯಲ್ಲಿ ಹರಿಯುವ, ಭೀಮಾ, ಕಾಗಿಣ, ನದಿಗಳ ಮತ್ತು ಹಲವು ಉಪನದಿಗಳ ಹಾಗೂ ಹಳ್ಳದ ತೀರದಲ್ಲಿಯೂ ಕೋಟೆಗಳು ನಿರ್ಮಾಣಗೊಂಡಿವೆ. ಹೀಗಾಗಿ ಕರ್ನಾಟಕದ ಪ್ರಾಚೀನ ಕೋಟೆಯ ಇತಿಹಾಸ ಗುಲಬರ್ಗಾ ಜಿಲ್ಲೆಯಿಂದ ಪ್ರಾರಂಭವಾಗುತ್ತದೆ.

[illegible]

೩.೭. ಗುಲಬರ್ಗಾ ಜಿಲ್ಲೆಯ ಕೋಟೆಗಳು:

ಗುಲಬರ್ಗಾ ಜಿಲ್ಲೆಯ ಕೋಟೆಯ ಇತಿಹಾಸ ಶಾತವಾಹನರ ಕಾಲದಿಂದ ಪ್ರಾರಂಭವಾಗುತ್ತದೆ. "ಸನ್ನತ್ತಿ"ಯಲ್ಲಿ ಶಾತವಾನರು ತಮ್ಮ ಪ್ರದೇಶದ ಸುತ್ತಲು ರಕ್ಷಣಾಗೋಡೆ ಅಥವಾ ಕೋಟೆಯನ್ನು ನಿರ್ಮಿಸಿಕೊಂಡರು.[೫೫] ಈ ಕೋಟೆಯು ಕರ್ನಾಟಕದ ಪ್ರಾಚೀನ ಕೋಟೆಗಳಲ್ಲಿ ಮೊದಲನೆಯದಾಗಿದೆ. ಭೀಮಾ ನದಿಯು ಇಲ್ಲಿ "U" ಆಕಾರದಲ್ಲಿ ತಿರುಗುವುದರಿಂದ ಅದಕ್ಕೆ ಅನುಗುಣವಾಗಿ ಕೋಟೆಯನ್ನು ನಿರ್ಮಿಸಲಾಗಿದೆ.[೫೬] ಭೀಮಾ ನದಿಯು ರಣಮಂಡಲದ ಪಶ್ಚಿಮ ಉತ್ತರ ಮತ್ತು ದಕ್ಷಿಣ ಭಾಗಗಳಿಂದ ಸುತ್ತುವರಿದಿದೆ. ಗ್ರಾಮವನ್ನು ನದಿಯ ಪ್ರವಾಹದಿಂದ ರಕ್ಷಿಸಲು ಎರಡು ಗೋಡೆಗಳನ್ನು ನಿರ್ಮಿಸಲಾಗಿದೆ. ಈ ಕೋಟೆಯು ಸುಮಾರು ೫೦೦ ಎಕರೆ ಪ್ರದೇಶ ಆವರಿಸಿಕೊಂಡಿದೆ.[೫೭] ಹೊರ ಕೋಟೆಯು ೬ ಮೀಟರ ಎತ್ತರ, ೨ ರಿಂದ ೩ ಮೀ ಅಗಲವಾಗಿದೆ. ಇಟ್ಟಿಗೆಗಳ ಗಾತ್ರ ೫೫x೨೮x೯ ಸೇ.ಮಿ. ಆಗಿವೆ. ಈ ಕೋಟೆಯು ಇಂದಿನ ಸನ್ನತ್ತಿ ಗ್ರಾಮದ ಪೂರ್ವ ಹಾಗೂ ಉತ್ತರ ದಿಕ್ಕಿನಲ್ಲಿದೆ. ಕೋಟೆಗೆ ಸಂಬಂಧಿಸಿದಂತೆ ಅಲ್ಲಲ್ಲಿ ಅದರ ಅವಶೇಷಗಳು ಲಭ್ಯವಾಗಿವೆ. ಕೋಟೆಯು ಸಂಪೂರ್ಣವಾಗಿ ಮಣ್ಣಿನಲ್ಲಿ ಮುಚ್ಚಿ ಹೋಗಿರುವುದರಿಂದ ಉತ್ಖನನದಲ್ಲಿ ಹೆಚ್ಚಿನ ವಿಷಯಗಳು ಬೆಳಕಿಗೆ ಬರುತ್ತವೆ.[೫೮] ಹೀಗೆ ಗುಲಬರ್ಗಾ ಜಿಲ್ಲೆಯ ಕೋಟೆಯ ಇತಿಹಾಸ ಶಾತವಾಹನರಿಂದ ಆರಂಭವಾಗುತ್ತದೆ. ಕಾಲಕ್ರಮೇಣ ಮುಂದಿನ ದಿನಗಳಲ್ಲಿ ಎಲ್ಲಾ ಬಗೆಯ ಕೋಟೆಗಳು ನಿರ್ಮಾಣಗೊಂಡವು.

ಕರ್ನಾಟಕದ ಪ್ರಾಚೀನ ಕೋಟೆಗಳಲ್ಲಿ ಒಂದಾಗಿರುವ ಮಳಖೇಡ ಕೋಟೆಯು ಪ್ರಮುಖ ಕೋಟೆಗಳಲ್ಲಿ ಒಂದಾಗಿದೆ.[೫೯] ಕ್ರಿ.ಶ. ೮ನೆಯ ಶತಮಾನದಿಂದ ೧೦ನೆಯ ಶತಮಾನದವರೆಗೆ ಆಳ್ವಿಕೆ ಮಾಡಿರುವ ಮಾನ್ಯಖೇಡದ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿಸಿರುವ ಕೋಟೆಯು ಇಂದಿನ ಸೇಡಂ ತಾಲೂಕಿನ ಮಳಖೇಡದಲ್ಲಿದೆ.[೬೦] ಈ ಕೋಟೆಯು ಚೋಳರ ಮತ್ತು ಮುಸ್ಲಿಂರ ದಾಳಿಯಿಂದ ಅಲ್ಲಲ್ಲಿ ಅವನತಿ ಹೊಂದಿದರೂ, ಕೆಲವು ಭಾಗಗಳು ಸುಸ್ಥಿತಿಯಲ್ಲಿವೆ. ಎರಡು ಸುತ್ತಿನ ಗೋಡೆಯ ಕೋಟೆಯ ಒಳ ಗೋಡೆಯು ಸಂಪೂರ್ಣವಾಗಿರದೆ. ಅಲ್ಲಲ್ಲಿ ಅವನತಿ ಹೊಂದಿದರೂ, ಅದರ ಮುಂಭಾಗ ಸುಸ್ಥಿತಿಯಲ್ಲಿದೆ. ಎರಡು ಸುತ್ತಿನ ಈ ಕೋಟೆಯ ಒಳಗೋಡೆಯು ಸಂಪೂರ್ಣವಾಗಿರದೆ ಕೆಲವು ಭಾಗಗಳಲ್ಲಿ ಮಾತ್ರ ನಿರ್ಮಿಸಲಾಗಿದೆ ನಾಶ ಹೊಂದಿದೆ.೩ ಅಲ್ಲದೆ ಅವಶ್ಯಕತೆ ಇರುವ ಕಡೆಗಳಲ್ಲಿ ಮಾತ್ರ ಹೊರಗೋಡೆಯನ್ನು ನಿರ್ಮಿಸಲಾಗಿದೆ. ಏಕೆಂದರೆ ಕಾಗಿಣಾ ನದಿಯು ಒಳಕೋಟೆಯ ಸಮೀಪದಲ್ಲಿ ಹರಿಯುತ್ತದೆ. ಪಶ್ಚಿಮ ಭಾಗದಲ್ಲಿ ಮತ್ತೊಂದು ಹಳ್ಳ ಹರಿಯುತ್ತದೆ. ಆದ್ದರಿಂದ ಈ ಕೋಟೆಯು ನೈಸರ್ಗಿಕವಾಗಿ ನದಿಯ ನೀರಿನಿಂದ ಆವೃತ್ತವಾಗಿವೆ. ಕೋಟೆಯ ಒಳಗಡೆ ಹಲವು ರಕ್ಷಣಾಸಂಬಂಧಿ ಸ್ಮಾರಕಗಳಿವೆ. ಅವುಗಳಲ್ಲಿ ಹೆಚ್ಚಿನ ಕಟ್ಟಡಗಳು ಅವನತಿ ಹೊಂದಿವೆ. ಪ್ರಸ್ತುತ ಇಲ್ಲಿ ಕಾವಲುಗೋಪುರ, ದ್ವಾರ ಬಾಗಿಲುಗಳು, ಪ್ರಾರ್ಥನಾಲಯ ಮತ್ತು ಸೈನಿಕರ ವಸತಿ ನಿಲಯಗಳು ಮಾತ್ರ ಉಳಿದುಕೊಂಡಿವೆ.

ಬಹಮನಿ ಸುಲ್ತಾನರು ಈ ಪ್ರದೇಶವನ್ನು ವಶಪಡಿಸಿಕೊಂಡು ಇಲ್ಲಿಯ ಮೂಲ ಕೋಟೆಯನ್ನು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಪುನರ್‌ನಿರ್ಮಿಸಿಕೊಂಡರು. ಅದರಲ್ಲಿ ವಿಶೇಷವಾಗಿ ಇಸ್ಲಾಂಶೈಲಿಯ 'ಕಾಲಿಮಸೀದಿಯು' ಪ್ರಮುಖ ಕಟ್ಟಡವಾಗಿದೆ.[೬೨] ಹೀಗೆ ಜಿಲ್ಲೆಯಲ್ಲಿ ಎರಡನೆಯ ಹಂತದಲ್ಲಿ ಹಲವು ಕೋಟೆಗಳು ರಚನೆಗೊಂಡವು.

ಜಿಲ್ಲೆಯ ಶಹಪೂರ ತಾಲೂಕಿನ ಸಗರದಲ್ಲಿರುವ ಕೋಟೆಯನ್ನು ಮೂಲತ: ಸಗರ ಚಕ್ರವರ್ತಿಯು ಕಟ್ಟಿಸಿದನೆಂದು ಪೌರಾಣಿಕ ನಂಬಿಕೆ ಇದೆ.[೬೩] ಮಣ್ಣಿನಿಂದ ನಿರ್ಮಿಸಿರುವ ಈ ಕೋಟೆಯ ಅವಶೇಷಗಳು ಲಭ್ಯವಾಗಿವೆ. ಪ್ರಾಚೀನ ಗ್ರಾಮವನ್ನು ಸುತ್ತುವರೆದ ಈ ಕೋಟೆಗೆ ಹಳ್ಳದ ರಕ್ಷಣೆ ಇದೆ.

ಗುಲಬರ್ಗಾ ಜಿಲ್ಲೆಯಲ್ಲಿ ಬಹಮನಿಯ ಆಳ್ವಿಕೆಯ ಪೂರ್ವದಲ್ಲಿ ಕೆಲವೆ ಕೋಟೆಗಳು ನಿರ್ಮಾಣಗೊಂಡಿವೆ. ಅವುಗಳಲ್ಲಿ ಸೇಡಂ, ಯಾದಗಿರ, ಅಳ್ಳೊಳ್ಳಿ, ಲಾಡಲಾಪುರ, ಗುಲಬರ್ಗಾದ ಮೂಲ ಕೋಟೆ ಮುಂತಾದವುಗಳು ಗುಲಬರ್ಗಾದಲ್ಲಿ ಅಧಿಕಾರಕ್ಕೆ ಬಂದ ಬಹಮನಿಯ ಸುಲ್ತಾನರು ಜಿಲ್ಲೆಯ ಹಲವೆಡೆ ಕೋಟೆಗಳನ್ನು ನಿರ್ಮಿಸಿದರು.[೬೪] ಅವುಗಳಲ್ಲಿ ಗುಲಬರ್ಗಾ, ಫಿರೋಜಾಬಾದ, ಫರಹತಾಬಾದ, ಹೊಳಕುಂದಾ, ಸುಲ್ತಾನಪುರ, ಮಳಖೇಡ, ಯಾದಗೀರ, ಬೀದರ, ರಾಯಚೂರು, ಮುಂತಾದ ಕಡೆಗಳಲ್ಲಿ ಬಲಾಢ್ಯವಾದ ಕೋಟೆಗಳನ್ನು ಅಲ್ಲಿಯ ಪರಿಸರಕ್ಕೆ ಅನುಗುಣವಾಗಿ ನಿರ್ಮಿಸಿದರು. ಮತ್ತೆ ಕೆಲವು ಕೋಟೆಗಳನ್ನು ಪುನರ್‌ನಿರ್ಮಾಣಗೊಳಿಸಿದರು. ಬಹಮನಿಯರ ನಂತರದಲ್ಲಿಯೂ ಹಲವು ಕೋಟೆಗಳು ಬೆಳೆದು ಬಂದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಶಹಾಪೂರ, ಸುರಪುರ, ವಾಗಣಗೇರಿ, ರಾಯನಪಾಳ್ಯ, ವನದುರ್ಗ, ಇಜೇರಿ, ಚಿನ್ಮಳ್ಳಿ ಮುಂತಾದವುಗಳು.[೬೫] ಈ ಕೋಟೆಗಳ ನಿರ್ಮಾಣದಲ್ಲಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಲಾಯಿತು. ಯಾದಗಿರ ಪ್ರದೇಶದಲ್ಲಿ ಆಳ್ವಿಕೆ ಮಾಡಿರುವ ಕಾಕಲ್‌ವಾರದ ದೇಸಾಯಿಗಳು ತಮ್ಮ ನಗರಗಳ ರಕ್ಷಣೆಗಾಗಿ ಮಣ್ಣಿನ ಕೋಟೆಗಳನ್ನು ನಿರ್ಮಿಸಿಕೊಂಡರು. ಅವುಗಳಲ್ಲಿ ಕಾಕಲ್‌ವಾರ ಕೋಟೆ, ಚಂಡ್ರಕಿ, ಪುಟ್‌ಪಾಗ್, ಇಟಕಲ್, ಗಾಜರ್‌ಕೋಟ್ ಮುಂತಾದವುಗಳು ಜಿಲ್ಲೆಯ ವಿಶೇಷ ಕೋಟೆಗಳಾಗಿವೆ.[೬೬]

ಕೋಟೆಗಳನ್ನು ಹೊರತು ಪಡಿಸಿ ಜಿಲ್ಲೆಯ ಹಲವು ಭಾಗಗಳಲ್ಲಿ ಗ್ರಾಮಗಳ ರಕ್ಷಣೆಗಾಗಿ ಕಾವಲುಗೋಪುರ ಅಥವಾ ಹುಡೆವುಗಳನ್ನು ನಿರ್ಮಿಸಲಾಗಿದೆ.[೬೭] ೧೭ನೆಯ ಶತಮಾನದಿಂದ ೧೯ನೆ ಶತಮಾನದ ಪೂರ್ವ ಭಾಗದಲ್ಲಿ ಜಿಲ್ಲೆಯ ಚಿತ್ತಾಪೂರ, ಜೇವರ್ಗಿ, ಸುರಪುರ, ಅಫಜಲ್‌ಪುರ, ಆಳಂದ ತಾಲೂಕುಗಳಲ್ಲಿ ಹಲವು ಬಗೆಯ ಹುಡೆವುಗಳು ನಿರ್ಮಾಣಗೊಂಡವು.[೬೮] ಇವುಗಳ ರಚನೆಯಲ್ಲಿ ಕೋಟೆಯ ಪ್ರಭಾವ ಉಂಟಾಗಿರುವುದು ಕಂಡು ಬರುತ್ತವೆ. ಹುಡೆವುಗಳನ್ನು ಹೊರತು ಪಡಿಸಿ, ಗ್ರಾಮಗಳ ರಕ್ಷಣೆಗಾಗಿ, ಅಗಸಿ, ಗ್ರಾಮ ರಕ್ಷಣಾ ಗೋಡೆ ಮತ್ತು ಇನ್ನಿತರ ಕಟ್ಟಡಗಳು ನಿರ್ಮಾಣಗೊಂಡಿವೆ. ಹೀಗೆ ರಕ್ಷಣೆಯ ದೃಷ್ಟಿಯಿಂದ ಗುಲಬರ್ಗಾ ಜಿಲ್ಲೆಯಲ್ಲಿ ಶಾತವಾಹನರಿಂದ ೧೯ನೆಯ ಶತಮಾನದವರೆಗೆ ನಿರ್ಮಿಸಿರುವ ಕೋಟೆ, ಕಾವಲುಗೋಪುರಗಳು, ಹುಡೆವು, ಅಗಸಿ, ಗ್ರಾಮ ರಕ್ಷಣಾ ಗೋಡೆಗಳು ನಿರ್ಮಾಣಗೊಂಡಿವೆ.

೨.೮. ಕೋಟೆಯ ಲಕ್ಷಣಗಳು:

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನಿರ್ಮಾಣಗೊಂಡ ಕೋಟೆಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳು ಕಂಡು ಬರುತ್ತವೆ. ಅವುಗಳ ಕುರಿತು ಶಾಸನ ಹಾಗೂ ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ. 'ಕೋಟೆಯ ರಚನೆ' ಕುರಿತು ಇರುವ ಕೃತಿಗಳಲ್ಲಿ ಬುನಾದಿಯಿಂದ ಗೋಡೆಯ ಎತ್ತರ, ದಪ್ಪ ಹಾಗೂ ಒಳಗಡೆ ಯಾವ ಯಾವ ದಿಕ್ಕಿನಲ್ಲಿ ಎಂತಹ ಕಟ್ಟಡಗಳಿರಬೇಕೆಂದು ಉಲ್ಲೇಖಿಸಲಾಗಿದೆ. ಪ್ರತಿಯೊಂದು ಕೋಟೆಯಲ್ಲಿ ಕಂಡು ಬರುವ ಸಾಮಾನ್ಯ ಲಕ್ಷಣಗಳನ್ನು ಕುರಿತು ತುಲನಾತ್ಮಕವಾಗಿ ಅಧ್ಯಯನ ಕೈಗೊಂಡು ಅವುಗಳ ಹುಟ್ಟು ಮತ್ತು ಬೆಳವಣಿಗೆಗಳನ್ನು ಕುರಿತು ಹೆಚ್ಚಿನ ಮಾಹಿತಿ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ರಕ್ಷಣಾ ವಾಸ್ತುಶಿಲ್ಪಗಳಲ್ಲಿ ಪ್ರಮುಖ ಪಾತ್ರ ವಹಿಸಿರುವ ಕೋಟೆಗಳು ಸಾಮಾನ್ಯವಾಗಿ ಈ ಕೆಳಗಿನ ಲಕ್ಷಣಗಳನ್ನು ಹೊಂದಿರುತ್ತವೆ.

೧. ಆಳ್ವೇರಿ (ಕೋಟೆಯ ಗೋಡೆ)

೨. ಪರಿಕೆ (ಕಂದಕ ಅಥವಾ ತೆಗ್ಗಾದ ಭಾಗ)

೩. ಕೋಟೆಯ ತೆನೆ (ಕೋಟೆ ಗೋಡೆಯ ಮೇಲಿನ ವೃತ್ತಾಕಾರದ ರಚನೆ)

೪. ದ್ವಾರ ಬಾಗಿಲುಗಳು

೫. ಗುಪ್ತ ದ್ವಾರಗಳು (ದಿಡ್ಡಿ ಬಾಗಿಲು)

ಈ ಎಲ್ಲಾ ಅಂಗಾಂಗಗಳನ್ನು ಹೊಂದಿರುವ ರಕ್ಷಣಾ ಕಟ್ಟಡವನ್ನು ಕೋಟೆ ಎಂದು ಕರೆಯಲಾಗಿದೆ.

೩.೮.೧. ಕೋಟೆ ಗೋಡೆ:

ಕೋಟೆ ಗೋಡೆಗೆ ಕನ್ನಡ ಪರಿಷತ್ತನ ನಿಘಂಟಿನಲ್ಲಿ "ಕೋಟೆಯ ಸುತ್ತಣ ಗೋಡೆ" ಎಂದು ಅರ್ಥವಿದೆ. ಕೋಟೆಯ 'ಗೋಡೆಗೆ' ಪ್ರಕಾರ 'ಶಾಲ' 'ಆಳ್ವೇರಿ' ಎಂಬ ಹೆಸರುಗಳಿವೆ. "ಆಳ್ವೇರಿ" ಪದವು ಕೋಟೆಯ ಗೋಡೆಯನ್ನು ಸೂಚಿಸುತ್ತದೆ. ಕೋಟೆಯ ನಿರ್ಮಾಣಕ್ಕೆ ಬಳಸುವ ವಿದ್ಯೆಯನ್ನು 'ಸಾಲವಿದ್ಯೆ' ಎಂದು ಕರೆಯುತ್ತಾರೆ.[೬೯]

ಕೋಟೆಯ ಗೋಡೆಯ ರಚನೆಗೆ ಹೋಲುವಂತೆ ದ್ವಾರಬಾಗಿಲುಗಳು, ಕಾವಲುಗೋಪುರ, ವೀಕ್ಷಣಾರಂಧ್ರಗಳು, ತೆನೆಗಳು, ಗುಪ್ತದ್ವಾರಗಳು, ನೀರಿನ ಆಶ್ರಯ ಸ್ಥಳಗಳು ಮತ್ತು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಸುತ್ತಿನ ಗೋಡೆಗಳು ಮತ್ತು ರಕ್ಷಣಾಸಂಬಂಧಿ ಇತರ ಕಟ್ಟಡಗಳನ್ನು ಕೋಟೆಯ ಗೋಡೆ ಹೊಂದಿರುತ್ತದೆ. ರಕ್ಷಣೆಯ ಗೋಡೆಯನ್ನು 'ಮಹಾಶಾಲ', 'ಪ್ರತಿಶಾಲ' ಮತ್ತು 'ರಕ್ಷಣಾಶಾಲ'ಗಳೆಂದು ಕರೆಯಲಾಗಿದೆ.[೭೦] ರಕ್ಷಣಾ ಗೋಡೆಯನ್ನು ಮಣ್ಣು, ಇಟ್ಟಿಗೆ, ಕಲ್ಲು ಹಾಗೂ ಸಮಿಶ್ರ ವರ್ಣದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಪ್ರಾಚೀನ ಸಾಹಿತ್ಯಗಳಲ್ಲಿ ಉಲ್ಲೇಖಿಸಿರುವಂತೆ

ಕೋಟೆಯ ಗೋಡೆಯು ಎತ್ತರ, ಅಗಲ, ದಪ್ಪ ಹಾಗೂ ತಳಪಾಯಗಳನ್ನು ನಿರ್ಮಿಸಲಾಗಿದೆ. ಕೋಟೆಯ ಗೋಡೆಯ ಮೇಲ್ಭಾಗದಲ್ಲಿ ಆನೆ, ಕುದುರೆ, ಒಂಟೆ, ಹುಲಿ, ಹಾವು, ಮೀನು, ಸೈನಿಕರು, ಮುಂತಾದವುಗಳ ಶಿಲ್ಪಗಳನ್ನು ಬಳಸಬೇಕೆಂದು ಹಲವು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ವಿಶ್ವಕರ್ಮನು ಕೋಟೆಯ ಯಾವ ಗೋಡೆಯು ಎಷ್ಟು ಎತ್ತರವಾಗಿರಬೇಕು ಹಾಗೂ ಎರಡು ಗೋಡೆಗಳ ಮಧ್ಯದಲ್ಲಿ ಎಷ್ಟು ಅಂತರವಿರಬೇಕೆಂದು ಹೇಳಿದ್ದಾನೆ. ಈ ಎಲ್ಲಾ ಅಂಶಗಳು ನಾವು ಗುಲಬರ್ಗಾ ಜಿಲ್ಲೆಯ ಹೆಚ್ಚಿನ ಕೋಟೆಗಳಲ್ಲಿ ಕಾಣುತ್ತೇವೆ. ಗುಲಬರ್ಗಾ ಕೋಟೆ ಗೋಡೆಯ ಮೇಲೆ ಆನೆ, ಸಿಂಹ, ಸಾರಂಗ, ಮೀನಿನ ಚಿತ್ರಗಳು ಕಂಡು ಬರುತ್ತವೆ. ಹಾಗೆಯೆ, ಸುರಪುರ ಕೋಟೆಯ ಒಂದು ಪ್ರವೇಶದ್ವಾರದ ಮೇಲೆ ಕುದುರೆ, ಮೀನು, ಹಾವು, ಸೈನಿಕರು ಮುಂತಾದ ಶಿಲ್ಪಗಳಿವೆ.[೭೧]

ಪ್ರಾರಂಭದಲ್ಲಿ ಮಣ್ಣಿನ ಕೋಟೆ ಗೋಡೆಯನ್ನು ನಿರ್ಮಿಸಲಾಗುತ್ತಿತ್ತು. ಆದರೆ ಕಾಲಕ್ರಮೇಣ ಅವುಗಳು ರಕ್ಷಣಾತ್ಮಕವಾಗಿ ಕಂಡು ಬರದಿದ್ದಾಗ ಇಟ್ಟಿಗೆಯ ಕೋಟೆ ಗೋಡೆಯನ್ನು ನಿರ್ಮಿಸಲಾಯಿತು. ಆದರೆ ಈ ಕೋಟೆಯು ಕೋಟೆಕಾಳಗದಲ್ಲಿ ಮಹತ್ವದ ಪಾತ್ರ ವಹಿಸಲಿಲ್ಲ. ಆದ್ದರಿಂದ ಕಲ್ಲಿನ ಕೋಟೆಗಳ ನಿರ್ಮಾಣ ಆರಂಭವಾಯಿತು. ಮಧ್ಯಯುಗದಲ್ಲಿ ಫಿರಂಗಿಗಳ ಬಳಕೆ ಆರಂಭವಾದಾಗ ಗೋಡೆಗಳ ದಪ್ಪ ಹಾಗೂ ಎತ್ತರವನ್ನು ವಿಸ್ತರಿಸಲಾಯಿತು. ಕೆಲವು ಅನಿವಾರ್ಯ ಸಂದರ್ಭದಲ್ಲಿ ಮತ್ತೆ ಮಣ್ಣಿನ ಗೋಡೆ ನಿರ್ಮಿಸಲಾಯಿತು. ಇದೆ ಕ್ರಮದಲ್ಲಿ ಗುಲಬರ್ಗಾ ಜಿಲ್ಲೆಯ ಕೋಟೆಗಳಿವೆ. ಪುರಾಣಗಳ ಕಾಲದ ಸಗರ ಚಕ್ರವರ್ತಿಯ ಕೋಟೆ ಎಂದು ಗುರುತಿಸಿರುವ ಮಣ್ಣಿನ ಕೋಟೆಯ ಅವಶೇಷಗಳು ಸಗರದಲ್ಲಿ ದೊರೆತಿವೆ.[೭೨] ಕ್ರಿ.ಪೂ. ೧–೨ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಇಟ್ಟಿಗೆಯ ಕೋಟೆಯು ಸನ್ನತ್ತಿ, ಗೊಟ್ಟಂ ಗೊಟ್ಟಾಗಳಲ್ಲಿವೆ. ರಾಷ್ಟ್ರಕೂಟರ ಕಾಲದಿಂದ ಸುರಪುರ ನಾಯಕರವರೆಗೆ ಆಳಿರುವ ಅರಸರು ಕಲ್ಲಿನ ಗೋಡೆಗಳನ್ನು ನಿರ್ಮಿಸಿದರು. ಕೊನೆಯ ಹಂತದಲ್ಲಿ ಕಾಕಲ್‌ವಾರ ದೇಸಾಯಿಗಳ ಕಾಲಕ್ಕೆ ಹಲವು ಮಣ್ಣಿನ ಕೋಟೆಗಳು ಗುರುಮಿಟಕಲ್ ಸುತ್ತಮುತ್ತಲು ನಿರ್ಮಾಣಗೊಂಡಿವೆ.

ಗೋಡೆಯು ತಳಭಾಗದಲ್ಲಿ ದಪ್ಪವಾಗಿದ್ದು ಒರಟು ಕಲ್ಲಿನಿಂದ ನಿರ್ಮಿಸಲಾಗುತ್ತದೆ. ಮೇಲೆ ಹೋದಂತೆ ಕಿರಿದಾಗುತ್ತಾ ಕೊನೆಯ ಹಂತದಲ್ಲಿ ತೆನೆಯ ನಿರ್ಮಾಣದೊಂದಿಗೆ ಗೋಡೆಯು ಅಂತ್ಯಗೊಳ್ಳುತ್ತದೆ. ಕೋಟೆ ಗೋಡೆಯ ರಚನೆಯಲ್ಲಿ ಮೂರು ಹಂತಗಳಾಗಿ ವಿಂಗಡಿಸಬಹುದು. ಕೆಳಹಂತ, ಮಧ್ಯದ ಹಂತ ಮತ್ತು ಅಂತಿಮ ಹಂತ ಗೋಡೆಯ ತಳಭಾಗವು ಅತ್ಯಂತ ವಿಶಾಲವಾಗಿದ್ದು ೧೦ ರಿಂದ ೧೫ ಅಡಿ ದಪ್ಪವಾಗಿರುತ್ತದೆ. ಎರಡು ಕಡೆಗೆ ಗೋಡೆಯನ್ನು ನಿರ್ಮಿಸಿ ಮಧ್ಯದಲ್ಲಿ ಕಲ್ಲು-ಮಣ್ಣು ತುಂಬಿ ಗೋಡೆಯ ದಪ್ಪವನ್ನು ಹೆಚ್ಚಿಸಲಾಗುತ್ತದೆ. ದಪ್ಪನೆಯ ಗೋಡೆಯ ಒಳಗಡೆ ಕೆಲವು ಭಾಗಗಳಲ್ಲಿ ಸೈನಿಕರ ತಂಗುದಾಣಗಳಿರುತ್ತವೆ. ಆದ್ದರಿಂದ ಗೋಡೆಯು ದಪ್ಪವಾಗಿ ರಚಿಸಲಾಗಿದೆ. ಇಂತಹ ರಚನೆಯು

ಸಾಮಾನ್ಯವಾಗಿ 'ಸ್ಥಳ' ದುರ್ಗದಲ್ಲಿ ಕಂಡು ಬರುತ್ತದೆ. ಕೆಲವು ಕೋಟೆಗಳು ಎರಡು, ಮೂರು ಸುತ್ತಿನ ಗೋಡೆಯನನು ಹೊಂದಿರುತ್ತವೆ. ಹೊರಗೋಡೆಗಿಂತ ಒಳಗೋಡೆಗಳು ಎತ್ತರವಾಗಿ ಮತ್ತು ದಪ್ಪವಾಗಿರುತ್ತವೆ.

೧೪ನೇ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಮದ್ದು ಗುಂಡುಗಳ ಬಳಕೆಯನ್ನು ಜಾರಿಗೆ ತಂದವರು ಗುಲಬರ್ಗಾದ ಬಹಮನಿ ಸುಲ್ತಾನರು. ಯುದ್ಧ ಪದ್ಧತಿಯಲ್ಲಿ ಸಿಡಿಮದ್ದಿನ ಬಳಕೆ ಆರಂಭವಾದಾಗ ಕೋಟೆ ಗೋಡೆ ದಪ್ಪ ಹಾಗೂ ಎತ್ತರ ಹೆಚ್ಚಿಸಲಾಯಿತು. ಇದರಿಂದ ಕೋಟೆಯ ಕಾಳಗದಲ್ಲಿ ಕೋಟೆಯನ್ನು ಭೇದಿಸುವುದು ಅಸಾಧ್ಯವಾಯಿತು.[೭೩] ಇದೆ ಹಿನ್ನೆಲೆಯಲ್ಲಿ ಜಿಲ್ಲೆಯ ಇತರ ಕೋಟೆಗಳು ಪುನರ್‌ನಿರ್ಮಾಣಗೊಂಡವು. ಈ ರೀತಿ ಪುನರ್‌ನಿರ್ಮಾಣದ ಅಂಶಗಳು ಗುಲಬರ್ಗಾ ಕೋಟೆಯಲ್ಲಿ ಗುರುತಿಸಲಾಗಿದೆ. ೧೬ನೆಯ ಶತಮಾನದಿಂದ ೧೯ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಕೋಟೆಯ ಗೋಡೆಯನ್ನು ನುಣುಪಾಗಿ ಕಟೆದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಕೋಟೆಯ ಗೋಡೆಗಳ ದಪ್ಪ ಮತ್ತೆ ಕಡಿಮೆಯಾಯಿತು.[೭೪] ಕಾಲದಿಂದ ಕಾಲಕ್ಕೆ ಕೋಟೆ ಗೋಡೆಯ ದಪ್ಪ ಮತ್ತು ಎತ್ತರದಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ. ಕೋಟೆಗಳ ಒಳಭಾಗದಲ್ಲಿ ಗೋಡೆಗಳು ಎಷ್ಟು ಇರಬೇಕೆಂದು 'ಕೋಟೆಗಳ ನಿರ್ಮಾಣ' ಎನ್ನುವ ಕೃತಿಯಲ್ಲಿ ಜಗದೀಶ ಅಯ್ಯರರವರು ವಿವರಿಸಿದ್ದಾರೆ.[೭೫] ಕೋಟೆಯ ಗೋಡೆಯ ಸುತ್ತಲು ಹಲವು ಬಗೆಯ ವೀಕ್ಷಣಾ ರಂಧ್ರಗಳಿರುತ್ತವೆ. ಅದರಲ್ಲಿ ಅಂಬುಗಿಂಡಿಗಳು, ಗೋಡೆಯ ಹೊರಭಾಗಕ್ಕೆ ವೃತ್ತಾಕಾರದಲ್ಲಿ ಚಾಚಿಕೊಂಡಿರುತ್ತವೆ. ಈ ರೀತಿ ಕೋಟೆ ಗೋಡೆಯ ಹಲವು ಬಗೆಯ ರಕ್ಷಣಾ ಸಂಬಂಧಿ ಅಂಶಗಳನ್ನು ಒಳಗೊಂಡಿರುತ್ತದೆ.

೩.೮.೨. ದ್ವಾರಬಾಗಿಲುಗಳು:

ರಾಜ್ಯದ ರಾಜ್ಯಧಾನಿಗಳು, ಪ್ರಮುಖ ಪಟ್ಟಣಗಳು ಹಾಗೂ ಗ್ರಾಮಗಳ ರಕ್ಷಣೆಯಲ್ಲಿ ದ್ವಾರಬಾಗಿಲುಗಳು ಪಾತ್ರ ಅತ್ಯಂತ ಪ್ರಮುಖವಾಗಿದೆ. ಕೋಟೆ ಎಷ್ಟು ಭದ್ರವಾಗಿರುತ್ತದೆಯೋ ಅದರ ದ್ವಾರಬಾಗಿಲುಗಳು ಅಷ್ಟೆ ಭದ್ರವಾಗಿರುತ್ತವೆ. ಸಾಮಾನ್ಯವಾಗಿ ಪ್ರತಿಯೊಂದು ಕೋಟೆಗೆ ಎರಡು ಪ್ರಮುಖ ದ್ವಾರಗಳು ಹಾಗೂ ಹಲವು ಗುಪ್ತ ದ್ವಾರಗಳಿರುತ್ತವೆ. ಕೋಟೆ ರಚನಾ ಶಾಸ್ತ್ರದಂತೆ ಈ ದ್ವಾರಗಳು ವಾಸ್ತುಶಾಸ್ತ್ರದ ಪ್ರಕಾರ ಸೂಕ್ತವಾದ ದಿಕ್ಕಿನಲ್ಲಿ ರಚಿಸಲಾಗುತ್ತದೆ[೭೬]. ಒಂದು ವೇಳೆ ದ್ವಾರಗಳು ವಾಸ್ತುಶಾಸ್ತ್ರದ ಪ್ರಕಾರ ಇರದೆ ಹೋಗಿದ್ದರೆ, ಅಂತಹ ದ್ವಾರಗಳನ್ನು ಮುಚ್ಚಿ, ಸೂಕ್ತ ಸ್ಥಳದಲ್ಲಿ ಹೊಸ ದ್ವಾರಗಳನ್ನು ತೆಗೆದಿರುವ ಹಲವು ಉದಾಹರಣೆಗಳಿವೆ. ದ್ವಾರಗಳ ಕಡೆಗೆ ವಿಶೇಷ ಗಮನ ಹರಿಸಿ ಹೆಚ್ಚಿನ ಭದ್ರತೆಯನ್ನು ಒದಗಿಸಲಾಗುತ್ತದೆ. ಪ್ರತಿಯೊಂದು ಐತಿಹಾಸಿಕ ಹಿನ್ನೆಲೆ ಹೊಂದಿರುವ ಪಟ್ಟಣಗಳ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಿ, ಸೂಕ್ತ ದಿಕ್ಕಿನಲ್ಲಿ ದ್ವಾರಗಳನ್ನು ಬಿಡಲಾಗುತ್ತದೆ. ಈ ದ್ವಾರಗಳು ಶತ್ರುಗಳಿಗೆ ಸರಳವಾಗಿ ಕಾಣದಂತೆ ಇವುಗಳ ಮುಂಭಾಗದಲ್ಲಿ ತಡೆ ಗೋಡೆಗಳನ್ನು ನಿರ್ಮಿಸಲಾಗುತ್ತದೆ. ಪ್ರತಿಯೊಂದು ಗ್ರಾಮಗಳ ಪ್ರವೇಶಕ್ಕೆ ಒಂದು ದ್ವಾರವನ್ನು ನಿರ್ಮಿಸಲಾಗುತ್ತದೆ. ಅದನ್ನು 'ಅಗಸಿ' ಎಂದು

[illegible]

ಕರೆಯುತ್ತಾರೆ[೨೨]. ಇವುಗಳು ಕಮಾನಿನ ಆಕಾರದಲ್ಲಿ ಅಥವಾ ಚೌಕಾಕಾರದಲ್ಲಿ ಇರುತ್ತವೆ. ಇದರ ಒಳ ಹಾಗೂ ಹೊರ ಭಾಗದಲ್ಲಿ ಭದ್ರವಾದ ರಕ್ಷಣಾ ವ್ಯವಸ್ಥೆ ಇರುತ್ತದೆ. ಇನ್ನೂ ಕೆಲವು ಕಮಾನುಗಳಿಗೆ ಬಾಗಿಲುಗಳನ್ನು ಜೋಡಿಸಲಾಗಿದೆ. ಗ್ರಾಮಸ್ಥರ ರಕ್ಷಣೆಗಾಗಿ ಈ ರೀತಿಯ ದ್ವಾರಗಳನ್ನು ರಚಿಸುವುದು ಒಂದು ಪ್ರಾಚೀನ ಪರಂಪರೆಯಾಗಿದೆ.

ಮಂಗೋಲರ ದಾಳಿಯ ಭೀತಿಯಿಂದ ಬಲ್ಬನನ ಗಡಿ ರಾಜ್ಯಗಳಾದ ಮುಲ್ತಾನ, ಲಾಹೋರ, ಉಚ್ ಮುಂತಾದ ಭಾಗಗಳಲ್ಲಿ ಭದ್ರವಾದ ಕೋಟೆಯನ್ನು ನಿರ್ಮಿಸಿ, ಅದರ ರಕ್ಷಣೆಗಾಗಿ ಶೇರಖಾನ ಎಂಬ ಶ್ರೇಷ್ಠ ಸೇನಾ ನಾಯಕನನ್ನು ನೇಮಿಸಿದ.[೨೮] ಅದೇ ರೀತಿ ಎಲ್ಲಾ ಪ್ರಮುಖ ನಗರಗಳಲ್ಲಿ ಮಧ್ಯಾಹ್ನದ ಪ್ರಾರ್ಥನೆಯ ನಂತರ ದ್ವಾರವನ್ನು ಮುಚ್ಚುತ್ತಿದ್ದರು, ಏಕೆಂದರೆ ಗಂಡಸರು ಗ್ರಾಮದಲ್ಲಿ ಇರದಿದ್ದಾಗ ಆಕ್ರಮಣಕಾರರು ಗ್ರಾಮದಲ್ಲಿ ಪ್ರವೇಶಿಸಿ ಮಹಿಳೆಯರನ್ನು ಹೊತ್ತುಕೊಂಡು ಹೋಗುತ್ತಿದ್ದರು.[೨೯] ಈ ರೀತಿ ಹಲವು ಕಾರಣಗಳಿಗಾಗಿ ನಿರ್ಮಿಸಿರುವ ದ್ವಾರಬಾಗಿಲುಗಳು ಅಥವಾ 'ಅಗಸಿ'ಗಳ ರಚನೆಗೆ ವಿಶೇಷ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

ಗುಲಬರ್ಗಾ ಕೋಟೆಯು ಎರಡು ಪ್ರಮುಖ ದ್ವಾರಗಳನ್ನು ಹೊಂದಿದೆ. ಒಂದು ಪೂರ್ವ ದಿಕ್ಕಿನಲ್ಲಿದ್ದರೆ, ಮತ್ತೊಂದು ವಾಯುವ್ಯ ದಿಕ್ಕಿನಲ್ಲಿದೆ. ಈ ದ್ವಾರದ ಮುಂಭಾಗದಲ್ಲಿ ವಿಶೇಷ ರಕ್ಷಣಾ ವ್ಯವಸ್ಥೆಯನ್ನು ಮಾಡಲಾಗಿದೆ. ಕಂದಕದ ಹೊರಭಾಗದಲ್ಲಿ ಭದ್ರವಾದ ರಕ್ಷಣಾ ಗೋಡೆಯನ್ನು ನಿರ್ಮಿಸಿ, ಒಳಗಡೆ ಕಾವಲುಗಾರರಿಗೆ ಸ್ಥಳಾವಕಾಶ ಒದಗಿಸಲಾಗಿದೆ. ಈ ಭಾಗದಲ್ಲಿ ವಿಶೇಷ ತರಬೇತಿ ಹೊಂದಿದ ರಕ್ಷಣಾ ಪಡೆ ಕಾರ್ಯನಿರ್ವಹಿಸುತ್ತದೆ.

ಕಂದಕದ ಒಳಭಾಗದಲ್ಲಿ ಇರುವ ಪ್ರಮುಖ ದಾರವು. ೧೦ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದ್ದೂ, ಇದರ ಎರಡು ಬದಿಯಲ್ಲಿ ಕೋನಾಕಾರದ ಕೊತ್ತಳಗಳಿವೆ. ಇವುಗಳ ಮೇಲ್ಭಾಗದಲ್ಲಿ ಕಾವಲುಗಾರರು ದ್ವಾರದ ರಕ್ಷಣೆಗಾಗಿ ಸದಾ ಸಿದ್ಧರಾಗಿರುತ್ತಿದ್ದರು. ದ್ವಾರದ ಒಂದು ಬದಿಯಲ್ಲಿ ೩x೪ ಅಡಿ ಉದ್ದ ಅಗಲದ ಗುಪ್ತದ್ವಾರವಿದೆ. ಅಲ್ಲದೆ ಮುಂಭಾಗದಲ್ಲಿ ಮೂರು ಹಂತದಲ್ಲಿ ಕಬ್ಬಿಣದ ಸರಪಳಿಗಳಿಂದ ದ್ವಾರಕ್ಕೆ ರಕ್ಷಣೆಯನ್ನು ನೀಡಲಾಗಿದೆ. ಈ ದ್ವಾರದ ರಕ್ಷಣೆಗಾಗಿ ಕಟ್ಟಿಗೆಯ ಬಾಗಿಲಿನ ಕಪಾಟುಗಳ ಮೇಲೆ ಕಬ್ಬಿಣದ ಪಟ್ಟಿಗಳನ್ನು ಜೋಡಿಸಿ, ಅದರ ಮೇಲೆ ಮೊನಚಾದ ಮೊಳೆಗಳನ್ನು ಜೋಡಿಸಲಾಗಿದೆ. ಶತ್ರುಗಳು ಆನೆಗಳ ಸಹಾಯದಿಂದ ದ್ವಾರವನ್ನು ಧ್ವಂಸ ಮಾಡಬಹುದೆಂದು ಈ ತಂತ್ರಜ್ಞಾನವನ್ನು ಬಳಸಲಾಗಿದೆ. ಈ ರೀತಿ ಗುಲಬರ್ಗಾ ಕೋಟೆಯ ವಾಯುವ್ಯ ದ್ವಾರದ ಮುಂಭಾಗದಲ್ಲಿ ಹಾಗೂ ಒಳಭಾಗದಲ್ಲಿ ವಿಶೇಷ ರಕ್ಷಣೆಯನ್ನು ಒದಗಿಸಲಾಗಿದೆ. ಪೂರ್ವ ಭಾಗದಲ್ಲಿರುವ ದ್ವಾರವು ೧೨ ಅಡಿ ಉದ್ದ ೧೫ ಅಡಿ ಎತ್ತರವಾಗಿದೆ. ಕಮಾನಿನ ಆಕಾರದಲ್ಲಿರುವ ಈ ದ್ವಾರದ ಎರಡು ಬದಿಯಲ್ಲಿ ಕೊತ್ತಳಗಳು ಇರುವುದಿಲ್ಲ. ಆದರೆ ಒಳಗಡೆ ಎರಡು ಬದಿಯಲ್ಲಿ

ಕಾವಲುಗಾರರಿಗೆ ವಿಶೇಷ ರಕ್ಷಣಾತ್ಮಕ ಸ್ಥಳಗಳಿವೆ. ಎರಡು ಅಂತಸ್ತಿನಲ್ಲಿರುವ ಈ ಸ್ಥಳಗಳಲ್ಲಿ ಹೆಚ್ಚಿನ ಸೈನಿಕರು ನೆಲೆ ನಿಲ್ಲುತ್ತಿದ್ದರು. ಕೋಟೆಯ ಒಳಗಡೆ ಎರಡು ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇಲ್ಲಿಂದ ಕಾವಲುಗಾರರು ಕೋಟೆಯ ಮೇಲ್ಭಾಗದಲ್ಲಿ ಹತ್ತಿ ಸುತ್ತಲು ಕಾವಲು ಮಾಡುತ್ತಿದ್ದರು.

ಗುಲಬರ್ಗಾ ತಾಲೂಕಿನ ಫಿರೋಜಾಬಾದ ಕೋಟೆಯನ್ನು ನಿರ್ಮಿಸುವ ಪೂರ್ವದಲ್ಲಿ ಸುಲ್ತಾನ ಫಿರೋಜ್ ಶಹಾನು ಪ್ರವೇಶ ದ್ವಾರದ ಕಡೆಗೆ ವಿಶೇಷ ಗಮನ ಹರಿಸಿ, ಅವುಗಳನ್ನು ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಿದ ಈ ವಿಶಾಲವಾದ ಕೋಟೆಗೆ ನಾಲ್ಕು ಪ್ರಮುಖ ದ್ವಾರಗಳಿವೆ. ಅವುಗಳಲ್ಲಿ ಒಂದು ದ್ವಾರ ನಾಶಹೊಂದಿದ್ದು, ಮೂರು ದ್ವಾರಗಳು ಅತ್ಯಂತ ಭದ್ರವಾಗಿ ಉಳಿದಿವೆ. ಪ್ರಸ್ತುತ ಇವುಗಳನ್ನು ಗುಲಬರ್ಗಾ ದ್ವಾರ, ಶಹಾಪೂರ ದ್ವಾರ (ಕಳ್ಳದ್ವಾರ) ಹಾಗೂ ಕಾಲಿದರ್ವಾಜ ಎಂದು ಕರೆಯಲಾಗಿದೆ.

ಮಳಖೇಡ ಕೋಟೆಯ ಮೊದಲನೆಯ ಪ್ರವೇಶ ದ್ವಾರವು ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಕೊತ್ತಳಗಳ ಮೇಲ್ಭಾಗದಲ್ಲಿ ಕಾವಲುಗಾರರು ನಿಂತು ಕೋಟೆಯ ದ್ವಾರವನ್ನು ರಕ್ಷಿಸುತ್ತಿದ್ದರು. ದ್ವಾರದ ಒಳಗಡೆ ೫೦ ಅಡಿ ಅಂತರದಲ್ಲಿ ಎರಡನೆಯ ದ್ವಾರವಿದೆ. ಇದರ ಮುಂದೆ ಎರಡು ಬದಿಯಲ್ಲಿ ವೃತ್ತಾಕಾರದ ಕೊತ್ತಳಗಳಿವೆ. ೧೦ ಅಡಿ ಅಗಲ ೨೦ ಅಡಿ ಎತ್ತರದ ಕಮಾನಿನ ಆಕೃತಿಯಲ್ಲಿರುವ ದ್ವಾರದ ಮೇಲ್ಭಾಗದಲ್ಲಿ ಕಾವಲುಗಾರರು ನಿಲ್ಲಲು ವಿಶೇಷ ಸ್ಥಳವಿದೆ. ಒಳಭಾಗದಲ್ಲಿಯು ಸಹ ಕಾವಲುಗಾರರಿಗೆ ರಕ್ಷಣಾತ್ಮಕ ಸ್ಥಳಗಳಿವೆ. ಮೂರನೆಯ ದ್ವಾರದ ಒಳಭಾಗ ಹಾಗೂ ಹೊರಭಾಗದಲ್ಲಿ ವಿಶೇಷ ರಕ್ಷಣಾ ವ್ಯವಸ್ಥೆ ಇದೆ. ಅದರಲ್ಲಿ ದ್ವಾರದ ಒಳಗಡೆ ಹಲವು ಪ್ರಮುಖ ರಕ್ಷಣಾ ಸಂಬಂಧಿ ಕಟ್ಟಡಗಳು ಹಾಗೂ ಇತರ ಕಟ್ಟಡಗಳ ಅವಶೇಷಗಳಿವೆ.

ಯಾದಗಿರ ಕೋಟೆಯ ಪ್ರವೇಶಕ್ಕೆ ಉತ್ತರ ದಿಕ್ಕಿನಿಂದ ಪ್ರಾರಂಭವಾಗುವ ದ್ವಾರಗಳು ದಕ್ಷಿಣ ಭಾಗದವರೆಗೂ ಮುಂದುವರೆಯುತ್ತವೆ. ಕೋಟೆಯ ಪ್ರವೇಶಕೆ ಒಟ್ಟು ೮ ದ್ವಾರಗಳಿವೆ. ಮೊದಲನೆಯ ದ್ವಾರವು ಎರಡು ವೃತ್ತಾಕಾರದ ಕೊತ್ತಳದ ಮಧ್ಯದಲ್ಲಿ ನಿರ್ಮಿಸಲಾಗಿದೆ. ಇಲ್ಲಿಯ ಕೊತ್ತಳಗಳು ತಳಭಾಗದಲ್ಲಿ ಅತ್ಯಂತ ವಿಶಾಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತವೆ. ದ್ವಾರದ ಒಳ ಭಾಗದಲ್ಲಿ ಎರಡು ಬದಿಯಲ್ಲಿ ಕಾವಲುಗಾರರಿಗೆ ಸ್ಥಳವಿದೆ. ಕೆಲವು ದ್ವಾರಗಳು ವಿಶೇಷತೆಯಿಂದ ನಿರ್ಮಿಸಲಾಗಿದೆ. ಶತ್ರುಗಳು ಒಳಗಡೆ ಪ್ರವೇಶಿಸುತ್ತಿದ್ದಂತೆ ಅವರನ್ನು ತಡೆಹಿಡಿಯಲು ಕ್ರಮ ಕೈಗೊಳ್ಳಲಾಗಿದೆ. ದ್ವಾರದ ಮುಂಭಾಗದಲ್ಲಿ ಗುಪ್ತದ್ವಾರಗಳು, ಕೊತ್ತಳಗಳು, ಕಾವಲು ಪಡೆಯ ವಸತಿ ನಿಲಯಗಳು, ಮೇಲ್ಭಾಗದಲ್ಲಿ ತೋಪುಗಳು ಹಾಗೂ ತೆನೆಯ ಹಿಂಭಾಗದಲ್ಲಿ ಸೈನಿಕರಿಗೆ ಕಾವಲು ವ್ಯವಸ್ಥೆಯನ್ನು ಒದಗಿಸಲಾಗಿದೆ. ಕೆಲವು ದ್ವಾರಗಳ ಮುಂದೆ ವೃತ್ತಾಕಾರದ, ಅರ್ಧವೃತ್ತಾಕಾರದ ತಡೆಗೋಡೆಯನ್ನು ನಿರ್ಮಿಸಲಾಗಿದೆ.

ಯಾದಗಿರ ತಾಲೂಕಿನಲ್ಲಿ ಬರುವ ಚಂದ್ರಕಿಯ ಮಣ್ಣಿನ ಕೋಟೆಯ ದ್ವಾರದ ಮುಂಭಾಗದಲ್ಲಿರುವ ಅರ್ಧವೃತ್ತಾಕಾರದ ತಡೆಗೋಡೆಯಲ್ಲಿ ನಿರ್ಮಿಸಲಾಗಿದೆ. ಸುಮಾರು ೨೫ ಅಡಿ ಎತ್ತರದ ಈ ಗೋಡೆಯನ್ನು ೧೦ ಅಡಿಯವರೆಗೆ ಕಲ್ಲು ಮತ್ತು ಮಣ್ಣಿನಿಂದ ರಚಿಸಿ ನಂತರದ ೧೦ ಅಡಿಯವರೆಗೆ ಮಣ್ಣಿನ ಗೋಡೆ ಇದೆ. ಇದರ ಮೇಲ್ಭಾಗದಲ್ಲಿ ೫ ರಿಂದ ೭ ಅಡಿ ಎತ್ತರದ ತೆನೆಗಳಿವೆ. ದ್ವಾರದ ಮುಂಭಾಗದಲ್ಲಿ ವಿಶಾಲವಾದ ಸ್ಥಳವನ್ನು ಈ ಗೋಡೆ ಆವರಿಸಿಕೊಂಡಿದೆ. ಇಲ್ಲಿ ಕಾವಲುಗಾರರ ವಸತಿ ನಿಲಯಗಳು, ದೇವಾಲಯ ಹಾಗೂ ಇತರ ರಕ್ಷಣಾ ಸ್ಮಾರಕಗಳಿವೆ. ರಕ್ಷಣಾ ಗೋಡೆಯ ಮತ್ತೊಂದು ವಿಶೇಷವೆಂದರೆ, ಅದರ ಎರಡು ಬದಿಯಲ್ಲಿ ಕಂದಕವಿದೆ. ಪ್ರವೇಶ ದ್ವಾರವು ೧೦ ಅಡಿ ಅಗಲ ೨೫ ಅಡಿ ಎತ್ತರದಲ್ಲಿದೆ. ಇದರ ಒಳಗಡೆ ಎರಡು ಭಾಗದಲ್ಲಿ ಸೈನಿಕರ ಕಾವಲು ಸ್ಥಳಗಳಿವೆ. ದ್ವಾರದ ಒಂದು ಬದಿಯಲ್ಲಿ ಗುಪ್ತದ್ವಾರವಿದೆ. ಚಂದ್ರಕಿಯ ಕೋಟೆಗೆ ಒಂದು ಪ್ರಮುಖ ದ್ವಾರ ಹಾಗೂ ಎರಡು ಉಪದ್ವಾರಗಳಿವೆ.

ಶಹಾಪೂರ ಕೋಟೆಯು ಎತ್ತರವಾದ ಬೆಟ್ಟದ ಮೇಲೆ ಇರುವುದರಿಂದ ಕೋಟೆಯ ಪ್ರವೇಶಕ್ಕೆ ೭ ಪ್ರಮುಖ ದ್ವಾರಗಳಿವೆ. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಈ ದ್ವಾರಗಳನ್ನು ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ. ಒಂದು ದ್ವಾರದಿಂದ ಮತ್ತೊಂದು ದ್ವಾರಕ್ಕೆ ಸುಮಾರು ೧೦೦ ರಿಂದ ೨೫೦ ಮೀಟರ ಅಂತರವಿದೆ. ಅವುಗಳಲ್ಲಿ ಮೊದಲಿನ ಎರಡು ದ್ವಾರಗಳು ಸರಳವಾಗಿವೆ. ಇವುಗಳ ಒಳಗಡೆ ಕಾವಲುಗಾರರಿಗೆ ರಕ್ಷಣಾ ಸ್ಥಳವಿದೆ. ಮೂರನೇಯ ದ್ವಾರವು ಎರಡು ವಿಶಾಲವಾದ ಕೊತ್ತಲಗಳ ಮಧ್ಯದಲ್ಲಿ ಕಮಾನಿನ ಆಕೃತಿಯಲ್ಲಿದೆ. ಒಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣೆಯ ವ್ಯವಸ್ಥೆ ಇದೆ. ನಾಲ್ಕು ಮತ್ತು ಐದನೆಯ ದ್ವಾರಗಳು ಹಲವು ಮೆಟ್ಟಿಲುಗಳನ್ನು ಹೊಂದಿವೆ. ಇವುಗಳ ಹೊರ ಹಾಗೂ ಒಳಭಾಗದಲ್ಲಿ ಕಾವಲು ವ್ಯವಸ್ಥೆ ಇದೆ. ಕೊನೆಯ ದ್ವಾರವು ಸಂಪೂರ್ಣವಾಗಿ ಅವನತಿ ಹೊಂದಿದೆ. ಬೆಟ್ಟದ ಮೇಲೆ ಮೂರು ಹಂತದಲ್ಲಿ ನಿರ್ಮಿಸಿರುವ ಕೋಟೆಗೆ ಹಲವು ಉಪದ್ವಾರಗಳಿವೆ. ಪ್ರತಿಯೊಂದು ದ್ವಾರ ಹಾಗೂ ಉಪದ್ವಾರಗಳು ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ. ಶಹಾಪೂರ ನಗರದ ಸುತ್ತಲು ಇರುವ ಕೋಟೆಯು ನಾಶ ಹೊಂದಿ, ಅದರ ಎರಡು ದ್ವಾರಗಳು ಮಾತ್ರ ಉಳಿದುಕೊಂಡಿವೆ. ಅವುಗಳೆಂದರೆ ಪೂರ್ವ ದಿಕ್ಕಿನಲ್ಲಿ ಕೊಳ್ಳುರು ಅಗಸಿ, ಪಶ್ಚಿಮದಲ್ಲಿ ದಿಗ್ಗಿ ಅಗಸಿಗಳಿವೆ.

ಸಗರ ಕೋಟೆಯು ಸಹ ಸಂಪೂರ್ಣ ನಾಶಗೊಂಡಿದ್ದು ಅದರ ಪುನರ್‌ನಿರ್ಮಾಣಗೊಂಡ ಕೋಟೆಯ ಪ್ರವೇಶದ್ವಾರ ಮಾತ್ರ ಉಳಿದುಕೊಂಡಿದೆ. ೧೫ ಅಡಿ ಅಗಲ ೩೦ ಅಡಿ ಎತ್ತರದ ಈದ್ವಾರವು ಮೂರು ಅಂತಸ್ತಿನಿಂದ ಕೂಡಿದೆ. ಇದರ ಒಳಗಡೆ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿಯ ಗುಮ್ಮಟಗಳು ಪಿರ್‍ಯಾಮಿಡ್ಡಿನ ಆಕಾರದಲ್ಲಿವೆ. ಇದರ ಒಂದು ಬದಿಯ ಗೋಡೆಯನ್ನು

ಸಂಪೂರ್ಣವಾಗಿ ಗಾರೆಯಿಂದ ಅಲಂಕಾರ ಮಾಡಲಾಗಿದೆ. ಈ ದ್ವಾರದ ಆಕಾರದಿಂದಲೆ ಇದನ್ನು 'ಬಡೆದರ್ವಾಜ್' ಎಂದು ಕರೆಯುತ್ತಾರೆ.

ಸುರಪುರ ಕೋಟೆಯ ವಿವಿದ ಭಾಗಗಳಲ್ಲಿ ಐದು ಪ್ರಮುಖ ದ್ವಾರಗಳನ್ನು ನಿರ್ಮಿಸಲಾಗಿದೆ.[೮೦] ಪ್ರಸ್ತುತವಾಗಿ ಇವುಗಳನ್ನು ಶಿಬಾರ ಬಂಡಿ ಅಗಸಿ, ದೇವಪುರ ಅಗಸಿ, ಕಪ್ಪಲಬೆಂಚಿ ಅಗಸಿ, ಸಿದ್ದಾಪೂರ ಅಗಸಿ, ರಂಗಪೇಟೆಯ ಅಗಸಿ ಹಾಗೂ ವೆಂಕಟಾಪುರ ಅಗಸಿ ಎಂದು ಕರೆಯುತ್ತಾರೆ. ಕೆಲವು ದ್ವಾರಗಳ ಮುಂಭಾಗದಲ್ಲಿ ರಕ್ಷಣಾ ವ್ಯವಸ್ಥೆ ಇದೆ. ಅಲ್ಲದೆ ಒಳಭಾಗದಲ್ಲಿಯೂ ಕಾವಲುಗಾರರಿಗೆ ರಕ್ಷಣೆ ಮಾಡಲು ವಿಶೇಷ ಸ್ಥಳವಿದೆ. ಇವುಗಳಲ್ಲಿ ಕೆಲವು ವೃತ್ತಾಕಾರದಲ್ಲಿದ್ದರೆ ಮತ್ತೆ ಕೆಲವು ಚೌಕಾಕೃತಿಯಲ್ಲಿವೆ. ವಾಗಣಗೇರಿ ಕೋಟೆಗೆ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಎರಡು ಪ್ರಮುಖ ದ್ವಾರಗಳಿವೆ. ಮೊದಲನೆಯ ಪ್ರವೇಶದ್ವಾರ ಪೂರ್ವದಲ್ಲಿ ವಿಶಾಲವಾದ ಹಲವು ಮೆಟ್ಟಲುಗಳಿವೆ. ಇವುಗಳ ನಂತರ ದ್ವಾರವು ಅತ್ಯಂತ ಸರಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದರ ಒಳಗಡೆ ಎರಡು ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಲುಗಳಿವೆ. ಕಾವಲುಗಾರರು ಇಲ್ಲಿಂದ ಕೋಟೆಯ ಗೋಡೆಯ ಸುತ್ತಲು ಓಡಾಡುವಂತೆ ವ್ಯವಸ್ಥೆ ಮಾಡಲಾಗಿದೆ. ಪಶ್ಚಿಮ ಭಾಗದಲ್ಲಿರುವ ದ್ವಾರವನ್ನು ಔರಂಗಜೇಬನ ಆಗ್ನೇಯಂತೆ ಇಲ್ಲಿಯ ಅಧಿಕಾರಿಯು ನಿರ್ಮಿಸಿದನೆಂದು ದ್ವಾರದ ಮೇಲ್ಭಾಗದಲ್ಲಿರುವ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೮೧] ನೈಸರ್ಗಿಕವಾಗಿರುವ ಬೃಹತ ಬಂಡೆಗಳ ಮಧ್ಯದಲ್ಲಿ ಈ ದ್ವಾರವನ್ನು ನಿರ್ಮಿಸಲಾಗಿದೆ.

ವನದುರ್ಗ ಕೋಟೆಯು ಎರಡು ಪ್ರಮುಖ ದ್ವಾರಗಳನ್ನು ಹೊಂದಿದೆ. ಮೊದಲನೆಯ ದ್ವಾರವು ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ಅರ್ಧವೃತ್ತಾಕಾರದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ದೂರದಿಂದ ಇದು ಕೊತ್ತಳದಂತೆ ಕಂಡು ಬರುತ್ತದೆ. ಇಲ್ಲಿಂದ ಸುಮಾರು ೧೫೦ ಅಡಿ ಅಂತರದಲ್ಲಿ ಮತ್ತೊಂದು ಪ್ರವೇಶದ್ವಾರವಿದೆ, ಈ ದ್ವಾರವು ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ಚೌಕಾಕೃತಿಯಲ್ಲಿ ಇದನ್ನು ನಿರ್ಮಿಸಲಾಗಿದೆ. ಇದರ ಬಲಬದಿಯಲ್ಲಿ ೪x೫ ಅಡಿ ಉದ್ದ ಅಗಲದ ಒಂದು ಚಿಕ್ಕದ್ವಾರವಿದೆ. ಇಲ್ಲಿಂದ ಕೋಟೆಯ ಒಳಗಡೆ ಪ್ರವೇಶಿಸಬಹುದು. ಈ ದ್ವಾರದ ನಿರ್ಮಾಣಕ್ಕೆ ಮಿಶ್ರವರ್ಣದ ಶಿಲೆಗಳನ್ನು ಬಳಸಿರುವುದರಿಂದ ಇದು ಆಕರ್ಷಕ ದ್ವಾರವಾಗಿ ಕಂಡು ಬರುತ್ತದೆ.

ಜಿಲ್ಲೆಯ ಇನ್ನುಳಿದ ಕೋಟೆಯ ದ್ವಾರಗಳು ಅತ್ಯಂತ ಸರಳವಾಗಿ ನಿರ್ಮಿಸಲಾಗಿದೆ. ಅವುಗಳಲ್ಲಿ ಕಮಾನಿನ ಆಕೃತಿ ಹಾಗೂ ಚೌಕಾಕೃತಿಯಲ್ಲಿವೆ. ಕೆಲವು ಕೋಟೆಯ ದ್ವಾರಗಳು ಸಂಪೂರ್ಣವಾಗಿ ನಾಶ ಹೊಂದಿರುವುದರಿಂದ ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಸಾಧ್ಯವಾಗಲಿಲ್ಲ. ಉದಾ: ಇಜೇರಿ ಕೋಟೆಯ ಒಂದು ಪ್ರಮುಖ ದ್ವಾರ, ಚಿನ್ಮಳ್ಳಿ ಕೋಟೆಯ ದ್ವಾರ, ಫಿರೋಜಾಬಾದ ಕೋಟೆಯ ಒಂದು ದ್ವಾರ ಹಾಗೂ ಗ್ರಾಮೀಣ ಭಾಗದಲ್ಲಿರುವ ಹಲವು ಕೋಟೆಗಳ ದ್ವಾರಗಳು ನಾಶ ಹೊಂದಿವೆ. ಕೆಲವು

ದ್ವಾರಗಳ ಮೇಲ್ಭಾಗದಲ್ಲಿ ಶಾಸನವನ್ನು ನಿಲ್ಲಿಸಿ ಅದರ ನಿರ್ಮಾಣ ಅಥವಾ ಪುನರ್‌ರಚನೆಯ ವಿಷಯವನ್ನು ಅಲ್ಲಿ ಪ್ರಸ್ಥಾಪಿಸಲಾಗಿದೆ. ಇನ್ನೂ ಕೆಲವು ದ್ವಾರಗಳ ಬಗ್ಗೆ ಯಾವುದೇ ಮಾಹಿತಿಗಳು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕಾಲಮಾನವನ್ನು ಆಧಾರವಾಗಿಟ್ಟುಕೊಂಡು, ದ್ವಾರಗಳ ಬಗ್ಗೆ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೩.೮.೩. ಗುಪ್ತ ದ್ವಾರಗಳು

ದ್ವಾರಬಾಗಿಲುಗಳು ಕೋಟೆಯನ್ನು ರಕ್ಷಿಸಿದರೆ, ಗುಪ್ತದ್ವಾರಗಳು ಅರಸರನ್ನು, ಹಾಗೂ ಅವರ ಪರಿವಾರದ ಸದಸ್ಯರನ್ನು ಮತ್ತು ಇತರ ಮಹತ್ವದ ವಸ್ತುಗಳನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಪ್ರತಿಯೊಂದು ಪೂರ್ವ ನಿಯೋಜಿತ ಕೋಟೆಗಳಲ್ಲಿ ಗುಪ್ತದ್ವಾರಗಳು ಇರುತ್ತವೆ. ಇವುಗಳ ಕುರಿತು ಮಾಹಿತಿ ಕೇವಲ ಕೆಲವು ಸೈನಿಕರಿಗೆ ಮಾತ್ರ ಇರುತ್ತದೆ. ಆಕ್ರಮಣಕಾರರು ಕೋಟೆಯನ್ನು ಸಂಪೂರ್ಣವಾಗಿ ಮುತ್ತಿದ್ದಾಗ ಒಳಗಡೆ ಇರುವ ಅರಸ ಹಾಗೂ ಆತನ ಪರಿವಾರದ ಸದಸ್ಯರಿಗೆ ಈ ದ್ವಾರಗಳ ಮೂಲಕ ಸುರಕ್ಷಿತ ಸ್ಥಳಗಳಿಗೆ ತಲುಪಿಸಲಾಗುತ್ತದೆ. ಇವುಗಳು ಕೋಟೆಯ ಆಯಕಟ್ಟಿನ ಸ್ಥಳಗಳಲ್ಲಿ ನಿರ್ಮಿಸಲಾಗಿದೆ. ಪ್ರಾಚೀನ ಸಾಹಿತ್ಯದಲ್ಲಿ ಇವುಗಳ ಮಹತ್ವವನ್ನು ಕುರಿತು ವಿವರಿಸಲಾಗಿದೆ.

ಗುಲಬರ್ಗಾ ಕೋಟೆಯಲ್ಲಿ ಹಲವು ಗುಪ್ತದ್ವಾರಗಳಿವೆ. ಕೋಟೆ ಗೋಡೆಯ ತಳಭಾಗದಲ್ಲಿ ಚೌಕಾಕಾರ ಹಾಗೂ ಕಮಾನಿನ ಆಕಾರದಲ್ಲಿ ಇವುಗಳನ್ನು ರಚಿಸಲಾಗಿದೆ. ಎರಡು ಸುತ್ತಿನ ಗೋಡೆಯನ್ನು ಹೊಂದಿರುವ ಈ ಕೋಟೆಯಲ್ಲಿ ಪ್ರತಿಯೊಂದು ಗೋಡೆಯಲ್ಲಿ ಗುಪ್ತದ್ವಾರಗಳಿವೆ. ಹೊರಗೋಡೆಯಲ್ಲಿ ಆರು ಗುಪ್ತದ್ವಾರಗಳಿವೆ. ಅವುಗಳಲ್ಲಿ ನಾಲ್ಕು ಕಮಾನಿನ ಆಕಾರದಲ್ಲಿವೆ. ಉಳಿದ ಎರಡು ಚೌಕಾಕಾರದಲ್ಲಿವೆ. ಕಂದಕದ ನೀರು ಪೂರ್ತಿಯಾಗಿ ತುಂಬಿದಾಗ ಈ ದ್ವಾರಗಳು ನೀರಿನಲ್ಲಿ ಮುಳುಗುತ್ತವೆ. ಆದರೆ ಕಂದಕದ ನೀರು ಕೋಟೆಯ ಒಳಗಡೆ ಬಾರದಂತೆ ವಿಶೇಷ ರೀತಿಯಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಇದರ ಒಳಗಡೆ ನಾಲ್ಕರಿಂದ ಆರು ಅಡಿ ಎತ್ತರದವರೆಗೆ ಮೆಟ್ಟಿಲುಗಳು ಇರುತ್ತವೆ. ಇವುಗಳ ಮೂಲಕ ಕೋಟೆಯಲ್ಲಿ ಪ್ರವೇಶಿಸಬಹುದು ಕಂದಕದ ನೀರು ಕೋಟೆಯ ಒಳಗಡೆ ಪ್ರವೇಶಿಸದಂತೆ ಇವುಗಳನ್ನು ನಿರ್ಮಿಸಲಾಗಿದೆ. ಕೋಟೆಯ ಪೂರ್ವ ದ್ವಾರದ ಹೊರಗೋಡೆಯ ಎಡಭಾಗಕ್ಕೆ ಒಂದು ಗುಪ್ತದ್ವಾರವಿದೆ. ಪ್ರಸ್ತುತ ಈ ದ್ವಾರವನ್ನು ಮುಚ್ಚಲಾಗಿದೆ.

ಈಶಾನ್ಯ ದಿಕ್ಕಿನ ಒಂದು ಕೊತ್ತಳದ ಪಕ್ಕದಲ್ಲಿ ಕಮಾನಿನ ಆಕೃತಿಯ ೬x೮ ಅಡಿ ಅಗಲ ಹಾಗೂ ಎತ್ತರದ ಗುಪ್ತದ್ವಾರವಿದೆ. ಇದರ ಒಳಗಡೆ ಎರಡು ಬದಿಯಲ್ಲಿ ವಿಶಾಲವಾದ ಮೆಟ್ಟಿಲುಗಳಿದ್ದು, ನಂತರ ಎರಡು ಕಮಾನುಗಳ ಮೂಲಕ ಮೇಲೆ ಪ್ರವೇಶಿಸಲು ಮಾರ್ಗವಿದೆ. ಈ ಭಾಗದ ಎರಡು ಗೋಡೆಗಳ ಮಧ್ಯದಲ್ಲಿ ಸುಮಾರು ೨೫ ರಿಂದ ೩೦ ಅಡಿ ಅಂತರವಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಸೈನಿಕರು ನೆಲೆ ನಿಂತು ಈ ದ್ವಾರಗಳ ಮೂಲಕ ಹೊರಹೋಗಬಹುದು ಇದೆ ರೀತಿ ಇನ್ನೂ ನಾಲ್ಕು ಗುಪ್ತದ್ವಾರಗಳು

ಕೋಟೆಯ ಇತರ ಭಾಗಗಳಲ್ಲಿವೆ. ನೈರುತ್ಯ ಭಾಗದಲ್ಲಿರುವ ಚೌಕಾಕಾರದ ಗುಪ್ತದ್ವಾರವು ೩x೪ ಅಡಿ ಅಗಲ ಹಾಗೂ ಎತ್ತರವಾಗಿದ್ದೂ, ಸದಾ ನೀರಿನಲ್ಲಿ ಮುಳಿಗಿರುತ್ತದೆ. ಬೇಸಿಗೆಯಲ್ಲಿ ಕಂದಕದ ನೀರು ಕಡಿಮೆಯಾದಾಗ ಮಾತ್ರ ಇದನ್ನು ವೀಕ್ಷಿಸಬಹುದು.

ಕೋಟೆಯ ಒಳಗೋಡೆಯಲ್ಲಿ ಹಲವು ಗುಪ್ತದ್ವಾರಗಳಿವೆ. ಪ್ರತಿಯೊಂದು ಸೈನಿಕರ ತಂಗುದಾಣದ ಕೊನೆಯ ಭಾಗದಲ್ಲಿ ೩ ಅಡಿ ಎತ್ತರ ೪ ಅಡಿ ಅಗಲದ ದ್ವಾರವಿರುತ್ತದೆ. ಸೈನಿಕರು ಇಲ್ಲಿಂದ ಹೊರಭಾಗಕ್ಕೆ ಅಥವಾ ಒಳಭಾಗಕ್ಕೂ ಹೋಗಬಹುದು. ಕೋಟೆಯ ಎರಡು ದ್ವಾರದ ಮುಂಭಾಗದಲ್ಲಿ ವೃತ್ತಾಕಾರದ ಹಾಗೂ ಚೌಕಾಕಾರದ ಗುಪ್ತ ದ್ವಾರಗಳಿವೆ. ಇವುಗಳ ಮೂಲಕ ಕೋಟೆಯ ಒಳಗಡೆ ಪ್ರವೇಶಿಸಬಹುದು. ಕೋಟೆಯ ಆಗ್ನೇ ದಿಕ್ಕಿನಲ್ಲಿ ಇರುವ ದೇವಾಲಯದ ಒಂದು ಬದಿಯಲ್ಲಿ ೪x೪ ಆಕೃತಿಯ ಚೌಕಾಕಾರದ ೧೦ ಅಡಿ ಉದ್ದನೆಯ ದ್ವಾರವಿದೆ. ಇದರಿಂದ ಎರಡು ಗೋಡೆಗಳ ಮಧ್ಯದಲ್ಲಿರುವ ಸ್ಥಳಕ್ಕೆ ಹೋಗಬಹುದು. ಕೋಟೆಯ ಒಳಗೋಡೆಯಲ್ಲಿಯು ಆರು ಕಮಾನಿನ ಆಕೃತಿಯ ಹಾಗೂ ನಾಲ್ಕು ವೃತ್ತಾಕಾರದ ದ್ವಾರಗಳಿವೆ. ಗುಲಬರ್ಗಾ ಕೋಟೆಯ ಆಗ್ನೇ ಭಾಗದಲ್ಲಿ ಆರು ಸಾಮೂಹಿಕ ಗುಪ್ತ ದ್ವಾರಗಳಿವೆ. ಈ ರೀತಿಯ ಗುಪ್ತದ್ವಾರಗಳು ನಮಗೆ ಜಿಲ್ಲೆಯ ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ. ಇವುಗಳ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. ಈ ರೀತಿ ಹಲವು ಬಗೆಯ ಗುಪ್ತದ್ವಾರಗಳನ್ನು ಹೊಂದಿರುವ ಗುಲಬರ್ಗಾ ಕೋಟೆಯು ಅತ್ಯಂತ ಸುರಕ್ಷಿತ ಕೋಟೆಯಾಗಿದೆ.

ಶಹಾಪೂರ ಕೋಟೆಯು ಅತ್ಯಂತ ಎತ್ತರವಾದ ಬೆಟ್ಟದ ಮೇಲೆ ನಿರ್ಮಿಸಿರುವುದರಿಂದ ಅಲ್ಲಿ ಗುಪ್ತದ್ವಾರಗಳ ಅವಶ್ಯಕತೆ ಇರುವುದಿಲ್ಲ. ಆದರೂ ಕೆಲವು ಚಿಕ್ಕ ದ್ವಾರಗಳು ಕಂಡು ಬರುತ್ತವೆ. ಕೋಟೆಯ ಪಶ್ಚಿಮ ಭಾಗದಲ್ಲಿರುವ ಮಂದಾಕಿನಿಯ ಸರೋವರಕ್ಕೆ ಹೋಗಲು ಎರಡು ರಹಸ್ಯ ಮಾರ್ಗಗಳಿವೆ ಇವುಗಳಿಗೆ ಚಿಕ್ಕದ್ವಾರಗಳು ಇರುವುದರಿಂದ ಅವುಗಳನ್ನು ಗುಪ್ತದ್ವಾರಗಳು ಎಂದು ಪರಿಗಣಿಸಲಾಗಿದೆ. ವಾಗಣಗೇರಿ ಹಾಗೂ ವನದುರ್ಗ ಕೋಟೆಗಳಲ್ಲಿಯು ಗುಪ್ತದ್ವಾರಗಳಿವೆ. ವನದುರ್ಗ ಕೋಟೆಯ ಎರಡನೆಯ ದ್ವಾರದ ಒಂದು ಬದಿಯಲ್ಲಿ ಚಿಕ್ಕ ದ್ವಾರವಿದೆ, ಇಲ್ಲಿಂದ ಕೋಟೆಯ ಒಳಗಡೆ ಪ್ರವೇಶಿಸಬಹುದು. ಇದನ್ನು ಹೊರತು ಪಡಿಸಿ ಕೋಟೆಯ ಮೂರು ದಿಕ್ಕಿನಲ್ಲಿರುವ ಗೋಡೆಯ ಒಂದೊಂದು ಚೌಕಾಕಾರದ ಚಿಕ್ಕದ್ವಾರಗಳಿವೆ.

ಯಾದಗಿರ ಕೋಟೆಯು ಸಹ ಬೆಟ್ಟದ ಮೇಲಿದೆ. ಇಲ್ಲಿ ಹಲವು ಗುಪ್ತದ್ವಾರಗಳಿವೆ. ಇದು ಮೂರು ಸುತ್ತಿನ ಕೋಟೆಯಾಗಿರುವುದರಿಂದ ಪ್ರತಿಯೊಂದು ಸುತ್ತಿನಲ್ಲಿ ಕಾವಲುಗಾರರು ಕಾವಲು ಮಾಡಲು ಹಾಗೂ ಆಕ್ರಮಣದ ಕಾಲಕ್ಕೆ ತಪ್ಪಿಸಿಕೊಳ್ಳಲು ಇವುಗಳನ್ನು ರಚಿಸಲಾಗಿದೆ. ಕೋಟೆಯ ಮೊದಲನೆಯ ಸುತ್ತಿನಲ್ಲಿ ಬರುವ ಕೊತ್ತಳಗಳ ತಳಭಾಗದಲ್ಲಿ ಚಿಕ್ಕದ್ವಾರವಿದೆ. ಇದೇ ರೀತಿ ಎರಡನೆಯ ಗೋಡೆಯ

ಕೊತ್ತಳಗಳಲ್ಲಿ ದ್ವಾರಗಳಿವೆ. ಹೊರಗಿನಿಂದ ವೀಕ್ಷಿಸಿದರೆ ಇಲ್ಲಿ ಯಾವುದೇ ದ್ವಾರಗಳು ಇರುವಂತೆ ಕಂಡು ಬರುವುದಿಲ್ಲ. ಆದರೆ ಸಮೀಪಕ್ಕೆ ಹೋದಾಗ ಮಾತ್ರ ಅವುಗಳು ಕಂಡು ಬರುತ್ತವೆ. ಕೋಟೆಯ ಮೂರನೆಯ ದ್ವಾರದ ಎಡಬದಿಯಲ್ಲಿರುವ ಮೂರನೆಯ ಕೊತ್ತಳದಲ್ಲಿ ಒಂದು ವಿಶೇಷ ಗುಪ್ತದ್ವಾರವಿದೆ. ಮೇಲಿಂದ ಕೆಳಗೆ ಇಳಿಯಲು ಮೆಟ್ಟಿಲುಗಳಿವೆ. ನಂತರ ಎರಡು ಅಂಕಣದ ತಂಗುದಾಣವಿದೆ. ಅದರ ಮುಂದೆ ಒಂದು ಗುಪ್ತದ್ವಾರವಿದೆ. ಈ ರೀತಿಯಲ್ಲಿ ಯಾದಗಿರ ಕೋಟೆಯಲ್ಲಿ ಹಲವು ಬಗೆಯ ಗುಪ್ತದ್ವಾರಗಳಿವೆ.

ಚಿನ್ಮಳ್ಳಿ ಹಾಗೂ ಇಜೇರಿ ಕೋಟೆಯಲ್ಲಿ ಪ್ರತಿಯೊಂದು ಭಾಗದ ಗೋಡೆಯ ಮಧ್ಯದಲ್ಲಿ ಒಂದೊಂದು ಚೌಕಾಕಾರದ ಚಿಕ್ಕದ್ವಾರಗಳಿವೆ. ಇವುಗಳನ್ನು ಗೋಡೆಯ ತಳಭಾಗದಲ್ಲಿ ರಚಿಸಲಾಗಿದೆ. ಚಿನ್ಮಳ್ಳಿ ಕೋಟೆಯಲ್ಲಿ ಜನವಸತಿ ಇರುವುದರಿಂದ ಗುಪ್ತ ದ್ವಾರಗಳು ಅವಶ್ಯವಿರುವುದಿಲ್ಲ. ಆದ್ದರಿಂದ ಪಶ್ಚಿಮ ಭಾಗದಲ್ಲಿ ಒಂದು ದಿಡ್ಡಿ ಬಾಗಿಲು ಇದೆ[೮೨]. ಗುಪ್ತದ್ವಾರಗಳಿಗೂ ಹಾಗೂ ದಿಡ್ಡಿ ಬಾಗಿಲುಗಳಿಗೆ ಇರುವ ವ್ಯತ್ಯಾಸವೆಂದರೆ ದಿಡ್ಡಿ ಬಾಗಿಲುಗಳು ಜನರ ಹಾಗೂ ಸೈನಿಕರ ಸಲುವಾಗಿ ಎಲ್ಲರಿಗೂ ಕಾಣುವಂತೆ ರಚಿಸಲಾಗುವುದು. ಆದರೆ ಗುಪ್ತ ದ್ವಾರಗಳು ರಹಸ್ಯವಾಗಿರುತ್ತವೆ.

ಚಂಡ್ರಕಿಯ ಮಣ್ಣಿನ ಕೋಟೆಯಲ್ಲಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ಗುಪ್ತದ್ವಾರಗಳಿವೆ. ಕೋಟೆಯ ಮುಂಭಾಗದಲ್ಲಿ ಪ್ರವೇಶ ದ್ವಾರದ ಬದಿಯಲ್ಲಿ ೪x೬ ಅಡಿ ಅಗಲ ಹಾಗೂ ಎತ್ತರದ ಈ ದ್ವಾರವು ಕೋಟೆಯ ಒಳಗಡೆ ಪ್ರವೇಶವನ್ನು ಕಲ್ಪಿಸುತ್ತದೆ. ದಕ್ಷಿಣ ಭಾಗದ ಕೋಟೆ ಗೋಡೆಯ ಮಧ್ಯದಲ್ಲಿ ಒಂದು ದಿಡ್ಡಿಬಾಗಿಲು ಇದೆ. ಅಡಿ ಅಗಲ ೮ ಅಡಿ ಎತ್ತರವಾಗಿರುವ ಈ ದ್ವಾರ. ಕಲ್ಲಿನ ಕಂಬಗಳಿಂದ ನಿರ್ಮಿಸಲಾಗಿದೆ. ಪಶ್ಚಿಮ ಭಾಗದ ಚಿಕ್ಕದ್ವಾರವು ಸಂಪೂರ್ಣವಾಗಿ ನಾಶಹೊಂದಿದೆ. ಉತ್ತರ ಭಾಗದ ಕೋಟೆ ಗೋಡೆಯಲ್ಲಿ ೩ ಅಡಿ ಎತ್ತರ ೪ ಅಡಿ ಅಗಲವಾಗಿದೆ. ಕಾವಲುಗಾರರು ನೆಲಕ್ಕೆ ಹತ್ತಿಕೊಂಡು ಮಲಗಿ ಹೊರಗಡೆ ಹೋಗಬೇಕು.

ಜಿಲ್ಲೆಯ ಇನ್ನುಳಿದ ಕೋಟೆಗಳಲ್ಲಿ ಅದು ಸೈನಿಕ ಕಾರ್ಯಾಚರಣೆಯ ಕೇಂದ್ರ ಸ್ಥಳವಾಗಿದ್ದರೆ, ಅಲ್ಲಿ ಹಲವು ಬಗೆಯ ಗುಪ್ತದ್ವಾರಗಳು ಹಾಗೂ ಗ್ರಾಮದ ರಕ್ಷಣೆಯ ಕೋಟೆಯಾಗಿದ್ದರೆ ಅಲ್ಲಿ ದಿಡ್ಡಿ ಬಾಗಿಲುಗಳು ಕಂಡು ಬರುತ್ತವೆ. ಈ ಎರಡು ಪ್ರಕಾರದ ದ್ವಾರಗಳು ಕೋಟೆಯ ಒಳಗಡೆ ಇರುವ ವ್ಯಕ್ತಿಗಳಿಗೆ ರಕ್ಷಣೆಯನ್ನು ನೀಡುತ್ತದೆ. ಆದ್ದರಿಂದ ಗುಪ್ತದ್ವಾರಗಳು ಸಹ ರಕ್ಷಣಾ ಸಂಬಂಧಿ ಕಟ್ಟಡಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

೩.೮.೪. ಕಾವಲುಗೋಪುರಗಳು:

ಕೋಟೆಯ ರಕ್ಷಣೆಯಲ್ಲಿ ಕಾವಲುಗೋಪುರಗಳು ಮಹತ್ವದ ಪಾತ್ರವಹಿಸುತ್ತವೆ. ಕೋಟೆಯ ಒಳಭಾಗದಲ್ಲಿ ನಡೆಯುವ ಚಟುವಟಿಕೆಗಳು ಹಾಗೂ ಹೊರಭಾಗದ ಶತ್ರುಗಳ ಚಲನವಲನಗಳನ್ನು

ತಿಳಿದುಕೊಳ್ಳಲು ಸಹಾಯಕವಾಗುತ್ತವೆ. ಕೋಟೆಯ ಅತ್ಯಂತ ಎತ್ತರವಾದ ಸ್ಥಳದಲ್ಲಿ ಇದನ್ನು ನಿರ್ಮಿಸಲಾಗುತ್ತದೆ.[೮೩] ಅಲ್ಲದೆ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸಂಪರ್ಕ ಕಲ್ಪಿಸಲು ಇವುಗಳನ್ನು ಬಳಸುತ್ತಾರೆ. ಆದ್ದರಿಂದ ಪ್ರತಿಯೊಂದು ಕೋಟೆಯಲ್ಲಿ ಕಾವಲುಗೋಪುರ ಹಾಗೂ ಗ್ರಾಮಗಳಲ್ಲಿ 'ಹುಡೆವು'ಗಳು ರಕ್ಷಣಾ ಸಂಬಂಧಿ ಕಟ್ಟಡಗಳಾಗಿವೆ. ಪ್ರತಿಯೊಂದು ಕಾವಲುಗೋಪುರಗಳಲ್ಲಿ ಸುಸಜ್ಜಿತವಾದ ಕಾವಲು ಪಡೆ ಹಾಗೂ ಮಾಹಿತಿಯನ್ನು ರವಾನಿಸಲು ಬಲಿಷ್ಠವಾದ ಕುದುರೆಗಳು ಇರುತ್ತವೆ. ಬುರುಜುಗಳು ಹಾಗೂ ಕಾವಲುಗೋಪುರಗಳ ನಡುವೆ ಹೋಲಿಕೆ ಕಂಡು ಬರುತ್ತದೆ. ಈ ಎರಡು ರಕ್ಷಣಾ ಸ್ಮಾರಕಗಳು ಕೋಟೆಗೆ ರಕ್ಷಣೆಯನ್ನು ನೀಡುತ್ತವೆ. ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಹಲವು ಕೋಟೆಗಳಲ್ಲಿ ಹಾಗೂ ಗ್ರಾಮಗಳಲ್ಲಿ ಪ್ರತ್ಯಕ್ಷವಾಗಿ ರಚಿಸಿರುವ ಕಾವಲುಗೋಪುರಗಳಿವೆ.

ಗುಲಬರ್ಗಾ ಕೋಟೆಯ ಸುತ್ತಲು ಬುರುಜುಗಳಿದ್ದರೂ, ಅವುಗಳ ಮಧ್ಯದಲ್ಲಿ ಕೆಲವೊಂದು ಕಾವಲುಗೋಪುರಗಳಿವೆ. ಕೋಟೆಯ ಒಳಗೋಡೆ ಹಾಗೂ ಹೊರಗೋಡೆಯ ಹಿಂಭಾಗದಲ್ಲಿ ವೃತ್ತಾಕಾರದ ಕೆಲವು ಕಾವಲುಗೋಪುರಗಳಿವೆ. ಇವುಗಳನ್ನು ಕೋಟೆ ಗೋಡೆಯ ಮೇಲ್ಭಾಗದಲ್ಲಿ ೫ ರಿಂದ ೧೦ ಅಡಿ ಎತ್ತರದ ವೃತ್ತಾಕಾರದಲ್ಲಿ ನಿರ್ಮಿಸಲಾಗಿದೆ. ಈ ಕಟ್ಟಡಗಳು ಬುರುಜುಗಳಿಗಿಂದ ಭಿನ್ನವಾಗಿವೆ. ಆಕ್ರಮಣಕಾರರ ಬಗ್ಗೆ ಮುಂಚಿತವಾಗಿ ಮಾಹಿತಿ ಪಡೆದುಕೊಂಡು ಅದರ ವಿರುದ್ಧ ಪ್ರತಿ ದಾಳಿಯ ತಯ್ಯಾರಿ ಮಾಡಿಕೊಳ್ಳುತ್ತಿದ್ದರು. ಗುಲಬರ್ಗಾ ಕೋಟೆಯ ನಾಲ್ಕು ಮೂಲೆಗಳಲ್ಲಿ ಒಂದೊಂದು ಕಾವಲುಗೋಪುರ ಹಾಗೂ ಪ್ರತಿಯೊಂದು ಭಾಗದ ಗೋಡೆಯ ಮಧ್ಯದಲ್ಲಿ ಒಂದೊಂದು ಕಾವಲುಗೋಪುರಗಳಿವೆ. ಪಶ್ಚಿಮ ಭಾಗದಲ್ಲಿ 'ಕಾಲಾಬುರುಜ' ಹಾಗೂ ಅದರ ಪಕ್ಕದಲ್ಲಿ ಎರಡು ವೃತ್ತಾಕಾರದ ಕಾವಲುಗೋಪುರಗಳಿವೆ. ಇಲ್ಲಿ ಸುಸಜ್ಜಿತ ಸೈನ್ಯಕ್ಕೆ ಅವಶ್ಯವಾಗಿರುವ ಎಲ್ಲಾ ಸೌಲಭ್ಯಗಳು ದೊರೆಯುವಂತೆ ಮಾಡಲಾಗಿದೆ. ಈ ರೀತಿಯ ಎತ್ತರವಾದ ಗೋಪುರಗಳನ್ನು ಹತ್ತಲು ೮ ರಿಂದ ೧೫ ಮೆಟ್ಟಿಲುಗಳಿವೆ.

ಕೋಟೆಯ ಜಾಮಿ ಮಸೀದಿಯ ಮುಂಭಾಗದಲ್ಲಿ ಚೌಕಾಕಾರದ ಬೃಹತ ಕಾವಲುಗೋಪುರವಿದೆ. ೭೫x೭೯ ಅಡಿ ಉದ್ದ ಅಗಲವಾಗಿದ್ದು ೧೫೦ ಅಡಿ ಎತ್ತರವಾಗಿದೆ. ಇದನ್ನು ರಣಮಂಡಲ (ಬಾಲಹಿಸ್ಸರ) ಎಂದು ಕರೆಯುತ್ತಾರೆ.[೮೪] ಮೊದಲನೆಯ ಮಹಮ್ಮದ ಶಹಾನ ಕಾಲದಲ್ಲಿ ನಿರ್ಮಿಸಿರುವ ಈ ಕಟ್ಟಡವು ಕೋಟೆಯ ಕಾವಲಿಗಾಗಿ ನಿರ್ಮಿಸಲಾಗಿದೆ. ಇದರ ಮೇಲ್ಭಾಗದಲ್ಲಿ ೧೫ ಅಡಿ ಉದ್ದನೆಯ ೩ ತೋಪುಗಳಿವೆ. ಬೇರೆ ಬೇರೆ ದಿಕ್ಕಿಗೆ ಮುಖ ಮಾಡಿಕೊಂಡಿರುವ ತೋಪುಗಳ ಸಹಾಯದಿಂದ ಶತ್ರುಗಳ ಕೋಟೆಯ ಸಮೀಪ ಬರುತ್ತಿದ್ದಂತೆ ಅವರ ಮೇಲೆ ಪ್ರತಿ ದಾಳಿ ಮಾಡಲು ಇವುಗಳು ಸಹಾಯಕವಾಗುತ್ತವೆ.

ಶಹಾಪೂರ ಕೋಟೆಯ ಸುತ್ತಲು ವೃತ್ತಾಕಾರದ ಕಾವಲುಗೋಪುರಗಳಿವೆ.[೮೫] ಮೂರು ಸುತ್ತಿನ ಗೋಡೆಯನ್ನು ಹೊಂದಿರುವ ಈ ಕೋಟೆಯ ಪ್ರತಿಯೊಂದು ಸುತ್ತಿನಲ್ಲಿ ಬುರುಜುಗಳನ್ನು ಹೊರತು ಪಡಿಸಿ, ಕೆಲವು ಕಾವಲುಗೋಪುರಗಳಿವೆ. ಅರಮನೆಯ ಮುಂಭಾಗದಲ್ಲಿ ಹಾಗೂ ಅದರ ಹಿಂಭಾಗದಲ್ಲಿ ೧೦ ಅಡಿ

ಎತ್ತರದ ಕಾವಲುಗೋಪುರಗಳಿವೆ. ಇವುಗಳ ಮೇಲೆ ೧೫ ಅಡಿ ಉದ್ದನೆಯ ತೋಪುಗಳಿವೆ. ವಾಗಣಗೇರಿ ಕೋಟೆಯ ಒಳಗಡೆ ವೇಣುಗೋಪಾಲ ಸ್ವಾಮಿಯ ದೇವಸ್ಥಾನದ ಮುಂಭಾಗದಲ್ಲಿ ೨೦ ಅಡಿ ಎತ್ತರದ ಬೃಹತ್ ಬಂಡೆಗಳಿವೆ. ಇವುಗಳ ಮೇಲೆ ೧೦ ಅಡಿ ಎತ್ತರದಲ್ಲಿ ವೃತ್ತಾಕಾರದ ಕಾವಲುಗೋಪುರವನ್ನು ರಚಿಸಲಾಗಿದೆ. ಇದಕ್ಕೆ ಮೇಲೆ ಹತ್ತಲು ಬಂಡೆಗಳ ಮಧ್ಯದಲ್ಲಿ ಮೆಟ್ಟಿಲುಗಳನ್ನು ಮಾಡಲಾಗಿದೆ. ಪ್ರಸ್ತುತ ಈ ಗೋಪುರದ ಮಧ್ಯದಲ್ಲಿ ಹನುಮಾನ ದೇವಾಲಯವನ್ನು ನಿರ್ಮಿಸಲಾಗಿದೆ. ಕೋಟೆಯ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಅನೇಕ ಮೊರಡಿಗಳಿವೆ. ಅಂದರೆ ಮಣ್ಣಿನ ಎತ್ತರವಾದ ದಿನ್ನೆಗಳು. ಅದರಲ್ಲಿ ಕೆಂಪು ದೊಂಡಿ ಅತ್ಯಂತ ಪ್ರಮುಖವಾದುದು ಇದನ್ನು 'ಲಾಲ್ ತೆಕಡಿ' ಎಂದು ಕರೆಯುತ್ತಾರೆ.[೮೬]

ಮಳಖೇಡ ಕೋಟೆಯ ಕೇಂದ್ರ ಭಾಗದಲ್ಲಿ ೨೫ ಅಡಿ ಎತ್ತರದ ವೃತ್ತಾಕಾರದ ಕಾವಲುಗೋಪುರವಿದೆ. ವಿಶಾಲವಾದ ತಳಪಾಯದ ರಚಿಸಲಾಗಿದೆ. ಇದನ್ನು ಉಪಲಿಬುರ್ಜ ಎಂದು ಕರೆಯುತ್ತಾರೆ.[೮೭] ಮೇಲೆ ಹತ್ತಲು ಪೂರ್ವಕ್ಕೆ ಮುಖ ಮಾಡಿರುವ ಚಿಕ್ಕದ್ವಾರ ಹಾಗೂ ೧೮ ಮೆಟ್ಟಿಲುಗಳಿವೆ. ಇದರ ಮೇಲ್ಭಾಗದಲ್ಲಿ ೪ ಅಡಿ ಎತ್ತರದ ಮೇಲೆ ತೋಪಿನ ಕಟ್ಟೆಯನ್ನು ರಚಿಸಲಾಗಿದೆ. ಕೋಟೆಯ ಪೂರ್ವ ಭಾಗದಲ್ಲಿ ೩೦ ಅಡಿ ಎತ್ತರದ ಮತ್ತೊಂದು ವೃತ್ತಾಕಾರದ ಕಾವಲುಗೋಪುರವಿದೆ. ಇದರ ಅರ್ಧಭಾಗ ನಾಶ ಹೊಂದಿದೆ. ಅಲ್ಲದೆ ಇದರ ಸುತ್ತಮುತ್ತಲು ಸಂಪೂರ್ಣವಾಗಿ ಗಿಡ ಮರಗಳನ್ನು ಬೆಳೆದಿರುವುದರಿಂದ ಅಲ್ಲಿ ಪ್ರವೇಶಕ್ಕೆ ಸಾಧ್ಯವಿಲ್ಲ. ಕೋಟೆಯ ಕೇಂದ್ರಭಾಗದಲ್ಲಿ ಎರಡು ಕಾವಲುಗೋಪುರಗಳಿವೆ. ಸುತ್ತಲು ಇರುವ ಕೆಲವು ಬುರುಜುಗಳನ್ನು ಕಾವಲುಗೋಪುರಗಳಾಗಿ ಬಳಸಲಾಗುತ್ತಿತ್ತು.

ಯಾದಗಿರ ಕೋಟೆಯು ಮೂರು ಸುತ್ತಿನ ಕೋಟೆಯನ್ನು ಹೊಂದಿದ್ದು, ಪ್ರತಿಯೊಂದು ಸುತ್ತಿನ ಗೋಡೆಯಲ್ಲಿ ಹಲವು ಬುರುಜುಗಳಿವೆ. ಅವುಗಳ ಮಧ್ಯದಲ್ಲಿ ಕೆಲವೊಂದು ಕಾವಲುಗೋಪುರಗಳಿವೆ. ಬುರುಜುಗಳು ಅರ್ಧ ವೃತ್ತಾಕಾರದಲ್ಲಿದ್ದರೆ ಕಾವಲುಗೋಪುರಗಳು ವೃತ್ತಾಕಾರದಲ್ಲಿವೆ. ಎರಡನೆಯ ಸುತ್ತಿನ ಗೋಡೆಯ ದಕ್ಷಿಣ ಭಾಗದಲ್ಲಿ ೩೦ ರಿಂದ ೪೦ ಅಡಿ ಎತ್ತರದ ಕಾವಲುಗೋಪುರವಿದೆ. ಕೋಟೆಯ ಮೇಲ್ಭಾಗದಲ್ಲಿ ವಾಯುವ್ಯ ದಿಕ್ಕಿನಲ್ಲಿ ಅತ್ಯಂತ ಎತ್ತರವಾದ ಬಂಡೆಯ ಮೇಲೆ ಆಕರ್ಷಕ ಕಾವಲುಗೋಪುರವಿದೆ. ನಾಲ್ಕು ದಿಕ್ಕಿನಲ್ಲಿ ಕಮಾನುಗಳನ್ನು ಹೊಂದಿದ್ದು, ೧೦ ಅಡಿ ಎತ್ತರದ ಮೇಲೆ ಛತ್ತು ಇದರ ಮೇಲ್ಭಾಗ ೨ ಅಡಿ ಕೆಳಗಡೆ ಚಾಚಿಕೊಂಡಿದೆ. ಕಾವಲುಗಾರರಿಗೆ ಯಾವುದೇ ತೊಂದರೆಯಾಗದಂತೆ ರಕ್ಷಣಾತ್ಮಕವಾಗಿ ಇದನ್ನು ನಿರ್ಮಿಸಲಾಗಿದೆ. ಕೋಟೆಯ ಕೇಂದ್ರ ಭಾಗದಲ್ಲಿ ಜೋಡು ಭಾವಿಯ ಪಕ್ಕದಲ್ಲಿ ೨೦ ಅಡಿ ಎತ್ತರದ ವೃತ್ತಾಕಾರದ ಕಾವಲುಗೋಪುರವಿದೆ.[೮೮] ಇದರ ಮೇಲೆ ಹತ್ತಲು ಹಲವು ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ೪ ಅಡಿ ಎತ್ತರದ ವೃತ್ತಾಕಾರದ ಕಟ್ಟೆಯ ಮೇಲೆ ೧೫ ಅಡಿ ಉದ್ದನೆಯ ಒಂದು ತೋಪು, ಹಾಗೂ ೮ ಅಡಿ ಉದ್ದನೆಯ ಮತ್ತೊಂದು ತೋಪು ಇದೆ. ಇದರ ಕೆಳಭಾಗದಲ್ಲಿ ಸೈನಿಕರ ವಸತಿ ನಿಲಯಗಳು, ಮದ್ದು ಗುಂಡಿನ ಸಂಗ್ರಹವಿದೆ. ಪಶ್ಚಿಮ ಭಾಗದ ಕೋಟೆಯ

ಕೊನೆಯ ಭಾಗದಲ್ಲಿ ೮ ಅಡಿ ಎತ್ತರದ ಕಾವಲುಗೋಪುರವಿದೆ. ಈ ರೀತಿ ಯಾದಗಿರ ಕೋಟೆಯಲ್ಲಿ ಹಲವು ಕಾವಲುಗೋಪುರಗಳಿವೆ.

ಚಂಡ್ರಕಿಯ ಮಣ್ಣಿನ ಕೋಟೆಯ ಪಶ್ಚಿಮ ಭಾಗದ ಗೋಡೆಯ ಸಮೀಪದಲ್ಲಿ ೨೦ ಅಡಿ ಎತ್ತರದ ಕಾವಲುಗೋಪುರವಿದೆ.[೮೯] ಕೋಟೆ ಗೋಡೆಯ ಮೇಲಿನಿಂದ ಇದರ ಮೇಲ್ಭಾಗಕ್ಕೆ ಹೋಗಬಹುದು. ಇದಕ್ಕೆ ಒಂದು ಚಿಕ್ಕ ಪ್ರವೇಶದ್ವಾರವಿದೆ. ಅದರ ಎರಡು ಬದಿಯಲ್ಲಿ ಕಾವಲುಗಾರರ ವಸತಿ ನಿಲಯಗಳಿವೆ. ಅದರ ನಂತರ ೪ ಅಡಿ ಎತ್ತರದ ವೃತ್ತಾಕಾರದ ಕಟ್ಟೆಯ ಮೇಲೆ ೧೦ ಅಡಿ ಉದ್ದನೆಯ ತೋಪು ಇದೆ. ಗುರುಮಿಠಕಲ್ಲಿನಲ್ಲಿ ಕೋಟೆಯ ಪಶ್ಚಿಮ ಭಾಗ ೩೦ ಅಡಿ ಎತ್ತರದ ಮಣ್ಣಿನ ಕಾವಲುಗೋಪುರವಿದೆ. ಅದರ ಸುತ್ತಲಿನ ಕಟ್ಟಡವು ನಾಶ ಹೊಂದಿದ್ದು ಕೇವಲ ಕೇಂದ್ರ ಭಾಗ ಮಾತ್ರ ಉಳಿದುಕೊಂಡಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳನ್ನು ಹೊರತು ಪಡಿಸಿ, ಅನೇಕ ಗ್ರಾಮಗಳಲ್ಲಿ ಹುಡೆವುಗಳಿವೆ. ಇವುಗಳು ಸಹ ಗ್ರಾಮದ ರಕ್ಷಣಾ ವಾಸ್ತುಶಿಲ್ಪಗಳಾಗಿವೆ. ಕೆಲವೊಂದು ಗ್ರಾಮದ ನಾಲ್ಕು ದಿಕ್ಕಿನಲ್ಲಿ ಒಂದೊಂದು ಹುಡೆವುಗಳಿರುತ್ತವೆ. ಆಕ್ರಮಣಕಾರರ ಬಗ್ಗೆ ಮುಂದಿನ ಗ್ರಾಮಗಳಿಗೆ ಮಾಹಿತಿಯನ್ನು ರವಾನಿಸಲು ಹಾಗೂ ಸ್ಥಳೀಯರ ರಕ್ಷಣೆಯಲ್ಲಿ ಇವುಗಳು ಪ್ರಮುಖ ಪಾತ್ರವಹಿಸುತ್ತವೆ.

೩.೮.೫. ಬುರುಜುಗಳು ಅಥವಾ ಕೊತ್ತಳಗಳು:

ಕೋಟೆಯ ರಕ್ಷಣೆಯಲ್ಲಿ ಬುರುಜುಗಳು ಅಥವಾ ಕೊತ್ತಳಗಳ ಪಾತ್ರ ಪ್ರಮುಖವಾಗಿದೆ. ಭಾರತದ ಪ್ರತಿಯೊಂದು ಪ್ರಬಲವಾದ ಕೋಟೆಗಳು ಕೊತ್ತಳಗಳನ್ನು ಹೊಂದಿವೆ. ಕೋಟೆಯ ಉಬ್ಬಾದ ಭಾಗವನ್ನು 'ಕೊತ್ತಳ' ಅಥವಾ 'ಬತೆರಿ'ಗಳು ಎಂದು ಕರೆಯಲಾಗುತ್ತದೆ.[೯೦] ಇವುಗಳು ಕೋಟೆಯ ಎರಡು ಗೋಡೆಗಳನ್ನು ಜೋಡಿಸುತ್ತವೆ. ಸಾಮಾನ್ಯವಾಗಿ ವೃತ್ತಾಕಾರದ ಕೋಟೆಗಳಲ್ಲಿ ಹಾಗೂ ಬೆಟ್ಟದ ಕೋಟೆಗಳಲ್ಲಿ ಹೆಚ್ಚಿನ ಸಂಖ್ಯೆಯ ಬುರುಜುಗಳು ಕಂಡು ಬರುತ್ತವೆ. ಪ್ರತಿ ೫೦ ರಿಂದ ೧೦೦ ಅಡಿ ಅಂತರದಲ್ಲಿ ಒಂದು ಕೊತ್ತಳವಿರುತ್ತದೆ. ಇದರ ಉದ್ದೇಶ ಗೋಡೆಯನ್ನು ಯಾವ ದಿಕ್ಕಿನಲ್ಲಿ ಮುಂದುವರೆಯಿಸಬೇಕೆಂದು, ಇವುಗಳ ಆಧಾರದಿಂದ ತಿಳಿದು ಬರುತ್ತದೆ. ಕೋಟೆಯ ಗೋಡೆಗಿಂತಲು ಎತ್ತರ ಹಾಗೂ ದಪ್ಪವಾಗಿರುತ್ತವೆ. ಇವುಗಳು ಅರ್ಧವೃತ್ತಾಕಾರ, ವೃತ್ತಾಕಾರ, ಚೌಕಾಕಾರದಲ್ಲಿ ವೃತ್ತ ಹಾಗೂ ಚೌಕಾಕಾರ, ಕುದುರೆ ಲಾಳಾಕಾರ ಹಾಗೂ ಬಹು ಕೋನಾಕೃತಿಗಳಲ್ಲಿ ನಿರ್ಮಿಸಲಾಗುತ್ತಿತ್ತು. ಕೋಟೆಯೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿರುವುದರಿಂದ 'ಕೋಟೆ-ಕೊತ್ತಲ' ಎನ್ನುವ ಜೋಡು ಶಬ್ದಗಳು ಹುಟ್ಟಿಕೊಂಡಿವೆ. ಒಂದು ವೇಳೆ ಚೌಕಾಕಾರದ ಕೋಟೆಯಾಗಿದ್ದರೆ, ನಾಲ್ಕು ಮೂಲೆಗಳಲ್ಲಿ ಬೃಹದ್ದಾಕಾರದ ಕೊತ್ತಳ ಅಥವಾ ಬುರುಜುಗಳು ಇರುತ್ತವೆ. ಕೋಟೆ ಗೋಡೆಯು ೧೦೦ ಅಡಿ ಗಿಂತಲು ಉದ್ದವಾಗಿದ್ದರೆ, ಮಧ್ಯದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಕೊತ್ತಳಗಳು ಇರುತ್ತವೆ. ಬುರುಜುಗಳು ಕೋಟೆಯ ಗೋಡೆಗೆ ಭದ್ರತೆಯನ್ನು ಒದಗಿಸುತ್ತವೆ. ಒಂದು ವೇಳೆ ಯುದ್ಧದಲ್ಲಿ ಕೋಟೆಯ ಯಾವುದೇ ಭಾಗದ ಗೋಡೆಯು ಧ್ವಂಸಗೊಂಡರೆ,

ಅಲ್ಲಿಯ ಎರಡು ಕೊತ್ತಳಗಳ ಮಧ್ಯದ ಗೋಡೆಯನ್ನು ಮಾತ್ರ ಪುನರ್‌ನಿರ್ಮಿಸಲಾಗುತ್ತದೆ. ಆದ್ದರಿಂದ ಕೋಟೆಯ ರಕ್ಷಣೆಯಲ್ಲಿ ಬುರುಜುಗಳು ಮಹತ್ವದ ಪಾತ್ರವಹಿಸುತ್ತವೆ.

ಗುಲಬರ್ಗಾ ಕೋಟೆಯು ಎರಡು ಸುತ್ತಿನ ಗೋಡೆಯಿಂದ ಆವೃತ್ತಯಾಗಿದೆ, ಗೋಡೆಯಲ್ಲಿ ೩೦ ರಿಂದ ೭೫ ಅಡಿಯ ಅಂತರದಲ್ಲಿ ಒಂದೊಂದು ಬುರುಜುಗಳಿವೆ. ಸುಮಾರು ೨೦ ರಿಂದ ೩೦ ಅಡಿ ಎತ್ತರವಾಗಿರುವ ಈ ಬುರುಜುಗಳು ತಳಭಾಗದಲ್ಲಿ ವಿಶಾಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತಾ ಹೋಗುತ್ತವೆ.[೯೧] ಪ್ರತಿಯೊಂದು ಬುರುಜುಗಳಲ್ಲಿ ಅಂಬುಗಿಂಡಿಗಳು, ವೀಕ್ಷಣಾ ರಂಧ್ರಗಳಿವೆ. ಒಂದು ರೀತಿಯಲ್ಲಿ ಕಾವಲುಗೋಪುರಗಳಂತೆ ಇವು ಕಾರ್ಯನಿರ್ವಹಿಸುತ್ತವೆ. ಹೊರಗೋಡೆ ಹಾಗೂ ಒಳಗೋಡೆ ಎರಡರಲ್ಲಿಯೂ ಸಮ ಪ್ರಮಾಣದ ಬುರುಜುಗಳಿವೆ. ಉತ್ತರ ದಿಕ್ಕಿನಲ್ಲಿ ಒಂದು ಕೊತ್ತಳಕ್ಕೆ ಅಂಟಿಕೊಂಡಿರುವಂತೆ, ಭಾವಿಯನ್ನು ರಚಿಸಲಾಗಿದೆ. ಅದರ ಬದಿಯಲ್ಲಿ ಒಂದು ಗುಪ್ತದ್ವಾರವಿದೆ. ಇದರ ಮೂಲಕ ಹೊರ ಹೋಗಲು ಅನಕೂಲವಾಗುವಂತೆ ಇದನ್ನು ನಿರ್ಮಿಸಲಾಗಿದೆ. ಇವುಗಳಿಂದ ಕೋಟೆಯ ಸೌಂದರ್ಯ ಹೆಚ್ಚುವಂತಾಗಿದೆ.

ಫಿರೋಜಾಬಾದ ಕೋಟೆಯಲ್ಲಿ ಹೆಚ್ಚಿನ ಸಂಖ್ಯೆಯ ಕೊತ್ತಳಗಳು ಕಂಡು ಬರುವುದಿಲ್ಲ. ಏಕೆಂದರೆ ಇಲ್ಲಿಯ ಕೋಟೆ ಗೋಡೆಯು ನೇರವಾಗಿ ಮುಂದುವರೆಯದೆ ಅಲ್ಲಲ್ಲಿ ಬೇರೆ ದಿಕ್ಕಿಗೆ ತಿರುಗಿಸಲಾಗಿದೆ. ಆದ್ದರಿಂದ ಕೊತ್ತಳಗಳ ಅವಶ್ಯಕತೆ ಇರುವುದಿಲ್ಲ ಶಹಾಪೂರ ದ್ವಾರದ ಮುಂಭಾಗದಲ್ಲಿ ಎರಡು ೩೦ ಅಡಿ ಎತ್ತರವಾದ ಕೊತ್ತಳಗಳಿವೆ. ಅಲ್ಲದೆ ಪಶ್ಚಿಮ ಭಾಗದಲ್ಲಿ ಇರುವ ದ್ವಾರದ ಎರಡು ಬದಿಯಲ್ಲಿ ಕೋನಾಕೃತಿಯ ಬುರುಜುಗಳಿವೆ. ಸಾಮಾನ್ಯವಾಗಿ ಎಲ್ಲಾ ಕೋಟೆಗಳ ಪ್ರವೇಶದ್ವಾರವು ಎರಡು ಬದಿಯಲ್ಲಿ ವಿವಿಧ ಆಕಾರದ ಬುರುಜುಗಳಿರುತ್ತವೆ. ಇವುಗಳು ದ್ವಾರದ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಶಹಾಪೂರ ಬೆಟ್ಟದ ಮೇಲಿನ ಕೋಟೆಯ ಸುತ್ತಲು ಅವಶ್ಯವಿರುವ ಸ್ಥಳಗಳಲ್ಲಿ ಬುರುಜುಗಳನ್ನು ರಚಿಸಲಾಗಿದೆ. ಪೂರ್ವದಿಂದ ಪಶ್ಚಿಮದವರೆಗೆ ಚಾಚಿಕೊಂಡಿರುವ ಈ ಕೋಟೆಯ ಉದ್ದಕ್ಕೂ ಹಲವು ಆಕಾರದ ಬುರುಜುಗಳಿವೆ. ಕೆಲವು ಬುರುಜುಗಳ ರಚನೆಗೆ ಅಲ್ಲಿ ಲಭ್ಯವಾಗುವ ಬೆಟ್ಟಗಳ ಬಂಡೆಯನ್ನು ಬಳಸಿಕೊಂಡು ಅದರ ಮೇಲೆ ಕಟ್ಟಲಾಗಿದೆ. ಶಹಾಪೂರ ಕೋಟೆಯಲ್ಲಿ ಇಂತಹ ಬುರುಜುಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಬೆಟ್ಟದ ಸುತ್ತಲು ಚಾಚಿಕೊಂಡಿರುವ ಗೋಡೆಯಲ್ಲಿ ರಕ್ಷಣೆಯ ದೃಷ್ಠಿಯಿಂದ ಇವುಗಳನ್ನು ರಚಿಸಲಾಗಿದೆ. ಈ ಕೋಟೆ ಮೂರು ಹಂತದ ಗೋಡೆಯನ್ನು ಹೊಂದಿದೆ. ಪ್ರತಿಯೊಂದು ಹಂತದ ಗೋಡೆಯಲ್ಲಿ ಬುರುಜುಗಳಿವೆ. ಆದ್ದರಿಂದ ಶಹಾಪೂರ ಕೋಟೆಯು ಅತ್ಯಂತ ಭದ್ರವಾದ ಕೋಟೆಯಾಗಿದೆ.

ವಾಗಣಗೇರಿ ಕೋಟೆ ಪಡುಕೋಟೆಯಾಗಿದ್ದೂ, ಉತ್ತರದಿಂದ ದಕ್ಷಿಣಕ್ಕೆ ಚಾಚಿಕೊಂಡಿರುವ ಇದರ ಗೋಡೆಯ ಮಧ್ಯದಲ್ಲಿ ಅರ್ಧವೃತ್ತಾಕಾರದ ಬುರುಜುಗಳಿವೆ. ಇಲ್ಲಿಯ ಕೋಟೆ ಗೋಡೆಯು

ನೇರವಾಗಿರುವುದರಿಂದ ಕೊತ್ತಳಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿವೆ. ದಕ್ಷಿಣ ಭಾಗದ ದ್ವಾರದ ಎರಡು ಬದಿಯಲ್ಲಿ ಬಂಡೆಗಳಿಗೆ ಆವರಿಸಿಕೊಂಡಂತೆ ಕೊತ್ತಳಗಳಿವೆ. ಇವುಗಳ ಮೇಲೆ ಸೈನಿಕರಿಗೆ ಕಾವಲು ವ್ಯವಸ್ಥೆ ಇದೆ. ವನದುರ್ಗ ಕೋಟೆಯು ಚೌಕಾಕಾರದಲ್ಲಿದೆ. ಇದರ ಎರಡು ಪ್ರವೇಶದ್ವಾರಗಳು ಕೊತ್ತಳಗಳ ಮಧ್ಯದಲ್ಲಿವೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ೨೫ ಅಡಿ ಎತ್ತರದ ಕೊತ್ತಳಗಳಿವೆ. ಪ್ರತಿಯೊಂದು ಗೋಡೆಯ ಮಧ್ಯದಲ್ಲಿ ಎರಡು ಕೊತ್ತಳಗಳಿವೆ. ಇವುಗಳ ಮೇಲ್ಭಾಗದಲ್ಲಿ ಆಕರ್ಷಕವಾದ ಸೈನಿಕರ ತಾಣಗಳಿವೆ.

ಸುರಪುರ ಕೋಟೆಯು ಗ್ರಾಮ ರಕ್ಷಣೆಯ ಕೋಟೆಯಾಗಿರುವುದರಿಂದ ಬೆಟ್ಟದ ಸುತ್ತಲೂ ವಿಸ್ತಾರವಾಗಿರುವ ಗೋಡೆಯ ಮಧ್ಯದಲ್ಲಿ ಕೆಲವು ಬುರುಜುಗಳು ಕಂಡು ಬರುತ್ತವೆ. ಇವುಗಳು ವೃತ್ತಾಕಾರ ಹಾಗೂ ಅರ್ಧವೃತ್ತಾಕಾರದಲ್ಲಿವೆ. ಅಲ್ಲದೆ ನಗರದ ಸುತ್ತಲು ಇರುವ ದ್ವಾರಗಳ ಎರಡು ಬದಿಯಲ್ಲಿ ಬುರುಜುಗಳಿವೆ. ಚಿನ್ಮಳ್ಳಿ ಕೋಟೆಯ ಸುತ್ತಲು ಹಲವು ಬುರುಜುಗಳಿವೆ. ಇಜೇರಿ ಕೋಟೆಯು ಚೌಕಾಕಾರದಲ್ಲಿರುವುದರಿಂದ ಅದರ ನಾಲ್ಕು ದಿಕ್ಕಿನಲ್ಲಿ ಮಾತ್ರ ಬುರುಜುಗಳಿವೆ. ಭೀಮಾ ನದಿಯ ಸಮೀಪದಲ್ಲಿ ನಿರ್ಮಿಸಿರುವ ಕೊಲ್ಲೂರು ಕೋಟೆಯಲ್ಲಿ ನದಿಯ ಭಾಗಕ್ಕೆ ಹಲವು ಬುರುಜುಗಳಿವೆ. ಇವುಗಳನ್ನು ಚಪ್ಪಡಿ ಕಲ್ಲುಗಳಲ್ಲಿ ಮೇಲೆ ನಿರ್ಮಿಸಲಾಗಿದೆ. ಪ್ರತಿಯೊಂದು ದೊಡ್ಡ ಬುರುಜುಗಳ ಮೇಲೆ ಕಾವಲುಗಾರರಿಗೆ ಸ್ಥಳವಿದೆ ಹಾಗೂ ಕೆಲವು ಬುರುಜುಗಳಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ.

ಮಳಖೇಡ ಕೋಟೆಯಲ್ಲಿ ಹಲವು ಬಗೆಯ ಬುರುಜುಗಳಿವೆ. ಈ ಕೋಟೆಯ ಎರಡು ಭಾಗಗಳು ನದಿಯಿಂದ ಹಾಗೂ ಇನ್ನೊಂದು ಭಾಗ ಹಳ್ಳದಿಂದ ಆವೃತ್ತಿಯಾಗಿದೆ. ಕೋಟೆಯ ಮೂರು ಭಾಗಗಳಿಗೆ ನೀರಿನಿಂದ ರಕ್ಷಣೆ ಇದೆ. ಆದ್ದರಿಂದ ಈ ಭಾಗದಲ್ಲಿ ಅತ್ಯಂತ ಭದ್ರವಾದ ಗೋಡೆಯನ್ನು ನಿರ್ಮಿಸಿ ಅದರ ಕೊತ್ತಳಗಳು ವಿಶಾಲವಾಗಿ ನಿರ್ಮಿಸಲಾಗಿದೆ. ಒಂದು ಕೊತ್ತಳ ಮತ್ತೊಂದು ಕೊತ್ತಳಕ್ಕಿಂತ ಭಿನ್ನವಾಗಿದೆ.[೯೨] ಮೊದಲನೆಯ ಹಂತದ ಕೊತ್ತಳಗಳು ವೃತ್ತಾಕಾರದಲ್ಲಿವೆ. ಸುಮಾರು ೨೫ ರಿಂದ ೩೦ ಅಡಿ ಎತ್ತರವಾಗಿರುವ ಈ ಕಟ್ಟಡಗಳು ಕೆಳಭಾಗದಿಂದ ಮೇಲಿನವರೆಗೆ ಒಂದೇ ಆಕಾರದಲ್ಲಿವೆ. ಎರಡನೆಯ ಹಂತದಲ್ಲಿ ಬರುವ ಕೊತ್ತಳಗಳು ತಳಪಾಯದ ೧೦ ಅಡಿಯವರೆಗೆ ಚೌಕಾಕಾರ ಗೋಡೆಯಂತೆ ನಿರ್ಮಿಸಿ, ಅದರ ಮೇಲೆ ವೃತ್ತಾಕಾರದಲ್ಲಿ ಮುಂದುವರೆಯುವುದು. ಇನ್ನೂ ಕೆಲವು ಕೊತ್ತಳಗಳು ಕೆಳಹಂತದಲ್ಲಿ ಕೋನಾಕೃತಿಯಲ್ಲಿ ಇದ್ದು ಮೇಲೆ ಹೋದಂತೆ ವೃತ್ತಾಕಾರ ಅಥವಾ ಚೌಕಾಕಾರದಲ್ಲಿ ಮುಂದುವರೆಯುತ್ತವೆ. ಈ ರೀತಿ ಮಳಖೇಡ ಕೋಟೆಯಲ್ಲಿ ಬೇರೆ ಬೇರೆ ಶೈಲಿಯ ಬುರುಜುಗಳು ರಚನೆಗೊಂಡಿವೆ. ಇದಕ್ಕೆ ಕಾರಣ ನದಿಯ ನೀರಿನ ರಭಸಕ್ಕೆ ಕೋಟೆಯ ಹೊರಭಾಗದಲ್ಲಿ ಚಾಚಿಕೊಂಡಿರುವ ಬುರುಜುಗಳು ಕೆಲವು ವರ್ಷಗಳ ನಂತರ ಬಿದ್ದು ಹೋದಾಗ, ಅವುಗಳ ಪುನರ್‌ರಚನೆಯ ಕಾಲದಲ್ಲಿ ಬೇರೆ ಶೈಲಿಯಲ್ಲಿ ರಚನೆ ಮಾಡಿರುವ ಸಾಧ್ಯತೆಗಳಿವೆ. ಕೋಟೆಯ ಈಶಾನ್ಯ ದಿಕ್ಕಿನಲ್ಲಿರುವ ಎಲ್ಲಾ ಬುರುಜುಗಳು ಅರ್ಧವೃತ್ತಾಕಾರದಲ್ಲಿ ಹಾಗೂ ೧೫ ರಿಂದ ೨೦ ಅಡಿ ಎತ್ತರದಲ್ಲಿವೆ. ಅದೇ ರೀತಿ ಪ್ರವೇಶದ್ವಾರದ ಎರಡು ಬದಿಯಲ್ಲಿರುವ

ವೃತ್ತಾಕಾರದ ಬುರುಜುಗಳು ೧೫ ಅಡಿ ಎತ್ತರವಾಗಿದ್ದು ಅತ್ಯಂತ ವಿಶಾಲವಾಗಿವೆ. ಅದರ ಮೇಲ್ಭಾ.ಗದಲ್ಲಿ ಸೈನಿಕರಿಗೆ ಕಾವಲು ಮಾಡಲು ವಿಶೇಷ ಸ್ಥಳವಿದೆ.

ಯಾದಗಿರ ಬೆಟ್ಟದ ಕೋಟೆಯು ಮೂರು ಸುತ್ತಿನ ಗೋಡೆಯನ್ನು ಹೊಂದಿದೆ. ಬೆಟ್ಟದ ಮೇಲೆ ಎಲ್ಲಾ ಬದಿಯಲ್ಲಿ ಚಾಚಿಕೊಂಡಿರುವ ಈ ಕೋಟೆಯಲ್ಲಿ ಹೆಚ್ಚಿನ ಸಂಖ್ಯೆಯ ಬುರುಜುಗಳಿವೆ. ಮೂರು ಸುತ್ತಿನ ಗೋಡೆಯನ್ನು ಹೊಂದಿರುವ ಈ ಕೋಟೆಯ ಎಲ್ಲಾ ಗೋಡೆಗಳಲ್ಲಿ ಬುರುಜುಗಳಿವೆ. ಪ್ರತಿ ೫೦ ರಿಂದ ೮೫ ಅಡಿ ಅಂತರದಲ್ಲಿ ಒಂದೊಂದು ಕೊತ್ತಳಗಳಿವೆ. ಕೆಲವು ಕೊತ್ತಳಗಳು ಹೊರಭಾಗಕ್ಕೆ ಚಾಚಿಕೊಂಡಿದ್ದರೆ, ಮತ್ತೆ ಕೆಲವು ಕೋಟೆಯ ಒಳಭಾಗದಲ್ಲಿ ವೃತ್ತಾಕಾರದಲ್ಲಿವೆ. ಒಳ ಭಾಗದಲ್ಲಿರುವ ಬುರುಜುಗಳು ಕಾವಲುಗೋಪುರಗಳಂತೆ ಕಂಡು ಬರುತ್ತವೆ. ಇವುಗಳ ಮೇಲ್ಭಾಗದಲ್ಲಿ ತೋಪಿನ ರಚನೆಯ ವ್ಯವಸ್ಥೆ ಇರುತ್ತದೆ. ಯಾದಗಿರ ಕೋಟೆಯ ಬುರುಜುಗಳ ವಿಶೇಷತೆ ಎಂದರೆ, ಪ್ರತಿಯೊಂದು ಬುರುಜುಗಳ ಪಕ್ಕದಲ್ಲಿ ಒಂದೊಂದು ಪ್ರವೇಶ ದ್ವಾರಗಳಿವೆ. ಇವುಗಳ ಮೂಲಕ ಹೊರಭಾಗಕ್ಕೆ ಸೈನಿಕರು ಕಾವಲು ಹೋಗುತ್ತಿದ್ದರು. ಪ್ರತಿಯೊಂದು ಬುರುಜುಗಳಲ್ಲಿ ದ್ವಾರ ಬಾಗಿಲುಗಳು ಇರುವುದರಿಂದ ಸೈನಿಕರು ಅತಿ ಶೀಘ್ರವಾಗಿ ಯಾವುದೇ ಸ್ಥಳಕ್ಕೆ ತಲುಪಬಹುದಾಗಿದೆ.

ಕೋಟೆಯ ಕೆಲವೊಂದು ದ್ವಾರಗಳ ಎರಡು ಬದಿಯಲ್ಲಿ ವೃತ್ತಾಕಾರದ ಹಾಗೂ ಇಳಿಜಾರಾದ ಬುರುಜುಗಳಿವೆ. ಮೊದಲನೆಯ ಪ್ರವೇಶದ್ವಾರದ ಒಂದು ಬದಿಯಲ್ಲಿರುವ ಬುರುಜು ಅತ್ಯಂತ ಎತ್ತರವಾಗಿದ್ದು, ನುಣುಪಾಗಿ ಕಟೆದ ಕಲ್ಲಿನಲ್ಲಿ ಇದನ್ನು ನಿರ್ಮಿಸಲಾಗಿದೆ. ಕೆಲವು ಕಡೆಗಳಲ್ಲಿ ಬೃಹತ ಬಂಡೆಯನ್ನು ಬಳಸಿಕೊಂಡು ಅದರ ಮೇಲೆ ಬುರುಜು ನಿರ್ಮಿಸಲಾಗಿದೆ. ಕೋಟೆಯ ಮೇಲ್ಭಾಗದಲ್ಲಿ ನಿಂತು ವೀಕ್ಷಿಸಿದರೆ, ಬುರುಜುಗಳ ಅತ್ಯಂತ ಆಕರ್ಷಕವಾಗಿ ಕಂಡು ಬರುತ್ತವೆ. ಇದರಿಂದ ಕೋಟೆಯ ಸೌಂದರ್ಯ ಹೆಚ್ಚುತ್ತದೆ.

ಚಂಡ್ರಕಿಯ ಮಣ್ಣಿನ ಕೋಟೆಯಲ್ಲಿ ಇರುವ ಬುರುಜುಗಳು ಕೋಟೆಯ ರಚನೆಯಂತೆ ೧೫ ಅಡಿ ಎತ್ತರದವರೆಗೆ ಕಲ್ಲಿನಲ್ಲಿ ನಿರ್ಮಿಸಿ ನಂತರ ಅದರ ಮೇಲ್ಭಾಗದಲ್ಲಿ ೧೦ ಅಡಿ ಎತ್ತರದವರೆಗೆ ಮಣ್ಣಿನಲ್ಲಿ ನಿರ್ಮಿಸಲಾಗಿದೆ. ಇದರಲ್ಲಿ ಹಲವು ಬಗೆಯ ರಂದ್ರಗಳಿವೆ. ಅಲ್ಲದೆ ಕೆಲವು ಬುರುಜುಗಳ ಮೇಲೆ ಕಾವಲು ವ್ಯವಸ್ಥೆ ಇದೆ. ಕೋಟೆಯ ದಕ್ಷಿಣ ಭಾಗದಲ್ಲಿ ಹೆಚ್ಚಿನ ಸಂಖ್ಯೆಯ ಬುರುಜುಗಳಿವೆ. ಇವುಗಳನ್ನು ಕ್ರಮಬದ್ಧವಾಗಿ ನಿರ್ಮಿಸಲಾಗಿದೆ. ಅದೆ ರೀತಿ ಗುರುಮಿಠಕಲ್ ಕೋಟೆಯ ಸುತ್ತಲು ಬುರುಜುಗಿವೆ. ಅದರ ಮುಂಭಾಗದಲ್ಲಿ ಎರಡು ಬದಿಯಲ್ಲಿ ವಿಶಾಲವಾದ ಬುರುಜುಗಳಿವೆ. ಕಾಕಲ್‌ವಾರ ಕೋಟೆಯ ಹೆಚ್ಚಿನ ಭಾಗವು ಅವನತಿ ಹೊಂದಿರುವುದರಿಂದ ಅಲ್ಲಿ ಎರಡು ಬುರುಜುಗಳು ಮಾತ್ರ ಉಳಿದುಕೊಂಡಿವೆ.

ಚಿಂಚೋಳಿ ಕೋಟೆಯ ಪೂರ್ವ ಭಾಗದಲ್ಲಿ ಕೋಟೆ ಗೋಡೆಗೆ ಅಂಟಿಕೊಂಡಿರುವಂತೆ ಹಲವು ಬುರುಜುಗಳಿವೆ. ಅದರಲ್ಲಿ ಒಂದು ಬುರುಜು ಕುದುರೆ ಲಾಳಾಕಾರದಲ್ಲಿದೆ. ಕೋಟೆ ಗೋಡೆಯಿಂದ ೨೫

ಅಡಿ ಹೊರಗಡೆ ಚಾಚಿಕೊಂಡಿರುವ ಈ ಕಟ್ಟಡವು ಮೂರು ಹಂತದ ತಳಪಾಯವನ್ನು ಹೊಂದಿದೆ. ಕೆಳಹಂತದ ೩ ಅಡಿ ಎತ್ತರದ ಅರ್ಧವೃತ್ತಾಕಾರದ ವಿಶಾಲವಾದ ತಳಪಾಯವಿದೆ. ಅದರ ಮೇಲೆ ಇನ್ನು ಎರಡು ಹಂತಗಳಿವೆ. ಇದರ ನಂತರ ಬುರುಜು ಆರಂಭವಾಗುತ್ತವೆ. ಸುಮಾರು ೧೫ ಅಡಿ ಎತ್ತರದ ಈ ಬುರುಜು ವಿಶೇಷ ಶೈಲಿಯಲ್ಲಿದೆ. ಗುಲಬರ್ಗಾ ಜಿಲ್ಲೆಯಲ್ಲಿಯೆ ಇದೊಂದು ವಿಶೇಷ ಬುರುಜಾಗಿದೆ. ಸ್ಥಳಿಯವಾಗಿ ಲಭ್ಯವಾಗುವ ಚಿಕ್ಕ ಚಿಕ್ಕ ಆಯತಾಕಾರದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಇದರ ಮುಂದೆ ಹಲವು ಅರ್ಧವೃತ್ತಾಕಾರ ಬುರುಜುಗಳಿವೆ.

ಗುಲಬರ್ಗಾ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ವೃತ್ತಾಕಾರದ ಕೋಟೆಗಳಲ್ಲಿಯ ಬುರುಜುಗಳು ಕಂಡು ಬರುತ್ತವೆ. ಆದರೆ ಇವುಗಳನ್ನು ಗ್ರಾಮಸ್ಥರು ತಮ್ಮ ಅನಕೂಲಕ್ಕೆ ತಕ್ಕಂತೆ ಬಳಸಿಕೊಂಡು ಅವುಗಳನ್ನು ಹಾಳುಗೆಡವಿದ್ದಾರೆ. ಆದ್ದರಿಂದ ಅವುಗಳ ಬಗೆಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ.

೩.೮.೬. ಕಂದಕ:

ಕೋಟೆಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಕಂದಕ. ಕೋಟೆಯ ಸುತ್ತಲು ತಗ್ಗಾದ ಪ್ರದೇಶವನ್ನು ತೋಡಿ ಅಲ್ಲಿ ನೀರು ಹಾಯಿಸಿರುವ ಭಾಗವನ್ನು ಕಂದಕ ಎಂದು ಕರೆಯುತ್ತಾರೆ. ಇದು ಕೋಟೆಗೆ ಅಗತ್ಯವಾದ ರಕ್ಷಣೆಯನ್ನ ನೀಡುತ್ತದೆ. ನೈಸರ್ಗಿಕವಾಗಿ ರಕ್ಷಣೆಯಿಲ್ಲದ ಕೋಟೆಯ ಸುತ್ತಲು ಕಂದಕವನ್ನು ನಿರ್ಮಿಸುತ್ತಾರೆ. ಪ್ರಾಚಿನ ಸಾಹಿತ್ಯದಲ್ಲಿ ಕಂದಕದ ಮಹತ್ವವನ್ನು ಕುರಿತು ಉಲ್ಲೇಖಿಸಲಾಗಿದೆ. ಕೆಲವು ಕಂದಕಗಳು ಕೋಟೆಗೆ ಅಂಟಿಕೊಂಡಿದ್ದರೆ, ಮತ್ತೆ ಕೆಲವು ಕಂದಕಗಳು ಕೋಟೆ ಗೋಡೆಯಿಂದ ನಿಗದಿಪಡಿಸಿದ ಅಂತರದಲ್ಲಿ ನಿರ್ಮಿಸಲಾಗಿದೆ. ಈ ಎರಡು ಬಗೆಯಲ್ಲಿ ನಿರ್ಮಿಸಿರುವ ಕಂದಕಗಳು ಜಿಲ್ಲೆಯ ಕೆಲವು ಕೋಟೆಗಳ ಸುತ್ತಲು ಕಂಡು ಬರುತ್ತವೆ. ಉದಾಹರಣೆಗೆ ಗುಲಬರ್ಗಾ ಕೋಟೆಯ ಗೋಡೆಗೆ ಅಂಟಿಕೊಂಡ ಕಂದಕವಿದೆ. ವನದುರ್ಗದ ಕೋಟೆಯ ಮೂರು ದಿಕ್ಕಿನಲ್ಲಿ ಕೋಟೆಯಿಂದ ೧೫ ಅಡಿ ಅಂತರದಲ್ಲಿ ಕಂದಕವನ್ನು ನಿರ್ಮಿಸಲಾಗಿದೆ. ಕೋಟೆಗೆ ಅಂಟಿಕೊಂಡಿರುವ ಕಂದಕವಿದ್ದರೆ ಅಲ್ಲಿ ಗೋಡೆಯ ತಳಪಾಯ ಅತ್ಯಂತ ಭದ್ರವಾಗಿ ನಿರ್ಮಿಸಬೇಕಾಗುತ್ತದೆ. ಏಕೆಂದರೆ ಕೋಟೆಯು ಸದಾ ನೀರಿನಿಂದ ಆವೃತ್ತ ವಾಗಿರುವುದರಿಂದ ಗೋಡೆಯು ಕುಸಿಯುವ ಸಾಧ್ಯತೆಗಳು ಇರುತ್ತವೆ. ಆದ್ದರಿಂದ ಇದನ್ನು ಗಮನದಲ್ಲಿಕೊಂಡು ಕಂದಕ ಹಾಗೂ ತಳಪಾಯ ನಿರ್ಮಿಸಲಾಗುತ್ತದೆ. ಅಂತೆಯೆ ಗುಲಬರ್ಗಾ ಕೋಟೆಯು ಇಂದಿಗೂ ಸುಸ್ಥಿತಿಯಲ್ಲಿದೆ.

ಕಂದಕ ನಿರ್ಮಾಣದ ಕುರಿತು ಕೋಟಶಾಸ್ತ್ರದಲ್ಲಿ ಅದರ ಉದ್ದ, ಅಗಲ ಮತ್ತು ಎತ್ತರ ಕುರಿತು ಉಲ್ಲೇಖಿಸಲಾಗಿದೆ. ಕಂದಕವು ತಳಪಾಯಕ್ಕಿಂತ ಮೇಲ್ಭಾಗದಲ್ಲಿ ವಿಶಾಲವಾಗಿರುತ್ತದೆ. ಮೇಲ್ಭಾಗದಲ್ಲಿ ೨೦ ಅಡಿಯಿಂದ ೪೦ ಅಡಿಯವರೆಗೆ ಅಗಲ, ೧೫ ರಿಂದ ೨೦ ಅಡಿಯವರೆಗೆ ಆಳ, ಹಾಗೂ ತಳಪಾಯದಲ್ಲಿ ೨೦ ರಿಂದ ೨೫ ಅಡಿಯವರೆಗೆ ಅಗಲವಾಗಿರುತ್ತದೆ. ಸಾಮಾನ್ಯವಾಗಿ ಎಲ್ಲಾ ಪ್ರಮುಖ

ಸ್ಥಳದುರ್ಗಗಳ ಸುತ್ತಲು ಕಂದಕವನ್ನು ನಿರ್ಮಿಸಲಾಗುತ್ತದೆ. ಕಂದಕದಲ್ಲಿ ಸದಾ ನೀರು ತುಂಬಿರುವಂತೆ, ಸಮೀಪದ ಹಳ್ಳ, ನದಿ ಅಥವಾ ಬಾವಿಗೆ ಸಂಪರ್ಕವನ್ನು ಕಲ್ಪಿಸಲಾಗುತ್ತದೆ. ಜಿಲ್ಲೆಯ ಪ್ರಮುಖ ಕೋಟೆಗಳು ನದಿಯಿಂದ ರಕ್ಷಣೆಯನ್ನು ಪಡೆದುಕೊಂಡಿವೆ. ಉದಾಹರಣೆಗೆ - ಸನ್ನತಿ, ಮಳಖೇಡ, ಕೊಲ್ಲೂರು, ಫಿರೋಜಾಬಾದ, ಚಿಂಚೋಳಿ, ಚಿನ್ಮಳ್ಳಿ ಮುಂತಾದವುಗಳು. ಕೆಲವು ಸಂದರ್ಭದಲ್ಲಿ ನೈಸರ್ಗಿಕ ಕಂದಕದ ಮಹತ್ವವನ್ನು ಅರಿತುಕೊಂಡ ಅರಸರು ಅದರ ಸಮೀಪಕ್ಕೆ ಮತ್ತೊಂದು ಕೋಟೆಯನ್ನು ನಿರ್ಮಿಸಿಕೊಂಡು ತಮ್ಮ ರಾಜ್ಯಧಾನಿಯನ್ನು ಅಲ್ಲಿಗೆ ವರ್ಗಾಯಿಸಿದರು (ಫಿರೋಜಾಬಾದ). ಗುಲಬರ್ಗಾದ ಬಹಮನಿಯ ಸುಲ್ತಾನರು ನಗರದ ಕೋಟೆಯು ಸುರಕ್ಷಿತವಲ್ಲವೆಂದು ಭೀಮಾ ನದಿಯ ತೀರದಲ್ಲಿ ಕೋಟೆಯನ್ನು ನಿರ್ಮಿಸಿ ಅಲ್ಲಿಗೆ ರಾಜ್ಯಧಾನಿಯನ್ನು ವರ್ಗಾಯಿಸಿದರು. ಕೆಲವೊಂದು ಕೋಟೆಗಳಿಗೆ ನೈಸರ್ಗಿಕವಾದ ಮತ್ತು ಕೃತಕವಾಗಿ ನಿರ್ಮಿಸಿದ ಎರಡು ಕಂದಕಗಳಿರುವುದು ಕಂಡು ಬರುತ್ತದೆ. ಶತ್ರುಗಳು ಕೋಟೆಯನ್ನು ವಶಪಡಿಸಿಕೊಳ್ಳದಂತೆ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಂದಕವನ್ನು ನಿರ್ಮಿಸಲಾಗುತ್ತದೆ.[೯೩]

ಕೋಟೆಯ ಸುತ್ತಲು ಕಂದಕವಿದ್ದೂ ದ್ವಾರದ ಮುಂಭಾಗದಲ್ಲಿ ಚಿಕ್ಕದಾದ ರಸ್ತೆ ಅಥವಾ ತೂಗು ಸೇತುವೆಗಳನ್ನು ರಚಿಸಲಾಗುತ್ತದೆ. ಗುಲಬರ್ಗಾ ಕೋಟೆಯ ಪೂರ್ವ ದಿಕ್ಕಿನಲ್ಲಿ ಇರುವ ದ್ವಾರದ ಮುಂಭಾಗದಲ್ಲಿ ರಸ್ತೆ ಇರುವಂತೆ ಕಂಡು ಬರುವುದಿಲ್ಲ. ಇಲ್ಲಿ ತೂಗು ಸೇತುವೆ ಇರುವ ಸಾಧ್ಯತೆಗಳಿವೆ. ಆದರೆ ವಾಯುವ್ಯ ದಿಕ್ಕಿನ ದ್ವಾರದ ಮುಂಭಾಗದಲ್ಲಿ ಕಿರಿದಾದ ಮಾರ್ಗವಿದೆ. ಇಂತಹ ಕಡೆಗಳಲ್ಲಿ ಕಂದಕದ ಹೊರಭಾಗದಲ್ಲಿ ಹೆಚ್ಚಿನ ಪ್ರಮಾಣದ ಕಾವಲುಗಾರರಿಗೆ ಸ್ಥಳಾವಕಾಶವಿರುತ್ತದೆ.

ಕೋಟೆಯಕಾಳಗದಲ್ಲಿ ಆಕ್ರಮಣಕಾರರು ಕಂದಕವನ್ನು ದಾಟುವ ಪ್ರಯತ್ನಗಳು ಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಜೀವದ ಹಂಗುದೊರೆದು ಆಕ್ರಮಣ ಮಾಡುತ್ತಿದ್ದರು. ಸುರಪುರದ ಬೇಡರ ಸೈನ್ಯ ಪುದುಚರಿ ಕೋಟೆಯ ಮುತ್ತಿಗೆಯಲ್ಲಿ ಕಳಕಿಯ ಹೊರೆಗಳನ್ನು ನಿರ್ಮಿಸಿ, ಅವುಗಳನ್ನು ಕಂದಕದ ನೀರಿನಲ್ಲಿ ತೆಲಿಬಿಟ್ಟು ಅದರ ಕೆಳಭಾಗದಲ್ಲಿ ಸೈನಿಕರು ಅವಿತುಕೊಂಡು ಕಂದಕವನ್ನು ಪಾರು ಮಾಡಿ ಕೋಟೆ ಕಾಳಗದಲ್ಲಿ ಯಶಸ್ವಿಯಾಗಿರುವ ಒಂದು ಉತ್ತಮ ಉದಾಹರಣೆಯಾಗಿದೆ.[೯೪] ಇಂತಹ ಸಂದರ್ಭಗಳನ್ನು ಹೊರತು ಪಡಿಸಿ, ಕೋಟೆ ಕಾಳಗದಲ್ಲಿ ಆಕ್ರಮಣಕಾರರು ಕಂದಕವನ್ನು ಪಾರು ಮಾಡುತ್ತಿದ್ದಾಗ ಅದಕ್ಕೆ ಕೋಟೆಯ ಒಳಗಿನಿಂದ ಪ್ರತಿದಾಳಿ ಆರಂಭವಾಗುತ್ತಿತ್ತು. ಕಂದಕವನ್ನು ದಾಟಲು ಹುಲ್ಲಿನ ಹೊರೆ, ಕಳಕಿಯ ಹೊರೆಗಳು, ಕಟ್ಟಿಗೆಗಳು ಮತ್ತು ಕಲ್ಲಿನ ಬಂಡೆಗಳನ್ನು ಬಳಸಲಾಗುತ್ತಿತ್ತು.[೯೫]

ಕಂದಕದಲ್ಲಿ ನೀರು ಬತ್ತಿಹೋಗದಂತೆ ಅದರ ಇನ್ನೊಂದು ಬದಿಯಲ್ಲಿ ಭದ್ರವಾದ ಗೋಡೆಯನ್ನು ನಿರ್ಮಿಸಲಾಗುತ್ತದೆ. ಎರಡು ಗೋಡೆಯ ಮಧ್ಯದ ನೀರು ಸೋರಿ ಹೋಗದಂತೆ ಈ ಕ್ರಮ ಅಳವಡಿಸಲಾಗಿದೆ. ಗುಲಬರ್ಗಾ ಕೋಟೆಯ ಸುತ್ತಲು ಇರುವ ಕಂದಕದ ಒಂದು ಬದಿಯಲ್ಲಿ ಕೋಟೆ

ಗೋಡೆ ಇದ್ದರೆ ಅವರ ಮತ್ತೊಂದು ಬದಿಯಲ್ಲಿ ಭದ್ರವಾದ ಗೋಡೆಯನ್ನು ನಿರ್ಮಿಸಲಾಗಿದೆ. ಕೆಲವು ಭಾಗದ ಕಂದಕ ಅತ್ಯಂತ ಆಳವಾಗಿರುವದರಿಂದ ಇಲ್ಲಿ ಸದಾ ನೀರಿನ ತೇವಾಂಶವಿರುತ್ತದೆ. ಕಂದಕದಿಂದ ಕೋಟೆಯ ಒಳಗಡೆ ಸಂಪರ್ಕ ಕಲ್ಪಿಸಲು ಕೆಲವು ಗುಪ್ತದ್ವಾರಗಳನ್ನು ನಿರ್ಮಿಸಲಾಗಿದೆ. ಕಂದಕದ ಮಹತ್ವವನ್ನು ಕುರಿತು ಎಂ. ಚಿದಾನಂದ ಮೂರ್ತಿಯವರು ಈ ರೀತಿ ವಿವರಿಸಿದ್ದಾರೆ. ಕಂದಕವಿಲ್ಲದ ಕೋಟೆಯ ರಾಜನು ಬಿರುಗಾಳಿಯ ಮುಂದಿನ ಮೋಡದ ತುಂಡುಗಳಿಗೆ ಸಮನೆಂದು ಹೇಳಿದ್ದಾರೆ.[೬೬]

೩.೮.೭. ಕೋಟೆಯ ತೆನೆಗಳು:

ಕೋಟೆ ಗೋಡೆಯ ಮೇಲ್ಭಾಗದಲ್ಲಿ ಸಾಲಾಗಿ ನಿರ್ಮಿಸಿರುವ ಅರ್ಧವೃತ್ತಾಕಾರದ ರಚನೆಗಳನ್ನು ಕೋಟೆಯ ತೆನೆಗಳು ಎಂದು ಕರೆಯುತ್ತಾರೆ. ಏಕೆಂದರೆ ಇವುಗಳು ಜೋಳದ ತೆನೆಯ ಆಕಾರವನ್ನು ಹೊಂದಿವೆ. ಕೋಟೆಯನ್ನು ಸೂಕ್ಷ್ಮವಾಗಿ ಹಾಗೂ ಸಂಶೋಧನೆಯ ದೃಷ್ಟಿಯಿಂದ ನೋಡಿದಾಗ ಇವುಗಳ ಮಹತ್ವ ಕಂಡು ಬರುತ್ತದೆ. ಕೋಟೆ ಕಾಳಕದಲ್ಲಿ ಹಾಗೂ ಕಾವಲು ಮಾಡುವ ಕಾಲದಲ್ಲಿ ತೆನೆಗಳು ಮಹತ್ವದ ಪಾತ್ರ ವಹಿಸುತ್ತವೆ. ಮೋಹನ ತರಂಗಿಣಿಯಲ್ಲಿ 'ತೆನೆಗಳ' ಮಹತ್ವವನ್ನು ಕುರಿತು ಹೇಳಲಾಗಿದೆ.[೬೭] ಕೋಟೆಯ ಗೋಡೆಯಂತೆ ಇವುಗಳು ಸಹ ಭದ್ರವಾಗಿ ನಿರ್ಮಿಸಲಾಗುತ್ತದೆ. ಹೊರಗಿನಿಂದ ನೋಡಿದರೆ ಇವುಗಳು ಕೋಟೆಯ ಸೌಂದರ್ಯವನ್ನು ಹೆಚ್ಚಿಸಲು ನಿರ್ಮಿಸಿರುವಂತೆ ಕಂಡು ಬರುತ್ತದೆ. ಆದರೆ ಅವುಗಳು ಕೋಟೆಯ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ.

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನಿರ್ಮಿಸಿರುವ ಪ್ರತಿಯೊಂದು ಕೋಟೆಯ ಮೇಲ್ಭಾಗದಲ್ಲಿ ತೆನೆಗಳನ್ನು ರಚಿಸಲಾಗಿದೆ. ಜಿಲ್ಲೆಯ ಎರಡು ಕೋಟೆಗಳಾದ ವನದುರ್ಗ ಮತ್ತು ಇಜೇರಿಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಕೋಟೆಯ ಮೇಲ್ಭಾಗದಲ್ಲಿ ತೆನೆಗಳಿವೆ. ಇವುಗಳ ಮೇಲೆ ಸಹ ತೆನೆಗಳನ್ನು ನಿರ್ಮಿಸುವ ವ್ಯವಸ್ಥೆ ಇರುವಂತೆ ಕಂಡು ಬರುತ್ತದೆ. ಆದರೆ ಅನಿವಾರ್ಯ ಕಾರಣದಿಂದ ತೆನೆಗಳನ್ನು ನಿರ್ಮಿಸಿರುವದಿಲ್ಲ. ತೆನೆಗಳು ಕೋಟೆಗೆ ಎರಡು ದೃಷ್ಠಿಯಿಂದ ರಕ್ಷಣೆಯನ್ನು ನೀಡುತ್ತವೆ. ಮೊದಲನೆಯದಾಗಿ ಮಳೆಯ ನೀರು ಒಂದು ವೇಳೆ ಗೋಡೆಯು ಸಮತಟವಾಗಿದ್ದರೆ ಗೋಡೆಯ ಒಳಗಡೆ ಪ್ರವೇಶಿಸಿ ಗೋಡೆಗೆ ಹಾನಿಯನ್ನುಂಟು ಮಾಡುತ್ತದೆ. ಆದ್ದರಿಂದ ಅರ್ಧವೃತ್ತಾಕಾರದ ತೆನೆಗಳ ಮೇಲೆ ಬಿದ್ದ ಮಳೆಯ ನೀರು ಅಲ್ಲಿಂದ ಜಾರಿ ಗೋಡೆಗೆ ಅಂಟಿಕೊಂಡು ಬಂದು ಕೆಳಗಡೆ ಇರುವ ಕಂದಕವನ್ನು ಸೇರುತ್ತದೆ. ಇದರಿಂದ ಕೋಟೆ ಗೋಡೆಗೆ ರಕ್ಷಣೆ ದೊರೆಯುತ್ತದೆ. ಉದಾಹರಣೆಗೆ ಅದೆ ಮಾದರಿಯಲ್ಲಿ ಮನೆಗಳ ಗೋಡೆಯ ಮೇಲ್ಭಾಗದಲ್ಲಿ "ಕುಂಬಿ" (ವೃತ್ತಾಕಾರದ ಗೋಡೆ)ಯನ್ನು ನಿರ್ಮಿಸುತ್ತಾರೆ. ಇದರಿಂದ ಗೋಡೆಗೆ ಯಾವುದೇ ದಕ್ಕೆಯಾಗುವುದಿಲ್ಲ.

ಎರಡನೆಯದಾಗಿ ಕೋಟೆಯ ಮೇಲ್ಭಾಗದಲ್ಲಿ ಇವುಗಳು ಕಾವಲುಗಾರರಿಗೆ ರಕ್ಷಣೆಯನ್ನು ಒದಗಿಸುತ್ತವೆ. ಸಾಮಾನ್ಯವಾಗಿ ಎಲ್ಲಾ ತೆನೆಗಳು ಸಮಾನ ಎತ್ತರ ಮತ್ತು ಅಂತರದಲ್ಲಿ

ನಿರ್ಮಿಸಲಾಗುತ್ತದೆ. ತೆನೆಯ ಹಿಂಭಾಗದಲ್ಲಿ ಕಾವಲುಗಾರರಿಗೆ ರಕ್ಷಣೆಯ ಸ್ಥಳವಿರುತ್ತದೆ. ೪ ಅಡಿ ದಪ್ಪ ೫ ಅಡಿ ಅಗಲ ೭ ಅಡಿ ಎತ್ತರವಾಗಿರುವ ತೆನೆಗಳ ಹಿಂಭಾಗದಲ್ಲಿ ೨ ಅಡಿಯ ಆಳವಾದ ಸ್ಥಳದಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳವಿರುತ್ತದೆ. ಮಳೆ, ಗಾಳಿ, ಬಿಸಿಲಿನಿಂದ ರಕ್ಷಿಸಿಕೊಳ್ಳುವ ರೀತಿ ರಚಿಸಲಾಗಿದೆ. ಇದರ ಒಳಭಾಗದಲ್ಲಿ ವೀಕ್ಷಣಾ ರಂದ್ರಗಳು ಹಾಗೂ ಕೆಳಗಡೆ ಅಂಬುಗಿಂಡಿಗಳಿರುತ್ತವೆ. ದೂರದಿಂದ ಬರುವ ಆಕ್ರಮಣಕಾರರನ್ನು ವೀಕ್ಷಣಾ ರಂದ್ರಗಳ ಮೂಲಕ ವೀಕ್ಷಿಸಬಹುದು. ಒಂದು ವೇಳೆ ಕೋಟೆಯ ಕಾಳಗದಲ್ಲಿ ಶತ್ರುಗಳು ಗೋಡೆಯನ್ನು ಹತ್ತಿ ಒಳಗಡೆ ಬರಲು ಪ್ರಯತ್ನಿಸಿದರೆ. ಅಂಬುಗಿಂಡಿಯ ಮೂಲಕ ಕೋಟೆಗೆ ರಕ್ಷಣೆಯನ್ನು ನೀಡಬಹುದು. ತೆನೆಗಳ ರಚನೆ ಕುರಿತು ಎಲ್ಲಾ ಸೈನಿಕರಿಗೆ ಮಾಹಿತಿ ಇರುತ್ತದೆ. ಆದರೆ ಆಕ್ರಮಣಕಾರರಿಗೆ ಯಾವ ತೆನೆಯ ಹಿಂಭಾಗದಲ್ಲಿ ಕಾವಲು ಸ್ಥಳವಿದೆ ಎನ್ನುವುದು ಅರ್ಥವಾಗುವುದಿಲ್ಲ. ಈ ರಕ್ಷಣಾ ವ್ಯವಸ್ಥೆಯು ಪ್ರತಿ ಮೂರು ತೆನೆಗಳ ನಂತರ ಅಥವಾ ನಾಲ್ಕು ತೆನೆಗಳಿಗೊಂದು, ಅಥವಾ ಎರಡು ತೆನೆಯ ನಂತರದಲ್ಲಿ ಇರುತ್ತವೆ. ಕೆಲವು ಕೋಟೆಯ ತೆನೆಗಳು, ಕಿರಿದಾಗಿದ್ದರೆ ಅದರ ಕೆಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳವಿರುತ್ತದೆ. ಎರಡು ತೆನೆಗಳ ಮಧ್ಯದ ಖಾಲಿ ಸ್ಥಳದಲ್ಲಿ ನಿಂತು ಯುದ್ಧ ಮಾಡಬಹುದು.[೯೮]

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕಲ್ಲಿನಿಂದ ನಿರ್ಮಿಸಿದ ಕೋಟೆಗಳ ಮೇಲ್ಭಾಗದಲ್ಲಿ ಹಾಗೂ ಮಣ್ಣಿನ ಕೋಟೆಯ ಮೇಲ್ಭಾಗದಲ್ಲಿ ಸುತ್ತಲು ತೆನೆಗಳಿವೆ. ಗುಲಬರ್ಗಾದ ಎರಡು ಸುತ್ತಿನ ಕೋಟೆಯ ಸುತ್ತಲೂ ಅತ್ಯಂತ ಭದ್ರವಾದ ತೆನೆಗಳು ಹಾಗೂ ಅದರ ಒಳಗಡೆ ರಕ್ಷಣಾ ವ್ಯವಸ್ಥೆಯಿದೆ.

ಕೋಟೆಯ ಕಾವಲುಗೋಪುರ ಅಥವಾ ಬುರುಜುಗಳ ಸುತ್ತಲು ವಿಶೇಷ ಶೈಲಿಯ ತೆನೆಗಳಿವೆ ಕಾವಲುಗೋಪುರದ ಎತ್ತರಕ್ಕೆ ತಕ್ಕಂತೆ ಇವುಗಳನ್ನು ನಿರ್ಮಿಸಲಾಗಿದೆ. ಗುಲಬರ್ಗಾ, ಯಾದಗಿರ ಈ ಎರಡು ಕೋಟೆಯಲ್ಲಿ ಕಾವಲುಗೋಪುರದ ತೆನೆಗಳ ಕೆಳಭಾಗದಲ್ಲಿ ಬಂದುಕು ರಂದ್ರಗಳಿವೆ. ವಾಗಣಗೇರಿಯ ಕೋಟೆಯ ಮೇಲ್ಭಾಗದಲ್ಲಿ ೫ ಅಡಿ ಅಗಲವಾದ ಸ್ಥಳದಲ್ಲಿ ಮೂರು ಅಡಿಯಲ್ಲಿ ಕೋಟೆಯ ತೆನೆಗಳನ್ನು ಹಾಗೂ ಉಳಿದ ಎರಡು ಅಡಿಯಲ್ಲಿ ಕಾವಲುಗಾರರಿಗೆ ಸುತ್ತಲು ದಾರಿ ಇದೆ. ಇದರ ತೆನೆಗಳಲ್ಲಿ ವಿವಿಧ ಆಕಾರದ ವೀಕ್ಷಣಾ ರಂದ್ರಗಳಿವೆ. ಕೆಳಭಾಗದಲ್ಲಿ ೮ ರಂದ್ರಗಳು, ಅದರ ಮೇಲೆ ಆರು, ನಂತರ ನಾಲ್ಕು, ಎರಡು ಮತ್ತು ಮೇಲ್ಭಾಗ ಒಂದು ರಂದ್ರವಿದೆ. ಈ ರೀತಿಯ ವೀಕ್ಷಣಾ ರಂದ್ರಗಳು ನಮಗೆ ಯಾವ ಕೋಟೆಯ ತೆನೆಗಳಲ್ಲಿ ಕಂಡು ಬರುವುದಿಲ್ಲ.

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಮಣ್ಣಿನ ಕೋಟೆಯ ಮೇಲ್ಭಾಗದಲ್ಲಿಯೂ ಮಣ್ಣಿನಿಂದ ತೆನೆಗಳನ್ನು ನಿರ್ಮಿಸಲಾಗಿದೆ. ಕಲ್ಲಿನಲ್ಲಿ ನಿರ್ಮಿಸಿರುವ ತೆನೆಗಳಂತೆ ಇವುಗಳಲ್ಲಿಯು ವಿವಿಧ ಬಗೆಯ ವೀಕ್ಷಣಾ ರಂದ್ರಗಳನ್ನು ರಚಿಸಲಾಗಿದೆ. ಪ್ರಸ್ತುತವಾಗಿ ಚಂಡ್ರಕಿ, ಪುಟಪಾಗ್, ಕಾಕಲ್‌ವಾರ, ಗುರಮಿಟಕಲ್‌ನ ಮಣ್ಣಿನ ಕೋಟೆಯ ಮೇಲ್ಭಾಗದಲ್ಲಿ ಇಂತಹ ತೆನೆಗಳಿವೆ. ನಾಲ್ಕು ಅಡಿ ದಪ್ಪ ೬ ಅಡಿ

ಎತ್ತರದ ಈ ತೆನೆಗಳ ಹಿಂಭಾಗದಲ್ಲಿ ಕಾವಲುಗಾರರಿಗೆ ಸುತ್ತಾಡಲು ಸ್ಥಳವಿದೆ. ಕೋಟೆಯ ಕೆಲವು ಭಾಗದಲ್ಲಿರುವ ಮಣ್ಣಿನಲ್ಲಿ ನಿರ್ಮಿಸಿರುವ ತೆನೆಗಳು ನಾಶ ಹೊಂದಿವೆ. ಆದರೂ ಚಂಡ್ರಕಿ ಮತ್ತು ಗುರಮಿಟಕಲ್ ಕೋಟೆಯ ಮೇಲ್ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೆನೆಗಳು ಕಂಡು ಬರುತ್ತವೆ.

ಕೋಟೆ ಕಾಳಗದಲ್ಲಿ ಆಕ್ರಮಣಕಾರರು ಮೊದಲು ತೆನೆಗಳನ್ನು ಹೊಡೆದು ಉರುಳಿಸುತ್ತಿದ್ದರು. ಮುಂದಿನ ಹೋರಾಟದಲ್ಲಿ ಕೋಟೆಯನ್ನು ಸಹಜವಾಗಿ ವಶಪಡಿಸಿಕೊಳ್ಳಬಹುದು. ಕಾವಲುಗೋಪುರಗಳ ಮೇಲೆ ಸುತ್ತಲೂ ತೆನೆಗಳನ್ನು ನಿರ್ಮಿಸಲಾಗುತ್ತದೆ. ಅದರ ಕೇಂದ್ರ ಭಾಗದಲ್ಲಿ ತೋಪು ಇರುತ್ತದೆ. ಎರಡು ತೆನೆಗಳ ಮಧ್ಯದಲ್ಲಿ ಗುರಿಯಿಟ್ಟು ತೋಪು ಸ್ಫೋಟಗೊಳಿಸಲಾಗುತ್ತಿತ್ತು. ಈ ರೀತಿ ತೆನೆಗಳು ಕೋಟೆಯ ಪ್ರಮುಖ ಅಂಗಭಾಗಗಳಾಗಿವೆ.

೩.೮.೮. ಜಾಲಂದ್ರಗಳು:

ಕೋಟೆಯ ಗೋಡೆಯಲ್ಲಿ ವೀಕ್ಷಣಾರಂಧ್ರಗಳು, ಅಂಬುಗಿಂಡಿಗಳು ಹಾಗೂ ವಿವಿಧ ಬಗೆಯ ರಂಧ್ರಗಳಿರುತ್ತವೆ. ಈ ಎಲ್ಲಾ ಬಗೆಯ ರಂಧ್ರಗಳು ಕೋಟೆಯಲ್ಲಿ ಅತಿ ಅವಶ್ಯವಾಗಿವೆ. ಇವುಗಳು ಕೋಟೆಯನ್ನು ರಕ್ಷಿಸುವಲ್ಲಿ ಹಾಗೂ ಕೋಟೆ ಕಾಳಗದಲ್ಲಿ ಶತ್ರು ಸೈನ್ಯವನ್ನು ನಾಶಪಡಿಸುವಲ್ಲಿ ಅತಿ ಪ್ರಮುಖ ಪಾತ್ರವಹಿಸುತ್ತವೆ. ಕೋಟೆ ಗೋಡೆಯಲ್ಲಿ ಮಳೆಯ ನೀರು ಬಂದು ಸಂಗ್ರಹವಾಗಿದ್ದರೆ, ಅದನ್ನು ಹೊರತೆಗೆಯಲು ಹಲವು ಬಗೆಯ 'ನೀರುಕಿಂಡಿ'ಗಳು ಕೋಟೆಯ ಸುತ್ತಲು ಬಿಡಲಾಗುತ್ತದೆ. ಆಧುನಿಕ ಕಟ್ಟಡ ತಂತ್ರಜ್ಞರು ಹೇಳುವಂತೆ, ಕಟ್ಟಡಗಳ ಒಳಭಾಗದಲ್ಲಿ ಸಂಗ್ರಹವಾದ ನೀರು ಹೊರಬಂದರೆ ಅದು ಬಹಳ ವರ್ಷದವರೆಗೆ ಉಳಿಯಬಲ್ಲದು.

ವೀಕ್ಷಣಾರಂಧ್ರಗಳು ಕೋಟೆಯ ಮೇಲಿನ ಪ್ರತಿಯೊಂದು ತೆನೆಗಳಲ್ಲಿ ನಿರ್ಮಿಸಲಾಗಿದೆ. ಕಣ್ಣಿನ ನೋಟಕ್ಕೆ ಅನುಗುಣವಾಗಿ ಒಂದೆ ಕಿಂಡಿಯಲ್ಲಿ ಎರಡು ಭಾಗಗಳನ್ನಾಗಿ ವಿಭಾಗಿಸಲಾಗಿದೆ. ಪ್ರತಿ ಕಣ್ಣಿನ ದೃಷ್ಟಿಯು ಇದರ ಮೂಲಕ ಹೊರಹೋಗುತ್ತದೆ. ಪ್ರಾರಂಭಿಕ ಹಂತದಲ್ಲಿ ನಿರ್ಮಿಸಿರುವ ಕೋಟೆಯಲ್ಲಿ ಬಿಲ್ಲು ಬಾಣಗಳನ್ನು ಹೊಡೆಯಲು ಈ ರಂಧ್ರಗಳನ್ನು ಬಳಸಲಾಗುತ್ತಿತ್ತು. ಅಂಬುಗಿಂಡಿಗಳು ಕಾವಲುಗೋಪುರದ ಒಂದು ಭಾಗದಲ್ಲಿ ಇರುತ್ತದೆ. ಗೋಡೆಯ ಹೊರಭಾಗದಲ್ಲಿ ವೃತ್ತಾಕಾರದ ರಚನೆಯಲ್ಲಿ ಇವುಗಳನ್ನು ನಿರ್ಮಿಸಿದ್ದು ಅವುಗಳ ಮೂಲಕ ಆಕ್ರಮಣಕಾರರ ಮೇಲೆ ಕಲ್ಲುಗಳನ್ನು ಎತ್ತಿ ಹಾಕುತ್ತಿದ್ದರು. ಕಾಲಕ್ರಮೇಣ ಯುದ್ಧ ಪದ್ಧತಿಯಲ್ಲಿ ಬಂದೂಕುಗಳ ಪ್ರಯೋಗ ಆರಂಭವಾದಾಗ (ಪಿರಂಗಿ ಯುದ್ಧ) ಈ ಕಿಂಡಿಗಳನ್ನು ಬಂದೂಕು ರಂಧ್ರಗಳಾಗಿ ಅಥವಾ ಕೋವಿಕಿಂಡಿಗಳಾಗಿ ಬಳಸಲಾಯಿತು. ಇಂತಹ ಎರಡು ಪ್ರಕಾರದ ಜಾಲಂದ್ರಗಳು ಗುಲಬರ್ಗಾ ಕೋಟೆಯ ಹಲವು ಭಾಗಗಳಲ್ಲಿ ಕಂಡು ಬರುತ್ತವೆ. ಅದೇ ರೀತಿಯಲ್ಲಿ ಜಿಲ್ಲೆಯ ಉಳಿದ ಕೋಟೆಗಳಲ್ಲಿ ಇವುಗಳನ್ನು ನಿರ್ಮಿಸಲಾಗಿದೆ.

ಈ ರಂಧ್ರಗಳ ಮೂಲಕ ಇನ್ನೂ ಒಂದು ಪ್ರಕಾರದ ಪ್ರತಿದಾಳಿ ಮಾಡಲಾಗುತ್ತಿತ್ತು. ಕೋಟೆ ಗೋಡೆಯ ಒಳಭಾಗದಲ್ಲಿ ನೀರು ಅಥವಾ ಎಣ್ಣೆಯನ್ನು ಕುದಿಸಿ ಆಕ್ರಮಣಕಾರರ ಮೇಲೆ ಇವುಗಳ ಮೂಲಕ ಹಾಕಲಾಗುತ್ತದೆ. ಆದ್ದರಿಂದ ಅಂಬುಗಿಂಡಿಗಳು ಮೂರು ಪ್ರಕಾರದ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಗುಲಬರ್ಗಾ ಕೋಟೆಯ ಈಶಾನ್ಯ ಭಾಗದಲ್ಲಿರುವ ಕಾವಲುಗಾರರ ವಸತಿ ಸ್ಥಳದಲ್ಲಿ ಹಲವು ಪ್ರಕಾರದ ವೀಕ್ಷಣಾ ರಂಧ್ರಗಳಿವೆ.[೯೯] ಗೋಡೆಗೆ ಅಂಟಿಕೊಂಡಿರುವ ಇವುಗಳು ವಿವಿಧ ಆಕಾರದಲ್ಲಿವೆ. ಶತ್ರುಗಳ ಆಗಮನವನ್ನು ಇವುಗಳ ಮೂಲಕ ವೀಕ್ಷಿಸಿ, ಅದಕ್ಕೆ ತಕ್ಕ ಕ್ರಮ ಕೈಗೊಳ್ಳಲು ಅನುಕೂಲಕರವಾಗುತ್ತದೆ. ಕೆಲವು ಕೊತ್ತಳಗಳಲ್ಲಿ ಹಾಗೂ ಕಾವಲುಗೋಪುರಗಳ ಮೇಲೆ ಜಾಲಂದ್ರಗಳಿರುತ್ತವೆ.[೧೦೦] ಚಂಡ್ರಕಿ ಹಾಗೂ ಗುರುಮಿಠಕಲ್‌ನ ಮಣ್ಣಿನ ಕೋಟೆಯಲ್ಲಿ ಹಲವು ಬಗೆಯ ಜಾಲಂದ್ರಗಳಿವೆ. ಕಲ್ಲಿನಿಂದ ನಿರ್ಮಿಸಿರುವ ಕೋಟೆಯಲ್ಲಿ ಜಾಲಂದ್ರಗಳನ್ನು ತಯ್ಯಾರಿಸಲು ಯಾವುದೇ ತೊಂದರೆ ಆಗಲಾರದು, ಆದರೆ ಮಣ್ಣಿನ ಕೋಟೆಯಲ್ಲಿ ಇವುಗಳ ರಚನೆಯು ತುಂಬಾ ಕಷ್ಟಕರವಾದುದು. ಇವುಗಳ ನಿರ್ಮಾಣದ ಪೂರ್ವದಲ್ಲಿ ನಿಗದಿತ ಆಕಾರದಲ್ಲಿ ಕಟ್ಟಿಗೆಯನ್ನು ಮಣ್ಣಿನಲ್ಲಿ ಅಳವಡಿಸಿ ನಂತರ ಕಟ್ಟಿಗೆಯನ್ನು ಹೊರತೆಗೆಯಲಾಗುತ್ತಿತ್ತು. ಇದೆ ರೀತಿಯಲ್ಲಿ ಎಲ್ಲಾ ಬಗೆಯ ಜಾಲಂದ್ರಗಳನ್ನು ನಿರ್ಮಿಸಲಾಗುತ್ತಿದೆ. ಪ್ರಸ್ತುತ ಚಂಡ್ರಕಿ ಕೋಟೆಯ ಒಂದು ಜಾಲಂದ್ರದಿಂದ ಸುಮಾರು ೧/೨ ಕೀ.ಮಿ. ದೂರದಲ್ಲಿರುವ ಕಟ್ಟಡಗಳು ಅಥವಾ ವ್ಯಕ್ತಿಗಳನ್ನು ಸ್ಪಷ್ಟವಾಗಿ ನೋಡಬಹುದು.

೩.೯. ನಿವೇಶನದ ಆಯ್ಕೆ:

ಕೋಟೆಯ ನಿರ್ಮಾಣದ ಪೂರ್ವದಲ್ಲಿ ನಿವೇಶನದ ಆಯ್ಕೆಯು ಅತ್ಯಂತ ಪ್ರಮುಖವಾದ ಅಂಶವಾಗಿದೆ. ಅಲ್ಲಿಯ ನೆಲ, ಜಲ, ಪರಿಸರ ಕೋಟೆಯ ನಿರ್ಮಾಣಕ್ಕೆ ಅನುಕೂಲಕರವಾಗಿರಬೇಕು.[೧೦೧] ವಿಜಯನಗರದ ಕೋಟೆಯ ನಿರ್ಮಾಣದ ಪೂರ್ವದಲ್ಲಿ ವಿದ್ಯಾರಣ್ಯರು ಒಂದು ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ಸಾಮ್ರಾಜ್ಯದ ಸ್ಥಾಪನೆಯ ವಿಚಾರವನ್ನು ತಮ್ಮ ಶಿಷ್ಯಂದಿರಾದ ಸಂಗಮ ಸಹೋದರರಿಗೆ ಹೇಳಿದರು.[೧೦೨] ಕೌಟಿಲ್ಯನು ಕೋಟೆಯ ನಿರ್ಮಾಣದ ಸ್ಥಳದ ಕುರಿತು ಅರ್ಥಶಾಸ್ತ್ರದಲ್ಲಿ ಹೆಚ್ಚಿನ ಒತ್ತು ನೀಡಿದ್ದಾನೆ.[೧೦೩] ನಿವೇಶನದ ಆಯ್ಕೆಯ ನಂತರ ಅಲ್ಲಿ ಯಾವ ವಿನ್ಯಾಸದ ಕೋಟೆ ನಿರ್ಮಾಣಕ್ಕೆ ಸಾಧ್ಯವಿದೆ ಎನ್ನುವುದನು ರಚನೆಕಾರರು ಯೋಚಿಸಬೇಕು. ಅಲ್ಲದೆ ಅಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ಕಡೆಗೆ ಗಮನಿಸಬೇಕು. ಅವುಗಳಲ್ಲಿ ನೀರು ಅತಿಮುಖ್ಯವಾದುದಾಗಿದೆ. ಎಲ್ಲಾ ಬಗೆಯ ಯುದ್ಧ ತಂತ್ರಗಳನ್ನು ಆ ಸ್ಥಳದಲ್ಲಿ ರೂಪಿಸಲು ಸಾಧ್ಯವಾಗಬೇಕು. ಒಂದು ವೇಳೆ ಮೇಲಿನ ಎಲ್ಲಾ ಅಂಶಗಳು ಲಭ್ಯವಾಗುವಂತಿದ್ದರೆ, ಕೋಟೆಯ ನಿರ್ಮಾಣಕ್ಕೆ ಅವಶ್ಯಕವಾದ ಸಾಮಗ್ರಿಗಳನ್ನು ಕುರಿತು ಯೋಚಿಸಿ ನಂತರ ನಿರ್ದಾರ ಕೈಗೊಳ್ಳಬೇಕು.

'ವಾಸ್ತುಶಾಸ್ತ್ರ'ದ ಪ್ರಕಾರ ನೀವೇಶನವಿದ್ದರೆ ಅದು ಮನುಷ್ಯರ ವಾಸಕ್ಕೆ ಸೂಕ್ತ ಸ್ಥಳವಾಗಿರುತ್ತದೆ. ಆ ಸ್ಥಳದ ಮಹತ್ವದಿಂದ ಸಿರಿ, ಸಂಪತ್ತು, ಭಾಗ್ಯ ಲಭ್ಯವಾಗುತ್ತದೆ. ಒಂದು ವೇಳೆ 'ಪಾಣಿಪತ್ತ'ದಂತಹ ಸ್ಥಳವಿದ್ದರೆ ಅಲ್ಲಿ ಯಾವುದೇ ರೀತಿಯಿಂದ ಯತ್ನಿಸಿದರು ಸೋಲು, ಹಾನಿ ಅಥವಾ ಸಾವು ಖಂಡಿತವಾಗುತ್ತದೆ. ಈ ಎಲ್ಲಾ ಲಕ್ಷಣಗಳಿರುವ ಸ್ಥಳವು ಲಭ್ಯವಾದರೆ ಅನ್ಯರ ಆಕ್ರಮಣದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು.

ಪ್ರಾಚೀನ ಸಾಹಿತ್ಯಗಳಲ್ಲಿ, ವೇದಗಳ ಕಾಲದ ಸಾಹಿತ್ಯದಲ್ಲಿ ಮತ್ತು ಪುರಾಣಗಳಲ್ಲಿ 'ನಿವೇಶನ ಆಯ್ಕೆ' ಕುರಿತು ಉಲ್ಲೇಖಗಳಿವೆ. ಸ್ಥಳ ಪುರಾಣವನ್ನು ಅರಿತುಕೊಂಡು ಕೋಟೆಯ ನಿರ್ಮಾಣ ಮಾಡಬೇಕು. ಒಂದು ವೇಳೆ ದಟ್ಟವಾದ ಅರಣ್ಯ, ತಗ್ಗಾದ ಪ್ರದೇಶಗಳಂತಹ ಸ್ಥಳವನ್ನು ಆಯ್ಕೆ ಮಾಡಿಕೊಂಡು ಕೋಟೆಯನ್ನು ನಿರ್ಮಿಸಿದರೆ, ಅನಾಹುತ ಸಂಭವಿಸುತ್ತವೆ. ದಟ್ಟವಾದ ಅರಣ್ಯಕ್ಕೆ ಬೆಂಕಿ ಬಿದ್ದಾಗ ಇಡಿ ರಾಜ್ಯವೇ ಕಷ್ಟಕ್ಕೆ ಒಳಗಾಗುತ್ತದೆ. ಅದೇ ರೀತಿ ತಗ್ಗಾದ ಪ್ರದೇಶದಿಂದ ಕೋಟೆಗೆ ತೊಂದರೆ ಯಾಗುತ್ತದೆ. ಇಂತಹ ಸ್ಥಳದಲ್ಲಿ ನಿರ್ಮಿಸಿರುವ ಕೋಟೆ ಗೋಡೆಗಳನ್ನು ನಂತರದಲ್ಲಿ ಎತ್ತರಗೊಳಿಸಲಾಗುತ್ತದೆ. ಉದಾಹರಣೆಗೆ ಗುಲಬರ್ಗಾ ಕೋಟೆಯ ಗೋಡೆಯನ್ನು ಮೂರು ಹಂತದಲ್ಲಿ ಎತ್ತರಿಸಿರುವುದು ಕಂಡು ಬರುತ್ತದೆ. ಕೋಟೆಯ ಒಳಭಾಗದಲ್ಲಿ ಒಂದೆ ಸಮತಟ್ಟಾದ ಸ್ಥಳವಿರುವುದಿಲ್ಲ. ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸುಮಾರು ೬ ರಿಂದ ೮ ಅಡಿ ಎತ್ತರವಾಗಿದೆ. ಪ್ರಾರಂಭದಲ್ಲಿ ನಗರಕಿಂತಲೂ ಎತ್ತರವಾಗಿರುವ ಕೋಟೆಯು ಈಗ ನಗರಕ್ಕಿಂತಲು ಕಡಿಮೆ ಎತ್ತರವಾಗಿದೆ. ಈ ನಿವೇಶನವು ಕೆಲವು ಲೋಪದೋಷಗಳನ್ನು ಹೊಂದಿರುವುದರಿಂದ ಬಹಮನಿ ಸುಲ್ತಾನರು ಕೊನೆಯವರೆಗೆ ಇಲ್ಲಿ ಆಳ್ವಿಕೆ ಮಾಡದೆ ತಮ್ಮ ರಾಜ್ಯಧಾನಿಯನ್ನು ಕ್ರಿ.ಶ. ೧೪೧೮ರಲ್ಲಿ ಫಿರೋಜಾಬಾದಗೆ[೧೦೪], ನಂತರ ಕ್ರಿ.ಶ. ೧೪೨೨ರಲ್ಲಿ ಬೀದರಗೆ ವರ್ಗಾಯಿಸಿದರು.[೧೦೫] ಈ ರೀತಿ ರಾಜ್ಯಧಾನಿಯನ್ನು ವರ್ಗಾಯಿಸುವುದರಿಂದ ಆಡಳಿತದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಆದ್ದರಿಂದ ರಾಜ್ಯ ಸ್ಥಾಪಿಸುವ ಪೂರ್ವದಲ್ಲಿ ಸ್ಥಾಪಕರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಕೊಂಡು ತಮ್ಮ ಕೋಟೆಯನ್ನು ಸೂಕ್ತ ಸ್ಥಳದಲ್ಲಿ ಸ್ಥಾಪಿಸಬೇಕು. ಕೆಲವು ಸಂದರ್ಭದಲ್ಲಿ ಕೋಟೆಯ ಭದ್ರತೆಗಾಗಿ ಮಹಿಳೆಯರನ್ನು ಬಲಿಕೊಡುವ ಸಂಪ್ರದಾಯವಿದೆ.[೧೦೬] ಗುಲಬರ್ಗಾ ಕೋಟೆಯ ಪಶ್ಚಿಮ ಭಾಗಕ್ಕೆ "ಭೋರಾಬಾಯಿ"ಯನ್ನು ಜೀವಂತವಾಗಿ ಕೋಟೆ ಗೋಡೆಯಲ್ಲಿ ಹಾಕಿ ನಿರ್ಮಿಸಿರುವ ಉದಾಹರಣೆಗಳು ಇವೆ.[೧೦೭]

ಕೋಟೆಗಳು ಸಾಮಾನ್ಯವಾಗಿ ನೈಸರ್ಗಿಕ ರಕ್ಷಣೆಯನ್ನು ಹೊಂದುವ ಸ್ಥಳಗಳು ಅಂದರೆ ನದಿ, ಬೆಟ್ಟ, ದೊಡ್ಡ ದೊಡ್ಡ ಗಿಡಮರಗಳಿಂದ ಆವೃತ್ತವಾಗಿರುವ ಸ್ಥಳಗಳಿದ್ದರೆ ಅಲ್ಲಿ ಯಾವುದೆ ತೊಂದರೆ ಇರುವುದಿಲ್ಲ. ಜಿಲ್ಲೆಯ ಪ್ರಮುಖ ಕೋಟೆಗಳು ಇಂತಹ ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಕೋಟೆಯನ್ನು ನಿರ್ಮಿಸಲಾಗಿದೆ. ಉದಾ: ಯಾದಗಿರ, ಶಹಾಪೂರ, ಮಳಖೇಡ, ಸನ್ನತಿ, ಸುರಪುರ, ವಾಗಣಗೇರಿ ಮುಂತಾದವುಗಳು. ನದಿಯ

ಸಮೀಪದ ನಿವೇಶದಲ್ಲಿ ಗಮನಿಸಬೇಕಾಗದ ವಿಷಯವೆಂದರೆ ಅದರ ಪ್ರವಾಹದಿಂದಲೂ ಕೋಟೆಗೆ ಯಾವುದೆ ಹಾನಿ ಸಂಭವಿಸಬಾರದು. ಫಿರೋಜಶಹನು ಭೌಗೋಳಿಕ ಪರಿಸರವನ್ನು ಗಮನದಲ್ಲಿಟ್ಟುಕೊಟ್ಟು ಭೀಮಾನದಿಯ ತೀರದಲ್ಲಿ ಫಿರೋಜಾಬಾದ ಕೋಟೆಯನ್ನು ಮುಂಜಾಗ್ರತೆ ವಹಿಸಿ ನಿರ್ಮಿಸಿದನು. ಆದರೆ ಏಕಕಾಲಕ್ಕೆ ಬಂದ ಭಾರಿ ಪ್ರವಾಹದಿಂದ ನದಿಯ ನೀರು ಕೋಟೆಯ ಒಳಗಡೆ ನುಗ್ಗಿ ಅಪಾರ ಹಾನಿಯನ್ನುಂಟು ಮಾಡಿತು. ಇದರಿಂದ ಮುಂದೆ ಬಂದ ಸುಲ್ತಾನರು ಇಲ್ಲಿ ಆಳ್ವಿಕೆ ಮಾಡಲಿಲ್ಲ.

ಸ್ಥಳ ದುರ್ಗಗಳಲ್ಲಿ ಸರಿಯಾದ ನಿವೇಶನವನ್ನು ಆಯ್ಕೆ ಮಾಡಿಕೊಂಡು ಕೋಟೆಯ ನಿರ್ಮಾಣದ ನಂತರ ಅದರ ಸುತ್ತಲು ವಿಶಾಲವಾದ ಕಂದಕವನ್ನು ರಚಿಸಬೇಕು. ಅಂತಹ ಸಂದರ್ಭದಲ್ಲಿ ಅಲ್ಲಿಯ ಮಣ್ಣಿನ ಗುಣಮಟ್ಟವನ್ನು ಗಮನದಲ್ಲಿಟ್ಟುಕೊಂಡು ಕಂದಕದಲ್ಲಿ ಎಷ್ಟು ಪ್ರಮಾಣ ನೀರನ್ನು ಹಾಯಿಸಲು ಸಾಧ್ಯವಿದೆಯೋ, ಅಷ್ಟೆ ಪ್ರಮಾಣದ ನೀರನ್ನು ಹಾಯಿಸಬೇಕು. ಕಂದಕದಲ್ಲಿ ಸದಾ ನೀರು ತುಂಬಿರುವ ಹಾಗೆ ನೀರಿನ ಮೂಲವು ಸಮೀಪದಲ್ಲಿಯ ಇರಬೇಕು. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಯೋಗ್ಯವಾದ ಮತ್ತು ಸೂಕ್ತವಾದ ನಿವೇಶವನ್ನು ಆಯ್ಕೆ ಮಾಡಿಕೊಳ್ಳಬೇಕು. ಕೋಟೆಯ ಆಯ್ಕೆಯ ಸ್ಥಳವು ಗಂಡು ಭೂಮಿಯಾಗಿರಬೇಕು.[೧೦೮]

೩.೧೦. ಕೋಟೆಯ ನಿರ್ಮಾಣದ ಸಾಮಗ್ರಿಗಳು:

ಗುಲಬರ್ಗಾ ಜಿಲ್ಲೆಯಲ್ಲಿರುವ ಕೋಟೆಗಳನ್ನು ಬೇರೆ ಬೇರೆ ಸಾಮಗ್ರಿಗಳಲ್ಲಿ ನಿರ್ಮಿಸಲಾಗಿದೆ. ನಿವೇಶನದ ಆಯ್ಕೆಯ ಸಂದರ್ಭದಲ್ಲಿ ಈ ಅಂಶವನ್ನು ಗಮನದಲ್ಲಿಟ್ಟುಕೊಂಡಿರಬೇಕು. ನಿರ್ಮಾಣಕ್ಕೆ ಅಗತ್ಯವಾದ ಎಲ್ಲಾ ಸಾಮಗ್ರಿಗಳು ಸಮೀಪದಲ್ಲಿ ಲಭ್ಯವಾಗುವಂತಿರಬೇಕು. ಬೆಟ್ಟದ ಕೋಟೆಯಲ್ಲಿ, ಬೆಟ್ಟವನ್ನು ಕೊರೆದು ಅಲ್ಲಿಂದ ದೊರೆಯುವ ಕಲ್ಲುಗಳಲ್ಲಿ ಕೋಟೆಯನ್ನು ನಿರ್ಮಿಸಲಾಗುತ್ತದೆ. ಆದರೆ ಕಲ್ಲಿನ ಜೊತೆಗೆ ನೀರಿನ ಅವಶ್ಯಕತೆಯ ಕಡೆಗೆ ಗಮನಹರಿಸಬೇಕು. ಆದ್ದರಿಂದ ನೈಸರ್ಗಿಕವಾಗಿ ತಗ್ಗಾಗಿ ಇರುವ ಸ್ಥಳಗಳಲ್ಲಿ ನೀರು ಸಂಗ್ರಹಿಸುವಂತಿರಬೇಕು. ಗುಲಬರ್ಗಾ ಜಿಲ್ಲೆಯ ಶಹಾಪೂರ, ಸುರಪುರ, ವಾಗಣಗೇರಿ ಮತ್ತು ಯಾದಗಿರ ಕೋಟೆಗಳಲ್ಲಿ ಈ ಮೇಲಿನ ಎರಡು ಅಂಶಗಳನ್ನು ಕಾಣುತ್ತೇವೆ. ಅದೆ ವನದುರ್ಗ ಕೋಟೆಯ ನಿರ್ಮಾಣಕ್ಕೆ ಕೆಂಪು, ಕಪ್ಪು ಹಾಗೂ ಬಿಳಿ ವರ್ಣದ ಬೆಣಚು ಕಲ್ಲುಗಳನ್ನು ಬಳಸಲಾಗಿದೆ. ಆದರ ಗೋಡೆಯು ಸಮಿಶ್ರ ವರ್ಣದ ಶಿಲೆಗಳಿಂದ ನಿರ್ಮಿಸಲಾಗಿರುವುದು ಕಂಡು ಬರುತ್ತದೆ. ಇದು ಕೋಟೆಯ ಅಂದವನ್ನು ಹೆಚ್ಚಿಸುವುದಕ್ಕಾಗಿ ಇಂತಹ ಕಲ್ಲುಗಳನ್ನು ಉಪಯೋಗಿಸಿರುವುದಿಲ್ಲ, ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ಬಳಸಿರುವುದರಿಂದ ಕೋಟೆ ಗೋಡೆಯು ಬಣ್ಣ ಬಣ್ಣವಾಗಿ ಕಂಡು ಬರುತ್ತದೆ.

ಚಂದ್ರಕಿಯ ಸುತ್ತಮುತ್ತಲು ನಿರ್ಮಿಸಿರುವ ಕೆಲವು ಕೋಟೆಗಳು ಮಣ್ಣಿನಲ್ಲಿ ನಿರ್ಮಿಸಲಾಗಿದೆ. ಇವುಗಳ ನಿರ್ಮಾಣದಲ್ಲಿ ಕೆಳಹಂತದ ೧೦ ರಿಂದ ೧೫ ಅಡಿ ಎತ್ತರದವರೆಗೆ ಚಿಕ್ಕ ಚಿಕ್ಕ ಕಲ್ಲುಗಳಿಂದ

ನಿರ್ಮಿಸಿ ಅದರ ಮೇಲಿನ ೧೫ ರಿಂದ ೨೦ ಅಡಿ ಎತ್ತರದ ರಚನೆಗೆ ಸಂಪೂರ್ಣವಾಗಿ ಮಣ್ಣನ್ನು ಬಳಸಲಾಗಿದೆ. ಈ ಪ್ರದೇಶದಲ್ಲಿ ಹೆಚ್ಚಿನ ಕಲ್ಲುಗಳು ದೊರೆಯುವದಿಲ್ಲ ಆದ್ದರಿಂದ ಇಲ್ಲಿಯ "ಹಾಳು ಮಣ್ಣು" ಅತ್ಯಂತ ಶಕ್ತಿ ಶಾಲಿಯಾಗಿರುವುದರಿಂದ ಅದರಿಂದ ಕೋಟೆಯನ್ನು ನಿರ್ಮಿಸಲಾಗಿದೆ. ಗುಲಬರ್ಗಾ ಮತ್ತು ಫಿರೋಜಾಬಾದ ಕೋಟೆಯ ನಿರ್ಮಾಣಕ್ಕೆ ಸಮೀಪದ 'ಪಾಳಾ' ಗ್ರಾಮದಲ್ಲಿ ದೊರೆಯುವ ಕಪ್ಪು ಕಲ್ಲುಗಳನ್ನು ಬಳಸಲಾಗಿದೆ. ಈ ರೀತಿ ಕೋಟೆ ನಿರ್ಮಾಣವು ಹೆಚ್ಚಿನ ವೆಚ್ಚದಿಂದ ಕೂಡಿರದೆ, ಸ್ಥಳಯವಾಗಿ ಲಭ್ಯವಾಗುವ ವಸ್ತುಗಳನ್ನು ಬಳಸಿಕೊಂಡು ನಿರ್ಮಿಸಲಾಗುತ್ತಿತ್ತು.

೩.೧೧. ಕೋಟೆಯ ಪ್ರಕಾರಗಳು:

ಕೋಟೆಯ ರಚನೆ ಮತ್ತು ಪ್ರಕಾರಗಳನ್ನು ಕುರಿತು ಪ್ರಾಚೀನ ಸಾಹಿತ್ಯದಲ್ಲಿ ಉಲ್ಲೇಖಿಸಲಾಗಿದೆ. ಇಂತಹ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಕೋಟೆಯ ನಿವೇಶನ, ಕಟ್ಟುವ ವಿಧಾನ ಮತ್ತು ಬಳಕೆಯ ಸಾಮಗ್ರಿಗಳನ್ನು ಕುರಿತು ಹೇಳಿರುವ ಮಾಹಿತಿಗಳನ್ನು ಪ್ರಮುಖವಾಗಿಟ್ಟುಕೊಂಡು, ಕೋಟೆಗಳನ್ನು ಹಲವು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ರಾಜ್ಯದ ಕೋಟೆ ಹೇಗಿರಬೇಕು ಎನ್ನುವುದರ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಗಿದೆ.[೧೯] ಅದರಲ್ಲಿ ಕೌಟಿಲ್ಯನು ಕೋಟೆಯ ಸ್ಥಳ, ಬಳಸುವ ವಸ್ತುಗಳು, ಕಟ್ಟುವ ವಿಧಾನಗಳ ಕುರಿತು ವಿವರಣೆ ನೀಡಿದ್ದಾನೆ. ಕಟ್ಟಿಗೆಯಿಂದ ನಿರ್ಮಿಸಿರುವ ಕೋಟೆಗಿಂತಲು ಕಲ್ಲಿನಲ್ಲಿ ನಿರ್ಮಿಸಿರುವ ಕೋಟೆಗಳು ಶ್ರೇಷ್ಠವೆಂದು ಪರಿಗಣಿಸಿದ್ದರಿಂದ ಅದೇ ಪದ್ಧತಿಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಅದರಲ್ಲಿ ವಿಶೇಷವಾಗಿ ನೈಸರ್ಗಿಕವಾಗಿ ಶತ್ರುಬಾಧೆಯಿಂದ ತಪ್ಪಿಸಿಕೊಳ್ಳುವ ಸ್ಥಳದಲ್ಲಿ ಕೋಟೆ ಕಟ್ಟುವುದು ಸೂಕ್ತವೆಂದು ಹೇಳಲಾಗಿದೆ.[೧೧೦] ಅರ್ಥಶಾಸ್ತ್ರದಲ್ಲಿ ಐದು ಪ್ರಕಾರದ ಕೋಟೆಗಳ ಬಗ್ಗೆ ಉಲ್ಲೇಖವಿದೆ.[೧೧೧]

೧. **ಔದುಕ:** ಕಂದಕದಿಂದ ಸುತ್ತುವರೆದ ಕೋಟೆ

೨. **ಪರ್ವತ:** ಬೆಟ್ಟದ ಮೇಲೆ ನಿರ್ಮಿಸಿರುವ ಕೋಟೆ

೩. **ಧನ್ವನ :** ನೀರಿಲ್ಲದ ಒಣಭೂಮಿಯಲ್ಲಿ ನಿರ್ಮಿಸಿದ ಭೂಮಿ.

೪. **ವನ :** ದಟ್ಟವಾದ ಅರಣ್ಯದ ಮಧ್ಯದಲ್ಲಿ ನಿರ್ಮಿಸಿರುವ ಕೋಟೆ

೫. **ಖಾಜನ:** ಮಿಶ್ರ ದುರ್ಗ

ಕೌಟಿಲ್ಯನು, ಮೊದಲಿನ ಎರಡು ದುರ್ಗಗಳ ರಚನೆ ಅತ್ಯಂತ ಸುರಕ್ಷಿತವಾದದು ಎಂದು ವಿವರಿಸಿದ್ದಾನೆ. ಗುಲಬರ್ಗಾ ಜಿಲ್ಲೆಯಲ್ಲಿ ಔದುಕ ದುರ್ಗ ಮತ್ತು ಪರ್ವತ ದುರ್ಗಗಳು ಹೆಚ್ಚು ಸುರಕ್ಷಿತವೆಂದು ತಿಳಿದು ಅದೇ ಪ್ರಕಾರದ ಕೋಟೆಗಳನ್ನು ನಿರ್ಮಿಸಿರುವಂತೆ ಕಂಡು ಬರುತ್ತದೆ.

ಮನುಸ್ಮೃತಿಯಲ್ಲಿ ಕೋಟೆಗೆ ಉಪಯೋಗಿಸುವ ಸಾಮಗ್ರಿಗಳು ಮತ್ತು ಅಲ್ಲಿಯ ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ಆರು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

'ಧನದುರ್ಗಂ – ಮಹಿದುರ್ಗೇಂ, ಅಟದುರ್ಗಂ, ವಾಕ್ಷಮೇವವಾ
ಗಿರಿದುರ್ಗಂ, ನೃದುರ್ಗಂ ವಾಸ ಮಾಶ್ರಿತ್ಯ ವ್‌ಸೇತ್ಪ ರಮ್'

೧. **ಧನು ದುರ್ಗ** – ಕಾಡು ಅಥವಾ ನೀರಿಲ್ಲದ ಪ್ರದೇಶದಿಂದ ಸುತ್ತುವರೆದ ಭೂಮಿ

೨. **ಮಹಿ ದುರ್ಗ** – ಕಲ್ಲು ಅಥವಾ ಇಟ್ಟಿಗೆಯಿಂದ ನಿರ್ಮಿಸಿದ ಕೋಟೆ

೩. **ಜಲದುರ್ಗ** – ಆಳವಾದ ನೀರಿನಿಂದ ಆವೃತ್ತವಾದ ಕೋಟೆ

೪. **ವೃಕ್ಷ ದುರ್ಗ** – ಎತ್ತರವಾದ ಮುಳ್ಳು-ಕಂಟಿ ಅಥವಾ ಗಿಡಮರಗಳಿಂದ ಆವೃತವಾದ ಕೋಟೆ.

೫. **ವಶ ದುರ್ಗ** – ಆನೆ, ರಥ, ಕುದುರೆ ಮತ್ತು ಕಾಲ್ದಳಗಳಿಂದ ಕೂಡಿರುವ ಕೋಟೆ.

೬. **ಗಿರಿ ದುರ್ಗ** – ಬೆಟ್ಟದ ಮೇಲೆ ನಿರ್ಮಿಸಿರುವ ಕೋಟೆ.

ಈ ಆರು ಪ್ರಕಾರದ ಕೋಟೆಗಳಲ್ಲಿ 'ಮನು', "ಗಿರಿದುರ್ಗ" ಅತ್ಯುತ್ತಮವೆಂದು ಪರಿಗಣಿಸಿದ್ದಾನೆ, ಏಕೆಂದರೆ ಅಂತಹ ಕೋಟೆಯನ್ನು ಬಹಳ ಪರಿಶ್ರಮದಿಂದ ವಶಪಡಿಸಿಕೊಳ್ಳಬೇಕಾಗುತ್ತದೆ. ಗುಲಬರ್ಗಾ ಜಿಲ್ಲೆಯ ಶಹಾಪೂರ, ಸುರಪುರ, ವಾಗಣಗೇರಿ, ಯಾದಗಿರಿ, ಲಾಡಲಾಪುರ ಮುಂತಾದ ಕೋಟೆಗಳನ್ನು ಬೆಟ್ಟದ ಮೇಲೆ ನಿರ್ಮಿಸಲಾಗಿದೆ. ಆದ್ದರಿಂದ ಇಂದಿಗೂ ಸಹ ಕೋಟೆಗಳು ಅತ್ಯಂತ ಸುರಕ್ಷಿತವಾಗಿವೆ.

ಸೋಮದೇವ ಸೂರಿಯು ತನ್ನ 'ನೀತಿವಾಕ್ಯಾಮೃತ'ದಲ್ಲಿ ಕೋಟೆಗಳನ್ನು ಎರಡು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಸ್ವಾಭಾವಿಕ** – ಪ್ರಕೃತಿ ದತ್ತವಾದ ಬೆಟ್ಟ ಅಥವಾ ನೀರಿನಿಂದ ಕೂಡಿದ ಸ್ಥಳಗಳಲ್ಲಿ ಕೋಟೆಯ ನಿರ್ಮಾಣ.

೨. **ಅಸ್ವಾಭಾವಿಕ** – ಕೋಟೆಯ ನಿರ್ಮಾಣಕ್ಕೆ ಬೇಕಾದ, ಎತ್ತರವಾದ ಗೋಡೆ, ದ್ವಾರಬಾಗಿಲುಗಳು, ರಕ್ಷಣಾ ಸಂಬಂಧಿ ಸ್ಮಾರಕಗಳಿಂದ ಕೂಡಿರುವ ಕೋಟೆ.

ಗುಲಬರ್ಗಾ ಜಿಲ್ಲೆಯ ಸನ್ನತಿ, ಮಳಖೇಡ, ಫಿರೋಜಾಬಾದ, ಕೊಲ್ಲುರು ಮುಂತಾದ ಕೋಟೆಗಳು ಸ್ವಾಭಾವಿಕ ಪ್ರಕಾರದ ಕೋಟೆಗಳಾಗಿವೆ. ಇಜೇರಿ, ಗುಲಬರ್ಗಾ, ಹೊಳಕುಂದಾ, ಅಳ್ಳೊಳ್ಳಿ, ಇಟಕಲ್, ಕಾಕಲ್‌ವಾರ ಕೋಟೆಗಳು ಅಸ್ವಾಭಾವಿಕ ಗುಂಪಿನ ಕೋಟೆಗಳಾಗಿವೆ.

ಶುಕ್ಲನ 'ನೀತಿಸಾರ'ದಲ್ಲಿ ಸ್ಥಳಗಳ ಆಧಾರದ ಮೇಲೆ ಕೋಟೆಗಳನ್ನು ೯ ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಪರಿಖ** – ಕೋಟೆಯ ಸುತ್ತಲು ಆಳವಾದ ಕಂದಕ ಇರುವುದು.

೨. **ಪರೀಘ** – ಮಣ್ಣು, ಕಲ್ಲು ಮತ್ತು ಇಟ್ಟಿಗೆಯಿಂದ ನಿರ್ಮಿಸಿದ ಕೋಟೆಗಳು.

೨. **ಐರಿಣ** – ಕಲ್ಲು, ಮುಳ್ಳು ಹಾಗೂ ಹಳ್ಳಗಳಿಂದ ಆವೃತ್ತವಾಗಿರುವುದು.

೪. **ವನ** – ದಟ್ಟವಾದ ಅರಣ್ಯ ಅಥವಾ ಎತ್ತರವಾದ ಗಿಡಗಳಿಂದ ಆವೃತವಾಗಿರುವುದು.

೫. **ಗಿರಿ** - ಎತ್ತರವಾದ ಬೆಟ್ಟದ ಮೇಲೆ ನಿರ್ಮಿಸಿರುವ ಕೋಟೆ.

೬. **ಜಲ** - ಆಳವಾದ ಮತ್ತು ಹರಿಯುವ ನೀರಿನಿಂದ ಆವೃತ್ತಿಯಾದುದು.

೭. **ಧನ್ವ** - ಮಣ್ಣಿನಿಂದ ಆವೃತವಾಗಿರುವುದು.

೮. **ಸೈನ್ಯ** - ಶಸ್ತ್ರಾಸ್ತ್ರ ಸನ್ನದ್ಧರಾದ ಸೈನಿಕರಿಂದ ಸುಸಜ್ಜತವಾಗಿರುವುದು.

೯. **ಸಹಾಯ** - ಆಪ್ತರ ಮನೆಗಳಿಂದ ಆವೃತ್ತವಾಗಿರುವುದು.

ಈ ಎಲ್ಲಾ ಪ್ರಕಾರದ ಕೋಟೆಗಳು ಒಂದರಕ್ಕಿಂತ ಮತ್ತೊಂದು ಉತ್ತಮವಾದವುಗಳು. ಅದರಲ್ಲಿ ಸಹಾಯಕ ಕೋಟೆ ಎಲ್ಲಕ್ಕಿಂತಲೂ ಉತ್ತಮವಾದುದು ಎಂದು ಹೇಳಲಾಗಿದೆ.

"ಪರಿಖಾ ದೈರಿಣಂ ಶ್ರೇಷ್ಠ ಪರಿಘಾಂತು ತತೋವನಮ್
ತತೋಧನಂ ಜನಂತಸ್ಮದ ಗಿರಿದುರ್ಗಂ ತತ:ಸ್ಮೃತಮ್"

ಅಂದರೆ 'ಪರಿಖ'ಗಿಂತ 'ಐರಿಣ' ಉತ್ತಮವಾಗಿದೆ. ಇದಕ್ಕಿಂತ ಪರಿಘಾ ಉತ್ತಮವಾದ ಕೋಟೆ, ವನ ಪರೀಘಾಗಿಂತ ಹೆಚ್ಚು ರಕ್ಷಣೆ ನೀಡುತ್ತದೆ. ಅದರಲ್ಲಿಯ ಸೈನಿಕ ಮತ್ತು ಸಹಾಯಕ ಕೋಟೆಗಳನ್ನು ಎಲ್ಲಾ ಕೋಟೆಗಳಿಗಿಂತ ಉತ್ತಮವಾದುದೆಂದು ಹೇಳಲಾಗಿದೆ. ಮೇಲಿನ ಆರು ಪ್ರಕಾರದ ಕೋಟೆಗಳು ಜಿಲ್ಲೆಯಲ್ಲಿವೆ ಆದರೆ ಕೊನೆಯ ಎರಡರಲ್ಲಿ ಒಂದು ಯುದ್ಧ ಭೂಮಿಯಲ್ಲಿ ನಿರ್ಮಿಸುವ ತಾತ್ಕಾಲಿಕ ಕೋಟೆ, ಮತ್ತೊಂದು ಗ್ರಾಮದ ಮಧ್ಯದಲ್ಲಿ ಮನೆಗಳಂದ ಆವೃತವಾಗಿರುವ ರಕ್ಷಣಾ ಕಟ್ಟಡಗಳು. ಈ ರೀತಿಯ ಕೋಟೆಗಳು ಸಾಮಾನ್ಯವಾಗಿ ಗುರುತಿಸುವುದು ಕಷ್ಟಕರವಾಗಿದೆ.

'ಮಾನಸಾರ' ಗ್ರಂಥದ ಪ್ರಕಾರ 'ಗ್ರಾಮ' ಮತ್ತು 'ನಗರ'ಗಳ ವಿನ್ಯಾಸವನ್ನು ಮಾದರಿಯಾಗಿ ಇಟ್ಟುಕೊಂಡು ಕೋಟೆಗಳನ್ನು ೮ ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಏಕೆಂದರೆ ಎರಡರಲ್ಲಿ ವ್ಯತ್ಯಾಸ ಕಂಡು ಬರುವುದಿಲ್ಲ. ಅಲ್ಲಿ 'ರಕ್ಷಣೆ' ಅವಶ್ಯವಾಗಿರುವುದರಿಂದ ಕೋಟೆಯ ಲಕ್ಷಣಗಳು ಎರಡಲ್ಲಿಯು ಒಂದೆ ಆಗಿವೆ.

೧. **ದುಡಕ** - ಪಟ್ಟಣದ ನಾಲ್ಕು ಮೂಲೆಗಳಲ್ಲಿ ಎತ್ತರವಾದ ಗೋಡೆಗಳು ಹಾಗೂ ಈಶಾನ್ಯ ಭಾಗಕ್ಕೆ ಶಿವದೇವಾಲಯ, ಉತ್ತರಕ್ಕೆ ಚಾಮುಂಡಿ ಇರಬೇಕು.

೨. **ಸರ್ವೆತೋಬದ್ರ** - ಚತುರ್ಮುಖ ಆಕಾರದಲ್ಲಿದ್ದ, ಸುತ್ತಲು ಆಳವಾದ ಕಂದಕ ಹಾಗೂ ಚಿಕ್ಕಬಾಗಿಲುಗಳಿಂದ ಕೂಡಿರುವುದು.

೩. **ಸಂದ್ಯವರ್ತ** - ದೀರ್ಘ ಚತುಷ್ಕೋಣದಿಂದ ಕೂಡಿದ್ದು, ಒಳಗಡೆ ನಾಲ್ಕು ಬಾಗಿಲುಗಳನ್ನು ಮಾಡಿ ಪ್ರತಿಯೊಂದಕ್ಕೆ ೩ ರಿಂದ ೭ ಬೀದಿಗಳು ಇರುವುದು.

೪. **ಪದ್ಮಕ** - ಕೋಟೆಯ ಗೋಡೆ, ಕಂದಕ ಮತ್ತು ನಾಲ್ಕು ಮೂರ್ತಿಗಳು ಅದಕ್ಕೆ ಹಲವು ಮುಖಗಳಿರುವುದು ಹಾಗೂ ಚೌಕಾಕಾರದಲ್ಲಿ ಅಥವಾ ವೃತ್ತಾಕಾರದಲ್ಲಿರುವ ಸ್ಥಳ.

೫. **ಸ್ವಸ್ತಿಕ** - ಕಂದಕ, ಗೋಡೆ ಹಾಗೂ ಎರಡು ಬಾಗಿಲುಗಳನ್ನು ಒಳಗೊಂಡಿರುವುದು.

೬. **ಪ್ರಸ್ತರ** - ಚೌಕ ಅಥವಾ ಆಯತಾಕಾರದಲ್ಲಿರಬೇಕು, ಇದರಲ್ಲಿ ನಾಲ್ಕು ಮಧ್ಯದ ಬಾಗಿಲುಗಳು ಇರುತ್ತವೆ.

೭. **ಕರಮುಖಿ** - ಅರ್ಧವೃತ್ತಾಕಾರದಲ್ಲಿರುವುದು.

೮. **ಚತುರ್ಮುಖ** - ನಾಲ್ಕು ದಿಕ್ಕಿನಲ್ಲಿ ಚೌಕಾಕಾರ ಅಥವಾ ಆಯತಾಕಾರದ ಬಾಗಿಲುಗಳಿಂದ ಕೂಡಿರುವುದು.

ಹೋರಾಟದ ಸ್ವರೂಪ ಮತ್ತು ಗ್ರಾಮಗಳನ್ನು ಆಧಾರವಾಗಿಟ್ಟುಕೊಂಡು ಇದೇ ಕೃತಿಯಲ್ಲಿ (ಮಾನಸಾರ) ಕೋಟೆಗಳನ್ನು ಎಂಟು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಶಿರ** - ರಾಜನ ಬೀಡು

೨. **ಸ್ಥಾನೀಯ** - ರಾಜಧಾನಿ

೩. **ದ್ರೋಣಕ** - ನೀರಿನ ಸಮೀಪ ಇರುವ ಕೋಟೆ.

೪. **ವಾಹಿನಿ** - ಯುದ್ಧ ಭೂಮಿಯಿಂದ ದೂರ ಇರುವ ಸೈನ್ಯದ ನೆಲೆ.

೫. **ಸಂವಿದ** - ಜಯವನ್ನು ಕೊಡುವ ಸ್ಥಳ

೬. **ಕೋಲಕ** - ಪರ್ವತಮಯ ಪ್ರದೇಶದಿಂದ ಕೂಡಿರುವುದು

೭. **ನಿಗಮ** - ಕಾವಲಿಗಾಗಿ ನಿರ್ಮಿಸಿರುವ ಕೋಟೆ

೮. **ಸ್ಕಂದಾವರ** - ಸೈನ್ಯದ ಬಿಡು

ಇದೇ ಕೃತಿಯಲ್ಲಿ 'ಸೈನಿಕ ವಾಸ' ದೃಷ್ಟಿಯನ್ನು ಇಟ್ಟುಕೊಂಡು ಕೋಟೆಗಳನ್ನು ಮತ್ತೆ ಏಳು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಗಿರಿದುರ್ಗ** - ಬೆಟ್ಟದ ಮೇಲೆ ನಿರ್ಮಿಸಿರುವುದು

೨. **ಜಲದುರ್ಗ** - ನೀರಿನಿಂದ ಆವೃತ್ತವಾದುದು

೩. **ವನದುರ್ಗ** - ಗಿಡಮರಗಳಿಂದ ಆವೃತವಾಗಿರುವುದು

೪. **ಪಂಕದುರ್ಗ** - ಮಣ್ಣಿನಿಂದ ಆವೃತ್ತಿಯಾದುದು

೫. **ರಥದುರ್ಗ** - ಯುದ್ಧಭೂಮಿಯಲ್ಲಿ ರಥಗಳಿಂದ ನಿರ್ಮಿಸಿರುವುದು

೬. **ದೇವದುರ್ಗ** - ಮಂತ್ರಗಳ ಮೂಲಕ ದೇವರು ನಿರ್ಮಿಸಿರುವ ಕೋಟೆ

೭. **ಮಿಶ್ರದುರ್ಗ** - ಒಂದಕ್ಕಿಂತ ಹೆಚ್ಚಿನ ಅಂಶಗಳಿಂದ ಕೂಡಿರುವುದು

'ಶಿಲ್ಪರತ್ನ' ವಾಸ್ತುಗ್ರಂಥದಲ್ಲಿ **ಸ್ಥಳ** ಮತ್ತು **ಆಕಾರ**ದ ಮೇಲೆ ಕೋಟೆಗಳನ್ನು ೧೦ ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಗಿರಿದುರ್ಗ**

೨. **ಅರಣ್ಯದುರ್ಗ**

೩. **ದೈವಿಕದುರ್ಗ**

೪. **ಜಲದುರ್ಗ**

೫. **ಧನ್ವದುರ್ಗ**

೬. **ಕೃತ್ರಿಮದುರ್ಗ**

೭. **ತ್ರಿಕೋನಾಕಾರದ ದುರ್ಗ**

೮. **ಚೌಕಾಕಾರದ ದುರ್ಗ**

೯. **ವೃತ್ತಾಕಾರದ ದುರ್ಗ**

೧೦. **ಆಯತಾಕಾರದ ದುರ್ಗ**

ಶೈವತಂತ್ರದ ಭಾಗವಾದ 'ಸಾಮ್ರಾಜ್ಯಲಕ್ಷ್ಮೀಪೀಠಿಕ'ದಲ್ಲಿ ಕೋಟೆಗಳಲ್ಲಿ ೮ ಪ್ರಕಾರಗಳಾಗಿ ವಿಂಗಡಿಸಲಾಗಿದೆ.[೧೧೨] ಅದರಲ್ಲಿ ಮೊದಲನೆಯ ಆದ್ಯತೆಯು ಗಿರಿದುರ್ಗಕ್ಕೆ ನೀಡಲಾಗಿದ್ದು. ಇದರಲ್ಲಿ ಮತ್ತೆ ೮ ಪ್ರಕಾರಗಳಾಗಿ ವಿಭಾಗಿಸಲಾಗಿದೆ.

ಗಿರಿದುರ್ಗದ ಎಂಟು ಪ್ರಕಾರಗಳೆಂದರೆ -

೧. **ಭದ್ರಮ್** - ಎತ್ತರವಾದ ವೃತ್ತಾಕಾರದ ಹೊರಮೇಲ್ಮೈ ತಳಕಿನಿಂದ ಕೂಡಿದ್ದು, ಸಾಕಷ್ಟು ಪ್ರಮಾಣದ ಗುಹೆಗಳಿಂದ ಕೂಡಿರುವುದು, ಅಲ್ಲಿ ನೀರು ಲಭ್ಯವಾಗಿರುತ್ತದೆ.

೨. **ಅತಿಭದ್ರಮ್** - ನೆಲದಿಂದ ಮೇಲಿನವರೆಗೆ ವರ್ಣಾಕಾರದಲ್ಲಿದ್ದು, ಅತಿ ಎತ್ತರ ಮತ್ತು ಅಗಲವಾದ ಗುಹೆಗಳಿದ್ದು, ನೀರಿನಿಂದ ಆವರಿಸಿರುವ ಸ್ಥಳ.

೩. **ಚಂದ್ರ** - ತಳಲ್ಲಿ ದುಂಡಾಕಾರದ ಅತಿ ಅಗಲವಾದ ತುದಿಯ ಚಂದ್ರನ ಆಕಾರದಲ್ಲಿದ್ದು, ಹೆಚ್ಚಿನ ಪ್ರಮಾಣದ ನೀರಿನಿಂದ ಕೂಡಿರುತ್ತದೆ. ಅಂತಹ ಸ್ಥಳವು ದೇವತೆಗಳಿಗೂ ಸಹ ಅಗಮ್ಯವಾಗಿರುತ್ತದೆ.

೪. **ಅರ್ಧಚಂದ್ರ** - ಅರ್ಧವೃತ್ತಾಕಾರದಲ್ಲಿದ್ದು, ಅತಿ ಎತ್ತರವು ಅಲ್ಲದ, ಕಡಿಮೆಯು ಅಲ್ಲದ ಗುಹೆಗಳಿಂದ ಕೂಡಿದ್ದು, ನೀರಿನ ಲಭ್ಯತೆಯು ಇರುವ ಸ್ಥಳ.

೫. **ನಾಭೆ** - ತಳದಲ್ಲಿ ಸಂಕಿರ್ಣವಾಗಿದ್ದು, ತುದಿಯಲ್ಲಿ ಅಗಲವಾಗಿದ್ದು, ಕಮಲದ ಬೀಜದ ಸಿಂಬಿಯ ಆಕಾರದಲ್ಲಿರುತ್ತದೆ.

೬. **ಸುನಾಭ** – ತಳದಲ್ಲಿ ಅಗಲವಾಗಿದ್ದು, ಮೇಲೆ ಹೋಗುತ್ತಾ ಚಿಕ್ಕದಾಗಿ ತುತ್ತ ತುದಿಯಲ್ಲಿ ಕಿರಿದಾಗುತ್ತದೆ.

೭. **ರುಚಿರಮ್** – ಸೋಪಾನ ಮಾರ್ಗದ ಮೆಟ್ಟಿಲುಗಳು ಉದ್ದ, ಅಗಲ, ಎತ್ತರ ಕ್ರಮಬದ್ಧವಾಗುತ್ತದೆ. ಅದು ಉಪ್ಪರಿಗೆಯಂತಿರುತ್ತದೆ ಮತ್ತು ಹೆಚ್ಚು ನೀರಿನಿಂದ ಕೂಡಿರುತ್ತದೆ.

೮. **ವರ್ಧಮಾನಮ್** – ಮೃದುಂಗ ಅಥವಾ ಮದ್ದಲೆಯ ಆಕಾರ.

ಕಾಮಂದಕನ 'ನೀತಿಸಾರ'ದ ಪ್ರಕಾರ ಕೋಟೆಗಳನ್ನು ಸ್ಥಳದ ಆಧಾರದ ಮೇಲೆ ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಔದಕ** – ನೀರಿನಿಂದ ಆವೃತ

೨. **ಪರ್ವತ** – ಗುಡ್ಡದ ಮೇಲೆ

೩. **ಧನ್ವನ** – ಒಣಭೂಮಿಯಲ್ಲಿ ನಿರ್ಮಿಸಿರುವುದು

೪. **ವನ** – ಅರಣ್ಯದಿಂದ ಸುತ್ತುವರಿದುದು

ಸಾಮಾನ್ಯವಾಗಿ 'ತಲವಿನ್ಯಾಸ'ದ ಮೇಲೆ ಕೋಟೆಗಳನ್ನು ಮೂರು ಪ್ರಕಾರದಲ್ಲಿ ವಿಂಗಡಿಸಲಾಗಿದೆ.

೧. **ವೃತ್ತ** – ವರ್ತುಲಾಕಾರ

೨. **ದೀರ್ಘಚತುರಸ್ರ** – ಆಯತಾಕಾರ

೩. **ಚತುರಸ್ರ** – ಚೌಕಾಕಾರ

ವಿಶ್ವಕರ್ಮ ವಾಸ್ತು ಶಿಲ್ಪದಲ್ಲಿ ಪ್ರಾದೇಶಿಕತೆ, ಸ್ವರೂಪ, ದ್ವಾರಗಳು ಹಾಗೂ ಅದರ ತಾಂತ್ರಿಕತೆಯ ಆಧಾರದ ಮೇಲೆ ಕೋಟೆಯನ್ನು ಹನ್ನೆರಡು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ದೈವದುರ್ಗ**

೨. **ಪರ್ವತದುರ್ಗ**

೩. **ಕೂರ್ಮದುರ್ಗ**

೪. **ಐರಿಣಿ ದುರ್ಗ**

೫. **ಗಿರಿದುರ್ಗ**

೬. **ಜಲದುರ್ಗ**

೭. **ವನದುರ್ಗ**

೮. **ಏಕಮುಖ ದುರ್ಗ**

೯. **ದ್ವಿಮುಖ ದುರ್ಗ**

೧೦. **ಚತುರ್ಮುಖ ದುರ್ಗ**

೧೧. **ಪ್ರಭುದುರ್ಗ**

೧೨. **ಯುದ್ಧದುರ್ಗ**

ದುರ್ಗಸಿಂಹನು ಕಲ್ಯಾಣಿ ಚಾಲುಕ್ಯರ ಅರಸ ಜಗದೇಕಮಲ್ಲ ಜಯಸಿಂಹನ ಸಂಧಿವಿಗ್ರಹಿಯಾಗಿದ್ದನು. ಈತನು ಕನ್ನಡದಲ್ಲಿ "ಪಂಚತಂತ್ರ" ಎನ್ನುವ ಕೃತಿಯನ್ನು ರಚಿಸಿದ್ದಾನೆ. ಇದರಲ್ಲಿ ಸ್ಥಳದ ಆಧಾರದ ಮೇಲೆ ಕೋಟೆಗಳನ್ನು ಎಂಟು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

ಸ್ಥಳದುರ್ಗ:

ಉದಕಸ್ತಂಬ - ಕೋಟೆಯ ಹೊರವಲಯವು ನೀರು, ಗಿಡ, ಮರ, ಹುಲ್ಲು, ಬಳ್ಳಿಗಳಿಂದ ಕೂಡಿದ್ದು ಒಳಗಡೆ ಮಾತ್ರ ಹುಲ್ಲು ಮತ್ತು ನೀರಿನಿಂದ ಕೂಡಿರುವ ಸ್ಥಳ.

ವೈರಿಗಿ - ದುರ್ಗದ ಹೊರಗೆ ಕಂದಕದಲ್ಲಿ ಉಪ್ಪು ನೀರು, ಕುಡಿಯಲು ಬಾರದ ನೀರು ಅಥವಾ ಸ್ವಲ್ಪ ನೀರು ಇರುವುದು.

ಗಿರಿದುರ್ಗ:

ಗುಹ್ಯ - ಬಹಳ ಎತ್ತರವಾದ ಬೆಟ್ಟದ ತುದಿಗಳು ನಾಲ್ಕು ಕಡೆಯಲ್ಲಿ ಸಮನಾಗಿದ್ದು, ಪ್ರವೇಶಕ್ಕೆ ಒಂದೆ ಬಾಗಿಲು ಇರುವುದು.

ಪ್ರಸ್ತರ - ಎಲ್ಲಿಯೂ ಉತ್ತಮದಾರಿ ಇಲ್ಲದಿರುವುದು, ಬೆಟ್ಟಗಳ ನಡುವೆ ನೀರು ಬೀಳುವ ಸ್ಥಳದಲ್ಲಿ ಮಾತ್ರ ಕಿರಿದಾದ ದಾರಿ ಇರುವ ಸ್ಥಳ.

ಜಲದುರ್ಗ:

ಅಂತದ್ವೀಪ - ಎರಡು ನದಿಗಳ ಸಂಗಮದ ಮಧ್ಯದ ಗೋಡೆ, ದೊಡ್ಡ ಕೆರೆ ಮುಳ್ಳಿನಿಂದ ತುಂಬಿದ ಸರೋವರಗಳಿಂದ ಸುತ್ತುವರೆದ ಸ್ಥಳದ ಕೋಟೆ.

ದ್ರೋಣಕ - ನೀರಿನ ಸಮೀಪದಲ್ಲಿ ರಚಿಸಿರುವ ಕೋಟೆ.

ವನದುರ್ಗ: ಗಿಡ ಮರಗಳಿಂದ ಆವೃತಯಾಗಿರುವುದು.

ಕರ್ದಮೋದಕ - ಸುತ್ತಲು ನೀರು ತುಂಬಿದ ಜಲಾಶಯವಿದ್ದು ಮತ್ತು ಅತಿಯಾದ ಕೆಸರಿನಿಂದ ಕೂಡಿರುವ ಸ್ಥಳ.

ಸ್ಥಂಬಗಹನ - ಅನೇಕ ಮರಗಳಿಂದ ಆವೃತ್ತವಾಗಿ ಸುತ್ತಲು ಉದ್ದವಾದ ಹುಲ್ಲು ಬೆಳೆದಿರುವುದು.

೧೨ನೆಯ ಶತಮಾನದಲ್ಲಿ ಮೂರನೆಯ ಸೋಮೇಶ್ವರನು ರಚಿಸಿರುವ 'ಮಾನಸೋಲ್ಲಾಸ್' ಅಥವಾ 'ಅಭಿಲಾಷಿತಾರ್ಥ ಚಿಂತಾಮಣಿ' ಮತ್ತು ಕೆಳದಿಯ ಬಸವರಾಜನ 'ಶಿವತತ್ವರತ್ನಾಕರ'ದಲ್ಲಿ ಕೋಟೆಗಳನ್ನು ಒಂಬತ್ತು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ.

೧. **ಗಿರಿದುರ್ಗ** - ಬೆಟ್ಟದ ಮೇಲೆ ನಿರ್ಮಿಸಿರುವ ಕೋಟೆ.

೨. **ಜಲದುರ್ಗ** - ಆಳವಾದ ನೀರಿನಿಂದ ಆವೃತ್ತಿಯಾಗಿರುವ ಕೋಟೆ.

೩. **ಪಾಷಾಣ ದುರ್ಗ** - ಬಂಡೆಗಳಿಂದ ಆವೃತ್ತವಾಗಿರುವುದು.

೪. **ಇಷ್ಟಕ ದುರ್ಗ** - ಇಟ್ಟಿಗೆಗಳಿಂದ ನಿರ್ಮಿಸಿರುವ ಕೋಟೆ.

೫. **ಮೃತ್ತಿಕಾಮಯನ್** - ಮಣ್ಣಿನಿಂದ ನಿರ್ಮಿಸಿರುವ ಕೋಟೆ.

೬. **ಮರದುರ್ಗ** - ಕೋಟೆಯಲ್ಲಿ ನೀರಿನ ಸಂಗ್ರಹ ಮಾಡಿಕೊಂಡು ಮರಭೂಮಿಯಲ್ಲಿ ಕೋಟೆ ನಿರ್ಮಿಸಿರುವುದು.

೭. **ವನದುರ್ಗ** - ದಟ್ಟವಾದ ಮುಳ್ಳು, ಗಿಡಗಳಿಂದ ಆವೃತ್ತಿಯಾಗಿರುವುದು.

೮. **ದಾರುಣಮಯ ದುರ್ಗ** - ಮರ ಮತ್ತು ಬಂಬುಗಳಿಂದ ತಯ್ಯಾರಿಸಿರುವುದು.

೯. **ನರದುರ್ಗ** - ಸುತ್ತಲು ಶಸ್ತ್ರ ಸಜ್ಜಿತವಾದ ಯೋಧರಿಂದ ರಚಿಸಲ್ಪಟ್ಟಿರುವುದು.

ಮೇಲಿನ ಏಳು ಪ್ರಕಾರ ಕೋಟೆಗಳು ಗುಲಬರ್ಗಾ ಜಿಲ್ಲೆಯಲ್ಲಿ ನಿರ್ಮಿಸಲಾಗಿದೆ.

ಪುರಾಣಗಳಲ್ಲಿ ಕೋಟೆಯ ನಿರ್ಮಾಣ ಕುರಿತು ಹಲವು ಉಲ್ಲೇಖಗಳಿವೆ. ಅದರಲ್ಲಿ ನಾರಾಯಣನು ಶಿವನನ್ನು ತನ್ನ ವಾಹನವಾದ ಗರುಡನ ಮೇಲೆ ಕುಳ್ಳರಿಸಿಕೊಂಡು ಕೋಟೆಗೆ ಇದ್ದ ಕಂದಕವನ್ನು ದಾಟಿ ಕೋಟೆಯ ಬಾಗಿಲಿನಲ್ಲಿ ಬಂದು ನಿಂತಿರುವ ವಿವರಣೆ ಇದೆ. ಪುರಾಣಗಳ ಪ್ರಕಾರ ಸಾಮಾನ್ಯವಾಗಿ ಕೋಟೆಯನ್ನು ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಲಾಗಿದೆ. ಅದರಲ್ಲಿ ಮತ್ಸ್ಯ ಪುರಾಣದಲ್ಲಿ ಆರು ಪ್ರಕಾರದ ಕೋಟೆಗಳ ಉಲ್ಲೇಖವಿದೆ, ಅವುಗಳೆಂದರೆ -

೧. ಧನುದುರ್ಗ - ಕಾಡ, ಮತ್ತು ನೀರಿಲ್ಲದ ಪ್ರದೇಶದಿಂದ ಸುತ್ತುವರೆದ ಮರಭೂಮಿ.

೨. ಮಹಿದುರ್ಗ - ಕಲ್ಲು ಹಾಗೂ ಇಟ್ಟಿಗೆಯಿಂದ ನಿರ್ಮಿಸಿರುವುದು

೩. ನರದುರ್ಗ - ಆನೆ, ಕುದುರೆ, ರಥ ಹಾಗೂ ಕಾಲ್ದಳಗಳಿಂದ ಸುತ್ತುವರಿದುದು.

೪. ವೃಕ್ಷದುರ್ಗ - ಎತ್ತರವಾದ ಮರ, ಗಿಡಗಳಿಂದ ಕೂಡಿರುವುದು.

೫. ಜಲದುರ್ಗ - ನೀರಿನಂದ ಆವೃತವಾದುದು

೬. ಗಿರಿದುರ್ಗ - ಬೆಟ್ಟದಿಂದ ಆವೃತವಾದುದು.

ಮಹಾಭಾರತದಲ್ಲಿ ಹಲವು ಬಗೆಯ ಕೋಟೆಗಳ ವಿವರಣೆಯನ್ನು ನೀಡಲಾಗಿದ್ದು ಅದರಲ್ಲಿ 'ನರದುರ್ಗವೆ' ಅತ್ಯುತ್ತಮವಾದ ಕೋಟೆಯಾಗಿರುತ್ತದೆ ಎಂದು ಉಲ್ಲೇಖಿಸಲಾಗಿದೆ.

ಕನ್ನಡ ಶಾಸನಗಳಲ್ಲಿ ಕೋಟೆಯ ಮೂರು ಪ್ರಕಾರಗಳ ಉಲ್ಲೇಖಗಳಿವೆ.

(೧) ಗಿರಿದುರ್ಗ, (೨) ವನದುರ್ಗ, (೩) ಜಲದುರ್ಗ

ಕ್ರಿ.ಶ. ೬೩೪ರ ಐಹೊಳೆಯ ಶಾಸನದಲ್ಲಿ ಸ್ಥಳದುರ್ಗದ ಕುರಿತು ಉಲ್ಲೇಖವಿದೆ.

ಕ್ರಿ.ಶ. ೧೧೬೮ರ ಸಿರಸಂಗಿ ಶಾಸನದಲ್ಲಿ ದೇವದುರ್ಗದ ವಿವರಣೆ ಇದೆ.

ಕ್ರಿ.ಶ. ೧೧೬೦ರ ಬಾಗಳಿಯ ಶಾಸನದಲ್ಲಿ ಗಿರಿದುರ್ಗವನ್ನು ಉಲ್ಲೇಖಿಸಲಾಗಿದೆ.

ಈ ಮೇಲಿನ ಎಲ್ಲಾ ಗ್ರಂಥಗಳಲ್ಲಿ, ಪುರಾಣಗಳಲ್ಲಿ ಮತ್ತು ಶಾಸನಗಳಲ್ಲಿ ಕೋಟೆಯ ಹಲವು ಪ್ರಕಾರಗಳನ್ನು ಕುರಿತು ವಿವರಿಸಲಾಗಿದೆ. ಅದರ ಜೊತೆಗೆ ಕೋಟೆಯಲ್ಲಿ ಪ್ರಮುಖವಾಗಿರುವ ಕಟ್ಟಡಗಳ ಕುರಿತು ವಿವರಣೆ ನೀಡಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಈ ಮೇಲಿನ ಎಲ್ಲಾ ಪ್ರಕಾರದ (ಕೆಲವು ಪ್ರಕಾರಗಳನ್ನು ಹೊರತು ಪಡಿಸಿ) ಕೋಟೆಗಳು ನಿರ್ಮಿಸಲಾಗಿದೆ. ಅದರಲ್ಲಿ ವಿಶೇಷವಾಗಿ ಜಿಲ್ಲೆಯ ಗಡಿಭಾಗದಲ್ಲಿರುವ "ದೇವದುರ್ಗ"ದಲ್ಲಿ ದೇವರಿಂದ ನಿರ್ಮಿಸಿರುವ ಕೋಟೆ ಇತ್ತು ಎಂದು ಉಲ್ಲೇಖಗಳಿವೆ. ಅದು ಕಣ್ಣಿಗೆ ಕಾಣದ ಕೋಟೆ, ಕೇವಲ ಮಂತ್ರ ಶಕ್ತಿಯಿಂದ ರಾಜ್ಯಕ್ಕೆ ರಕ್ಷಣೆಯನ್ನು ಒದಗಿಸುತ್ತದೆ. ಅಲ್ಲಿಂದ ಪ್ರಾರಂಭವಾಗುವ ಜಿಲ್ಲೆಯ ಕೋಟೆಗಳ ಇತಿಹಾಸ ಪುರಾಣಗಳ ಕಾಲದ ಸಗರ ಕೋಟೆ, ಶಾತವಾಹನರ ಇಟ್ಟಿಗೆಯ ಕೋಟೆ. ಕಲ್ಲಿನಿಂದ ನಿರ್ಮಿಸಿರುವ ಕೋಟೆಗಳು, ವನದಿಂದ ಸುತ್ತುವರೆದ ವನದುರ್ಗ ಕೋಟೆ, ಚಂದ್ರಕಿಯ ಮಣ್ಣಿನ ಕೋಟೆಯಂತಹ ಎಲ್ಲಾ ಪ್ರಕಾರದ ಕೋಟೆಗಳಿವೆ. ಕೌಟಿಲ್ಯ ಅರ್ಥಶಾಸ್ತ್ರದಿಂದ ಹಿಡಿದು ಡಾ. ಚನ್ನಬಸಪ್ಪ ಎಸ್. ಪಾಟೀಲರ "ಕರ್ನಾಟಕ ಕೋಟೆಗಳು"ವರೆಗೆ ಬರುವ ಎಲ್ಲಾ ಗ್ರಂಥಗಳಲ್ಲಿ ಕೋಟೆಗಳ ಪ್ರಕಾರಗಳ ಕುರಿತು ಹೇಳಲಾಗಿದೆ.

೩.೧೨. ಗುಲಬರ್ಗಾ ಜಿಲ್ಲೆಯ ಕೋಟೆಯ ಪ್ರಕಾರಗಳು

೧. **ವೃತ್ತಾಕಾರ** - ಗುಲಬರ್ಗಾ, ಸುರಪುರ, ಫರಹತಾಬಾದ, ಚಂದ್ರಕಿ, ಗುರಮಿಟಕಲ, ಚಿನಮಳ್ಳಿ ಮುಂತಾದವುಗಳು.

೨. **ಆಯತಾಕಾರ** - ಇಜೇರಿ, ವಾಗಣಗೇರಿ, ರಾಯನ ಪಾಳ್ಯ

೩. **ಚೌಕಾಕಾರ** - ಫಿರೋಜಾಬಾದ, ವನದುರ್ಗ, ಇಜೇರಿ, ಪುಟಪಾಗ್, ಇಟಕಲ್

೪. **ಕುದುರೆ ಲಾಳಾಕಾರ** - ಸನ್ನತಿ, ಮಳಖೇಡ, ಅಲ್ಲೂರು

೫. **ಉದ್ದನೆಯ ರಚನೆ** - ಶಹಾಪೂರ, ಹೊಳಕುಂದಾ, ಚಿಂಚೋಳಿ ಮುಂತಾದವುಗಳು

೬. **ಗಿರಿದುರ್ಗ** - ಯಾದಗಿರ, ಶಹಾಪೂರ, ಸುರಪುರ, ವಾಗಣಗೇರಿ

೭. **ಜಲದುರ್ಗ** - ಸನ್ನತಿ, ಮಳಖೇಡ, ಕೊಲ್ಲೂರು, ಫಿರೋಜಾಬಾದ

೮. **ವನದುರ್ಗ** - ವನದುರ್ಗ

೯. **ಸ್ಥಳದುರ್ಗ** - ಗುಲಬರ್ಗಾ, ಪುಟ್‌ಪಾಗ್, ಇಟಕಲ್, ಇಜೇರಿ, ಕಾಕಲ್‌ವಾರ

೧೦. **ದೇವದುರ್ಗ** - ದೇವರು ಮಂತ್ರ ಶಕ್ತಿಯಿಂದ ನಿರ್ಮಿಸಿರುವುದು.

ಈ ರೀತಿ ಗುಲಬರ್ಗಾ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಎಲ್ಲಾ ಪ್ರಕಾರದ ಕೋಟೆಗಳು ಕಂಡು ಬರುತ್ತವೆ.

ಟಿಪ್ಪಣಿಗಳು

೧. ಗುಣವರ್ಮನ ೧೨೩೦ - ಪುಷ್ಪದಂತ ಪುರಾಣ.

೨. ಗುರುನಾಥ ಜೋಶಿ, ೧೯೯೦ - ಕನ್ನಡ - ಕನ್ನಡ ಶಬ್ದಕೋಶ, ೧೯೫.

೩. Jagadish Iyyer P.V., 1921-22 - Construction of Forts, Q.J.M.S. Vol. XII, p. 370.

೪. Deshpande D.N., 1971 - Maratha Forts, Unpublished Ph.D. Thesis, Poona Unviersity, Pune p. 10.

೫. ಕೆ.ವಿ. ಮುದ್ದವೀರಪ್ಪ, ೨೦೦೦ - ಕೋಟೆ-ಕೊತ್ತಲಗಳ ಜಾನಪದಿಯ ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧದ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೦.

೬. ಡಾ. ಪಿ.ಕೆ. ರಾಜಶೇಖರ - ಪೀರಿಯಾ ಪಟ್ಟಣದ ಕಾಳಗ, ಪು. ೭೦.

೭. ರಾಧಾಕೃಷ್ಣಮೂರ್ತಿ, ಸಂಸ್ಕೃತ ೧೯೯೦ - ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಇತಿಹಾಸ ದರ್ಶನ-೪, ಪು. ೧೫೭.

೮. ನರಸಿಂಹ ಮೂರ್ತಿ, ಕೆ.ಎಲ್., ೧೯೪೯ - ಶುಕ್ರನನೀತಿಸಾರ, ಪು. ೧೦.

೯. ಡಾ. ಎಸ್.ಕೆ. ಜೋಶಿ, ೨೦೦೦ - ಕರ್ನಾಟಕದ ಪ್ರಾಚೀನ ಕೋಟೆಗಳು ಮತ್ತು ಇತಿಹಾಸ, ಪು. ೧೪೭.

೧೦. ರಾಧಾಕೃಷ್ಣ ಮೂರ್ತಿ, ೧೯೯೦ - ಪೂರ್ವೋಕ್ತ, ಪು. ೧೫೮.

೧೧. ಬೃಹಸ್ಪತಿ - ರಾಜನೀತಿ, ವಾರಣಾಸಿ, ಪು. ೨೦೨.

೧೨. ಮಲ್ಲೇಪುರಂ ಜಿ. ವೆಂಕಟೇಶ (ಸಂ.), ೧೯೯೮ - ಶಿವತತ್ವರತ್ನಾಕರ, ಪು. ೨೬೮-೬೯.

೧೩. Rangarajan L.N. (Ed.) 1987 - Kautilyan Arthashastra, p. 14.

೧೪. ಬೆಟಗೇರಿ ಕೃಷ್ಣ ಶರ್ಮರು, ೧೯೮೩ - ಕರ್ನಾಟಕದ ಜನಜೀವನ, ಪು. ೫೩.

೧೫. ದೇವಿರಪ್ಪಾ ಎಚ್. (ಸಂ.), ೧೯೯೪ - ಜನ್ನನ ಅನಂತನಾಥ ಪುರಾಣ, ಪದ್ಯ ೧೦೧.

೧೬. ಕೋತಿನ ಎಸ್.ಎಸ್. (ಅನು), ೧೯೮೪ - ಮೋಹನ ತರಂಗಿಣಿ, ಪು. ೨೯೫.

೧೭. ಶೇಷಶಾಸ್ತ್ರಿ, ಆರ್., ೧೯೪೨ - ಕರ್ನಾಟಕ ವೀರಗಲ್ಲುಗಳು, ಪು. ೧೮೮.

೧೮. ಶ್ರೀಧರ ಎಚ್.ಜೆ., ೨೦೦೨ - ಪ್ರಾಚೀನ ಭಾರತದಲ್ಲಿ ಯುದ್ಧ ಕಲೆ, ಪು. ೩೧.

೧೯. ಪ್ರಜಾವಾಣಿ ಪತ್ರಿಕೆ, ೨೦೦೯ - ಭೋರಾಬಾಯಿ ಸ್ಮಾರಕ ನಿರ್ಮಾಣಕ್ಕೆ ಮನವಿ, ಪು. ೨ ದಿನಾಂಕ ೪-೧೨-೨೦೦೯.

೨೦. ಕನ್ನಡ ವಿಷಯ, ವಿಶ್ವಕೋಶ, ಪು. ೪೦೬.

೨೧. The Encyclopaedia Britanica, Vol. VII, p. 285.

೨೨. The Encyclopaedia America International Addition, Vol. II, p. 622.

೨೩. Date, G.T. 1929 - Art of War in Ancient India, p. 42.

೨೪. Joshi, S.K., 1985. Defence Architecture in Early Karnataka, p. 3.

೨೫. ಪಾಟೀಲ ಎಸ್. ಚನ್ನಬಸಪ್ಪ, ೧೯೯೯ - ಕರ್ನಾಟಕದ ಕೋಟೆಗಳು, ಪು. ೨೭೮.

೨೬. ಬೆಟಗೇರಿ ಕೃಷ್ಣಶರ್ಮ, ೧೯೩೯ - ಪೂರ್ವೋಕ್ತ, ಪು. ೩.

೨೭. ಕೆ.ವಿ. ಮುದ್ದವೀರಪ್ಪ, ೨೦೦೪ - ಪೂರ್ವೋಕ್ತ ಪು. ೨೦.

೨೮. America Encyclpaedia, Vol. II, p. 622.

೨೯. ನೀ.ಕೃ. ರಾಮಶೇಷನ್, ೧೯೮೦ - ಕರ್ನಾಟಕದ ಕೋಟೆ ಕೊತ್ತಲಗಳು, ಪು. ೭೮.

೩೦. ಕನ್ನಡ ವಿಷಯದ ವಿಶ್ವಕೋಶ, ಪು. ೪೦೭.

೩೧. America Encyclopedia, Vol. VII, p. 622.

೩೨. ಕನ್ನಡ ವಿಷಯ ವಿಶ್ವಕೋಶ, ಸಂ. ೭, ಪು. ೯೭೯.

೩೩. ನೀ.ಕೃ. ರಾಮಶೇಷನ್, ೧೯೮೦ - ಪೂರ್ವೋಕ್ತ, ಪು. ೮.

೩೪. The Encyclopaedia Britanica, Vol. VII, p. 15.

೩೫. ನೀ.ಕೃ. ರಾಮಶೇಷನ, ೧೯೮೦ - ಪೂರ್ವೋಕ್ತ, ಪು. ೮.

೩೬. ಅದೇ, ಪು. ೮.

೩೭. Indian Archaeology, 1960-61 - pp. 31-32.

೩೮. Wheelar Sir Mortimev, 1959 - Early India and Pakisthan, p. 15.

೩೯. ಪುಟ್ಟಪ್ಪ, ಕೆ.ವಿ. (ಸಂ.) ೧೯೭೦ - ಯುಗಯಾತ್ರಿ ಭಾರತ ಸಂಸ್ಕೃತಿ, ಸಂ. ೧, ಪು. ೮೭.

೪೦. ಕನ್ನಡ ವಿಶ್ವಕೋಶ, ಸಂ. ೫, ಪು. ೪೦೮.

೪೧. Joshi, S.K. 1985 - Op. Cit., p. 8.

೪೨. ಶ್ರೀಧರ ಎಚ್.ಜೆ., ೨೦೦೨ - ಪೂರ್ವೋಕ್ತ, ಪು. ೩೧.

೪೩. ಎಂ. ಕೊಟ್ರೇಶ್, ೨೦೦೨ - ಕೋಟೆ ಕೊತ್ತಲಗಳ ಅಧ್ಯಯನ (ಬಳ್ಳಾರಿ ಜಿಲ್ಲೆ), ಪು. ೧೭.

೪೪. ನಾಗೆಗೌಡ ಎಚ್.ಎಲ್. (ಸಂ.), ೧೯೬೬ - ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪು. ೩೩-೩೪.

೪೫. Joshi, S.K. 1985 – op cit, p. 125.

೪೬. Sidney Toy, 1957 - The Strongholds of India, p. 37, 86, 92, ೧೨೭.

೪೭. ಕೃಷ್ಣಮೂರ್ತಿ.ಪಿ.ವಿ., ಮತ್ತು ವಸಂತ ಲಕ್ಷ್ಮಿ ಕೆ. (ಸಂ.)೨೦೦೦ - ಸೂರ್ಯಕೀರ್ತಿ ಡಾ. ಸೂರ್ಯನಾಥ ಕಾಮತ್ ಅಭಿನಂದನಾ ಸಂಪುಟ. ಪು. ೧೪೭..

೪೮. ಪಾಟೀಲ, ಸಿ.ಎಸ್. ೧೯೯೭- ಪೂರ್ವೋಕ್ತ, ಪು. ೧೪.

೪೯. Joshi, S.K., 1985 – op, cit. p. 26.

೫೦. ಶಿಲಾಕಾಂತ ಪತ್ತಾರ, ೨೦೦೦ - ಬಾದಾಮಿ - ಸಾಂಸ್ಕೃತಿಕ ಅಧ್ಯಯನ, ಪು. ೨೭೪.

೫೧. ಪಾಟೀಲ, ಸಿ.ಎಸ್., ೧೯೯೯ - ಪೂರ್ವೋಕ್ತ, ಪು. ೪.

೫೨. ಅದೇ, ಪು. ೩೪-೩೫.

೫೩. Joshi. S.K. 1985 - op cit. p.32

೫೪. Aruni, S.K. 2004 - Surapura Samsthan: Historical and Archeological study poligar State in South India, pp. 149-150.

೫೫. ಪಾಟೀಲ ಎಂ.ಬಿ. (ಸಂ.), ೧೯೯೭ - ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಪು. ೪೩.

೫೬. ಶ್ರೀಶೈಲ ಬಿರೆದಾರ . ೨೦೦೫ - ಸೇಡಮ್ ಒಂದು ಸಾಂಸ್ಕೃತಿಕ ಅಧ್ಯಯನ. ಪು. ೨೬.

೫೭. ಪಾಟೀಲ ಚನ್ನಬಸಪ್ಪಾ, ೧೯೯೯ - ಪೂರ್ವೋಕ್ತ, ಪು. ೧೨.

೫೮. ಜೋಶಿ, ಎಸ್.ಕೆ., ೧೯೯೪ - ಸನ್ನತಿ ದುರ್ಗದ ಪುನರ್ ದರ್ಶನ, ಇತಿಹಾಸ ದರ್ಶನ, ಸಂ. ೯, ಪು. ೧೫-೧೭.

೫೯. I.A. 1968-69,- p. 67.

೬೦. Altekar, A.S. 1967,- Rashtrakutas and their time, pp. 46-48.

೬೧. Ibid, p. 124.

೬೨. Desai, P.B. (Ed.) 1970, - A History of Karnataka, p. 394.

೬೩. ಪಾಟೀಲ ಎಂ.ಬಿ., (ಸಂ.) ೧೯೯೭ - ಪೂರ್ವೋಕ್ತ, ಪು. ೭೮೧.

೬೪. ಮುಡಬಿ ಗುಂಡೇರಾವ, ೧೯೯೯ - ಸೇಡಮ್ ತಾಲೂಕಿನ ಐತಿಹಾಸಿಕ ಸ್ಮಾರಕಗಳು, ಪು. ೫೦.

೬೫. Maruti N. Tiwari and Kamala Giri (Ed.) 1998-99, The Journal of Indian Art History Congress, Vol. V.

೬೬. ಬಸವರಾಜ ಆಲೆಮನಿ, ೨೦೦೮ - ಇತಿಹಾಸ ನೆನಪಿಸುವ ಖಾಸಗಿ ಕೋಟೆ, ಪ್ರಜಾವಾಣಿ ಪತ್ರಿಕೆ ಲೇಖನ, ದಿನಾಂಕ ೮-೬-೨೦೦೮.

೬೭. Vijayalaxmi, K.S. (Ed.) 2006 - Studies in Karnataka HIstory and Culture, P.V. VI, p. 139.

೬೮. ವಾಣಿ, ಎಸ್.ಎಸ್., ೨೦೦೭ - ಕ್ಷೇತ್ರಾಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿ.

೬೯. ಶ್ರೀಧರ ಹೆಚ್. ಜೆ. ೨೦೦೨ - ಪೂರ್ವೋಕ್ತೆ, ಪು. ೧೫೩.

೭೦. Singh, A.P. 1987 - Forts and Fortification in India with special reference to Central India, p. 170.

೭೧. Aruni, S.K., 2004, op.cit, pp. 93-94.

೭೨. ಎ. ಕೃಷ್ಣ ಸುರಪುರ (ಸಂ.), ೧೯೮೫ - ಸಗರನಾಡ ದರ್ಶನ, ಪು. ೨-೩.

೭೩. Balasubamaniam R., (Ed.) 2005 - Indian Journal of Hsitory of Science, (40.4) pp. 505-506.

೭೪. ಗೋಪಾಲ ಆರ್. (ಸಂ.), ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೨೧೬.

೭೫. Ayyar Jagadish P.V., 1921-22 – op. cit, p. 370.

೭೬. ಪಾಟೀಲ, ಎಸ್. ಚನ್ನಬಸಪ್ಪಾ, ೧೯೯೯ - ಪೂರ್ವೋಕ್ತ, ಪು.

೭೭. ವಾಣಿ ಎಸ್.ಎಸ್. ೨೦೦೬ - ಕ್ಷೇತ್ರಕಾರ್ಯಾಧ್ಯಯನ ಮಾಹಿತಿ.

೭೮. ಹೂಗಾರ, ಬಿ.ಪಿ., ೨೦೦೨ - ಮಧ್ಯಕಾಲೀನ ಭಾರತದ ಇತಿಹಾಸ, ಪು. ೪೭.

೭೯. Four Author: 1998 - Simple History of India upto 1526, p.123.

೮೦. ಬಿ. ಕೃಷ್ಣಮಾಚಾರ್ಯ, ೨೦೦೩ - ಮರೆಯಲಾಗದ ಸುರಪುರ ರಾಜರ ಚರಿತ್ರೆ, ಪು. ೯೨.

೮೧. Yaseen M. Quddus, Sitaram Jagirdar, 2001, Persian, Arabic and Urdu Inscription in Karnataka, p. 187.

೮೨. ಆಲೆಮನಿ ಬಸವರಾಜ, ೨೦೦೮ - ಪೂರ್ವೋಕ್ತ, ಪು. ೧೧.

೮೩. ಚಿದಾನಂದ ಮೂರ್ತಿ-, ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಪು. ೨೮೨.

೮೪. Wani Shambuling S. 1990 - Gulbarga city and its monuments un published M.Phil thises GUG, p. 106.

೮೫. ಪಾಟೀಲ ಎಸ್. ಚನ್ನಬಸಪ್ಪ, ೧೯೯೯ - ಪೂರ್ವೋಕ್ತ, ಪು. ೧೨೬.

೮೬. ಕಪಟರಾಳ ಕೃಷ್ಣರಾಯರು, ೨೦೦೫ - ಸುರಪುರ ಸಂಸ್ಥಾನದ ಇತಿಹಾಸ, ಪು. ೬೬-೬೭.

೮೭. Joshi, S.K. 1985 - Op. Cit., p. 73.

೮೮. ಪಾಟೀಲ ಎಸ್. ಚನ್ನಬಸಪ್ಪ, ೧೯೯೯ - ಪೂರ್ವೋಕ್ತ, ಪು. ೧೩೪.

೮೯. ಬಸವರಾಜ ಆಲೆಮನಿ, ೨೦೦೮ - ಪೂರ್ವೋಕ್ತ, ಪು. ೧೧.

೯೦. ಚಿದಾನಂದ ಮೂರ್ತಿ, - ಪೂರ್ವೋಕ್ತ ಪು. ೨೮೨.

೯೧. Venkatesh Machakanur (Ed.) 2008 - Gulbarga Heritage Series, p. 13.

೯೨. Biradar Shrishail, 1993 - Malkhed through the ages, Unpublished M.Phil. Thesis, p. 72.

೯೩. Singh, A.P. 1987 - Forts and Fortification in India with Special Reference to Central India, 171.

೯೪. ಕಪಟರಾಳ ಕೃಷ್ಣರಾಯರು, ೨೦೦೫, - ಪೂರ್ವೋಕ್ತ, ಪು. ೮೮.

೯೫. Singh, A.P., 1987, op. cit, p. 170.

೯೬. ಚಿದಾನಂದ ಮೂರ್ತಿ ಎಂ., ಪೂರ್ವೋಕ್ತ, ಪು. ೨೮೬.

೯೭. ಶ್ರೀಧರ, ಹೆಚ್.ಜಿ., ೨೦೦೨ - ಪೂರ್ವೋಕ್ತ, ಪು. ೧೫೦.

೯೮. ಶೇಷಶಾಸ್ತ್ರಿ. ಆರ್., ೧೯೪೨ - ಪೂರ್ವೋಕ್ತ, ಪು. ೧೮೯.

೯೯. ಗೋಪಾಲ ಆರ್. (ಸಂ.) ೨೦೦೭ - ಪೂರ್ವೋಕ್ತ, ಪು. ೪೬೨.

೧೦೦. ಶ್ರೀಧರ ಹೆಚ್.ಜಿ. ೨೦೦೨ - ಪೂರ್ವೋಕ್ತ, ಪು. ೨೮೩.

೧೦೧.ಶ್ರೀಕಂಠಶಾಸ್ತ್ರಿ ಎಸ್. ೧೯೭೫ - ಭಾರತೀಯ ಸಂಸ್ಕೃತಿ, ಪು. ೩೨೯.

೧೦೨.ಮುದ್ದವೀರಪ್ಪ, ಕೆ.ವಿ., ೨೦೦೪ - ಪೂರ್ವೋಕ್ತ, ಪು. ೩೦.

೧೦೩.ಕೃಷ್ಣಭಟ್ ಕೆ., (ಅನು) ೧೯೭೨ - ಕೌಟಿಲನ ಅರ್ಥಶಾಸ್ತ್ರ. ಪು.೪೫.

೧೦೪.Venkatesh Machakanur, 2008 - Op. Cit., p. 56.

೧೦೫.Sidney Toy, 1957 - Op. Cit., p. 40.

೧೦೬.ಕೆ.ವಿ. ಮುದ್ದುವೀರಪ್ಪ, ಪೂರ್ವೋಕ್ತ, ಪು. ೩೪-೩೫.

೧೦೭.ಪ್ರಜಾವಾಣಿ ಪತ್ರಿಕೆ, ದಿನಾಂಕ ೪-೧೨-೨೦೦೯, ಪು. ೨.

೧೦೮.ಕೆ.ವಿ. ಮುದ್ದುವೀರಪ್ಪ, ೨೦೦೪ - ಪೂರ್ವೋಕ್ತ, ಪು. ೩೧.

೧೦೯.ಸದಾನಂದ, ಜೆ.ಎಸ್. (ಅನು) ೨೦೦೧ - ಕೌಟಿಲ್ಯ, ಪು. ೮-೯.

೧೧೦.ಅದೇ.

೧೧೧.ಕೃಷ್ಣಭಟ ಕೆ, ಪೂರ್ವೋಕ್ತ, ಪು. ೧೦೩.

ಅಧ್ಯಾಯ-೪

ಗುಲಬರ್ಗಾ ಜಿಲ್ಲೆಯ ಕೋಟೆಗಳು

೧. ಸನ್ನತಿ ಕೋಟೆ:

ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಬರುವ ಸನ್ನತಿ ಗ್ರಾಮವನ್ನು ಸ್ಥಳಿಯರು 'ಸೊಂತಿ' ಎಂದು ಕರೆಯುತ್ತಾರೆ. ಇದು ಗುಲಬರ್ಗಾದಿಂದ ವಾಡಿ ಹಾಗೂ ನಾಲವಾರದಿಂದ ೨೨ ಕಿ.ಮಿ. ದೂರದಲ್ಲಿದೆ. ಯಾದಗಿರಿಯಿಂದ ೪೦ ಕಿ.ಮಿ. ದೂರದ ಭೀಮಾ ನದಿಯ ಎಡದಂಡೆಯ ಮೇಲೆ ಸನ್ನತಿ ಗ್ರಾಮವಿದೆ. ಇದು ಕ್ರಿ.ಪೂ. ೧ನೇ ಶತಮಾನದಿಂದ ಇಂದಿನವರೆಗೆ ಜನವಸತಿಯನ್ನು ಹೊಂದಿದೆ. ನಿರಂತರವಾಗಿ ಹರಿಯುವ ಭೀಮಾ ನದಿ ಜನವಸತಿಗೆ ಪ್ರಮುಖ ಕಾರಣವಾಗಿದೆ. ಶಿಲಾಯುಗದಿಂದ ಇಂದಿನವರೆಗೆ ಈ ಗ್ರಾಮವು ಮಹತ್ವವನ್ನು ಪಡೆದಿದೆ, ಏಕೆಂದರೆ ಮೂರು ಕಡೆ ನದಿಯಿಂದ ಆವೃತ್ತಿಯಾಗಿರುವ ಈ ಪ್ರದೇಶ ಹಲವು ಪ್ರಾಣಿಗಳ ನೆಲೆಯಾಗಿತ್ತು. ನಿರಂತರ ಪ್ರಾಣಿಗಳ ಕೇಂದ್ರ ಸ್ಥಳವಾಗಿರುವ ಇಲ್ಲಿ ಶಿಲಾಯುಗದ ಜನಾಂಗವು ಅವುಗಳನ್ನು ಬೇಟೆಯಾಡಲು ಆಗಮಿಸಿ, ಕಾಲಕ್ರಮೇಣ ಇದೇ ಸ್ಥಳದಲ್ಲಿ ನೆಲೆನಿಂತರು. ಶಿಲಾಯುಗದ ಹಲವು ಬಗೆಯ ಬೇಟೆಯ ಉಪಕರಣಗಳು ಇಲ್ಲಿ ಲಭ್ಯವಾಗಿವೆ[೧]. ಇದುವರೆಗೂ ಅಲ್ಲಿಯ 'ರಣಮಂಡಲದ ಸುತ್ತಲು ಕಲ್ಲಿನ ಆಯುಧಗಳು ಮಡಿಕೆ, ಕುಡಿಕೆಗಳು, ಆಟಿಕೆಯ ಸಾಮಗ್ರಿಗಳು ಲಭ್ಯವಾಗಿವೆ[೨]. ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ಲಭ್ಯವಾದ ಕಲ್ಲಿನ ಹಡಗು, ಮಡಿಕೆಯ ತಳಭಾಗ ಮತ್ತು ಮಣ್ಣಿನಿಂದ ಮಾಡಿರುವ ವೃತ್ತಾಕಾರದ ಚಿಕ್ಕ ಸ್ಥಂಬಗಳು ಲಭ್ಯವಾಗಿವೆ.

ಕ್ರಿ.ಪೂ. ಮೂರನೆಯ ಶತಮಾನದಲ್ಲಿ ಆಳಿರುವ ಮೌರ್ಯ ಚಕ್ರವರ್ತಿ ಅಶೋಕನ ಕೆಲವು ಶಾಸನಗಳು ಇಲ್ಲಿ ಲಭ್ಯವಾಗಿವೆ. ಇಲ್ಲಿಯ ಶಾಸನಗಳ ವಿಶೇಷತೆ ಎಂದರೆ ಇತರ ಶಾಸನಗಳಂತೆ ಬಂಡೆಗಲ್ಲಿನ ಮೇಲೆ ಬರೆಯದೆ ಸುಣ್ಣದ ಕಲ್ಲಿನ ಫಲಕಗಳ ಮೇಲೆ ಬರೆಯಲಾಗಿದೆ. ಕನಗನಹಳ್ಳಿಯ ಸ್ತೂಪದ ಸುತ್ತಲು ದೊರೆತ ಫಲಕಗಳ ಕೆಳಗಡೆ ಬ್ರಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯ ವಾಕ್ಯಗಳಿವೆ. ಶಾತವಾಹನರ ಕಾಲದ ಹಲವು ಶಾಸನಗಳು ಇಲ್ಲಿ ಲಭ್ಯವಾಗಿವೆ. ಸನ್ನತಿಯ ಸಮೀಪದ ಆನೆಗುತ್ತಿ ಮತ್ತು ಕನಗನ ಹಳ್ಳಿಯಲ್ಲಿ ಬೌದ್ಧ ಸ್ಥೂಪಗಳು ದೊರೆತಿವೆ. ಇದು ಶಿಲಾಯುಗದಿಂದ ಶಾತವಾಹನರ ಕಾಲದವರೆಗೆ ಅತ್ಯಂತ ಪ್ರಮುಖ ಸ್ಥಳವಾಗಿತ್ತು. ಆ ಕಾಲಮಾನದಲ್ಲಿ ಪ್ರಾಮುಖ್ಯತೆ ಪಡೆದ ಸನ್ನತಿ ಕೇಂದ್ರ ಸ್ಥಳದ ಸುತ್ತಲು ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಲಾಯಿತು.

ಸನ್ನತಿಯಲ್ಲಿ ನಡೆದ ಭೂ ಉತ್ಖನನದ ವರದಿಯಲ್ಲಿ ಲಭ್ಯವಾದ ಬೌದ್ಧ ಧರ್ಮದ ಅವಶೇಷಗಳು, ಬೇಟೆಯ ಸಾಮಗ್ರಿಗಳು, ಗೃಹ ಉಪಯೋಗಿ ವಸ್ತುಗಳು, ಆಟಿಕೆಯ ಸಾಮಗ್ರಿ ಮುಂತಾದವುಗಳನ್ನು ಕುರಿತು ವಿವರಣೆ ನೀಡಲಾಗಿದೆ. ಆದರೆ ಎಸ್.ಕೆ. ಜೋಶಿಯವರು ಈ ನಗರದ ಕೋಟೆಯನ್ನು ಗುರುತಿಸಿ ಅವರ

ಮೇಲೆ ಕೆಲವು ಲೇಖನಗಳು ಮತ್ತು ಪುಸ್ತಕಗಳನ್ನು ಪ್ರಕಟಿಸಿದರು. ನಂತರದಲ್ಲಿ ಕೆಲವು ಸಂಶೋಧನೆಗಳಿಂದ ಇಲ್ಲಿಯ ಕೋಟೆಯನ್ನು ಕುರಿತು ಅಧ್ಯಯನ ಕೈಗೊಳ್ಳಲಾಯಿತು. ಭೀಮಾ ನದಿಯ ದಂಡೆ ಮೇಲಿರುವ ಈ ಗ್ರಾಮಕ್ಕೆ ನದಿಯಿಂದ ಮೂರು ಭಾಗದ ಕಡೆಗೆ ರಕ್ಷಣೆ ಇದೆ. ನದಿಯು 'U' ಆಕಾರದಲ್ಲಿ ತಿರುವು ಪಡೆದುಕೊಂಡಿದೆ.[೩] ನದಿಯು ಇಲ್ಲಿ ಆಳವಾಗಿದೆ. ಆದ್ದರಿಂದ ಈ ಭಾಗದಲ್ಲಿ ಗ್ರಾಮಕ್ಕೆ ನದಿಯ ನೈಸರ್ಗಿಕ ರಕ್ಷಣೆ ನೀಡುತ್ತದೆ. ಆದ್ದರಿಂದ ಇದು ಒಂದು ಜಲದುರ್ಗವಾಗಿದೆ. ಸನ್ನತಿಯ ಸಂಶೋಧನೆಯಲ್ಲಿ ಎರಡು ಪ್ರಮುಖ ಅಂಶಗಳನ್ನು ಗುರುತಿಸಲಾಗಿದೆ. ೧ ಚಂದ್ರಲಾಂಬ ದೇವಾಲಯದ ಸಮೀಪದಲ್ಲಿಯ ಶಾಸನ ೨. ಭೀಮಾನದಿಯ ಸಮೀಪದಲ್ಲಿರುವ 'ರಣಮಂಡಲ'.

ಸನ್ನತಿಯ ಗ್ರಾಮವನ್ನು ನದಿಯಿಂದ ರಕ್ಷಿಸಲು ಅದರ ಮೂರು ದಿಕ್ಕಿನಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಗ್ರಾಮವು ಮೂರು ಕಡೆಯಿಂದ ಭೀಮ ನದಿಯ ರಕ್ಷಣೆ ಪಡೆದರೆ, ಒಂದು ಭಾಗದಲ್ಲಿ ಮಾತ್ರ ಕೋಟೆಯಿಂದ ರಕ್ಷಣೆಯನ್ನು ಪಡೆದುಕೊಂಡಿದೆ. ಈ ಗ್ರಾಮದ ಮಹತ್ವ ಕುರಿತು ಹಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಿ.ಶ. ೧ನೇ ಶತಮಾನದಿಂದ ೩ನೇ ಶತಮಾನದವರೆಗೆ ಇದೊಂದು ಪ್ರಮುಖ ವಾಣಿಜ್ಯ ಕೇಂದ್ರ ಹಾಗೂ ಕೈಗಾರಿಕಾ ನಗರವಾಗಿತ್ತು. ಇಲ್ಲಿಗೆ ಬೇರೆ ಬೇರೆ ಭಾಗಗಳಿಂದ ಹೆಚ್ಚಿನ ಜನ ಆಗಮಿಸುತ್ತಿದ್ದರು. ಕಾಲಕ್ರಮೇಣ ಇದು ಬೌದ್ಧ ಧರ್ಮದ ಕೇಂದ್ರ ಸ್ಥಳವಾಗಿ ಪರಿಣಮಿಸಿತು. ಈ ಹಿನ್ನಲೆಯಲ್ಲಿ ಗ್ರಾಮದ ರಕ್ಷಣೆಗಾಗಿ ರಕ್ಷಣಾ ಕಟ್ಟಡಗಳು ಬೆಳೆದು ಬಂದವು. ಹಳೆಯ ಗ್ರಾಮವು ಪ್ರಸ್ತುತ ಗ್ರಾಮದ ಆಗ್ನೇ ಭಾಗದಲ್ಲಿದೆ. ಗ್ರಾಮದಿಂದ ೨ ಕಿ.ಮೀ. ದೂರದಲ್ಲಿ ಎತ್ತರವಾದ ಮತ್ತು ವಿಶಾಲವಾದ ಪ್ರದೇಶವಿದೆ. ಇದನ್ನು ಗ್ರಾಮಸ್ಥರು ರಣಮಂಡಲ ಎಂದು ಕರೆಯುತ್ತಾರೆ. ೧೯೮೫ರಲ್ಲಿ ಪ್ರೊ. ಶರ್ಮಾ ಅವರು ಕೈಗೊಂಡ ಸಂಶೋಧನೆಯಲ್ಲಿ ಇದರ ಮಹತ್ವ ಕುರಿತು ಅಧ್ಯಯನ ಮಾಡಲಾಯಿತು. ಅಲ್ಲದೆ ಈ ಪ್ರದೇಶವು ೮೦ ಹೆಕ್ಟರವರೆಗೆ ವಿಶಾಲವಾಗಿದ್ದು. ೨೦ ಅಡಿ ಎತ್ತರವಾಗಿದೆ. ಇದರ ಸುತ್ತಲು ಗಿಡಗಂಟಿಗಳು ಬೆಳೆದು ಕೊಂಡಿವೆ. ಇದೊಂದು ಎತ್ತರವಾದ ಕಾವಲುಗೋಪುರದಂತೆ ಕಂಡು ಬರುತ್ತದೆ. ಇಲ್ಲಿಂದ ಹಲವಾರು ಮೂರ್ತಿ ಶಿಲ್ಪಗಳು, ಮಣ್ಣಿನ ಮೂರ್ತಿಗಳು, ನಾಣ್ಯಗಳು, ಗೃಹ ಬಳಕೆಯ ಸಾಮಗ್ರಿಗಳು ಮುಂತಾದ ಅವಶೇಷಗಳು ಲಭ್ಯವಾಗಿವೆ. ಇದು ಸಂಪೂರ್ಣವಾಗಿ ಏಕ ಕಾಲಕ್ಕೆ ಕುಸಿದು ಬಿದ್ದಿರುವದರಿಂದ ಈ ಆಕಾರದಲ್ಲಿ ಕಂಡು ಬರುತ್ತದೆ. ರಣಮಂಡಲದ ಮೇಲ್ಭಾಗದ ಮಣ್ಣನ್ನು ವೀಕ್ಷಿಸಿದರೆ ಅದು ಹಾಳು ಮಣ್ಣಿನಂತೆ ಕಂಡು ಬರುತ್ತದೆ. ಇದರ ಕೆಳಭಾಗದ ತಗ್ಗಾದ ಪ್ರದೇಶದಲ್ಲಿ ಫಲವತ್ತಾದ ಮಣ್ಣು ಇದೆ. ರಣಮಂಡಲದಿಂದ ಸುಮಾರು ೨೦೦ ಮೀಟರ ಅಂತರದಲ್ಲಿ ಈಶಾನ್ಯ, ಉತ್ತರ, ವಾಯವ್ಯ ಮತ್ತು ಪಶ್ಚಿಮ ಭಾಗದ ಕಡೆಗೆ ಅರ್ಧ ವೃತ್ತಾಕಾರದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ.

[illegible]

ಸನ್ನತಿಯ ಕೋಟೆಯು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಇದು ಕರ್ನಾಟಕದಲ್ಲಿಯೆ ಅತ್ಯಂತ ಪ್ರಾಚೀನ ಕೋಟೆಯಾಗಿದೆ. ಕ್ರಿ.ಶ. ೧ ರಿಂದ ೩ನೇ ಶತಮಾನದಲ್ಲಿ ರಚಿಸಿರುವಂತೆ ಕಂಡು ಬರುತ್ತದೆ. ಈ ಕೋಟೆಯು ಸುಮಾರು ೬೦೦ ಮೀ. ಉದ್ದವಾಗಿದ್ದು. ಅದರ ತಳಭಾಗದಲ್ಲಿ ೨೦ ರಿಂದ ೨೫ ಅಡಿ ದಪ್ಪ, ಮೇಲ್ಭಾಗದಲ್ಲಿ ೮ ರಿಂದ ೪ ಅಡಿ ದಪ್ಪವಾಗಿದೆ. ಇದಕ್ಕೆ ಬಳಸಿರುವ ಇಟ್ಟಿಗೆಗಳು ೬೦ ಸೆ.ಮಿ ಉದ್ದ ೩೦ ಸೆ.ಮಿ. ಅಗಲ ಮತ್ತು ೧೦ ಸೆ.ಮಿ. ಎತ್ತರವಾಗಿವೆ. ಇನ್ನೂ ಕೆಲವು ಇಟ್ಟಿಗೆಗಳು ೩೦ ಸೆ.ಮಿ. ಉದ್ದ ೩೦ ಸೆ.ಮಿ. ಅಗಲ. ೬ ಸೆ.ಮಿ. ಉತ್ತರವಾಗಿವೆ. ಈ ಆಕೃತಿಯ ಇಟ್ಟಿಗೆಗಳ ಛಾಯಾ ಚಿತ್ರವನ್ನು ಲಗತ್ತಿಸಲಾಗಿದೆ. ಕೆಲವು ಸಂಶೋಧನೆಗಳಲ್ಲಿ ಉದ್ದನೆಯ ಗೋಡೆಯಲ್ಲಿ ೭ ದ್ವಾರಗಳಿರುವುದಾಗಿ ಉಲ್ಲೇಖಿಸಲಾಗಿದೆ[೪]. ಆದರೆ ಪ್ರಸ್ತುತ ಸಂಶೋಧನೆಯಲ್ಲಿ ನಾಲ್ಕು ಕಡೆಗಳಲ್ಲಿ ದ್ವಾರಗಳಿರುವುದಾಗಿ ಉಲ್ಲೇಖಿಸಲಾಗಿದೆ. ಗ್ರಾಮದ ಪ್ರವೇಶವು ಕೋಟೆಯ ಮಧ್ಯ ಭಾಗದಲ್ಲಿದೆ. ಪ್ರವೇಶದ ಬಲ ಬದಿಯ ಗೋಡೆಯು ಸಂಪೂರ್ಣವಾಗಿ ನಾಶ ಹೊಂದಿದ್ದು, ಎಡಭಾಗದ ಗೋಡೆಯು ಕುಸಿದು ಬಿದ್ದಿದೆ. ಅದರ ಒಳಗಡೆ ಹಲವು ಬಗೆಯ ರಕ್ಷಣಾತ್ಮಕ ಕಟ್ಟಡಗಳಿರುವಂತೆ ಕಂಡು ಬರುತ್ತದೆ. ಇದರ ಬಗ್ಗೆ ಪರಿಪೂರ್ಣ ಮಾಹಿತಿಯು ಉತ್ಖನನದಿಂದ ಮಾತ್ರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಕೋಟೆ ಗೋಡೆಯು ಎರಡು ಸಮನಾದ ಪ್ರವೇಶ ದ್ವಾರಗಳನ್ನು ಹೊಂದಿದೆ. ಇದರ ಹೊರಬದಿಯ ರಚನೆಗೆ ಸರಿಯಾಗಿ ಸುಟ್ಟ ಇಟ್ಟಿಗೆಗಳನ್ನು ಬಳಸಲಾಗಿದೆ. ತಳಭಾಗದಲ್ಲಿ ವಿಶಾಲವಾದ ಇಟ್ಟಿಗೆಗಳಿದ್ದರೆ ಮೇಲ್ಭಾಗದಲ್ಲಿ ಸಣ್ಣ ಸಣ್ಣ ಇಟ್ಟಿಗೆಗಳಿವೆ. ಕೆಲ ಭಾಗಗಳ ಗೋಡೆಯು ರಕ್ಷಣಾತ್ಮಕವಾಗಿರುವಂತೆ ಕಂಡು ಬರುವುದಿಲ್ಲ. ಮಧ್ಯ ಕಾಲೀನ ಕೋಟೆಗಳಂತೆ ಈ ಗೋಡೆಯು ಇಳಿಜಾರಿನಲ್ಲಿ ಇರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಕಾಲಕ್ರಮೇಣ ಕೋಟೆಗಳು ರಕ್ಷಣಾತ್ಮಕವಾಗಿ ಬೆಳೆದು ಬಂದವು.

ಸನ್ನತಿ ಕೋಟೆಯು ಅತ್ಯಂತ ಪ್ರಾಚೀನ ಕೋಟೆಗಳಲ್ಲಿ ಒಂದಾಗಿರುವುದರಿಂದ ರಕ್ಷಣಾತ್ಮಕ ದೃಷ್ಟಿಯಿಂದ ಕೆಲವೊಂದು ಲೋಪ ದೋಷಗಳು ಕಂಡು ಬರುತ್ತವೆ. ಆದರೆ ಇಂತಹ ಪ್ರಾಚೀನ ಕೋಟೆಯು ಗುಲಬರ್ಗಾ ಜಿಲ್ಲೆಯಲ್ಲಿರುವುದು ಹೆಮ್ಮೆಯ ಸಂಗತಿ. ಇಲ್ಲಿ ಒಳಕೋಟೆ ಮತ್ತು ರಣಮಂಡಲವನ್ನು ಹೊರ ಕೋಟೆ ಎಂದು ಕರೆಯಲಾಗಿದೆ. ರಣಮಂಡಲದ ದಕ್ಷಿಣ ಭಾಗದ ಕೆಲವು ಉತ್ಖನನದಲ್ಲಿ ಹಲವು ಬಗೆಯ ಇಟ್ಟಿಗೆಯಿಂದ ನಿರ್ಮಿಸಿರುವ ವೃತ್ತಾಕಾರದ ರಚನೆಗಳು ಲಭ್ಯವಾಗಿವೆ[೫]. ಅವುಗಳು ರಣಮಂಡಲ ಅಥವಾ ಕಾವಲುಗೋಪುರಗಳಂತೆ ಕಂಡು ಬರುವುದರಿಂದ ಇದನ್ನು ರಣಮಂಡಲ ಎಂದು ಕರೆಯಲಾಗಿದೆ.

೨. ಸಗರ ಕೋಟೆ:

ಗುಲಬರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನಿಂದ ಸುರಪೂರಕ್ಕೆ ಹೋಗುವ ಮಾರ್ಗದ ೫ ಕಿ.ಮೀ. ನಂತರ ಬಲಗಡೆ ೭ ಕಿ.ಮಿ. ದೂರದಲ್ಲಿರುವ ಈ ಗ್ರಾಮವು ಪ್ರಾಚೀನ ಕಾಲದಿಂದಲೂ ಪ್ರಾಮುಖ್ಯತೆಯನ್ನು ಪಡೆದಿದೆ. ಇದನ್ನು 'ದೊಡ್ಡಸಗರ' ಎಂದು ಕರೆಯುತ್ತಾರೆ. ಇದರ ಪ್ರಾಚೀನತೆಯ ಕುರಿತು ಐತಿಹಾಸಿಕ ದಾಖಲೆಗಳು ಲಭ್ಯವಿಲ್ಲ. ಈ ಕುರಿತು ಖಿಲ್ಜಿ ಮತ್ತು ತುಘಲಕ ಮನೆತನಕ್ಕೆ ಸಂಬಂಧಿಸಿದಂತೆ ಕೆಲವು ಶಾಸನಗಳು ಮಾಹಿತಿ ಒದಗಿಸುತ್ತವೆ. ಅಲ್ಲಾವುದ್ದೀನ ಖಿಲ್ಜಿಯ ಮಗ ಮುಬಾರಕ್‌ನು ಈ ಪ್ರಾಂತಗಳ ಮೇಲ್ವಿಚಾರಣೆಗಾಗಿ ಒಬ್ಬ ಅಧಿಕಾರಿಯನ್ನು ನೇಮಿಸಿದ. ಮಹಮ್ಮದ್-ಬಿನ್-ತುಘಲಕ್‌ನು ಬಹಾವುದ್ದೀನ್ ಗುರಪ್ಪನನ್ನು "ಸಗರ ನಾಡಿನ" ಪ್ರಾಂತಾಧಿಕಾರಿ ಎಂದು ನೇಮಕ ಮಾಡಿದ. ಇಲ್ಲಿಯ ಸಂಪತ್ತಿನ ವ್ಯಾಮೋಹದಿಂದ ಆತನು ಸುಲ್ತಾನನಿಂದ ಸ್ವಾತಂತ್ರನಾಗಲು ಯತ್ನಿಸಿ ವಿಫಲನಾದ. ಕ್ರಿ.ಶ. ೧೩೪೭ರಲ್ಲಿ ಬಹಮನಿ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದ ನಂತರ ಈ ಪ್ರಾಂತವು ಬಹಮನಿಯರ ಆಳ್ವಿಕೆಗೆ ಒಳಪಟ್ಟಿತು. ವಿಜಯನಗರ ಮೇಲೆ ದಂಡಯಾತ್ರೆ ಮಾಡುವಾಗ ಬಹಮನಿಯ ಸೈನ್ಯ ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಕಾಲಕ್ರಮೇಣ ಮುಂದಿನ ಎಲ್ಲಾ ಸುಲ್ತಾನರು ಇಲ್ಲಿ ನೆಲೆ ನಿಂತು ಮುಂದೆ ಹೊರಡುತ್ತಿದ್ದರು. ಸುಲ್ತಾನರು ನೆಲೆ ನಿಲ್ಲುವುದರಿಂದಾಗಿ ಇಲ್ಲಿ ಹಲವು ಬಗೆಯ ರಕ್ಷಣಾ ಕಟ್ಟಡಗಳು ಅಸ್ತಿತ್ವಕ್ಕೆ ಬಂದವು. ಕ್ರಿ.ಶ. ೧೩೯೮-೯೯ರಲ್ಲಿ ಪಿರೋಜಶಹನು ವಿಜಯನಗರದ ಮೇಲೆ ದಂಡೆತ್ತಿ ಹೋಗುವಾಗ ಇಲ್ಲಿ ನೆಲೆನಿಂತು ಯುದ್ಧ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದರು. ಯುದ್ಧದಲ್ಲಿ ಜಯಶಾಲಿಯಾಗಿ ಬರುವಾಗ ಮತ್ತೆ ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು. ಆಗ ಗ್ರಾಮವನ್ನು ಪುನರ್‌ನಿರ್ಮಾಣ ಮಾಡಿ ಇದಕ್ಕೆ ನಸ್ರತಾಬಾದ್ (ವಿಜಯನಗರ) ಎಂದು ಕರೆಯಲಾಯಿತು.

ಬಹಮನಿ ಅರಸರ ಕಾಲದಲ್ಲಿ ಇಲ್ಲಿ ಕೋಟೆ, ಮಸೀದಿ, ದ್ವಾರ ಬಾಗಿಲು, ಕಾವಲುಗೋಪುರಗಳು ಮುಂತಾದ ರಕ್ಷಣಾ ಸಂಬಂಧಿ ಕಟ್ಟಡಗಳು ಬೆಳೆದು ಬಂದವು. ಆದಿಲ್ ಶಾಹಿಗಳ ಕಾಲದಲ್ಲಿ ಈ ಪ್ರದೇಶವು ಹೆಚ್ಚಿನ ಬೆಳವಣಿಗೆ ಹೊಂದಿತು. ಇಲ್ಲಿಯ ಕೆಲವು ಕಟ್ಟಡಗಳು ಶಾಹಿ ಮನೆತನಕ್ಕೆ ಸಂಬಂಧಿಸಿವೆ. ಕ್ರಿ.ಶ. ೧೬೮೭ರಲ್ಲಿ ಔರಂಗಜೇಬನು ಆದಿಲ್ ಶಾಹಿಗಳ ಪ್ರಾಂತವನ್ನು ವಶಪಡಿಸಿಕೊಂಡನು. ಮೊಗಲ್‌ರ ಕೊನೆಯ ಕಾಲದವರೆಗೆ (೧೭೦೭) ಸಗರ ಪ್ರಾಂತವು ಹೆಚ್ಚಿನ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಈ ಮಧ್ಯದಲ್ಲಿ ಬೇಡರ ಪಾಮ ನಾಯಕನು ಇದರ ಜಾಗಿರದಾರನಾಗಿದ್ದ.

ಸಗರ ನಾಡನ್ನು ಆಳಿರುವ ಸಗರ ಚರ್ಕವರ್ತಿಯು ಇಲ್ಲಿ ಕೋಟೆಯನ್ನು ಕಟ್ಟಿಸಿದನೆಂದು ಪ್ರತೀತವಿದೆ. ಆದರೆ ಪೌರಾಣಿಕ ಪುರುಷನಾದ ಇತನ ಬಗ್ಗೆ ಯಾವುದೇ ಐತಿಹಾಸಿಕ ದಾಖಲೆಗಳು ಇರುವುದಿಲ್ಲ. ಆದ್ದರಿಂದ ಇಲ್ಲಿಯ ಕೋಟೆ ಇತನಿಂದ ನಿರ್ಮಿಸಿರಬಹುದೆಂದು ಪ್ರತೀತವಿದೆ ಆದರೆ ಯಾವುದೇ ದಾಖಲೆಗಳು ಲಭ್ಯವಾಗಿರುವದಿಲ್ಲ. ಪ್ರಸ್ತುತ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿದ್ದು

ಕೇವಲ ಮಣ್ಣಿನ ದಿಬ್ಬೆಗಳು ಮಾತ್ರ ಉಳಿದುಕೊಂಡಿವೆ. ಕೋಟೆಗೋಡೆಯಂತೆ ಕಾಣುವ ಮಣ್ಣಿನ ದಿಬ್ಬೆಯು ನೇರವಾಗಿದೆ. ಮಧ್ಯದಲ್ಲಿ ವೃತ್ತಾಕಾರದ ದಿನ್ನೆಗಳಿವೆ. ಇವುಗಳು ಕಾವಲುಗೋಪುರಗಳಿರಬಹುದಾಗಿದೆ. ಈ ಮಣ್ಣಿನ ದಿಬ್ಬೆಗಳನ್ನು ಉತ್ಖನನ ಮಾಡಿದಾಗ ಒಳಗಡೆ ಕಲ್ಲಿನ ಗೋಡೆಯ ತಳಪಾಯ ಇದ್ದರೆ, ಅದು ಬಹಮನಿಯರ ಕಾಲದಲ್ಲಿ ನಿರ್ಮಿಸಿರುವಂತೆ ಕಾಣುತ್ತದೆ. ಆದರೆ ಒಳಗಡೆ ಕೇವಲ ಮಣ್ಣಿನಿಂದ ಕೂಡಿದರೆ ಅದು ಪ್ರಾಚಿನ ಕಾಲದಲ್ಲಿ ನಿರ್ಮಿಸಿರುವ ಮಣ್ಣಿನ ಕೋಟೆಯಾಗಿರುವ ಸಾಧ್ಯತೆಗಳಿವೆ.

ಕೋಟೆಯ ಪ್ರಾಚೀನತೆ ಕುರಿತು ಹಿಂದಿನ ಅಧ್ಯಾಯದಲ್ಲಿ ಹೇಳಿರುವಂತೆ, ಮೊದಲ ಕೋಟೆಗಳ ಮಣ್ಣಿನಿಂದ, ನಂತರ ಇಟ್ಟಂಗಿಗಳಿಂದ ಆ ಮೇಲೆ ಕಲ್ಲಿನಿಂದ ಕೋಟೆಗಳನ್ನು ನಿರ್ಮಿಸಲಾಯಿತು. ಪ್ರಸ್ತುತ ಈ ಗ್ರಾಮದ ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿ ಮಣ್ಣಿನ ಗೋಡೆಯಿದೆ. ಈ ಗೋಡೆ ಒಂದು ಕಿ.ಮೀ. ಉದ ೮ ಮೀಟರ ಅಗಲ ಮತ್ತು ೪ ರಿಂದ ೫ ಮೀ. ಎತ್ತರವಾಗಿದೆ. ಅಲ್ಲದೆ ಮಧ್ಯದಲ್ಲಿ ಪ್ರತಿ ೫೦ ರಿಂದ ೭೫ ಅಡಿಯಲ್ಲಿ ಒಂದೊಂದು ಮಣ್ಣಿನ ದಿಬ್ಬೆಗಳಿವೆ. ಇವುಗಳ ಮಧ್ಯದಲ್ಲಿ ಬುರುಜುಗಳಂತೆ ವೃತ್ತಾಕಾರದ ದಿಬ್ಬೆಗಳು ಕಂಡು ಬರುತ್ತವೆ. ಗ್ರಾಮವನ್ನು ಸುತ್ತುವರೆದಿರುವ ಈ ಮಣ್ಣಿನ ಕೋಟೆಯ ಕೆಲವು ಭಾಗಗಳಲ್ಲಿ ಭೂಮಿಯನ್ನು ಸಾಗುವಳಿ ಮಾಡಿರುವುದರಿಂದ ಕೋಟೆ ಹಾಳಾಗಿದೆ. ನಾಲ್ಕು ದಿಕ್ಕಿನಲ್ಲಿ ಎತ್ತರವಾದ ಮಣ್ಣಿನ ದಿಬ್ಬೆಗಳಿರುವಂತೆ ಕಂಡು ಬರುತ್ತವೆ. ಆದರೆ ಪ್ರಸ್ತುತ ಎರಡು ದಿನ್ನೆಗಳು ಮಾತ್ರ ಉಳಿದುಕೊಂಡಿವೆ. ಈ ಕೋಟೆಯ ಬಲಬದಿಗೆ ಮತ್ತು ಎಡಭಾಗಕ್ಕೆ ಕೆರೆಗಳಿವೆ. ಅದರಲ್ಲಿ ಒಂದನ್ನು ಶಂಕರ ಕೆರೆ ಎಂದು ಕರೆದರೆ ಮತ್ತೊಂದು 'ವಡ್ಡ್‌ಕೆರೆ' ಎಂದು ಕರೆಯುತ್ತಾರೆ. ಈ ಅಂಶಗಳಿಂದ ರಾಜ್ಯಧಾನಿಗಳು ನೀರಿನ ಉಪಲಬ್ದವಿರುವ ಕಡೆಗಳಲ್ಲಿ ಹುಟ್ಟರುವಂತೆ ಇಲ್ಲಿಯು ಒಂದು ರಾಜ್ಯಧಾನಿ ಹುಟ್ಟಿಕೊಂಡಿರಬೇಕು. ಇದರ ಉತ್ತರ ಭಾಗದಲ್ಲಿ ಎರಡು ಪ್ರವೇಶ ದ್ವಾರಗಳಿದ್ದಿರುವಂತೆ ಕಂಡು ಬರುತ್ತದೆ. ಆದರೆ ಪ್ರಸ್ತುತ ಯಾವ ದ್ವಾರವು ಉಳಿದಿರುವುದಿಲ್ಲ.

ಕೋಟೆಯ ಒಳಗಡೆ ಹಲವು ಸಮಾದಿಗಳಿವೆ ಹಾಗೂ ಕೇಂದ್ರ ಭಾಗದಲ್ಲಿ ಜಾಮೀ ಮಸೀದಿ ಇದೆ. ಇದು ಫಿರೋಜಾಬಾದ ಕೋಟೆಯ ಮಸೀದಿಯನ್ನು ಹೋಲುತ್ತದೆ. ಚೌಕಾಕಾರದ ಈ ಮಸೀದಿಯು ಒಳಗಡೆ ಪಶ್ಚಿಮ ಭಾಗದಲ್ಲಿ ಸುಮಾರು ೫೦x೨೫ ಉದ್ದ ಅಗಲದ ವೇದಿಕೆಯ ಮೇಲೆ ಹಲವು ಕಂಬಗಳ ಮೇಲೆ ಕಮಾನುಗಳಿಂದ ಕೂಡಿದೆ. ಈ ಕಂಬಗಳು ಗುಲಬರ್ಗಾ ಕೋಟೆಯ ಜಾಮಿಮಸೀದಿಯ ಕಂಬಗಳನ್ನು ಹೋಲುತ್ತವೆ.

ಸಗರ ಗ್ರಾಮದ ಹೊರವಲಯದಲ್ಲಿ (ಪಶ್ಚಿಮ) ಒಂದು ವಿಶಾಲವಾದ ಪ್ರವೇಶದ್ವಾರವಿದೆ. ४೦ ಅಡಿ ಉದ್ದ ೨೫ ಅಡಿ ಅಗಲದ ಈ ದ್ವಾರವು ಮೂರು ಅಂತಸ್ತಿನಲ್ಲಿದೆ. ಇದರ ಎರಡು ಬದಿಯಲ್ಲಿ ಒಂದೊಂದು ಶಾಸನವಿದೆ. ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ಈ ದ್ವಾರವು ಬಹಮನಿ ಸುಲ್ತಾನ

[illegible]

ಫಿರೋಜ ಶಾಹನ ಆದೇಶದ ಮೇರೆಗೆ ಆತನ ಕೋತ್ವಲನಾದ ಫಹೀಮನು ಕಟ್ಟಿಸಿ ಕ್ರಿ.ಶ. ೧೪೦೭ರಲ್ಲಿ ನಿರ್ಮಿಸಿ ಅದಕ್ಕೆ "ಶಹಾದರ್ವಾಜ" ಎಂದು ಹೆಸರಿಸಿದೆ. ಆದರೆ ಸ್ಥಳಿಯರು ಇದಕ್ಕೆ "ಬಡೆ ದರ್ವಾಜ" ಎಂದು ಕರೆಯುತ್ತಾರೆ.

ಪೂರ್ವಕ್ಕೆ ಮುಖ ಮಾಡಿರುವ ಇದರ ಎರಡು ಬದಿಯಲ್ಲಿ ವೃತ್ತಾಕಾರದ ಕೊತ್ತಳಗಳಿರುವಂತೆ ಕಂಡು ಬರುತ್ತದೆ. ಆದರೆ ಈಗ ಕೊತ್ತಳಗಳ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದ್ದು ಉಳಿದ ಭಾಗ ನಾಶ ಹೊಂದಿದೆ. ಇದಕ್ಕೆ ಅಂಟಿಕೊಂಡಂತೆ ಎಡಭಾಗದ ಕೋಟೆ ಗೋಡೆಯು ಮುಂದುವರೆಯುತ್ತದೆ. ಸ್ವಲ್ಪ ದೂರದ ನಂತರ ಕೋಟೆ ಗೋಡೆ ಸಂಪೂರ್ಣವಾಗಿ ನಾಶ ಹೊಂದಿದೆ. ಪ್ರವೇಶ ದ್ವಾರವು ೧೫ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನಿಂದ ಕೂಡಿದೆ. ಹೊರಗಡೆ ಬಲಭಾಗದಲ್ಲಿ ಒಂದು ಚಿಕ್ಕ ಗುಪ್ತದ್ವಾರವಿದೆ ಇದು 'L' ಆಕಾರದಲ್ಲಿ ಒಳಗಡೆ ಪ್ರವೇಶ ಹೊಂದಿದೆ. ಇಂತಹ ವಿಶಾಲವಾದ ದ್ವಾರಕ್ಕೆ ಕಟ್ಟಿಗೆಯ ಬಾಗಿಲುಗಳು ಜೋಡಿಸಲಾಗಿತ್ತು. ಆದರೆ ಈಗ ಮೇಲ್ಭಾಗದಲ್ಲಿ ಒಂದು ಉದ್ದನೆಯ ಕಟ್ಟಿಗೆ ಮಾತ್ರ ಉಳಿದುಕೊಂಡಿದೆ. ಒಳಗಡೆ ಆರು ಅಡಿ ಎತ್ತರ ಮೇಲೆ ಎರಡು ಬದಿಯಲ್ಲಿ ಮೂರು ಅಂಕಣಗಳ ಕಟ್ಟಡವಿದೆ. ಇದರ ಕಂಬಗಳು ಕಲ್ಯಾಣಿ ಚಾಲುಕ್ಯರ ಶೈಲಿಯನ್ನು ಹೋಲುತ್ತವೆ. ಬಲಬದಿಯಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಒಂದು ಚಿಕ್ಕದ್ವಾರವಿದೆ. ಎಡಬದಿಯಲ್ಲಿ ಹೊರಗಡೆಯಿಂದ ಮೇಲೆ ಹತ್ತಲು ಮೆಟ್ಟಲುಗಳಿದ್ದವು ಆದರೆ ಅದು ಸಂಪೂರ್ಣವಾಗಿ ಶಿಥಿಲಗೊಂಡಿದೆ.

ಈ ದ್ವಾರದ ಪ್ರತಿಯೊಂದು ಅಂತಸ್ತಿನಲ್ಲಿ ಎರಡು ಬದಿಯಲ್ಲಿ ವೀಕ್ಷಣಾ ರಂದ್ರಗಳಿವೆ. ಕಾವಲುಗಾರರು ಮೇಲ್ಭಾಗದಲ್ಲಿ ಕುಳಿತು ವೀಕ್ಷಣೆ ಮಾಡುತ್ತಿದ್ದರು. ಅಲ್ಲದೆ ಅವರಿಗೆ ವಿಶ್ರಾಂತಿಗಾಗಿ ವಿಶಾಲವಾದ ಸ್ಥಳವಿದೆ. ಎರಡನೆಯ ಅಂತಸ್ತಿನಿಂದ ಮೂರನೆಯ ಅಂತಸ್ತಿಗೆ ಹೋಗಲು ಮೆಟ್ಟಲುಗಳಿವೆ. ಇದರ ಒಳಗಡೆಯು ಕಾವಲುಗಾರರಿಗೆ ವಿಶ್ರಾಂತಿ ಸ್ಥಳವಿದೆ. ಮೇಲ್ಭಾಗದಲ್ಲಿ ನಾಲ್ಕು ಬದಿಯಲ್ಲಿ ಪಿರ್ಯಾಮಿಡನ ಆಕಾರದ ರಚನೆಗಳಿವೆ. ಅಲ್ಲದೆ ಪ್ರತಿಯೊಂದು ಕಮಾನಿನ ಎರಡು ಬದಿಯಲ್ಲಿ ಗಾರೆಯಿಂದ ಮಾಡಿರುವ ವೃತ್ತಾಕಾರಗಳಿವೆ. ಈ ರೀತಿ ಹೊಸ ಹೊಸ ಶೈಲಿಯ ಆರಂಭ ಫಿರೋಜ ಶಹಾನ ಕಾಲದಲ್ಲಿ ಬೆಳಕಿಗೆ ಬಂದಿರುವುದು ಕಂಡು ಬರುತ್ತದೆ. ಬಹಮನಿ ಸುಲ್ತಾನರ ಪ್ರಾರಂಭಿಕ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಿಗಿಂತ ಇದು ಭಿನ್ನವಾಗಿದೆ. ಇಡಿ ದ್ವಾರವು ಗಾರೆಯಿಂದ ಲೇಪನ ಮಾಡಿ, ಅದರ ಮೇಲೆ ಹೂಬಳ್ಳಿಗಳು, ರೇಖಾ ಚಿತ್ರಗಳು ಮುಂತಾದ ಅಲಂಕಾರಗಳನ್ನು ಮಾಡಲಾಗಿದೆ.

೩. ಮಳಖೇಡ ಕೋಟೆ:

ಸೇಡಂ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೧೨ ಕಿ.ಮೀ. ಗುಲಬರ್ಗಾದಿಂದ ಆಗ್ನೇಯಕ್ಕೆ ೪೦ ಕಿ.ಮಿ. ದೂರದಲ್ಲಿ ಭೀಮಾ ನದಿಯ ಉಪನದಿಯಾದ ಕಾಗಿಣಾ ನದಿಯ ಎಡದಂಡೆಯ ಮೇಲೆ ಇರುವ ಮಳಖೇಡ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ[೧೩]. ಇದು ರಾಷ್ಟ್ರಕೂಟರ ರಾಜ್ಯಧಾನಿಯ ಜೊತೆಗೆ

ಟೀಕಾಚಾರ್ಯರ ಕೇಂದ್ರ ಸ್ಥಳವಾಗಿದೆ. ಪ್ರಾಚೀನ ಶಾಸನಗಳಲ್ಲಿ ಇದನ್ನು "ಮಳೆಯಖೇಡ" ಎಂದು ಉಲ್ಲೇಖಗೊಂಡಿದೆ. ರಾಷ್ಟ್ರಕೂಟರಿಗೆ ಸಂಬಂಧಿಸಿದ ಯಾವುದೆ ಶಾಸನಗಳು ಇದುವರೆಗೆ ಇಲ್ಲಿ ಲಭ್ಯವಾಗಿಲ್ಲ. ಆದರೆ ಕಲ್ಯಾಣಿ ಚಾಲುಕ್ಯರ ಮತ್ತು ಕಲಚೂರಿಯರ ಶಾಸನಗಳಲ್ಲಿ ಈ ಗ್ರಾಮದ ಉಲ್ಲೇಖಗಳಿವೆ.

ಮಳಖೇಡ ಗ್ರಾಮವು ಹಿಂದೆ ಮಾನ್ಯಖೇಟವೆಂಬ ಹೆಸರಿನಲ್ಲಿ ರಾಷ್ಟ್ರಕೂಟರ ರಾಜ್ಯಧಾನಿಯಾಗಿತ್ತು[೧೪]. ಇವರು ೮ನೆಯ ಶತಮಾನದ ಮಧ್ಯಭಾಗದಿಂದ ೧೦ನೆಯ ಶತಮಾನದ ಕೊನೆಯವರೆಗೆ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಆಳ್ವಿಕೆ ನಡೆಸಿದರು. ಬದಾಮಿಯ ಚಾಲುಕ್ಯರ ಸಾಮಂತರಾದ ಇವರು ಸ್ವಸಾಮರ್ಥ್ಯದಿಂದ ರಾಜ್ಯ ಕಟ್ಟಿ ಆಳ್ವಿಕೆ ಮಾಡಿದರು. ಈ ಅವಧಿಯಲ್ಲಿ ದಕ್ಷಿಣ ಭಾರತ ಹಾಗೂ ಉತ್ತರ ಭಾರತಗಳಲ್ಲಿ ಪ್ರಬಲ ಶಕ್ತಿಯಾಗಿ ಮೆರೆದ ಕನ್ನಡ ಮೂಲದ ಮನೆತನ ರಾಷ್ಟ್ರಕೂಟರದು.

ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡ ಪ್ರದೇಶದಲ್ಲಿ ಶಿಥಿಲಗೊಂಡ ಹಾಗೂ ಭಗ್ನಾವಶೇಷ ಹೊಂದಿರುವ ಹಲವು ಸ್ಮಾರಕಗಳು ಲಭ್ಯವಾಗುತ್ತವೆ. ಇಲ್ಲಿಯ ಕೋಟೆಯು ಚೋಳರ ದಾಳಿಗಳಿಂದ ಹಾಗೂ ಮುಸ್ಲಿಂರ ದಾಳಿಗಳಿಂದ ಅವನತಿ ಹೊಂದಿದೆ. ಅನೇಕ ಸಲದ ದಾಳಿಯಲ್ಲಿ ಅವನತಿ ಹೊಂದಿದ್ದರೂ ಸಹ ಮತ್ತೆ ಪುನರ್‌ನಿರ್ಮಿಸಿ, ರಾಜಧಾನಿಯನ್ನಾಗಿ ಮುಂದುವರೆಸಿಕೊಂಡು ಹೋಗಲಾಯಿತು. ಕ್ರಿ.ಶ. ೧೭ನೆಯ ಶತಮಾನದಲ್ಲಿ ಕೋಟೆಯನ್ನು ಕೊನೆಯ ಸಲ ಪುನರನಿರ್ಮಾಣ ಮಾಡಲಾಗಿದೆ. ಇಲ್ಲಿಯ ಕೋಟೆ, ದೇವಾಲಯ, ಬಸೀದಿ ಹಾಗೂ ಇತರ ಕಟ್ಟಡಗಳನ್ನು ನೋಡಿದಾಗ ಎಲ್ಲಾ ಕಟ್ಟಡಗಳು ಪುನರ್‌ನಿರ್ಮಾಣಗೊಂಡಂತೆ ಕಂಡು ಬರುತ್ತವೆ. ಗ್ರಾಮದ ಕೊನೆಯ ಭಾಗದಲ್ಲಿರುವ ಕೋಟೆಯ ಸುತ್ತಲು ನದಿ ಮತ್ತು ಹಳ್ಳದಿಂದಃ ಆವರಿಸಿಕೊಂಡಿದೆ. ರಾಷ್ಟ್ರಕೂಟರ ಕಾಲದ ಅವಶೇಷಗಳು ಗ್ರಾಮದ ಹಲವು ಭಾಗಗಳಲ್ಲಿ ಕಂಡು ಬರುತ್ತವೆ.

ಮಳಖೇಡ ಕೋಟೆಯು ಪೂರ್ವ ದಿಕ್ಕಿನಲ್ಲಿ ಹಳ್ಳದಿಂದ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಕಾಗಿಣಾ ನದಿಯದಿಂದ ಆವೃತ್ತವಾಗಿದೆ. ಈಶಾನ್ಯ ಭಾಗದಲ್ಲಿಯು ಸಹ ಒಂದು ಸಣ್ಣ ಹಳ್ಳ ಹರಿಯುತ್ತದೆ. ಕೋಟೆಯ ಮೂರು ದಿಕ್ಕಿನಲ್ಲಿ ನೀರು ಹರಿಯುತ್ತಿರುವುದರಿಂದ ಅದಕ್ಕೆ ನೈಸರ್ಗಿಕ ರಕ್ಷಣೆಯು ದೊರೆಯುತ್ತದೆ. ನದಿಯ ಹೆಚ್ಚಿನ ನೀರು ಹಳ್ಳಕ್ಕೆ ಬಂದು ಸೇರುವುದರಿಂದ ಹಳ್ಳದಲ್ಲಿ ನೀರು ಸದಾ ತುಂಬಿರುತ್ತದೆ. ಹೆಚ್ಚಿನ ನೀರು ಕೋಟೆ ಗೋಡೆಯ ಸುತ್ತ ಹರಿಯುವದರಿಂದ, ಹೆಚ್ಚಿನ ಭಾಗಕ್ಕೆ ರಕ್ಷಣೆಯನ್ನು ದೊರೆಯುತ್ತದೆ. ಆದ್ದರಿಂದ ಇದು ಒಂದು ಜಲದುರ್ಗದಂತೆ ಕಂಡು ಬರುತ್ತದೆ. ನದಿ ಮತ್ತು ಹಳ್ಳದ ಭಾಗವನ್ನು ಹೊರತು ಪಡಿಸಿ, ಕಂದಕವು ೨೦ ಮೀಟರ ಅಗಲ ೭.೫ ಮಿ. ಆಳವಾಗಿದೆ. ನದಿಯ ತೀರದಲ್ಲಿ ಹೆಚ್ಚಿನ ಪ್ರದೇಶದವರೆಗೆ ನೀರು ನಿಲ್ಲುತ್ತದೆ. ಮಳಖೇಡ ಕೋಟೆಯು ಎರಡು ಸುತ್ತಿನ

ಗೋಡೆಯನ್ನು ಹೊಂದಿದ್ದು. ಹೊರಗೋಡೆಯು ವಿಶಾಲವಾದ ಪ್ರದೇಶವನ್ನು ಆವರಿಸಿಕೊಂಡಿದೆ. ಇದಕ್ಕೆ ನಿರ್ದಿಷ್ಟ ಆಕಾರವಿಲ್ಲ ಇದು ಒಳಗೋಡೆಗಿಂತಲು ಮೊದಲು ನಿರ್ಮಿಸಲಾಗಿದೆ. ಅವಶ್ಯವಿರುವ ಕಡೆಯಲ್ಲಿ ಭದ್ರವಾದ ಗೋಡೆಯನ್ನು ನಿರ್ಮಿಸಿ, ಉಳಿದ ಭಾಗಗಳಲ್ಲಿ ಒಂದೆ ಗೋಡೆಯು ಕಂಡು ಬರುತ್ತದೆ.

ಹೊರಗೋಡೆಗೆ ನಿರ್ಧಿಷ್ಟ ಆಕಾರವಿಲ್ಲ, ಈ ರೀತಿ ಮಳಖೇಡ ಕೋಟೆಯ ಬಗ್ಗೆ ವಿವರಣೆ ನೀಡಲಾಗಿದೆ. ಆದರೂ ಕೆಲವು ಹಂತದಲ್ಲಿ ವೃತ್ತಾಕಾರ ಹಾಗೂ ಆಯತಾಕಾರದಲ್ಲಿ ಕಂಡು ಬರುತ್ತದೆ. ವಾಯುವ್ಯ ಮತ್ತು ನೈರುತ್ಯ ಭಾಗ ಹಾಗೂ ಹಳ್ಳದಿಂದ ಆವೃತ್ತಿಯಾಗಿರುವ ಭಾಗವು ಆಯತಾಕಾರದಲ್ಲಿ ಕಂಡು ಬರುತ್ತದೆ. ಕೋಟೆಯು ಪೂರ್ವದಿಂದ ಪಶ್ಚಿಮಕ್ಕೆ ೫೫೦ ಮೀಟರ, ಉತ್ತರದಿಂದ ದಕ್ಷಿಣಕ್ಕೆ ೬೪೦ ಮಿಟರ ವಿಸ್ತಾರಗೊಂಡಿದೆ. ಹೊರ ಗೋಡೆಯ ಸುತ್ತಲು ೩೯ ಕೊತ್ತಳಗಳಿವೆ. ಇವುಗಳಲ್ಲಿ ಕೆಲವು ಕೊತ್ತಳಗಳು ಅವನತಿಯ ಹಂತದಲ್ಲಿವೆ. ಕಂದಕದ ಕಡೆಯಲ್ಲಿ ನೀರು ಹೊರ ಗೋಡೆಗೆ ಆವರಿಸಿಕೊಂಡಿದೆ. ಅದರಲ್ಲಿ ಪ್ರಾರಂಭದ ಹಂತದಲ್ಲಿ ಅಂದರೆ ೫x೩ ಮೀಟರ ಆಯತಾಕಾರದಲ್ಲಿ ಇದ್ದು ಮೇಲೆ ಹೋದಂತೆ ವೃತ್ತಾಕಾರದಲ್ಲಿ ಮುಂದುವರೆಯುತ್ತವೆ. ಇವುಗಳು ೩೦ ರಿಂದ ೪೦ ಅಡಿ ಎತ್ತರವಾಗಿವೆ. ಮೂರು ಮೀಟರ ದಪ್ಪವಾಗಿರುವ ಈ ಬುರುಜುಗಳು ಆರು ಮೀಟರ ಎತ್ತರವಾಗಿವೆ. ಇದರ ರಚನೆಗೆ ಸ್ಥಳಿಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ಬಳಸಲಾಗಿದೆ. ಕೇಂದ್ರ ಭಾಗದಲ್ಲಿ ಮಣ್ಣು ಮತ್ತು ಕಲ್ಲುಗಳನ್ನು ಹಾಕಿ ತುಂಬಲಾಗಿದೆ. ಆದರೆ ಎತ್ತರದ ಎಲ್ಲಾ ಬುರುಜುಗಳು ಶಿಥಿಲಗೊಂಡಿವೆ. ಕೋಟೆಯ ಮೇಲ್ಭಾಗವು ಸಹ ಶಿಥಿಲಗೊಂಡಿರುವುದರಿಂದ ಇವುಗಳ ವಾಸ್ತು ಶೈಲಿಯನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ.

ಪಶ್ಚಿಮ ಭಾಗದ ಕೋಟೆ ಗೋಡೆಯು ಕಾಗಿಣೆ ನದಿಯ ತಳಭಾಗದಿಂದ ನಿರ್ಮಿಸಲಾಗಿದೆ. ಈ ಭಾಗದ ಕೊತ್ತಳಗಳು ಭದ್ರವಾಗಿದ್ದೂ ಎತ್ತರವಾದ ಗೋಡೆಯನ್ನು ಹೊಂದಿದೆ. ಏಕೆಂದರೆ ನದಿಯ ನೀರು ನೇರವಾಗಿ ಬಂದು ಕೋಟೆಗೆ ಅಪ್ಪಳಿಸುವುದರಿಂದ ಈ ಭಾಗದಲ್ಲಿ ಗೋಡೆಯ ಹೊರಭಾಗದಲ್ಲಿ ಭದ್ರವಾದ ಹಾಗೂ ನೇರವಾದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ನದಿಯ ನೀರು ಎಷ್ಟೇ ಒತ್ತಡದಿಂದ ಅಪ್ಪಳಿಸಿ ಬಂದರು ಹೊರ ಗೋಡೆಗೆ ಯಾವುದೆ ತೊಂದರೆಯಾಗಬಾರದೆಂದು ಭದ್ರವಾದ ಕೋಟೆಯ ತಳಪಾಯ ಹಾಗೂ ಎತ್ತರವಾದ ಕಾವಲುಗೋಪುರಗಳನ್ನು ರಚಿಸಲಾಗಿದೆ. ಇವುಗಳು ವಿವಿಧ ಕಾಲದಲ್ಲಿ ರಚನೆಗೊಂಡಿರುವಂತೆ ಕಂಡು ಬರುತ್ತದೆ. ಹೊರ ಕೋಟೆಯ ನಿರ್ಮಾಣಕ್ಕೆ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಲಾಗಿದೆ. ಉತ್ತರ ಮತ್ತು ಪೂರ್ವ ದಿಕ್ಕಿನಲ್ಲಿರುವ ಕೋಟೆಯ ಬಹುಭಾಗ ಶಿಥಿಲಗೊಂಡಿದ್ದು ಅದರ ಕಲ್ಲುಗಳಿಂದ ಸುತ್ತಲಿನ ಜನರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಹೊರಕೋಟೆಯ ಈಶಾನ್ಯ ಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿರುವ ಪ್ರವೇಶದ್ವಾರವಿದೆ. ಇದರ ಎರಡು ಬದಿಯಲ್ಲಿ ಎರಡು ವೃತ್ತಾಕಾರದ ಕೊತ್ತಳಗಳಿವೆ. ಸುಮಾರು ೨೦ ಅಡಿ ಎತ್ತರವಾಗಿದ್ದೂ

ಅದರ ಮೇಲೆ ಸುತ್ತಲು ೬ ಅಡಿಯ ಗೋಡೆಯನ್ನು ನಿರ್ಮಿಸಲಾಗಿದೆ. ಕೊತ್ತಳದ ಒಂದು ಬದಿಯಲ್ಲಿ ಸುಮಾರು ೧೫೦ ಮೀಟರ ಉದ್ದನೆಯ ಗೋಡೆಯಿದೆ ಇದು ಕೋಟೆಯ ಹೊರಗೋಡೆಗೆ ಅಂಟಿಕೊಂಡಿದೆ. ಇಲ್ಲಿ ದ್ವಾರಪಾಲಕರಿಗೆ ರಕ್ಷಣಾ ಸ್ಥಳಗಳಿವೆ. ಇಲ್ಲಿಂದ ಕಾವಲುಗಾರರು ನೇರವಾಗಿ ಕೊತ್ತಳದ ಮೇಲ್ಭಾಗದಲ್ಲಿ ಬರಲು ಮಾರ್ಗವಿದೆ. ಮತ್ತೊಂದು ಬದಿಯಲ್ಲಿರುವ ಕೊತ್ತಳಕ್ಕೆ ಕೋಟೆಯ ಗೋಡೆಯಿಂದ ಮಾರ್ಗವಿದೆ. ಇಲ್ಲಿಂದ ಸುಮಾರು ೫೦ ಮೀಟರ ಅಂತರದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಮೊದಲನೆಯ ಪ್ರವೇಶದ್ವಾರವಿದೆ. ಇದರ ಎರಡು ಬದಿಯಲ್ಲಿ ಹೊರಭಾಗಕ್ಕೆ ಚಾಚಿಕೊಂಡಿರುವ ವೃತ್ತಾಕಾರದ ಕೊತ್ತಳಗಳಿವೆ. ಪ್ರಸ್ತುತ ಇವುಗಳು ಕೇವಲ ೧೫ ಅಡಿಯವರೆಗೆ ಮಾತ್ರ ಉಳಿದಿದ್ದು ಅದರ ಮೇಲ್ಭಾಗವು ಶಿಥಿಲಗೊಂಡಿದೆ. ಈ ದ್ವಾರವು ೧೦ ಅಡಿ ಅಗಲ ೧೫ ಅಡಿ ಎತ್ತರದ ಕಮಾನಿನ ಆಕಾರದಲಲಿದೆ. ಮೇಲ್ಭಾಗದಲ್ಲಿ ವೀಕ್ಷಣಾಲಯವಿದೆ. ೧೦ ಅಡಿ ಅಗಲ ೫ ಅಡಿ ಎತ್ತರವಾಗಿರುವ ಈ ಸ್ಥಳದಲ್ಲಿ ಕಾವಲುಗಾರರು ಕುಳಿತು ದ್ವಾರದ ಮುಂಭಾಗವನ್ನು ವೀಕ್ಷಿಸುತ್ತಿದ್ದರು. ಇದರ ಒಳಭಾಗದಿಂದ ಸೈನಿಕರಿಗೆ ಮೇಲೆ ಹತ್ತಲು ಮೆಟ್ಟಲುಗಳಿವೆ. ಇಲ್ಲಿಂದ ಕಾವಲುಗಾರರು ಕೋಟೆಯ ಯಾವುದೆ ಸ್ಥಳಕ್ಕೆ ಹೋಗಬಹುದು. ದ್ವಾರದ ಮುಂಭಾಗದಲ್ಲಿ ಎರಡು ಬದಿಯಲ್ಲಿ ಶಿಥಿಲಗೊಂಡ ಕಟ್ಟಡಗಳಿವೆ. ಇವುಗಳು ದ್ವಾರಪಾಲಕರಿಗಾಗಿ ನಿರ್ಮಿಸಿರುವ ಸೈನಿಕರ ವಸತಿ ನಿಲಯಗಳಾಗಿರಬಹುದಾಗಿದೆ[೧೬]. ಏಕೆಂದರೆ ಪ್ರತಿಯೊಂದು ದ್ವಾರದ ಮುಂಭಾಗದಲ್ಲಿ ಸೈನಿಕರಿಗಾಗಿ ಇಂತಹ ಸ್ಥಳಗಳಿರುತ್ತವೆ.

ದ್ವಾರದ ಒಂದು ಬದಿಯಲ್ಲಿ ೪ ಅಡಿ ಅಗಲ ೬ ಅಡಿ ಎತ್ತರದ ಗುಪ್ತದ್ವಾರವಿದೆ. ಇಲ್ಲಿಂದ ಕಾವಲುಗಾರರು ಕೋಟೆಯ ಒಳಗಡೆ ಪ್ರವೇಶಿಸಬಹುದು. ಇದರ ಒಳಭಾಗದಲ್ಲಿ ಎರಡು ಬದಿಯಲ್ಲಿ ೨೦ ಅಡಿಯವರೆಗೆ ಸೈನಿಕರ ವಸತಿ ನಿಲಯಗಳಿವೆ. ದ್ವಾರಕ್ಕೆ ಎರಡು ಬದಿಯಲ್ಲಿ ಭದ್ರವಾದ ಕಾವಲು ಅವಶ್ಯವಾಗಿರುವುದರಿಂದ ಇವುಗಳನ್ನು ನಿರ್ಮಿಸಲಾಗಿದೆ. ಇಲ್ಲಿಂದ ೫೦ ಮೀಟರ ಅಂತರದಲ್ಲಿ ಮೂರನೆಯ ಪ್ರವೇಶ ದ್ವಾರವಿದೆ. ಈ ಮಾರ್ಗದಲ್ಲಿ ಎರಡು ಬದಿಯಲ್ಲಿ ಕಾವಲುಗಾರರ ವಸತಿ ನಿಲಯಗಳಿವೆ. ದ್ವಾರದ ಒಂದು ಬದಿಯಲ್ಲಿ ಕೋಟೆಯ ಗೋಡೆ ಮುಂದುವರೆಯುತ್ತದೆ. ಈ ಗೋಡೆಯು ಸುಮಾರು ೩೦ ಅಡಿ ಎತ್ತರವಾಗಿದೆ. ದ್ವಾರದ ಮತ್ತೊಂದು ಬದಿಯಲ್ಲಿ ಷಡ್ ಕೋನಾಕೃತಿಯ (೬ ಕೋನ) ಕೊತ್ತಳವಿದೆ. ೨೦ ಅಡಿ ಎತ್ತರವಾಗಿರುವ ಇದರ ಮೇಲ್ಭಾಗದಲ್ಲಿ ನಾಲ್ಕು ಅಡಿಯ ಕಾವಲು ಸ್ಥಳಗಳಿವೆ. ಈ ದ್ವಾರವು ೧೨ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಅತ್ಯಂತ ಸರಳವಾಗಿರುವ ಇದಕ್ಕೆ ಬಾಗಿಲುಗಳ ವ್ಯವಸ್ಥೆ ಇರುವುದಿಲ್ಲ. ಇದರ ಒಳಭಾಗದಲ್ಲಿ ಸುಮಾರು ೧೦೦ ಅಡಿಯವರೆಗೆ ಶಿಥಿಲಗೊಂಡ ಕಟ್ಟಡಗಳಿವೆ. ಅವುಗಳನ್ನು ಕೆಲವು ಕಮಾನಿನ ಆಕಾರ ಹಾಗೂ ಚೌಕಾಕಾರದಲ್ಲಿವೆ. ಈ ಎಲ್ಲಾ ಕಟ್ಟಡಗಳು ಸೈನಿಕರ ವಸತಿ ನಿಲಯಗಳಾಗಿವೆ.

ಇದು ಕೋಟೆಯ ಒಳಭಾಗವಾದ್ದರಿಂದ ಹೆಚ್ಚಿನ ಸಂಖ್ಯೆಯ ಸೈನಿಕರಿಗೆ ಇಲ್ಲಿ ಸ್ಥಳಾವಕಾಶವನ್ನು ನಿರ್ಮಿಸಲಾಗಿದೆ. ಇದರ ಕೊನೆಯ ಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇಲ್ಲಿಂದ ಕೋಟೆಯ ಮೊದಲನೆಯ ದ್ವಾರದ ಮುಂಭಾಗದಲ್ಲಿರುವ ಕೊತ್ತಳದ ಕಡೆಗೆ ಅಥವಾ ಸೈನಿಕರ ರಕ್ಷಣಾ ಸ್ಥಳಗಳಿಗೆ ಹೋಗುವಂತೆ ವಿಶೇಷ ಮಾರ್ಗಗಳನ್ನು ಕಲ್ಪಿಸಿಕೊಡಲಾಗಿದೆ. ಈ ದ್ವಾರದ ಒಳಭಾಗದಲ್ಲಿ ಕೋಟೆಯ ವಿಶಾಲವಾದ ಪ್ರದೇಶವಿದೆ. ಅದರ ಮಧ್ಯದಲ್ಲಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳಿವೆ. ಹೆಚ್ಚಿನ ಕಟ್ಟಡಗಳು ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಅದರಲ್ಲಿ ಕಾವಲುಗೋಪುರಗಳು, ಜಾಮಿ ಮಸೀದಿ, ಸೈನಿಕರ ವಸತಿ ನಿಲಯಗಳು ಮಾತ್ರ ಉಳಿದುಕೊಂಡಿವೆ. ಮಳಖೇಡ ಕೋಟೆಯ ಪ್ರವೇಶಕ್ಕೆ ಒಟ್ಟು ೩ ದ್ವಾರಗಳಿವೆ. ಇವುಗಳ ಮೂಲಕ ಒಳಗಡೆ ಪ್ರವೇಶವಿದೆ. ಮೂರನೆಯ ದ್ವಾರವು ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ. ಈ ಎಲ್ಲಾ ದ್ವಾರಗಳ ನಿರ್ಮಾಣಕ್ಕೆ ಸ್ಥಳೀಯವಾಗಿ ಲಭ್ಯವಾಗುವ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ.

ಒಳಕೋಟೆ ಗೋಡೆಯು ಚಿಕ್ಕ ಚಿಕ್ಕ ಕಲ್ಲುಗಳಿಂದ ನಿರ್ಮಿಸಲಾಗಿದೆ. ಒಂದು ಗೋಡೆ ಮತ್ತೊಂದು ಗೋಡೆಯನ್ನು ಸೇರುವಲ್ಲಿ ವೃತ್ತಾಕಾರ, ಚೌಕಾಕೃತಿ ಹಾಗೂ ಕೋನಾಕಾರದಲ್ಲಿ ಗೋಡೆಯನ್ನು ರಚಿಸಲಾಗಿದೆ. ಒಳಕೋಟೆಯ ರಚನೆಯ ಒಟ್ಟು ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ ೩೩೦ ಮೀಟರ ಹಾಗೂ ಉತ್ತರದಿಂದ ದಕ್ಷಿಣಕ್ಕೆ ೪೪೦ ಮೀಟರವಾಗಿದೆ. ಈ ಸ್ಥಳವನ್ನು ಒಳಗೋಡೆಯಿಂದ ಸಂಪೂರ್ಣವಾಗಿ ರಕ್ಷಿಸಲಾಗಿದೆ. ಇದರ ರಚನೆಯನ್ನು ನೋಡಿದರೆ ಕೋಟೆಯ ಒಳಗಡೆ ಮತ್ತೊಂದು ಕೋಟೆಯಂತೆ ಕಂಡು ಬರುತ್ತದೆ. ಇದರ ಗೋಡೆಯು ಸಹ ಹೊರಗೋಡೆಯಂತೆ ಮೂರು ಮೀಟರ ದಪ್ಪವಾಗಿವೆ. ರಾಷ್ಟ್ರಕೂಟರ ಕಾಲಕ್ಕೆ ಚೋಳರೊಂದಿಗಿನ ಮೊದಲನೆಯ ಯುದ್ಧದಲ್ಲಿ ಈ ಕೋಟೆಯ ಶಿಥಿಲಗೊಂಡಿತು. ಆದ್ದರಿಂದ ಚೋಳರು ವಿಜಯಶಾಲಿಗಳಾದರು. ಈ ಯುದ್ಧದ ವಿವರಣೆಯು ಚೋಳ ಶಾಸನಗಳಿಂದ ಲಭ್ಯವಾಗಿದೆ.೮

ಗುಲಬರ್ಗಾದ ಬಹಮನಿಯ ಸುಲ್ತಾನ ಮಹಮ್ಮದಶಾಹ I (೧೩೫೮-೧೩೭೫) ಈ ಕೋಟೆಯನ್ನು ವಶಪಡಿಸಿಕೊಂಡು, ಕೋಟೆಯನ್ನು ತಮ್ಮ ಅನುಕೂಲತೆಗೆ ತಕ್ಕಂತೆ ಪುನರ್‌ರಚನೆ ಮಾಡಿದ, ಕೋಟೆಯ ಒಳಭಾಗದಲ್ಲಿ ಜಾಮಿ ಮಸೀದಿ, ಕಾಲಿಮಸೀದಿ ಮತ್ತು ಉಪಲಿಬುರ್ಜಗಳನ್ನು ನಿರ್ಮಿಸಿದ. ಕೇಂದ್ರ ಭಾಗದಲ್ಲಿ ಕಾವಲುಗೋಪುರವನ್ನು ನಿರ್ಮಿಸಿ, ಅದರ ಮೇಲೆ ತೋಪಿನ ನಿರ್ಮಾಣಕ್ಕಾಗಿ ತೋಪು ಕಟ್ಟೆಯನ್ನು ರಚಿಸಲಾಗಿದೆ. ಇದರ ಮೇಲೆ ೮ ಅಡಿ ಉದ್ದನೆಯ ತೋಪು ನಿಲ್ಲಿಸಲಾಗಿದೆ. ಆದರೆ ಪ್ರಸ್ತುತ ಈ ತೋಪು ಕಾವಲುಗೋಪುರದ ಕೆಳಭಾಗದಲ್ಲಿ ಶಿಥಿಲಗೊಂಡು ಬಿದ್ದಿದೆ. ಈ ಕೋಟೆಯ ಮೇಲ್ವಿಚಾರಕನು ಹೊರಭಾಗದ ಗೋಡೆಯನ್ನು ದುರಸ್ತಿಗೊಳಿಸಿ ಶಿಥಿಲಗೊಂಡ ಬುರುಜುಗಳನ್ನು ಬೇರೆ ಶೈಲಿಯಲ್ಲಿ ಪುನರ್ ನಿರ್ಮಿಸಿದ ಉದಾಹರಣೆಗೆ ಪಶ್ಚಿಮ ಭಾಗದಲ್ಲಿರುವ ಕೊತ್ತಳವು ಕೆಳಹಂತದಲ್ಲಿ

[illegible]

ಚೌಕಾಕಾರದಲ್ಲಿದ್ದೂ ಮೇಲೆ ಹೋದಂತೆ ವೃತ್ತಾಕಾರದಲ್ಲಿವೆ. ಇದರಲ್ಲಿ ಬಹಮನಿಯ ಪ್ರಭಾವವನ್ನು ಕಾಣಬಹುದು. ಬಹಮನಿಯರ ಕಾಲದಲ್ಲಿ ನಿರ್ಮಾಣಗೊಂಡ ಎಲ್ಲಾ ಬುರುಜುಗಳು ಹಾಗೂ ಕೊತ್ತಳಗಳು ವೃತ್ತಾಕಾರದಲ್ಲಿವೆ. ಕೋಟೆಯ ಮೇಲ್ಭಾಗದ ಮೂಲ ರಚನೆಯು ನಾಶವಾಗಿದ್ದೂ ಅದನ್ನು ಬಹಮನಿಯರ ಕಾಲಕ್ಕೆ ತಮ್ಮದೆಯಾದ ಶೈಲಿಯಲ್ಲಿ ಪುನರ್ ನಿರ್ಮಿಸಿದರು[೧೭].

ಮಳಖೇಡ ಕೋಟೆಯಲ್ಲಿ ಎರಡು ಕಾವಲುಗೋಪುರಗಳಿವೆ. ಒಂದು ಪೂರ್ವ ಭಾಗದಲ್ಲಿದ್ದರೆ ಮತ್ತೊಂದು ಪಶ್ಚಿಮ ಭಾಗದಲ್ಲಿವೆ. ಮೊದಲನೆಯ ಕಾವಲುಗೋಪುರವು ಕೋಟೆಯ ರಚನೆ ಕಾಲಕ್ಕೆ ರಚನೆಗೊಂಡಿದ್ದು, ಇದು ಸುಮಾರು ೪೦ ಅಡಿ ಎತ್ತರವಾಗಿದೆ. ಕೆಳಹಂತದಲ್ಲಿ ವಿಶಾಲವಾಗಿದ್ದು ಮೇಲೆ ಹೋದಂತೆ ಚಿಕ್ಕದಾಗಿದೆ. ಇದರ ಸುತ್ತಲು ಮುಳ್ಳಿನ ಗಿಡಗಳು ಆವರಿಸಿಕೊಂಡಿದ್ದು, ಅದರ ಅರ್ಧ ಭಾಗ ಶಿಥಿಲಗೊಂಡಿರುವುದರಿಂದ ಮೇಲೆ ಹತ್ತಲು ಸಾಧ್ಯವಾಗಲಿಲ್ಲ. ಇದರ ಸುತ್ತಲು ಹಲವು ಶಿಥಿಲಗೊಂಡ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಈ ಎಲ್ಲಾ ಕಟ್ಟಡಗಳು ಸೈನಿಕರ ವಸತಿ ನಿಲಯಗಳಾಗಿರಬಹುದು, ಏಕೆಂದರೆ ಇದರಲ್ಲಿ ಯಾವುದು ದೊಡ್ಡ ಕಟ್ಟಡದ ಅವಶೇಷಗಳು ಕಂಡು ಬರುವುದಿಲ್ಲ. ಸಾಮಾನ್ಯವಾಗಿ ಸೈನಿಕರ ವಸತಿ ನಿಲಯಗಳು ಹಾಗೂ ಕಾವಲುಗೋಪುರಗಳು ಒಂದೆ ಕಡೆಯಲ್ಲಿ ಇರುವುದು ಕಂಡು ಬರುತ್ತವೆ.

ಪಶ್ಚಿಮ ಭಾಗದಲ್ಲಿರುವ ಕಾವಲುಗೋಪುರವು ಸುಸ್ಥಿತಿಯಲ್ಲಿದೆ. ಐದು ಅಡಿ ಎತ್ತರದ ವೇದಿಕೆಯ ಮೇಲೆ ಇದನ್ನು ನಿರ್ಮಿಸಲಾಗಿದೆ. ೩೦ ಅಡಿ ಎತ್ತರವಾಗಿರುವ ಈ ಗೋಪುರವನ್ನು ಮೂರು ಹಂತಗಳಲ್ಲಿ ವಿಭಾಗಿಸಲಾಗಿದೆ[೧೮]. ಮೊದಲನೆಯ ಹಂತದ ರಚನೆಗೆ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಲಾಗಿದೆ. ೧೫ ಅಡಿಯ ನಂತರ ಎರಡನೆಯ ಹಂತದ ರಚನೆ ಆರಂಭವಾಗುತ್ತದೆ. ಇದರ ನಿರ್ಮಾಣಕ್ಕೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಬಳಸಲಾಗಿದೆ. ಈ ಭಾಗದಲ್ಲಿ ಸುತ್ತಲು ಹಲವು ರಂದ್ರಗಳಿವೆ. ಕೊನೆಯ ಹಂತದ ರಚನೆಯಲ್ಲಿ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಆದರೆ ಪ್ರಸ್ತುತ ಮೇಲ್ಭಾಗದ ರಚನೆಯು ಶಿಥಿಲಗೊಂಡಿದೆ. ಇದರ ಮೇಲೆ ಹತ್ತಲು ಪೂರ್ವ ದಿಕ್ಕಿನಲ್ಲಿ ಒಂದು ಚಿಕ್ಕದ್ವಾರವಿದೆ. ಕಲ್ಲಿನಲ್ಲಿ ರಚಿಸಿರುವ ದ್ವಾರದ ಕಂಬಗಳು ದೇವಾಲಯದ ಪ್ರವೇಶ ದ್ವಾರದಂತೆ ಕಾಣುತ್ತವೆ. ಇಲ್ಲಿಂದ ಒಳಗಡೆ ೨೫ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ೩ ಅಡಿ ಎತ್ತರದಲ್ಲಿ ವೃತ್ತಾಕಾರದ ತೋಪಿನ ಕಟ್ಟೆ ಇದೆ. ಗುಲಬರ್ಗಾ ಕೋಟೆಯ ಕಾವಲುಗೋಪುರಗಳ ಮೇಲ್ಭಾಗದಲ್ಲಿರುವ ತೋಪಿನ ರಚನೆಯನ್ನು ಇದು ಹೋಲುತ್ತದೆ.

ಕಾವಲುಗೋಪುರದ ಪಶ್ಚಿಮ ಭಾಗದಲ್ಲಿ ಕಾಲಿ ಮಸೀದಿಯಿದೆ. ಅದರ ಮುಂಭಾಗದಲ್ಲಿ ಹಲವು ಬಗೆಯ ಕಟ್ಟಡಗಳ ಅವಶೇಷಗಳಿವೆ. ಅದರಲ್ಲಿ ಒಂದು ತುಪ್ಪದ ಕೊಳವನ್ನು ಹೋಲುವಂತಹ ರಚನೆಯಿದೆ. ನೆಲದಲ್ಲಿ ರಚಿಸಿರುವ ಈ ಕೊಳವು ಸಂಪೂರ್ಣವಾಗಿ ಮುಚ್ಚಿ ಹೋಗಿದೆ. ಕಾಲಿ ಮಸೀದಿಯ ಪ್ರವೇಶ ದ್ವಾರವು ಅತ್ಯಂತ ಸರಳವಾಗಿದೆ. ಒಳಭಾಗದ ಕಟ್ಟಡವು ಮೂರು ಅಂಕಣಗಳಿಂದ

ಕೂಡಿದೆ. ಹಿಂದೂ-ಮುಸ್ಲಿಂ ಶೈಲಿಯಲ್ಲಿ ಈ ಮಸೀದಿಯ ಮೇಲ್ಭಾಗವು ಗುಮ್ಮಟದ ಆಕಾರದಲ್ಲಿದೆ. ಕೋಟೆಯನ್ನು ಬಹಮನಿಯ ಅರಸರು ವಶಪಡಿಸಿಕೊಂಡ ನಂತರ ಇಲ್ಲಿ ಮಸೀದಿಯನ್ನು ನಿರ್ಮಿಸಿದರು. ದ್ವಾರಗಳು, ಕಾವಲುಗೋಪುರ ಸೈನಿಕರ ವಸತಿ ನಿಲಯಗಳು ಹಾಗೂ ಮಸೀದಿಯನ್ನು ಹೊರತು ಪಡಿಸಿ ಕೋಟೆಯ ಒಳಗಡೆ ಇರುವ ಎಲ್ಲಾ ಕಟ್ಟಡಗಳು ಶಿಥಿಲಗೊಂಡಿವೆ.

೪. ಅಲ್ಲೂರು (ಬಿ) ಕೋಟೆ:

ಚಿತ್ತಾಪೂರದಿಂದ ಆಗ್ನೇಯ ಭಾಗಕ್ಕೆ ೨೫ ಕೀ.ಮಿ. ಹಾಗೂ ಸೇಡಂ ನಿಂದ ೪೦ ಕೀ. ಮಿ ದೂರದಲ್ಲಿರುವ ಅಲ್ಲೂರು ಪ್ರಾಚೀನ ಕಾಲದ ಪ್ರಮುಖ ಗ್ರಾಮವಾಗಿದೆ. ಮುನ್ನೂರು ಹಳ್ಳಿಗಳ ಆಡಳಿತ ಘಟಕವಾಗಿರುವುದರಿಂದ ಇದನ್ನು ಶಾಸನಗಳಲ್ಲಿ ಅರಲು ೩೦೦ ಅರಲೂರು ೩೦೦ ಎಂದು ಕರೆಯಲಾಗದೆ[೧೯]. ಕಲ್ಯಾಣಿ ಚಾಲುಕ್ಯರು ಹಲವರನ್ನು ತಮ್ಮ ಸಾಮಂತರನ್ನು, ಮಾಂಡಲಿಕರನ್ನು ಮಾಡಿಕೊಂಡು ಅಧಿಕಾರ ನಡೆಸಿದರು. ಹೈಹಯರು ೩೦೦ ಗ್ರಾಮಗಳ ಅಧಿಪತಿಗಳಾದ ಅದರ ಕೇಂದ್ರ ಸ್ಥಳ ಅಲ್ಲೂರು (ಬಿ) ಯಾಗಿತ್ತು[೨೦]. ಆದ್ದರಿಂದ ಇಲ್ಲಿ ಅವರು ರಾಜ್ಯವನ್ನು ಕಟ್ಟಿಕೊಂಡು ಸುಮಾರು ೧೫೦ ವರ್ಷಗಳಕಾಲ (ಕ್ರಿ.ಶ. ೧೨೧೨ ರವೆರೆಗೆ) ಆಳ್ವಿಕೆ ಮಾಡಿದರು[೨೧]. ಇವರ ಕಾಲದಲ್ಲಿ ಅಲ್ಲೂರು ಅಡಕಿ ಹಂದರಕಿ ಹಲಕಟ್ಟಾ ಇಂಗಳಗಿ ಮುಂತಾದ ಕಡೆಗಳಲ್ಲಿ ರಕ್ಷಣಾ ಕಟ್ಟಡಗಳನ್ನು ನಿರ್ಮಿಸಿದರು. ಅದರಲ್ಲಿ ವಿಶೇಷವಾಗಿ ಅಲ್ಲೂರು (ಬಿ) ರಾಜ್ಯಧಾನಿಯಲ್ಲಿ ಮೂರು ಹಂತದ ಕೋಟೆಯನ್ನು ನಿರ್ಮಿಸಿದರು. ಸೇಡಮ್ ಕೋಟೆಯ ಕೆಲವು ಭಾಗಗಳನ್ನು ಇವರ ಕಾಲದಲ್ಲಿ ಪುನರ್ ನಿರ್ಮಿಸಲಾಗಿದೆ.

ಹಂಬರಕಿಯಿಂದ ೨೫ ಕೀ.ಮಿ. ದೂರದಲ್ಲಿದ್ದು ಚಿತ್ತಾಪೂರ ಮಾರ್ಗದ ಕೇಂದ್ರದಲ್ಲಿರುವ ಅಲ್ಲೂರ (ಕೆ)ಯಿಂದ ಒಂದು ಕಿ.ಮ ಒಳಗಡೆ ಬೆಟ್ಟದ ಮೇಲೆ ಕಲ್ಲು ಬಂಡೆಗಳ ಮಧ್ಯದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಗ್ರಾಮದ ಪ್ರವೇಶದ ಪೂರ್ವದಲ್ಲಿ ಒಂದು ಕೆರೆ ಇದೆ. ಇದು ಬೆಟ್ಟವನ್ನು ಎರಡು ದಿಕ್ಕಿನಲ್ಲಿ ಸುತ್ತುವರೆದಿರುತ್ತಾರೆ. ಬೆಟ್ಟದ ಕೋಟೆಗೆ ಕಂದಕವಾಗಿ ರಕ್ಷಣೆಯನ್ನು ನೀಡುತ್ತದೆ. ಕೋಟೆಯ ಪೂರ್ವಭಾಗದಲ್ಲಿ ಮೂರು ಪ್ರವೇಶ ದ್ವಾರಗಳಿವೆ. ಕೇಂದ್ರದ ದ್ವಾರವು ಪ್ರಮುಖ ದ್ವಾರವಾಗಿದ್ದು ೧೫ ಅಡಿ ಅಗಲ ೨೫ ಅಡಿ ಎತ್ತರವಾಗಿದೆ. ಚೌಕಾಕಾರದ ಈ ದ್ವಾರವನ್ನು ಅಗಸಿ ಎಂದು ಕರೆಯುತ್ತಾರೆ. ಇದರ ಮುಂಭಾಗದಲ್ಲಿ ಇರುವ ತಗ್ಗಾದ ಪ್ರದೇಶಕ್ಕೆ ಮೊದಲು ಮೆಟ್ಟಿಲುಗಳಿರಬಹುದು. ಆದರೆ ಪ್ರಸ್ತುತ ಈ ಮೂರು ಪ್ರವೇಶ ದ್ವಾರದ ಮುಂಭಾಗದಲ್ಲಿ ಸಿಮೆಂಟ ರಸ್ತೆ ನಿರ್ಮಿಸಲಾಗಿದೆ. ಇದರಿಂದ ದ್ವಾರದ ಮುಂಭಾಗದಲ್ಲಿ ಇರುವ ರಕ್ಷಣಾ ವ್ಯವಸ್ಥೆಯ ಬಗ್ಗೆ ಮಾಹಿತಿ ಕಂಡು ಬರುವುದಿಲ್ಲ. ಕೋಟೆಗೋಡೆಯು ಬೆಟ್ಟದ ಆಕಾರದಂತೆ ವೃತ್ತಾಕಾರದಲ್ಲಿ ರಚಿಸಲಾಗಿದೆ. ಕೋಟೆಗೋಡೆಯು ಮಧ್ಯದಲ್ಲಿ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಕೊತ್ತಳಗಳ ರಚನೆಗೆ ಕೆಂಪುವರ್ಣದ ಬಂಡೆಗಲ್ಲುಗಳನ್ನು ಉಪಯೋಗಿಸಲಾಗಿದೆ. ಪ್ರಸ್ತುತ

[illegible]

ದ್ವಾರವು ೧೦ ರಿಂದ ೧೫ ಅಡಿ ಎತ್ತರದ ವರೆಗೆ ಮಾತ್ರ ಉಳಿದು ಕೊಂಡಿದ್ದು ಮೇಲಿನ ಭಾಗನಾಶ ಹೊಂದಿದೆ. ಇದರ ಸದು ಪ್ರಮಾಣದಲ್ಲಿ ಕೋಟೆಗೋಡೆ ಉಳಿದುಕೊಂಡಿದೆ.

ಗ್ರಾಮದ ಉತ್ತರಭಾಗವು ರಕ್ಷಣಾಗೋಡೆಯಿಂದ ಆವೃತ್ತಿಯಾಗಿರುವ ಮತ್ತೊಂದು ರಕ್ಷಣಾ ಸ್ಥಳವಿದೆ. ಇದರ ಪ್ರವೇಶ ದ್ವಾರವು ವಾಯುವ್ಯ ದಿಕ್ಕಿಗೆ ಮುಖಮಾಡಿದ್ದೂ ಎರಡೂ ವೃತ್ತಾಕಾರದ ಕೊತ್ತಳದ ಮಧ್ಯದಲ್ಲಿ ಇನ್ನು ನಿರ್ಮಿಸಲಾಗಿದೆ. ಈ ದ್ವಾರದ ಮುಂಭಾಗದ ಗೋಡೆಯಲ್ಲಿ ನವಿಲು, ಸಾರಂಗ, ದ್ವಾರಪಾಲಕರ ಶಿಲ್ಪಗಳಿರುವ ಕಲ್ಲುಗಳನ್ನು ಬಳಸಲಾಗದೆ. ಇಡೀ ಕೋಟೆಯ ದ್ವಾರಗಳಲ್ಲಿಯೇ ಇದು ಅತ್ಯಂತ ದೊಡ್ಡ ಮತ್ತು ವಿಶಾಲವಾದ ಪ್ರವೇಶ ದ್ವಾರವಾಗಿದೆ. ಈ ಕೋಟೆಯ ಒಳಭಾಗದಲ್ಲಿ ಗೋಡೆಗೆ ಅಂಟಿ ಕೊಂಡಿರುವಂತೆ ಮೂರು ಕಣಜಗಳಿವೆ. ಕಾವಲುಗೋಪುರದಂತೆ ಕಂಡು ಬರುವ ಈ ಕಟ್ಟಡಗಳು ಒಳಭಾಗದಲ್ಲಿ ಟೊಳ್ಳಾಗಿರುವುದರಿಂದ ಇವುಗಳನ್ನು ಕಣಜಗಳು ಎಂದು ಪರಿಗಣಿಸಲಾಗಿದೆ. ೧೦ ಅಡಿ ಎತ್ತರವಾಗಿರುವ ಈ ಕಟ್ಟೆಗಳ ಅರ್ಧಭಾಗ ನಾಶಹೊಂದಿದೆ. ಉಳಿದ ಅರ್ಧಭಾಗದ ವೃತ್ತಾಕಾರದ ರಚನೆಯನ್ನು ಹೊಂದಿದೆ. ಒಂದು ವೇಳೆ ಕಾವಲುಗೋಪುರಗಳಾಗಿದ್ದರೆ ಅದರ ಒಳಭಾಗದಲ್ಲಿ ಕಲ್ಲು ಮಣ್ಣಿನಿಂದ ತುಂಬಿರಲಾಗುತ್ತಿತ್ತು. ಈ ಕಟ್ಟಡಗಳ ಹೆಚ್ಚಿನ ಭಾಗವು ನಾಶಹೊಂದಿರುವುದರಿಂದ ಇವುಗಳ ಕುರಿತು ನಿಖರವಾಗಿ ಹೇಳುವುದು ಕಷ್ಟಕರವಾಗಿದೆ. ಶಹಪುರ ಮತ್ತು ಯಾದಗಿರ ಕೋಟೆಯ ಕಣಜಗಳಂತೆ ಇವುಗಳನ್ನು ನಿರ್ಮಿಸಲಾಗಿದೆ. ಪಶ್ಚಿಮ ದಿಕ್ಕಿನಲ್ಲಿ ಬೆಟ್ಟಕ್ಕೆ ಆವರಿಸಿಕೊಂಡು ಕೋಟೆಯ ಮೂರನೆಯ ಭಾಗವನ್ನು ದೊಡ್ಡ ಕೋಟೆ ಎಂದು ಕರೆಯುತ್ತಾರೆ. ಏಕೆಂದರೆ ಇದು ಹೆಚ್ಚಿನ ಪ್ರದೇಶವನ್ನು ವಶಪಡಿಸಿಕೊಂಡಿದೆ. ಈ ಭಾಗದಲ್ಲಿ ಎರಡು ದಿಡ್ಡಿಬಾಲುಗಳಿವೆ. ೧೦ ಅಡಿ ಎತ್ತರ ೪ ಅಡಿ ದಪ್ಪವಾಗಿರುವ ಕೋಟೆಯ ಗೋಡೆಯ ಮಧ್ಯದಲ್ಲಿ ೪ x ೬ ಅಡಿ ಉದ್ದಗಲದ ದಿಡ್ಡಿ ಬಾಗಿಲುಗಳಿವೆ. ಈ ಭಾಗದ ಒಂದು ದ್ವಾರವನ್ನು (ದಿಡ್ಡಿ ಬಾಗಿಲು) ಕಂಚಿನ ದ್ವಾರ ಎಂದು ಕರೆಯುತ್ತಾರೆ. ಇದರ ರಚನೆಗೆ ಬಳಸಿರುವ ಕಲ್ಲುಗಳು ಕಂಚಿನ ವರ್ಣದಲ್ಲಿ ಇರುವುದರಿಂದ ಇದಕ್ಕೆ ಈ ಹೆಸರು ಬಂದಿರಬಹುದಾಗಿದೆ. ದಿಡ್ಡಿಬಾಗಿಲಿನ ಎರಡು ಬದಿಯಲ್ಲಿ ಕಪ್ಪನೆಯ ನುಣುಪಾದ ಕಲ್ಲಿನ ತೋಳುಗಳಿವೆ. ಈ ದ್ವಾರವು ಪುನರರಚನೆಯ ಕಾಲಕ್ಕೆ ಇವುಗಳನ್ನು ಬಳಸಲಾಗಿದೆ. ಈ ಭಾಗದ ಕೋಟೆಗೋಡೆಯಲ್ಲಿ ಪ್ರತಿ ೫೦ ರಿಂದ ೭೫ ಅಡಿ ಅಂತರದಲ್ಲಿ ಒಂದೊಂದು ಬುರುಜುಗಳಿವೆ. ಇದರಲ್ಲಿ ಎರಡು ಬುರುಜುಗಳು ಚೌಕಾಕಾರವಾಗಿದ್ದು ಉಳಿದವುಗಳು ಕುದುರೆ ಲಾಳಾಕಾರ ಹಾಗೂ ವೃತ್ತಾಕಾರದಲ್ಲಿವೆ.

ಪಶ್ಚಿಮಭಾಗದ ಕೋಟೆಯ ಹೊರಭಾಗದಲ್ಲಿ ಎರಡು ಎತ್ತರವಾದ ಬೆಟ್ಟಗಳ ಮಧ್ಯದಲ್ಲಿ ಕಡಿದಾದ ಕಣಿವೆಗಳಿವೆ ಇದನ್ನು ಶಿದ್ದಿಕೆರೆ ಎಂದು ಕರೆಯುತ್ತಾರೆ. ಇದು ಕೋಟೆಗೆ ನೈಸರ್ಗಿಕ ಕಂದಕದಂತೆ ರಚನೆಗೊಂಡಿದೆ. ಅಲ್ಲದೆ ಕೋಟೆಯ ಒಳಭಾಗದಲ್ಲಿ ವಾಸಿಸುವ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ತಾಣವಾಗಿದೆ. ದೊಡ್ಡಕೋಟೆಯ ಒಳಭಾಗದಲ್ಲಿ ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಳಲ್ಲಿ

ದೇವಾಲಯಗಳು ಮಾತ್ರ ಉಳಿದು ಕೊಂಡಿವೆ. ಅವುಗಳಲ್ಲಿ ಪ್ರಮುಖವಾದುದು ಜೀನಾಲಯ, ಆಂಜನೇಯ ದೇವಾಲಯ ಹಾಗೂ ವೆಂಕಟರಾಮಾ ದೇವಸ್ಥಾನಗಳು ಪ್ರಸ್ತುತ ಈ ಗಿರಿ ದುರ್ಗದಲ್ಲಿ ಜನರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಲ್ಲಿಯ ಜನರು ಕೋಟೆಯ ಸುತ್ತಲಿನ ದ್ವಾರಗಳನ್ನು ಅಗಸೆ ಎಂದು ಕರೆಯುತ್ತಾರೆ. ಅವುಗಳು - ದೊಡ್ಡ ಅಗಸಿ, ಕಂಚಿನ ಅಗಸಿ, ಕಳ್ಳ ಅಗಸಿ, ದುರ್ಗಮ್ಮಾ ಅಗಸಿ ಎಂದು ಮುಂತಾದವುಗಳು ಕ್ರಿ.ಶ. ೧೧ನೇಯ ಶತಮಾನದಲ್ಲಿ ನಿರ್ಮಾಣ ಗೊಂಡ ಅಲ್ಲೂರ ಕೋಟೆಯು ಗುಲಬರ್ಗಾ ಜಿಲ್ಲೆಯ ಪ್ರಾಚೀನ ಕೋಟೆಗಳಲ್ಲಿ ಇದು ಒಂದಾಗಿದೆ. ಆದರೆ ಹೈಹಯರ ಮನೆತನದ ಮೇಲೆ ಇನ್ನು ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ. ಇದರಿಂದ ಹೆಚ್ಚಿನ ಮಾಹಿತಿ ಲಭ್ಯವಾಗುತ್ತವೆ.

೫. ಸೇಡಮ್ ಕೋಟೆ:

ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕು ಕೇಂದ್ರವಾಗಿದೆ. ಗುಲಬರ್ಗಾದಿಂದ ಪೂರ್ವಕ್ಕೆ ೫೦ ಕಿ.ಮೀ ದೂರದಲ್ಲಿರುವ ಈ ಪ್ರದೇಶ ಕಾಗಿಣಾ ಮತ್ತು ಕಮಲಾವತಿ ನದಿಗಳ ಮಧ್ಯದಲ್ಲಿರುವ ಈ ಗ್ರಾಮವು ಫಲವತ್ತಾದ ಭೂಮಿಯನ್ನು ಹೊಂದಿದೆ[೨೨]. ಪ್ರಾಚೀನ ಶಾಸನಗಳಲ್ಲಿ ಇದನ್ನು ಸೇಡಿಂಬ ಅಗ್ರಹಾರ ಸೇಡಿಂಪುರ ಎಂದು ಕರೆಯಲಾಗಿದೆ[೨೩]. ಹಿಂದೆ ಇದು ಅರಲು - ೩೦೦ ರ ಆಡಳಿತ ವಿಭಾಗಕ್ಕೆ ಒಳಪಟ್ಟಿತ್ತು. ಶಾತವಾಹನರ ಕಾಲದಿಂದ ಕುತುಬ್ ಶಾಹಿಗಳ ಕಾಲದವರೆಗೆ ಹಲವು ರಾಜಕೀಯ ಮನೆತನಗಳು ಈ ಪ್ರದೇಶವನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಆದ್ದರಿಂದ ಇಲ್ಲಿ ಹಲವು ಬಗೆಯ ರಕ್ಷಣಾ ಸಂಬಂಧಿ ಸ್ಮಾರಕಗಳು ಬೆಳೆದು ಬಂದಿದೆ. ಸಾಲೊಟಗಿಯ ಶಿಲಾಶಾಸನದಲ್ಲಿ ಸೇಡಮ್ ಭವ್ಯ ನಗರಗಳು ಸುಂದರವಾದ ಉದ್ಯಾನವನ ಹಾಗೂ ಭದ್ರವಾದ ಕೋಟೆಯನ್ನು ವರ್ಣಿಸಲಾಗಿದೆ. ಅದೆ ರೀತಿ ಆಡಕಿ ಮತ್ತು ಸೇಡಮ್ ಶಾಸನಗಳಲ್ಲಿ ಇಲ್ಲಿ ಹರಿಯುವ ಕಾಗಿಣನದಿ ಮತ್ತು ಕಮಲಾವತಿ ನದಿಗಳ ಉಲ್ಲೇಖಗಳಿವೆ. ಈ ನಾಡು ಧನಿಕರಿಂದ ಕೂಡಿದ್ದು, ಅಲ್ಲಿ ಭದ್ರವಾದ ಕೋಟೆಗಳನ್ನು ನಿರ್ಮಿಸಲಾಗಿತ್ತು ಎಂದು ಹೇಳಲಾಗಿದೆ[೨೪].

ಸೇಡಮ್ ಪಟ್ಟಣದ ರಕ್ಷಣೆಗಾಗಿ ಅಭ್ಯೇದ್ಯವಾದ ಕೋಟೆಯನ್ನು ನಿರ್ಮಿಸಲಾಗಿದೆ. ಅತ್ಯಂತ ದುರ್ಗಮಯವಾದ ಕೋಟೆಯ ನಿರ್ಮಾಣದ ಕುರಿತು ಸ್ಪಷ್ಟವಾದ ಮೂಲಾಧರಗಳಿಲ್ಲ. ಆದರೆ ಅಲ್ಲೂರದ ಹೈಹಯ ವಂಶಸ್ಥರು ಈ ಭಾಗದಲ್ಲಿ ಆಳ್ವಿಕೆ ಮಾಡಿರುವುದರಿಂದ ಅವರ ಸಾಮ್ರಾಜ್ಯ ವಿಸ್ತಾರಕ್ಕೆ ೩೦೦ ಗ್ರಾಮಗಳಿಗೆ ಒಳಗಾಗಿದ್ದವು. ಆದ್ದರಿಂದ ಅದನ್ನು ಅರಲು ಮೂನ್ನೂರು ಎಂದು ಕರೆಯುತ್ತಾರೆ. ಕ್ರಿ.ಶ.೧೧೦೬ ಒಂದು ಶಾಸನದಲ್ಲಿ ಸೇಡಮ್ ಕೋಟೆಯ ವರ್ಣನೆ ಈ ರೀತಿಯಾಗಿದೆ.

"ನರನಿಂದಗ್ಗದ ಕಾಂಡವಂನೆಗೆಲ್ದ ಲಂಕಾದ್ವೀಪ ಮುಂದೊಂದುವಾನರನಿಂದ ತ್ರೈಪ್ತರೋರ್ವನ ತಾಪಸನ ಕಿಂಚಿನ್ಮಾತ್ಮ ಕೋಪಾಗ್ನಿಯಂ ಪರಿಬೆಂಬೆತ್ತುವುದೇವ ನಿರ್ಮಿತಗಡಂ ತಾಮೆಂದು ನಿಚ್ಚಂ ನಿಕಾರಿಸುತಿರ್ಪುದು ಪೆಟೇತಾದೋದವಿಂ ಸೇಡಿಂಬದಾಡಂಬರಂ" ಸೇಡಮ್ ಕೋಟೆ ಗೋಡೆಯು

ಆಕಾಶದೆತ್ತರಕ್ಕೆ, ಅದರ ಕಂದಕವು ಪಾತಾಳದಾಳಕ್ಕೆ ಸಕಲದಿಕ್ಕುಗಳಲ್ಲಿ ಕಾಣುವ ಈ ಕೋಟೆ ವಿಶಾಲವಾದ ಪ್ರದೇಶಕ್ಕೆ ಸುತ್ತವರಿದುಕೊಂಡಿದೆ. ಇದನ್ನು ವಶಪಡಿಸಿಕೊಳ್ಳುವ ಶೂರರಿಗೆ ಮಸ್ತಕಶೂಲದಂತೆ ಇದೆ. ಸೇಡಿಂಬದ ವರ್ಣನೆ ಖಾಂಡವನಕ್ಕೂ, ತ್ರಿಪುರಕ್ಕೂ ಮಿಗಿಲಾಗಿದೆ. ಈ ದುರ್ಗದಲ್ಲಿ ೩೦೦ ಜನ ಸಕಲ ಸಂಪನ್ನರಾದ ಮಹಾಜನರಿದ್ದರು.

ಇವರು ಕಾಂಚಿಪುರದ ಅಭೇದ್ಯವಾದ ಕೋಟೆಯ ದ್ವಾರವನ್ನು ಯಂತ್ರ-ತಂತ್ರ-ಮಂತ್ರಗಳಿಂದ ಭೇದಿಸುವ ಸಾಮರ್ಥ್ಯವನ್ನು ಹೊಂದಿದ್ದರು. ಸಕಲ ಯುದ್ಧಕಲೆ ಪಾರಂಗತರಾದ ಇವರು ಹೇಮಕುಂಡಲ ಜ್ವಾಲಾಮಾಲಿನಿ ಆರಾಧಕರಾಗಿದ್ದರು. ವಜ್ರ ಪಂಜರ ಮತ್ತು ವೈರಿಗಳಿಗೆ ಭಯಂಕರರು ಇವರಾಗಿದ್ದಾರೆ ಎಂದು ಈ ಶಾಸನದಲ್ಲಿ ಹೇಳಲಾಗಿದೆ[೨೫].

ಕನ್ನಡ ನಾಡಿನ ಶ್ರೇಷ್ಠ ಸೇಡಮ್ ಕೋಟೆಯನ್ನು ರಾಮೋಜನ ಒಂದು ಶಾಸನದಲ್ಲಿ ಹೀಗೆ ವಿವರಿಸಿದ್ದಾರೆ.

ಅಂಬರಮಂ ಪಳಂಚಲೆಯ ತಿರ್ದ ಪುದಿಕ್ಕಿದ
ಕೋಟೆ ನಾಗಲೋಕಂಬರ ಮೆಯ್ದು
ಮುಚ್ಚಿದುದು ಗದ್ದಿಗರಿತ್ತದಿಶಾಧಿ ಶಾಸ್ತರಾ
ಳಂಬರ ಮೆಯ್ಕೆ ಪರ್ಬಿದುದು ತೇಜದ ಸಾಜದ
ಗುರ್ಚನಲ್ಕೆ ಸೇಡಿಂಬದೊಳೆತ್ತಿ
ಕಾದು ವದಜಂಗಿದು ಮಸ್ತಕಶೂಲಮಲ್ಲಮೇ[೨೬]

ಕನ್ನಡಿಗರು ಕಟ್ಟಿದ ಕೋಟೆಯ ಭದ್ರತೆ ಅದ್ಭುತ ಕಟ್ಟಡಗಳು ಹಾಗೂ ಇಲ್ಲಿಯ ಪರಿಸರದ ಕುರಿತು ಈ ಶಾಸನವು ವಿವರಿಸುತ್ತದೆ. ಕಮಲಾವತಿಯ ನದಿಯ ದಂಡೆಯ ಮೇಲಿನ ಪ್ರಶಾಂತಪರಿಸರದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಅಂದಿನ ಕಮಲಾವತಿ ನದಿಯು ಇಂದು ಸಂಪೂರ್ಣವಾಗಿ ಬತ್ತಿಹೋಗಿದೆ[೨೭].

ಪ್ರಸ್ತುತ ಸೇಡಂ ನಗರದಲ್ಲಿರುವ ಕೋಟೆಯ ಸಂಪೂರ್ಣವಾಗಿ ನಾಶ ಹೊಂದಿದ್ದು, ಅದರ ಎರಡು ದ್ವಾರಗಳು ಮತ್ತು ಅಲ್ಲಲ್ಲಿ ಕೋಟೆ ಗೋಡೆಯ ಅವಶೇಷಗಳು ಕಂಡು ಬರುತ್ತದೆ. ಕೋಟೆಯ ಪ್ರವೇಶ ದ್ವಾರಗಳನ್ನು ಗ್ರಾಮಸ್ಥರು ಅಗಸಿ ಎಂದು ಕರೆಯುತ್ತಾರೆ. ಉತ್ತರದ ದ್ವಾರವನ್ನು ದೊಡ್ಡ ಅಗಸಿ, ದಕ್ಷಿಣ ಭಾಗದಲ್ಲಿರುವ ದ್ವಾರವನ್ನು ಸಣ್ಣ ಅಗಸಿ ಎಂದು ಕರೆಯುತ್ತಾರೆ. ಕೋಟೆಯ ಮಾಹಾದ್ವಾರವು ೨೦ ಅಡಿ ಅಗಲ ೩೦ ಅಡಿ ಎತ್ತರದ ಕಮಾನಿನ ಆಕಾರದಲ್ಲಿರುವಂತೆ ಕಂಡುಬರುತ್ತದೆ. ಏಕೆಂದರೆ ದ್ವಾರದ ಎರಡು ಬದಿಗೆ ೧೫ ಅಡಿ ಎತ್ತರದ ಗೋಡೆ ಮಾತ್ರ ಉಳಿದಿದ್ದು, ಮೇಲ್ಭಾಗ ನಾಶಹೊಂದಿದೆ. ಇದರಿಂದ ದ್ವಾರದ ಬಗ್ಗೆ ಸ್ಪಷ್ಟವಾದ ಮಾಹತಿ ಕಂಡುಬರುವುದಿಲ್ಲ. ದ್ವಾರದ ಮುಂಭಾಗದ ಗೋಡೆಯ ಹೊರ ಚಾಚಿಕೊಂಡಿರುವುದರಿಂದ ಅದು ಕೊತ್ತಳದಂತೆ ಕಂಡುಬರುತ್ತದೆ. ಕಾವಲುಗಾರರು ಮೇಲಿನಿಂದ ದ್ವಾರಕ್ಕೆ

ರಕ್ಷಣೆಯನ್ನು ಒದಗಿಸುತ್ತಿದ್ದರು. ದ್ವಾರದ ಮುಂಭಾಗಕ್ಕೆ ೪೦ ಅಡಿ ಅಂತರದಲ್ಲಿ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಇದರಿಂದ ದ್ವಾರಕ್ಕೆ ಸಂಪೂರ್ಣವಾಗಿ ರಕ್ಷಣೆ ದೊರಕುತ್ತದೆ. ಸ್ಥಳೀಯವಾಗಿ ಲಭ್ಯವಾಗುವ ಬಿಳಿ ವರ್ಣದ ಸುಣ್ಣದ ಕಲ್ಲುಗಳನ್ನು ಬಳಸಿ ದ್ವಾರವನ್ನು ನಿರ್ಮಿಸಲಾಗಿದೆ.

ದ್ವಾರದಿಂದ ಪ್ರಾರಂಭವಾಗುವ ಕೋಟೆ ಗೋಡೆಯ ಹಳೆಯ ಸೇಡಮ್ ನಗರವನ್ನು ಅವರಿಸಿಕೊಂಡಿದೆ ಪ್ರಸ್ತುತ ನಮಗೆ ಜಗಂಒಣಿ, ಹೋಳತಿಪ್ಪ ಸಿನೆಮಾರಸ್ತೆಯಲ್ಲಿ ಗೋಡೆಯ ಅವಶೇಷ ಕಂಡು ಬರುತ್ತದೆ. ಕೋಟೆಯ ಕೊತ್ತಲಕ್ಕೆ ಹೊಂದಿಕೊಂಡಿರುವಂತೆ ಬಸವೇಶ್ವರ ದೇವಾಲಯ ನಿರ್ಮಾಣಗೊಂಡಿದೆ. ಆದ್ದರಿಂದ ಅದನ್ನು ಕೊತ್ತಲ ಬಸವೇಶ್ವರ ದೇವಸ್ಥಾನ ಎಂದು ಕರೆಯುತ್ತಾರೆ[೨೬]. ಪ್ರಸ್ತುತ ದೇವಾಲಯದ ಹಿಂಭಾಗದಲ್ಲಿ ಕಾಲೇಜಿಗೆ ಹೊಂದಿಕೊಂಡಿರುವಂತೆ ಕೋಟೆಯ ಸ್ತರಗಳ ಅವಶೇಗಳನ್ನು ಕಾಣಬಹುದು. ಉಳಿದ ಭಾಗದಲ್ಲಿ ಗ್ರಾಮಸ್ಥರು ಕೋಟೆಯ ಕಲ್ಲು ಮಣ್ಣನ್ನು ಬಳಸಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ದಕ್ಷಿಣ ಭಾಗಕ್ಕೆ ಮುಖಮಾಡಿ ಕೊಂಡಂತೆ ಎರಡನೆಯ ದ್ವಾರವಿದೆ. ಇದು ೧೫ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ದ್ವಾರದ ಮುಂಭಾಗದಲ್ಲಿ ಎರಡು ಬದಿಯಲ್ಲಿ ಹದಿನೈದು ಅಡಿ ಉದ್ದನೆಯ ಚೌಕಾಕಾರದ ಕೊತ್ತಳಗಳಿವೆ. ಇವುಗಳು ಕೋಟೆಯ ಗೋಡೆಯಂತೆ ಕಂಡು ಬರುತ್ತದೆ. ಆದರೆ ಇವುಗಳ ಮೇಲ್ಭಾಗದ ರಚನೆಯನ್ನು ನೋಡಿದರೆ ಕೊತ್ತಳಗಳ ಲಕ್ಷಣಗಳನ್ನು ಹೊಂದಿದೆ. ಪ್ರಾಚೀನ ಕಾಲದ ಕೋಟೆ ದ್ವಾರಗಳ ಮುಂಭಾಗದಲ್ಲಿ ಚೌಕಾಕಾರದ ಕೊತ್ತಳಗಳಂತೆ ಇದನ್ನು ನಿರ್ಮಿಸಲಾಗಿದೆ. ದ್ವಾರದ ಕಮಾನಿನ ಎರಡು ಬದಿಯಲ್ಲಿ ಸಿಂಹಗಳ ಶಿಲ್ಪಗಳಿವೆ. ಗುಲಬರ್ಗಾ ಜಿಲ್ಲೆಯ ಕೆಲವು ಕೋಟೆಗಳ ದ್ವಾರಗಳ ಮೇಲೆ ಮಾತ್ರ ಇಂತಹ ಶಿಲ್ಪಗಳು ಕಂಡು ಬರುತ್ತವೆ. ಇದರಿಂದ ದ್ವಾರದ ಬಲಾಢ್ಯತೆ ಗುರುತಿಸಬಹುದಾಗಿದೆ. ಒಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾಸ್ಥಳಗಳಿವೆ. ಈ ದ್ವಾರದ ಎಡಭಾಗದ ಕೊತ್ತಳದಲ್ಲಿ ಒಂದು ಗುಪ್ತದ್ವಾರವಿದೆ ಇಲ್ಲಿಂದ ಕೋಟೆಯ ಒಳಗಡೆ ಪ್ರವೇಶಿಸಬಹುದು. ಪ್ರವೇಶ ದ್ವಾರದ ಮುಂಭಾಗದಲ್ಲಿ ಭದ್ರವಾದ ತಡೆಗೋಡೆ ಇದೆ. ಸುಮಾರು ೩೦ ಅಡಿ ಅಗಲ ೬೦ ಅಡಿ ಉದ್ದನೆಯ ಪ್ರದೇಶಕ್ಕೆ ಸುತ್ತುವರೆದ ತಡೆಗೊಡೆಯ ಕೊನೆಯ ಭಾದಲ್ಲಿ ಚೌಕಾಕಾರದ ಪ್ರವೇಶದ್ವಾರವಿದೆ. ಇದರಿಂದ ಆಕ್ರಮ ಕಾರರಿಗೆ ಕೋಟೆಯ ಪ್ರವೇಶ ದ್ವಾರದ ಕುರಿತು ಮಾಹಿತಿ ಲಭ್ಯವಾಗುವುದಿಲ್ಲ. ಈ ಸ್ಥಳದಲ್ಲಿ ವಿಶೇಷ ಕಾಲು ಪಡೆಯು ದ್ವಾರಕ್ಕೆ ರಕ್ಷಣೆ ಒದಗಿಸುತ್ತಿತ್ತು. ಸೇಡಮ್ ಕೋಟೆಯ ಎರಡು ದ್ವಾರಗಳ ಮುಂಭಾಗದಲ್ಲಿ ವಿಶೇಷ ರಕ್ಷಣಾ ವ್ಯವಸ್ಥೆ ಮಾಡಿರುವುದರಿಂದ ಶಾಸನಗಳಲ್ಲಿ ಈ ಕೋಟೆಯನ್ನು ಅಭ್ಯದ್ಯವಾದ ಸೇಡಂ ದುರ್ಗ ಎಂದು ಉಲ್ಲೇಖಿಸಲಾಗಿದೆ. ಸೇಡಮ್‌ನಲ್ಲಿ ಆಳ್ವಿಕೆ ಮಾಡಿರುವ ರಾಷ್ಟ್ರಕೂಟರು, ಕಲ್ಯಾಣಿಚಾಲುಕ್ಯರು, ಕಲಚೂರಿಯರು, ಹೈಹಯರು, ಬಹಮನಿ ಸುಲ್ತಾನರು, ಕುತುಬ್‌ಷಾಹಿಗಳು ಮುಂತದವರು ತಮ್ಮ ಅನಕೂಲಕ್ಕೆ ತಕ್ಕಂತೆ ಹಲವು ರಕ್ಷಣಾ ಸಂಬಂಧ ಸ್ಮಾರಗಳನ್ನು

ನಿರ್ಮಿಸಿಕೊಂಡರು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಜೈನಬಸದಿ, ಈಶ್ವರ ದೇವಾಲಯ, ಪಂಚಲಿಂಗೇಶ್ವರ ದೇವಾಲಯ, ಶಿಲಾಸ್ತಂಭ, ಮಾಧವ ದೇವಾಲಯ, ತ್ರಿಲಿಂಗೇಶ್ವರ ದೇವಸ್ಥಾನ ಜಿಲೆದರ್ಗಾ ಮುಂತಾದವುಗಳು. ಈ ರೀತಿ ಪ್ರಾಚೀನ ಕಾಲದಿಂದ ಮಧ್ಯಯುಗದ ಅವಧಿಯವರೆಗೆ ನಿರ್ಮಾಣಗೊಂಡ ರಕ್ಷಣಾ ಸ್ಮಾರಕಗಳು ಸೇಡಮ್ ನಗರ ಇತಿಹಾಸದ ಮೇಲೆ ಬೆಳಕು ಚಲ್ಲುತ್ತವೆ.

ಕನ್ನಡಮ್ಮನ ಕಮಲಮುಖ ಕಲಬುರ್ಗಿಯಾದರೆ
ಅವಳ ನಾಸಿಕ ಸೇಡಂ ಎಂದು
ನಾಸಿಕದ ಮೂಗುತಿ ಮಾನ್ಯಖೇಟವಾದರೆ
ಮೂಗು ತಿಯ ಮುತ್ತಿನ ಪ್ರಭೆ ಕವಿರಾಜ ಮಾರ್ಗ ಎಂದು
ಆಧುನಿಕ ಕವಿಯೊಬ್ಬರು ಸೇಡಂ ಕುರಿತು ವರ್ಣನೆ ಮಾಡಿದ್ದಾರೆ[೫೯].

೬. ಅಡಕಿ ಕೋಟೆ:

ತಾಲೂಕು ಕೇಂದ್ರವಾದ ಸೇಡಂನಿಂದ ಆಗ್ನೇಯ ಭಾಗಕ್ಕೆ ೧೬ ಕೀ.ಮಿ ದೂರದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಇದನ್ನು ಅಡಕಿ ಎಂದು ಉಲ್ಲೇಖಿಸಲಾಗಿದೆ[೬೦]. ಕಲ್ಯಾಣಿ ಚಾಲುಕ್ಯನ ಅರಸ ೬ನೇಯ ವಿಕ್ರಮಾದಿತ್ಯನ ಕಾಲದ ಎರಡು ಶಾಸನಗಳ ಅಲ್ಲಿಯ ಧಾರ್ಮಿಕ ಸ್ಥಿತಿಯನ್ನು ಕುರಿತು ವಿವರಿಸಲಾಗಿದೆ. ಮತ್ತೊಂದು ಶಾಸನದಲ್ಲಿ ಕಳಚೊರಿಯರ ರಾಮಮುರಾರಿಯ ಕಾಲಕ್ಕೆ ಸೇರಿದೆ. ಚಾಲುಕ್ಯರು ಮತ್ತು ಕಲಚೂರಿಯರ ಕಾಲಕ್ಕೆ ಪ್ರಾಮುಖ್ಯತೆಯನ್ನು ಹೊಂದಿರುವ ಈ ಗ್ರಾಮದಲ್ಲಿ ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಿರುವ ಸಾಧ್ಯತೆಗಳಿವೆ[೬೧]. ಪ್ರಸ್ತುತ ಅಡಕಿ ಗ್ರಾಮದ ಸುತ್ತಲು ಕೋಟೆಯ ಅವಶೇಷಗಳು ಕಂಡು ಬರುತ್ತವೆ. ಪೂರ್ವ ದಿಕ್ಕಿನಲ್ಲಿ ಕೋಟೆಯ ಪ್ರಮುಖ ಪ್ರವೇಶ ದ್ವಾರವಿದೆ. ೧೫ ಅಡಿ ಅಗಲ ೨೦ ಅಡಿ ಎತ್ತರವಾಗಿರುವ ಈ ದ್ವಾರವು ಕಮಾನಿನ ಶೈಲಿಯಲ್ಲಿರುವಂತೆ ಕಂಡು ಬರುತ್ತದೆ. ಇಲ್ಲಿಂದ ಎರಡು ಬದಿಯಲ್ಲಿ ಕೋಟೆ ಗೋಡೆ ಮುಂದುವರೆಯುತ್ತದೆ. ಈ ಗೋಡೆಯು ಕೇವಲ ೧೦ ರಿಂದ ೧೫ ಅಡಿ ವರೆಗೆ ಇದ್ದು ಮುಂದಿನ ಗೋಡೆಯು ನಾಶಹೊಂದಿದೆ. ಇದನ್ನು ಹೊರತುಪಡಿಸಿ ಉತ್ತರದಿಕ್ಕಿನಲ್ಲಿ ಹಾಗೂ ದಕ್ಷಿಣ ಭಾಗದಲ್ಲಿ ಕೆಲವು ಕೋಟೆಯು ಅವಶೇಷಗಳು ಕಂಡು ಬರುತ್ತವೆ. ಆದರೆ ಪರಿಪೂರ್ಣವಾದ ಕೋಟೆಗೋಡೆಯು ಯಾವ ಭಾಗದಲ್ಲಿಯು ಉಳಿದು ಕೊಂಡಿರುವುದಿಲ್ಲ. ಇದರಿಂದ ಗೋಡೆಯ ರಚನೆ ಹಾಗೂ ನಿರ್ಮಾಣದ ಸಾಮಗ್ರಿಗಳ ಕುರಿತು ಯಾವುದೇ ಮಾಹಿತಿಗಳು ಕಂಡು ಬರುವುದಿಲ್ಲ.

ಪ್ರಮುಖ ದ್ವಾರದ ಒಳಭಾಗದಲ್ಲಿ ೨೦೦ ಅಡಿ ಅಗಲ ೩೦೦ ಅಡಿ ಉದ್ದನೆಯ ಸ್ಥಳದಲ್ಲಿ ಹಲವು ರಕ್ಷಣಾ ಸಂಬಂಧಿಯ ಅವಶೇಷಗಳು ಕಂಡು ಬರುತ್ತವೆ. ಅದರಲ್ಲಿ ಎಡಭಾಗದಲ್ಲಿ ಕಾವಲುಗಾರರ ತಂಗುದಾಣದ ಅವಶೇಷಗಳ ಹಾಗೂ ೫ ಕಮಾನುಗಳಿಂದ ಕೂಡಿರುವ ಐದು ಅಂಕಣಗಳ ಕಟ್ಟಡವಿದೆ.

ಬಿಳಿವರ್ಣದ ಸುಣ್ಣದ ಕಲ್ಲಿನಲ್ಲಿ ನಿರ್ಮಿಸಿರುವ ಈ ಕಟ್ಟಡ ಆನೆಗಳಿಗಾಗಿ ಉಪಯೋಗಿಸಲಾಗುತ್ತಿರುವಂತೆ ಕಂಡು ಬರುತ್ತದೆ. ಇಲ್ಲಿಯ ಕಮಾನುಗಳು ಬಹಮನಿ ಶೈಲಿಯಲ್ಲಿವೆ. ಇವುಗಳ ಮೇಲ್ಭಾಗದ ವೃತ್ತಾಕಾರದ ರಚನೆಯನ್ನು ಹೊಂದಿದೆ. ಅತ್ಯಂತ ಸುಸ್ಥಿತಿಯಲ್ಲಿ ಹಾಗೂ ಸುಂದರವಾಗಿರುವ ಈ ಕಮಾನುಗಳಲ್ಲಿ ಇದರ ಸಮೀಪದ ಮನೆಯವರು ಎತ್ತುಗಳನ್ನು ಕಟ್ಟಲು ಹಾಗೂ ಕಟ್ಟಿಗೆಯ ಸಂಗ್ರಹಕ್ಕಾಗಿ ಬಳಸುತ್ತಲಿದ್ದಾರೆ. ಇಡಿ ಗ್ರಾಮದಲ್ಲಿಯ ಇಂತಹ ಆಕರ್ಷಕ ಕಟ್ಟದ ಇರುವುದಿಲ್ಲ. ಇದರ ಒಂದೊಂದು ಕಮಾನುಗಳು ಸೂಕ್ಷ್ಮವಾಗಿ ಕೆತ್ತಲಾಗಿದೆ. ೨೦೦ x ೩೦೦ ಅಡಿ ಉದ್ದ ಅಗಲದ ಸ್ಥಳಕ್ಕೆ ಸುತ್ತಲು ರಕ್ಷಣಾ ಗೋಡೆ ಇದ್ದು ಇಲ್ಲಿಂದ ಪಶ್ಚಿಮ ಭಾಗದಲ್ಲಿ ಗ್ರಾಮದ ಪ್ರವೇಶಕ್ಕೆ ಒಂದು ಸರಳವಾದ ದ್ವಾರವಿದೆ. ಇಲ್ಲಿಂದ ನೇರವಾಗಿ ೩೦೦ ಮೀಟರ ಅಂತರದಲ್ಲಿ ಗ್ರಾಮದ ಪ್ರವೇಶಕ್ಕೆ ಮತ್ತೊಂದು ಕಮಾನಿನ ಶೈಲಿಯ ದ್ವಾರವಿದೆ. ಅಡಕಿ ಕೋಟೆಯ ಮೂರನೆಯ ದ್ವಾರವು ದಕ್ಷಿಣಕ್ಕೆ ಮುಖಮಾಡಿ ನಿರ್ಮಿಸಲಾಗಿದೆ. ಮೊದಲನೆಯ ದ್ವಾರಕ್ಕಿಂತ ಅತ್ಯಂತ ಪ್ರಾಚೀನವಾಗಿರುವ ಈ ದ್ವಾರವು ೧೦ ಅಡಿ ಅಗಲ ೧೫ ಅಡಿ ಎತ್ತರವಾಗಿದೆ. ಸು. ೧೦ ಅಡಿ ದಪ್ಪವಾಗಿರುವ ಇದರ ಒಳಗಡೆ ಕಾವಲುಗಾರರ ನಿವಾಸಗಳಿವೆ. ದ್ವಾರದ ಮುಂಭಾಗದಲ್ಲಿ ಕೋಟೆಗೋಡೆಗೆ ಅಂಟಿಕೊಂಡಿರುವಂತೆ ಸರಕಾರಿ ಪ್ರಾಥಮಿಕ ಶಾಲೆಯ ನಿರ್ಮಾಣ ನಡೆದಿದೆ. ಕೋಟೆಗೋಡೆಯನ್ನು ಅಗೆಯುವಾಗ ಅದರಲ್ಲಿ ವೀರಗಲ್ಲು, ಸಪ್ತಮಾತ್ರಕೆಯರು, ಹಾಗೂ ಇತರ ಶಿಲ್ಪಗಳು ಲಭ್ಯವಾಗಿವೆ[೩೨]. ಈ ಮೂರು ಸ್ಥಳಗಳನ್ನು ಹೊರತುಪಡಿಸಿ ಗ್ರಾಮದಲ್ಲಿ ಯಾವುದ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳು ಉಳಿದುಕೊಂಡಿರುವುದಿಲ್ಲ.

೭. ಮುಧೋಳ ಕೋಟೆ:

ಸೇಡಂ ತಾಲೂಕು ಕೇಂದ್ರದಿಂದ ಆಗ್ನೇಯ ಭಾಗಕ್ಕೆ ೩೨ ಕಿ.ಮಿ. ದೂರದಲ್ಲಿರುವ ಈ ಗ್ರಾಮವನ್ನು ಪ್ರಾಚೀನ ಶಾಸನಗಲ್ಲಿ "ಮುದವೊಲು" ಎಂದು ಉಲ್ಲೇಖಿಸಲಾಗಿದೆ[೩೩]. ಇಲ್ಲಿ ರಾಷ್ಟ್ರಕೂಟರ ಕಾಲಕ್ಕೆ ಸಂಬಂಧಿಸಿದ ಕೆಲವು ಶಾಸನವು ಲಭ್ಯವಾಗಿವೆ. ೧೦ನೇಯ ಶತಮಾನದ ಈ ಶಾಸನವು ಇಲ್ಲಿಯ ದೇವಾಲಯ ಕುರಿತು ಉಲ್ಲೇಖಿಸುತ್ತದೆ. ಪ್ರಾಚೀನ ಪರಂಪರೆಯನ್ನು ಹೊಂದಿರುವ ಈ ಗ್ರಾಮದಲ್ಲಿ ವಿರಗಲ್ಲು ಗಜಲಕ್ಷ್ಮಿ, ಹನುಮಂತ ಮುಂತಾದ ಮೂರ್ತಿಶಿಲ್ಪಗಳಿವೆ[೩೪].

ಮುಧೋಳದ ಕೇಂದ್ರ ಭಾಗದಲ್ಲಿ ಚೌಕಾಕಾರದಲ್ಲಿ ನಿರ್ಮಿಸಿರುವ ಕೋಟೆ ಇದೆ. ಕ್ರಿ.ಶ. ೧೦ ರಿಂದ ೧೨ನೇಯ ಶತಮಾನದಲ್ಲಿ ನಿರ್ಮಿಸಿರುವ ಈ ಕೋಟೆಯ ನಿರ್ಮಾಣದ ಕುರಿತು ಇದುವರೆಗೆ ಯಾವುದೇ ದಾಖಲೆಗಳು ಲಭ್ಯವಾಗಿಲ್ಲ. ಆದರೆ ಕೆಲವು ದಾಖಲೆಗಳಲ್ಲಿ ಕ್ರಿ.ಶ. ೧೧೧೧ರಲ್ಲಿ ಹೈಹಯರ ರಾಣಿ ಬಾಚಲದೇವಿಯು ಈ ಕೋಟೆಯನ್ನು ಕಟ್ಟಿಸಿದಳೆಂದು ಉಲ್ಲೇಖಗಳಿವೆ[೩೫]. ಕೋಟೆಯ ಪ್ರವೇಶ ದ್ವಾರವು ಉತ್ತರಕ್ಕೆ ಮುಖ ಮಾಡಿದ್ದು ೧೫ ಅಡಿ ಅಗಲ ೨೦ ಅಡಿ ಎತ್ತರವಾಗಿದೆ. ಇದರ ನಿರ್ಮಾಣಕ್ಕೆ ಬಿಳಿವಾರ್ಣದ ಸುಣ್ಣದ ಕಲ್ಲುಗಳನ್ನು ಹಾಗೂ ಕಪ್ಪುವರ್ಣದ ಕಟೆದಕಲ್ಲುಗಳನ್ನು ಬಳಸಲಾಗಿದೆ. ದ್ವಾರದ

ಮೇಲ್ಭಾಗವು ಸಂಪೂರ್ಣವಾಗಿ ಅವನತಿ ಹೊಂದಿದ್ದು, ಅದರ ೧೫ ಅಡಿ ಎತ್ತರದ ರಚನೆ ಮಾತ್ರ ಉಳಿದುಕೊಂಡಿದೆ. ದ್ವಾರದ ಒಳಬದಿಯಲ್ಲಿ ಇರುವ ಕಾವಲುಗಾರರ ನಿವಾಸಗಳು ಅವನತಿ ಹೊಂದಿದ್ದು. ಆಸ್ಥಳದಲ್ಲಿ ಜನರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಲ್ಲಿ ಮೂಲ ರಕ್ಷಣಾಸಂಬಂಧಿ ಕಟ್ಟಡಗಳ ಯಾವುದೆ ಅವಶೇಷಗಳು ಉಳಿದಿರುವುದಿಲ್ಲ. ಇಲ್ಲಿಂದ ೫೦ ಅಡಿ ಅಂತರದಲ್ಲಿ ಚೌಕಾಕಾರದ ಭಾವಿ ಇದೆ. ಇದನ್ನು ಸ್ಥಳಿಯವಾಗಿ ಲಭ್ಯವಾಗುವ ಕೆಂಪುವರ್ಣದ ಕಲ್ಲುಗಳಲ್ಲಿ ನಿರ್ಮಿಸಲಾಗಿದೆ. ಇಲ್ಲಿಂದ ಬಲಬದಿಯಲ್ಲಿ ಬಂದೇ ನವಾಜ್‌ದರ್ಗಾ ಹಾಗೂ ಜುಮ್ಮಾ ಮಸೀದಿಗಳಿವೆ. ಗುಲಬರ್ಗಾದ ಸೂಫಿಸಂತ ಖಾಜಾಬಂದೇನವಾಜರ ಹೆಸರಿನಲ್ಲಿ ಈ ದರ್ಗಾವನ್ನು ಸ್ಥಾಪಿಸಲಾಗಿದೆ. ಅದರ ಬದಿಯಲ್ಲಿರುವ ಜುಮ್ಮಾ ಮಸೀದಿ ಇತ್ತೀಚಿಗೆ ನಿರ್ಮಿಸಿರುವ ಕಟ್ಟಡವಾಗಿದೆ. ಆಗ್ನೇಯ ದಿಕ್ಕಿನಲ್ಲಿ ಚೌಕಾಕಾರದ ಕಾವಲುಗೋಪುರವಿದೆ. ಈ ಗೋಪುರವು ೧೫ ಅಡಿ ಉದ್ದ ೧೫ ಅಡಿ ಅಗಲವಾಗಿದ್ದು. ೩೦ ಅಡಿ ಎತ್ತರವಾಗಿದೆ. ಇದನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಹಂತದಿಂದ ಮೂರನೆಯ ಹಂತದ ರಚನೆಗೆ ವಿವಿಧ ಗಾತ್ರದ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಇದನ್ನು ಹುಡೆವು ಹಾಗೂ ಕಾವಲುಗೋಪುರಗಳ ಶಮಿಶ್ರ ಶೈಲಿಯಲ್ಲಿ ನಿರ್ಮಿಸಲಾಗಿದೆ. ಒಳಗಿನ ರಚನೆಯಿಂದ ಹುಡೆವು ಅನಿಸಿದರೆ, ಹೊರಭಾಗದಿಂದ ಕಾವಲುಗೋಪುರವನ್ನು ಹೊಲುತ್ತದೆ. ಮೇಲೆ ಹತ್ತಲು ಹೊರಭಾಗದಲ್ಲಿ ೧೫ ಮೆಟ್ಟಿಲುಗಳಿವೆ. ಆದರೆ ಪ್ರವೇಶದ್ವಾರವು ಹದಿನೈದು ಅಡಿ ಎತ್ತರದಲ್ಲಿ ಪಶ್ಚಿಮಕ್ಕೆ ಮುಖಮಾಡಿ ನಿರ್ಮಿಸಲಾಗಿದೆ. ಇದರ ಒಳಭಾಗದಲ್ಲಿ ನರಸಿಂಹ ಸ್ವಾಮಿಯ ದೇವಸ್ಥಾನ ವಿದೆ. ಇವುಗಳ ಆಧಾರದ ಮೇಲೆ ಇದು ಕೋಟೆಯ ಒಳಗಡೆಯ ಹುಡೆವು ಎಂದು ಗುರುತಿಸಲಾಗಿದೆ. ಇದರ ಸುತ್ತಲು ಕೆಲವು ಸೈನಿಕರ ನಿವಾಸಗಳಿವೆ ಆದರಲ್ಲಿ ಒಂದು ನಿವಾಸ ಮಾತ್ರ ಉಳಿದಿದ್ದು ಉಳಿದವುಗಳನ್ನು ನಾಶಗೊಳಿಸಿ ಅದರ ಸಾಮಗ್ರಿಗಳನ್ನು ನಾಗರಿಕರ ಮನೆಗಳ ನಿರ್ಮಾಣಕ್ಕೆ ಬಳಸಲಾಗಿದೆ. ಈ ಕೋಟೆಗೆ ಪೂರ್ವಕ್ಕೆ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಕೋಟೆಗೋಡೆಯ ಕೇಂದ್ರದಲ್ಲಿ ದಿಡ್ಡಿ ಬಾಗಲುಗಳಿವೆ. ಅದರಲ್ಲಿ ಪೂರ್ವದ ಬಾಗಿಲು ೫ ಅಡಿ ಅಗಲ ೭ ಅಡಿ ಎತ್ತರವಾಗಿದ್ದು. ಸರಳ ಶೈಲಿಯಲ್ಲಿದೆ ಒಳಗಡೆ ಇದರ ಮುಂಭಾಗದಲ್ಲಿ ೮ ಅಡಿ ಅಂತರದಲ್ಲಿ ಸೈನಿಕರ ನಿವಾಸದ ಕಟ್ಟಡಗಳಿವೆ. ಪಶ್ಚಿಮ ಭಾಗದ ದಿಡ್ಡಿ ಬಾಗಿಲನ್ನು ಮುಚ್ಚಲಾಗಿದೆ. ಏಕೆಂದರೆ ಅದೇ ಸ್ಥಳದಲ್ಲಿ ಬಂದೇ ನವಾಜ್‌ದರ್ಗಾ ನಿರ್ಮಿಸಲಾಗಿದೆ. ಇದರ ದಕ್ಷಿಣ ಭಾಗದಲ್ಲಿ ಹಲವು ಕಟ್ಟಡದ ಅವಶೇಷಗಳಿವೆ. ಆದರಲ್ಲಿ ಯಾವ ಕಟ್ಟಡವು ಉಳಿದು ಕೊಂಡಿಲ್ಲ.

ಕೋಟೆಗೋಡೆಯ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಸಮಿಶ್ರ ವರ್ಗದ ಕಲ್ಲುಗಳನ್ನು ಬಳಸಲಾಗಿದೆ. ಆದರಲ್ಲಿ ಹೆಚ್ಚಿನ ಕಲ್ಲುಗಳು ಕೆಂಪುವರ್ಣದಿಂದ ಕೂಡಿವೆ. ಉತ್ತರ ಭಾಗದ ಗೋಡೆಯ ನಾಲ್ಕು ಅಡಿ ದಪ್ಪ ೨೫ ಅಡಿ ಎತ್ತರ ವಾಗಿದೆ. ಈ ಗೋಡೆಯ ಸ್ವಲ್ಪ ಭಾಗಮಾತ್ರ ಉಳಿದು ಕೊಂಡಿದೆ. ಇಲ್ಲಿಂದ ಪೂರ್ವಭಾಗದ ಗೋಡೆಯು ಅತ್ಯಂತ ಭದ್ರವಾಗಿದೆ. ಸುಮಾರು ೨೫೦ ಅಡಿಯ ವರೆಗೆ

ಉದ್ದನೆಯ ಗೋಡೆ ಇದೆ. ಇದರ ಮಧ್ಯದಲ್ಲಿ ಯಾವುದೆ ಕೊತ್ತಳಗಳು ಅಥವಾ ಕಾವಲುಗೋಪುರಗಳು ಇರುವುದಿಲ್ಲ. ೨೦ ಅಡಿ ಎತ್ತರದ ಗೋಡೆಯ ಮೇಲ್ಭಾಗದಲ್ಲಿ ೫ ಅಡ ಎತ್ತರ ಮಣ್ಣಿನ ತೆನೆಗಳನ್ನು ನಿರ್ಮಿಸಲಾಗಿದೆ. ಇಲ್ಲಿಯ ತೆನೆಗಳು ಚಂಡ್ರಕಿ ಮಣ್ಣಿನ ಕೋಟೆಗಿಂತ ಚಿಕ್ಕದಾಗಿದೆ. ಕೋಟೆಯ ನಿರ್ಮಾಣದಲ್ಲಿ ಮಣ್ಣಿನ ಬಳಕೆ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುವುದಿಲ್ಲ ಚಂಡ್ರಕಿ ಕೋಟೆ ಅಥವಾ ಯಾದಗಿರ ತಾಲೂಕಿನ ಮಣ್ಣಿನ ಕೋಟೆಗಳಲ್ಲಿ ೧೦ ಅಡಿ ಕಿಂತ ಹೆಚ್ಚಿನ ಎತ್ತರದ ಮಣ್ಣಿನ ಗೋಡೆ ಇದೆ. ಆದರೆ ಇಲ್ಲಿ ಕೇವಲ ತೆನೆಗಳ ನಿರ್ಮಾಣಕ್ಕೆ ಮಾತ್ರ ಮಣ್ಣನ್ನು ಬಳಸಲಾಗಿದೆ. ದಕ್ಷಿಣ ಭಾಗದ ಗೋಡೆಯು ಸಹ ಉತ್ತಮ ಸ್ಥಿತಿಯಲ್ಲಿದೆ. ಆದರೆ ಈ ಭಾಗದಲ್ಲಿ ಗೋಡೆಗೆ ಅಂಟಿಕೊಂಡು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದ್ದರಿಂದ ಕೋಟೆಯು ಮೇಲ್ಭಾಗದ ಗೋಡೆ ಮಾತ್ರ ಕಂಡು ಬರುತ್ತದೆ. ಒಟ್ಟಿನಲ್ಲಿ ಮುದೋಳ ಕೋಟೆಯ ಮೂರು ಭಾಗದ ಗೋಡೆಯ ಸುಸ್ಥಿತಿಯಲ್ಲಿದೆ.

ಕೋಟೆಯಲ್ಲಿ ಕೋಟೆನಾಗಮ್ಮ ದೇವಾಲಯವಿದೆ. ಹೈಹಯರ ರಾಣಿ ಬಾಚಲದೇವಿಯೆ ನಾಗಮ್ಮಳಾಗಿ ಕೋಟೆಯನ್ನು ರಕ್ಷಿಸುತ್ತಿದ್ದಾಳೆ ಎಂದು ಸ್ಥಳಿಯರ ನಂಬಿಕೆಯಾಗಿದೆ. ಅಲ್ಲದೆ, ಕೋಟೆ ಮಾಸಮ್ಮಳು ಗ್ರಾಮ ದೇವತೆಯಾಗಿದ್ದೂ, ಕೋಟೆಯನ್ನು ರಕ್ಷಿಸುತ್ತಾಳೆ ಎನ್ನುವ ಭಾವನೆಯು ಸಹ ಇದೆ. ಆದ್ದರಿಂದ ಕ್ರಿ.ಶ. ೯ನೇಯ ಶತಮಾನದಲ್ಲಿ ರಚನೆಗೊಂಡಿರುವ ಕೋಟೆಯ ಇಂದಿನವರೆಗೆ ಅತ್ಯಂತ ಸುಭದ್ರ ಸ್ಥಿತಿಯಲ್ಲಿದೆ ಎನ್ನುವ ಕಲ್ಪನೆ ಸ್ಥಳಿಯರದಾಗಿದೆ. ಕೋಟೆಯ ನಿರ್ಮಾಣಕ್ಕೆ ಬಳಸಿರುವ ಮಣ್ಣಿನಲ್ಲಿ ಮಹತ್ವದ ಶಕ್ತಿ ಇದೆ ಎಂದು ಸ್ಥಳಿಯರ ನಂಬಿಕೆಯಾಗಿದೆ. ಇದನ್ನು ಗ್ರಾಮಸ್ಥರು ತಮ್ಮ ಮನೆಯಲ್ಲಿ ಕಾರ್ಯಕ್ರಮವಿದ್ದಾಗ ಅದಕ್ಕೂ ಮುಂಚೆ ಇಲ್ಲಿಂದ ಒಂದು ಮುಟ್ಟಿಗೆ ಮಣ್ಣನ್ನು ತೆಗೆದುಕೊಂಡು ಹೋಗಿ ಪೂಜೆ ಮಾಡಿದ ನಂತರ ತಮ್ಮ ಶುಭಕಾರ್ಯ ಆರಂಭಿಸುತ್ತಾರೆ. ಅಲ್ಲದೆ ಕೈ ಕಾಲುಗಳಿಗೆ ನೋವು ಬಂದಾಗ ಈ ಮಣ್ಣನ್ನು ನೀರಿನಲ್ಲಿ ಬೆರೆಸಿ ನೋವಾದ ಭಾಗಕ್ಕೆ ಅಂಟಿಸಲಾಗುತ್ತದೆ. ಕೆಲವು ದಿನಗಳ ನಂತರ ನೋವು ಕಡಿಮೆ ಯಾಗುತ್ತದೆ. ಎನ್ನುವ ಭಾವನೆ ಸ್ಥಳಿಯರಲ್ಲಿದೆ. ಕ್ಷೇತ್ರ ಅಧ್ಯಯನದಲ್ಲಿ ಇಂತಹ ಪ್ರಸಂಗವನ್ನು ಬಂದಾಗ ಕಂಡು ಅವರಿಂದ ಈ ಮಾಹಿತಿ ಪಡೆದುಕೊಳ್ಳಲಾಗಿದೆ. ಇದನ್ನು ನೋವಾದ ಭಾಗಕ್ಕೆ ಹಚ್ಚಿದ ಮಣ್ಣು ನೊವನ್ನು ಆಕರ್ಷಿಸಿಕೊಂಡು ನಂತರ ಮಣ್ಣು ಗಟ್ಟಿಯಾಗುತ್ತದೆ. ಅಂತಹ ಶಕ್ತಿ ಮಣ್ಣಿನಲ್ಲಿದೆ ಎಂದು ಹೇಳುತ್ತಾರೆ[೩೬]. ಹಾಳು ಮಣ್ಣಿನಲ್ಲಿ ಕೆಲವು ನೈಸರ್ಗಿಕವಾಗಿ ಲಭ್ಯವಾಗುವ ವಸ್ತುಗಳನ್ನು ಸೇರಿಸಿದಾಗ ಅದಕ್ಕೆ ಅಂತಹ ಶಕ್ತಿ ಬರುತ್ತದೆ. ಇಂತಹ ಲಕ್ಷಣಗಳು ನಮಗೆ ಬಹಮನಿಯರ ಕಾಲದಲ್ಲಿ ಕಂಡು ಬರುತ್ತವೆ. ಗಾರೆಯ ತಯ್ಯಾರಿಗೆ ಹಲವು ಕಚ್ಚಾವಸ್ತುಗಳನ್ನು ಬಳಸಲಾಗುತ್ತಿತ್ತು ಅದರಂತೆ ಈ ಮಣ್ಣನ್ನು ತಯಾರಿಸಲಾಗುತ್ತಿತ್ತು ಎಂದು ಕಂಡು ಬರುತ್ತದೆ.

ಮೂದೋಳ ಕೋಟೆಯ ೧೦ ನೇಯ ಶತಮಾನದಿಂದ ೧೪ನೇಯ ಶತಮಾನದ ಕಾಲಾವಧಿಯಲ್ಲಿ ರಚನೆ ಮಾಡಿರುವಂತೆ ಕಂಡು ಬರುತ್ತದೆ. ಏಕೆಂದರೆ ಇದರಲ್ಲಿ ಮಳಖೇಡ ಕೋಟೆಯ ಹಲವು ಲಕ್ಷಣಗಳು ಕಂಡು ಬರುತ್ತವೆ.

೮. ನಾಗಾವಿ ಕೋಟೆ

ನಾಗಾವಿ ಕೋಟೆಯು ಚಿತ್ತಾಪೂರ ತಾಲೂಕ ಕೇಂದ್ರದಿಂದ ಆಗ್ನೇಯ ಭಾಗದಲ್ಲಿ ಸುಮಾರು ಮೂರು ಕಿ.ಮೀ. ದೂರದಲ್ಲಿದೆ. ಇದೊಂದು ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಶಾಸನಗಳಲ್ಲಿ ಇದನ್ನು ಅಗ್ರಹಾರ ನಾಗಾವಿ 'ಮಹಾ ಅಗ್ರಹಾರ' 'ನಾಗವಿ ಸರ್ವಸಮಸ್ಯದ ಅಗ್ರಹಾರ ನಾಗಾವಿ' ಎಂದು ಉಲ್ಲೇಖಿಸಲಾಗಿದೆ. ಅಲ್ಲದೆ ಪ್ರಾಚೀನ ಕಾಲದಲ್ಲಿ ಅರಳು ೩೦೦ರ ರಾಜ್ಯಧಾನಿಯಾಗಿತ್ತು[೩೭]. ಕ್ರಿ.ಶ. ೧೨ನೆಯ ಶತಮಾನಕ್ಕೆ ಸಂಬಂಧಿಸಿದ ಕಲ್ಯಾಣ ಚಾಲುಕ್ಯರ ಕಾಲದ ಸ್ತಂಭ ಶಾಸನವು ಇಲ್ಲಿ ಲಭ್ಯವಾಗಿದೆ. ಅದರಲ್ಲಿ ಇದೊಂದು ಮಹಾ ಅಗ್ರಹಾರವೆಂದು ಉಲ್ಲೇಖಿಸಲಾಗಿದೆ.

ಹಾಳು ಬಿದ್ದಿರುವ ನಾಗಾವಿಯಲ್ಲಿ ೧೧ನೆಯ ಶತಮಾನದಿಂದ ೧೬ನೆಯ ಶತಮಾನದವರೆಗೆ ನಿರ್ಮಾಣಗೊಂಡಿರುವ ಹಲವು ಸ್ಮಾರಕಗಳಿವೆ. ಅವುಗಳಲ್ಲಿ ೬೦ ಕಂಬಗಳ ದೇವಾಲಯ, ರಾಮೇಶ್ವರ, ಲಕ್ಷ್ಮಣೇಶ್ವರ ಹಾಗೂ ನಂದಿ ಬಾವಿಗಳ, ಬಂಗಾರದ ಗುಡಿ (ಜೈನ ದೇವಾಲಯ) ನಾಗಾವಿ ಎಲ್ಲಮ್ಮ, ಬಸವಣ್ಣ, ಹನುಮಂತ, ಈಶ್ವರ ದೇವಾಲಯಗಳು, ಹಾಗೂ ರಕ್ಷಣಾ ವಾಸ್ತುಶಿಲ್ಪಶಿಲ್ಪಕ್ಕೆ ಸಂಬಂಧಿಸಿದಂತೆ, ಕೋಟೆ, ನೀರಿನ ಆಶ್ರಯ ತಾಣ, ಬುರುಜುಗಳು, ಸೈನಿಕರ ನಿವಾಸಗಳು, ಕಾವಲುಗೋಪುರಗಳು ದ್ವಾರ ಬಾಗಿಲುಗಳು ಮುಂತಾದ ಕಟ್ಟಡಗಳಿವೆ. ಪ್ರಾಚೀನ ಕಾಲದಲ್ಲಿ ರಾಜ್ಯಧಾನಿಯಾಗಿ, ಘಟಿಕಾ ಸ್ಥಾನವಾಗಿ, ಅಗ್ರಹಾರವಾಗಿರುವ ಈ ನಗರವು ಇಂದು ಸಂಪೂರ್ಣವಾಗಿ ಹಾಳು ಬಿದ್ದಿದೆ. ಇಲ್ಲಿಯ ದೇವಾಲಯಗಳು ಹಾಗೂ ನೀರಿನ ತಾಣಗಳು (ತೀರ್ಥ) ಸ್ವಲ್ಪ ಮಟ್ಟಿಗೆ ಸುಸ್ಥಿತಿಯಲ್ಲಿವೆ. ಆದರೆ ರಕ್ಷಣೆಗೆ ಸಂಬಂಧಿಸಿದ ಇಲ್ಲಿಯ ಎಲ್ಲಾ ಅವಶೇಷಗಳು ಅವನತಿ ಹೊಂದುತ್ತಲಿವೆ. ಆದ್ದರಿಂದ ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತಿ ಮಹತ್ವದ ಅಂಶವಾಗಿದೆ.

ಪ್ರಾಚೀನ ಕಾಲದ ಪ್ರಮುಖ ಸ್ಥಳವಾದ ಈ ಪ್ರದೇಶದ ರಕ್ಷಣೆಗಾಗಿ ವಿಶಾಲವಾದ ಪ್ರದೇಶವನ್ನು ಆವರಿಸಿಕೊಂಡಂತೆ ಕೋಟೆಯನ್ನು ನಿರ್ಮಿಸಲಾಗಿದೆ. ಪ್ರಸ್ತುತ ಕೋಟೆ ಗೋಡೆಯ ಕೆಲವು ಭಾಗಗಳು ಮಾತ್ರ ಉಳಿದುಕೊಂಡಿದೆ. ಆದ್ದರಿಂದ ನಿಖರವಾಗಿ ಕೋಟೆಯ ವಿಸ್ತಾರವನ್ನು ಗುರುತಿಸುವುದು ಕಷ್ಟಕರವಾಗಿದೆ. ವಿಶಲವಾದ ಪ್ರದೇಶಗಳಲ್ಲಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳಿವೆ. ಅವುಗಳ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋಡೆಯು ಕೋಟೆಯ ಎಲ್ಲಾ ಲಕ್ಷಣಗಳನ್ನು ಹೊಂದಿದೆ. ಆದ್ದರಿಂದ ಇದನ್ನು ರಕ್ಷಣಾ ಗೋಡೆಯೆಂದು ಗುರುತಿಸಲಾಗಿದೆ. ಇಲ್ಲಿಯ ಪ್ರಮುಖ ಧಾರ್ಮಿಕ ಸ್ಥಳಗಳಾದ ಕಾಲಿ ಮಸೀದಿ, ಈರಪ್ಪಯ್ಯನ ಗುಡಿ, ಈಶ್ವರ ದೇವಾಲಯ ಹಾಗೂ ಮುಂತಾದ ಕಟ್ಟಡಗಳಿಗೆ

ಸುತ್ತುವರಿದ ಕೋಟೆ ಇದೆ. ಸಂಜೀವಆಂಜನೆಯ ದೇವಾಲಯಕ್ಕೆ ಸುತ್ತುವರಿದ ವಿಶಾಲವಾದ ಕೋಟೆಯಿದೆ. ಈ ರೀತಿಯಲ್ಲಿ ನಾಗಾವಿಯ ಕೋಟೆಯು ಹಂತ ಹಂತವಾಗಿ ರಚನೆಗೊಂಡಿದೆ.

ಮಹಾ ಅಗ್ರಹಾರದಿಂದ ಒಂದು ಕೀ.ಮಿ. ದೂರದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರುವ ನಂದೀಶ್ವರ ದೇವಾಲಯವಿದೆ. ಅದರ ಹಿಂಭಾಗದಲ್ಲಿ ಆಯತಾಕಾರದ ಭಾವಿ ಇದ್ದೂ ಇದನ್ನು ರಾಮತೀರ್ಥ ಎಂದು ಕರೆಯುತ್ತಾರೆ. ಈ ಭಾವಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಭಾಗ ೪೦ ಅಡಿ ಅಗಲ ೬೦ ಅಡಿ ಉದ್ಧವಾಗಿದೆ. ಹಾಗೂ ಎರಡನೆಯ ಹಂತದಲ್ಲಿಯ ಬಾವಿಯು ೧೦x೧೫ ಅಡಿ ಉದ್ದ ಅಗಲವಾಗಿದೆ. ಇದನ್ನು ಲಕ್ಷ್ಮಣ ತೀರ್ಥ ಎಂದು ಕರೆಯುತ್ತಾರೆ. ಅತ್ಯಂತ ಆಳವಾಗಿರುವ ಇದರಲ್ಲಿ ಸದಾ ನೀರು ತುಂಬಿರುತ್ತದೆ. ತಳಪಾಯದಲ್ಲಿರುವ ನೀರಿನ ಮೂಲವು ನಿರಂತರವಾಗಿ ಹರಿಯುವುದರಿಂದ ಇಲ್ಲಿಯ ನೀರು ಯಾವಾಗಲು ಶುದ್ಧವಾಗಿರುತ್ತವೆ. ಇದರ ಬಲಬದಿಯಲ್ಲಿ ವಿಶಾಲವಾದ ರಕ್ಷಣಾ ಗೋಡೆ ಹಾಗೂ ಇದರ ಒಳಗಡೆ ಎರಡು ಪ್ರಕಾರದ ಕಟ್ಟಡಗಳಿವೆ. ಒಂದು ಬದಿಯಲ್ಲಿ ಚಿಕ್ಕ ಪ್ರವೇಶ ದ್ವಾರದ ಒಳಭಾಗದಲ್ಲಿ ೩೦x೬೦ ಆಕಾರದ ರಕ್ಷಣಾ ಗೋಡೆಯ ಪಶ್ಚಿಮ ಭಾಗಕ್ಕೆ ೩೦x೨೦ ಆಕಾರದಲ್ಲಿ ಮೂರು ಅಂಕಣಗಳಿಂದ ಕೂಡಿರುವ ಪರಿವರ್ತನೆಗೊಂಡಿರವ ಮಸೀದಿ ಇದೆ. ಇದರ ರಚನೆಗೆ ಕಲ್ಯಾಣಿ ಚಾಲುಕ್ಯರ ಕಾಲದ ಕಪ್ಪನೆಯ ಕಲ್ಲಿನ ಕಂಬಗಳನ್ನು ಬಳಸಲಾಗಿದೆ. ವೃತ್ತಾಕಾರದಲ್ಲಿರುವ ಈ ಕಂಬಗಳಲ್ಲಿ ಯಾವುದೇ ಕೆತ್ತನೆ ಇರುವುದಿಲ್ಲ. ಆದ್ದರಿಂದ ಇದನ್ನು ಕಾಲಿ ಮಸೀದಿ ಎಂದು ಕರೆಯುತ್ತಾರೆ. ಮೇಲ್ಭಾಗದಲ್ಲಿಯ ಕಮಾನುಗಳು ಅತ್ಯಂತ ಮೊನಚಾಗಿವೆ. ಇದರ ಬಲಬದಿಯಲ್ಲಿ ಒಂದು ವಿಶಾಲವಾದ ಸಿಹಿ ನೀರಿನ ಬಾವಿ ಇದೆ. ಮಸೀದಿಯ ಮುಂಭಾಗದಲ್ಲಿರುವ ಭದ್ರವಾದ ರಕ್ಷಣಾ ಗೋಡೆಯು ಮೂರು ಅಡಿ ದಪ್ಪ ೧೨ ಅಡಿ ಎತ್ತರವಾಗಿದೆ. ಹೊರಗಿನಿಂದ ವೀಕ್ಷಿಸಿದರೆ ಇದೊಂದು ಭದ್ರವಾದ ಕೋಟೆಯಂತೆ ಕಂಡು ಬರುತ್ತದೆ.

ಕಾಲಿ ಮಸೀದಿಗೆ ಹೊಂದಿಕೊಂಡಿರುವಂತೆ ಅದರ ಮುಂಭಾಗದಲ್ಲಿ ಮತ್ತೊಂದು ಪ್ರತ್ಯೇಕವಾದ ಕಟ್ಟಡವಿದೆ. ಇದರ ಪ್ರವೇಶ ದ್ವಾರವು ೧೫ ಅಡಿ ಅಗಲ ೨೦ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಅದರ ಕೇಂದ್ರದಲ್ಲಿ ಕಿರಿದಾದ ಚೌಕಾಕಾರದ ಪ್ರವೇಶದ್ವಾರವಿದೆ. ಅದರ ಮುಂಭಾಗದಲ್ಲಿ ದ್ದನೆಯ ಕಲ್ಲನ್ನು ಹಾಕಲಾಗಿದೆ. ಇದು ಒಳಗಡೆಯ ಪ್ರವೇಶ ನಿಷೇದದ ಸಂಕೇತವಾಗಿದೆ. ಏಕೆಂದರೆ ಇದೊಂದು ಮಹತ್ವದ ಕಟ್ಟಡವಾಗಿರುವಂತೆ ಕಂಡು ಬರುತ್ತದೆ. ಒಳಗಡೆ ೬೦x೮೦ ಚೌಕಾಕಾರದ ರಕ್ಷಣಾ ಗೋಡೆಯನ್ನು ಹೊಂದಿದ್ದು ಕೇಂದ್ರದಲ್ಲಿ ಮಾತ್ರ ೧೫x೧೫ ಆಕಾರದ ನೆಲ ಮಾಳಿಗೆಯ ಕಟ್ಟಡವಿದೆ. ಇದರ ಒಳಗಡೆ ಪ್ರವೇಶ ಅಸಾಧ್ಯವಾದ್ದುದರಿಂದ ಇದರ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದು ಕಷ್ಟಕರವಾಗಿದೆ. ಈ ರೀತಿಯ ಭದ್ರತೆಯನ್ನು ಹೊಂದಿರುವುದರಿಂದ ಇದು ಖಜಾನೆಯ ಸ್ಥಳ ಅಥವಾ ಮದ್ದುಗುಂಡಿನ ಸಂಗ್ರಹದ ಸ್ಥಳವಾಗಿರಬಹುದೆಂದು ಉಹಿಸಲಾಗಿದೆ. ಏಕೆಂದರೆ ಇದರ ಸುತ್ತಲು ೮ ಅಡಿ

ಎತ್ತರದ ರಕ್ಷಣಾ ಗೋಡೆ ಮತ್ತು ಅದರ ಮೇಲೆ ಅರ್ಧವೃತ್ತಾಕಾರದ ತೆನೆಗಳಿವೆ. ಇದರ ಹಿಂಭಾಗದಲ್ಲಿ ವಿಶಾಲವಾದ ಪ್ರದೇಶದ ಸುತ್ತಲು ಕೋಟೆಯು ಆವರಿಸಿಕೊಂಡಿದೆ. ಆದರೆ ಇಲ್ಲಿಯ ಎಲ್ಲಾ ಕಟ್ಟಡಗಳು ಸಂಪೂರ್ಣವಾಗಿ ಅವನತಿ ಹೊಂದಿವೆ.

ಎರಡು ಪ್ರವೇಶ ದ್ವಾರದ ಮುಂಭಾಗದಲ್ಲಿ ೩೦ ಅಡಿ ಅಗಲ ೨೦೦ ಅಡಿ ಉದ್ದನೆಯ ಗೋಡೆ ಇದೆ. ಈಗ ಅದರ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದ್ದು ಉಳಿದ ಭಾಗ ಅವನತಿ ಹೊಂದಿದೆ. ಈ ರೀತಿಯಲ್ಲಿ ಅತ್ಯಂತ ಭದ್ರವಾದ ಸ್ಥಳದಲ್ಲಿ ನಿರ್ಮಿಸಿರುವ ಈ ಕಟ್ಟಡಗಳು ಬಹಮನಿಯರ ಕಾಲದಲ್ಲಿ ನಿರ್ಮಿಸಿರುವಂತೆ ಕಂಡು ಬರುತ್ತವೆ. ಅವಶ್ಯವಿರುವ ಕಡೆಯಲ್ಲಿ ಅವುಗಳನ್ನು ಪರಿವರ್ತನೆಗೊಳಿಸಿ, ಉಳಿದ ಕೋಟೆಯ ಭಾಗವನ್ನು ಹಾಗೆ ಇಡಲಾಗಿದೆ. ಆದ್ದರಿಂದ ಇದೊಂದು ಪ್ರತ್ಯೇಕ ಕೋಟೆಯಂತೆ ಕಂಡು ಬರುತ್ತದೆ. ಇಲ್ಲಿರುವ ಕಟ್ಟಡಗಳು ಉಳಿದ ಕಟ್ಟಡಗಳಿಗಿಂತ ಭಿನ್ನವಾದ ಶೈಲಿಯಲ್ಲಿ ನಿರ್ಮಿಸಲಾಗಿದೆ. ಇದರ ಹಿಂಭಾಗದಲ್ಲಿ ಒಂದು ಹಳ್ಳ ಹರಿಯುತ್ತದೆ. ಇದು ಕೋಟೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸುತ್ತದೆ. ಆದ್ದರಿಂದಲೆ ಈ ಭಾಗದ ಕಟ್ಟಡಗಳ ರಕ್ಷಣೆಗೆ ಭದ್ರವಾದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ.

ಕೋಟೆಯ ಒಳಭಾಗದಲ್ಲಿ ಇರುವ ಮತ್ತೊಂದು ಪ್ರಮುಖ ಕಟ್ಟಡವೆಂದರೆ ಈಶ್ವರ ದೇವಸ್ಥಾನ ಮತ್ತು ಸಭಾ ಮಂಟಪ ಈ ಎರಡು ಕಟ್ಟಡಗಳನ್ನು ಆವರಿಸಿಕೊಂಡಂತೆ ವಿಶಾಲವಾದ ರಕ್ಷಣಾ ಗೋಡೆ ಇದೆ. ಇದರ ಪ್ರವೇಶ ದ್ವಾರವು ಎರಡು ವೃತ್ತಾಕಾರದ ಮಿನಾರುಗಳ ಮಧ್ಯದಲ್ಲಿ ರಚಿಸಲಾಗಿದೆ. ೨೦ ಅಡಿ ಎತ್ತರದ ಈ ಮಿನಾರುಗಳನ್ನು ನಾಲ್ಕು ಹಂತದಲ್ಲಿ ವಿಂಗಡಿಸಲಾಗಿದೆ. ಎರಡರ ಮಧ್ಯದಲ್ಲಿ ಮೊನಚಾದ ಕಮಾನಿನ ಕೆಳಹಂತದಲ್ಲಿ ಚೌಕಾಕಾರದ ಕಲ್ಲಿನ ಕಂಬಗಳನ್ನು ಹೊಂದಿರುವ ಪ್ರವೇಶ ದ್ವಾರವಿದೆ. ಇದು ದೇವಾಲಯದ ಪ್ರವೇಶ ದ್ವಾರವನ್ನು ಹೋಲುತ್ತದೆ. ಮುಂಭಾಗದಲ್ಲಿ ಗಾರೆಯ ಲೇಪನವನ್ನು ಮಾಡಿ ಅದರ ಮೇಲೆ ರೇಖಾ ಚಿತ್ರಗಳ ಮತ್ತು ಹೂಬಳ್ಳಿಗಳ ಅಲಂಕಾರವಿದೆ. ಇದು ಬಹಮನಿಯ ಶೈಲಿಯನ್ನು ಹೋಲುತ್ತದೆ.

ಒಳಭಾಗದ ಕೇಂದ್ರದಲ್ಲಿ ನಾಲ್ಕು ಅಡಿ ಎತ್ತರದ ಮೇಲೆ ಮೂರು ಅಂಕಣಗಳನ್ನು ಹೊಂದಿರುವ ಮಂಟಪವಿದೆ. ೧೬ ಕಂಬಗಳನ್ನು ಹೊಂದಿರುವ ಮಂಟಪವು ಆಯತಾಕಾರದಲ್ಲಿದೆ. ಇದರ ಮುಂಭಾಗದಲ್ಲಿ ಮೂರು ಅಡಿ ಉದ್ದನೆಯ ಸಜ್ಜಾ ಚಾಚಿಕೊಂಡಿದೆ. ಇದರ ಮೇಲ್ಭಾಗದಲ್ಲಿ ಎರಡು ಕಡೆಗೆ ನಾಲ್ಕು ಅಡಿ ಎತ್ತರದ ವೃತ್ತಾಕಾರದ ಅಲಂಕೃತ ಕಂಬಗಳಿವೆ. ಆದಿಲ್ ಶಾಹಿಗಳ ಶೈಲಿಯಲ್ಲಿರುವ ಈ ಕಂಬಗಳು ನಾಲ್ಕು ಕಡೆಯಲ್ಲಿ ನಿರ್ಮಿಸಿರಬಹುದು. ಆದರೆ ಪ್ರಸ್ತುತ ಒಂದು ಕಂಬ ಮಾತ್ರ ಉಳಿದಿದೆ. ಇದರ ಒಳಗಡೆ ಯಾವುದೆ ಆಕಾರವು ಕಂಡು ಬರುವುದಿಲ್ಲ. ಅಲ್ಲದೆ ಮುಂಭಾಗದಲ್ಲಿ

[illegible]

ವಿಶಾಲವಾದ ಸ್ಥಳವಿದೆ. ಹಾಗೂ ಸುತ್ತಲು ಭದ್ರವಾದ ಕೋಟೆ ಗೋಡೆ ಇರುವುದರಿಂದ ಇದೊಂದು ರಕ್ಷಣಾ ಸಂಬಂಧಿ ಕಟ್ಟಡವಾಗಿರಬಹುದಾಗಿದೆ.

ಇದರ ಮುಂಭಾಗದಲ್ಲಿ ಪಶ್ಚಿಮಕ್ಕೆ ಮುಖಮಾಡಿಕೊಂಡಿರುವ ಈಶ್ವರ ದೇವಾಲಯ ಅವನತಿ ಹಂತದಲ್ಲಿದೆ. ಈ ದೇವಾಲಯದ ಗರ್ಭಗೃಹ ಮಾತ್ರ ಉಳಿದಿದ್ದು, ಅದರ ಮುಂಭಾಗದ ಮುಖಮಂಟಪ, ನಂದಿಮಂಟಪ ಮತ್ತು ಕಂಭಗಳು ಸಂಪೂರ್ಣವಾಗಿ ನಾಶಹೊಂದಿದೆ. ಗರ್ಭ ಗೃಹದಲ್ಲಿ ಲಿಂಗವಿರುವುದರಿಂದ ಇದನ್ನು ಈಶ್ವರ ದೇವಾಲಯ ಎಂದು ಕರೆಯಲಾಗಿದೆ. ದೇವಾಲಯ ಮತ್ತು ಸಭಾ ಮಂಟಪದ ರಚನೆಯು ಕಾಲ ಬೇರೆ ಬೇರೆಯಾಗಿರುವಂತೆ ಕಂಡು ಬರುತ್ತದೆ.

ಈಶ್ವರ ದೇವಸ್ಥಾನದ ಮುಂಭಾಗದಲ್ಲಿ ವಿಶಾಲವಾದ ಪ್ರದೇಶವನ್ನು ಆವರಿಸಿಕೊಂಡಿರುವ ಕೋಟೆ ಗೋಡೆಯ ಅವಶೇಷಗಳು ಕಂಡು ಬರುತ್ತವೆ. ಅಲ್ಲದೆ ಅಲ್ಲಿಂದ ಪೂರ್ವ ಭಾಗದಲ್ಲಿ ಸುಮಾರು ಒಂದು ಕೀ.ಮಿ.ವರೆಗೆ ಇರುವ ಸ್ಥಳದಲ್ಲಿ ಹಲವು ಬಗೆಯ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಎಲ್ಲಾ ಕಟ್ಟಡಗಳು ಸಂಪೂರ್ಣವಾಗಿ ನೆಲಸಮವಾಗಿದೆ. ಅವುಗಳ ತಳಪಾಯ ಮತ್ತು ಸುತ್ತಮುತ್ತಲಿನ ಕಲ್ಲಿನ ಸಂಗ್ರಹಗಳು ಮಾತ್ರ ಉಳಿದುಕೊಂಡಿವೆ. ಇದರ ಹೊರ ಭಾಗದಲ್ಲಿ ಕೋಟೆ ಗೋಡೆಯು ಕಂಡು ಬರುತ್ತದೆ. ಇಲ್ಲಿಂದ ಮುಂದೆ ಹೋದರೆ ಕೋಟೆಯ ಪ್ರಮುಖ ದ್ವಾರವಿದೆ. ಒಳದ್ವಾರವು ಸುಸ್ಥಿತಿಯಲಲಿದ್ದು ಹೊರದ್ವಾರವು ಅವನತಿ ಹೊಂದಿದೆ.

ನಾಗಾವಿ ಕೋಟೆಯಲ್ಲಿ ಪ್ರಸ್ತುತವಾಗಿ ಒಂದು ಪ್ರವೇಶ ದ್ವಾರ ಉಳಿದುಕೊಂಡಿದೆ. ಈ ದ್ವಾರವು ದಕ್ಷಿಣಕ್ಕೆ ಮುಖ ಮಾಡಿಕೊಂಡಿದ್ದು, ಕೋಟೆಯ ಒಳಗಡೆ ಎರಡು ಪ್ರಮುಖ ಭಾಗಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಆದ್ದರಿಂದ ಇದರಲ್ಲಿ ಯಾವುದು ಒಳಭಾಗ, ಯಾವುದು ಹೊರಭಾಗ ಎಂದು ಗುರುತಿಸುವುದು ಕಷ್ಟಕರವಾಗಿದೆ. ಏಕೆಂದರೆ ಇದರ ಒಂದು ಭಾಗದಲ್ಲಿ ಕಾವಲುಗಾರರಿಗೆ ರಕ್ಷಣೆಯ ಸ್ಥಳವಿದೆ. ಇನ್ನೊಂದು ಭಾಗದಲ್ಲಿ ಈ ರೀತಿಯ ವ್ಯವಸ್ಥೆಯು ಕಂಡು ಬರುವುದಿಲ್ಲ. ದ್ವಾರದ ಮುಂಭಾಗದಲ್ಲಿ ಅಥವಾ ಒಳಭಾಗದಲ್ಲಿ ರಕ್ಷಣಾ ವ್ಯವಸ್ಥೆ ಇರುತ್ತದೆ. ಎರಡು ಭಾಗದಲ್ಲಿ ಕೋಟೆ ಗೋಡೆ, ರಕ್ಷಣಾ ಸಂಬಂಧಿ ಕಟ್ಟಡಗಳಾದ ಸೈನಿಕರ ವಸತಿ, ನಿಲಯಗಳು, ನೀರಿನ ಆಶ್ರಯ ತಾಣಗಳು, ದೇವಾಲಯಗಳು ಇವೆ. ಈ ದ್ವಾರವು ೧೦ ಅಡಿ ಅಗಲ ೨೦ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಇದರ ಒಂದು ಬದಿಯಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳಗಳಿವೆ. ಇದರ ಮೇಲ್ಭಾಗದಲ್ಲಿ ಹತ್ತಲು ಮೆಟ್ಟಲುಗಳಿವೆ. ದ್ವಾರದ ಮತ್ತೊಂದು ಬದಿಯಲ್ಲಿ ನೇರವಾದ ಗೋಡೆಯಿದೆ. ಅಲ್ಲಿಂದ ಮುಂದ ಅರ್ಧವೃತ್ತಾಕಾರದಲ್ಲಿ ಕೋಟೆ ಗೋಡೆಯು ಮುಂದುವರೆಯುತ್ತದೆ.

ಈ ದ್ವಾರದ ಒಳಗಡೆ ಬಲಬದಿಯಲ್ಲಿ ನೇರವಾದ ಕೋಟೆಯ ಗೋಡೆಯಿದೆ. ಈ ಗೋಡೆಯು ಸುಮಾರು ೫೦೦ ಮೀಟರಗಳವರೆಗೆ ಮುಂದುವರೆದು ಕೊನೆಯ ದ್ವಾರದವರೆಗೆ ಇದೆ. ೧೫ ಅಡಿ ಎತ್ತರ

[illegible]

೪ ಅಡಿ ದಪ್ಪನೆಯ ಈ ಗೋಡೆಯನ್ನು ಸ್ಥಳಯವಾಗಿ ಲಭ್ಯವಾಗುವ ಚಿಕ್ಕ ಚಿಕ್ಕ ಕಲ್ಲುಗಳಲ್ಲಿ ನಿರ್ಮಿಸಲಾಗಿದೆ. ಇದರ ನಿರ್ಮಾಣಕ್ಕೆ ಗಾರೆಯನ್ನು ಬಳಸಿರುವುದಿಲ್ಲ. ಅಲ್ಲದೆ ಮಧ್ಯದಲ್ಲಿ ಬುರುಜುಗಳು ಕಾವಲುಗೋಪುರಗಳು ಇರುವುದಿಲ್ಲ. ಕೊನೆಯ ಭಾಗದಲ್ಲಿ ಮಾತ್ರ ಒಂದು ವೃತ್ತಾಕಾರದ ಕೊತ್ತಳವಿದೆ. ಈ ಕೋಟೆಯ ಒಳಭಾಗದಲ್ಲಿ ಕೆಲವು ರಕ್ಷಣಾ ಸಂಬಂಧಿ ಕಟ್ಟಡಗಳ ಅವಶೇಷಗಳು ಕಂಡು ಬರುತ್ತದೆ.

ದ್ವಾರದ ಬಲಬದಿಯಲ್ಲಿರು ಕೋಟೆ ಗೋಡೆಯು ವೃತ್ತಾಕಾರದಲ್ಲಿ ಮುಂದುವರೆದು ಮುಂದೆ ಬರುವ ಹಳ್ಳಿದವರೆಗೂ ಮುಂದುವರೆಯುತ್ತದೆ. ಹಳ್ಳಕ್ಕೆ ಅಂಟಿಕೊಂಡಿರುವಂತೆ ಈರಪ್ಪಯ್ಯನ ದೇವಾಲಯವಿದೆ. ಇಲ್ಲಿಯ ಎರಡು ದೇವಾಲಯಗಳನ್ನು ಆವರಿಸಿಕೊಂಡಂತೆ ಸುತ್ತಲು ರಕ್ಷಣಾ ಗೋಡೆಯು ಅತ್ಯಂತ ಸರಳ ಶೈಲಿಯಲ್ಲಿದೆ. ೧೫ ಅಡಿ ಎತ್ತರ ನಾಲ್ಕು ಅಡಿ ದಪ್ಪನೆಯ ಈ ಗೋಡೆಯು ಚೌಕಾಕಾರದಲ್ಲಿದೆ. ಇದರ ಮುಂಭಾಗದಲ್ಲಿ ಗೋಡೆಯು ನೇರವಾಗಿದ್ದು ಕೇಂದ್ರದಲ್ಲಿ ಪ್ರವೇಶದ್ವಾರವಿದೆ. ಒಳಗಡೆ ೧೫ ಅಡಿ ಅಂತರದಲ್ಲಿ ಒಂದು ಚಿಕ್ಕ ಪ್ರವೇಶ ದ್ವಾರವಿದೆ. ಅದರ ಒಳಭಾಗದಲ್ಲಿ ದಕ್ಷಿಣಕ್ಕೆ ಮುಖ ಮಾಡಿರುವ ದೇವಸ್ಥಾನದ ಪ್ರಮುಖ ಪ್ರವೇಶ ದ್ವಾರವಿದೆ. ಎರಡು ವೃತ್ತಾಕಾರದ ಕಂಬಗಳ ಮಧ್ಯದಲ್ಲಿ ಕಮಾನಿನ ಆಕಾರದ ಈ ಪ್ರವೇಶ ದ್ವಾರವು ಕೆಳಭಾಗಕ್ಕೆ ಚೌಕಾಕಾರದಲ್ಲಿದೆ. ಇದರ ಕಂಬಗಳು ಮೇಲ್ಭಾಗದಲ್ಲಿ ವೃತ್ತಾಕಾರವಾಗಿದ್ದು ಅದರಲ್ಲಿ ಅಲಂಕಾರ ಮಾಡಲಾಗಿದೆ. ಇದರ ಒಳಗಡೆ ಒಂದು ಭಾಗದಲ್ಲಿ ದೇವಾಲಯವಿದೆ. ಅದರ ಮುಂಭಾಗದಲ್ಲಿ ಆರು ಕಮಾನುಗಳಿಂದ ಕೂಡಿರುವ ಮಂಟಪವಿದ್ದೂ, ಅದರ ಕಮಾನಿನ ಎರಡು ಬದಿಯಲ್ಲಿ ಆನೆ, ಸಿಂಹ, ಸಾರಂಗದ ಮೂರ್ತಿ ಶಿಲ್ಪಗಳಿವೆ. ದೇವಾಲಯದ ಹಿಂಭಾಗದಲ್ಲಿ ಹಲವು ಕಂಬಗಳಿಂದ ಕೂಡಿರುವ ಮತ್ತೊಂದು ದೇವಸ್ಥಾನವಿದೆ.

ಈ ದೇವಾಲಯದ ಹಿಂಭಾಗದಲ್ಲಿ ಒಂದು ವಿಶಾಲವಾದ ನೀರಿನ ತಾಣವಿದೆ. ನೈಸರ್ಗಿಕ ಬಂಡೆಯನ್ನು ಕೊರೆದು ಭಾವಿಯನ್ನು ತೊಡಲಾಗಿದೆ. ದೇವಸ್ಥಾನದ ಪೂಜೆಗಾಗಿ ಇಲ್ಲಿಯ ನೀರನ್ನು ಬಳಸಲಾಗುತ್ತಿತು. ಈ ಎಲ್ಲಾ ಕಟ್ಟಡಗಳನ್ನು ಆವರಿಸಿಕೊಂಡಿರುವಂತೆ ವಿಶಾಲವಾದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಇದು ಕೋಟೆಯ ಒಳಗಡೆ ಇರುವ ಮತ್ತೊಂದು ಕೋಟೆಯಂತೆ ಕಂಡು ಬರುತ್ತದೆ. ಇದಕ್ಕೆ ಬಳಸಿರುವ ಕಲ್ಲುಗಳು ಮತ್ತು ಮೇಲ್ಭಾಗದ ತೆನೆಗಳ ರಚನೆಯನ್ನು ನೋಡಿದರೆ ಇದು ಪ್ರಾಚೀನ ಕಾಲದ ಕೋಟೆ ಗೋಡೆಯಾಗಿದೆ. ಅದರಲ್ಲಿ ವಿಶೇಷವಾಗಿ ಹಿಂಭಾಗದ ಗೋಡೆಯು ಅತ್ಯಂತ ಹಳೆಯ ಕಾಲದ ಗೋಡೆಯಂತೆ ಕಂಡು ಬರುತ್ತದೆ. ದೇವಾಲಯದ ಸುತ್ತಲು ಇರುವ ರಕ್ಷಣಾ ಗೋಡೆಯಲ್ಲಿ ಮೂರು ಭಾಗದ ಗೋಡೆಗೆ ಸುಣ್ಣವನ್ನು ಹಚ್ಚಲಾಗಿದೆ. ಆದರೆ ಹಿಂಭಾಗದ ಗೋಡೆಯು ಮಾತ್ರ ಮೂಲ ಶೈಲಿಯಲ್ಲಿದೆ.

ಈರಪ್ಪಯ್ಯನ ದೇವಸ್ಥಾನದ ಹಿಂಭಾಗದಲ್ಲಿ ಅಂದರೆ ಪೂರ್ವ ಭಾಗಕ್ಕೆ ವಿಶಾಲವಾದ ಖಾಲಿ ಸ್ಥಳವಿದೆ. ಇಲ್ಲಿ ಯಾವುದೇ ಕಟ್ಟಡಗಳ ಅವಶೇಷಗಳು ಕಂಡು ಬರುವುದಿಲ್ಲ. ಪೂರ್ವ ದಿಕ್ಕಿಗೆ ಒಂದು ಭಾವಿ ಮತ್ತು ಅದರ ಸಮೀಪದಲ್ಲಿ ಈಶ್ವರ ದೇವಾಲಯ ಹಾಗೂ ಹಲವು ಬಗೆಯ ಮೂರ್ತಿ ಶಿಲ್ಪಗಳನ್ನು

ಹೊಂದಿರುವ ಕಲ್ಲುಗಳನ್ನು ಸಾಲಾಗಿ ಜೋಡಿಸಲಾಗಿದೆ. ಇದರ ಆಗ್ನೇಯ ಭಾಗದಲ್ಲಿ ಹಲವು ಬಗೆಯ ವಸತಿ ನಿಲಯದ ಅವಶೇಷಗಳು ಕಂಡು ಬರುತ್ತವೆ. ಇದನ್ನು ವೀಕ್ಷಿಸಿದರೆ, ಸಿಂಧೂ ನದಿಯ ಪಟ್ಟಣ ರಚನೆಯಂತೆ ಇದು ಕಂಡು ಬರುತ್ತದೆ. ಸುಮಾರು ನೂರಾರು ಸಂಖ್ಯೆಯಲ್ಲಿರುವ ಈ ಅವಶೇಷಗಳಿಂದ ಇಲ್ಲಿ ನಾಗರಿಕ ವಾಸವಿರುವಂತೆ ಕಂಡು ಬರುತ್ತದೆ. ಇದರ ರಚನೆಗೆ ಸಣ್ಣ ಸಣ್ಣ ಕಲ್ಲುಗಳನ್ನು ಬಳಸಲಾಗಿದೆ. ಈ ಭಾಗದಲ್ಲಿ ೧೭ನೆಯ ಶತಮಾನದಲ್ಲಿ ರಚನೆಯಾದ ವೀರ ಆಂಜನೇಯ ಅಥವಾ ಸಂಜೀವ ಆಂಜನೇಯ ದೇವಸ್ಥಾನವಿದೆ. ಇದರ ಮೇಲ್ಭಾಗದಲ್ಲಿ ರಾಮಾಯಣ ಮಹಾಭಾರತಕ್ಕೆ ಸಂಬಂಧಿಸಿದ ಕೆಲವು ಶಿಲ್ಪಿಗಳು ಸುಣ್ಣದ ಕಲ್ಲಿನಲ್ಲಿ ಕೊರೆಯಲಾಗಿದೆ.

ಕೋಟೆಯ ಆಗ್ನೇ ಭಾಗದಲ್ಲಿ ಒಂದು ವೃತ್ತಾಕಾರದ ಕಾವಲುಗೋಪುರವಿದೆ. ಇಡಿ ಕೋಟೆಯ ಒಳಭಾಗದಲ್ಲಿ ಪ್ರಸ್ತುತ ಇದು ಒಂದೆ ಕಾವಲುಗೋಪುರ ಉಳಿದು ಕೊಂಡಿದೆ. ಸು. ೧೦ ಅಡಿ ಎತ್ತರವಾಗಿರುವ ಗೋಪುರದ ಮೇಲಿನ ಭಾಗ ಅವನತಿ ಹೊಂದಿದೆ. ಏಕೆಂದರೆ ತಳಪಾಯವು ಅತ್ಯಂತ ವಿಶಾಲವಾದ್ದರಿಂದ ಇದು ಕನಿಷ್ಠ ೨೦ ರಿಂದ ೨೫ ಅಡಿ ಎತ್ತರವಾಗಿರಬಹುದಾಗಿದೆ. ಈ ಭಾಗದಲ್ಲಿ ಇನ್ನೂ ಕೆಲವೊಂದು ಕಾವಲುಗೋಪುರಗಳು ಅಥವಾ ಕೊತ್ತಳಗಳು ಹಾಗೂ ಬುರುಜುಗಳು ಇದ್ದಿರಬಹುದು. ಏಕೆಂದರೆ ಇದರ ರಚನೆಗೆ ಬಳಸಿರುವ ಕಲ್ಲುಗಳು ರಾಶಿ ರಾಶಿಯಾಗಿ ಬಿದ್ದಿರುತ್ತವೆ.

ನಾಗಾವಿಯ ಕೋಟೆಯು ಕಲ್ಯಾಣಿಯ ಚಾಲುಕ್ಯರಿಂದ ಬಹಮನಿಯ ಸುಲ್ತಾನರು ಮತ್ತು ಸಾಮಂತ ಅರಸರಾದ ಹೈಹಯರ ಕಾಲಕ್ಕೆ ಒಳಪಟ್ಟಿರುವುದರಿಂದ ಇಲ್ಲಿಯ ಕಟ್ಟಡಗಳ ರಚನೆ ಶೈಲಿಯಲ್ಲಿ ವ್ಯತ್ಯಾಸಗಳು ಕಂಡು ಬರುತ್ತವೆ. ಇಲ್ಲಿಂದ ಲಭ್ಯವಾಗಿರುವ ಶಾಸನಗಳು ದೇವಾಲಯ, ಅಗ್ರಹಾರ, ಘಟಿಕ ಸ್ಥಾನದ ಬಗ್ಗೆ ವಿವರಗಳನ್ನು ಹೊಂದಿರುವುದರಿಂದ ಕೋಟೆ, ಕಾವಲುಗೋಪುರ ಸೈನಿಕರ ವಸತಿ ನಿಲಯಗಳು ಹಾಗೂ ಇನ್ನಿತರ ಕಟ್ಟಡಗಳ ಬಗ್ಗೆ ಲಿಖಿತ ದಾಖಲೆಗಳು ಲಭ್ಯವಾಗಿರುವುದಿಲ್ಲ.

೯. ದಂಡೋತಿ ಕೋಟೆ

ದಂಡೋತಿಯು ಚಿತ್ತಾಪುರ ತಾಲೂಕಿನಿಂದ ವಾಯುವ್ಯಕ್ಕೆ ೧೨ ಕಿ.ಮಿ. ದೂರದಲ್ಲಿದೆ. ೧೨ನೆಯ ಶತಮಾನದ ತೆಂಗಳಿ ಶಾಸನದಲ್ಲಿ ಇದನ್ನು "ದಂಡಹತ್ತಿ" ಎಂದು ಕರೆಯಲಾಗಿದೆ. ೧೭-೧೮ನೇಯ ಶತಮಾನದಲ್ಲಿ ನಿಜಾಮನ ಆಳ್ವಿಕೆಗೆ ಒಳಪಟ್ಟ ಈ ಗ್ರಾಮದಲ್ಲಿ ಜಾಗಿರದಾರರು ಅಧಿಕಾರದಲ್ಲಿದ್ದರು. ಗುಲಬರ್ಗಾದ ಖಾಜಾಬಂದೇನವಾಜ ವಂಶಸ್ಥರು ಈ ಪ್ರಾಂತದ ಜಾಗಿರದಾರರಾಗಿದ್ದರು. ಈ ಗ್ರಾಮದ ಪ್ರವೇಶಕ್ಕೆ ಮೂರು ಪ್ರವೇಶ ದ್ವಾರಗಳಿವೆ. ಒಂದು ಪೂರ್ವಕ್ಕೆ ಮುಖ ಮಾಡಿದರೆ ಮತ್ತೊಂದು ದಕ್ಷಿಣಕ್ಕೆ ಇನ್ನೊಂದು ಪಶ್ಚಿಮ ದಿಕ್ಕಿನಲ್ಲಿದೆ ಆದರೆ ಪ್ರಸ್ತುತ ಎರಡು ದ್ವಾರಗಳು ಮಾತ್ರ ಉಳಿದಿವೆ.

ದಂಡೋತಿ ಗ್ರಾಮದ ಸುತ್ತಲು ರಕ್ಷಣಾ ಕೋಟೆ ಇದೆ. ಕೋಟೆ ಮತ್ತು ಕಾವಲುಗೋಪುರಗಳು ಸಂಪೂರ್ಣವಾಗಿ ಅವನತಿ ಹೊಂದಿದ್ದು ಅದರ ತಳಪಾಯ ಕೆಲವು ಭಾಗಗಳಲ್ಲಿ ಕಂಡು ಬರುತ್ತದೆ. ಆಗ್ನೇ

ಭಾಗದಲ್ಲಿ ಎತ್ತರವಾದ ಚೌಕಾಕಾರದ ಗೋಡೆಯು ಕೊತ್ತಳದಂತೆ ನಿರ್ಮಿಸಲಾಗಿದೆ. ಇಲ್ಲಿಂದ ಕೋಟೆ ಗೋಡೆಯು ಪಶ್ಚಿಮ ಭಾಗಕ್ಕೆ ತಿರುಗುತ್ತದೆ. ಮುಂದೆ ಒಂದು ಪ್ರಮುಖ ದ್ವಾರವಿದೆ. ದ್ವಾರದ ನಂತರ ಕೋಟೆ ಗೋಡೆಯು ಸಂಪೂರ್ಣ ನಾಶಗೊಂಡಿದೆ, ಅದರ ಕಲ್ಲುಗಳಿಂದ ಸ್ಥಳಿಯರು ಮನೆಗಳನ್ನು ನಿರ್ಮಿಸಿದ್ದಾರೆ.

ಮೊದಲನೆಯ ಪ್ರವೇಶ ದ್ವಾರವು ಪೂರ್ವಕ್ಕೆ ಮುಖ ಮಾಡಿದ್ದು. ೧೫ ಅಡಿ ಅಗಲ ೨೦ ಅಡಿ ಎತ್ತರದ ಕಮಾನುಗಳಿಂದ ಕೂಡಿದೆ. ಇದರ ಹೊರಭಾಗ ಮತ್ತು ಒಳ ಭಾಗದಲ್ಲಿ ಎರಡು ಕಡೆಯಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳಗಿವೆ. ಈ ದ್ವಾರಕ್ಕೆ ಯಾವುದೆ ಕೊತ್ತಳಗಳು ಇರುವುದಿಲ್ಲ. ಗ್ರಾಮಗಳಲ್ಲಿ ಇರುವ 'ಅಗಸಿ'ಯಂತೆ ಇದು ಸರಳ ಶೈಲಿಯಲ್ಲಿದೆ. ಇಲ್ಲಿಂದ ಕೋಟೆಯು ಎರಡು ಭಾಗದಲ್ಲಿ ಮುಂದುವರೆದಿರುವುದನ್ನು ಕಾಣಬಹುದು. ದಕ್ಷಿಣ ಭಾಗದಲ್ಲಿ ಎರಡನೆಯ ದ್ವಾರವು ಎರಡು ವೃತ್ತಾಕಾರದ ಕೊತ್ತಳದ ಮಧ್ಯದಲ್ಲಿದೆ. ಈ ಕೊತ್ತಳಗಳು ಸ್ಥಳಿಯವಾಗಿ ಲಭ್ಯವಾಗುವ ಸುಣ್ಣದ ಕಲ್ಲಿನಲ್ಲಿ ರಚಿಸಲಾಗಿದೆ. ದ್ವಾರದಿಂದ ಮುಂದೆ ಚಾಚಿಕೊಂಡಿರುವ ಇವುಗಳಿಂದ ದ್ವಾರಕ್ಕೆ ರಕ್ಷಣೆ ದೊರೆಯುತ್ತದೆ.

ದ್ವಾರವು ೧೦ ಅಡಿ ಅಗಲ ೧೫ ಅಡಿ ಎತ್ತರವಾಗಿದ್ದು. ಇದರ ಕಮಾನಿನ ಮೇಲ್ಭಾಗದಲ್ಲಿ ಎರಡು ಬದಿಯಲ್ಲಿ ಪ್ರಾಣಿಗಳ ಶಿಲ್ಪಗಳಿವೆ. ಒಳಗಡೆ ಎರಡು ಬದಿಯಲ್ಲಿ ಎರಡು ಅಂಕಣಗಳಿಂದ ಕೂಡಿದ ಕಾವಲುಗಾರರ ರಕ್ಷಣಾ ಸ್ಥಳಗಳಿವೆ. ದ್ವಾರದ ಮೇಲ್ಭಾಗದಲ್ಲಿ ಬಹಮನಿ ಶೈಲಿಯ ತೆನೆಗಳಿವೆ. ತೆನೆಗಳು ದ್ವಾರದ ಮೇಲೆ ಮತ್ತು ಕೊತ್ತಳಗಳ ಮೇಲೆ ಮಾತ್ರ ನಿರ್ಮಿಸಲಾಗಿದೆ.

ಪೂರ್ವದ ಪ್ರವೇಶ ದ್ವಾರದ ಒಳಗಡೆ ನೇರವಾದ ರಸ್ತೆಯಿದೆ ೨೦೦ ಮೀಟರ ನಂತರ ಉತ್ತರಕ್ಕೆ ಮುಖ ಮಾಡಿರುವ ಜಹಗೀರದಾರರ ವಾಸಸ್ಥಳ ಆರಂಭವಾಗುತ್ತದೆ. ಅತ್ಯಂತ ರಕ್ಷಣಾತ್ಮಕವಾದ ಈ ನಿವಾಸವು ಕೋಟೆ ಗೋಡೆಯಂತೆ ಉದ್ದನೆಯ ಗೋಡೆಯನ್ನು ಹೊಂದಿದೆ. ಇದರ ಕೇಂದ್ರದಲ್ಲಿ ಒಂದು ವೃತ್ತಾಕಾರದ ೩೦ ಅಡಿ ಎತ್ತರದ ಕೊತ್ತಳ ಅಥವಾ ಕಾವಲುಗೋಪುರವಿದೆ. ಮೇಲ್ಭಾಗದಲ್ಲಿ ನಾಲ್ಕು ಕಡೆಯಲ್ಲಿ ಸಣ್ಣ ಸಣ್ಣ ವೀಕ್ಷಣಾಲಯಗಳಿವೆ. ಇದರ ಪ್ರವೇಶ ದ್ವಾರವು ಕೋಟೆ ಗೋಡೆಯ ಒಳಭಾಗದಲ್ಲಿದೆ. ನಂತರ ಗೋಡೆಯು ಸುಮಾರು ೨೦೦ ಮೀಟರ ಉದ್ದವಾಗಿದೆ. ಮೊದಲನೆಯ ದ್ವಾರವು ಸರಳವಾಗಿದ್ದು ಒಳಗಡೆ ಹಲವು ನಿವೇಶನಗಳಿವೆ. ಕೊತ್ತಳದ ನಂತರದ, ಗೋಡೆಯಲ್ಲಿ ೧೦ ಕಮಾನುಗಳಿವೆ. ಕೋಟೆಯ ಗೋಡೆಯಂತೆ ಇದು ತಳಭಾಗದಲ್ಲಿ ದಪ್ಪವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತದೆ. ಸುಮಾರು ೨೫ ಅಡಿ ಎತ್ತರದ ಈ ಗೋಡೆಯ ಮೇಲ್ಭಾಗದಲ್ಲಿ ಎರಡು ಕಡೆಯಲ್ಲಿ ಕಾವಲುಗಾರರಿಗೆ ವೀಕ್ಷಣಾ ಸ್ಥಳಗಳಿವೆ. ಉತ್ತರಕ್ಕೆ ಮುಖ ಮಾಡಿರುವ ಇದರ ಎರಡನೆಯ ಪ್ರವೇಶದ್ವಾರವು ೬ ಅಡಿ ಅಗಲ ೧೦ ಅಡಿ ಎತ್ತರದಲ್ಲಿದೆ. ಇದಕ್ಕೆ ಚೌಕಾಕಾರದ ಕಟ್ಟಿಗೆಯ ದ್ವಾರವಿದೆ. ಅದರ ಕಪಾಟುಗಳು ಕಟ್ಟಿಗೆಯಿಂದ ಮಾಡಲಾಗಿದೆ. ಪ್ರಸ್ತುತವಾಗಿ ಇದು ಸುಸ್ಥಿತಿಯಲ್ಲಿದೆ.

ಈ ದ್ವಾರದ ವಿಶೇಷತೆಯೆಂದರೆ, ಎಡಭಾಗದ ಕಟ್ಟಿಗೆಯ ಕಪಾಟಿನ ಕೆಳಭಾಗದಲ್ಲಿ ೨x೩ ಆಕಾರದ ಚಿಕ್ಕ ದ್ವಾರವಿದೆ. ಇದರ ಮೇಲ್ಭಾಗದಲ್ಲಿ ಉದ್ದನೆಯ ಕಬ್ಬಿಣದ ಪಟ್ಟಿಗಳನ್ನು ಜೋಡಿಸಲಾಗಿದೆ. ಗುಲಬರ್ಗಾ ಕೋಟೆಯ ದ್ವಾರದ ರಚನೆಯಂತೆ ಇದು ಕಂಡು ಬರುತ್ತದೆ. ಆದರೆ ಈ ಕಬ್ಬಿಣದ ಪಟ್ಟಿಗಳು ಮೀನಿನ ಆಕಾರದಂತೆ ರಚಿಸಲಾಗಿದೆ. ಇದರ ಒಳಗಡೆ ಎರಡು ಬದಿಯಲ್ಲಿ ೧೫ ಅಡಿ ಉದ್ದನೆಯ ಸ್ಥಳದಲ್ಲಿ ಕಾವಲುಗಾರರ ಸ್ಥಳಗಳಿವೆ. ಬಲಬದಿಯಲ್ಲಿ ಹಾಗೂ ಇದರ ಹಿಂಭಾಗದಲ್ಲಿ ಕೆಲವು ಕಟ್ಟಡಗಳ ಅವಶೇಷಗಳಿವೆ ಇವುಗಳನ್ನು ಹೊರತು ಪಡಿಸಿ, ಮತ್ತೆ ಯಾವ ಕಟ್ಟಡಗಳು ಉಳಿದುಕೊಂಡಿರುವದಿಲ್ಲ. ಸುಮಾರು ೬ ಎಕರೆ ಪ್ರದೇಶದಲ್ಲಿ ಇರುವ ರಕ್ಷಣಾಕಟ್ಟಡಗಳು ಸಂಪೂರ್ಣವಾಗಿ ಹಾಳುಬಿದ್ದಿದೆ. ಕೆಲಭಾಗಗಳಲ್ಲಿ ಎತ್ತರವಾದ ಮಣ್ಣಿನ ದಿಬ್ಬೆಗಳಿವೆ. ರಕ್ಷಣಾಕಟ್ಟಡಗಳು ನೆಲ ಸಮವಾದ ನಂತರ ಅದರ ಕಲ್ಲು ಮಣ್ಣಿನಿಂದ ಈ ರೀತಿ ಎತ್ತರವಾದ ಮಣ್ಣಿನ ದಿನ್ನೆಗಳಾಗಿವೆ. ದಂಡೋತಿಯಲ್ಲಿ ಕಂಡು ಬರುವ ಪ್ರವೇಶ ದ್ವಾರಗಳು, ಕೊತ್ತಳಗಳು, ಕಾವಲುಗಾರರ ಗೋಪುರಗಳು ಮತ್ತು ಕೋಟೆಯಿಂದ ಇದೊಂದು ರಾಜಕೀಯ ಪ್ರಮುಖ ಸ್ಥಳವಾಗಿರುವಂತೆ ಕಂಡು ಬರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ದಾಖಲೆಗಳು ಲಭ್ಯವಾಗುವುದಿಲ್ಲ.

೧೦. ಅಳ್ಳೊಳ್ಳಿ ಕೋಟೆ:

ಚಿತ್ತಾಪುರದಿಂದ ದಕ್ಷಿಣಕ್ಕೆ ೩೦ ಕಿ.ಮಿ. ದೂರದಲ್ಲಿ ಈ ಗ್ರಾಮವಿದೆ. ಕರದಾಳದಿಂದ ಸನ್ನತಿಯ ಮಾರ್ಗದಲ್ಲಿರುವ ಇದನ್ನು ಸ್ಥಳಿಯರು 'ಅಳ್ಳಹಳ್ಳಿ', 'ಎಳ್ಳಹಳ್ಳಿ' ಎಂದು ಕರೆಯುತ್ತಾರೆ. ಇಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ಹಲವು ಅವಶೇಷಗಳು ಲಭ್ಯವಾಗಿವೆ. ಈ ಗ್ರಾಮದ ಸುತ್ತಲು ಕ್ರಿ.ಶ. ೮ ರಿಂದ ೧೦ನೇ ಶತಮಾನದಲ್ಲಿ ನಿರ್ಮಿಸಿರುವ ಕೋಟೆಯಿದೆ. ಗ್ರಾಮದ ಸುತ್ತಲು ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯ ಒಳಗಡೆ ಹಳೆಯ ಗ್ರಾಮ ಮತ್ತು ಕೋಟೆಯ ಹೊರಗಡೆ ಹೊಸ ಗ್ರಾಮವಿದೆ.

ಕೋಟೆಗೆ ಎರಡು ಪ್ರಮುಖ ದ್ವಾರಗಳಿವೆ, ಪೂರ್ವಕ್ಕೆ ಮುಖ ಮಾಡಿಕೊಂಡಿರುವ ದ್ವಾರವು ೧೦ ಅಡಿ ಅಗಲ ೧೫ ಅಡಿ ಎತ್ತರವಾಗಿದೆ ಈ ದ್ವಾರವು ಕೆಲವು ಭಾಗಗಳು ಮಾತ್ರ ಉಳಿದು ಕೊಂಡಿದ್ದು ಇತರ ಭಾಗವು ಅವನತಿ ಹೊಂದಿದೆ. ಗ್ರಾಮಸ್ಥರು ಮೂಲ ರಚನೆಯನ್ನು ತೆಗೆದು ಅದನ್ನು 'ಅಗಸಿ'ಯಂತೆ ಪುನರ್ ನಿರ್ಮಿಸಿದ್ದಾರೆ. ಇದರ ಎರಡು ಬದಿಯಿಂದ ಕೋಟೆಯ ಗೋಡೆಯು ಮುಂದುವರೆಯುತ್ತದೆ. ಇದಕ್ಕೆ ಸ್ಥಳಿಯರು ಬಡಿಗೇರ ಅಗಸಿ ಎಂದು ಕೆರಯುತ್ತಾರೆ. ಏಕೆಂದರೆ ಇದರ ಸಮೀಪದಲ್ಲಿ ಬಡಿಗತನದ ಕೆಲಸ ಮಾಡುವವರ ಮನೆಗಳಿವೆ. ಗ್ರಾಮದ ಸುತ್ತಲು ನಿರ್ಮಿಸಿರುವ ಈ ಕೋಟೆಯ ಮಧ್ಯದಲ್ಲಿ ಕೆಲವು ಬುರುಜುಗಳಿವೆ. ಅಲ್ಲಲ್ಲಿ ಕೋಟೆಯ ಎತ್ತರ ಮತ್ತು ದಪ್ಪ ಸಮನಾಗಿಲ್ಲ. ಇದನ್ನು ಸ್ಥಳಿಯವಾಗಿ ದೊರೆಯುವ ಕೆಂಪೂ ವರ್ಣದ ಒರಟು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ತಳಭಾಗದ ರಚನೆಗೆ ದಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಮೇಲೆ ಹೋದಂತೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಬಳಸಲಾಗಿದೆ. ಉತ್ತರ

[illegible]

[illegible]

[illegible]

ಭಾಗದ ಕೋಟೆಯ ಮಧ್ಯದಲ್ಲಿ ಕೆಲವು ಅರ್ಧವೃತ್ತಾಕಾರದ ಕಾವಲುಗೋಪುರಗಳಿವೆ. ಪಶ್ಚಿಮ ಭಾಗಕ್ಕೆ ಒಂದು ಚಿಕ್ಕ ದ್ವಾರವಿದೆ. ಇದನ್ನು ಸ್ಥಳಿಯರು 'ದಿಡ್ಡಿ' ಎಂದು ಕರೆಯುತ್ತಾರೆ. ಇದರ ಹೊರಭಾಗದ ಎಡಬದಿಯಲ್ಲಿ ವಿಶಾಲವಾದ ವೃತ್ತಾಕಾರದ ೧೫ ಅಡಿ ಎತ್ತರದ ಕೊತ್ತಳವಿದೆ. ಕಲಬುರ್ಗಿ ಜಿಲ್ಲೆಯ ಯಾವುದೆ ಕೋಟೆಯ "ದಿಡ್ಡಿ ಬಾಗಿಲು" ಅಥವಾ ಗುಪ್ತ ದ್ವಾರದ ಮುಂದೆ ಕೊತ್ತಳಗಳು ಇರುವುದಿಲ್ಲ.

ಅಳ್ಳೊಳಿ ಗ್ರಾಮದ ಸುತ್ತಲು ಕೋಟೆ ನಿರ್ಮಿಸಿರುವುದನ್ನು ನೋಡಿದರೆ ಇದು ಪ್ರಾಚೀನ ಕಾಲದ ಮಹತ್ವದ ಸ್ಥಳ ಎಂದು ತಿಳಿದು ಬರುತ್ತದೆ. ಈ ಕೋಟೆಯ ಕುರಿತು ಯಾವುದೆ ಲಿಖಿತ ದಾಖಲೆಗಳು ಇರುವುದಿಲ್ಲ. ಚಿತ್ತಾಪೂರ ತಾಲೂಕಿನಲ್ಲಿ ಬರುವ ಹಲವು ಗ್ರಾಮಗಳಲ್ಲಿ ಕೋಟೆಗಳು ಅಥವಾ ಹುಡೆವುಗಳು, ಅಥವಾ ದೇಶಮುಖ ದೇವಡಿಗಳು ಕಂಡು ಬರುತ್ತವೆ. ಇಡಿ ಗುಲಬರ್ಗಾ ಜಿಲ್ಲೆಯಲ್ಲಿ ಇಷ್ಟೊಂದು ಪ್ರಮಾಣದ ರಕ್ಷಣಾ ವಾಸ್ತುಶಿಲ್ಪಗಳು ಮತ್ತೆ ಜಿಲ್ಲೆಯ ಯಾವ ತಾಲೂಕಿನಲ್ಲಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಂಡಾಗ ಚಿತ್ತಾಪೂರ ತಾಲೂಕಿನಲ್ಲಿ ಅತ್ಯಂತ ಫಲವತ್ತಾದ ಭೂಮಿ ಇದೆ. ಬೇಸಾಯದಿಂದ ಪ್ರತಿ ಗ್ರಾಮಗಳ ಆರ್ಥಿಕವಾಗಿ ಬಲಿಷ್ಠತೆಯನ್ನು ಹೊಂದಿದವು. ತಮ್ಮ ಸಂಪತ್ತಿನ ರಕ್ಷಣೆಗಾಗಿ ಗ್ರಾಮ ಕೋಟೆಗಳನ್ನು ಮತ್ತು ಇತರ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳನ್ನು ನಿರ್ಮಿಸಿಕೊಂಡರು.

೧೧. ಕೊಲ್ಲೂರು ಕೋಟೆ:

ಚಿತ್ತಾಪೂರ ತಾಲೂಕ ಕೇಂದ್ರದಿಂದ ನೈರುತ್ಯಕ್ಕೆ ೪೦ ಕಿ.ಮಿ., ನಾಲ್ವಾರದಿಂದ ೭ ಕೀ.ಮಿ. ದೂರದಲ್ಲಿರುವ ಈ ಗ್ರಾಮವು ಭೀಮಾನದಿಯ ದಂಡೆ ಮೇಲಿದೆ. ಚಾರಿತ್ರಿಕ ಮಹತ್ವದ ಸ್ಥಳವಾದ ಕೊಲ್ಲೂರು ಶಾಸನಗಳಲ್ಲಿ 'ಕೊರಲೂರ' ಎಂದು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೧-೧೨ನೆಯ ಶತಮಾನದಲ್ಲಿ ಇದು ರಾಜ್ಯಧಾನಿಯಾಗಿರುವಂತೆ ಕಂಡು ಬರುತ್ತದೆ. ಇಲ್ಲಿರುವ ಹಲವು ದೇವಾಲಯಗಳನ್ನು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರುವುದರಿಂದ ಇಲ್ಲಿರುವ ಕೋಟೆಯನ್ನು ಸಹ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಏಕೆಂದರೆ ಕೋಟೆಯ ನಿರ್ಮಾಣದಲ್ಲಿ ಕಲ್ಯಾಣಿಯ ಚಾಲುಕ್ಯರ ಹಲವು ಲಕ್ಷಣಗಳು ಕಂಡು ಬರುತ್ತವೆ. ಕಲ್ಯಾಣಿ ಚಾಲುಕ್ಯರ ಅರಸ ಜಗದೇಕ ಮಲ್ಲನ ಮಾಹಾಮಂಡಲೇಶ್ವರನಾದ ರೇಚರಸನು ಇಲ್ಲಿಯ ಪ್ರಾಂತಾಧಿಕಾರಿಯಾಗಿದ್ದು, ಇತನು ಕೊಲ್ಲೂರವನ್ನು ತನ್ನ ಕೇಂದ್ರ ಸ್ಥಳವನ್ನಾಗಿ ಮಾಡಿಕೊಂಡು ಅವಶ್ಯವಿರುವ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳನ್ನು ರಚಿಸಿದ.

ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಅಂತ್ಯಗೊಂಡ ನಂತರ ಈ ಭಾಗದಿಂದ ಕಲಚೂರಿ ಮನೆತನದ ಸೇವಿ ದೇವನು, ಚೇದಿ ವಂಶದ ಮಾಹಾಮಂಡಲಿಕೇಶ್ವರನಾದ ಅಲ್ಲ ಹುಲಿದೇವನು ಸಗರ ೫೦೦ರನ್ನು ಆಳುತ್ತಿದ್ದನು. ಇವರ ಕಾಲದಲ್ಲಿ ದೇವಾಲಯದ ನಿರ್ಮಿಸಲಾಯಿತು. ಆದ್ದರಿಂದ ಈ ಅವಧಿಯಲ್ಲಿ ಹಲವು ರಕ್ಷಣಾ ಕಟ್ಟಡಗಳು ರಚನೆಗೊಂಡವು. ಕ್ರಿ.ಶ. ೧೧೮೯ರ ಶಾಸನದಲ್ಲಿ ಕಲ್ಯಾಣಿ ಚಾಲುಕ್ಯ ಅರಸ

ನಾಲ್ಕನೆಯ ಸೋಮೇಶ್ವರನ ಕಾಲದಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ಕಲಚೂರಿಗಳು ನಾಶಗೊಳಿಸಿರುವ ವಿಷಯವನ್ನು ಕುರಿತು ಉಲ್ಲೇಖಿಸುತ್ತದೆ. ಅಲ್ಲದೆ ಬರ್ಮದೇವ ದಂಡನಾಯಕನು ಮಹಾ ಅಮತ್ಯನಾಗಿದ್ದಾಗ ಮಹಾಮಂಡಳೇಶ್ವರನಾದ ಅಲ್ಲಹುಲಿದೇವರಸನು ಸಗರ ೫೦೦ರ ರಾಜ್ಯಧಾನಿ ಕೊಲ್ಲೂರನ್ನಾಗಿಸಿಕೊಂಡು ಅಲ್ಲಿ ಕೋಟೆಯನ್ನು ಪುನರ್‌ನಿರ್ಮಿಸಿ ಆಳುತ್ತಿದ್ದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಶಾಸನದಲ್ಲಿ ಕನ್ನೇಶ್ವರ ದೇವಸ್ಥಾನಕ್ಕೆ ಧಾನ ಬಿಟ್ಟ ವಿಷಯವನ್ನು ಹಾಗೂ ರಾಜ್ಯದ ಆಧಿನದಲ್ಲಿ ಬರುವ ಪ್ರಮುಖ ಪಟ್ಟಣಗಳ ಕುರಿತು ವಿವರಣೆ ಇದೆ.

ಭೀಮಾ ನದಿಯ ಎಡದಂಡೆಯ ಮೇಲೆ ಬರುವ ಈ ಗ್ರಾಮವು ಭದ್ರವಾದ ಕೋಟೆಯನ್ನು ಹೊಂದಿದೆ. ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಗಿದ್ದು, ಮತ್ತೆ ಕಲಚೂರಿಯರ ಕಾಲಕ್ಕೆ ಪುನರ್ ನಿರ್ಮಿಸಲಾಗಿದೆ. ಪಶ್ಚಿಮ ಭಾಗದಲ್ಲಿ ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ಇದರ ಪ್ರವೇಶ ದ್ವಾರವಿದೆ. ಸುಮಾರು ೨೫ ಅಡಿ ಎತ್ತರವಿರುವ ಈ ಕೊತ್ತಳಗಳು ಯಾವುದೆ ಕಮಾನಿನ ಆಕೃತಿಯನ್ನು ಹೊಂದಿರುವುದಿಲ್ಲ. ಆದರೆ ಇದರ ಹಿಂಭಾಗದಲ್ಲಿ ಕೊತ್ತಳಗಳಿಗೆ ಅಂಟಿಕೊಂಡಿರುವಂತೆ ಚೌಕಾಕಾರದ ಕಾವಲುಗೋಪುರಗಳಿವೆ. ಸುಮಾರು ೧೦ ಅಡಿ ಅಗಲ ೧೫ ಅಡಿ ಎತ್ತರವಾಗಿರುವ ಈ ಕೊತ್ತಳಗಳ ಮೇಲ್ಭಾಗ ಸಂಪೂರ್ಣವಾಗಿ ನಾಶಗೊಂಡಿದೆ. ಈ ಎರಡು ಬಗೆಯ ಕೊತ್ತಳಗಳನ್ನು ವೀಕ್ಷಿಸಿದರೆ ಕೋಟೆಯು ಮೊದಲು ಚೌಕಾಕಾರದ ಮಧ್ಯದ ಪ್ರವೇಶ ದ್ವಾರವನ್ನು ಹೊಂದಿತ್ತು ನಂತರ ಕೋಟೆಯನ್ನು ಪುನರ್ ನಿರ್ಮಿಸಿದಾಗ ಅವುಗಳ ಮುಂಭಾಗದಲ್ಲಿ ವೃತ್ತಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಆದ್ದರಿಂದ ಕಲ್ಯಾಣಿ ಚಾಲುಕ್ಯರ ಮೂಲ ಕೋಟೆಯನ್ನು ನಾಶಪಡಿಸಿದ ಕಲಚೂರಿಯರು ಈ ರೀತಿಯಾಗಿ ಕೋಟೆಯ ಪ್ರಮುಖ ದ್ವಾರವನ್ನು ಪುನರ್ ನಿರ್ಮಿಸಿರುವಂತೆ ಕಂಡು ಬರುತ್ತದೆ.

ದ್ವಾರದ ಹಿಂಭಾಗದಲ್ಲಿರುವ ಚೌಕಾಕಾರದ ಕೊತ್ತಳಗಳನ್ನು ೬ ಅಡಿ ಎತ್ತರದ ಚೌಕಾಕಾರದ ಕಟ್ಟೆಯ ಮೇಲೆ ನಿರ್ಮಿಸಲಾಗಿದೆ. ಎರಡು ಬದಿಯಲ್ಲಿರುವ ಕೊತ್ತಳಗಳ ಮಧ್ಯದಲ್ಲಿ ಕಾವಲುಗಾರರಿಗೆ ಇಲ್ಲಿ ರಕ್ಷಣಾ ಸ್ಥಳವಿದೆ. ೧೦ ಅಡಿ ಎತ್ತರದ ಮೇಲೆ ಚೌಕಾಕಾರದಲ್ಲಿ ವಿಶಾಲವಾದ ಸ್ಥಳವಿದೆ. ಅದರ ಸುತ್ತಲು ೬ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಗೋಡೆಯ ಸುತ್ತಲು ವಿವಿಧ ಬಗೆಯ ವೀಕ್ಷಣಾರಂಧ್ರಗಳಿವೆ. ಒಳಗಡೆಯಿಂದ ಮೇಲೆ ಹತ್ತಲು ಮೆಟ್ಟಿಲುಗಳು ಹಾಗೂ ಇಲ್ಲಿಂದ ಮುಂಭಾಗದದ ವೃತ್ತಾಕಾರದ ಕಾವಲುಗೋಪುರಕ್ಕೆ ಹೋಗಲು ಮಾರ್ಗವಿದೆ. ಹಿಂಭಾಗದಲ್ಲಿರುವ ಚೌಕಾಕಾರದ ಕೊತ್ತಳಗಳಿಗೆ ಅಂಟಿಕೊಂಡಿರುವಂತೆ ಕೋಟೆ ಗೋಡೆಯು ಮುಂದುವರೆಯುತ್ತದೆ. ಕೋಲ್ಲೂರಿನ ಕೋಟೆಯು ಚೌಕಾಕಾರ ಅಥವಾ ವೃತ್ತಾಕಾರವಾಗಿರದೆ ಅವಶ್ಯವಿರುವ ಕಡೆಯಲ್ಲಿ ಹೊರ ಭಾಗಕ್ಕೆ ಚಾಚಿಕೊಂಡಿದೆ. ಕೋಟೆಯ ಪುನರ್ ರಚನೆಯ ಕಾಲದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಗಿದೆ.

ಒಂದು ವೇಳೆ ನದಿಯ ಪ್ರವಾಹ ಬಂದಾಗ ನೀರಿನ ಒತ್ತಡಕ್ಕೆ ಕೋಟೆ ಗೋಡೆಯು ಹಾಳಾಗದಂತೆ ಅಥವಾ ನೀರು ಗ್ರಾಮದ ಒಳಗಡೆ ಪ್ರವೇಶಿಸಿದಂತೆ ಒಳಗಡೆಯ ಕಟ್ಟಡಗಳು ಎತ್ತರವಾದ ಸ್ಥಳದಲ್ಲಿ ಕಟ್ಟಲಾಗಿದೆ. ಅದರ ಗೋಡೆಗೆ ಅಂಟಿ ಕೊಂಡಿರುವಂತೆ ಯಾವುದೆ ನಾಗರಿಕ ಕಟ್ಟಡಗಳು ಇರುವುದಿಲ್ಲ. ಇಲ್ಲಿ ರಕ್ಷಣೆಗೆ ಸಂಬಂಧಿಸಿದಂತೆ ಕಾವಲುಗಾರರ ಸ್ಥಳಗಳು, ಕಾವಲುಗೋಪುರಗಳು ಹಾಗೂ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಈ ಭಾಗದ ಕೋಟೆ ಗೋಡೆಯಲ್ಲಿ ಮೂರು ದ್ವಾರಗಳಿವೆ. ಒಂದು ವೇಳೆ ಪ್ರವಾಹದ ಮಾಹಿತಿ ದೊರೆತ ತಕ್ಷಣ ಬಾಗಿಲುಗಳಿಗೆ ಭದ್ರವಾದ ಕಲ್ಲುಗಳಿಂದ ಗೋಡೆಯನ್ನು ನಿರ್ಮಿಸಿ ನೀರು ಒಳಗಡೆ ಬರದಂತೆ ಕ್ರಮಗೈಗೊಳ್ಳುವಂತೆ ಈ ದ್ವಾರಗಳನ್ನು ಸಂಪೂರ್ಣವಾಗಿ ಕೋಟೆಯ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಆಯತಾಕಾರದಲ್ಲಿರುವ ಕಲ್ಲುಗಳು ತಳಭಾಗದಲ್ಲಿ ದಪ್ಪವಾಗಿದ್ದು ಮೇಲೆ ಹೋದಂತೆ ಚಿಕ್ಕ ಚಿಕ್ಕ ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯ ಮೇಲ್ಭಾಗದಲ್ಲಿ ತೆನೆಗಳು ಕಂಡು ಬರುವುದಿಲ್ಲ.

ಕೋಟೆಯ ಒಳಗಡೆ ಎರಡು ಕಾವಲುಗೋಪುರಗಳಿವೆ. ಒಂದು ನದಿಯ ತೀರದಲ್ಲಿದ್ದಾರೆ, ಮತ್ತೊಂದು ಪ್ರವೇಶ ದ್ವಾರದ ಸಮೀಪದಲ್ಲಿದೆ. ವೃತ್ತಾಕಾರದಲ್ಲಿರುವ ಈ ಕಾವಲುಗೋಪುರಗಳಲ್ಲಿ ಒಂದು ಸಂಪೂರ್ಣವಾಗಿ ನಾಶ ಹೊಂದಿದ್ದು ಕೇವಲ ತಳಭಾಗ ಮಾತ್ರ ಉಳಿದುಕೊಂಡಿದೆ. ನದಿಯ ಸಮೀಪದಲ್ಲಿರುವ ಕಾವಲುಗೋಪುರವು ೩೦ ಅಡಿ ಎತ್ತರವಾಗಿದ್ದು. ಅದರ ಮೇಲಿನ ಭಾಗವು ನಾಶ ಹೊಂದಿದೆ. ಇದಕ್ಕೆ ಮೇಲೆ ಹತ್ತಲು ಮೆಟ್ಟಿಲುಗಳ ಹಾಗೂ ಕೆಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳವಿದೆ.

ಕೋಟೆಯ ಸುತ್ತಲು ಪ್ರತಿ ೧೦೦ ರಿಂದ ೧೫೦ ಅಡಿ ಅಂತರದಲ್ಲಿ ಒಂದು ವೃತ್ತಾಕಾರದ ಬುರುಜುಗಳಿವೆ. ಇವುಗಳು ಕೋಟೆ ಗೋಡೆಯಿಂದ ಸಂಪೂರ್ಣವಾಗಿ ಹೊರಭಾಗಕ್ಕೆ ಚಾಚಿಕೊಂಡಿವೆ. ಕೋಟೆಯ ಒಳಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಅದರ ಮೇಲ್ಭಾಗದಲ್ಲಿ ತೋಪುಗಳ ನಿರ್ಮಾಣಕ್ಕೆ ವಿಶೇಷ ಸ್ಥಳವಿದೆ. ಆದರೆ ಯಾವುದೇ ಗೋಪುರಗಳ ಮೇಲೆ ತೋಪುಗಳು ಇರುವುದಿಲ್ಲ. ಕೋಟೆಯ ಉತ್ತರ ಭಾಗದ ಗೋಡೆಯು ಅತ್ಯಂತ ಭದ್ರವಾದ ಗೋಡೆಯನ್ನು ಹೊಂದಿದೆ. ನದಿಯಿಂದ ಸುಮಾರು ಎತ್ತರದಲ್ಲಿ ಗೋಡೆಯನ್ನು ನಿರ್ಮಿಸಲಾಗಿದೆ. ನದಿಯು ಯಾವ ಆಕಾರದಲ್ಲಿ ಮುಂದುವರೆಯುತ್ತದೆಯೊ ಅದೆ ರೀತಿ ಕೋಟೆಯು ನಿರ್ಮಿಸಲಾಗಿದೆ. ಈ ಭಾಗದ ಗೋಡೆಯ ನಿರ್ಮಾಣದಲ್ಲಿ ವಿಶೇಷ ಮುನ್ನೆಚ್ಚರಿಕೆಯ ಕ್ರಮವನ್ನು ಅಳವಡಿಸಲಾಗಿದೆ. ಸುಮಾರು ೧೦ ಬುರುಜು ಈ ಭಾಗದಲ್ಲಿ ನಿರ್ಮಿಸಲಾಗಿದೆ. ಅಲ್ಲದೆ ಈ ಗೋಡೆಯಲ್ಲಿ ಒಂದು ಪ್ರಮುಖ ದ್ವಾರ ಹಾಗೂ ಎರಡು ಚೌಕಾಕಾರದ ದಿಡ್ಡಿ ಬಾಗಿಲುಗಳು ಇವೆ. ಗ್ರಾಮಸ್ಥರು ಈ ದ್ವಾರಗಳಿಂದ ನದಿಯ ನೀರನ್ನು ಹೊತ್ತುಕೊಂಡು ಹೋಗುತ್ತಾರೆ. ದ್ವಾರಗಳ ಮುಂಭಾಗದಲ್ಲಿ ವಿಶಾಲವಾದ ನೈಸರ್ಗಿಕ ಕಲ್ಲಿನ ಚಪ್ಪಡಿ ಇದೆ. ವಿವಿಧ ಹಂತದಲ್ಲಿ ಚಾಚಿಕೊಂಡಿರುವ ಕಲ್ಲಿನ ಚಪ್ಪಡಿಯನ್ನು ಕೊರೆದು ಮೆಟ್ಟಿಲುಗಳನ್ನು ಮಾಡಲಾಗಿದೆ. ಇಂದಿಗೂ

ಗ್ರಾಮದ ಎಲ್ಲಾ ಜನ ಹಾಗೂ ಜಾನವಾರುಗಳು ಈ ನದಿಯ ನೀರಿನ ಮೇಲೆ ಅವಲಂಬನೆಯಾಗಿವೆ. ಈ ಕುರಿತು ಛಾಯಾಚಿತ್ರಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ದ್ವಾರಗಳ ಒಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾತ್ಮಕ ಸ್ಥಳವಿದೆ.

ಭೀಮಾ ನದಿಯ ದಂಡೆಯ ಮೇಲೆ ನಿರ್ಮಿಸಿರುವ ಈ ಕೋಟೆಯನ್ನು ಜಲದುರ್ಗವೆಂದು ಕರೆಯಲಾಗಿದೆ. ಕೋಟೆಯು ನದಿಯ ಪ್ರವಾಹದಿಂದ ಒಳಗಡೆ ಇರುವ ನಗರಕ್ಕೆ ಹಾಗೂ ಕೋಟೆ ಗೋಡೆಗೆ ಯಾವುದೆ ಹಾನಿ ಉಂಟಾಗದಂತೆ ಎಲ್ಲಾ ಬಗೆಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಅಳವಡಿಸಲಾಗಿದೆ. ಇದರಲ್ಲಿ ವಿಶೇಷವೆಂದರೆ ಕೊತ್ತಳಗಳ ನಿರ್ಮಾಣ.

ಕೋಟೆಯ ಪ್ರಮುಖ ದ್ವಾರದ ದಕ್ಷಿಣ ಭಾಗದ ಗೋಡೆಯು ಸಹ ಅತ್ಯಂತ ಭದ್ರವಾಗಿದೆ. ಸುಮಾರು ೨೫ ಅಡಿ ಎತ್ತರವಿರುವ ಈ ಗೋಡೆಯು ಎರಡು ಹಂತದಲ್ಲಿ ನಿರ್ಮಿಸಲಾಗಿದೆ. ಕಾವಲುಗಾರರಿಗೆ ಮೇಲೆ ಸುತ್ತಾಡಲು ಅನುಕೂಲವಾಗುವಂತೆ ಗೋಡೆಯನ್ನು ರಚಿಸಲಾಗಿದೆ. ಈ ಭಾಗದ ಕೊತ್ತಳಗಳು ಅತ್ಯಂತ ವಿಶಾಲವಾಗಿದ್ದು, ಅವುಗಳ ಮೇಲ್ಭಾಗದಲ್ಲಿ ಅಂಬು ಗಿಂಡಿಗಳನ್ನು ಬಿಡಲಾಗಿದೆ. ಪ್ರತಿಯೊಂದು ಬುರುಜುಗಳಲ್ಲಿ ಎರಡು ಅಂಬು ಗಿಂಡಿಗಳಿವೆ. ಇವುಗಳು ಹುಡೆವುಗಳ ಮೇಲ್ಬಾಗದ ರಚನೆಯನ್ನು ಹೋಲುತ್ತವೆ. ಕಾವಲುಗಾರರಿಗೆ ಮೇಲ್ಭಾಗದಲ್ಲಿ ವಿಶೇಷ ರಕ್ಷಣಾ ಸ್ಥಳವಿದೆ. ಹೊರ ಭಾಗದಲ್ಲಿ ಚಾಚಿಕೊಂಡಿರುವ ಈ ಅಂಬು ಗಿಂಡಿಯ ಒಳಭಾಗದಲ್ಲಿ ಸೈನಿಕರಿಗಾಗಿ ಸ್ಥಳವಿದೆ.

ಪ್ರಸ್ತುತ ಕೊಲ್ಲೂರು ಗ್ರಾಮದ ಒಳಗಡೆ ಯಾವುದೆ ಪ್ರಾಚೀನ ಕಾಲದ ಅರಮನೆ, ನೀರಿನ ಆಶ್ರಯ ತಾಣಗಳು, ಅಥವಾ ಎತ್ತರವಾದ ಕಾವಲುಗೋಪುರಗಳು ಕಂಡು ಬರುವುದಿಲ್ಲ. ಚಾಲುಕ್ಯರು ಮತ್ತು ಕಲಚೂರಿಯರ ಕಾಲಕ್ಕೆ ರಾಜ್ಯಧಾನಿಯ ಪಟ್ಟಣವಾದ ಈ ಗ್ರಾಮದಲ್ಲಿ ಹೆಚ್ಚಿನ ಸ್ಮಾರಕಗಳು ದೊರೆಯಬೇಕು. ಆದರೆ ಸ್ಥಳಿಯರ ಹಾಗೂ ಸರಕಾರದ ನಿರ್ಲಕ್ಷ್ಯದಿಂದ ಒಳಗಡೆಯ ಎಲ್ಲಾ ಕಟ್ಟಡಗಳು ನಾಶ ಹೊಂದಿರಬಹುದು. ಭೂ ಉತ್ಖನನ ಕಾರ್ಯ ಕೈಗೊಂಡರೆ ಇದಕ್ಕೆ ಸಂಬಂಧಿಸಿದ ಅವಶೇಷಗಳು ದೊರೆಯುವ ಸಾಧ್ಯತೆಗಳಿವೆ.

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡಿರುವ ರಾಮೇಶ್ವರ ದೇವಾಲಯ ಬಸವೇಶ್ವರ ದೇವಾಲಯ, ಶಿವಲಿಂಗಗಳು ಇದೆ. ಕಲಚೂರಿಯರ ಕಾಲದ ಗೊಗ್ಗೇಶ್ವರ ದೇವಾಲಯ, ರಾಮೇಶ್ವರ ದ್ವಿಕೂಟ ದೇವಾಲಯಗಳ ಜೊತೆಗಯಲ್ಲಿ ಮಲ್ಲಿಕಾರ್ಜುನ, ಕಟ್ಟೆಬಸವಣ್ಣಾ, ಕೊಟ್ರಬಸವಣ್ಣಾ, ಶರಣಬಸವೇಶ್ವರ, ಹನುಮಂತ, ದೇವಮ್ಮಾ, ದುರ್ಗವ್ವ ಹಾಗೂ ಇತರ ದೇವಾಲಯಗಳಿವೆ.

೧೨. ಗುಲಬರ್ಗಾ ಕೋಟೆ

ಗುಲಬರ್ಗಾ ನಗರದ ಕೇಂದ್ರ ಭಾಗದಲ್ಲಿರುವ ಕೋಟೆಯನ್ನು ವಾರಂಗಲ್ಲಿನ ಕಾಕತೀಯರ ಸಾಮಂತ ಅರಸನಾದ ರಾಜಾ ಗುಲ್‌ಚಂದ (ಅನ್ನಪೋಚರೆಡ್ಡಿ) ಕಟ್ಟಿಸಿದನೆಂದು ಉಲ್ಲೇಖವಿದೆ. ಈ ಕುರಿತು

[illegible]

ಯಾವುದೆ ದಾಖಲೆಗಳು ಲಭ್ಯವಾಗಿಲ್ಲ. ಕ್ರಿ.ಶ. ೧೩೪೭ರಲ್ಲಿ ದೌಲತಾಬಾದನಲ್ಲಿ ಅಸ್ತಿತ್ವಕ್ಕೆ ಬಂದ ಬಹಮನಿ ಸಾಮ್ರಾಜ್ಯದ ಸ್ಥಾಪಕನಾದ ಅಲ್ಲಾವುದ್ದೀನ್ ಬಹಮನ್ ಶಹನು (೧೩೪೭-೧೩೫೮), ತನ್ನ ರಾಜ್ಯಧಾನಿಯನ್ನು ಹಂತ ಹಂತವಾಗಿ ದೌಲತಾಬಾದನಿಂದ ಗುಲಬರ್ಗಾಕ್ಕೆ ವರ್ಗಾಯಿಸಿದ[೪೫]. ಆರಂಭದಲ್ಲಿ ಶಾಂತಿಯುತವಾಗಿದ್ದು, ಕಾಲಕ್ರಮೇಣ ಇಲ್ಲಿಯ ಕೋಟೆಯ ಮೇಲೆ ಪ್ರಭುತ್ವವನ್ನು ಸ್ಥಾಪಿಸಿದ.

ಕ್ರಿ.ಶ. ೧೩೫೮ ರಿಂದ ೧೪೨೨ರವರೆಗೆ ಗುಲಬರ್ಗಾವನ್ನು ಕೇಂದ್ರ ಸ್ಥಳವನ್ನಾಗಿಸಿಕೊಂಡು ಆಳಿರುವ ಮಹಮ್ಮದ್‌ಶಹಾ, ದಾವುದ್ ಶಹಾ, ಮುಜಾಹಿದ್ ಶಹಾ ಮತ್ತು ತಾಜುದ್ದಿನ್ ಫಿರೋಜ ಶಹಾರು, ಕೋಟೆಯನ್ನು ಬಲಪಡಿಸಿ ತಮಗೆ ಅವಶ್ಯವಿರುವ ನಾಗರಿಕ ಮತ್ತು ಸೈನಿಕ ಕಟ್ಟಡಗಳನ್ನು ನಿರ್ಮಿಸಿದರು. ಈ ಕುರಿತು ಹಲವು ಪರ್ಶಿಯನ್ ಮತ್ತು ಅರೆಬಿಕ್ ಶಾಸನಗಳಲ್ಲಿ ಉಲ್ಲೇಖವಿದೆ. ಕ್ರಿ.ಶ. ೧೪೨೨ರಲ್ಲಿ ಬಹಮನಿ ಸುಲ್ತಾನರು ರಾಜ್ಯಧಾನಿಯನ್ನು ಬೀದರಿಗೆ ವರ್ಗಾಯಿಸಿದರಿಂದ ಗುಲಬರ್ಗಾದ ರಾಜಕೀಯ ಚಟುವಟಿಕೆಗಳು ಸ್ಥಗಿತಗೊಂಡವು.

ಬಿಜಾಪುರದ ಆದಿಲ್ ಶಾಹಿಗಳ ಕಾಲದಲ್ಲಿ ಈ ಕೋಟೆಯ ಕೆಲವು ಭಾಗಗಳನ್ನು ಪುನರ್‌ನಿರ್ಮಾಣ ಮಾಡಲಾಯಿತು. ಇಬ್ರಾಹಿಮ್ ಆದಿಲ್‌ಶಹಾ I ೧೫೩೫-೧೫೫೮) ಮಹಮ್ಮದ ಆದಿಲ್‌ಶಹಾ II (೧೫೫೮-೮೦), ಇಬ್ರಾಹಿಮ್ ಆದಿಲ್‌ಶಹಾ II (೧೫೮೦-೧೬೨೭), ಮತ್ತು ಅಲಿ ಆದಿಲ್‌ಶಹಾ II ಮುಂತಾದ ಸುಲ್ತಾನರು ತಾವು ಪುನರ್‌ನಿರ್ಮಾಣ ಮಾಡಿರುವ ಭಾಗದಲ್ಲಿ ಶಾಸನಗಳನ್ನು ನಿಲ್ಲಿಸಿದ್ದಾರೆ[೪೬]. ಆದಿಲ್‌ಶಾಹಿಗಳ ದಂಡನಾಯಕರು, ಪ್ರಾಂತಾಧಿಕಾರಿಗಳು ತಮ್ಮ ಹೆಸರಿನಲ್ಲಿ ಕೆಲವು ಶಾಸನಗಳನ್ನು ನಿಲ್ಲಿಸಿದ್ದಾರೆ. ನಿಜಾಮ್‌ಶಾಹಿಗಳ ಕಾಲದಲ್ಲಿ ಈ ಕೋಟೆಯನ್ನು ಪುನರ್‌ನಿರ್ಮಾಣ ಮಾಡಿರುವ ವಿಷಯ ಕೆಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಹೈದ್ರಾಬಾದ ವಸ್ತುಸಂಗ್ರಹಾಲಯದಲ್ಲಿ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇಲ್ಲಿಯ ಕೆಲವು ಶಾಸನಗಳು ಮತ್ತು ಇತರ ವಸ್ತುಗಳ ಸಂಗ್ರಹವಿದೆ.

ಗುಲಬರ್ಗಾ ಕೋಟೆಯ ಪ್ರವೇಶಕ್ಕೆ ಪ್ರಮುಖವಾಗಿ ಎರಡು ಪ್ರವೇಶದ್ವಾರಗಳಿವೆ. ಒಂದು ಪೂರ್ವ ದಿಕ್ಕಿನಲ್ಲಿದ್ದರೆ, ಮತ್ತೊಂದು ವಾಯುವ್ಯ ದಿಕ್ಕಿನಲ್ಲಿದೆ. ವಾಯುವ್ಯ ದಿಕ್ಕಿನ ಪ್ರವೇಶ ದ್ವಾರದ ಮುಂಭಾಗದಲ್ಲಿ ವಿಶೇಷವಾದ ರಕ್ಷಣಾ ಕಟ್ಟಡಗಳಿವೆ. ದ್ವಾರವು ಕಾಣದಂತೆ ಅವುಗಳನ್ನು ನಿರ್ಮಿಸಲಾಗಿದೆ. ಪ್ರಮುಖ ರಸ್ತೆಯಲ್ಲಿ ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಎರಡು ಚೌಕಾಕೃತಿಯ ಕೊತ್ತಳಗಳ ಮಧ್ಯದಲ್ಲಿ ಪ್ರವೇಶದ್ವಾರವಿದೆ. ಇದರ ಬಲಬದಿಯಲ್ಲಿ ಕಂದಕ ಹೊರಭಾಗದಲ್ಲಿ ೬೦ ಅಡಿ ಉದ್ದ ೬೦ ಅಡಿ ಅಗಲದ ಚೌಕಾಕೃತಿಯ ವಿಸ್ತೀರ್ಣದ ಸ್ಥಳದಲ್ಲಿ ಸೈನಿಕರ ತಂಗುದಾಣಗಳಿವೆ. ಅತ್ಯಂತ ಭದ್ರವಾಗಿ ನಿರ್ಮಿಸಿರುವ ಈ ಕಟ್ಟಡದಲ್ಲಿ ಒಳಗಡೆ ಬೇರೆ ಬೇರೆ ಆಕೃತಿಯ ಕಟ್ಟಡಗಳ ತಳಪಾಯ ಕಂಡುಬರುತ್ತವೆ.

ಇದರ ಪ್ರವೇಶ ದ್ವಾರವು ಕೋಟೆಯ ದ್ವಾರದ ಕಡೆಗೆ ಮುಖ ಮಾಡಿ ನಿರ್ಮಿಸಲಾಗಿದೆ. ರಾತ್ರಿಹಗಲು ನಿರಂತರವಾಗಿ ಕಾವಲು ಮಾಡುವ ಸೈನಿಕರಿಗಾಗಿ ಈ ಸ್ಥಳವನ್ನು ಮೀಸಲಾಗಿಡಲಾಗಿದೆ.

ಈ ಪ್ರವೇಶ ದ್ವಾರದ ಎಡ ಭಾಗದಲ್ಲಿ ಸೈನಿಕರ ತಂಗು ದಾಣಗಳು ಮತ್ತು ಕಾವಲುಗೋಪುರಗಳ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಕಂದಕದ ಮುಂಭಾಗದಲ್ಲಿ ರಸ್ತೆಯ ಎರಡು ಬದಿಯಲ್ಲಿ ೬ ಅಡಿ ಉದ್ದ ೮ ಅಡಿ ಎತ್ತರ ಮತ್ತು ೬ ಅಡಿ ಆಳವಾದ ನಾಲ್ಕು ಕಮಾನುಗಳಿವೆ. ಪ್ರವೇಶ ದ್ವಾರವನ್ನು ರಕ್ಷಿಸಲು ಇಲ್ಲಿ ಒಂದು ವಿಶೇಷ ಕಾವಲು ಪಡೆಯನ್ನು ನಿಲ್ಲಿಸಲಾಗುತ್ತಿತ್ತು. ಆಕ್ರಮಣಕಾರರು ಮೊದಲು ಇವರೊಂದಿಗೆ ಹೋರಾಡಿ ನಂತರ ಪ್ರವೇಶದ್ವಾರಕ್ಕೆ ಮುತ್ತಿಗೆ ಹಾಕಬೇಕು. ಈ ಕಟ್ಟಡಗಳ ಶೈಲಿ ಮತ್ತು ನಿರ್ಮಾಣದ ಹಂತಗಳನ್ನು ನೋಡಿದರೆ, ಬಹಮನಿ ಅರಸರ ಕಾಲದಲ್ಲಿ ಇವುಗಳನ್ನು ನಿರ್ಮಿಸಿರುವಂತೆ ಕಂಡುಬರುತ್ತದೆ.

ವಾಯುವ್ಯ ದಿಕ್ಕಿನ ಪ್ರವೇಶ ದ್ವಾರವು ಉತ್ತರಕ್ಕೆ ಮುಖ ಮಾಡಿ ನಿರ್ಮಿಸಲಾಗಿದೆ. ೩೫ ಅಡಿ ಎತ್ತರದ ಎರಡು ವೃತ್ತಾಕಾರದ ಕೊತ್ತಳದ ಮಧ್ಯದಲ್ಲಿ ದ್ವಾರವನ್ನು ನಿರ್ಮಿಸಲಾಗಿದೆ. ೧೫ ಅಡಿ ಅಗಲ ೨೫ ಅಡಿ ಎತ್ತರದ ಪ್ರವೇಶದ್ವಾರದ ರಚನೆಯಲ್ಲಿ ಹಲವು ರಕ್ಷಣಾತ್ಮಕ ಅಂಶಗಳನ್ನು ಬಳಸಿರುವುದು ಕಂಡು ಬರುತ್ತದೆ. ಕೊತ್ತಳಗಳ ಮೇಲ್ಭಾಗದಲ್ಲಿ ಕಾವಲುಗಾರರಿಗೆ ವೀಕ್ಷಿಸಲು ಎರಡು ವೀಕ್ಷಣಾ ರಂಧ್ರಗಳಿವೆ. ದ್ವಾರದ ಮುಂಭಾಗದಲ್ಲಿ ಮೂರು ಹಂತದ ಕಬ್ಬಿಣದ ಸರಪಳಿಯನ್ನು ಜೋಡಿಸಲಾಗಿದೆ. ಇದರಿಂದ ಆಕ್ರಮಣಕಾರರನ್ನು ತಡೆಹಿಡಿಯಲು ಸಹಾಯಕವಾಗುತ್ತದೆ. ದ್ವಾರದ ರಕ್ಷಣೆಯಲ್ಲಿ ಕಬ್ಬಿಣದ ಸರಪಳಿಯು ಪ್ರಮುಖ ಪಾತ್ರವಹಿಸುತ್ತದೆ..

ಈ ದ್ವಾರಕ್ಕೆ ಕಟ್ಟಿಗೆಯ ದಿಮ್ಮೆಯಿಂದ ಮಾಡಿರುವ ಬಾಗಿಲುಗಳಿವೆ. ಇದರ ರಕ್ಷಣೆಗಾಗಿ ಮೇಲ್ಭಾಗದಲ್ಲಿ ಕಬ್ಬಿಣದ ಪಟ್ಟಿಗಳನ್ನೂ, ಲೇಪನ ಮಾಡಿ, ಅದರ ಮಧ್ಯಭಾಗದಲ್ಲಿ ಎರಡು ಕಡೆಯ ಬಾಗಿಲುಗಳ ಮೇಲೆ ಮೊನಚಾದ ಕಬ್ಬಿಣದ ಮೊಳೆಗಳನ್ನು ಜೋಡಿಸಲಾಗಿದೆ. ಆನೆಗಳಿಂದ ಬಾಗಿಲು ಧ್ವಂಸಗೊಳಿಸಬಹುದೆಂದು ಅದರ ತೆಲೆಗೆ ಚುಚ್ಚುವಂತೆ ಈ ಮೊಳೆಗಳನ್ನು ಜೋಡಿಸಲಾಗಿದೆ. ಕಬ್ಬಿಣದ ಮೊಳೆಗಳು ಮೂರು ಹಂತದಲ್ಲಿದ್ದು, ಪ್ರತಿಯೊಂದು ಬಾಗಿಲ ಮೇಲೆ ೯ ಮೊಳೆಗಳಿವೆ. ಪ್ರತಿಯೊಂದು ಮೊಳೆಯ ಜೋಡಣೆಯಲ್ಲಿ ನಾಲ್ಕು ಬಾಗಗಳಾಗಿ ವಿಂಗಡಿಸಲಾಗಿದೆ. ಇವುಗಳು ನೇರವಾಗಿರದೆ ವೃತ್ತಾಕಾರದಂತೆ ತಿರುವು ಮುರುವಾಗಿ ಮಾಡಲಾಗಿದೆ. ಇವುಗಳು ಆನೆಯ ತೆಲೆಯಲ್ಲಿ ಚುಚ್ಚುವಾಗಲು ಮತ್ತು ಹೊರತೆಗೆಯುವಾಗಲು ನೋವನ್ನುಂಟು ಮಾಡುತ್ತದೆ. ಪ್ರಸ್ತುತ ದ್ವಾರದ ಮೇಲೆ ಕಬ್ಬಿಣದ ಪಟ್ಟಿಗಳ ಹಾಗೂ ಮೊಳೆಗಳ ಜೋಡಣೆಯು ಯಥಾವತ್ತಾಗಿದೆ. ಇದರ ಹಿಂಬದಿಯಲ್ಲಿ ಭದ್ರವಾದ ಕಬ್ಬಿಣದ ಬೀಗ ಮತ್ತು ಕಟ್ಟಿಗೆಯ ಗುಳಿಯ (ವೃತ್ತಾಕಾರದ ಉದ್ದನೆಯ ಕಟ್ಟಿಗೆ) ವ್ಯವಸ್ಥೆ ಇದೆ. ದ್ವಾರದ ಬಲಬದಿಯಲ್ಲಿ ಒಂದು ಚಿಕ್ಕ ಗುಪ್ತದ್ವಾರವಿದೆ. ಇದು ಸಹ ಕಬ್ಬಿಣದ ಸರಪಳಿ ಜೋಡಣೆ ಮತ್ತು ಕಟ್ಟಿಗೆಯ ಬಾಗಿಲನ್ನು ಹೊಂದಿದೆ. ಇಲ್ಲಿಂದ ಕೋಟೆಯ ಒಳಗಡೆ ಪ್ರವೇಶಿಸಬಹುದು. ಒಳಗಡೆಯ

ಗುಪ್ತದ್ವಾರವು ಐದು ಅಡಿ ಅಗಲ, ಎಂಟು ಅಡಿ ಎತ್ತರವಾಗಿದೆ. ದ್ವಾರದಲ್ಲಿ ಸುಮಾರು ೨೦ ರಿಂದ ೩೦ ಸೈನಿಕರು ಇಲ್ಲಿ ನಿಂತು ಕಾವಲು ಮಾಡಬಹುದಾಗಿದೆ. ಈ ದ್ವಾರದ ಮುಂಭಾಗದಲ್ಲಿ ಮೂರು ಪರ್ಶಿಯನ್ ಶಾಸನಗಳಿವೆ. ಅದರಲ್ಲಿ ಕೇಂದ್ರ ಭಾಗದ ಒಂದು ಶಾಸನ ಉಳಿದಿದ್ದು ಇತರ ಎರಡು ಬದಿಯ ಶಾಸನಗಳ ನಾಶಗೊಂಡಿವೆ. ಈ ಶಾಸನಗಳು ದ್ವಾರದ ಪುನರ್‌ನಿರ್ಮಾಣವನ್ನು ಕುರಿತು ವಿವರಿಸುತ್ತವೆ.

ಒಳಭಾಗದ ಬಲಬದಿಯಲ್ಲಿ ಸೈನಿಕರ ಮೂರು ತಂಗುದಾಣಗಳಿವೆ. ಕಮಾನಿನ ಈ ಕಟ್ಟಡಗಳು ೫ ಅಡಿ ಆಳವಾಗಿದ್ದು, ೬ ಅಡಿ ಅಗಲ ೮ ಅಡಿ ಎತ್ತರವಾಗಿವೆ. ದ್ವಾರದ ಎದುರುಗಡೆ ೪೦ ಅಡಿ ಎತ್ತರವಾದ ಅರ್ಧವೃತ್ತಾಕಾರ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಬೃಹತ್ ಕಲ್ಲಿನಲ್ಲಿ ನಿರ್ಮಿಸಿದ ಈ ತಡೆಗೋಡೆ ಆಕ್ರಮಣಕಾರನ್ನು ಮುಂದೆ ಹೋಗದಂತೆ ತಡೆಹಿಡಿಯುತ್ತವೆ. ಮೇಲ್ಭಾಗದಲ್ಲಿ ಸುತ್ತಲು ಎಂಟು ವೀಕ್ಷಣಾ ಕಿಂಡಿಗಳಿವೆ. ೪ ಅಡಿ ಅಗಲ ೫ ಅಡಿ ಎತ್ತರದ ಈ ಕಿಂಡಿಗಳ ಹಿಂಭಾಗದಲ್ಲಿ ವಿಶಾಲವಾದ ಸ್ಥಳವಿದೆ. ಅಲ್ಲಿ ಸದಾ ಕಲ್ಲುಗಳನ್ನು ಸಂಗ್ರಹಿಸಿ ಇಡಲಾಗುತ್ತಿತ್ತು. ಅಲ್ಲದೆ ಮೇಲ್ಭಾಗದಲ್ಲಿ ಒಂದು ತೋಪು ಇದೆ. ಒಂದು ವೇಳೆ ಆಕ್ರಮಣಕಾರರು ಒಳಗಡೆ ಪ್ರವೇಶಿಸಿದರೆ ಅವರು ಮುಂದೆ ಹೋಗದಂತೆ ತಡೆಹಿಡಿದು ಅವರ ಮೇಲೆ ಬಂಡೆಗಳನ್ನು ಎಸೆದು ಹತ್ಯೆ ಮಾಡಲು ಇದನ್ನು ನಿರ್ಮಿಸಲಾಗಿದೆ. ತಡೆಗೋಡೆಯ ಮೇಲ್ಭಾಗದಲ್ಲಿ ಎರಡು ತೋಪುಗಳಿವೆ. ಒಂದು ಪಶ್ಚಿಮ ಭಾಗದ ರಕ್ಷಣೆ ಮಾಡಿದರೆ, ಮತ್ತೊಂದು ದ್ವಾರವು ಕೋಟೆಯ ಮುಂಭಾಗಕ್ಕೆ ರಕ್ಷಣೆ ನೀಡುತ್ತದೆ. ಇದರ ಕೆಳಗಡೆ ಹದಿನೈದು ಅಡಿ ಉದ್ದ, ಹತ್ತು ಅಡಿ ಅಗಲದ ಸೈನಿಕರ ತಂಗುದಾಣವಿದೆ. ಅಲ್ಲದೆ ಈ ಸ್ಥಳವನ್ನು ಮದ್ದುಗುಂಡುಗಳ ಸಂಗ್ರಹಕ್ಕೆ ಬಳಸುತ್ತಿರಬಹುದೆಂದು. ಇತಿಹಾಸಕಾರರ ಅಭಿಪ್ರಾಯವಾಗಿದೆ. ಇದರ ಮೇಲೆ ಹತ್ತಲು ನಾಲ್ಕನೆಯ ದ್ವಾರದ ನಂತರ ಎರಡು ಬದಿಯಲ್ಲಿ ಮೆಟ್ಟಿಲುಗಳಿವೆ. ಈ ಸ್ಥಳದಿಂದ ಕೋಟೆಯ ಮಹಾದ್ವಾರದ ಮುಂಭಾಗದ ಕೊತ್ತಳಕ್ಕೆ ಬರಬಹುದು. ಈ ರೀತಿಯ ವಿಶೇಷ ಶೈಲಿಯಲ್ಲಿ ನಿರ್ಮಿಸಿರುವ ತಡೆಗೋಡೆಯು ಗುಲಬರ್ಗಾ ಜಿಲ್ಲೆಯ ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ. ಸಾಮಾನ್ಯವಾಗಿ ಕೋಟೆಯ ದ್ವಾರದ ಮುಂಭಾಗದಲ್ಲಿ ಅರ್ಧವೃತ್ತಾಕಾರದ ತಡೆಗೋಡೆ ಇರುತ್ತದೆ.

ಎರಡನೆಯ ದ್ವಾರದ ಹಿಂಬದಿಯಲ್ಲಿ ಎಡಭಾಗಕ್ಕೆ ಕೋಟೆ ಗೋಡೆಯಲ್ಲಿ ವಿಶಾಲವಾದ ಸೈನಿಕರ ತಂಗುದಾಣವಿದೆ. ೨೫ ಅಡಿ ಉದ್ದ, ೧೦ ಅಡಿ ಎತ್ತರದ ಈ ಸ್ಥಳವು ಎರಡು ಅಂಕಣಗಳಿಂದ ಕೂಡಿದೆ. ಹಿಂಭಾಗದಲ್ಲಿ ಒಂದು ಚಿಕ್ಕ ಗುಪ್ತದ್ವಾರವಿದೆ. ಇಲ್ಲಿಂದ ಸೈನಿಕರು ಒಬ್ಬರ ನಂತರ ಮತ್ತೊಬ್ಬರು ಹೊರಹೋಗಬಹುದು. ಹೊರಗಿನಿಂದ ನೋಡಿದರೆ, ಇಲ್ಲಿ ಯಾವುದೇ ಕಟ್ಟಡ ಇರುವಂತೆ ಕಂಡುಬರುವುದಿಲ್ಲ. ಇದರ ಮುಂಭಾಗದಲ್ಲಿ ಮೂರು ಅಂಕಣಗಳ ವಿಶೇಷ ಕಟ್ಟಡವಿದೆ. ೩೦ ಅಡಿ ಉದ್ದ, ೧೫ ಅಡಿ ಅಗಲದ ಈ ಕಟ್ಟಡ ಸೈನಿಕರ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಇದರ ಮೇಲೆ ಹತ್ತಲು ಮೆಟ್ಟಿಲುಗಳಿವೆ.

ಎರಡನೆಯ ದ್ವಾರದಿಂದ ಮೂರನೆಯ ದ್ವಾರಕ್ಕೆ ಹೋಗುವ ಮಾರ್ಗದಲ್ಲಿ ಬಲಭಾಗಕ್ಕೆ ಕೋಟೆ ಗೋಡೆಗೆ ಅಂಟಿಕೊಂಡಿರುವಂತೆ ಸೈನಿಕರ ಐದು ರಕ್ಷಣಾ ಸ್ಥಳಗಳಿವೆ. ಪ್ರತಿಯೊಂದು ಸ್ಥಳದಲ್ಲಿ ಕನಿಷ್ಠ ೫೦ ರಿಂದ ೬೦ ಸೈನಿಕರಿಗೆ ಸ್ಥಳಾವಕಾಶವಿದೆ. ಎಡಭಾಗದಲ್ಲಿ ದಕ್ಷಿಣಕ್ಕೆ ಮುಖಮಾಡಿರುವ ನಾಲ್ಕು ಅಂಕಣಗಳ ಕಟ್ಟಡವಿದೆ. ಸುಮಾರು ೫೦ ಅಡಿ ಉದ್ದದ ಈ ಕಟ್ಟಡಕ್ಕೆ ಒಳಗಡೆ ಯಾವುದೆ ಕಟ್ಟಡಗಳು ಇರುವುದಿಲ್ಲ ಗೋಡೆಗಳಲ್ಲಿ ಇದರ ಮೇಲ್ಭಾಗವು ಗುಮ್ಮಟದ ರಚನಾ ಶೈಲಿಯನ್ನು ಹೊಂದಿದೆ. ಈ ಭಾಗದಲ್ಲಿಯ ಸೈನಿಕರಿಗೆ ಇದು ತಂಗುದಾಣವಾಗಿದೆ.

ಮೂರನೆಯ ದ್ವಾರವು ೧೫ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಇದರ ಒಂದು ಬದಿಯಲ್ಲಿ ಮೇಲೆ ಹತ್ತಲು ಗುಪ್ತದ್ವಾರದಿಂದ ಮೆಟ್ಟಿಲಗಳು ಹಾಗೂ ವೀಕ್ಷಣಾಲಯವಿದೆ. ಮುಂಭಾಗದಲ್ಲಿ ಕಲ್ಲಿನಲ್ಲಿ ನಿರ್ಮಿಸಿರುವ ನಾಲ್ಕು ಕಿಟಕಿಗಳಿವೆ. ಇದರ ಒಳಭಾಗದಲ್ಲಿ ೧೦ ಅಡಿ ಅಗಲ ೧೫ ಅಡಿ ಉದ್ದನೆಯ ಎರಡು ಅಂಕಣಗಳಿಂದ ಕೂಡಿದ ಸ್ಥಳವಿದೆ. ಇದರ ಪ್ರವೇಶಕ್ಕೆ ಮೇಲ್ಭಾಗದದಿಂದ ಒಂದು ಪ್ರವೇಶದ್ವಾರವಿದೆ. ಈ ಸ್ಥಳ ಸುಲ್ತಾನರ ವಿಶ್ರಾಂತಿಗಾಗಿ ಅಥವಾ ವೀಕ್ಷಣೆಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಈ ದ್ವಾರವು ಎರಡು ಅಂಕಣಗಳಿಂದ ಕೂಡಿದ್ದು, ೩೦ ಅಡಿ ಅಗಲವಾಗಿದೆ. ಇದರ ರಚನೆಗೆ ದಪ್ಪನೆಯ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಇದರ ನಿರ್ಮಾಣಕ್ಕೆ ಬಳಸಿರುವ ಕೆಲವು ಕಲ್ಲುಗಳ ಮೇಲೆ ಸಾಲು ಆನೆಗಳ ಶಿಲ್ಪಗಳಿವೆ. ಆದ್ದರಿಂದ ಸ್ಥಳೀಯರು ಇದನ್ನು 'ಹಾಥಿಗೇಟ್'[೪೭] (ಆನೆಯ ದ್ವಾರ) ಎಂದು ಕರೆಯುತ್ತಾರೆ.

ಮೂರು ಮತ್ತು ನಾಲ್ಕನೆಯ ದ್ವಾರದ ಮಧ್ಯ ೬೦ ಅಡಿ ಅಂತರವಿದೆ. ಎಡಭಾಗದಲ್ಲಿ ಎರಡು ಅಂಕಣಗಳ ಕಮಾನುಗಳಿವೆ. ಇದರ ರಚನೆಗೆ ಬಳಸಿರುವ ಕಲ್ಲಿನ ಕಂಬಗಳು ಕೆತ್ತನೆಯಿಂದ ಕೂಡಿದೆ. ಈ ಕಂಬಗಳು ಕಲ್ಯಾಣ ಚಾಲುಕ್ಯರ ಕಂಬಗಳನ್ನು ಹೊಲುತ್ತವೆ. ಈ ದ್ವಾರದ ಬಲಭಾಗಕ್ಕೆ ಒಂದು ಅರ್ಧಕಮಾನಿನ ಆಕಾರದ ಗುಪ್ತದ್ವಾರವಿದೆ. ಈ ದ್ವಾರದಿಂದ ಐದನೆಯ ದ್ವಾರದವರೆಗಿನ ಸುಮಾರು ೨೦೦ ಅಡಿಯವರೆಗೆ ಹಲವು ಪ್ರಮುಖ ಸೈನಿಕ ಕಟ್ಟಡಗಳು ಕಂಡು ಬರುತ್ತವೆ. ಇಲ್ಲಿಯ ಕಟ್ಟಡಗಳ ಮೇಲ್ಭಾಗದಲ್ಲಿ ಪಿರಮಿಡನ ಆಕಾರದ ರಚನೆ ಇದೆ. ಪ್ರಾರಂಭದ ಕಟ್ಟಡಗಳ ಮೇಲ್ಭಾಗದಲ್ಲಿ ಗುಮ್ಮಟಗಳನ್ನು ರಚನೆ ಮಾಡಲಾಗುತ್ತಿತ್ತು. ಆದರೆ ಕಾಲಕ್ರಮೇಣ ಈ ಹೊಸ ಶೈಲಿಯ ಕಟ್ಟಡಗಳ ರಚನೆ ಆರಂಭವಾಯಿತು. ಫಿರೋಜಶಹಾನ ಕಾಲದಲ್ಲಿ ಬೆಳೆದ ಈ ಶೈಲಿಯ ಹೆಚ್ಚಿನ ಕಟ್ಟಡಗಳು ಕಂಡುಬರುತ್ತದೆ. ಏಕೆಂದರೆ, ಆತನ ಎರಡನೆಯ ರಾಜ್ಯಧಾನಿಯಾದ ಫಿರೋಜಾಬಾದದಲ್ಲಿ ಇದೆ ಶೈಲಿಯಲ್ಲಿ ಕಟ್ಟಡಗಳು ಕಂಡುಬರುತ್ತವೆ. ಈ ದ್ವಾರದ ಎಡ ಮತ್ತು ಬಲ ಬದಿಯಲ್ಲಿ ವಿವಿಧ ಆಕಾರದ ಕಟ್ಟಡಗಳಿವೆ. ಆದರೆ ಬಲಬದಿಯಲ್ಲಿ ಐದು ಕಮಾನುಗಳಿಂದ ಕೂಡಿದ ಕಟ್ಟಡಗಳಿವೆ. ಇದರ ಮೇಲ್ಭಾಗದಲ್ಲಿ ಗುಮ್ಮಟ ಮತ್ತು ಪಿರಮಿಡ್ ಆಕಾರದ ರಚನೆಯಿದೆ. ಇವುಗಳಲ್ಲಿ ಕೊನೆಯ ಕಮಾನಿನ ಮೇಲ್ಭಾಗದಲ್ಲಿ ಅರ್ಧ ಪಿರಮಿಡ್

ಮಾತ್ರ ಉಳಿದುಕೊಂಡಿದೆ. ಎಡ ಬದಿಯ ಎಲ್ಲಾ ಕಟ್ಟಡಗಳು ಅವನತಿ ಹೊಂದಿವೆ. ಅದರ ತಳಪಾಯದ ಅವಶೇಷಗಳು ಮಾತ್ರ ಉಳಿದುಕೊಂಡಿವೆ.

ಐದನೆಯ ದ್ವಾರವು ಅತ್ಯಂತ ವಿಶಾಲವಾಗಿದ್ದು, ಎರಡು ಹಂತದಲ್ಲಿದೆ. ಹದಿನೈದು ಅಡಿ ಅಗಲ, ಮೂವತ್ತು ಅಡಿ ಎತ್ತರವಾಗಿದೆ. ಈ ಕಮಾನಿನ ಕೇಂದ್ರ ಭಾಗವು ಅತ್ಯಂತ ಚೂಪಾಗಿದೆ. ಇದಕ್ಕೆ ಕಟ್ಟಿಗೆಯ ಬಾಗಿಲಿನ ವ್ಯವಸ್ಥೆ ಇದೆ. ಆದರೆ ಇಲ್ಲಿ ಯಾವುದೇ ಬಾಗಿಲುಗಳು ಇವುದಿಲ್ಲ. ಇದರ ಒಳಭಾಗದಲ್ಲಿ ಎರಡು ಬದಿಯಲ್ಲಿ ೬ ಅಡಿ ಎತ್ತರದ ಮೇಲೆ ಮಂಟಪಗಳಿವೆ. ಇದರ ಕಂಬಗಳು ಕಲ್ಯಾಣ ಚಾಲುಕ್ಯರ ಕಂಬಗಳನ್ನು ಹೋಲುತ್ತವೆ.

ಈ ದ್ವಾರದ ಎರಡು ಬದಿಯಲ್ಲಿ ಮೇಲೆ ಹತ್ತಲು ವಿಶಾಲವಾದ ಮೆಟ್ಟಿಲುಗಳಿವೆ. ಎಡಭಾಗದಲ್ಲಿ ೮೦ ಮೆಟ್ಟಿಲುಗಳು ಬಲಬದಿಯಲ್ಲಿ ೩೦ ಮೆಟ್ಟಿಲುಗಳಿವೆ. ಇಲ್ಲಿಂದ ಕೋಟೆಯ ಯಾವುದೇ ಭಾಗಕ್ಕೆ ಹೋಗಬಹುದು. ದ್ವಾರದ ಮೇಲ್ಭಾಗದಲ್ಲಿ ಸಿಂಹಾಸನದ ಆಕೃತಿಯಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದೆ. ಪೂರ್ವ ಭಾಗದಲ್ಲಿ ಒಂದು ಚಿಕ್ಕ ಪ್ರವೇಶದ್ವಾರವಿದೆ. ಒಳಗಡೆ ೪x೪ ಅಡಿಯ ಖಾಲಿ ಸ್ಥಳವಿದೆ. ಇಲ್ಲಿ ಕುಳಿತು ಪಶ್ಚಿಮಭಾಗದ ವೀಕ್ಷಣೆಗೆ ಮೂರು ಹಂತದ ಕಿಟಕಿಗಳಿವೆ. ಇದರ ಮೇಲ್ಭಾಗದಲ್ಲಿ ಒಂದು ಚಿಕ್ಕಗುಮ್ಮಟವಿದ್ದು, ಸುತ್ತಲು ಎರಡು ಅಡಿ ಎತ್ತರದ ಗಾರೆಯಿಂದ ನಿರ್ಮಿಸಿರುವ ಕಂಬಗಳಿವೆ. ಈ ರೀತಿಯ ಕಟ್ಟಡವು ನಮಗೆ ಗುಲಬರ್ಗಾ ಜಿಲ್ಲೆಯ ಯಾವ ಕೋಟೆಯಲ್ಲಿಯೂ ಕಂಡುಬರುವುದಿಲ್ಲ. ಇಲ್ಲಿ ಸುಲ್ತಾನರು ಕುಳಿತು ಮುಂಭಾಗದಲ್ಲಿ ನಡೆಯುವ ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದರು. ಅಲ್ಲದೆ ವಿಶೇಷ ಸಂದರ್ಭಗಳಲ್ಲಿ ಸುಲ್ತಾನರು ಇಲ್ಲಿಂದ ಜನತೆಗೆ, ಅತಿಥಿಗಳಿಗೆ ದರ್ಶನ ನೀಡುತ್ತಿದ್ದರು. ಇದರ ಎರಡು ಬದಿಯಲ್ಲಿ ಅರ್ಧವೃತ್ತಾಕಾರದ ವಿಶಾಲವಾದ ಕೊತ್ತಳಗಳಿದ್ದು ಅದರ ಮೇಲ್ಭಾಗದಲ್ಲಿ ಸೈನಿಕರ ತಂಗುದಾಣಗಳಿವೆ. ಪೂರ್ವಕ್ಕೆ ಮುಖ ಮಾಡಿರುವ ಈ ತಂಗುದಾಣಗಳು, ಚಿಕ್ಕ ಪ್ರವೇಶದ್ವಾರವನ್ನು ಹೊಂದಿವೆ. ಇದರ ಒಳಗಡೆ ವೃತ್ತಾಕಾರದಲ್ಲಿದ್ದು ಸುತ್ತಲು ಗೋಡೆಯ ಮಧ್ಯಭಾಗದಲ್ಲಿ ಐದು ವೀಕ್ಷಣಾ ರಂಧ್ರಗಳಿವೆ. ಇಲ್ಲಿಂದ ಕೋಟೆಯ ಒಳಭಾಗ ಮತ್ತು ಹೊರಭಾಗ ಕಾವಲು ಮಾಡಬಹುದಾಗಿದೆ.

ಇಲ್ಲಿ ಸುಮಾರು ೩೦ ರಿಂದ ೪೦ ಸೈನಿಕರಿಗೆ ಸ್ಥಳವಕಾಶವಿದೆ. ಇದರ ಮೇಲೆ ಹತ್ತಲು ಹೊರಭಾಗದ ಎರಡು ಬದಿಯಲ್ಲಿ ಮೆಟ್ಟಿಲುಗಳು ಹಾಗೂ ಮೇಲ್ಭಾಗದಲ್ಲಿ ತೆನೆಗಳಿವೆ. ಪ್ರಸ್ತುತ ಬಲಭಾಗದ ತಂಗುದಾಣವನ್ನು ಮಸೀದಿಯನ್ನಾಗಿ ಇತ್ತೀಚೆಗೆ ಪರಿವರ್ತಿಸಲಾಗಿದೆ. ಅಲ್ಲದೆ ಸಾಧ್ಯವಿದ್ದ ಮಟ್ಟಿಗೆ ಮೂಲಶೈಲಿಯನ್ನು ಬದಲಾವಣೆ ಗೊಳಿಸದೆ ಪುನರ್ ನಿರ್ಮಿಸಲಾಗಿದೆ.

೮೦ ಮೆಟ್ಟಿಲುಗಳನ್ನು ಹತ್ತಿದ ನಂತರ, ಅದರ ಮೇಲ್ಭಾಗದಲ್ಲಿ ಸುಮಾರು ೮೦x೮೦ ಉದ್ದ ಅಗಲದ ವಿಶಾಲವಾದ ಅರ್ಧವೃತ್ತಾಕಾರದ ಕಾವಲುಗೋಪುರದ ಮೇಲೆ ಹಲವು ರಕ್ಷಣಾಸಂಬಂಧಿ ಕಟ್ಟಡಗಳಿವೆ. ಅವುಗಳಲ್ಲಿ ಸೈನಿಕರ ತಂಗುದಾಣಗಳು, ಮದ್ದು-ಗುಂಡುಗಳ ಸಂಗ್ರಹ, ತೋಪುಗಳು,

ಮುಂತಾದ ರಕ್ಷಣಾ ಕಟ್ಟಡಗಳಿವೆ. ಆದರೆ ಈ ಎಲ್ಲಾ ಕಟ್ಟಡಗಳು ಅವನತಿಯ ಹಂತದಲ್ಲಿವೆ. ಇಲ್ಲಿ ಹದಿನೈದು ಅಡಿ ಉದ್ದನೆಯ ತೋಪು, ಪ್ರವೇಶ ದ್ವಾರದ ಕಡೆಗೆ ಮುಖ ಮಾಡಿ ನಿರ್ಮಿಸಲಾಗಿದೆ.

ಐದನೆಯ ದ್ವಾರದ ಒಳಗಡೆ ಎರಡು ಬದಿಯಲ್ಲಿ ಐವತ್ತೊಂದು ಸಮಾನ ಆಕೃತಿಯ ಕಟ್ಟಡಗಳಿವೆ. ೮ ಅಡಿ ಅಗಲ ೮ ಅಡಿ ಉದ್ದದ ಹಾಗೂ ೧೫ ಅಡಿ ಎತ್ತರದ ಚೌಕಾಕೃತಿಯ ಪಿರಮಿಡನ ಆಕಾರದ ಕಟ್ಟಡಗಳಿವೆ. ಇವುಗಳ ಕುರಿತು ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. ಇದರ ಮೇಲ್ಭಾಗದ ಪಿರ್ಯಮಿಡ್‌ನ ಆಕೃತಿಯ ಗೋಪುರವಿದೆ. ಒಳಭಾಗದಲ್ಲಿ ಗಾರೆಯಿಂದ ಅಲಂಕಾರ ಮಾಡಲಾಗಿದೆ. ಮೇಲ್ಭಾಗದಲ್ಲಿ ಮತ್ತೊಂದು ಅಂತಸ್ತಿನ ಕಟ್ಟಡ ಇರುವಂತೆ ಕಂಡು ಬರುತ್ತದೆ. ಇಲ್ಲಿ ೮ ಅಡಿ ಎತ್ತರದ ಗೋಡೆ, ಮಧ್ಯದಲ್ಲಿ ಕೆಲವು ಕಮಾನುಗಳು ಮಾತ್ರ ಉಳಿದುಕೊಂಡಿವೆ. ಕೆಲವು ಭಾಗದಲ್ಲಿ ಮಾತ್ರ ಇವು ಕಂಡು ಬರುತ್ತದೆ. ಉಳಿದ ಉಳಿದ ಭಾಗದಲ್ಲಿ ಎರಡನೆಯ ಅಂತಸ್ತಿನ ಕಟ್ಟಡಗಳು ನಾಶ ಹೊಂದಿವೆ. ಈ ರೀತಿಯ ಪಿರ್ಯಮಿಡ್‌ನ ಗೋಪುರದ ರಕ್ಷಣೆಗಾಗಿ ಮತ್ತು ಹೊಸ ಮಾದರಿಯ ಕಟ್ಟಡಗಳ ನಿರ್ಮಾಣದ ಉದ್ದೇಶದಿಂದ ಬಹಮನಿ ಸುಲ್ತಾನರು ಈ ರೀತಿಯ ಕಟ್ಟಡಗಳನ್ನು ನಿರ್ಮಿಸಿರಬಹುದು. ಕೆಲ ಇತಿಹಾಸಕಾರರು ಇದೊಂದು ವಿದೇಶಿಯ ಮಾರುಕಟ್ಟೆಯಾಗಿದೆ ಎಂದು ಹೇಳಿದರೆ, ಮತ್ತೆ ಕೆಲವು ವಿದ್ವಾಂಸರು 'ದರ್ಬಾರ' ಆಗಿರಬಹುದು ಎಂದು ಉಲ್ಲೇಖಿಸಿದ್ದಾರೆ. ಸುಲ್ತಾನರು ಝುರೋಕ-ಇ ದರ್ಶನಕ್ಕಾಗಿ ಈ ಸ್ಥಳ ಬಳಸುತ್ತಿದ್ದಾರೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಕೋಟೆಯ ವಾಯುವ್ಯ ದಿಕ್ಕಿನ ಮೂಲೆಯಲ್ಲಿ ಮೇಲ್ಭಾಗದಲ್ಲಿ ವಿಶೇಷ ತಂಗುದಾಣಗಳಿವೆ. ವೃತ್ತಾಕಾರದ ಕೊತ್ತಳದ ಮೇಲೆ ತೋಪಿನ ಕಟ್ಟೆಯನ್ನು ನಿರ್ಮಿಸಲಾಗಿದೆ. ಅದರ ಪಕ್ಕದಲ್ಲಿ ಪಶ್ಚಿಮಕ್ಕೆ ಮುಖ ಮಾಡಿಕೊಂಡಿರುವಂತೆ ಎರಡು ತಂಗುದಾಣಗಳಿವೆ. ಒಳಗಡೆ ವಿಶಾಲವಾದ ಸ್ಥಳವಿದ್ದು, ಹೊರಗಡೆಯ ವೀಕ್ಷಣೆಗಾಗಿ ಸಣ್ಣ ಸಣ್ಣ ರಂಧ್ರಗಳಿವೆ. ಇಲ್ಲಿಂದ ಎರಡು ಕೋಟೆ ಗೋಡೆಯ ಮಧ್ಯದ ಸ್ಥಳ ಮತ್ತು ಕಂದಕದ ಹೊರಭಾಗವನ್ನು ವೀಕ್ಷಿಸಬಹುದಾಗಿದೆ. ಅಲ್ಲದೆ ಈ ಸ್ಥಳ ಮದ್ದು ಗುಂಡುಗಳ ಸಂಗ್ರಹಕ್ಕೂ ಬಳಸಬಹುದು. ಏಕೆಂದರೆ ಇಲ್ಲಿಯ ಕಟ್ಟಡಗಳ ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಈ ಭಾಗದಲ್ಲಿ ಬರುವ ಎಲ್ಲಾ ತೋಪುಗಳಿಗೆ ಬಳಸುವ ಮದ್ದುಗುಂಡು ಇಲ್ಲೆ ಸಂಗ್ರಹಿಸುತ್ತಿರಬಹುದು. ಆದ್ದರಿಂದಲೆ ಈ ಸ್ಮಾರಕಗಳು ವಿಶಾಲವಾಗಿಯೂ ಮತ್ತು ಸುಭದ್ರವಾಗಿಯು ನಿರ್ಮಿಸಲಾಗಿದೆ. ಇದೆ ರೀತಿಯ ವಿಶೇಷ ತಂಗುದಾಣಗಳು ಮತ್ತು ಮದ್ದುಗುಂಡಿನ ಸಂಗ್ರಹ ನೈರುತ್ಯ ದಿಕ್ಕಿನಲ್ಲಿ ಇರುವುದು ಕಂಡು ಬರುತ್ತದೆ. ಪ್ರಸ್ತುತ ಇಲ್ಲಿ ಕೇವಲ ಎರಡು ಕಡೆಯ ಗೋಡೆ ಮಾತ್ರ ಉಳಿದಿದೆ. ಉಳಿದ ಎರಡು ಭಾಗದ ಗೋಡೆಯು ನಾಶಗೊಂಡಿದೆ. ಈ ಸ್ಥಳವನ್ನು ಸೂಕ್ಷ್ಮವಾಗಿ ವಿಕ್ಷಿಸಿದಾಗ ಈ ಸ್ಥಳದಲ್ಲಿ ವಿಶೇಷ ತಂಗುದಾಣವಿರುವಂತೆ ಕಂಡು ಬರುತ್ತದೆ. ಅಲ್ಲದೆ ಇದರ ಪ್ರವೇಶ ದ್ವಾರವನ್ನು ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಈ ಭಾಗದ ಒಳಗೋಡೆಯ ಮೇಲ್ಭಾಗದ ಮೂಲೆಯಲ್ಲಿ

ಹದಿನೈದು ಅಡಿ ಉದ್ದನೆಯ ತೋಪು ಇಡಲಾಗಿದೆ. ಅದನ್ನು ಚಲಾಯಿಸಲು ಮತ್ತು ಈ ಭಾಗದ ರಕ್ಷಣೆಗಾಗಿ ಇಲ್ಲಿ ವಿಶೇಷ ಸೈನಿಕ ಪಡೆಯ ಕಾವಲು ಸಲುವಾಗಿ ಈ ಸ್ಥಳವನ್ನು ಬಳಸುತ್ತಿರುವುದು ಇದರಿಂದ ಕಂಡು ಬರುತ್ತದೆ.

ಈ ರೀತಿಯಲ್ಲಿ ಕೋಟೆಯ ಒಳಗೋಡೆಯ ಮೇಲ್ಭಾಗದಲ್ಲಿ ವಿಶಾಲವಾದ ಸೈನಿಕರ ತಂಗುದಾಣಗಳಿವೆ. ಇಂತ ಇನ್ನೂ ಕೆಲವೊಂದು ರಕ್ಷಣಾ ಕಟ್ಟಡಗಳು ಉತ್ತರ ಭಾಗದ ಕೋಟೆ ಗೋಡೆಯ ಮೇಲೆ ರಚಿಸಿರಬಹುದು. ಆದರೆ ಅವುಗಳು ಸಂಪೂರ್ಣವಾಗಿ ನಾಶಗೊಂಡಿವೆ.

ನಾಲ್ಕನೆಯ ಪ್ರಕಾರದ ತಂಗುದಾಣಗಳೆಂದರೆ ಕೋಟೆಯ ಹೊರಗೋಡೆಯ ತೆನೆಗಳ ಹಿಂಭಾಗದಲ್ಲಿ ಸೈನಿಕರ ಆಶ್ರಯ ಕ್ಕಾಗಿ ನಿರ್ಮಿಸಿರುವ ವಿಶೇಷ ಸ್ಥಳ ಗಳು ಒಬ್ಬ ಸೈನಿಕರು ಕೂಡಲು ಅನುಕೂಲವಾಗುವಂತೆ ಅಂದರೆ ಮೂರು ಅಡಿ ಅಗಲ, ಮೂರು ಅಡಿ ಉದ್ದನೆಯ ತಂಗುದಾಣಗಳಿವೆ. ಈ ರೀತಿಯ ರಕ್ಷಣಾ ವ್ಯವಸ್ಥೆಯು ಕೋಟೆಯ ನೈರುತ್ಯ ಭಾಗದಲ್ಲಿ ಕಂಡು ಬರುತ್ತದೆ, ಸುಮಾರು ೩೦೦ ತೆನೆಗಳ ಹಿಂಭಾಗದಲ್ಲಿ ಸಾಲಾಗಿ ಇದನ್ನು ನಿರ್ಮಿಸಲಾಗಿದೆ. ಇದು ಅತ್ಯಂತ ರಕ್ಷಣಾತ್ಮಕ ಸ್ಥಳವಾಗಿರಬಹುದು. ಆದ್ದರಿಂದಲೆ ಇಲ್ಲಿ ಹೆಚ್ಚಿನ ಸಂಖ್ಯೆಯ ಸೈನಿಕರ ಕಾವಲು ವ್ಯವಸ್ಥೆ ಇದೆ.

ಐದನೆಯ ಪ್ರಕಾರದ ತಂಗುದಾಣಗಳೆಂದರೆ, ಕೋಟೆ ಗೋಡೆಯ ಸುತ್ತಲೂ ರಚಿಸಿರುವ ತೆನೆಗಳ ಹಿಂಭಾಗದಲ್ಲಿ ಕಾವಲುಗಾರ ಸೈನಿಕರಿಗೆ ಆಶ್ರಯದ ಸಲುವಾಗಿ ಮೂರು ಅಡಿ ಅಗಲ ನಾಲ್ಕು ಅಡಿ ಎತ್ತರದ ಸ್ಥಳವಿರುತ್ತದೆ. ಇಲ್ಲಿ ಸೈನಿಕರು ಆಶ್ರಯ ಪಡೆಯಬಹುದು. ಈ ರೀತಿಯ ವಿಶೇಷ ಸ್ಥಳ ಪ್ರತಿಯೊಂದು ತೆನೆಯ ಹಿಂಭಾಗದಲ್ಲಿ ಇರುವುದಿಲ್ಲ. ಮೂರು ನಾಲ್ಕು ತೆನೆಗಳನ್ನು ಬಿಟ್ಟು ಒಂದೊಂದು ತಂಗುದಾಣದ ವ್ಯವಸ್ಥೆ ಇದೆ. ಹೊರಗಿನಿಂದ ನೋಡಿದರೆ ಯಾವ ತೆನೆಯ ಹಿಂಭಾಗದಲ್ಲಿ ಈ ರೀತಿಯ ವ್ಯವಸ್ಥೆ ಇದೆ ಎಂದು ತಿಳಿದುಕೊಳ್ಳುವುದು ಅಸಾಧ್ಯವಾದುದು. ಅಲ್ಲದೆ ಪ್ರತಿಯೊಂದು ತೆನೆಗೆ ವೀಕ್ಷಣಾ ರಂಧ್ರಗಳಿವೆ. ಕಾವಲುಗಾರರು ಇಲ್ಲಿಂದಲೇ ಹೊರಗಡೆ ವೀಕ್ಷಿಸುತ್ತಾರೆ. ಪ್ರಮುಖ ಫಿರಂಗಿಗಳ ಸಮೀಪದಲ್ಲಿ ಇಂತಹ ತಂಗುದಾಣಗಳಿವೆ. ಉದಾಹರಣೆಗೆ ಬಾಲಹಿಸ್ಸಾರಾ (ರಣಮಂಡಲ)ದ ಮೇಲೆ ಸೈನಿಕರ ಆಶ್ರಯದ ಸಲುವಾಗಿ ಎರಡು ಬದಿಯಲ್ಲಿ ಮೂರು ಅಂಕಣಗಳ ತಂಗುದಾಣಗಳಿವೆ. ಹಾಗೂ ಕೆಳಭಾಗದಲ್ಲಿ ವಿಶಾಲವಾದ ಸ್ಥಳದಲ್ಲಿ ಸೈನಿಕರು ವಿಶ್ರಾಂತಿ ಪಡೆಯಬಹುದು. ಈ ರೀತಿಯಲ್ಲಿ ಗುಲಬರ್ಗಾ ಕೋಟೆಯಲ್ಲಿ ಹಲವು ಬಗೆಯ ಸೈನಿಕರ ತಂಗುದಾಣಗಳಿವೆ. ದಿನದ ೨೪ ಗಂಟೆಗಳ ಕಾಲ ಕಾವಲು ಅವಶ್ಯವಾಗಿರುವುದರಿಂದ ಇಂತಹ ವಿಶೇಷ ರಕ್ಷಣಾ ವಾಸ್ತುಶಿಲ್ಪ ಶಿಲ್ಪಗಳನ್ನು ಬಹಮನಿ ಸುಲ್ತಾನರು ನಿರ್ಮಿಸಿರುವಂತೆ ಕಂಡು ಬರುತ್ತದೆ.

ಗುಲಬರ್ಗಾ ಕೋಟೆಯ ಒಳಭಾಗದಲ್ಲಿ ಇದೊಂದು ಅತ್ಯಂತ ಪ್ರಮುಖ ಸ್ಥಳವಾಗಿದೆ. ಈ ರೀತಿಯ ಕಟ್ಟಡಗಳು ನಮಗೆ ಜಿಲ್ಲೆಯ ಯಾವ ಕೋಟೆಯಲ್ಲಿಯ ಕಂಡು ಬರುವುದಿಲ್ಲ. ಫಿರೋಜಶಹಾನು

ಕಟ್ಟಡಗಳ ನಿರ್ಮಾಣದಲ್ಲಿ ದೇಶಿಯ ಮತ್ತು ವಿದೇಶಿಯ ಅಂಶಗಳನ್ನು ಬಳಸಿಕೊಂಡಿರುವುದು ಇವುಗಳಿಂದ ತಿಳಿದು ಬರುತ್ತದೆ. ಬಹಮನಿ ಸುಲ್ತಾನರ ಮತ್ತು ದಕ್ಷಿಣ ಭಾರತದ ಇತರ ಮುಸ್ಲಿಂ ರಾಜ್ಯಗಳಲ್ಲಿರುವ ಇದೆ ಶೈಲಿಯ ಕಟ್ಟಡಗಳು ಬೇರೆ ಯಾವ ಭಾಗದಲ್ಲಿ ಯೂ ಕಂಡು ಬರುವುದಿಲ್ಲ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಅಭಿರುಚಿವುಳ್ಳ ಫಿರೋಜ ಶಹಾನ ಕಾಲದಲ್ಲಿ ವಿಶೇಷ ರಕ್ಷಣಾ ಕಟ್ಟಡಗಳು ನಿರ್ಮಾಣಗೊಂಡಿವೆ.

ಕೋಟೆಯ ಉತ್ತರ ದಿಕ್ಕಿನಲ್ಲಿ ಎರಡು ಗೋಡೆಗಳನ್ನು ಹೊಂದಿದ್ದು ಒಳಗೋಡೆ ಎತ್ತರವಾಗಿದ್ದು ಹೊರಗೋಡೆಯು ಕಿರಿದಾಗಿದೆ. ಈ ಎರಡು ಗೋಡೆಗಳ ಮಧ್ಯದಲ್ಲಿ ಸುಮಾರು ೧೫ ರಿಂದ ೨೦ ಅಡಿ ಅಂತರವಿದೆ. ಎರಡು ಗೋಡೆಯ ತಳಭಾಗದಲ್ಲಿ ಗುಪ್ತದ್ವಾರಗಳನ್ನು ನಿರ್ಮಿಸಲಾಗಿದೆ. ಎರಡು ಕಮಾನುಗಳಿಂದ ಕೂಡಿದ ಆಕರ್ಷಕ ಬಾವಿ ಹಾಗೂ ಅದಕ್ಕೆ ಅಂಟಿಕೊಂಡಿರುವ ಗುಪ್ತದಾರ ನಿರ್ಮಿಸಲಾಗಿದೆ. ಒಳಗೋಡೆಯು ೨೦ ರಿಂದ ೩೦ ಅಡಿ ದಪ್ಪವಾಗಿದೆ. ಇದರಲ್ಲಿ ಸೈನಿಕರ ತಂಗುದಾಣಗಳು, ಆನೆಯ ಲಾಳಗಳು ಮತ್ತು ಇನ್ನಿತರ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಹೊರಗೋಡೆಯು ಸುಮಾರು ೨೫ ರಿಂದ ೩೦ ಅಡಿ ಎತ್ತರವಾಗಿದ್ದು, ೬ ಅಡಿ ದಪ್ಪವಾಗಿದೆ. ಸುಮಾರು, ೫೦ ರಿಂದ ೭೦ ಅಡಿ ಅಂತರದಲ್ಲಿ ಒಂದೊಂದು ಅರ್ಧವೃತ್ತಾಕಾರದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಇದರ ಮೇಲ್ಭಾಗದಲ್ಲಿ ೬ ಅಡಿ ಎತ್ತರದ ತೆನೆಗಳಿವೆ. ಗೋಡೆಯ ಮತ್ತೊಂದು ವಿಶೇಷತೆ ಎಂದರೆ ತೆನೆಗಳ ಕೆಳಭಾಗದಲ್ಲಿ ಸಾಲಾಗಿ ಸೈನಿಕರ ರಕ್ಷಣೆಗಾಗಿ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಈ ಭಾಗದ ಕೋಟೆಯ ಒಳಗಡೆ ಅತ್ಯಂತ ಮಹತ್ವದ ಸ್ಥಳಗಳಿವೆ. ಆದ್ದರಿಂದ ಹಗಲು ರಾತ್ರಿ ಕಾವಲು ಅವಶ್ಯವಾದ್ದರಿಂದ ಹೆಚ್ಚಿನ ಸಂಖ್ಯೆಯ ಸೈನಿಕರನ್ನು ಇಲ್ಲಿ ನಿಯಮಿಸಲಾಗುತ್ತಿತ್ತು. ಕೋಟೆ ಕಾಳಗಳದಲ್ಲಿ ಶತ್ರುಗಳು ಮೊದಲು ತೆನೆಗಳನ್ನು ನಾಶಪಡಿಸುತ್ತಿದ್ದರು. ಆದ್ದರಿಂದ ಅದರ ಕೆಳಹಂತದಲ್ಲಿ ಸೈನಿಕರ ರಕ್ಷಣೆಗಾಗಿ ರಕ್ಷಣಾತ್ಮಕ ಸ್ಥಳಗಳನ್ನು ನಿರ್ಮಿಸಲಾಗಿದೆ.

ಉತ್ತರ ಭಾಗದ ಒಳಗೋಡೆಯ ಮಧ್ಯದಲ್ಲಿ ವೃತ್ತಾಕಾರದ ಕಾವಲುಗೋಪುರವಿದೆ. ಇದರ ತಳಭಾಗದಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಕಮಾನಿನ ಪ್ರವೇಶದ್ವಾರಗಳಿವೆ. ಇದರ ಒಳಗಡೆ ಸೈನಿಕರ ತಂಗು ದಾಣ ಮತ್ತು ಮದ್ದು ಗುಂಡುಗಳ ಸಂಗ್ರಹಕ್ಕೆ ಸ್ಥಳವಾಕಾಶವಿದೆ. ಕಾವಲುಗೋಪುರದ ರಕ್ಷಣೆಗಾಗಿ ಅದರ ತಳಭಾಗದಲ್ಲಿ ೩ ಅಡಿ ಎತ್ತರದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಇದರ ಮೇಲೆ ಹತ್ತಲು ಎರಡು ಕಡೆಯಲ್ಲಿ ಮೆಟ್ಟಲುಗಳಿವೆ. ಮೇಲ್ಭಾಗದಲ್ಲಿ ೧೫ ಅಡಿ ಉದ್ದನೆಯ ತೋಪು ನಿಲ್ಲಿಸಲಾಗಿದೆ. ಇದರ ಪಕ್ಕದಲ್ಲಿ ಮತ್ತೊಂದು ಐದು ಅಡಿ ಉದ್ದನೆಯ ಆಕರ್ಷಕ ತೋಪು ಇದೆ. ಈ ತೋಪಿನ ಮೇಲೆ ಹಿಂಭಾಗದಲ್ಲಿ ಶಾಸನ ಹಾಗೂ ಹೂಬಳ್ಳಿಗಳ ಅಲಂಕಾರದ ಕೆತ್ತನೆ ಇದೆ. ಮಿಶ್ರಲೋಹದಲ್ಲಿ ನಿರ್ಮಿಸಿದ ಈ ತೋಪು ಕೆಂಪು ವರ್ಣದಲ್ಲಿದೆ. ಇದರ ಮೇಲೆ ಎರಡು ಮೀನಿನ

ಚಿತ್ರಗಳಿವೆ. ವೃತ್ತಾಕಾರದಲ್ಲಿ ತಿರುಗುವ ಈ ಮಿನುಗಳು ಇದರ ಬಳಕೆಯ ಸಂಕೇತವನ್ನು ಸೂಚಿವಂತಿದೆ. ಇದನ್ನು ಬೇರೆ ಕಡೆಯಿಂದ ತಂದು ಇಲ್ಲಿ ನಿಲ್ಲಿಸಲಾಗಿದೆ. ಆದ್ದರಿಂದ ಈ ಗೋಪುರದ ಮೇಲೆ ತೋಪು ಕಟ್ಟೆ ಇರುವುದಿಲ್ಲ. ಇದನ್ನು ಆದಿಲ್ ಶಾಹಿಗಳ ಕಾಲದಲ್ಲಿ ಪುನರ್‌ನಿರ್ಮಾಣಗೊಳಿಸಿರುವ ಕುರಿತು ಒಂದು ಶಾಸನವನ್ನು ಗೋಡೆಯ ಪೂರ್ವ ದಿಕ್ಕಿನಲ್ಲಿ ನಿಲ್ಲಿಸಲಾಗಿದೆ. ಹೊರಭಾಗದ ಗೋಡೆಯ ಕೊತ್ತಳದ ಮೇಲೆ ತೋಪು ಕಟ್ಟೆಯಿದ್ದು, ಇಲ್ಲಿ ತೋಪು ಇರುವುದಿಲ್ಲ.

ಈಶಾನ್ಯ ಭಾಗದ ಒಳಗೋಡೆಯ ಮೇಲೆ ಮೂರು ಕಾವಲುಗೋಪುರಗಳಿವೆ. ಅದರಲ್ಲಿ ಎರಡು ವೃತ್ತಾಕಾರದಲ್ಲಿದ್ದು ಒಂದು ಚೌಕಾಕೃತಿಯಲ್ಲಿದೆ. ಇದರ ಮೇಲೆ ೧೫ ಅಡಿ ಉದ್ದನೆಯ ತೋಪುಗಳನ್ನು ನಿಲ್ಲಿಸಲಾಗಿದೆ. ಈ ಕಾವಲುಗೋಪುರದ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಈಶಾನ್ಯ ದಿಕ್ಕಿನಲ್ಲಿರುವ ವೃತ್ತಾಕಾರದ ಬೃಹತ್ ಕಾವಲುಗೋಪುರವಿದೆ. ಇದರ ಮೇಲೆ ಚಿಕ್ಕ ತೋಪು ಇದೆ. ಕೋಟೆಯ ಒಳಭಾಗದಲ್ಲಿ ನಾಲ್ಕು ಅಂಕಣಗಳಿಂದ ಕೂಡಿದ ಸೈನಿಕರ ತಂಗುದಾಣ ಮತ್ತು ಮದ್ದುಗುಂಡ ಸಂಗ್ರಹಕ್ಕೆ ಸ್ಥಳಾವಕಾಶವಿದೆ. ಈ ಭಾಗದ ಕೆಳಗಡೆ ಮತ್ತು ಮೇಲ್ಭಾಗದಲ್ಲಿ ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳು ಹಾಗೂ ಶತ್ರುಗಳ ವೀಕ್ಷಣೆಗಾಗಿ ಹಲವು ಬಗೆಯ ವೀಕ್ಷಣಾ ರಂಧ್ರಗಳಿವೆ.

ಈಶಾನ್ಯ ಭಾಗದಿಂದ ಆಗ್ನೇಯ ಭಾಗದವರೆಗಿನ ಕೋಟೆಯು ಎರಡು ಗೋಡೆಗಳನ್ನು ಹೊಂದಿದ್ದು ಮಧ್ಯದಲ್ಲಿ ಒಂದು ಪ್ರವೇಶದ್ವಾರವಿದೆ. ಈಶಾನ್ಯ ಭಾಗದಿಂದ ಪ್ರವೇಶ ದ್ವಾರದವರೆಗೆ ಹೊರಗೋಡೆಯಲ್ಲಿ ಒಂದು ಅರ್ಧವೃತ್ತಾಕಾರದ ಕೊತ್ತಳವಿದೆ. ಎರಡು ಗೋಡೆಗಳ ಮಧ್ಯ ೨೦ ರಿಂದ ೩೫ ಅಡಿ ಅಂತರವಿದ್ದು, ಮಧ್ಯದಲ್ಲಿ ಒಂದು ವಿಶಾಲವಾದ ಭಾವಿ ಇದೆ. ಈ ಗೋಡೆ ೩೦ ಅಡಿ ದಪ್ಪವಾಗಿದ್ದು ಒಳಗಡೆ ಮೂರು ಸೈನಿಕರ ತಂಗುದಾಣಗಳಿವೆ. ಎರಡು ಗೋಡೆಗಳಿಗೆ ಕೆಳಭಾಗದಲ್ಲಿ ಗುಪ್ತದ್ವಾರಗಳಿವೆ.

ಪೂರ್ವ ದಿಕ್ಕಿಗೆ ಮುಖ ಮಾಡಿರುವ ಈ ಪ್ರವೇಶ ದ್ವಾರವು ೧೫ ಅಡಿ ಅಗಲ ೨೦ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಹೊರಗಡೆ ಎರಡು ಕಡೆಯಲ್ಲಿ ಚಿಕ್ಕ ಗುಪ್ತದ್ವಾರಗಳಿವೆ. ಒಳಗಡೆ ಐದು ಅಂಕಣಗಳಿಂದ ಕೂಡಿರುವ ರಕ್ಷಣಾ ಸಂಬಂಧಿ ಸ್ಮಾರಕಗಳಿವೆ. ೬೦ ಅಡಿ ಉದ್ದ ೩೦ ಅಡಿ ಅಗಲವಾಗಿರುವ ಈ ಸ್ಥಳದಲ್ಲಿ ಸೈನಿಕರು ದ್ವಾರದ ರಕ್ಷಣೆಗಾಗಿ ಸುಸಜ್ಜಿತವಾಗಿ ನಿಲ್ಲುತ್ತಿದ್ದರು. ಇದರ ಮೇಲೆ ಹತ್ತಲು ಒಳಭಾಗದಲ್ಲಿ ಎರಡು ಕಡೆಗೆ ಮೆಟ್ಟಿಲುಗಳಿವೆ. ಸದ್ಯದಲ್ಲಿ ಮೇಲ್ಭಾಗದ ಒಂದು ಅಂಕಣ ಮಾತ್ರ ಉಳಿದಿದೆ.

ಈ ಮಾಹಾದ್ವಾರದಿಂದ ಆಗ್ನೇಯಭಾಗದವರೆಗೆ ಎರಡು ಹಂತದ ಕೋಟೆ ಗೋಡೆಗಳು ಮುಂದುವರೆಯುತ್ತವೆ. ಇಲ್ಲಿಯ ವಿಶೇಷತೆ ಎಂದರೆ ತೆನೆಗಳಲ್ಲಿ ಎರಡು ಹಂತದ ವೀಕ್ಷಣಾ ರಂಧ್ರಗಳಿರುವುದು. ಒಂದು ಕೆಳಭಾಗದಲ್ಲಿದ್ದಾರೆ, ಮತ್ತೊಂದು ಕೇಂದ್ರಭಾಗದಲ್ಲಿದೆ. ಕೆಳಭಾಗದಲ್ಲಿ ಸೈನಿಕರು

ಕುಳಿತು ಕಾವಲು ಮಾಡಬಹುದಾಗಿದೆ. ಈ ರೀತಿಯ ತೆನೆಗಳು ಮತ್ತೆ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ.

ಒಳಗೋಡೆಗೆ ಅಂಟಿಕೊಂಡಿರುವಂತೆ ಎಂಟು ಕಾವಲುಗೋಪುರಗಳಿವೆ. ಪ್ರತಿ ನೂರು ಅಡಿ ಅಂತರದಲ್ಲಿ ಒಂದು ಕಾವಲುಗೋಪುರವಿದೆ. ೫೦ ಅಡಿ ಎತ್ತರದ ಈ ಗೋಪುರಗಳು ವೃತ್ತಾಕಾರದಲ್ಲಿದ್ದು, ಮೇಲ್ಭಾಗದಲ್ಲಿ ಸುತ್ತಲು ತೆನೆಗಳು ಹಾಗೂ ಕೇಂದ್ರದಲ್ಲಿ ತೋಪುಗಳಿವೆ. ಪ್ರತಿಯೊಂದು ಕಾವಲುಗೋಪುರಕ್ಕೆ ಹತ್ತಲು ೮ ರಿಂದ ೧೨ ಮೆಟ್ಟಿಲುಗಳಿವೆ. ಕೆಲವೊಂದು ಗೋಪುರಗಳು ಕುದುರೆ ಲಾಳಾಕಾರದಲ್ಲಿವೆ. ಅದರ ಮುಂಭಾಗದಲ್ಲಿ ತೋಪನ್ನು ನಿರ್ಮಿಸಲಾಗಿದೆ. ಕೆಲವು ಗೋಪುರಗಳ ಕೆಳಭಾಗದಲ್ಲಿ ಮದ್ದು ಗುಂಡುಗಳ ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಗೋಡೆಯು ೩೦ ಅಡಿ ದಪ್ಪವಾಗಿದ್ದು ಒಳಗಡೆ ಸೈನಿಕರ ತಂಗು ದಾಣಗಳು ಮತ್ತು ಗುಪ್ತದ್ವಾರಗಳಿವೆ. ಹೊರಗೋಡೆಯಲ್ಲಿ ಹತ್ತು ಕೊತ್ತಳಗಳಿವೆ.

ಈ ಭಾಗದಲ್ಲಿ ಒಂದು ವಿಶೇಷ ರಕ್ಷಣಾತ್ಮಕ ಸ್ಥಳವಿದೆ, ಹಾಗೂ ಅಲ್ಲಿ ಆನೆ, ಕುದುರೆಗಳಿಗೆ ನೀರು ಕುಡಿಯಲು ಎರಡು ವಿಶಾಲವಾದ ಭಾವಿಗಳು ಹಾಗೂ ಕಮಾನುಗಳಿಂದ ನಿರ್ಮಿಸಿರುವ ರಕ್ಷಣಾ ಸ್ಮಾರಕಗಳಿವೆ. ಕೋಟೆಯ ಒಳಭಾಗಕ್ಕೆ ಮುಖ ಮಾಡಿಕೊಂಡಿರುವ ಪ್ರವೇಶ ದ್ವಾರವಿದೆ. ಕೋಟೆಯ ಎರಡು ಗೋಡೆಗಳ ಮಧ್ಯದಲ್ಲಿರುವ ಇಂತಹ ವಿಶಾಲವಾದ ಸ್ಥಳ ಮತ್ತೆ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ ಇಲ್ಲಿಯ ಬಾವಿಗಳು ಸದಾ ನೀರಿನಿಂದ ತುಂಬಿರುತ್ತವೆ. ಕೋಟೆಯ ಆಗ್ನೇ ದಿಕ್ಕಿನಲ್ಲಿ ಒಂದು ವಿಶೇಷ ಕಾವಲುಗೋಪುರವಿದೆ. ಒಳಗೋಡೆಯ ಮೇಲ್ಭಾಗದಲ್ಲಿ ಎಂಟು ಅಡಿ ಎತ್ತರದ ಮೇಲೆ ವೃತ್ತಾಕಾರದ ಕಾವಲುಗೋಪುರದ ಮೇಲೆ ೨೦ ಅಡಿ ಉದ್ದನೆಯ ತೋಪು ನಿಲ್ಲಿಸಲಾಗಿದೆ[೪೮]. ಇದರ ಹಿಂಬದಿಯಲ್ಲಿ ನಾಲ್ಕು ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ತೋಪಿನ ಕೇಂದ್ರ ಭಾಗದಲ್ಲಿ ಒಂದು ಚೌಕಾಕಾರದ ೪ ಅಡಿ ಆಳವಾದ ಸ್ಥಳವಿದೆ. ಈ ಭಾಗದಲ್ಲಿ ಕೋಟೆಯ ಒಳಗಡೆ ಎರಡು ಬಾವಿಗಳಿವೆ, ಅವುಗಳಲ್ಲಿ ಒಂದು ಚೌಕಾಕಾರ ಮತ್ತೊಂದು ವೃತ್ತಾಕಾರದಲ್ಲಿ ಬಾವಿ ಇವೆ. ಅಲ್ಲದೆ ಆರು ಕಮಾನುಗಳಿಂದ ಕೂಡಿದ ಗುಪ್ತದ್ವಾರಗಳಿವೆ. ಈ ರೀತಿಯ ಸಾಮೂಹಿಕ ಗುಪ್ತದ್ವಾರಗಳು ಕೋಟೆಯ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ. ಇದೊಂದು ವಿಶೇಷ ರಕ್ಷಣಾ ಸ್ಥಳವಾಗಿದೆ.

ಆಗ್ನೇಯ ಭಾಗದ ಮೂಲೆಯಲ್ಲಿ ಕೋಟೆಯ ಒಳಗೋಡೆಯಲ್ಲಿ ಒಂದು ವಿಶಾಲವಾದ ಕಮಾನಿನ ಪ್ರವೇಶ ದ್ವಾರವಿದೆ. ಇದರ ಒಳಭಾಗದಲ್ಲಿ ಎರಡು ಬದಿಯಲ್ಲಿ ೧೨ ಕಂಬಗಳಿಂದ ಕೂಡಿರುವ ಎರಡು ಮಂಟಪಗಳಿವೆ. ಇದಕ್ಕೆ ಬಳಸಿರುವ ಕಂಬಗಳು ಕಲ್ಯಾಣ ಚಾಲುಕ್ಯರ ಶೈಲಿಯನ್ನು ಹೋಲುತ್ತವೆ[೪೯]. ಇಲ್ಲಿ ಯಾವುದೇ ವಿಗ್ರಹಗಳು ಕಂಡು ಬರುವುದಿಲ್ಲ. ಆದರೆ ಪ್ರಸ್ತುತ ಈ ದ್ವಾರವನ್ನು ಮುಚ್ಚಲಾಗಿದೆ, ಆದರೆ ಒಳಗಡೆ ಒಂದು ಚೌಕಾಕೃತಿಯ ಕಟ್ಟಡದ ರಚನೆ ಕಂಡು ಬರುತ್ತದೆ. ಇದರ ಹಿಂಭಾಗದಲ್ಲಿ

ಹೊರಗೋಡೆಯ ಕೊತ್ತಳಕ್ಕೆ ಅಂಟಿಕೊಂಡಿರುವಂತೆ ನಾಲ್ಕು ಕಮಾನುಗಳಿವೆ, ಅದರ ಒಳಗಡೆ ಗರ್ಭಗೃಹದಂತೆ ಕಂಡುಬರುವ ಕಟ್ಟಡಗಳಿವೆ. ಆದರೆ ಒಳಗಡೆ ಯಾವುದೇ ಮೂರ್ತಿ ಶಿಲ್ಪಗಳು ಇರುವುದಿಲ್ಲ. ದೇವಾಲಯದ ರಚನೆಯಂತೆ ಕಾಣುವ ಇಲ್ಲಿಯ ಹಲವು ಕಟ್ಟಡಗಳ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಮುಸ್ಲಿಂ ಕೋಟೆಯಲ್ಲಿ ಇವುಗಳನ್ನು ಯಾರು ನಿರ್ಮಿಸಿರಬಹುದು ಅಥವಾ ಮೂಲತಹ ಹಿಂದು ಅರಸನಿಂದ ಕಟ್ಟಿಸಿರುವ ಈ ಕೋಟೆಯಲ್ಲಿ ಇವುಗಳನ್ನು ಹಾಗೆ ಇಡಲಾಗಿದೆ ಎನ್ನುವ ಅನುಮಾನ ಬರುತ್ತದೆ. ಬಹಮನಿ ಸುಲ್ತಾನರು ಈ ಸ್ಥಳವನ್ನು ಹಾಗೆ ಕಾಪಾಡಿಕೊಂಡು ಬಂದಿರುವ ಸಾಧ್ಯತೆಗಳಿವೆ. ಪ್ರಸ್ತುತ ಇದರ ಪುನರ್‌ನಿರ್ಮಾಣ ಕಾರ್ಯ ಆರಂಭಿಸಿ, ಅರ್ಧಕ್ಕೆ ನಿಲ್ಲಿಸಲಾಗಿದೆ.

ಆಗ್ನೇಯದಿಂದ ನೈರುತ್ಯ ದಿಕ್ಕಿನವರೆಗೆ ಒಳಗೋಡೆ ಮತ್ತು ಹೊರಗೋಡೆಯು ಅತ್ಯಂತ ಕಿರಿದಾಗಿದ್ದು, ಅದರ ಹಿಂಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾತ್ಮಕ ಸ್ಥಳಗಳನ್ನು ನಿರ್ಮಿಸಲಾಗಿದೆ. ಈ ಭಾಗದ ಹೊರಗೋಡೆಯಲ್ಲಿ ಪ್ರತಿ ೫೦ ರಿಂದ ೬೦ ಅಡಿ ಅಂತರದಲ್ಲಿ ಒಂದು ಕೊತ್ತಳಗಳಿವೆ. ಇದರಲ್ಲಿ ಒಟ್ಟು ಆರು ಕೊತ್ತಳಗಳಿದ್ದು, ಅವುಗಳ ಮೇಲ್ಭಾಗದಲ್ಲಿ ಕಿರಿದಾದ ಮತ್ತು ದಪ್ಪನೆಯ ತೆನೆಗಳಿವೆ. ಕೆಳಭಾಗದಲ್ಲಿ ಚೌಕಾಕೃತಿಯ ಗುಪ್ತ ದ್ವಾರಗಳಿವೆ. ಒಳಗೋಡೆಯು ೩೦ ಅಡಿ ಎತ್ತರವಾಗಿದ್ದು, ೨೫ ರಿಂದ ೩೦ ಅಡಿ ದಪ್ಪವಾಗಿದೆ. ಈ ಭಾಗದ ಗೋಡೆಯಲ್ಲಿ ಒಟ್ಟು ನಾಲ್ಕು ಕಾವಲುಗೋಪುರಗಳಿವೆ. ಎರಡರ ಮೇಲೆ ತೋಪು ಕಟ್ಟೆಯಿದೆ ಆದರೆ ಇಲ್ಲಿ ತೋಪುಗಳು ಇರುವುದಿಲ್ಲ. ಇನ್ನೆರಡು ಗೋಪುರದ ಮೇಲೆ ತೋಪು ಕಟ್ಟೆಯು ಸಹ ಇರುವುದಿಲ್ಲ. ಈ ಭಾಗದಲ್ಲಿ ಬಹಮನಿಯ ಸುಲ್ತಾನರು ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವುದಿಲ್ಲ. ಕಾರಣ ಇದರ ಹೊರಭಾಗದಲ್ಲಿ ವಿಶಾಲವಾದ ಹೂದೋಟಗಳಿದ್ದವು. ಇಲ್ಲಿಂದ ಶತ್ರುಗಳು ಬರುವ ಸಾಧ್ಯತೆಗಳು ಅತಿ ಕಡಿಮೆ ಆದ್ದರಿಂದ ಇಲ್ಲಿ ಹೆಚ್ಚಿನ ಪ್ರಮಾಣದ ತೋಪುಗಳನ್ನು ನಿಲ್ಲಿಸಿರುವುದಿಲ್ಲ. ಅಲ್ಲಿದೆ ಈ ಭಾಗದಲ್ಲಿ ಸೈನಿಕರ ತಂಗುದಾಣಗಳು ಸಹ ಕಡಿಮೆ ಸಂಖ್ಯೆಯಲ್ಲಿವೆ.

ನೈರುತ್ಯ ದಿಕ್ಕಿನಲ್ಲಿ ಒಳಗೋಡೆಗೆ ಅಂಟಿಕೊಂಡಿರುವಂತೆ ೫೦ ಅಡಿ ಎತ್ತರದ ಕಾವಲುಗೋಪುರವಿದೆ, ಇದರ ಮೇಲೆ ಎರಡು ತೋಪು ಕಟ್ಟೆಗಳಿವೆ. ಈ ಗೋಪುರದಿಂದ ೧೦೦ ಅಡಿ ಅಂತರದಲ್ಲಿ ಮತ್ತೊಂದು ಎತ್ತರವಾದ ಕಾವಲುಗೋಪುರವಿದೆ. ಮೇಲ್ಭಾಗದಲ್ಲಿ ತೋಪು ಕಟ್ಟೆ ಮತ್ತು ಸೈನಿಕರಿಗೆ ರಕ್ಷಣಾತ್ಮಕ ಸ್ಥಳಗಳಿವೆ, ಒಳಗೋಡೆಯ ಮಧ್ಯದಲ್ಲಿ ಒಂದು ಕಮಾನಿನ ಆಕೃತಿಯ ಪ್ರವೇಶ ದ್ವಾರವಿದೆ. ಎರಡು ಗೋಡೆಯ ಮಧ್ಯದಲ್ಲಿ ವೃತ್ತಾಕಾರದ ಚಿಕ್ಕ ಕಾವಲುಗೋಪುರವಿದ್ದು, ಅದರ ಸುತ್ತಲು ಎತ್ತರವಾದ ತೆನೆಗಳಿವೆ. ಇವುಗಳ ಕೆಳಭಾಗದಲ್ಲಿ ವೀಕ್ಷಣಾ ರಂದ್ರಗಳಿವೆ. ಈ ರಂದ್ರಗಳಲ್ಲಿ ಚಿಕ್ಕ ತೋಪುಗಳನ್ನು ಸೇರಿಸಿ ಶತ್ರುಗಳನ್ನು ನಾಶಪಡಿಸುತ್ತಿದ್ದರು.

ಇಲ್ಲಿಂದ ಮುಂದೆ ೧೦೦ ಅಡಿ ಅಂತರದಲ್ಲಿ ಕೋಟೆಯ ಒಳಗಡೆ ವೃತ್ತಾಕಾರದ ಕಾವಲುಗೋಪುರವಿದೆ. ಇದಕ್ಕೆ ಮೇಲೆ ಹತ್ತಲು ಎರಡು ಕಡೆಯಿಂದ ಮೆಟ್ಟಿಲುಗಳಿವೆ. ಕೆಳಭಾಗದಲ್ಲಿ ಸೈನಿಕರ ತಂಗುದಾಣಗಳಿವೆ ಇದರ ಮೇಲೆ ೧೫ ಅಡಿ ಉದ್ದನೆಯ ತೋಪು ಇದೆ. ಮುಂಭಾಗದಲ್ಲಿ ಕೋಟೆಯ ಒಳಗೋಡೆಗೆ ಅಂಟಿಕೊಂಡಿರುವಂತೆ ಒಂದು ಕಾವಲುಗೋಪುರವಿದೆ. ೫ ಅಡಿ ಎತ್ತರದ ಮೇಲೆ ವೃತ್ತಾಕಾರದ ತೋಪು ಕಟ್ಟೆಯಿದೆ, ಅದರ ಮೇಲೆ ೧೫ ಅಡಿ ಉದ್ದನೆಯ ತೋಪು ನಿಲ್ಲಿಸಲಾಗಿದೆ. ಹೊರಗೋಡೆಯಲ್ಲಿ ಇದಕ್ಕೆ ಸಮನಾದ ಮತ್ತೊಂದು ಕಾವಲುಗೋಪುರ ವಿದ್ದು ಅದರ ಮೇಲೆ ತೋಪು ಕಟ್ಟೆಯಿದೆ. ಈ ಭಾಗದ ಕೋಟೆಯ ರಕ್ಷಣೆಗೆ ವಿಶೇಷ ಕ್ರಮ ಅಳವಡಿಸಿರುವುದು ಕಂಡು ಬರುತ್ತವೆ. ಪ್ರತಿ ಕಾವಲುಗೋಪುರದ ಸುತ್ತಲು ಆರು ಅಡಿ ಎತ್ತರದ ತೆನೆಗಳಿವೆ. ಇಲ್ಲಿಂದ ಮುಂದೆ ಕೋಟೆಯ ಗೋಡೆಯು ಎರಡು ಭಾಗಗಳಾಗುತ್ತವೆ. ಒಳಗೋಡೆಯಲ್ಲಿ ಕಾವಲುಗೋಪುರಗಳು, ಹೊರಗೋಡೆಯಲ್ಲಿ ಕೊತ್ತಳಗಳು ಇವೆ. ಈ ಎರಡು ಗೋಡೆಗಳ ಮಧ್ಯ ಒಂದು ವಿಶಾಲವಾದ ಭಾವಿ ಹಾಗೂ ಕೋಟೆ ಗೋಡೆಯ ಕೆಳಹಂತದಲ್ಲಿ ಗುಪ್ತದ್ವಾರಗಳಿವೆ.

ಒಟ್ಟನಲ್ಲಿ ಪಶ್ಚಿಮ ಭಾಗದ ಒಳಗೋಡೆಯಲ್ಲಿ ಎಂಟು ಕಾವಲುಗೋಪುರಗಳು ಹಾಗೂ ಹೊರಗೋಡೆಯಲ್ಲಿ ಪ್ರತಿ ೫೦ ರಿಂದ ೭೦ ಅಡಿ ಅಂತರದಲ್ಲಿ ಒಂದೊಂದು ಕೊತ್ತಳಗಳಿವೆ. ಈ ಭಾಗದಲ್ಲಿ ಹೆಚ್ಚಿನ ರಕ್ಷಣಾ ವ್ಯವಸ್ಥೆಗಳು ಕಂಡು ಬರುತ್ತವೆ. ಕಾವಲುಗೋಪುರದ ಕೆಳಭಾಗದಲ್ಲಿ ಸೈನಿಕರಿಗೆ ಮತ್ತು ಮದ್ದು ಗುಂಡುಗಳ ಸಂಗ್ರಹಕ್ಕೆ ಮೂರು ಅಂಕಣಗಳಿಂದ ಕೂಡಿದ ಕಟ್ಟಡಗಳಿವೆ. ಇದರ ಒಂದು ಬದಿಯಲ್ಲಿ ಶಾಸನವನ್ನು ನಿಲ್ಲಿಸಲಾಗಿದೆ. ಈ ಶಾಸನವು ಇದರ ಪುನರ್‌ನಿರ್ಮಾಣವನ್ನು ವಿವರಿಸುತ್ತದೆ. ಇದರ ಮೇಲಿನ ತೋಪು ಕೇವಲ ಅರ್ಧ ಮಾತ್ರ ಉಳಿದುಕೊಂಡಿದೆ. ಮೂರನೆಯ ಗೋಪುರವು ೫೦ ಅಡಿ ಉತ್ತರವಾಗಿದ್ದು, ಅದರ ಮೇಲ್ಭಾಗದಲ್ಲಿ ೧೦ ಅಡಿ ಉದ್ದ ೧೫ ಅಡಿ ಅಗಲದ ಒಂದು ಕಟ್ಟಡವಿರುವಂತೆ ಕಂಡು ಬರುತ್ತದೆ. ಇದರ ಪ್ರವೇಶ ದ್ವಾರವು ಮಾತ್ರ ಉಳಿದಿದ್ದು ಕಟ್ಟಡದ ಉಳಿದ ಭಾಗ ನಾಶವಾಗಿದೆ. ಇಲ್ಲಿ ಯಾವುದೇ ತೋಪು ಕಟ್ಟೆಗಳು ಕಂಡು ಬರುವುದಿಲ್ಲ.

ಈ ಭಾಗದಲ್ಲಿ ಸುಮಾರು ೨೫೦ ಅಡಿಯಿಂದ ೩೦೦ ಅಡಿಯವರೆಗೆ ಎರಡು ಕೋಟೆ ಗೋಡೆಗಳ ಮಧ್ಯದಲ್ಲಿ ಮತ್ತೊಂದು ಚಿಕ್ಕ ಗೋಡೆಯು ಕಂಡು ಬರುತ್ತದೆ. ಇಲ್ಲಿ ಅತ್ಯಂತ ತಗ್ಗಾದ ಪ್ರದೇಶವಿದೆ. ಹೊರಗೋಡೆಯಲ್ಲಿ ಮೂರು ಕಾವಲುಗೋಪುರಗಳು, ಅವುಗಳ ಮೇಲೆ ತೋಪು ಕಟ್ಟೆ, ಮಧ್ಯದ ಗೋಡೆಗೆ ಎರಡು ಕೊತ್ತಳಗಳು, ಒಳಗೋಡೆಯಲ್ಲಿ ಎರಡು ಕಾವಲುಗೋಪುರಗಳಿವೆ. ಇವುಗಳ ಮೇಲೆ ತೋಪು ಕಟ್ಟೆಯಿದೆ. ಹೊರ ಗೋಡೆ ಮತ್ತು ಒಳಗೋಡೆಗಳಲ್ಲಿ ಗುಪ್ತದ್ವಾರಗಳಿವೆ.

ಕೋಟೆಯ ಒಳಗೋಡೆಯ ಹಿಂಭಾಗದಲ್ಲಿ ೫೦ ರಿಂದ ೬೦ ಅಡಿ ಎತ್ತರದ ಬೃಹದಾಕಾರದ ಕಾವಲುಗೋಪುರವಿದೆ. ವೃತ್ತಾಕಾರದಲ್ಲಿರುವ ಈ ಗೋಪುರವು ತಳಭಾಗದಲ್ಲಿ ದಪ್ಪವಾಗಿದ್ದು ಮೇಲೆ

[illegible]

ಹೋದಂತೆ ಕಿರಿದಾಗುತ್ತದೆ. ಬೃಹತ್ ಕಲ್ಲುಗಳಿಂದ ಇದನ್ನು ನಿರ್ಮಿಸಲಾಗಿದೆ. ಈ ಗೋಪುರದ ಒಳಭಾಗದಲ್ಲಿ ಮತ್ತು ಮೇಲ್ಭಾಗದಲ್ಲಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳಿವೆ. ಇಲ್ಲಿ ದೈತ್ಯಾಕಾರದ ೨೫ ಅಡಿ ಉದ್ದನೆಯ ತೋಪು ಇದೆ. ಇದಕ್ಕೆ ಬೇಕಾಗುವ ಸಾಮಗ್ರಿಗಳ ಸಂಗ್ರಹ ಮತ್ತು ಇದರ ಕಾರ್ಯಾಚರಣೆಗೆ ಬೇಕಾಗುವಷ್ಟು ಸೈನಿಕರ ನಿವಾಸಗಳು ಈ ಪ್ರದೇಶದಲ್ಲಿವೆ. ಅಲ್ಲದೆ ಇಲ್ಲಿ ಒಂದು ಕೃತಕ ನೀರಿನ ಸಂಗ್ರಹವಿದೆ. ಇಡೀ ಕೋಟೆಯಲ್ಲಿಯ ಇದು ಅತ್ಯಂತ ದೊಡ್ಡ ತೋಪು ಆಗಿದೆ. ಇದು ಇಡೀ ಏಷಿಯಾದಲ್ಲಿಯೇ ಅತ್ಯಂತ ಉದ್ದನೆಯ ತೋಪು ಆಗಿದೆ.

ಕೋಟೆಯ ಕೇಂದ್ರ ಭಾಗದಲ್ಲಿ ಅತ್ಯಂತ ಎತ್ತರವಾದ ಮತ್ತು ಚೌಕಾಕೃತಿಯ ಕಟ್ಟಡವಿದೆ. ಇದರ ಮೇಲೆ ಹತ್ತಲು ಎರಡು ಭಾಗದಲ್ಲಿ ಮೆಟ್ಟಿಲುಗಳಿವೆ. ಸುಮಾರು ೧೦೦ ಅಡಿ ಎತ್ತರದ ಈ ಕಟ್ಟಡದ ಒಳಭಾಗದ ಪ್ರವೇಶಕ್ಕೆ ವಿಶಾಲವಾದ ಮೆಟ್ಟಿಲುಗಳಿವೆ. ೫೦ ಅಡಿ ಎತ್ತರದ ಮೇಲೆ ಮೂರು ಕಮಾನುಗಳಿಂದ ಕೂಡಿದ ವಿಶಾಲವಾದ ಸ್ಥಳವಿದೆ. ರಣಮಂಡಲದ ಒಳಗಡೆ ಪ್ರವೇಶಿಸಲು ಎರಡು ಹಂತದಲ್ಲಿ ಕಮಾನುಗಳಿವೆ[೫೦]. ಆದರೆ ಅವುಗಳನ್ನು ಸಂಪೂರ್ಣವಾಗಿ ಮುಚ್ಚಲಾಗಿದೆ. ಈ ಸ್ಥಳವನ್ನು ಮದ್ದುಗುಂಡುಗಳ ಸಂಗ್ರಹಕ್ಕೆ ಮತ್ತು ಸೈನಿಕರ ತಂಗುದಾಣಗಳಾಗಿ ಬಳಸಲಾಗುತ್ತಿತ್ತು. ಇಲ್ಲಿಂದ ೨೦ ಅಡಿ ಎತ್ತರದ ಮೇಲೆ, ಮೂರು ಬೃಹದಾಕಾರದ ತೋಪುಗಳನ್ನು ನಿಲ್ಲಿಸಲಾಗಿದೆ. ಉತ್ತರ, ಈಶಾನ್ಯ ಮತ್ತು ಪೂರ್ವ ದಿಕ್ಕಿಗೆ ಮುಖಮಾಡಿಕೊಂಡಿರುವ ಈ ತೋಪುಗಳು ಇಡೀ ಕೋಟೆಯ ರಕ್ಷಣೆಗಾಗಿ ಕಾರ್ಯನಿರ್ವಹಿಸುತ್ತಿದ್ದವು.

ರಣಮಂಡಲದ ಸುತ್ತಲು ಎತ್ತರವಾದ ಮತ್ತು ವಿಶಾಲವಾದ ತೆನೆಗಳಿವೆ. ಅಲ್ಲದೆ ತೋಪು ಚಲಾಯಿಸುವವರಿಗೆ ಇಲ್ಲಿ ವಿಶ್ರಾಂತಿ ತಾಣಗಳಿವೆ. ಮೇಲ್ಭಾಗದಲ್ಲಿ ಆರು ತಂಗುದಾಣಗಳವೆ. ಇದರಲ್ಲಿ ಪ್ರತಿಯೊಂದು ತಂಗು ದಾಣದಲ್ಲಿ ೧೫ ರಿಂದ ೨೦ ಸೈನಿಕರು ವಿಶ್ರಾಂತಿ ಪಡೆಯಬಹುದು. ಕೋಟೆಯ ಮುತ್ತಿಗೆಯ ಪೂರ್ವದಲ್ಲಿ ಶತ್ರುಗಳನ್ನು ಸದೆ ಬಡಿಯಲು ಈ ತೋಪುಗಳನ್ನು ಬಳಸಲಾಗುತ್ತಿತ್ತು. ಇಲ್ಲಿಯ ಮೂರು ತೋಪ್ಪಿನ ಕಟ್ಟೆಯ ವಿಶೇಷತೆ ಎಂದರೆ, ತೋಪಿನ ಹಿಂಭಾಗದಲ್ಲಿ ೩ ಅಡಿ ಆಳ ೨ ಅಡಿ ಅಗಲದ ವೃತ್ತಾಕಾರದ ತಗ್ಗಾದ ಸ್ಥಳವಿದ್ದು, ಇಲ್ಲಿ ಸದಾ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಏಕೆಂದರೆ ತೋಪಿಗೆ ಬೆಂಕಿ ಹಚ್ಚಿದ ನಂತರ ಸ್ಫೋಟದ ಶಬ್ದಕ್ಕೆ ಕಿವಿಗಳು ಹಾಳಾಗಬಹುದೆಂದು ಸೈನಿಕರು ನೀರಿನಲ್ಲಿ ಕುಳಿತುಕೊಳ್ಳುತ್ತಿದ್ದರು. ಈ ರೀತಿಯಲ್ಲಿ ವೈಜ್ಞಾನಿಕ ಹಿನ್ನೆಲೆಯಿಂದ ಈ ಭಾವಿಯನ್ನು ನಿರ್ಮಿಸಲಾಗಿದೆ. ಒಂದು ವೇಳೆ ಶತ್ರುಗಳು ಇದಕ್ಕೆ ಮುತ್ತಿಗೆ ಹಾಕಿದರೆ ಮೇಲಿನಿಂದ ತಪ್ಪಿಸಿಕೊಂಡು ರಕ್ಷಣೆ ಪಡೆಯಲು ಇದರ ಹೊರಭಾಗದಲ್ಲಿ ಗೋಡೆಗೆ ಅಂಟಿಕೊಂಡಿರುವಂತೆ ಮೆಟ್ಟಿಲುಗಳಿವೆ. ಈ ರಣಮಂಡಲವು ಬಹಮನಿಯರ ಕೋಟೆಯನ್ನು ರಕ್ಷಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ವಿಜಯನಗರ ಅರಸರು ಈ ಕೋಟೆಗೆ ಎರಡು ಸಲ ಮುತ್ತಿಗೆ ಹಾಕಿದರು. ಆದರೆ ಕೋಟೆಯನ್ನು ಧ್ವಂಸಗೊಳಿಸಲು ಸಾಧ್ಯವಾಗಲಿಲ್ಲ[೫೧].

[illegible]

ಕಾರಣ ಬಹಮನಿ ಸುಲ್ತಾನರು ಕೋಟೆಯಲ್ಲಿ ಅಳವಡಿಸಿಕೊಂಡಿರುವ ವಿಶೇಷ ರಕ್ಷಣಾ ವ್ಯವಸೆ, ಗುಲಬರ್ಗಾ ಕೋಟೆಯು ಯಾವುದೇ ದಾಳಿಗೆ ಧ್ವಂಸಗೊಳ್ಳದೆ ಹಾಗೆ ಉಳಿದುಕೊಂಡಿದೆ. ಆದ್ದರಿಂದ ಕರ್ನಾಟಕದಲ್ಲಿ ಬರುವ ಬಲಿಷ್ಠ ಕೋಟೆಗಳಲ್ಲಿ ಗುಲಬರ್ಗಾ ಕೋಟೆಯು ಒಂದಾಗಿದೆ. ರಕ್ಷಣಾ ದೃಷ್ಟಿಯಿಂದ ಇದೊಂದು ಪರಿಪೂರ್ಣವಾದ ಕೋಟೆಯಾಗಿದೆ.

೧೩. ಫಿರೋಜಾಬಾದ್ ಕೋಟೆ:

ಗುಲಬರ್ಗಾ ದ ದಕ್ಷಿಣಕ್ಕೆ, ೨೮ ಕಿ.ಮೀ ಅಂತರದಲ್ಲಿ, ಭೀಮಾನದಿಯ ತೀರದಲ್ಲಿ ಫಿರೋಜಾಬಾದ ಎನ್ನುವ ಹೊಸನಗರವನ್ನು ಬಹಮನಿ ಸುಲ್ತಾನ ತಾಜೋದ್ದಿನ ಫಿರೋಜಶಹಾನು (೧೩೯೭-೧೪೨೨) ನಿರ್ಮಿಸಿದನು. ತನ್ನ ರಾಜಧಾನಿಯನ್ನು ಸುರಕ್ಷಿತವಾದ ಸ್ಥಳಕ್ಕೆ ವರ್ಗಾಯಿಸಲು ಯೋಚಿಸಿ ಈ ಕ್ರಮವನ್ನು ಕೈಗೊಂಡನು. ಗುಲಬರ್ಗಾ ರಾಜ್ಯಧಾನಿಯು ನೈಸರ್ಗಿಕವಾಗಿ ರಕ್ಷಣೆಯನ್ನು ಹೊಂದಿರುವುದಿಲ್ಲವೆಂದು ಹಾಗೂ ಇತರ ಕಾರಣಗಳಿಂದ ರಾಜ್ಯಧಾನಿಯನ್ನು ಫಿರೋಜಾಬಾದಗೆ ವರ್ಗಾವಣೆ ಮಾ ಡಿದನು. ಇದು ಗುಲಬರ್ಗಾ ಜಿಲ್ಲೆಯ ಕೋಟೆಗಳಲ್ಲಿಯೆ ಅತ್ಯಂತ ವಿಶಾಲವಾದ ಸ್ಥಳವನ್ನು ಹೊಂದಿದ್ದು, ತನಗೆ ಅವಶ್ಯವಿರುವ ಎಲ್ಲಾ ಕಟ್ಟಡಗಳನ್ನು ನಿರ್ಮಿಸಿ, ಭೀಮಾ ನದಿಯಿಂದ ರಕ್ಷಣೆಯನ್ನು ಪಡೆದುಕೊಂಡನು. ದೆಹಲಿಯ ಸುಲ್ತಾನರು ಎರಡು ರಾಜ್ಯಧಾನಿಗಳನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವಂತೆ ಬಹಮನಿ ಸುಲ್ತಾನರು ಗುಲಬರ್ಗಾ ಮತ್ತು ಫಿರೋಜಾಬಾದ್ ಎರಡು ಕೇಂದ್ರ ಸ್ಥಳಗಳನ್ನಾಗಿಸಿಕೊಂಡು ಆಳ್ವಿಕೆ ಮಾಡಿದರು. ಆದರೆ ಮುಂದಿನ ರಾಜಕೀಯ ಬದಲಾವಣೆಯಿಂದಾಗಿ ಈ ನಗರ ತನ್ನ ಪ್ರಾಮುಖ್ಯತೆಯನ್ನು ಕಳೆದು ಕೊಂಡಿತು.

ಪೂರ್ವ ನಿಯೋಜಿತವಾಗಿ ನಿರ್ಮಿಸಿರುವ ಈ ಕೋಟೆಯು ರಾಜಧಾನಿಗೆ ಬೇಕಾಗುವ ಎಲ್ಲಾ ಅವಶ್ಯ ಕಟ್ಟಡಗಳನ್ನು ಹೊಂದಿದೆ. ಫಿರೋಜ ಶಹಾನು ರೇಖಾಗಣಿತದಲ್ಲಿ ವಿಶೇಷ ಜ್ಞಾನ ಹೊಂದಿದ್ದರಿಂದ, ಭೀಮಾ ನದಿಯ ಯಾವ ದಿಕ್ಕಿನಲ್ಲಿ ಮುನ್ನಡೆಯುತ್ತದೆ ಎಂದು ಗಮನಿಸಿ, ಅದರ ಪ್ರಕಾರ ಕೋಟೆಯನ್ನು ನಿರ್ಮಿಸಿದ. ಕೋಟೆಯ ಹೆಚ್ಚಿನ ಭಾಗವು ನದಿಯಿಂದ ರಕ್ಷಣೆಯನ್ನು ಪಡೆದುಕೊಂಡಿದೆ. ವಿಜಯನಗರದ ಸೈನ್ಯ ಇದೆ ಕಾರಣದಿಂದ ಮೇಲಿಂದ ಮೇಲೆ ದಾಳಿ ಮಾಡುತ್ತಿತ್ತು. ಆದ್ದರಿಂದ ತನ್ನ ರಾಜಧಾನಿಯನ್ನು ರಕ್ಷಿಸಲು ಫಿರೋಜಶಹಾನು ನದಿಯ ತೀರದಲ್ಲಿ ಕೋಟೆಯನ್ನು ನಿರ್ಮಿಸಿ ಅಲ್ಲಿಗೆ ರಾಜ್ಯಧಾನಿಯನ್ನು ವರ್ಗಾಯಿಸಿದ.

ಚೌಕಾಕೃತಿಯ ಈ ಕೋಟೆಯು ನೇರವಾದ ಗೋಡೆಯನ್ನು ಹೊಂದಿದ್ದು, ಮಧ್ಯದಲ್ಲಿ ಹೆಚ್ಚಿನ ಸಂಖ್ಯೆಯ ಕೊತ್ತಳಗಳಾಗಲಿ, ಅಥವಾ ಕಾವಲುಗೋಪುರಗಳಾಗಲಿ ಇರುವುದಿಲ್ಲ. ಈ ಕೋಟೆಯ ಗೋಡೆಯು ಹದಿನೈದು ಅಡಿ ಎತ್ತರ, ೬ ಅಡಿ ದಪ್ಪವಾಗಿದೆ. ಕೋಟೆಯ ಒಳಭಾಗದಲ್ಲಿ ಹಲವು ಗೋಡೆಗಳು ಕಂಡು ಬರುತ್ತವೆ. ಇಲ್ಲಿ ಆನೆ, ಕುದುರೆ, ಸೈನಿಕರು ಮತ್ತು ಇತರ ರಕ್ಷಣಾ ವ್ಯವಸ್ಥೆಗಾಗಿ

ವಿಶೇಷ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಆದರೆ ಪ್ರಸ್ತುತ ಕೋಟೆಯ ಒಳಭಾಗದಲ್ಲಿ ಕೆಲವು ಕಮಾನುಗಳು ಮಾತ್ರ ಉಳಿದುಕೊಂಡಿವೆ. ಆಕರ್ಷಕ ಶೈಲಿಯಲ್ಲಿ ನಿರ್ಮಿಸಿರುವ ಈ ಕಮಾನುಗಳ ಒಳಭಾಗದಲ್ಲಿ ಕಾವಲುಗಾರರಿಗೆ ವಿಶೇಷ ಸ್ಥಳವಿದೆ. ಇವುಗಳನ್ನು ಗಮನಿಸಿದಾಗ ಒಳಗಡೆ ಯಾವುದಾದರೊಂದು ರಕ್ಷಣಾ ಸಂಬಂಧಿ ಕಟ್ಟಡ ಇರುವಂತೆ ಕಂಡು ಬರುತ್ತದೆ.

ಕೋಟೆಯ ಉತ್ತರ ಭಾಗದಲ್ಲಿ ಇರುವ ಪ್ರವೇಶ ದ್ವಾರವನ್ನು 'ಕಲಬುರ್ಗಿದ್ವಾರ'ವೆಂದು ಕರೆಯುತ್ತಾರೆ[೫೨]. ೧೫ ಅಡಿ ಅಗಲ ೨೫ ಅಡಿ ಎತ್ತರದ ಕಮಾನಿನ ಆಕಾರದ ಈ ದ್ವಾರದ ನಿರ್ಮಾಣಕ್ಕೆ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಇದಕ್ಕೆ ಬಳಸಿರುವ ಕಲ್ಲುಗಳು, ನಾಲ್ಕು ಅಡಿ ಉದ್ದ ಒಂದು ಅಡಿ ಎತ್ತರವಾಗಿದ್ದು, ಕಮಾನಿನ ಆಕಾರದಂತೆ ಕಟೆದು ಅವುಗಳನ್ನು ಜೋಡಿಸಲಾಗಿದೆ. ಕಮಾನಿನ ಕೇಂದ್ರದಲ್ಲಿ ಬಳಸಿರುವ ಕಲ್ಲು (Key stone) ಮೂರು ಅಡಿ ಎತ್ತರ ನಾಲ್ಕು ಅಡಿ ಅಗಲವಾಗಿದ್ದು, ಅದರ ಕೇಂದ್ರದಲ್ಲಿ (ಮೀಸೆ ಕೌಂಸ್) ಕಮಾನಿನ ಆಕೃತಿ ಮಾಡಲಾಗಿದೆ. ಇಡಿ ಫಿರೋಜಾಬಾದ ಕೋಟೆಯ ಕಮಾನುಗಳಿಗೆ ಈ ರೀತಿಯ ಕಲ್ಲುಗಳನ್ನು ಬಳಸಲಾಗಿದೆ. ಗುಲಬರ್ಗಾದಲ್ಲಿ ನಿರ್ಮಿಸಿರುವ ಕಮಾನುಗಳಿಗಿಂತಲು ಇಲ್ಲಿಯ ಕಮಾನುಗಳು ವಿಶೇಷತೆಯಿಂದ ಕೂಡಿವೆ. ಇದರಿಂದ ದ್ವಾರಗಳ ರಚನೆಯಲ್ಲಿ ಬದಲಾವಣೆ ಗುರುತಿಸಬಹುದು. ಇಂತಹ ಶೈಲಿಯ ಕಮಾನುಗಳ ರಚನೆ ಫಿರೋಜಶಹಾನ ಕಾಲದಲ್ಲಿ ಆರಂಭಗೊಂಡು, ಉನ್ನತ ಹಂತವನ್ನು ತಲುಪಿತು. ಈ ಶೈಲಿಯ ಕಮಾನುಗಳು ಬೀದರ ರಾಜ್ಯಧಾನಿಯಲ್ಲಿ ಮುಂದುವರೆಯಲಿಲ್ಲ. ಆದ್ದರಿಂದ ಇತನ ಕಾಲದಲ್ಲಿ ನಿರ್ಮಾಣಗೊಂಡ ಕಟ್ಟಡಗಳು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲಿಲ್ಲ.

ಈ ದ್ವಾರದ ಮುಂಭಾಗದಲ್ಲಿ ಯಾವುದೆ ಕೊತ್ತಳಗಳಿಲ್ಲದಿದ್ದರೂ, ಹೊರಭಾಗದಲ್ಲಿ ನಾಲ್ಕು ಹಂತದಲ್ಲಿ ಕಲ್ಲುಗಳನ್ನು ಹೊರಭಾಗಕ್ಕೆ ಚಾಚಿಕೊಂಡಿರುವಂತೆ ರಚಿಸಲಾಗಿದೆ. ಇದರ ಮೇಲ್ಭಾಗದ ರಚನೆಯು ನಂತರದಲ್ಲಿ ಆಗಿರುವಂತೆ ಕಂಡು ಬರುತ್ತದೆ. ಏಕೆಂದರೆ ಅದಕ್ಕೆ ಸ್ಥಳಿಯ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಅಲ್ಲದೆ ಕೇಂದ್ರ ಭಾಗದಲ್ಲಿ ಶಾಸನಕ್ಕಾಗಿ ನಿರ್ಮಿಸಿದ ಸ್ಥಳವಿದೆ. ಆದರೆ ಅಲ್ಲಿ ಯಾವುದೆ ಶಾಸನ ಇರುವುದಿಲ್ಲ. ಈ ದ್ವಾರದ ಮುಂಭಾಗದಲ್ಲಿ ಕಾವಲುಗಾರರಿಗೆ ಸ್ಥಳ ಮತ್ತು ಗುಪ್ತದ್ವಾರಗಳು ಇರುವುದಿಲ್ಲ. ದ್ವಾರದ ಒಳಗಡೆ ೧೨ ಅಡಿ ಅಗಲ ೧೦ ಅಡಿ ಉದ್ದನೆಯ ಮೂರು ಅಂಕಣಗಳಿವೆ. ಕೊನೆಯ ಅಂಕಣದಲ್ಲಿ ಕೋಟೆಯ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಈ ಭಾಗದ ಕೋಟೆ ಗೋಡೆಗೆ ಸುಣ್ಣದ ಕಲ್ಲು, ಇಟ್ಟಿಗೆ ಮತ್ತು ಕಪ್ಪು ಕಲ್ಲುಗಳನ್ನು ಬಳಸಲಾಗಿದೆ. ದ್ವಾರದ ಎರಡು ಬದಿಯಲ್ಲಿ ೮ ಅಡಿ ದಪ್ಪನೆಯ ಗೋಡೆಯಿದೆ. ಉತ್ತರ ಭಾಗದ ಗೋಡೆಯಲ್ಲಿ ಯಾವುದೇ ಕೊತ್ತಳಗಳು ಇರುವುದಿಲ್ಲ, ಕಾರಣ ಗೋಡೆಯು ನೇರವಾಗಿ ಮುಂದುವರೆಯುವದರಿಂದ ಕೊತ್ತಳಗಳ ಅವಶ್ಯಕತೆ ಇರುವುದಿಲ್ಲ. ಆದರೆ ಕೆಲವು

ಭಾಗದಲ್ಲಿ ಕೋಟೆ ಗೋಡೆಯು ಒಳಭಾಗದಲ್ಲಿ ಹಾಗೂ ಹೊರಭಾಗದಲ್ಲಿ ಚಾಚಿಕೊಂಡಿದೆ. ಪೂರ್ವ ದಿಕ್ಕಿನಲ್ಲಿ ಕೋಟೆಯು ನೇರವಾಗಿದ್ದು, ಪಶ್ಚಿಮ ದಿಕ್ಕಿನವರೆಗೆ ಮುಂದುವರೆಯುತ್ತದೆ.

ಕೋಟೆಯ ಪೂರ್ವ ಭಾಗದ ದ್ವಾರವು ಬಹುಕೋನಾಕೃತಿಯ ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಈ ದ್ವಾರದ ಮುಂಭಾಗದಲ್ಲಿ ವಿಶೇಷ ರಕ್ಷಣಾ ವ್ಯವಸ್ಥೆಯಿದೆ. ಸುಮಾರು ೬೦ ಅಡಿ ಉದ್ದ ೮೦ ಅಡಿ ವಿಸ್ತೀರ್ಣವಾದ ಸ್ಥಳದಲ್ಲಿ ಗೋಡೆಗೆ ಅಂಟಿಕೊಂಡಿರುವಂತೆ ಸೈನಿಕರ ತಂಗುದಾಣಗಳಿವೆ. ಎರಡು ಬದಿಯಲ್ಲಿ ಒಟ್ಟು ೧೨ ಕಮಾನುಗಳಿಂದ ಕೂಡಿದ ಸೈನಿಕರ ರಕ್ಷಣಾ ಸ್ಥಳಗಳಿವೆ. ಇದರ ಮುಂಭಾಗದಲ್ಲಿ ಎತ್ತರವಾದ ಗೋಡೆಯಿದ್ದು, ಹೊರ ಭಾಗದಲ್ಲಿ ಮತ್ತೊಂದು ಹಂತದಲ್ಲಿ ಕಾವಲುಗಾರರ ತಂಗುದಾಣಗಳಿವೆ. ಕೋಟೆಯ ಮುಂಭಾಗದ ಈ ರಚನೆಯನ್ನು ನೋಡಿದರೆ ಇದು ಪ್ರಮುಖ ದ್ವಾರವಾಗಿರುವಂತೆ ಕಂಡು ಬರುತ್ತದೆ. ಸುಮಾರು ೩೦ ಅಡಿ ಎತ್ತರದ ಬಹುಬುಜಾಕೃತಿಯ ಕೊತ್ತಳಗಳ ಮೇಲ್ಭಾಗದಲ್ಲಿ ವೀಕ್ಷಣಾ ರಂದ್ರಗಳಿವೆ. ಕೇಂದ್ರ ಭಾಗದಲ್ಲಿಯು ಸಹ ಕಾವಲು ವ್ಯವಸ್ಥೆ ಇದೆ. ಒಳಭಾಗದಲ್ಲಿ ೪೦ ಅಡಿ ಉದ್ದದಲ್ಲಿ ಮೂರು ಕಮಾನುಗಳಿಂದ ಕೂಡಿದ ಕಟ್ಟಡಗಳಿವೆ. ಇದರ ಕಮಾನುಗಳು ವಿಶಾಲವಾಗಿ ಹಾಗೂ ಅಲಂಕಾರಗಳಿಂದ ಕೂಡಿದೆ. ಪ್ರತಿಯೊಂದು ಕಮಾನುಗಳಲ್ಲಿ ಕಲ್ಲಿನಿಂದ ಸಾಲುಗಳನ್ನು ನಿರ್ಮಿಸಲಾಗಿದೆ. ಈ ಸಾಲುಗಳು ಇಡಿ ದ್ವಾರದ ಅಲಂಕಾರವನ್ನು ಹೆಚ್ಚಿಸುತ್ತವೆ. ಒಳಭಾಗದಲ್ಲಿ ಎರಡು ಅಂತಸ್ತಿನಲ್ಲಿ ಕಾವಲುಗಾರರ ತಂಗುದಾಣಗಳಿವೆ. ಎರಡು ಬದಿಯಲ್ಲಿ ಕೋಟೆಯ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇದರ ಮೇಲ್ಭಾಗವು ಗುಮ್ಮಟದ ಆಕೃತಿಯಲ್ಲಿರಬಹುದು. ಆದರೆ ಪ್ರಸ್ತುತ ಈ ಭಾಗ ನಾಶ ಹೊಂದಿರುವುದರಿಂದ ಇದರ ಬಗ್ಗೆ ಸ್ಪಷ್ಟವಾದ ಮಾಹಿತಿ ಕಂಡುಬರುವುದಿಲ್ಲ.

ಪೂರ್ವ ದಿಕ್ಕಿನಲ್ಲಿರುವ ಕೋಟೆಯನ್ನು ಬೃಹತ್ ಕಲ್ಲುಗಳಿಂದ ನಿರ್ಮಿಸಲಾಗಿದೆ. ಕೋಟೆಯು ತಳಭಾಗದಲ್ಲಿ ೮ ರಿಂದ ೧೦ ಅಡಿ ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತಾ ಹೋಗುತ್ತದೆ. ಈ ಭಾಗದಲ್ಲಿ ಪ್ರತಿ ೫೦ ಮೀಟರಗೊಂದು ಕೋನಾಕೃತಿಯ ಕಾವಲುಗೋಪುರಗಳಿವೆ. ಸುಮಾರು ಒಂದು ಕಿ.ಮಿ. ದೂರದ ಈ ಕೋಟೆಯನ್ನು ಭದ್ರವಾಗಿ ನಿರ್ಮಿಸಲಾಗಿದೆ. ಫಿರೋಜಾಬಾದ ಕೋಟೆಯ ಯಾವ ಭಾಗದಲ್ಲಿಯು ತೋಪುಗಳು ಕಂಡು ಬರುವುದಿಲ್ಲ. ಇಲ್ಲಿಯ ಕಾವಲುಗೋಪುರಗಳ ಮೇಲೆ ತೋಪು ಕಟ್ಟೆಯು ಇರುವುದಿಲ್ಲ. ಆದ್ದರಿಂದ ನೈಸರ್ಗಿಕ ರಕ್ಷಣೆ ಇರುವ ಕೋಟೆಗಳಿಗೆ ಇವುಗಳ ಅವಶ್ಯಕತೆ ಇರುವುದಿಲ್ಲವೆಂದು ತೋರುತ್ತದೆ. ಇಡಿ ಕೋಟೆಯ ಗೋಡೆಯ ಮೇಲೆ ತೆನೆಗಳು, ಬಂದೂಕು ರಂದ್ರಗಳು ವೀಕ್ಷಣಾ ಕಿಂಡಿಗಳಂತಹ ರಕ್ಷಣಾತ್ಮಕ ಅಂಶಗಳು ಕಂಡು ಬರುವುದಿಲ್ಲ.

ಕೋಟೆಯ ದಕ್ಷಿಣ ಭಾಗದಲ್ಲಿ ನಿರ್ಧಿಷ್ಟವಾದ ಗೋಡೆ ಇಲ್ಲ. ಅವಶ್ಯಕತೆ ಇರುವ ಕಡೆಯಲ್ಲಿ ಮಾತ್ರ ಗೋಡೆಯನ್ನು ನಿರ್ಮಿಸಲಾಗಿದೆ. ಉಳಿದ ಕಡೆಯಲ್ಲಿ ನದಿಯಿಂದ ರಕ್ಷಣೆಯನ್ನು ಪಡೆಯಲಾಗಿದೆ. ಯಾವ ಭಾಗದಲ್ಲಿ ನದಿಯ ನೀರು ಕೋಟೆಯ ಒಳಗಡೆ ನುಗ್ಗುವುದು ಅಲ್ಲಿ ಮಾತ್ರ ಬೃಹತ ಪ್ರಮಾಣದ

ಮತ್ತು ಉದ್ದನೆಯ ಕಲ್ಲುಗಳನ್ನು ಬಳಸಿ ಗೋಡೆಯನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ಕಲ್ಲಿಗೆ ರಂಧ್ರ ಹಾಕಿ ಅದಕ್ಕೆ ಮತ್ತೊಂದು ಕಲ್ಲನ್ನು ಜೋಡಿಸಲಾಗಿದೆ. ನದಿಯ ಪ್ರವಾಹದಿಂದ ಕೋಟೆ ಗೋಡೆಗೆ ದಕ್ಕೆ ಉಂಟಾದಗದಂತೆ ಈ ಕ್ರಮವನ್ನು ಅಳವಡಿಸಲಾಗಿದೆ[೫೩]. ಈ ರೀತಿ ಮುಂದಾಲೋಚನೆಯಿಂದ ಫಿರೋಜ ಶಹಾನು ಕೋಟೆಯನ್ನು ನಿರ್ಮಿಸಿದ. ಸುಮಾರು ಎರಡು ಕಿ. ಮೀ.ವರೆಗೆ ಅಲ್ಲಲ್ಲಿ ಕೋಟೆ ಗೋಡೆ ಕಂಡು ಬರುತ್ತದೆ. ಆದರೆ ಕೊತ್ತಳಗಳು ಅಥವಾ ಕಾವಲುಗೋಪುರಗಳು ಕಂಡುಬರುವುದಿಲ್ಲ. ಈ ಭಾಗದಿಂದ ಶತ್ರುಗಳು ಕೋಟೆಯನ್ನು ಪ್ರವೇಶಿಸಲು ಸಾಧ್ಯವಿಲ್ಲವೆಂದು ಹೆಚ್ಚಿನ ರಕ್ಷಣಾ ವ್ಯವಸ್ಥೆಯು ಮಾಡಿರುವುದಿಲ್ಲ. ನದಿಯಿಂದ ಎತ್ತರವಾದ ಪ್ರದೇಶದಲ್ಲಿ ಕೋಟೆ ಇರುವುದರಿಂದ ನದಿಯ ನೀರು ಕೋಟೆಯ ಒಳಗೆ ಪ್ರವೇಶಿಸಲು ಸಾಧ್ಯವಾಗುವುದಿಲ್ಲ.

ಕೋಟೆಯ ನೈರುತ್ಯಭಾಗದಲ್ಲಿ ನದಿಗೆ ಸಮೀಪ ದ್ವಾರನ್ನು ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ವಿಶಾಲವಾದ ಪ್ರದೇಶವಿದ್ದು ಅದು ಕೋಟೆ ಗೋಡೆಯಿಂದ ಆವೃತವಾಗಿದೆ. ಈ ವಿಶಾಲ ಪ್ರದೇಶದಲ್ಲಿ ಒಂದು ಕಡೆಯಲ್ಲಿ ಸೈನಿಕರಿಗೆ ತಂಗುದಾಣಗಳಿವೆ. ಇವುಗಳಿಗೆ ಅಂಟಿಕೊಂಡು ಗೋಡೆಯು ವಾಯುವ್ಯ ಭಾಗದವರೆಗೆ ಮುಂದುವರೆಯುತ್ತದೆ. ಈ ದ್ವಾರದ ಕೇಂದ್ರ ಭಾಗವು ಕಪ್ಪನೆಯ ಮತ್ತು ಕಟೆದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದರ ಉಳಿದ ಭಾಗವನ್ನು ಸುಣ್ಣದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಎರಡು ಬದಿಯಲ್ಲಿ ಪಂಚಕೋನಾಕಾರದ ೩೦ ಅಡಿ ಎತ್ತರದ ಕೊತ್ತಳಗಳಿವೆ. ಇದರ ಮೇಲ್ಭಾಗ ನಾಶ ಹೊಂದಿರುವದರಿಂದ ಕಾವಲು ಸ್ಥಳಗಳು ಕಂಡು ಬರುವುದಿಲ್ಲ. ಕಪ್ಪು ಬಿಳುಪಿನ ಈ ದ್ವಾರ ನೋಡಲು ಆಕರ್ಷಕವಾಗಿದೆ. ಇದರ ಒಳಭಾಗದಲ್ಲಿ ಮೂರು ಅಂಕಣಗಳಿಂದ ಕೂಡಿದ ಕಾವಲುಗಾರರಿಗೆ ವಿಶೇಷ ಸ್ಥಳ ಹಾಗೂ ಮೇಲೆ ಹೋಗಲು ಎರಡು ಬದಿಯಲ್ಲಿ ಮೆಟ್ಟಿಲುಗಳಿವೆ. ಇಲ್ಲಿಂದ ಪ್ರವೇಶಿಸಿದರೆ, ಮುಂದೆ ಹಲವು ಪ್ರಮುಖ ರಾಜಕೀಯ ಮತ್ತು ಸಾಂಸ್ಕೃತಿಕ ಕಟ್ಟಡಗಳ ಅವಶೇಷಗಳಿವೆ.

ದಕ್ಷಿಣ ಭಾಗದ ಕೋಟೆ ಗೋಡೆಯು ಅತ್ಯಂತ ಕಿರಿದಾಗಿದ್ದು ಅದರ ಒಳಭಾಗದಲ್ಲಿ ಮತ್ತು ಹೊರಭಾಗದಲ್ಲಿ ಕೆಲವು ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ಸೈನಿಕರ ವಿಶ್ರಾಂತಿ ಗೃಹಗಳು ಹಾಗೂ ವಾಯುವ್ಯ ಭಾಗದಲ್ಲಿ ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ಪ್ರವೇಶದ್ವಾರವಿದೆ. ಆದರೆ ಈ ಕೊತ್ತಳಗಳು ಸಂಪೂರ್ಣವಾಗಿ ಅವನತಿ ಹೊಂದಿದ್ದು ಒಂದು ಕೊತ್ತಳದ ತಾಳಪಾಯ ಮಾತ್ರ ಉಳಿದುಕೊಂಡಿದೆ. ಇಲ್ಲಿಂದ ಕಲಬುರ್ಗಿ ದ್ವಾರದವರೆಗಿನ ಕೋಟೆ ಗೋಡೆಯು ಸಂಪೂರ್ಣವಾಗಿ ನಾಶವಾಗಿದೆ. ಆದ್ದರಿಂದ ಇಲ್ಲಿಯ ಕೋಟೆ ಗೋಡೆ ಮತ್ತು ಇತರ ರಕ್ಷಣಾ ವಾಸ್ತುಶಿಲ್ಪದ ಬಗ್ಗೆ ಸ್ಪಷ್ಟವಾಗಿ ಹೇಳುವುದು ಅಸಾಧ್ಯವಾಗಿದೆ.

ಕೋಟೆಯ ಒಳಗಡೆ ಹಲವು ರಕ್ಷಣಾ ವಾಸ್ತುಶಿಲ್ಪಶಿಲ್ಪಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳ ಕುರಿತು ನಿರ್ಧಿಷ್ಟವಾಗಿ ಹೇಳುವುದು ಕಷ್ಟಕರ ಉತ್ತರ ಭಾಗದಲ್ಲಿ ವಿಶಾಲವಾದ ಪ್ರದೇಶದಲ್ಲಿ ಕೆಲವು ಗೋಡೆಗಳ ತಳಪಾಯಗಳು ಮತ್ತು ಕೆಲವೊಂದು ಪ್ರವೇಶದ್ವಾರಗಳಿವೆ. ಅವುಗಳಲ್ಲಿ ಪಶ್ಚಿಮ ದಿಕ್ಕಿನಲ್ಲಿ ಮುಖ ಮಾಡಿಕೊಂಡಿರುವ ಒಂದು ಪ್ರವೇಶದ್ವಾರವಿದೆ. ಈ ದ್ವಾರವು ೧೫ ಅಡಿ ಅಗಲ ೨೫ ಅಡಿ ಎತ್ತರವಾಗಿದ್ದು, ಎರಡು ಬದಿಯಲ್ಲಿ ಚಿಕ್ಕ ಪ್ರವೇಶದ್ವಾರಗಳಿವೆ ಮತ್ತು ಇಲ್ಲಿಂದ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಒಳಗಡೆ ಕಾವಲುಗಾರರಿಗೆ ರಕ್ಷಣಾ ಸ್ಥಳವಿದೆ. ಈ ರೀತಿ ರಕ್ಷಣೆಗಾಗಿ ನಿರ್ಮಿಸಿರುವ ದ್ವಾರದ ಹಿಂಭಾಗದಲ್ಲಿ ಯಾವುದೆ ಕಟ್ಟಡಗಳು ಇರುವುದಿಲ್ಲ. ಅವುಗಳು ಸಂಪೂರ್ಣವಾಗಿ ನಾಶ ಹೊಂದಿವೆ.

ಕೋಟೆಯ ಕೇಂದ್ರಭಾಗದಲ್ಲಿ ಚೌಕಾಕೃತಿಯ ಕಟ್ಟಡವಿದೆ. ಹತ್ತು ಅಡಿ ಎತ್ತರವಾಗಿರುವ ಕಟ್ಟಡದ ಮೇಲ್ಭಾಗ ನಾಶಗೊಂಡಿದೆ. ಇದರ ರಚನಾ ಶೈಲಿಯನ್ನು ನೋಡಿದರೆ ಇದು ಕಾವಲುಗೋಪುರದಂತೆ ಕಂಡು ಬರುತ್ತದೆ. ಇದರ ಸಮೀಪದಲ್ಲಿ ೫ ಅಡಿ ಎತ್ತರದ ತಳಪಾಯದ ಮೇಲೆ ಚೌಕಾಕೃತಿಯಲ್ಲಿ ನಾಲ್ಕು ಗೋಡೆಯಿಂದ ಕೂಡಿದ ಕಟ್ಟಡವಿದೆ. ಇದರ ಮೇಲ್ಭಗದಲ್ಲಿ ಎರಡು ಗುಮ್ಮಟಗಳಿವೆ. ಈ ಗುಮ್ಮಟಗಳು ಸಂಪೂರ್ಣವಾಗಿ ಕುಸಿದು ಬಿದ್ದು ಇಡಿ ಕಟ್ಟಡ ತುಂಬಿಕೊಂಡಿದೆ. ಈ ಕಟ್ಟಡವನ್ನು ಗಾರೆಯಿಂದ ಲೇಪನ ಮಾಡಿ ಅದರ ಪ್ರತಿಯೊಂದು ಕಮಾನುಗಳ ಮೇಲೆ ಅಲಂಕಾರ ಮಾಡಲಾಗಿದೆ. ಇದು ರಕ್ಷಣಾ ಸಂಬಂಧಿ ಕಟ್ಟಡಗಳಲ್ಲಿ ಪ್ರಮುಖ ಕಟ್ಟಡವಾಗಿರುವಂತೆ ಕಂಡು ಬರುತ್ತದೆ.

ಕೋಟೆಯ ಪಶ್ಚಿಮ ಭಾಗದಲ್ಲಿ ಅರಮನೆ, ದರ್ಭಾರ ಹಾಲ್ ಮತ್ತು ಹವಾನಿಯಂತ್ರಿತ ಮಹಲ್‌ಗಳಿವೆ[೫೪]. ಅರಸು ಪರಿವಾರದವರ ರಕ್ಷಣೆಗಾಗಿ ಈ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಇದಕ್ಕೆ ಉತ್ತರ ಭಾಗದಲ್ಲಿ ಮತ್ತು ದಕ್ಷಿಣ ಭಾಗದಲ್ಲಿ ಪ್ರವೇಶ ದ್ವಾರಗಳಿವೆ. ಜಾಮಿಮಸೀದಿಯ ಹಿಂಭಾಗದಿಂದ ಅರಮನೆಗೆ ಹೋಗಲು ಮಾರ್ಗವಿದೆ. ಈ ಕಟ್ಟಡಗಳು ಬಹಮನಿ ಸುಲ್ತಾನರ ವೈಭವವನ್ನು ಕುರಿತು ಮಾಹಿತಿ ನೀಡುತ್ತವೆ. ಅಲ್ಲದೆ ಇದರ ಪಶ್ಚಿಮ ಭಾಗದಿಂದಲೂ ಮಾರ್ಗವಿದೆ. ಪೂರ್ವ ಭಾಗದಲ್ಲಿರುವ ಪ್ರವೇಶ ದ್ವಾರ ೧೨ ಅಡಿ ಅಗಲ ೨೦ ಅಡಿ ಎತ್ತರವಾಗಿದ್ದು, ಇದರ ಮೇಲ್ಭಾಗದ ಎರಡು ಬದಿಯಲ್ಲಿ ಗಾರೆಯಲ್ಲಿ ಹುಲಿಗಳ ಚಿತ್ರವನ್ನು ನಿರ್ಮಿಸಲಾಗಿದೆ. ಈ ಶೈಲಿಯ ಕಮಾನುಗಳು ನಮಗೆ ಬಹಮನಿ ಸುಲ್ತಾನರ ಯಾವ ಕೋಟೆಗಳಲ್ಲಿ ಕಂಡು ಬರುವುದಿಲ್ಲ. ಇದರ ಒಳಭಾಗದಲ್ಲಿ ಹಲವು ಮಹತ್ವದ ಕಟ್ಟಡಗಳ ತಳಪಾಯಗಳು ಕಂಡು ಬರುತ್ತವೆ. ಈ ಎಲ್ಲಾ ಕಟ್ಟಡಗಳು ಅರಸು ಪರಿವಾರದ ರಕ್ಷಣೆಗಾಗಿ ನಿರ್ಮಿ ಸಲಾಗಿದೆ.

ದಕ್ಷಿಣ ಭಾಗದ ಪ್ರವೇಶ ದ್ವಾರವು ಕಮಾನಿನ ಆಕೃತಿಯಲ್ಲಿದೆ. ಸುಮಾರು ೧೦೦ ಅಡಿ ಉದ್ದವಾಗಿರುವ ಈ ಭಾಗದ ಗೋಡೆಯ ಕೊನೆಯ ಭಾಗದಲ್ಲಿ ಮೂರು ಅಂಕಣಗಳಿಂದ ಕೂಡಿದ

[illegible]

ಪ್ರವೇಶದ್ವಾರವಿದೆ, ಇಲ್ಲಿಂದ ಒಳಗಡೆ ನಾಲ್ಕು ಕಮಾನುಗಳಿಂದ ಕೂಡಿರುವ ಪ್ರವೇಶ ದ್ವಾರವಿದೆ. ದಕ್ಷಿಣ ಭಾಗದಲ್ಲಿ ಎರಡು ಅಂತಸ್ತಿನಿಂದ ಕೂಡಿರುವ ಕಮಾನುಗಳಿವೆ. ಇಡೀ ಕಟ್ಟಡದಲ್ಲಿ ಹೆಚ್ಚಿನ ಸಂಖ್ಯೆಯ ಕಮಾನುಗಳು ಹಾಗೂ ಒಳಭಾಗದಲ್ಲಿ ವಿಶಾಲವಾದ ಪ್ರದೇಶದಲ್ಲಿ ಹಲವು ಕಟ್ಟಡಗಳ ಅವಶೇಷಗಳಿವೆ. ದಕ್ಷಿಣ ಭಾಗದಲ್ಲಿ ವಿಶಾಲವಾದ ವೇದಿಕೆ ಹಾಗೂ ಅದರ ಎರಡು ಬದಿಯಲ್ಲಿ ಗುಮ್ಮಟಗಳಿಂದ ಕೂಡಿದ ಕಟ್ಟಡಗಳಿವೆ. ಈ ಗುಮ್ಮಟಗಳು ಅಲಂಕಾರಕ ಮತ್ತು ಆಕರ್ಷಕವಾಗಿ ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ವಿಶಾಲ ಸ್ಥಳವಿದೆ ಆದ್ದರಿಂದ ಇಡೀ ಪ್ರಾಂಗಣದಲ್ಲಿ ಕಂಡುಬರುವ ಹಲವು ಬಗೆಯ ಕಟ್ಟಡಗಳಿಂದ ಕೂಡಿರುವ ಈ ಸ್ಥಳವನ್ನು ಅರಸು ಪರಿವಾರಕ್ಕಾಗಿ ಹಾಗೂ ಸಭೆ ನಡೆಸಲು ಉಪಯೋಗಿಸಿರುವಂತೆ ಕಂಡುಬರುತ್ತದೆ.

ದರ್ಬಾರ್ ಸಭಾಂಗಣದ ಹಿಂಭಾಗದಲ್ಲಿ ಎರಡು ಗೋಡೆಗಳ ಮಧ್ಯದಲ್ಲಿ ರಾಣಿ ವಾಸಕ್ಕೆ (ಹವಾನಿಯಂತ್ರಿತ ಮಹಲ್) ಹೋಗಲು ಕೆಳಹಂತದಲ್ಲಿ ಮೆಟ್ಟಿಲುಗಳಿವೆ. ಅತ್ಯಂತ ತಗ್ಗಾದ ಪ್ರದೇಶದಲ್ಲಿ ರಾಣಿ ವಾಸದ ಅರಮನೆ ಇದೆ. ದಕ್ಷಿಣಕ್ಕೆ ಮುಖ ಮಾಡಿರುವ ಈ ಅರಮನೆಯ ಒಳಗಡೆಯ ರಚನೆಯು ಆಕರ್ಷಕ ಶೈಲಿಯಲ್ಲಿದೆ. ಇದರ ಒಳಗಡೆ ವಿಶ್ರಾಂತಿಗಾಗಿ ನಿರ್ಮಿಸಿದ ವಿಶಾಲವಾದ ಸ್ಥಳವಿದ್ದು, ಮೇಲ್ಭಾಗವು ಗುಮ್ಮಟದಿಂದ ಕೂಡಿದೆ. ಅದರ ಎರಡು ಬದಿಯಲ್ಲಿ ಪಿರಮಿಡ್ ಆಕೃತಿಯ ರಚನೆಗಳು ಹಾಗೂ ಪೂರ್ವ ಭಾಗದಲ್ಲಿ ಮೂರು ಗುಮ್ಮಟಗಳಿವೆ. ಗುಮ್ಮಟ ಹಾಗೂ ಪಿರಮಿಡ್‌ಗಳಿಗೆ ಹಲವು ರಂಧ್ರಗಳನ್ನು ಹಾಕಲಾಗಿದೆ. ಸುತ್ತಲೂ ಮತ್ತು ಕೇಂದ್ರದಲ್ಲಿರುವ ಈ ರಂಧ್ರಗಳಿಂದ ನದಿಯ ಮೇಲಿನ ತಣ್ಣನೆಯ ಗಾಳಿಯು ಒಳ ಪ್ರವೇಶಿಸುವಂತೆ ನಿರ್ಮಿಸಲಾಗಿದೆ. ಅರಮನೆಯ ಮತ್ತೊಂದು ವಿಶೇಷವೆಂದರೆ ಇದರ ಎರಡು ಬದಿಯಲ್ಲಿ ಎತ್ತರವಾದ ಗೋಡೆಯಿದೆ[iii]. ಇದರ ಸುತ್ತಲು ಭದ್ರವಾದ ಕೋಟೆ ಗೋಡೆ ನಿರ್ಮಿಸಿರುವುದರಿಂದ ಇದು ಅತ್ಯಂತ ಮಹತ್ವದ ಕಟ್ಟಡವಾಗಿರುವಂತೆ ಕಂಡು ಬರುತ್ತದೆ. ಅಲ್ಲದೆ ಇದರ ಸಮೀಪದಲ್ಲಿ ಮಸೀದಿ ಇದೆ. ಸುಲ್ತಾನರು ಇಲ್ಲಿಂದ ನೇರವಾಗಿ ಪ್ರಾರ್ಥನೆಗೆ ಮತ್ತು ದರ್ಬಾರ್‌ಗೆ ಹೋಗುವಂತೆ ಇದನ್ನು ನಿರ್ಮಿಸಲಾಗಿದೆ. ವಿಶಾಲವಾದ ಪ್ರದೇಶದಲ್ಲಿ ಕಂಡು ಬರುವ ಇತರ ಕಟ್ಟಡಗಳ ತಳಪಾಯವನ್ನು ನೋಡಿದರೆ ಇದರಲ್ಲಿ ಅತಿಥಿಗಳಿಗೆ, ಆಮಂತ್ರಿತರಿಗೆ ವಿದೇಶಿ ರಾಯಭಾರಿಗಳಿಗೆ ಮತ್ತು ಅರಸು ಪರಿವಾರದವರ ವಾಸಕ್ಕಾಗಿ ನಿರ್ಮಿಸಿರುವ ಹಲವು ಕಟ್ಟಡಗಳಿರಬಹುದಾಗಿದೆ. ಒಟ್ಟಿನಲ್ಲಿ ಕೋಟೆಯ ಪಶ್ಚಿಮ ಭಾಗಕ್ಕೆ ವಿಶೇಷ ಆದ್ಯತೆಯನ್ನು ನೀಡಿ ಅತ್ಯಂತ ರಕ್ಷಣಾತ್ಮಕವಾಗಿ ಇವುಗಳನ್ನು ನಿರ್ಮಿಸಲಾಗಿದೆ.

ಕೋಟೆಯ ಕೇಂದ್ರಭಾಗದಲ್ಲಿ ಆಕಾಶಕ್ಕೆ ತೆರೆದ ಕಮಾನುಗಳಿಂದ ಕೂಡಿದ ಸುಂದರವಾದ ಜಾಮಿ ಮಸೀದಿಯನ್ನು ನಿರ್ಮಿಸಲಾಗಿದೆ. ಈ ಮಸೀದಿಯು ಗುಲಬರ್ಗಾ ಮಸೀದಿಯನ್ನು ಹೋಲುವಂತೆ ಇದ್ದರೂ ಕೆಲವು ಹಂತದಲ್ಲಿ ಭಿನ್ನವಾಗಿದೆ. ಸುಮಾರು ೨೦೦ ಅಡಿ ಉದ್ದ ೧೫೦ ಅಡಿ ಅಗಲವಾಗಿರುವ

ಸ್ಥಳದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದರ ಪ್ರವೇಶ ದ್ವಾರವು ಉತ್ತರ ಭಾಗದ ಗೋಡೆಯ ಮಧ್ಯದದೆ. ದ್ವಾರದ ನಾಲ್ಕು ಕಡೆಯಲ್ಲಿ ಕಮಾನುಗಳಿವೆ, ಇದರ ರಚನೆಗೆ ಸುಂದರವಾಗಿ ಮತ್ತು ನುಣುಪಾಗಿ ಕಟೆದ ಕಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಕಿರಿದಾದ ಇದರ ಪ್ರವೇಶದ್ವಾರಗಳು ಉಳಿದ ಕಮಾನುಗಳಿಗಿಂತ ಭಿನ್ನವಾಗಿವೆ. ಪ್ರವೇಶ ದ್ವಾರದ ಮೇಲ್ಭಾಗದಲ್ಲಿ ಕಿರಿದಾದ ಮತ್ತು ದಪ್ಪನೆಯ ಗುಮ್ಮಟವಿದೆ. ಇದು ಬೀದರನ ಗುಮ್ಮುಜ ದರ್ವಾಜವನ್ನು ಹೋಲುತ್ತದೆ.

ಪ್ರವೇಶ ದ್ವಾರದ ಎರಡು ಬದಿಯಲ್ಲಿ ಹತ್ತು ಅಡಿ ಎತ್ತರ, ಐದು ಅಡಿ ಅಗಲದ ನಾಲ್ಕು ಕಮಾನುಗಳಿವೆ. ಉತ್ತರ ಮತ್ತು ದಕ್ಷಿಣ ಭಾಗದ ಗೋಡೆಯಲ್ಲಿ ಪ್ರತಿಯೊಂದು ಭಾಗಕ್ಕೆ ೧೪ ಕಮಾನುಗಳಿಂದ ಕೂಡಿದ ಗೋಡಿ ಇದೆ. ಸಮಾನ ಆಕೃತಿಯಲ್ಲಿರುವ ಈ ಕಮಾನುಗಳು ಇಡೀ ಮಸೀದಿಯ ಸೌಂದರ್ಯವನ್ನು ಹೆಚ್ಚಿಸುತ್ತವೆ. ಗೋಡೆಯ ಕೊನೆಯ ಹಂತದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ೧೫ ಅಡಿ ಎತ್ತರದ ಈ ಗೋಡೆಯು ನಾಲ್ಕು ಅಡಿ ದಪ್ಪವಾಗಿದೆ. ಅದರ ಎರಡು ಅಡಿಯಲ್ಲಿ ಸುತ್ತಲು ತೆನೆಗಳನ್ನು ನಿರ್ಮಿಸಲಾಗಿದೆ. ದಕ್ಷಿಣ ದಿಕ್ಕಿನಲ್ಲಿ ೧೦೦ ಅಡಿ ಉದ್ದದಲ್ಲಿ ೩ ಅಡಿ ಎತ್ತರದ ವೇದಿಕೆಯ ಮೇಲೆ ಎರಡು ಹಂತದ ಕಮಾನುಗಳಿವೆ. ಇದರ ಪ್ರಾಂಗಣದಲ್ಲಿ ಪ್ರತಿ ಹತ್ತು ಅಡಿಯಲ್ಲಿ ಒಂದು ಕಮಾನು ನಿರ್ಮಿಸಲಾಗಿದೆ. ಈ ಕಮಾನುಗಳು ಕೆಳಭಾಗದಲ್ಲಿ ಕಂಬಗಳಿಂದ ಕೂಡಿವೆ ಅದರ ಮೇಲ್ಭಾಗದಲ್ಲಿಯು ಕಮಾನುಗಳ ರಚನೆ ಇದೆ. ಪ್ರತಿ ಸಾಲಿನಲ್ಲಿ ಐದು ಕಂಬಗಳಿವೆ. ಒಂದು ಕಂಬವು ನಾಲ್ಕು ಕಮಾನುಗಳಿಗೆ ಆಧಾರವಾಗಿದೆ. ಪಶ್ಚಿಮ ಭಾಗವು ಗೋಡೆಯಿಂದ ಆವೃತ್ತಯಾಗಿದೆ. ಕೇಂದ್ರದಲ್ಲಿ ಪ್ರಾರ್ಥನಾ ವೇದಿಕೆಯು (ಮಿರಬ್) ಸುಂದರವಾಗಿ ಕಟೆದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇಲ್ಲಿಂದ ಒಂದು ಚಿಕ್ಕ ದ್ವಾರವು ಹಿಂದಿನ ಅರಮನೆಗೆ ಹೋಗುತ್ತದೆ.

ಕೋಟೆಯ ಒಳಗಡೆ ಇನ್ನೂ ಹಲವಾರು ರಕ್ಷಣಾತ್ಮಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಅರಮನೆಗಳಿಗೆ ಸಂಬಂಧಿಸಿದ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳಲ್ಲಿ ಕೆಲವು ಸಂಪೂರ್ಣವಾಗಿ ಅವನತಿ ಹೊಂದಿದರೆ, ಇನ್ನೂ ಕೆಲವು ಕಟ್ಟಡಗಳು ಅವನತಿ ಹಂತದಲ್ಲಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಜಾಮಿಮಸೀದಿಯ ಮುಂಭಾಗದಲ್ಲಿ ಉತ್ತರಕ್ಕೆ ಮುಖ ಮಾಡಿಕೊಂಡಿರುವ ಎರಡು ಅಂತಸ್ತಿನ ಕಟ್ಟಡ. ಈ ಕಟ್ಟಡವು ೨೦ ಅಡಿ ಅಗಲ ೩೫ ಅಡಿ ಎತ್ತರದ ಕಮಾನಿನ ಪ್ರವೇಶ ದ್ವಾರವನ್ನು ಹೊಂದಿದ್ದು, ಇದರ ಮಧ್ಯದಲ್ಲಿ ಮತ್ತೊಂದು ಕಮಾನು ಇದೆ. ಇದು ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಅಥವಾ ರಾಜಕೀಯ ಚಟುವಟಿಕೆಗಳಿಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಏಕೆಂದರೆ ಇದರ ಎರಡು ಬದಿಯಲ್ಲಿ ಒಂದು ಅಂತಸ್ತಿನ ಕಟ್ಟಡಗಳಿವೆ. ಇದರಲ್ಲಿ ನಡೆಯುವ ಚಟುವಟಿಕೆಗಳನ್ನು ವೀಕ್ಷಿಸಲು ಅದರ ಮುಂಭಾಗದಲ್ಲಿ ವಿಶಾಲವಾದ ಪ್ರದೇಶವಿದೆ. ಇದರ ಸುತ್ತಲು

ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಪ್ರಸ್ತುತ ಇದರ ಒಂದು ಭಾಗದ ಗೋಡೆಯ ತಳಪಾಯ ಉಳಿದುಕೊಂಡಿದೆ.

ಕೋಟೆಯ ಉತ್ತರದಲ್ಲಿ ಪಿರಮಿಡ್‌ನ ಶೈಲಿಯ ಗುಮ್ಮಟವಿರುವ ಕಟ್ಟಡ, ಅದರ ಹಿಂಭಾಗದಲ್ಲಿ, ೧೦x೨೦ ಆಕೃತಿಯ ಕಲ್ಲಿನ ಕಂಬಗಳಿಂದ ಕೂಡಿದ ಮೂರು ಅಂಕಣಗಳ ಅವನತಿಯ ಹಂತದಲ್ಲಿರುವ ಕಟ್ಟಡಗಳಿವೆ. ಇದನ್ನು ಸ್ಥಳಿಯರು 'ತಂಬಾಕ ದೆವಡಿ' ಎಂದು ಕರೆಯುತ್ತಾರೆ. ಈ ಹೆಸರು ಬರಲು ಕಾರಣವೆಂದರೆ ಕೆಲವು ವರ್ಷಗಳ ಹಿಂದೆ ಇಲ್ಲಿ ತಂಬಾಕು ಸಂಗ್ರಹ ಮಾಡುತ್ತಿದ್ದರು ಅದರಿಂದ ಅದಕ್ಕೆ 'ತಂಬಾಕ ದೆವಾಡಿ' ಎಂದು ಕರೆಯಲಾಗಿದೆ. ಅದರ ಹಿಂಭಾಗದ ಕಟ್ಟಡಕ್ಕೆ 'ಗ್ಲಾಸ್‌ಹೌಸ್' ಎಂದು ಕರೆಯುತ್ತಾರೆ. ಇದಕ್ಕೆ ಬಳಸಿರುವ ಹೊಳಪುಳ್ಳ ಕಲ್ಲಿನ ಕಂಬಗಳು ಮತ್ತು ಅದರ ಗಾರೆಯ ಕೆಲಸ ಕಾಜಿನಂತೆ (ಗ್ಲಾಸ್) ನುಣುಪಾಗಿರುವುದರಿಂದ ಇದನ್ನು ಗ್ಲಾಸ್ ಹೌಸ್ ಎಂದು ಕರೆಯುತ್ತಾರೆ. ಈ ರೀತಿಯಾಗಿ ಫಿರೋಜಾಬಾದ ಕೋಟೆಯಲ್ಲಿ ಹಲವು ಬಗೆಯ ರಕ್ಷಣಾ ಕಟ್ಟಡಗಳು ಫಿರೋಜ್‌ಶಹಾನ ಕಾಲದಲ್ಲಿ ನಿರ್ಮಿಸಲಾಗಿದೆ.

೧೪. ಫರಹತಾಬಾದ ಕೋಟೆ:

ಗುಲಬರ್ಗಾದಿಂದ ೨೨ ಕಿ.ಮಿ. ದೂರದಲ್ಲಿರುವ ಈ ನಗರವು ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಹೊಂದಿದೆ. ಅವುಗಳಲ್ಲಿ ಕೋಟೆ, ಪ್ರವೇಶದ್ವಾರ, ಕಾವಲುಗೋಪುರಗಳು, ಅರಮನೆ, ಹುಡೆವು ಮುಂತಾದವುಗಳು ಪ್ರಮುಖವಾಗಿವೆ. ಕ್ರಿ.ಶ. ೧೫ನೆಯ ಶತಮಾನದಿಂದ ೧೯ನೇ ಶತಮಾನದವರೆಗೆ ಅಂದರೆ ಬಹಮನಿಯ ಸುಲ್ತಾನರಿಂದ ಹೈದ್ರಾಬಾದದ ನಿಜಾಮರ ಕಾಲದವರೆಗೆ ಇದು ಪ್ರಮುಖ ನಗರವಾಗಿತ್ತು. ಇದರ ಪ್ರಾಚೀನತೆ ಕುರಿತು ಯಾವುದೇ ದಾಖಲೆಗಳು ಇದುವರೆಗೆ ಲಭ್ಯವಾಗಿಲ್ಲ. ಇಲ್ಲಿಯ ಸ್ಮಾರಕಗಳ ವಾಸ್ತು ಶೈಲಿಯನ್ನು ಗಮನಿಸಿದರೆ ಅವುಗಳು ಬಹಮನಿಯರ ಕಾಲದಲ್ಲಿ ರಚನೆಯಾಗಿರುವಂತೆ ಕಂಡು ಬರುತ್ತದೆ. ಬಹಮನಿ ಸುಲ್ತಾನ ಫಿರೋಜ ಶಹಾನು ತನ್ನ ಉಪ ಪತ್ನಿಯಾದ ಫರೀದಾ ಬೇಗಂಳಿಗೆ ಈ ನಗರವನ್ನು ನೀಡಿದನೆಂದು ಪ್ರತೀತಿವಿದೆ[೫೬]. ಆಕೆಯ ಹೆಸರಿನಿಂದಲೆ ಕರೆಯಲ್ಪಡುವ "ಫರೀದಾಬಾದ" ಕ್ರಮೇಣವಾಗಿ ಫರಹತಾಬಾದ ಎಂದು ರೂಢಿಯಲ್ಲಿ ಬಂದಿದೆ.

ಪ್ರಸ್ತುತ ಈ ನಗರವನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ. ಹಳೆಯ ಗ್ರಾಮ, ಬೆಳವಣಿಗೆ ಹೊಂದಿದ ಗ್ರಾಮ ಮತ್ತು ಪುನರ್‌ನಿರ್ಮಾಣಗೊಂಡ ಗ್ರಾಮ. ಹಳೆಯ ಗ್ರಾಮದ ಸುತ್ತಲು ರಕ್ಷಣಾ ಗೋಡೆ ಅಥವಾ ಕೋಟೆಯನ್ನು ನಿರ್ಮಿಸಲಾಗಿದೆ. ಸದ್ಯದಲ್ಲಿ ಎಲ್ಲಾ ಭಾಗದ ಕೋಟೆಯು ಅವನತಿಗೊಂಡಿದ್ದು ಕೇವಲ ದಕ್ಷಿಣ ಭಾಗದ ಗೋಡೆ ಮಾತ್ರ ಉಳಿದುಕೊಂಡಿದೆ. ಈ ಗೋಡೆಯ ಮಧ್ಯದಲ್ಲಿ ವೃತ್ತಾಕಾರದ ಕಾವಲುಗೋಪುಗಳಿವೆ. ಹದಿನೈದು ಅಡಿ ಎತ್ತರ ೫ ಅಡಿ ದಪ್ಪವಾಗಿರುವ ಕೋಟೆಯ ಗೋಡೆಯನ್ನು ಸ್ಥಳೀಯವಾಗಿ ಲಭ್ಯವಾಗುವ ಸುಣ್ಣದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಗ್ರಾಮ

ರಕ್ಷಣೆಗೆ ಅವಶ್ಯವಿರುವ ಎಲ್ಲಾ ಲಕ್ಷಣಗಳನ್ನು ಇದು ಹೊಂದಿದೆ. ಗ್ರಾಮದ ನಾಲ್ಕು ಭಾಗಗಳಲ್ಲಿ ವೃತ್ತಾಕಾರದ ಕಾವಲುಗೋಪುರಗಳಿದ್ದವು, ಅವುಗಳಲ್ಲಿ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ ಮಾತ್ರ ಕಾವಲುಗೋಪುರಗಳು ಉಳಿದು ಕೊಂಡಿವೆ. ಇವುಗಳು ಹುಡೆವುಗಳಂತೆ ಕಂಡು ಬರುತ್ತವೆ. ಈ ಕೋಟೆಯ ಗೋಡೆಯು ನೇರವಾಗಿದ್ದು ಮಧ್ಯದಲ್ಲಿ ಯಾವುದೇ ಕೊತ್ತಳಗಳು ತೆನೆಗಳು ಅಥವಾ ವೀಕ್ಷಣಾರಂದ್ರಗಳು ಇರುವುದಿಲ್ಲ.

ಗ್ರಾಮದಲ್ಲಿ ಐದು ಹುಡೆವುಗಳಿವೆ (ಕಾವಲುಗೋಪುರ) ಅವುಗಳಲ್ಲಿ ಕೋಟೆಯ ನಾಲ್ಕು ಭಾಗಗಳಲ್ಲಿ ಮತ್ತು ಗ್ರಾಮದ ಕೇಂದ್ರ ಭಾಗದಲ್ಲಿ ಒಂದು ಎತ್ತರವಾದ ಹುಡೆವು ಇದೆ. ಇದು ಐದು ಅಡಿ ಎತ್ತರದ ವೇದಿಕೆಯ ಮೇಲೆ "ಕುದುರೆ ಲಾಳಾಕಾರದಲ್ಲಿ ನಿರ್ಮಿಸಲಾಗಿದೆ". ಸುಮಾರು ೪೦ ಅಡಿ ಎತ್ತರವಾಗಿರುವ ಈ ಹುಡವಿನ ನಿರ್ಮಾಣಕ್ಕೆ ಸ್ಥಳೀಯವಾಗಿ ಲಭ್ಯವಾಗಿರುವ ಕಲ್ಲುಗಳನ್ನು ಬಳಸಲಾಗಿದೆ. ಆಯತಾಕಾರದ ಚಿಕ್ಕ ಚಿಕ್ಕ ಕಲ್ಲುಗಳನ್ನು ಕ್ರಮಬದ್ದವಾಗಿ ಜೋಡಿಸಿರುವುದರಿಂದ ಇದು ನೊಡಲು ಆಕರ್ಷಕವಾಗಿ ಕಂಡು ಬರುತ್ತದೆ. ೧೫ ಅಡಿ ಎತ್ತರದ ಮೇಲೆ ಇದರ ಪ್ರವೇಶ ದ್ವಾರವಿದೆ. ಅಲ್ಲಿಂದ ಮೇಲೆ ಹತ್ತಲು ವೃತ್ತಾಕಾರದ ಮೆಟ್ಟಿಲುಗಳಿವೆ ಹಾಗೂ ಕೇಂದ್ರದಲ್ಲಿ ಒಂದು ಕಲ್ಲಿನ ಕಂಬವಿದೆ. ಮೇಲ್ಭಾಗದಲ್ಲಿ ಸುತ್ತಲು ೫ ಅಡಿ ಎತ್ತರದ ಗೋಡೆ ಮತ್ತು ವೀಕ್ಷಣಾ ರಂಧ್ರಗಳಿವೆ. ಮೇಲ್ಭಾಗದಿಂದ ದೂರದಲ್ಲಿ ಬರುವ ಶತ್ರುಗಳ ಚಲನವಲನವನ್ನು ವೀಕ್ಷಿಸಬಹುದಾಗಿದೆ. ಇದರ ಮುಂಭಾಗದಲ್ಲಿ ಆಯತಾಕಾರದ ಕಟೆದ ಕಲ್ಲುಗಳಿಂದ ನಿರ್ಮಿಸಿರುವ ೩೦x೬೦ ಅಡಿ ಉದ್ದ ಅಗಲದ ಬಾವಿ ಇದೆ. ಸಾಮಾನ್ಯವಾಗಿ ಜಿಲ್ಲೆಯ ಯಾವ ಭಾಗದ ಕಾವಲುಗೋಪುರಗಳು ಈ ಶೈಲಿಯಲ್ಲಿ ಕಂಡು ಬರುವುದಿಲ್ಲ. ಇಂದಿಗೂ ಇದು ಅತ್ಯಂತ ಸುಭದ್ರ ಸ್ಥಿತಿಯಲ್ಲಿದೆ.

ಗ್ರಾಮದ ಪೂರ್ವ ದಿಕ್ಕಿನಲ್ಲಿ ಎರಡು ವೃತ್ತಾಕಾರದ ಕೊತ್ತಳದ ಮಧ್ಯ ಒಂದು ಪ್ರವೇಶ ದ್ವಾರವಿದೆ. ಆದರೆ ಅದು ಸಂಪೂರ್ಣವಾಗಿ ಅವನತಿಗೊಂಡಿದ್ದು ಅದರ ಕೆಳಹಂತದ ಕಟ್ಟಡ ಮಾತ್ರ ಉಳಿದುಕೊಂಡಿದೆ. ಪಶ್ಚಿಮ ಭಾಗದಲ್ಲಿರುವ ದ್ವಾರಬಾಗಿಲು ಅತ್ಯಂತ ಭದ್ರವಾಗಿದೆ. ೧೫ ಅಡಿ ಅಗಲ ೨೫ ಅಡಿ ಎತ್ತರವಾಗಿದ್ದು ಕಮಾನಿನ ಆಕೃತಿಯಲ್ಲಿದೆ. ಇದರ ಮುಂಭಾಗದಲ್ಲಿ ಕಾವಲುಗಾರರ ವಸತಿ ನಿಲಯಗಳು ಮತ್ತು ಕಾವಲುಗೋಪುರಗಳಿವೆ. ದ್ವಾರದ ರಕ್ಷಣೆಗಾಗಿ ಇಲ್ಲಿ ಒಂದು ರಕ್ಷಣಾ ಪಡೆ ಇಡಲಾಗುತ್ತಿತ್ತು. ಇದರ ಒಳಭಾಗದಲ್ಲಿ ಸುಮಾರು ೨೫ ಅಡಿ ಉದ್ದನೆಯ ಸ್ಥಳದಲ್ಲಿ ಕಾವಲುಗಾರರ ರಕ್ಷಣೆಯ ಸಲುವಾಗಿ ವಿಶೇಷ ಸ್ಥಳವಿದೆ. ಅದರ ಮೇಲ್ಭಾಗಕ್ಕೆ ಹೋಗಲು ಮೆಟ್ಟಿಲುಗಳಿವೆ. ಈ ದ್ವಾರದ ಮುಂಭಾಗದಲ್ಲಿ ಎರಡು ಕಡೆಯಲ್ಲಿ ಚೌಕಾಕೃತಿಯ ವೀಕ್ಷಣಾ ಕಿಂಡಿಗಳಿವೆ. ಇಡಿ ದ್ವಾರ ಬಾಗಿಲನ್ನು ವೀಕ್ಷಿಸಿದರೆ ಅದು ಬಹಮನಿಯರ ನಂತರದ ಕಾಲದಲ್ಲಿ ರಚನೆಗೊಂಡಂತೆ ಕಂಡುಬರುತ್ತದೆ. ಇದರ

ಎರಡು ಬದಿಯಲ್ಲಿ ದ್ವಾರಕ್ಕೆ ಅಂಟಿಕೊಂಡಿರುವಂತೆ ಕೋಟೆ ಗೋಡೆಯು ಗ್ರಾಮವನ್ನು ಆವರಿಸಿಕೊಂಡಂತೆ ಕಂಡುಬರುತ್ತದೆ. ಇದಕ್ಕೆ ಸಂಬಂಧಿಸಿದ ಕೆಲವು ಅವಶೇಷಗಳು ಲಭ್ಯವಾಗುತ್ತವೆ.

ಗ್ರಾಮದ ಹೊರಭಾಗದ ಉತ್ತರ ದಿಕ್ಕಿನಲ್ಲಿ ಸುಲ್ತಾನನು ತನ್ನ ಉಪ ಪತ್ನಿಗಾಗಿ ಒಂದು ಅರಮನೆಯನ್ನು ಕಟ್ಟಿಸಿದ್ದಾನೆ. ಅದನ್ನು ಬೇಗಂಮಹಲ್ ಅಥವಾ ಪಾತರಗಿತ್ತಿ ಬಂಗಲೆ ಎಂದು ಕರೆಯುತ್ತಾರೆ. ಸಂಗೀತ, ನೃತ್ಯ, ಮಾಡುವ ಮಹಿಳೆಯರಿಗೆ ಸುಲ್ತಾನರು ಕೆಲವು ಗ್ರಾಮಗಳನ್ನು ಅವರ ಉಪಜೀವನಕ್ಕಾಗಿ ನೀಡುತ್ತಿದ್ದರು ಅಂಥವರನ್ನು ಸ್ಥಳಿಯ ಭಾಷೆಯಲ್ಲಿ 'ಪಾತರಗಿತ್ತಿಯರು' ಎಂದು ಕರೆಯುತ್ತಾರೆ. ಈ ಹಿನ್ನೆಲೆಯನ್ನು ಹೊಂದಿರುವ ಒಂದು ಚಿಕ್ಕ ಮಹಲ್ ಈ ಗ್ರಾಮದಲ್ಲಿದೆ. ಸುಲ್ತಾನರು ಇಲ್ಲಿಗೆ ಮೇಲಿಂದ ಮೇಲೆ ಭೇಟಿ ನೀಡುತ್ತಿದ್ದರಿಂದ ಅವರ ರಕ್ಷಣೆಗಾಗಿ ಈ ಎಲ್ಲಾ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿರುವುದಾಗಿ ಕಂಡು ಬರುತ್ತದೆ.

ಸುಮಾರು ೬೦x೯೦ ಅಡಿ ಉದ್ದ ಅಗಲದ ಸ್ಥಳದಲ್ಲಿ ಉತ್ತರಕ್ಕೆ ಮುಖ ಮಾಡಿ ಇದನ್ನು ನಿರ್ಮಿಸಲಾಗಿದೆ. ಎರಡು ಕಮಾನುಗಳ ಪ್ರವೇಶ ದ್ವಾರವನ್ನು ಹೊಂದಿರುವ ಈ ಕಟ್ಟಡವು ಒಳಗಡೆ ಮೂರು ಅಂಕಣಗಳನ್ನು ಹೊಂದಿದೆ. ೧೦ ಅಡಿ ಅಗಲ ೧೫ ಅಡಿ ಎತ್ತರದ ಈ ಕಮಾನುಗಳು ಒಳಗಡೆ ಸಮಾನ ಸ್ಥಿತಿಯಲ್ಲಿ ನಿರ್ಮಿಸಲಾಗಿದೆ. ಕೇಂದ್ರದ ಕಮಾನುಗಳ ಎರಡು ಬದಿಯಲ್ಲಿ ಮೂರು ಅಂಕಣಗಳಿವೆ. ಆದರೆ ಪ್ರಸ್ತುತ ಎರಡೂ ಬದಿಯ ಕಮಾನುಗಳು ಅವನತಿಯ ಹಂತದಲ್ಲಿದ್ದೂ ಕೇಂದ್ರದ ಕಮಾನುಗಳು ಮಾತ್ರ ಸುಸ್ಥಿತಿಯಲ್ಲಿವೆ. ಪ್ರತಿಯೊಂದು ಕಮಾನಿನ ಎರಡು ಬದಿಯಲ್ಲಿ ಚಿಕ್ಕ ವೃತ್ತಾಕಾರದ ಗಾರೆಯಿಂದ ಮಾಡಿರುವ ಅಲಂಕಾರಗಳಿವೆ. ಇವುಗಳಿಂದ ಇದು ಬಹಮನಿಯರ ಕಾಲದಲ್ಲಿ ನಿರ್ಮಾಣಗೊಂಡಿರುವುದೆಂದು ಹೇಳಲಾಗಿದೆ. ಈ ಕಟ್ಟಡವನ್ನು ಸಂಪೂರ್ಣವಾಗಿ ಗಾರೆಯಿಂದ ಲೇಪನ ಮಾಡಲಾಗಿದೆ.

ಇದರ ಮೇಲ್ಭಾಗದಲ್ಲಿ ಗುಮ್ಮಟಗಳಿರುವಂತೆ ಕಂಡು ಬರುತ್ತದೆ. ಕೇಂದ್ರದಲ್ಲಿ ದೊಡ್ಡ ಗುಮ್ಮಟವಿದ್ದು ಉಳಿದ ಕಡೆಯಲ್ಲಿ ಪಿರಮಿಡನ ಆಕೃತಿಯ ಗುಮ್ಮಟಗಳಿರಬಹುದು. ಏಕೆಂದರೆ ಫಿರೋಜಾಬಾದದಲ್ಲಿರುವ ರಾಣಿ ವಾಸವು ಸಹ ಇದೇ ಆಕೃತಿಯನ್ನು ಹೋಲುತ್ತದೆ. ಪ್ರಸ್ತುತವಾಗಿ ಇದರ ಯಾವ ಭಾಗವು ಪೂರ್ತಿಯಾಗಿ ಉಳಿದುಕೊಂಡಿರುವುದಿಲ್ಲ. ಎಲ್ಲಾ ಗುಮ್ಮಟಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಹೊರಭಾಗದಲ್ಲಿ ಅರಮನೆಯ ನಿರ್ಮಾಣಕ್ಕೆ ನುಣುಪಾಗಿ ಕಟೆದ ಕಲ್ಲುಗಳನ್ನು ಬಳಸಿರುವುದರಿಂದ ಸ್ಥಳಿಯರು ಇಲ್ಲಿಯ ಕಲ್ಲುಗಳಿಂದ ತಮ್ಮ ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದಾರೆ. ಇನ್ನೂ ಕೆಲವು ವರ್ಷಗಳಲ್ಲಿ ಈ ಮಹಲ್ ಸಂಪೂರ್ಣವಾಗಿ ನೆಲ ಸಮವಾಗುತ್ತದೆ.

೧೫. ಹೊಳಕುಂದಾ ಕೋಟೆ:

ಗುಲಬರ್ಗಾ-ಬೀದರ ರಾಜ್ಯ ಹೆದ್ದಾರಿಯಲ್ಲಿ, ೨೮ ಕಿ. ಮೀ. ನಂತರ ಬಲಗಡೆ ೨ ಕಿ.ಮಿ. ಅಂತರದಲ್ಲಿ ಹೊಳಕುಂದಾ ಗ್ರಾಮವಿದೆ. ಗ್ರಾಮದ ಪ್ರವೇಶಕ್ಕೂ ಮುಂಚೆ ಇಸ್ಲಾಂ ವಾಸ್ತು ಶೈಲಿಯ ಕಟ್ಟಡಗಳು ಕಂಡು ಬರುತ್ತವೆ. ಅವುಗಳ ಸುತ್ತಲು ಕೋಟೆಯನ್ನು ನಿರ್ಮಿಸಲಾಗಿದೆ[೫೭]. ರಾಜ್ಯಧಾನಿಯ ರಕ್ಷಣೆಗಾಗಿ, ಅರಮನೆಯ ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸುವುದು ಸಾಮಾನ್ಯ ಸಂಗತಿ. ಆದರೆ ಸಮಾಧಿಗಳ ರಕ್ಷಣೆಗಾಗಿ ಕೋಟೆ ನಿರ್ಮಿಸಿರುವುದು ಅಪರೂಪದ ಸಂಗತಿಯಾಗಿದೆ. ಸುಲ್ತಾನರು ಅಥವಾ ಸಂತರು ಜೀವಂತವಾಗಿರುವಾಗಲು ರಕ್ಷಣೆ ಬೇಕು, ಅವರು ಸತ್ತ ನಂತರ ಅವರ ಸಮಾಧಿಗಳ ರಕ್ಷಣೆಗಾಗಿ ಸುತ್ತಲು ರಕ್ಷಣಾಗೋಡೆ ಬೇಕು ಎನ್ನುವ ಅರ್ಥದಲ್ಲಿ ಈ ಕೋಟೆಯನ್ನು ನಿರ್ಮಿಸಲಾಗಿದೆ.

ಆಯತಾಕರದಲ್ಲಿರುವ ಈ ಕೋಟೆಯು ೨೦೦ ಅಡಿ ಅಗಲ ೨೫೦ ಅಡಿ ಉದ್ದವಾಗಿದೆ. ಪೂರ್ವ ಭಾಗದಲ್ಲಿ ಎರಡು ಹಂತದ ಕೋಟೆ ಗೋಡೆ ಕಂಡು ಬರುತ್ತದೆ. ಇದರ ಮುಂಭಾಗದಲ್ಲಿ ೩೦ ಅಡಿ ಅಗಲ ೪೦ ಅಡಿ ಉದ್ದದ ಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಯ ಪೂರ್ವ ಭಾಗದಲ್ಲಿ ಪ್ರಮುಖ ಪ್ರವೇಶ ದ್ವಾರವಿದೆ. ಎತ್ತರವಾದ ಸ್ಥಳದಲ್ಲಿ ನಿರ್ಮಿಸಿರುವ ಈ ದ್ವಾರಕ್ಕೆ ಹಲವು ಮೆಟ್ಟಿಲುಗಳಿವೆ. ಇದರ ಮುಂಭಾಗದಲ್ಲಿ ಎರಡು ಬದಿಯಲ್ಲಿ ಚಿಕ್ಕ ಗುಮ್ಮಟಗಳಿಂದ ಕೂಡಿದ ಕಟ್ಟಡಗಳಿವೆ. ನಂತರ ಎತ್ತರವಾದ (೬x೧೫) ಕಮಾನಿನ ಆಕಾರದ ಪ್ರವೇಶದ್ವಾರವಿದೆ. ಒಳಗಡೆ ಎರಡು ಬದಿಯಲ್ಲಿ ಎರಡು ಅಂಕಣಗಳಿಂದ ಕೂಡಿದ ಮಂಟಪಗಳಿವೆ. ಇದರ ಮೇಲ್ಭಾಗವು ಗುಮ್ಮಟದ ಆಕೃತಿಯಲ್ಲಿದೆ. ಒಳಗಡೆ ಎರಡು ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಹಾಗೂ ಎರಡು ಬದಿಯಲ್ಲಿ ನಾಲ್ಕು ಅಡಿ ಎತ್ತರದ ಮೇಲೆ ಸಾಲು ಸಮಾದಿಗಳಿವೆ. ಅವುಗಳಲ್ಲಿ ೭ ಸಮಾದಿಗಳು ಉಳಿದುಕೊಂಡಿದ್ದು ಉಳಿದವುಗಳು ಅವನತಿಗೊಂಡಿವೆ.

ಉತ್ತರ ಮತ್ತು ದಕ್ಷಿಣ ಭಾಗದ ಕೋಟೆ ಗೋಡೆಯು ಸುಮಾರು ೨೦೦ ಅಡಿ ಉದ್ದ. ೧೦ ರಿಂದ ೧೫ ಅಡಿ ಎತ್ತರವಾಗಿದ್ದು, ಐದು ಅಡಿ ದಪ್ಪವಾಗಿದೆ. ಕೆಳಭಾಗದಲ್ಲಿ ಗೋಡೆಯು ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತದೆ. ಅದರ ಮೇಲೆ ಸರಳ ಶೈಲಿಯ ತೆನೆಗಳನ್ನು ನಿರ್ಮಿಸಲಾಗಿದೆ. ಈ ತೆನೆಗಳನ್ನು ಗಾರೆಯಿಂದ ಅಲಂಕಾರ ಮಾಡಲಾಗಿದೆ. ತೆನೆಗಳ ಹಿಂಭಾಗದಲ್ಲಿ ಕಾವಲುಗಾರರು ಕೋಟೆಯ ಸುತ್ತಲು ತಿರುಗಾಡಲು ಸ್ಥಳವಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಈ ರೀತಿಯ ಚಿಕ್ಕದಾದ ದಾರಿಯು ವಾಗಣಗೇರಿ ಕೋಟೆಯಲ್ಲಿ ಮಾತ್ರ ಕಂಡು ಬರುತ್ತದೆ. ಅಲ್ಲದೆ ಕೋಟೆಯ ಸುತ್ತಲು ಇರುವ ತೆನೆಗಳಲ್ಲಿ ಯಾವುದೆ ವೀಕ್ಷಣಾ ರಂದ್ರಗಳು ಇರುವುದಿಲ್ಲ. ಮಧ್ಯದಲ್ಲಿ ಕಾವಲುಗಾರರಿಗೆ ವಿಶ್ರಾಂತಿ ಪಡೆಯಲು ವಿಶ್ರಾಂತಿ ಸ್ಥಳಗಳು ಇರುವುದಿಲ್ಲ. ಇವುಗಳನ್ನು ನೋಡಿದರೆ ರಕ್ಷಣಾ ದೃಷ್ಟಿಯಿಂದ ಮತ್ತು ರಾಜಕೀಯ ದೃಷ್ಟಿಯಿಂದ ಈ ಕೋಟೆಯು ಮಹತ್ವವಾದುದಲ್ಲ ಎಂದು ಕಂಡು ಬರುತ್ತದೆ.

ಕೋಟೆಯ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ದ್ವಾರಗಳಿವೆ. ೮ ಅಡಿ ಅಗಲ ೧೫ ಅಡಿ ಎತ್ತರವಾಗಿರುವ ಈ ದ್ವಾರಗಳು ಕಮಾನಿನ ಆಕಾರದಲ್ಲಿವೆ. ಮೇಲ್ಭಾಗದಲ್ಲಿ ಎರಡೂ ಬದಿಯಲ್ಲಿ ವೃತ್ತಾಕಾರದ ಗಾರೆಯಿಂದ ನಿರ್ಮಿಸಿರುವ ರೇಖಾ ಚಿತ್ರಗಳಿವೆ. ಸಾಮಾನ್ಯವಾಗಿ ಬಹಮನಿಯರ ಕಾಲದಲ್ಲಿ ನಿರ್ಮಾಣಗೊಂಡ ಪ್ರವೇಶ ದ್ವಾರಗಳ ಲಕ್ಷಣಗಳು ಇಲ್ಲಿ ಕಂಡು ಬರುತ್ತವೆ. ಇದರ ಹಿಂಭಾಗದಲ್ಲಿ ಕೋಟೆ ಗೋಡೆಯ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಕೋಟೆಯ ನಾಲ್ಕು ಭಾಗಕ್ಕೆ ೨೦ ಅಡಿ ಎತ್ತರವಾದ ಕಾವಲುಗೋಪುರಗಳಿವೆ. ಇವುಗಳಲ್ಲಿ ಪ್ರಸ್ತುತ ಕೇವಲ ಮೂರು ಕಾವಲುಗೋಪುರಗಳು ಮಾತ್ರ ಉಳಿದುಕೊಂಡಿವೆ. ಸರಳ ಶೈಲಿಯಲ್ಲಿರುವ ಈ ಗೋಪುರಗಳಿಗೆ ಮೇಲೆ ಹತ್ತಲು ಮೆಟ್ಟಿಲುಗಳು ಇರುವುದಿಲ್ಲ, ಕೋಟೆ ಗೋಡೆಯಿಂದಲೆ ಮೇಲೆ ಹತ್ತಬಹುದು. ಅಲ್ಲದೆ ಇವುಗಳ ಮೇಲೆ ಯಾವುದೆ ತೋಪುಗಳು ಅಥವಾ ತೋಪು ಕಟ್ಟೆಯು ಕಂಡು ಬರುವುದಿಲ್ಲ. ಕಾವಲುಗೋಪುರಗಳು ಆಕಾರದಲ್ಲಿ ಅತ್ಯಂತ ಚಿಕ್ಕದಾಗಿವೆ.

ವಾಯುವ್ಯ ಭಾಗದಲ್ಲಿ ಕೋಟೆಗೆ ಅಂಟಿಕೊಂಡಿರುವಂತೆ ಕೆಲವು ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಇವುಗಳ ಬಗ್ಗೆ ಸ್ಪಷ್ಟವಾಗಿ ಹೇಳುವುದು ಅಸಾಧ್ಯವಾಗಿದೆ. ಪಶ್ಚಿಮ ಭಾಗದ ಕೋಟೆಯ ಗೋಡೆಯ ಮಧ್ಯದಲ್ಲಿ ಮೂರು ಅಂಕಣಗಳ ಪ್ರಾರ್ಥನಾಲಯಗಳಿವೆ. ಅತ್ಯಂತ ಸರಳ ಶೈಲಿಯ ಈ ಕಟ್ಟಡದ ಕಮಾನುಗಳು ಕಲ್ಲಿನಕಂಬಗಳ ಮೇಲೆ ನಿಂತಿವೆ. ಇದರ ಗೋಡೆ ಮತ್ತು ಕಮಾನುಗಳ ಮೇಲೆ ಸುಂದರವಾದ ಗಾರೆಯ ಅಲಂಕಾರಗಳಿವೆ. ಪ್ರಾರ್ಥನಾಲಯದ ಕೇಂದ್ರದ ರಚನೆಯು ಅವನತಿ ಹೊಂದಿವೆ[೫೮].

ಕೋಟೆಯ ದಕ್ಷಿಣ ಭಾಗದ ಗೋಡೆಯು ನೇರವಾಗಿದ್ದು, ಮಧ್ಯದಲ್ಲಿ ಒಂದು ಕಾವಲುಗೋಪುರವಿದೆ. ಈ ಭಾಗದ ಗೋಡೆಯ ಸ್ವಲ್ಪ ಎತ್ತರವಾಗಿದ್ದೂ, ಇದನ್ನು ಉತ್ತರ ಭಾಗದ ಗೋಡೆಯಂತೆ ನಿರ್ಮಿಸಲಾಗಿದೆ. ಮಧ್ಯದಲ್ಲಿ ಮೇಲೆ ಹತ್ತಲು ಎರಡು ನಿಟ್ಟಿನ ಮೆಟ್ಟಿಲುಗಳಿವೆ. ಆಗ್ನೇಯ ದಿಕ್ಕಿನಲ್ಲಿ ಒಂದು ಕಮಾನಿನ ಆಕೃತಿಯ ದ್ವಾರವಿದೆ. ಈ ದ್ವಾರವು ಉತ್ತರ ಭಾಗದ ದ್ವಾರವನ್ನು ಹೋಲುತ್ತದೆ. ಇದರ ಒಳಭಾಗದಲ್ಲಿ ಮೂರು ವೃತ್ತಾಕಾರದಲ್ಲಿ ಕಲ್ಲಿನಿಂದ ನಿರ್ಮಿಸಿದ ನೀರಿನ ತೊಟ್ಟಿಗಳಿವೆ. ಕೋಟೆಯ ಕೇಂದ್ರ ಭಾಗದಲ್ಲಿ ಒಟ್ಟು ಏಳು ಸಮಾಧಿಗಳಿವೆ. ಗುಲಬರ್ಗಾದ ಸಾಥಗುಮ್ಮ್ರಜ್‌ಗಳಂತೆ ಇವುಗಳು ಕಂಡು ಬರುತ್ತವೆ. ಅಲ್ಲಿದೆ ದಕ್ಷಿಣ ಭಾಗದ ಕೋಟೆಯ ಒಳಗಡೆ ಹಲವು ಸಮಾಧಿಗಳ ಅವಶೇಷಗಳಿವೆ[೫೯].

ಒಟ್ಟಿನಲ್ಲಿ ಹೊಳಕುಂದಾ ಕೋಟೆಯು ರಾಜಕೀಯ ಚಟುವಟಿಕೆಗಳಿಗಾಗಿ ನಿರ್ಮಿಸಿರುವಂತೆ ಕಂಡು ಬರುವುದಿಲ್ಲ. ಇಲ್ಲಿಯ ಏಳು ಸಾಲು ಸಮಾಧಿಗಳು ಸಂತರ ಹಾಗೂ ಸುಲ್ತಾನರಿಗಾಗಿ ನಿರ್ಮಿಸಲಾಗಿದೆ. ಈ ಸಮಾಧಿಗಳ ಸಂರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಿರುವಂತೆ ಕಂಡು ಬರುತ್ತವೆ. ಗುಲಬರ್ಗಾ, ಬೀದರ ಮಾರ್ಗದಲ್ಲಿ ಇದು ಒಂದು ಪವಿತ್ರ ಸ್ಥಳವಾಗಿರುವುದರಿಂದ ಪ್ರಮುಖ ವ್ಯಕ್ತಿಗಳನ್ನು ಇಲ್ಲಿ ಸಮಾಧಿ

ಮಾಡಲಾಗುತ್ತಿರುವಂತೆ ಕಂಡು ಬರುತ್ತದೆ. ಹೊಳಕುಂದಾದಲ್ಲಿ ನಿರ್ಮಿಸಿರುವ ಸಮಾಧಿಗಳು ಗುಲಬರ್ಗಾ, ಬೀದರ ಮತ್ತು ಬಿಜಾಪೂರ ಶೈಲಿಯನ್ನು ಹೋಲುತ್ತವೆ. ಆದ್ದರಿಂದ ಈ ಕಟ್ಟಡಗಳು ಕಾಲಕ್ರಮೇಣ ರಚನೆಯಾಗಿರುವಂತೆ ಕಂಡು ಬರುತ್ತದೆ. 'ಹೊಳಕುಂದ' ಪ್ರದೇಶವು ಪವಿತ್ರವಾದ ಸ್ಥಳವಾಗಿರುವುದರಿಂದ ಶ್ರೇಷ್ಠ ಸೂಫಿಸಂತರು ಇಲ್ಲಿ ವಾಸವಾಗಿದ್ದು ಇಲ್ಲೆ ಸಮಾಧಿಯನ್ನು ನಿರ್ಮಿಸಿಕೊಂಡರು. ಸಂತರ ಅನುಯಾಯಿಗಳಾದ ಸುಲ್ತಾನರು ತಮ್ಮ ಸಮಾಧಿಗಳನ್ನು ಅವರ ಪಕ್ಕದಲ್ಲಿ ನಿರ್ಮಿಸಿಕೊಂಡರು. ಸೂಫಿ ಸಂತರಿಗೆ ಹಾಗೂ ಅನುಯಾಯಿಗಳಿಗೆ ಹೊಳಕುಂದ ಸ್ವರ್ಗವಾಗಿ ಪರಿಣಮಿಸಿದೆ. ಕೋಟೆಯ ಹೊರಭಾಗದಲ್ಲಿ ವಿಶಾಲವಾದ ಪ್ರದೇಶದಲ್ಲಿ ಹಲವು ಸಮಾಧಿಗಳಿವೆ.

೧೬. ಶಹಾಪೂರ ಕೋಟೆ:

ಗುಲಬರ್ಗಾದಿಂದ ಬೆಂಗಳೂರಿಗೆ ಹೋಗುವ ರಾಜ್ಯ ಹೆದ್ದಾರಿಯಲ್ಲಿ ಬರುವ ಶಹಾಪೂರ ತಾಲೂಕಾ ಕೇಂದ್ರವಾಗಿದೆ. ಗುಲಬರ್ಗಾದಿಂದ ದಕ್ಷಿಣ ಭಾಗಕ್ಕೆ ೭೭ ಕಿ.ಮೀ. ದೂರದಲ್ಲಿದೆ. ಪ್ರಾಚೀನ ಕಾಲದಿಂದ ಕ್ರಿ.ಶ. ೧೭೦೭ರವರೆಗೆ ಐತಿಹಾಸಿಕ ಹಿನ್ನೆಲೆ ಹೊಂದಿರುವ ಈ ಪ್ರದೇಶವು ಹಲವು ಪ್ರಾಗೈತಿಹಾಸಿಕ ನೆಲೆಗಳನ್ನು ಹೊಂದಿದೆ. ಪುರಾಣಗಳ ಕಾಲಕ್ಕೆ ಇಲ್ಲಿ ಸಗರ ಚಕ್ರವರ್ತಿ ಆಳುತ್ತಿದ್ದನೆಂದು ಪುರಾಣಗಳಲ್ಲಿ ಉಲ್ಲೇಖಿಸಲಾಗಿದೆ. ಭೀಮಾ ನದಿಯಿಂದ ಕೃಷ್ಣಾ ನದಿಯ ಮಧ್ಯದಲ್ಲಿ ಬರುವ ಪ್ರದೇಶಗಳನ್ನು "ಸಗರ ನಾಡು" ಎಂದು ಕರೆಯುತ್ತಾರೆ. ಇದರ ಕೇಂದ್ರ ಸ್ಥಳ ಇಂದಿನ ಶಹಪೂರ ಆಗಿನ ಸಗರ ಆಗಿದೆ. ಗ್ರಾಮದ ದಕ್ಷಿಣ ಭಾಗದಲ್ಲಿರುವ ಬೆಟ್ಟವನ್ನು "ಸಗರಾದ್ರಿ" ಬೆಟ್ಟ ಎಂದು ಕರೆಯುತ್ತಾರೆ.

ಪುರಾಣ ಕಾಲದಲ್ಲಿ ಪುರಾಣ ಪ್ರಸಿದ್ದನೂ, ಮಹಾಬಲಶಾಲಿಯೂ ಉನ್ನತ ಮಹಿಮಾ ಸಂಪನ್ನನೂ ಆದ ಸಗರ ಚಕ್ರವರ್ತಿಯು "ಸಗರವನ್ನು ರಾಜ್ಯಧಾನಿ"ಯನ್ನಾಗಿ ಮಾಡಿಕೊಂಡು ಆಳಿದನೆಂದು ಪ್ರತೀತಯಿದೆ. ಬೆಟ್ಟದ ಮೇಲಿನ ಕೋಟೆಯನ್ನು ಆದಿಲ್‌ಶಾಹಿ ಮನೆತನದ ಸುಲ್ತಾನರು ಕಟ್ಟಿಸಿದರೆಂದು ಅಲ್ಲಿಯ ಶಾಸನಗಳಲ್ಲಿ ಹೇಳಲಾಗಿದೆ. ಅದನ್ನು ವಿಜಯನಗರದ ಅರಸರು ಪುನರ್ ನಿರ್ಮಿಸಿದರು. ಆದರೆ ಮೊಗಲ್ ಚರ್ಕವರ್ತಿ ಔರಂಗಜೇಬನ ಕ್ರೂರ ಆಳ್ವಿಕೆಗೆ ತುತ್ತಾಗಿ ಕೋಟೆಯ ಹಲವು ಭಾಗಗಳು ಶಿಥಿಲಗೊಂಡವು. ಬಿಜಾಪೂರದ ಆದಿಲ್ ಶಾಹಿಗಳು ಮತ್ತೆ ಅವನ್ನು ಪುನರ್ ನಿರ್ಮಿಸಿದರು. ಈ ಹಿನ್ನೆಲೆಯಲ್ಲಿ ಕೋಟೆಯ ಒಳಗಡೆ ಹಿಂದೂ ಮತ್ತು ಮುಸ್ಲಿಂ ಅವಶೇಷಗಳು ಕಂಡು ಬರುತ್ತವೆ. ಸಗರನಾಡು ಚಾಲುಕ್ಯರಿಂದ ಗೋಸಲ ವಂಶದ ದೊರೆಗಳವರೆಗೂ ಔಂಗಜೇಬನಿಂದ ಹೈದ್ರಾಬಾದದ ನಿಜಾಮನವರೆಗೆ ಹಲವರ ಆಳ್ವಿಕೆಗೆ ಒಳಪಟ್ಟಿತು. ಕೃಷ್ಣ ದೇವರಾಯನು ಸಗರ ಕೋಟೆಯ ವಶಕ್ಕಾಗಿ ಇದರ ಮೇಲೆ ದಾಳಿ ಮಾಡಿ "ಸಗರ ಸಂಕ್ರಮಣರಾಯ"ನೆಂಬ ಬಿರುದು ಪಡೆದುಕೊಂಡನು. ಸಗರ ನಾಡು ಕಾಲ ಕಾಲಕ್ಕೆ ತನ್ನ ಪ್ರಾಂತಗಳನ್ನು ವಿಸ್ತರಿಸಿಕೊಂಡಿತು. ಕೆಲ ಕಾಲಕ್ಕೆ ಅವುಗಳನ್ನು

ಕಳೆದುಕೊಂಡಿದೆ. ಈ ಪ್ರದೇಶದಲ್ಲಿ ರಾಮಾಯಣ ಮಹಾಭಾರತದ ಕಾಲದ ಹಿನ್ನೆಲೆಯ ಕೆಲವು ಪ್ರಾಂತಗಳಿವೆ.

'ಸಗರ' ಎನ್ನುವ ಗ್ರಾಮವು ಪ್ರಸ್ತುತವಾಗಿ ಮೂರು ಪ್ರದೇಶಗಳನ್ನು ಒಳಗೊಂಡಿದೆ. ಹಳೆಯ ಸಗರ, ಶಹಾಪೂರ ಮತ್ತು ಹೊಸ ಸಗರ. ಆದರೆ ಇದರಲ್ಲಿ ಯಾವ ಗ್ರಾಮ ಐತಿಹಾಸಿಕ 'ಸಗರ' ಎಂದು ಗುರುತಿಸುವುದು ಕಷ್ಟಕರವಾಗಿದೆ. ಆದರೆ ಒಂದೊಂದು ಕಾಲದಲ್ಲಿ ಒಂದೊಂದು ಪ್ರಾಂತ ಕೇಂದ್ರ ಸ್ಥಳವಾಗಿರಬಹುದು. ಆದ್ದರಿಂದ ಈ ಎಲ್ಲಾ ಗ್ರಾಮಗಳನ್ನು 'ಸಗರ' ಎಂದು ಕರೆಯುತ್ತಾರೆ. ಸಗರ ಚಕ್ರವರ್ತಿಯ ಜನನದ ವೃತ್ತಾಂತಗಳು ಮತ್ತು ರಾಜಕೀಯ ಹಿನ್ನೆಲೆಯನ್ನು ಹಿಂದಿನ ಅಧ್ಯಯದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಶಹಾಪೂರ ಕೋಟೆಯ ರಕ್ಷಣಾ ವ್ಯವಸ್ಥೆಯನ್ನು ಕುರಿತು ಚರ್ಚಿಸಲಾಗಿದೆ.

ಶಹಾಪೂರ ನಗರದ ಸುತ್ತಲು ಕೋಟೆಯಿದ್ದೂ ಅದಕ್ಕೆ ಎರಡು ಪ್ರಮುಖ ದ್ವಾರಗಳಿವೆ. ಪೂರ್ವ ಭಾಗದ ದ್ವಾರವನ್ನು "ಕೊಳ್ಳುರು ಅಗಸಿ" ಎಂದು ಪಶ್ಚಿಮ ಭಾಗದ ದ್ವಾರವನ್ನು 'ದಿಗ್ಗಿ' ಅಗಸಿ ಅಥವಾ 'ಗೋಗಿ' ಅಗಸಿ ಎಂದು ಕರೆಯುತ್ತಾರೆ. ಇದನ್ನು ಕ್ರಿ.ಶ. ೧೫೫೮-೫೯ರಲ್ಲಿ ನಿರ್ಮಿಸಲಾಯಿತು. ಇವುಗಳಿಂದ ಸುತ್ತುವರಿದ ಒಂದು ಕೋಟೆಯಿತ್ತು. ಇದನ್ನು ಸಗರ ಚಕ್ರವರ್ತಿಯು ಕಟ್ಟಿಸಿದನೆಂದು ಪ್ರತೀತವಿದೆ. ಪ್ರಸ್ತುತ ಈ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿದ್ದು ಅದರ ದ್ವಾರಗಳು ಮಾತ್ರ ಉಳಿದಿವೆ. ಈ ದ್ವಾರಗಳು ೧೫ ಅಡಿ ಅಗಲ ೨೫ ಅಡಿ ಎತ್ತರವಾಗಿವೆ. ಇದರ ಮುಂಭಾಗದಲ್ಲಿ ಎರಡು ವೃತ್ತಾಕಾರದ ಕೊತ್ತಳಗಳು ಇವೆ. ದ್ವಾರದ ಕಲ್ಲಿನ ಕಂಬಗಳು ನುಣುಪಾಗಿ ಕೆತ್ತಿ ನಿರ್ಮಿಸಲಾಗಿದೆ. ಒಳಗಡೆ ಕಾವಲುಗಾರರಿಗೆ ರಕ್ಷಣಾ ಸ್ಥಳವಿದೆ. ಈ ದ್ವಾರಗಳು ಕಾಲಕ್ರಮೇಣ ಪುನರ್‌ನಿರ್ಮಾಣಗೊಂಡವು. ಖಿಲ್ಜಿ, ತುಘಲಕ, ಬಹಮನಿ, ಆದಿಲ್‌ಶಾಹಿ ಮತ್ತು ಔರಂಗ ಜೇಬನ ಕಾಲದಲ್ಲಿ ಪುನರ್‌ನಿರ್ಮಾಣಗೊಂಡವು. ಈ ಕುರಿತು ಎರಡು ದ್ವಾರಗಳ ಮೇಲೆ ಶಾಸನಗಳಿವೆ. ಇವುಗಳು ಬಹಮನಿ ಮತ್ತು ಆದಿಲ್ ಶಾಹಿಗಳ ಕಾಲದಲ್ಲಿ ಪುನರ ನಿರ್ಮಿಸಿರುವ ವಿಷಯವನ್ನು ವಿವರಿಸುತ್ತದೆ. ಗ್ರಾಮದ ಸುತ್ತಲು ಇರುವ ಕೋಟೆಯ ಯಾವುದೇ ಅವಶೇಷಗಳು ಕಂಡು ಬರುವುದಿಲ್ಲ. ಶಹಾಪೂರ ಮತ್ತು ಸಗರಗಳನ್ನು ಸುತ್ತುವರಿದು ನಿರ್ಮಿಸಿರುವ ಕೋಟೆಯು ಸಂಪೂರ್ಣವಾಗಿ ನಾಶ ಹೊಂದಿದೆ.

ಶಹಪೂರ ನಗರದ ದಕ್ಷಿಣ ಭಾಗದಲ್ಲಿರುವ ಉದ್ದನೆಯ ಬೆಟ್ಟದ ಮೇಲೆ ವಿಶಾಲವಾದ ಕೋಟೆಯನ್ನು ನಿರ್ಮಿಸಲಾಗಿದೆ. ಮಹಮ್ಮದ ಬಿನ್ ತುಘಲಕನಿಂದ ಔರಂಗಜೇಬನವರೆಗೆ ಆಳಿರುವ ಮುಸ್ಲಿಂ ಸುಲ್ತಾನರ ಕಾಲದಲ್ಲಿ ಈ ಕೋಟೆಯು ಬೆಳವಣಿಗೆ ಹೊಂದಿತು. ಇಲ್ಲಿಯ ಶಾಸನಗಳನ್ನು ಅವಲೋಕಿಸಿದಾಗ ಇದನ್ನು ಬಿಜಾಪುರದ ಆದಿಲ್ ಶಾಹಿಗಳು ನಿರ್ಮಿಸಿದರೆಂದು ತಿಳಿದು ಬರುತ್ತದೆ. ಮುಂದೆ ಬಂದ ಇತರ ಅರಸರು ಅದನ್ನು ತಮ್ಮ ಅವಶ್ಯಕತೆಗೆ ತಕ್ಕಂತೆ ವಿಸ್ತರಿಸಿಕೊಂಡರು. ಕೋಟೆಯು

ಬೆಟ್ಟದ ಪೂರ್ವದಿಂದ ಆರಂಭವಾಗಿ ಪಶ್ಚಿಮ ಭಾಗದವರೆಗೆ ಚಾಚಿಕೊಂಡಿದೆ ಕೋಟೆಯು ವಿಸ್ತಾರಗೊಂಡಿದೆ ಇದನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ.

ಕೋಟೆಯ ಗೋಡೆಯನ್ನು ಸಂಪೂರ್ಣವಾಗಿ ಅವಲೋಕಿಸಿದಾಗ ಇದರ ರಚನೆಯಲ್ಲಿ ಹಲವಾರು ಬದಲಾವಣೆಗಳು ಕಂಡು ಬರುತ್ತದೆ. ಕ್ರಿ.ಶ. ೯ನೇಯ ಶತಮಾನದಿಂದ ೧೮ನೇಯ ಶತಮಾನದವರೆಗಿನ ನಿರ್ಮಾಣಗೊಂಡ ಕೋಟೆ ಗೋಡೆಯನ್ನು ಇಲ್ಲಿ ನೋಡಬಹುದು. ಕೆಲವು ಭಾಗದಲ್ಲಿ ಕೋಟೆಯ ಅಂಗಭಾಗಗಳನ್ನು ಅತ್ಯಂತ ಸರಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ಉದಾಹರಣೆಗೆ ಗೋಡೆಗೆ ಬಳಸಿರುವ ಕಲ್ಲುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸದೆ ಒಂದರ ಮೇಲೆ ಒಂದು ಇಟ್ಟಂತೆ ಕಂಡು ಬರುತ್ತವೆ. ಈ ರೀತಿಯ ಗೋಡೆಗಳನ್ನು ನಾವು ೮ ಮತ್ತು ೯ನೆಯ ಶತಮಾನದ ಕೋಟೆಗಳಲ್ಲಿ ಕಾಣಬಹುದು. ಇದರ ನಿರ್ಮಾಣಕ್ಕೆ ಗಾರೆಯನ್ನು ಬಳಸದೆ, ದಪ್ಪನೆಯ ಕಲ್ಲುಗಳನ್ನು ಬಳಸಿರುವುದು, ದ್ವಾರದ ಮುಂಭಾಗದಲ್ಲಿ ಸರಳ ಶೈಲಿಯ ಕೊತ್ತಳಗಳು ಮತ್ತು ಕೋಟೆಯ ಸುತ್ತಲು ತೆನೆಗಳು ಇಲ್ಲದಿರುವುದು. ಈ ರೀತಿಯ ಲಕ್ಷಣಗಳನ್ನು ಮಧ್ಯ ಯುಗದ ಕೋಟೆಯಲ್ಲಿ ಕಾಣಬಹುದು. ಮತ್ತೊಂದು ವಿಶೇಷತೆ ಎಂದರೆ ಕೋಟೆಯ ದಕ್ಷಿಣದ ಕೊತ್ತಳಗಳು ಚೌಕಾಕಾರದಲ್ಲಿವೆ. ಮೊದಲನೆಯ ಭಾಗ ಮತ್ತು ಮೂರನೆಯ ಭಾಗದ ಕೋಟೆಯಲ್ಲಿ ಹೊಲಿಕೆ ಕಂಡು ಬರುತ್ತದೆ. ಈ ಎರಡು ಭಾಗಗಳು ಎಕಕಾಲದಲ್ಲಿ ನಿರ್ಮಾಣ ಹೊಂದಿರಬಹುದು.

ಪಶ್ಚಿಮ ಭಾಗದ ಕೋಟೆಯ ಮೂರನೆಯ ಭಾಗದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಒಂದು ಪ್ರವೇಶದ್ವಾರವಿದೆ, ಮೇಲ್ಭಾಗದಲ್ಲಿರುವ ಶಾಸನದಲ್ಲಿ ಈ ಕೋಟೆಯನ್ನು ಕ್ರಿ.ಶ. ೧೫೫೫ರಲ್ಲಿ ಮೊದಲನೆಯ ಇಬ್ರಾಹಿಂ ಆದಿಲ್ ಶಹನ ಆಳ್ವಿಕೆಯಲ್ಲಿ ಆತನ ಸಲಹೆಯಂತೆ ಮಹಮ್ಮದ್ ಯೂಸೂಫ್‌ನು ಕೋಟೆಯನ್ನು ಕಟ್ಟಿಸಿದನೆಂದು ತಿಳಿದು ಬರುತ್ತದೆ.೧ ಗೋಗಿ ದರ್ವಾಜದ ಬಾಗಿಲ ಮೇಲೆ ಇರುವ ಶಾಸನದಲ್ಲಿ ಈ ಕೋಟೆಯನ್ನು ಮೊದಲನೆಯ ಅಲಿ ಆದಿಲ್ ಶಾಹನ ಆಳ್ವಿಕೆಯಲ್ಲಿ 'ನಸ್ರತಾಬಾದ್ ಕೋಟೆಯನ್ನು' ಹಾಜೀ ಇಮಾದ್‌ಖಾನನ ಮಗ ಮೀರಮುಹಮ್ಮದನು ಕೋಟೆ ಮತ್ತು ನಗರವನ್ನು ಕಟ್ಟಿಸಿದನೆಂದು ಉಲ್ಲೇಖಿಸಲಾಗಿದೆ.

ಮೊದಲನೆಯ ಕೋಟೆಯ ಮೂರನೆಯ ದ್ವಾರದ ಮೇಲಿರುವ ಶಾಸನದಲ್ಲಿ ಈ ಕೋಟೆಯನ್ನು ಆದಿಲ್ ಶಾಹನ ಆಳ್ವಿಕೆಯಲ್ಲಿ ಆತನ ಅಧಿಕಾರಿಯಾದ ಮೀರ್ ತಾಜುದ್ದೀನನು ಕ್ರಿ.ಶ. ೧೫೬೭ ರಿಂದ ೬೮ ರಲ್ಲಿ ಇದನ್ನು ಪುನರ್ ನಿರ್ಮಿಸಿದನೆಂದು ವಿವರಿಸುತ್ತದೆ. ಅಲ್ಲದೆ ಇದನ್ನು 'ದೇವದುರ್ಗ' ಎಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.೧ ಎರಡನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿ ಆತನ ಅಧಿಕಾರಿಯಾದ ಆಕಾ ಮುಹಮ್ಮದನು ನುಸ್ರತಾಬಾದದಲ್ಲಿ ಅಧಿಕಾರಿಯಾಗಿದ್ದಾಗ ಕ್ರಿ.ಶ. ೧೬೫೬-೫೭ರಲ್ಲಿ ಮುಹಮ್ಮದಿ ಬುರುಜನ್ನು ಕಟ್ಟಿಸಿದನೆಂದು ಇಲ್ಲಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ.೨ ಕೋಟೆಯ ಇನ್ನೊಂದು

ಬುರುಜಿನ ಮೇಲಿನ ಶಾಸನದಲ್ಲಿ ಈ ಬುರುಜನ್ನು ಕೋಟೆಯ ಅಧಿಕಾರಿಯಾಗಿದ್ದ ಶಾಹಮುಹಮ್ಮದನು ಕಟ್ಟಿಸಿದನೆಂದು (೧೬೬೬-೬೭) ಉಲ್ಲೇಖಿಸುತ್ತದೆ.೩

ಶಹಪೂರ ಕೋಟೆಗೆ ಮಮದಾಪೂರುದಿಂದ, ಚರಬಸವೇಶ್ವರ ದೇವಸ್ಥಾನದಿಂದ, ದಕ್ಷಿಣ ಭಾಗದ ತಾವರಕೆರೆಯಿಂದ ಮತ್ತು ಆಗ್ನೇ ಭಾಗದಿಂದ ಹತ್ತಬಹುದು. ಆದರೆ ಮಮದಾಪುರ ಗ್ರಾಮದಿಂದ ನೆಲಮಟ್ಟದ ದಾರಿಯು ನೇರವಾಗಿ ಬೆಟ್ಟವನ್ನು ತಲುಪುತ್ತದೆ. ಮಾರ್ಗದಲ್ಲಿ ಕೆಲವು ಕಟ್ಟಡಗಳು ಮತ್ತು ಸಮಾದಿಗಳಿವೆ. ಕೋಟೆಯ ಮೊದಲನೆಯ ದ್ವಾರದ ಸಮೀಪದಲ್ಲಿ ಕ್ರಿ.ಶ. ೧೦ ರಿಂದ ೧೧ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಕಂಬಗಳಿಂದ ಕೂಡಿದ ಒಂದು ಮಂಟಪವಿದೆ. ಇದರ ಮಧ್ಯದಲ್ಲಿ ಮಿಹರಬ್ ಇರುವುದರಿಂದ ಇದು ಒಂದು ಮಸೀದಿ ಎಂದು ಗುರುತಿಸಲಾಗಿದೆ. ಇಲ್ಲಿಂದ ಸ್ವಲ್ಪ ದೂರದಲ್ಲಿ ದೊಡ್ಡ ದೊಡ್ಡ ಕಲ್ಲುಗಳನ್ನು ಹಾಕಿ ಕೋಟೆಯ ದ್ವಾರಕ್ಕೆ ದಾರಿಯನ್ನು ಮಾಡಲಾಗಿದೆ. ದ್ವಾರದ ಮುಂಭಾಗದಲ್ಲಿ ಸುಮಾರು ೧೫ ರಿಂದ ೨೦ ಅಡಿ ಎತ್ತರದ ಕಲ್ಲಿನಿಂದ ನಿರ್ಮಿಸಿದ ದಾರಿ ಇದೆ. ಈ ದ್ವಾರದ ಬಲಬದಿಯಲ್ಲಿ ಶಿಥಿಲಗೊಂಡ ಕೋಟೆ ಮತ್ತು ಇತರ ಕಟ್ಟಡಗಳು ಕಂಡು ಬರುತ್ತವೆ. ಎಡಬದಿಯಲ್ಲಿ ಭದ್ರವಾದ ಮತ್ತು ಎತ್ತರವಾದ ಕೋಟೆ ಗೋಡೆ ಇದೆ. ಇದು ಬೇರೆ ಬೇರೆ ಕಾಲದಲ್ಲಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಪೂರ್ವ ದಿಕ್ಕಿನಲ್ಲಿ ಕೋಟೆ, ಗೋಡೆ ಕೊತ್ತಲಗಳು, ಕಾವಲುಗೋಪುರಗಳು ವಸತಿ ನಿಲಯಗಳು ಮತ್ತು ಇತರ ರಕ್ಷಣಾ ಕಟ್ಟಡಗಳು ಇವೆ.

ಕೋಟೆಯ ಪ್ರಮುಖ ಭಾಗದಿಂದ ಬೇರೆಯಾಗಿರುವಂತೆ ಕಂಡು ಬರುತ್ತದೆ. ಸೈನಿಕರಿಗಾಗಿ ಹಾಗೂ ಕುದುರೆಗಳಿಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಸುಮಾರು ೨೦೦ ಅಡಿಯವರೆಗೆ ಉದ್ದನೆಯ ಕೋಟೆ ಗೋಡೆಯಲ್ಲಿ ಮೂರು ವೃತ್ತಾಕಾರದ ಮತ್ತು ಎರಡು ಚೌಕಾಕಾರದ ಬುರುಜುಗಳಿವೆ.

ಶಹಾಪೂರ ಕೋಟೆಯು ಮೇಲ್ಭಾಗಕ್ಕೆ ತಲುಪಬೇಕಾದರೆ ಬೇರೆ ಬೇರೆ ದಿಕ್ಕಿನಲ್ಲಿ ಮುಖ ಮಾಡಿಕೊಂಡಿರುವ ಒಟ್ಟು ಆರು ದ್ವಾರಗಳಿಗೆ ಪ್ರತಿಯೊಂದು ದ್ವಾರವು ೧೦೦ ರಿಂದ ೧೫೦ ಅಡಿ ಎತ್ತರದ ಬೆಟ್ಟದಲ್ಲಿ ನಿರ್ಮಿಸಲಾಗಿದೆ. ಎರಡು ದ್ವಾರಗಳ ಮಧ್ಯದಲ್ಲಿ ಸುಮಾರು ೫೦ ರಿಂದ ೧೦೦ ಅಡಿ ಅಂತರದಲ್ಲಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳು, ಪ್ರಾರ್ಥನಾಲಯಗಳು, ಕಾವಲುಗಾರರ ನಿವಾಸಗಳು, ಕಾವಲುಗೋಪುರಗಳು, ಕಣಜಗಳು ಮತ್ತು ತೋಪುಗಳಿವೆ. ಈ ರೀತಿ ಶಹಾಪೂರ ಕೋಟೆಯು ಹಲವು ರಕ್ಷಣಾತ್ಮಕ ಕಟ್ಟಡಗಳಿಂದ ಕೂಡಿದೆ.

ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿರುವ ಮೊದಲನೆಯ ದ್ವಾರವು ೮ ಅಡಿ ಅಗಲ ೧೫ ಅಡಿ ಎತ್ತರವಾಗಿದೆ. ಇದಕ್ಕೆ ೧೫ ಅಡಿ ಎತ್ತರದ ಕಲ್ಲಿನಲ್ಲಿ ಕಟೆದ ಕಂಬಗಳಿವೆ. ಬಾಗಿಲಿನ ಚೌಕಟ್ಟಿನ ಮೇಲೆ ಮಧ್ಯದಲ್ಲಿ ವೃತ್ತಾಕಾರದ ಹೂವಿನ ಕೆತ್ತನೆ ಇದೆ. ನುಣುಪಾಗಿ ಕೆತ್ತನೆಯಿಂದ ಮಾಡಿರುವ ಈ ದ್ವಾರದ ಕಲ್ಲುಗಳು ಅಖಂಡವಾಗಿವೆ. ಇದಕ್ಕೆ ಕಟ್ಟಿಗೆಯ ಬಾಗಿಲಿನ ವ್ಯವಸ್ಥೆ ಮಾಡಲಾಗಿದೆ. ಆದರೆ ಪ್ರಸ್ತುತವಾಗಿ

ಕೋಟೆಯಲ್ಲಿ ಯಾವ ದ್ವಾರಕ್ಕೂ ಬಾಗಿಲುಗಳು (ಕಟ್ಟಿಗೆಯ ಕಪಾಟು) ಇರುವುದಿಲ್ಲ. ದ್ವಾರದ ಒಳಗಡೆ ಎರಡು ಬದಿಯಲ್ಲಿ ಕಾವಲುಗಾರರ ವಿಶೇಷ ಸ್ಥಳವಿದೆ. ಆದರೆ ಪ್ರಸ್ತುತವಾಗಿ ಇವುಗಳು ಅವನತಿಯ ಹಂತದಲ್ಲಿವೆ. ದ್ವಾರದ ಮೇಲ್ಭಾಗದಲ್ಲಿ ಐದು ತೆನೆಗಳಿದ್ದೂ ೨ ಅಡಿ ದಪ್ಪ ೩ ಅಡಿ ಎತ್ತರವಾಗಿರುವ ಈ ತೆನೆಗಳು ಗುಲಬರ್ಗಾದ ಬಹಮನಿಯರ ತೆನೆಗಳನ್ನು ಹೋಲುತ್ತವೆ. ದ್ವಾರದ ಒಳಗಡೆ ಸುಮಾರು ೫೦ ಅಡಿ ಅಂತರದಲ್ಲಿ ಎತ್ತರವಾದ ಬೆಟ್ಟದ ಕಲ್ಲಿನ ಮೇಲೆ ೧೦ ರಿಂದ ೧೫ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಅಲ್ಲಿಂದ ಪೂರ್ವ ಭಾಗದ ಕಡೆಗೆ ದಾರಿಯಿದೆ.

ಎರಡನೆಯ ದ್ವಾರವು ಪೂರ್ವ ದಿಕ್ಕಿಗೆ ಮುಖ ಮಾಡಿ ನಿರ್ಮಿಸಲಾಗಿದೆ. ಇದರ ಬಲ ಬದಿಯಲ್ಲಿ ೧೫ ಅಡಿ ಎತ್ತರದ ವೃತ್ತಾಕಾರದ ಕೊತ್ತಳವಿದೆ. ೧೫ ಅಡಿ ಎತ್ತರ ೮ ಅಡಿ ಅಗಲದ ಈ ಪ್ರವೇಶ ದ್ವಾರವು ಸರಳ ಶೈಲಿಯಲ್ಲಿದೆ. ಒಳಗಡೆ ಮೂರನೆಯ ದ್ವಾರಕ್ಕೆ ಹೋಗುವ ಪೂರ್ವದಲ್ಲಿ ದಕ್ಷಿಣ ಭಾಗದಲ್ಲಿ ಉತ್ತರಕ್ಕೆ ಮುಖ ಮಾಡಿಕೊಂಡಿರುವ ಮೂರು ಅಂಕಣಗಳ ಮಸೀದಿ ಇದೆ. ೪೦ ಅಡಿ ಉದ್ದ ೧೫ ಅಡಿ ಅಗಲ ಮತ್ತು ೨೦ ಅಡಿ ಎತ್ತರದ ಈ ಕಟ್ಟಡವು ಎರಡು ತೆರೆದಲ್ಲಿ ಕಮಾನುಗಳನ್ನು ಹೊಂದಿದೆ. ಮೇಲ್ಭಾಗದಲ್ಲಿ ಛಾವಣಿ ಸಂಪೂರ್ಣವಾಗಿ ಕುತಸಿದು ಬಿದ್ದಿರುವುದರಿಂದ ಅದರ ರಚನೆಯನ್ನು ಗುರುತಿಸಲು ಸಾಧ್ಯವಿಲ್ಲ. ಒಳಗಡೆಯ ಕಮಾನುಗಳನ್ನು ನೋಡಿದರೆ ಇದರ ಮೇಲ್ಭಾಗವು ಗುಮ್ಮಟಗಳಿಂದ ಕೂಡಿರುವಂತೆ ಕಂಡು ಬರುತ್ತದೆ. ಏಕೆಂದರೆ ಬಹಮನಿಯ ಕಾಲದಲ್ಲಿ ನಿರ್ಮಾಣಗೊಂಡ ಇಂತಹ ಕಮಾನುಗಳ ಮೇಲ್ಭಾಗದಲ್ಲಿ ಗುಮ್ಮಟಗಳು ರಚನೆಗೊಂಡಿವೆ.

ಮೂರನೆಯ ದ್ವಾರವು ಪೂರ್ವಕ್ಕೆ ಮುಖ ಮಾಡಿಕೊಂಡಿದ್ದೂ, ಇದರ ಎರಡು ಬದಿಯಲ್ಲಿ ಅರ್ಧವೃತ್ತಾಕಾರದ ಕೊತ್ತಳಗಳಿವೆ, ದ್ವಾರದಿಂದ ಹತ್ತು ಅಡಿ ಅಂತರದಲ್ಲಿರುವ ಈ ಕೊತ್ತಳ ೧೫ ಅಡಿ ಎತ್ತರವಾಗಿವೆ. ಸರಳ ಶೈಲಿಯ ಚೌಕಟ್ಟಿನಿಂದ ಕೂಡಿರುವ ಈ ದ್ವಾರದ ಮೇಲ್ಭಾಗದಲ್ಲಿ ಒಂದು ಶಾಸನವಿದೆ. ಕ್ರಿ.ಶ. ೧೫೬೭-೬೮ರಲ್ಲಿ ಈ ದ್ವಾರವನ್ನು ಪುನರ್‌ನಿರ್ಮಾಣಗೊಳಿಸಿರುವ ವಿಷಯ ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಬಲಭಾಗದ ಕೊತ್ತಳದಲ್ಲಿ ४x೫ ಆಕಾರದ ಒಂದು ಗುಪ್ತ ದ್ವಾರವಿದೆ. ಇಲ್ಲಿಂದ ಪ್ರವೇಶಿಸಿ ಒಳಗಡೆ ಬರಲು “L” ಆಕಾರದ ಮಾರ್ಗವಿದೆ. ದ್ವಾರದ ಒಳಗಡೆ ಎರಡು ಬದಿಯಲ್ಲಿ ೧೫ ಅಡಿ ಉದ್ದ ೧೫ ಅಡಿ ಅಗಲದ ಕಟ್ಟಡಗಳಿವೆ. ೩ ಅಡಿ ಎತ್ತರದ ಮೇಲೆ ನಿರ್ಮಿಸಿರುವ ಈ ಕಟ್ಟಡಗಳು ನಾಲ್ಕು ಭಾಗದಲ್ಲಿ ಕಮಾನುಗಳಿಂದ ಕೂಡಿವೆ. ಇದರ ಒಂದು ಬದಿಯಲ್ಲಿ ಚಿಕ್ಕ ದ್ವಾರವಿದೆ. ಈ ದ್ವಾರವನ್ನು ಮುಚ್ಚಿದಾಗ ಕಾವಲುಗಾರರು ಗುಪ್ತದ್ವಾರದಿಂದ ಒಳಗಡೆ ಪ್ರವೇಶಿಸಲು ಇದನ್ನು ನಿರ್ಮಿಸಲಾಗಿದೆ. ಈ ರೀತಿಯಾಗಿ ದ್ವಾರದ ಭದ್ರತೆ ಕಡೆಗೆ ಹೆಚ್ಚಿನ ಗಮನ ನೀಡಿರುವುದು ನಮಗೆ ಗುಲಬರ್ಗಾ ಜಿಲ್ಲೆಯ ಮತ್ತೆ ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ.

[illegible]

ಮೂರನೆಯ ದ್ವಾರದಿಂದ ನಾಲ್ಕನೆಯ ದ್ವಾರದ ಮಧ್ಯದಲ್ಲಿ ಹಲವು ರಕ್ಷಣಾತ್ಮಕ ಕಟ್ಟಡಗಳಿವೆ. ಬಲಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಕೊತ್ತಳಗಳ ಮೇಲ್ಭಾಗದಲ್ಲಿ ಕಾವಲುಗಾರರಿಗೆ ವಿಶೇಷ ರಕ್ಷಣಾ ಸ್ಥಳವಿದೆ. ಒಂದು ತಂಡದ ಕಾವಲುಗಾರರು ಕಾರ್ಯನಿರತವಾಗಿದ್ದರೆ ಮತ್ತೊಂದು ತಂಡ ಇಲ್ಲಿ ವಿಶ್ರಾಂತಿ ಪಡೆಯಬಹುದು. ಈ ರೀತಿ ಕೊತ್ತಳಗಳ ಕೇಂದ್ರ ಭಾಗದಲ್ಲಿ ತಂಗುದಾಣಗಳಿವೆ. ಇದರ ಪಕ್ಕದಲ್ಲಿ ೫ ಅಡಿ ಎತ್ತರದ ಮೇಲೆ ವೃತ್ತಾಕಾರದ ತೋಪಿನ ಕಟ್ಟೆಯಿದೆ. ಅದರ ಮೇಲೆ ೧೨ ಅಡಿ ಉದ್ದನೆಯ ತೋಪು ಮೊದಲನೆಯ ಪ್ರವೇಶ ದ್ವಾರಕ್ಕೆ ಮುಖ ಮಾಡಿ ನಿರ್ಮಿಸಲಾಗಿದೆ. ಇದರ ಹಿಂಭಾಗದಲ್ಲಿ ಅರ್ಧವೃತ್ತಾಕಾರದ ೩ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ. ಕೊತ್ತಳದ ಸುತ್ತಲು ೨ ಅಡಿ ದಪ್ಪ ೪ ಅಡಿ ಎತ್ತರದ ಅರ್ಧ ವೃತ್ತಾಕಾರದಲ್ಲಿ ತೆನೆಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ಎಲ್ಲಾ ತೆನೆಗಳನ್ನು ನಾಶವಾಗಿದ್ದು ಕೆಲವು ತೆನೆಗಳ ತಳಭಾಗ ಮಾತ್ರ ಉಳಿದುಕೊಂಡಿದೆ.

ದಕ್ಷಿಣ ಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿಕೊಂಡಿರುವ ಕಾವಲುಗಾರರ ನಿವೇಶನಗಳಿವೆ. ಸುಮಾರು ೪೦ ಅಡಿ ಉದ್ದನೆಯ ಈ ಸ್ಥಳದಲ್ಲಿ ಹಲವು ಬಗೆಯ ಸೈನಿಕರ ವಿಶ್ರಾಂತಿ ನೆಲೆಗಳಿವೆ. ಏಕೆಂದರೆ ತೋಪಿನ ಮೇಲ್ವಿಚಾರಕರು, ದ್ವಾರ ಪಾಲಕರು ಮತ್ತು ನಾಲ್ಕನೆಯ ದ್ವಾರದ ಕಾವಲುಗಾರರು ಹೀಗೆ ಬೇರೆ ಬೇರೆ ಭಾಗಗಳಲ್ಲಿ ಕಾರ್ಯನಿರ್ವಹಿಸುವ ಸೈನಿಕರಿಗೆ ಇಲ್ಲಿ ವಿಶ್ರಾಂತಿ ನೆಲೆಗಳಿವೆ. ಈ ಭಾಗದ ದ್ವಾರದ ಮೇಲೆ, ಬುರುಜುಗಳ ಸುತ್ತಲು ತೆನೆಗಳು ಮತ್ತು ವೀಕ್ಷಣಾರಂಧ್ರಗಳಿವೆ. ಆದರೆ ಕಾಲಕ್ರಮೇಣ ತೆನೆಗಳನ್ನು ತೆಗೆದು ಅಲ್ಲಿ ೪ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಇಲ್ಲಿಂದ ಸುಮಾರು ೬೦ ರಿಂದ ೭೦ ಅಡಿ ಅಂತರದಲ್ಲಿ ನಾಲ್ಕನೆಯ ದ್ವಾರವಿದೆ.

ಉತ್ತರಕ್ಕೆ ಮುಖ ಮಾಡಿರುವ ನಾಲ್ಕನೆ ದ್ವಾರದ ಬಲ ಭಾಗದಲ್ಲಿ ದೊಡ್ಡ ಬಂಡೆ, ಎಡ ಭಾಗದಲ್ಲಿ ಅರ್ಧವೃತ್ತಾಕಾರ ಮತ್ತು ಚೌಕಾಕಾರದ ಕೊತ್ತಳಗಳಿವೆ. ಇದರ ಮುಂಭಾಗದಲ್ಲಿ ಅರ್ಧವೃತ್ತಾಕಾರದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ದ್ವಾರದ ರಕ್ಷಣೆಗಾಗಿ ಈ ರೀತಿಯ ತಡೆ ಗೋಡೆಯನ್ನು ನಿರ್ಮಿಸಿ, ಅಲ್ಲಿ ಕಾವಲುಗಾರರನ್ನು ನೇಮಿಸಲಾಗುತ್ತಿತ್ತು. ಗುಲಬರ್ಗಾ ಜಿಲ್ಲೆಯ ಹಲವು ಕೋಟೆಗಳ ಮುಂಭಾಗದಲ್ಲಿ ಈ ರೀತಿಯ ತಡೆಗೋಡೆಯನ್ನು ಕಾಣಬಹುದು. ಸರಳ ಶೈಲಿಯಲ್ಲಿರುವ ಈ ದ್ವಾರವು ೬ ಅಡಿ ಅಗಲ ೧೦ ಅಡಿ ಎತ್ತರವಾಗಿದೆ. ಅದರ ಮೇಲೆ ತೆನೆಗಳನ್ನು ರಚಿಸಲಾಗಿದೆ. ಒಳಗಡೆ ಎರಡು ಬದಿಯಲ್ಲಿ ಎರಡು ಅಂಕಣಗಳ ಕಾವಲುಗಾರರ ವಿಶ್ರಾಂತಿ ಸ್ಥಳಗಳಿವೆ. ಅದರಲ್ಲಿ ಎಡ ಬದಿಯಲ್ಲಿ ವಿಶಾಲವಾಗಿದ್ದು, ಮುಂಭಾಗದ ಕೊತ್ತಳದವರೆಗೆ ಕಾವಲುಗಾರರು ಹೋಗಲು ಸ್ಥಳಾವಕಾಶ ಮಾಡಿಕೊಡಲಾಗಿದೆ. ಕೊನೆಯ ಭಾಗದ ಗೋಡೆಯಲ್ಲಿ ಮೂರನೆಯ ದ್ವಾರವನ್ನು ವೀಕ್ಷಿಸಲು ವೀಕ್ಷಣಾ ರಂಧ್ರಗಳಿವೆ. ಸುಮಾರು ೩೦ ಅಡಿ ಅಂತರದಲ್ಲಿ ಐದನೆಯ ದ್ವಾರವಿದೆ. ಎರಡು ದ್ವಾರಗಳ ಮಧ್ಯದಲ್ಲಿ ಹಲವು ರಕ್ಷಣಾ ಕ್ರಮಗಳನ್ನು ಅಳವಡಿಸಿರುವುದು ಕಂಡು ಬರುತ್ತದೆ.

ಐದನೆಯ ದ್ವಾರವು ಉತ್ತರಕ್ಕೆ ಮುಖ ಮಾಡಿಕೂಡಿದ್ದು, ಅತ್ಯಂತ ಸರಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ೬ ಅಡಿ ಅಗಲ ೮ ಅಡಿ ಎತ್ತರದ ಈ ದ್ವಾರವು ಒಳಗಡೆ ೩೦ ಅಡಿ ಅಗಲವಾಗಿದೆ. ಇದರ ಎಡಭಾಗದ ವೃತ್ತಾಕಾರದ ಗೋಡೆಯಲ್ಲಿ ಚಿಕ್ಕ ಚಿಕ್ಕ ಕಮಾನುಗಳಿವೆ. ಅದರ ಒಳಗಡೆ ಕಾವಲುಗಾರರಿಗೆ ವಿಶೇಷ ಸ್ಥಳವಿದೆ. ಈ ಗೋಪುರದ ಎರಡು ಬದಿಯಲ್ಲಿ ಅದಕ್ಕೆ ಅಂಟಿಕೊಂಡಿರುವ ದ್ವಾರಗಳಿರುವುದರಿಂದ ಕಾವಲುಗಾರರು ಅಲ್ಲಿಂದ ಹಿಂಭಾಗದ ಕೋಟೆಯನ್ನು ವೀಕ್ಷಣೆ ಮಾಡಬಹುದು. ಇಲ್ಲಿಂದ ಬಲ ಭಾಗಕ್ಕೆ ಮೇಲೆ ಹತ್ತಲು ಹಲವು ಮೆಟ್ಟಿಲುಗಳಿವೆ. ಸುಮಾರು ೧೫೦ ಅಡಿ ಅಂತರದಲ್ಲಿರುವ ಆರನೆಯ ದ್ವಾರದವರೆಗೆ ಎತ್ತರವಾದ ಮೆಟ್ಟಿಲುಗಳಿವೆ. ಇದರ ಉತ್ತರ ಭಾಗದಲ್ಲಿ ವೃತ್ತಾಕಾರದ ಕಾವಲುಗೋಪುರ ಹಾಗೂ ಅದರ ಮೇಲೆ ತೋಪು ಕಟ್ಟೆ ಇದೆ. ಆದರೆ ಪ್ರಸ್ತುತ ಇಲ್ಲಿ ತೋಪು ಕಂಡು ಬರುವುದಿಲ್ಲ.

ಆರನೆಯ ದ್ವಾರವು ಪೂರ್ವಕ್ಕೆ ಮುಖ ಮಾಡಿಕೊಂಡಿದ್ದು, ೬ ಅಡಿ ಅಗಲ ೮ ಅಡಿ ಎತ್ತರವಾಗಿದ್ದು, ಇದರ ಹೆಚ್ಚಿನ ಭಾಗ ಶಿಥಿಲಗೊಂಡಿದೆ. ಒಳಗಡೆ ಎರಡು ಬದಿಯಲ್ಲಿ ೩ ಅಡಿ ಎತ್ತರವಾದ ಕಟ್ಟೆಯ ಮೇಲೆ ಎರಡು ಬದಿಯಲ್ಲಿ ೧೦x೧೫ ಅಡಿ ಉದ್ದ ಅಗಲದ ಅಂಕಣಗಳಿವೆ. ಒಳಗಡೆ ದಕ್ಷಿಣ ಭಾಗದಲ್ಲಿ ೨೦ ಅಡಿ ಎತ್ತರದ ಎರಡು ವೃತ್ತಾಕಾರದ ಕಣಜಗಳಿವೆ. ಇವುಗಳಿಗೆ ಮೇಲೆ ಹತ್ತಲು ಗೋಡೆಗೆ ಅಂಟಿಕೊಂಡಿರುವಂತೆ ಉದ್ದನೆಯ ಕಲ್ಲುಗಳಿಂದ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಎಲ್ಲಾ ಗಿರಿದುರ್ಗಗಳಲ್ಲಿ ಇಂತಹ ಕಣಜಗಳು ಕಂಡು ಬರುತ್ತವೆ. ಅವುಗಳಲ್ಲಿ ವಿವಿಧ ಪ್ರಕಾರದ ಧಾನ್ಯಗಳನ್ನು ಸಂಗ್ರಹಿಸಿ ಇಡಲಾಗುತ್ತಿತ್ತು, ಇನ್ನೂ ಕೆಲವು ಗಿರಿದುರ್ಗಗಳಲ್ಲಿ ನೀರಿನ ಸಂಗ್ರಹಕ್ಕಾಗಿ ಇವುಗಳನ್ನು ಬಳಸುತ್ತಿರುವುದು ಕಂಡು ಬರುತ್ತದೆ. ಆದರೆ ಶಹಾಪೂರ ಕೋಟೆಯಲ್ಲಿ ಇರುವ ನೈಸರ್ಗಿಕ ಕಲ್ಲು ಬಂಡೆಗಳ ಮಧ್ಯದ ಸ್ಥಳಗಳಲ್ಲಿ ನೀರಿನ ಸಂಗ್ರಹ ಮಾಡಿಕೊಂಡಿರುವುದರಿಂದ ಇಲ್ಲಿ ಕಣಜಗಳು ಧಾನ್ಯಗಳ ಸಂಗ್ರಹಕ್ಕಾಗಿ ಬಳಸುತ್ತಿರುವುದು ಕಂಡು ಬರುತ್ತದೆ. ಕಣಜಗಳಲ್ಲಿ ಸಂಗ್ರಹಿಸಿಟ್ಟಿರುವ ದವಸ ಧಾನ್ಯಗಳು ಹಾಳಾಗದಂತೆ ಗಾಳಿ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಎರಡು ಕಣಜಗಳ ಮೇಲ್ಭಾಗದಲ್ಲಿ ಸುತ್ತಲು ಚಿಕ್ಕ ಚಿಕ್ಕ ರಂಧ್ರಗಳನ್ನು ಬಿಡಲಾಗಿದ್ದು ಮೇಲ್ಭಾಗದ ಗೋಡೆಯಲ್ಲಿ ನೀರು ಇಳಿಯದಂತೆ ಗಾರೆಯಿಂದ ಭದ್ರಗೊಳಿಸಲಾಗಿದೆ. ಒಳಭಾಗದಲ್ಲಿ ಆಳವಾದ ಸ್ಥಳವಿದೆ. ಮೇಲಿನಿಂದ ಧಾನ್ಯ ತುಂಬಿ ಅದರ ಬಾಯಿಯನ್ನು ಭದ್ರವಾಗಿ ಮುಚ್ಚಲಾಗುತ್ತಿತ್ತು. ಅವಶ್ಯವಿದ್ದಾಗ ಅದನ್ನು ತೆಗೆದು ಒಳಗಡೆ ಇಳಿದು ಧಾನ್ಯವನ್ನು ಹೊರ ತೆಗೆಯುತ್ತಿದ್ದರು.

ಬೆಟ್ಟದ ಕೊನೆಯ ಭಾಗದ ಪ್ರವೇಶಕ್ಕೆ ಉತ್ತರ ಭಾಗಕ್ಕೆ ಮುಖ ಮಾಡಿರುವ ೭ನೇಯ ದ್ವಾರವಿದೆ. ಆದರೆ ಅದು ಸಂಪೂರ್ಣವಾಗಿ ನಾಶ ಹೊಂದಿದ್ದು, ಅದರ ಯಾವುದೇ ಭಾಗವು ಕಂಡು ಬರುವುದಿಲ್ಲ. ಅಲ್ಲಿಂದ ಪ್ರವೇಶಿಸಿದರೆ, ಬಲಭಾಗದಲ್ಲಿ ಮತ್ತು ಎಡ ಭಾಗದಲ್ಲಿ ಹಲವು ಬಗೆಯ ರಕ್ಷಣಾ ಕಟ್ಟಡಗಳಿವೆ.

[illegible]

ಅವುಗಳಲ್ಲಿ ಸಭಾ ಭವನ, ಮಸೀದಿ, ಅರಸು ಪರಿವಾರದವರ ನಿವೇಶನಗಳು (ಅರಮನೆ) ಮದ್ದು ಗುಂಡಿನ ಸಂಗ್ರಹ ಅಂಗರಕ್ಷಕ ಪಡೆಯ ನಿವಾಸಗಳು ಕಂಡು ಬರುತ್ತವೆ. ಇದು ಕೋಟೆಯ ಪ್ರಮುಖ ಭಾಗವಾಗಿರುವುದರಿಂದ ಇಲ್ಲಿ ಸುಂದರವಾದ ದ್ವಾರ ಇದ್ದಿರಬಹುದು ಅದನ್ನು ನಂತರದಲ್ಲಿ ಜನರು ತೆಗೆದುಕೊಂಡು ಹೋಗಿರುವುದರಿಂದ ಪ್ರಸ್ತುತ ಇಲ್ಲಿಯ ದ್ವಾರವು ಸಂಪೂರ್ಣವಾಗಿ ದ್ವಂಶಗೊಂಡಿದೆ. ಇಲ್ಲವೆ ದಾಳಿಕೊಂಡು ಅದನ್ನು ದ್ವಂಶಗೊಳಿಸಿರಬಹುದು. ಏಕೆಂದರೆ ಇಲ್ಲಿಯ ಎಲ್ಲಾ ಕಟ್ಟಡಗಳು ಶಿಥಿಲಗೊಂಡಿರುವುದರಿಂದ, ದ್ವಾರವು ಶಿಥಿಲಗೊಂಡಿರಬಹುದಾಗಿದೆ.

ಈ ದ್ವಾರದ ಒಳಗಡೆ, ಬಲಬದಿಯಲ್ಲಿ ವಿಶಾಲವಾದ ಕಮಾನಿನಿಂದ ಕೂಡಿರುವ ಮಸೀದಿ ಇದೆ. ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಮಸೀದಿಯು ೨೦ ಅಡಿ ಉದ್ದ ೧೫ ಅಡಿ ಅಗಲ ಮತ್ತು ೨೦ ಅಡಿ ಎತ್ತರವಾಗಿದೆ. ಇದರ ಮೇಲ್ಭಾಗದಲ್ಲಿ ೩ ಅಡಿ ಎತ್ತರದ ವೃತ್ತಾಕಾರದ ಕಂಬಗಳಿವೆ. ಒಳಗಡೆ ಮೂರು ಭಾಗಗಳಲ್ಲಿ ಕಮಾನುಗಳಿಂದ ಕೂಡಿರುವ ಗೋಡೆಯಿದೆ. ಹಿಂಭಾಗದಲ್ಲಿ ಹಲವು ಬಗೆಯ ನಿವೇಶನದ ಅವಶೇಷಗಳು ಕಂಡು ಬರುತ್ತವೆ. ಅದರಲ್ಲಿ ಅರಮನೆಯ ರಚನೆಯಂತೆ ಕಂಡು ಬರುವ ಅವಶೇಷಗಳಿವೆ.

ಈ ದ್ವಾರದ ಎಡಭಾಗದಲ್ಲಿ ಶಿಥಿಲಗೊಂಡ ಎರಡು ಅಂತಸ್ತಿನ ಕಮಾನುಗಳಿವೆ. ಇಲ್ಲಿ ಅರಮನೆಯ ಕಾವಲು ಪಡೆ ಮತ್ತು ಸುಲ್ತಾನರ ಅಂಗರಕ್ಷಣಾ ಪಡೆಯ ಸ್ಥಳಗಳಾಗಿವೆ. ಏಕೆಂದರೆ ಇದರ ಮುಂಭಾಗದಲ್ಲಿ ಒಂದು ದೊಡ್ಡ ಸಭಾ ಭವನವಿದೆ. ಆದ್ದರಿಂದ ಇಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳಲ್ಲಿ ರಾಜ್ಯದ ಪ್ರಮುಖ ವ್ಯಕ್ತಿಗಳು, ಸುಲ್ತಾನರು, ಮಂತ್ರಿಗಳು, ಅಥಿತಿಗಳು ಭಾಗವಹಿಸುತ್ತಿರುವುದರಿಂದ ಅವರ ರಕ್ಷಣೆಗೆ ವಿಶೇಷ ರಕ್ಷಣಾ ದಳದ ಅವಶ್ಯಕತೆ ಇರುತ್ತದೆ. ಆದ್ದರಿಂದ ಸಭಾ ಭವನದ ಮುಂಭಾಗದಲ್ಲಿ ವಿಶೇಷ ರಕ್ಷಣಾ ಪಡೆಯ ಸಲುವಾಗಿ ಈ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ ಭಾಗದ ಎಲ್ಲಾ ರಕ್ಷಣಾ ಕಟ್ಟಡಗಳು ಶಿಥಿಲಗೊಂಡಿವೆ.

ಬೆಟ್ಟದ ಮೇಲ್ಭಾಗದಲ್ಲಿರುವ ಆಕರ್ಷಕ ಕಟ್ಟಡವೆಂದರೆ ಈ ಸಭಾ ಭವನ ಉತ್ತರಕ್ಕೆ ಮುಖ ಮಾಡಿರುವ ಈ ಕಟ್ಟಡವು ೩೦ ಅಡಿ ಅಗಲ ೪೦ ಅಡಿ ಉದ್ದವಾಗಿದೆ. ಇದರ ಮುಂಭಾಗದಲ್ಲಿ ಎರಡು ಬದಿಯಲ್ಲಿ ಪ್ರಮುಖ ವ್ಯಕ್ತಿಗಳಿಗೆ ಅಥವಾ ಮಂತ್ರಿ ವರ್ಗದವರಿಗೆ ಕುಳಿತುಕೊಳ್ಳಲು ವಿಶೇಷ ಸ್ಥಳವಿದೆ. ಇವುಗಳ ಮಧ್ಯದಲ್ಲಿ ಉತ್ತರಕ್ಕೆ ಮುಖ ಮಾಡಿರುವ ವಿಶಾಲ ಗೋಡೆಯಲ್ಲಿ ಒಂದು ಚಿಕ್ಕ ದ್ವಾರವಿದೆ.

ಸಭಾ ಭವನದ ಒಳ ಭಾಗವನ್ನು ಎರಡು ಭಾಗಗಳಲ್ಲಿ ವಿಂಗಡಿಸಿ ಮಧ್ಯದಲ್ಲಿ ಒಂದು ಗೋಡೆಯನ್ನು ನಿರ್ಮಿಸಲಾಗಿದೆ. ಇಲ್ಲಿಂದ ಸುಲ್ತಾನರು ಎರಡು ಕಡೆನಡೆಯುವ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ಇದರ ಪಶ್ಚಿಮದ ಗೋಡೆಯ ಮಧ್ಯದಲ್ಲಿ ೪ ಅಗಲ x ೮ ಎತ್ತರದ ಆಕಾರದಲ್ಲಿ ಪ್ರವೇಶ ದ್ವಾರವಿದೆ. ಅರಮನೆಯಿಂದ ಸುಲ್ತಾನರು ಈ ದ್ವಾರದ ಮೂಲಕ ಪ್ರವೇಶಿಸುತ್ತಿದ್ದರು. ಒಂದೆ

ಕಟ್ಟಡವನ್ನು ಎರಡು ಭಾಗಗಳಾಗಿ ವಿಂಗಡಿಸಿರುವ ಉದ್ದೇಶ ಇದು ಎರಡು ಸಭಾ ಭವನಗಳನ್ನು ಹೊಂದಿರುವಂತೆ ಕಂಡು ಬರುತ್ತದೆ. ಸರಳ ಶೈಲಿಯಲ್ಲಿ ನಿರ್ಮಿಸಿರುವ ಈ ಕಟ್ಟಡದ ದಕ್ಷಿಣ ಭಾಗದಲ್ಲಿ ಸುಲ್ತಾನರು ಕುಳಿತುಕೊಂಡು ಸಭೆಯನ್ನು ಆರಂಭಿಸುತ್ತಿದ್ದರು. ಅದರ ಮುಂಭಾಗದಲ್ಲಿ ಮಂತ್ರಿಗಳು, ಅಧಿಕಾರಿಗಳು, ಸಾಮಂತರಿಗೆ ಸ್ಥಳವಿದೆ. ಪ್ರಸ್ತುತವಾಗಿ ಸುಲ್ತಾನರು ಕುಳಿತುಕೊಳ್ಳುವ ಸ್ಥಳವನ್ನು 'ನಿಧಿ'ಯ ಆಶೆಯಿಂದ ಜನರು ಆಳವಾಗಿ ತೋಡಿ ಮೂಲ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ.

ಸಭಾ ಭವನದ ಹಿಂಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಅಲ್ಲದೆ ಅದರ ಹಿಂದೆ ವೃತ್ತಾಕಾರದ ಕಣಜದಂತೆ ಕಾಣುವ ಒಂದು ರಕ್ಷಣಾ ಸಂಬಂಧಿ ಕಟ್ಟಡವಿದೆ ಸಭಾ ಭವನಕ್ಕೆ ಅಂಟಿಕೊಂಡಿದ್ದು ಅದರ ಒಳಗಡೆಯಿಂದ ಪ್ರವೇಶದ್ವಾರವಿರುವುದಿಲ್ಲ. ಇದರ ದಕ್ಷಿಣ ಭಾಗದ ಗೊಡೆಯ ಮಧ್ಯದಲ್ಲಿ ಒಂದು ಚಿಕ್ಕ ದ್ವಾರವಿದೆ (೨x೩) ಇದರಿಂದ ಇದು ಕಣಜ ಎಂದು ಹೇಳಲು ಸಾಧ್ಯವಿಲ್ಲ. ಇದನ್ನು ಮದ್ದಿನ ಸಂಗ್ರಹಕ್ಕೆ ಬಳಸಲಾಗುವಂತೆ ಕಂಡು ಬರುತ್ತದೆ. ಈ ದ್ವಾರದಿಂದ ಕೆಳಗೆ ಇಳಿಯಲು ಕಲ್ಲಿನ ಮೆಟ್ಟಿಲುಗಳಿವೆ. ಅಲ್ಲದೆ ಮೇಲ್ಭಾಗದಲ್ಲಿ ಯಾವುದೇ ರಂಧ್ರಗಳಿರುವುದಿಲ್ಲ. ಅತ್ಯಂತ ಭದ್ರವಾಗಿ ಹರಳು ಮತ್ತು ಗಾರೆಯ ಮಿಶ್ರಣದಿಂದ ಇದನ್ನು ಮುಚ್ಚಲಾಗಿದೆ. ಈ ರೀತಿಯ ಕಟ್ಟಡಗಳು ನಮಗೆ ಜಿಲ್ಲೆಯ ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ. ಆದರೆ ಗುಲಬರ್ಗಾ ಕೋಟೆಯ ಉತ್ತರ ಭಾಗದಲ್ಲಿರುವ ನಮಕ್ ಕೋಟಾ (ಮದ್ದಿನ ಸಂಗ್ರಹ)ದ ಲಕ್ಷಣಗಳನ್ನು ಹೊಂದಿರುವುದರಿಂದ ಇದು ಮದ್ದು ಗುಂಡುಗಳ ಸಂಗ್ರಹವಾಗಿರಬಹುದೆಂದು ಹೇಳಲಾಗಿದೆ. ಏಕೆಂದರೆ ಕೋಟೆಯ ಸುತ್ತಲು ಹಲವು ತೋಪುಗಳನ್ನು ಅಳವಡಿಸಲಾಗಿದೆ. ಅವುಗಳಿಗೆ ಬೇಕಾಗುವ ಸ್ಫೋಟಕ ವಸ್ತು ಗಳನ್ನು ಇಲ್ಲಿ ಸಂಗ್ರಹಿಸಡಲಾಗುತ್ತಿದ್ದಂತೆ ಕಂಡು ಬರುತ್ತದೆ.

ಶಹಾಪೂರ ಕೋಟೆಯ ಹಲವು ಕಟ್ಟಡಗಳ ಮೇಲ್ಭಾಗದಲ್ಲಿ ಗಾರೆನ್ನು ಬಳಸಲಾಗಿದೆ. ಇಲ್ಲಿಯ ಗಾರೆಯಲ್ಲಿ ಕೆಲವು ಹರಳುಗಳನ್ನು ಬೆರಸಲಾಗಿದೆ. ನದಿಯ ತೀರದಲ್ಲಿ ಸಿಗುವ ಚಿಕ್ಕ ಚಿಕ್ಕ ಹೊಳಪುಳ್ಳ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಇದರಿಂದ ಗಾರೆಯು ಮತ್ತಷ್ಟು ಬಲಿಷ್ಟವಾಗುತ್ತದೆ.

ಸಭಾ ಭವನದ ಪಶ್ಚಿಮ ಭಾಗದಲ್ಲಿ ಸುಮಾರು ೨೦೦ ಅಡಿ ಉದ್ದ ೨೦೦ ಅಡಿ ಅಗಲ ವಿಶಾಲವಾದ ಸ್ಥಳದಲ್ಲಿ ಉತ್ತರಕ್ಕೆ ಮುಖ ಮಾಡಿ ನಿರ್ಮಿಸಿರುವ ಮತ್ತೊಂದು ಸಭಾ ಭವನವಿದೆ. ಐದು ಅಡಿ ಎತ್ತರದ ಮೇಲೆ ೪೫ ಅಡಿ ಉದ್ದ ೩೫ ಅಡಿ ಅಗಲದಲ್ಲಿ ನಾಲ್ಕು ಕಮಾನುಗಳಿದ ಕೂಡಿದ ಕಟ್ಟಡವಿದೆ. ಇದರಲ್ಲಿ ಒಟ್ಟು ೧೨ ಕಮಾನುಗಳಿವೆ.

೧೫ ಅಡಿ ಎತ್ತರದ ಈ ಕಟ್ಟಡದ ಮೇಲೆ ಎರಡು ಬದಿಯಲ್ಲಿ ೩ ಅಡಿ ಎತ್ತರದ ವೃತ್ತಾಕಾರದ ಕಂಬಗಳಿವೆ. ಪ್ರಸ್ತುತ ಇದು ಸಂಪೂರ್ಣವಾಗಿ ಕುಸಿದು ಬಿದ್ದಿದ್ದು ಅದರ ಎರಡು ಭಾಗದ ಗೋಡೆಗಳು ಮಾತ್ರ ಉಳಿದುಕೊಂಡಿವೆ. ಅದು ಸಹ ಕೆಲ ವರ್ಷಗಳಲ್ಲಿ ನಾಶ ಹೊಂದಬಹುದು. ಇವರ

ಮುಂಭಾಗದಲ್ಲಿ ವಿಶಾಲವಾದ ಚೌಕಾಕಾರದ ಸ್ಥಳವಿದೆ. ಇಲ್ಲಿ ಯಾವುದೆ ಕಟ್ಟಡಗಳು ಇರುವಂತೆ ಕಂಡು ಬರುವುದಿಲ್ಲ. ಆದರೆ ತಳಪಾಯ ರಚನೆ ಮಾತ್ರ ಉಳಿದುಕೊಂಡಿದೆ. ಇದರಿಂದ ಇದು ಸಭಾ ಮಂಟಪದ ಮುಂಭಾಗದ ಸ್ಥಳವಾಗಿರುವಂತೆ ಕಂಡು ಬರುತ್ತದೆ.

ಈ ಕಟ್ಟಡದ ಹಿಂಭಾಗದಲ್ಲಿ ನೈರುತ್ಯ ಭಾಗದಲ್ಲಿ ೮ ಅಡಿ ಎತ್ತರದ ಕಾವಲುಗೋಪುರವಿದೆ. ವೃತ್ತಾಕಾರದ ಈ ಕಾವಲುಗೋಪುರದ ಮೇಲೆ ೧೦ ಅಡಿ ಉದ್ದನೆಯ ತೋಪು ದಕ್ಷಿಣಕ್ಕೆ ಮುಖ ಮಾಡಿ ನಿಲ್ಲಿಸಲಾಗಿದೆ. ಅದರ ಹಿಂಭಾಗದಲ್ಲಿ ೩ ಅಡಿ ಎತ್ತರದ ಅರ್ಧ ವೃತ್ತಾಕಾರದ ಭದ್ರವಾದ ಗೋಡೆಯನ್ನು ರಚಿಸಲಾಗಿದೆ. ಏಕೆಂದರೆ ಒಂದು ವೇಳೆ ತೋಪು ಹಿಂಭಾಗದಿಂದ ಸ್ಫೋಟಗೊಂಡರೆ ಹಿಂದಿನ ಕಟ್ಟಡಗಳು ಹಾಳಾಗಬಾರದೆಂದು ಗೋಡೆಯನ್ನು ನಿರ್ಮಿಸಲಾಗಿದೆ. ಗುಲಬರ್ಗಾ ಕೋಟೆಯ ತೋಪಿನ ಹಿಂಭಾಗದ ಗೋಡೆಗಿಂತ ಇಲ್ಲಿಯ ಗೋಡೆಗಳು ಭಿನ್ನವಾಗಿವೆ. ಅದೇ ರೀತಿ ಇದರ ಮುಂಭಾಗದ ಕೋಟೆಯ ಗೋಡೆಯ ಮೇಲಿನ ಕಾವಲುಗೋಪುರಗಳಲ್ಲಿ ಕೆಲವು ತೋಪುಗಳನ್ನು ಅಳವಡಿಸಲಾಗಿದೆ. ಮೇಲ್ಭಾಗದ ಕಟ್ಟಡಗಳು ಅತ್ಯಂತ ಮಹತ್ವವಾಗಿರುವುದರಿಂದ ಇವುಗಳಿಗೆ ವಿಶೇಷ ರಕ್ಷಣೆಯನ್ನು ಒದಗಿಸಲಾಗಿದೆ.

ಸಭಾ ಭವನದ ಮುಂಭಾಗದಲ್ಲಿ ೧೦೦ ಅಡಿ ಉದ್ದ ೬೦ ಅಡಿ ಅಗಲದಲ್ಲಿ ಹಲವು ಕಟ್ಟಡದ ಅವಶೇಷಗಳಿವೆ. ಇದರ ಒಳಗಡೆ ಒಂದು ರಸ್ತೆ ಇದ್ದು, ಎರಡು ಬದಿಯಲ್ಲಿ ಕಮಾನುಗಳಿಂದ ಕೂಡಿದ ಕಟ್ಟಡಗಳಿವೆ. ಪೂರ್ವಕ್ಕೆ ಮುಖ ಮಾಡಿರುವ ದೊಡ್ಡ ಕಟ್ಟಡವಿದೆ. ಇಲ್ಲಿಂದ ಪ್ರವೇಶದ್ವಾರದ ಕಡೆಗೆ ಹೋಗಲು ರಸ್ತೆ ಇದೆ. ಈ ರೀತಿಯಿಂದ ಹಲವು ಕಟ್ಟಡ, ರಸ್ತೆ ಮತ್ತು ಕಮಾನುಗಳಿಂದ ಕೂಡಿರುವ ಸ್ಥಳವನ್ನು ಅರಮನೆ ಇರಬಹುದೆಂದು ಗುರುತಿಸಲಾಗಿದೆ. ಸುಲ್ತಾನರು ತಮ್ಮ ಅವಶ್ಯಕತೆಗೆ ಅನುಗುಣವಾಗಿ ಇಲ್ಲಿ ಕಟ್ಟಡಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ.

ಅರಮನೆಯ ಮುಂಭಾಗದಲ್ಲಿ ವಾಯುವ್ಯ ಭಾಗಕ್ಕೆ ಆಳವಾದ ಸ್ಥಳವಿದೆ. ನೈಸರ್ಗಿಕವಾಗಿ ತಗ್ಗಾಗಿರುವ ಈ ಪ್ರದೇಶವನ್ನು ನೀರಿನ ತಾಣವನ್ನಾಗಿ ಉಪಯೋಗಿಸಲಾಗಿದೆ. ಇದರ ಕೆಲವು ಕಡೆಯಲ್ಲಿ ಗೋಡೆಯನ್ನು ನಿರ್ಮಿಸಿ, ಅಲ್ಲಿ ಸದಾ ಕಾಲ ನೀರು ನಿಲ್ಲುವಂತೆ ಮಾಡಲಾಗಿದೆ. ಅರಮನೆಯಿಂದ ನೇರವಾಗಿ ಇಲ್ಲಿಗೆ ಬರಲು ಕೆಳಹಂತದಲ್ಲಿ ಎರಡು ಕಮಾನುಗಳಿವೆ. ಒಂದು ವೇಳೆ ನೀರು ಪೂರ್ತಿಯಾಗಿ ತುಂಬಿದರೆ ಮೇಲಿನಿಂದ ನೀರು ಎತ್ತುವ ವ್ಯವಸ್ಥೆ ಮಾಡಲಾಗಿದೆ. ಇದು ಕೋಟೆಯ ಪ್ರಮುಖ ಸ್ಥಳದಲ್ಲಿರುವ ನೀರಿನ ಆಶ್ರಯ ತಾಣವಾಗಿದೆ.

ಕೋಟೆಯ ಉತ್ತರ ಭಾಗದ ಗೋಡೆಯು ಸುಮಾರು ೩೦೦ ಅಡಿ ಉದ್ದವಾಗಿದ್ದು, ಅದರಲ್ಲಿ ಐದು ವೃತ್ತಾಕಾರದ ಕಾವಲು ಗೋಪುಗಳಿವೆ. ಅವುಗಳಲ್ಲಿ ಪ್ರಸ್ತುತ ಮೂರು ಗೋಪುರಗಳ ಮೇಲೆ ದೊಡ್ಡ ತೋಪುಗಳಿವೆ. ಕೆಲವು ಗೋಪುರಗಳ ಕೆಳಭಾಗದಲ್ಲಿ ಕಾವಲುಗಾರರ ವಿಶ್ರಾಂತಿ ಸ್ಥಳಗಳು ಮತ್ತು ಮದ್ದು ಗುಂಡಿನ ಸಂಗ್ರಹಕ್ಕಾಗಿ ಪ್ರತ್ಯೇಕ ಕಟ್ಟಡಗಳಿವೆ. ಈ ರೀತಿಯ ಕಟ್ಟಡಗಳು ನಮಗೆ ಗುಲಬರ್ಗಾ ಜಿಲ್ಲೆಯ

ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ. ಇಲ್ಲಿಯ ವಿಶಾಲವಾದ ಸ್ಥಳದಲ್ಲಿ ಹಲವು ಬಗೆಯ ನೀರಿನ ತಾಣಗಳಿವೆ. ಬಂಡೆಗಲ್ಲುಗಳ ಮಧ್ಯದಲ್ಲಿ ಆಳವಾದ ಸ್ಥಳದಲ್ಲಿ ನೀರು ಸಂಗ್ರಹವಾಗುವಂತೆ ಮಾಡಲಾಗಿದೆ. ವಾಯುವ್ಯ ದಿಕ್ಕಿನಲ್ಲಿರುವ ಕಾವಲುಗೋಪುರವು ಚೌಕಾಕಾರದಲ್ಲಿದೆ. ಅದರ ಮೇಲೆ ಐದು ಅಡಿ ಎತ್ತರದ ವೃತ್ತಾಕಾರದ ತೋಪಿನ ಕಟ್ಟೆಯಿದೆ. ಈ ತೋಪಿನ ಅರ್ಧಭಾಗ ಮಾತ್ರ ಉಳಿದುಕೊಂಡಿದೆ. ಇಲ್ಲಿಂದ ಮೊದಲನೆಯ ಕೋಟೆ ಗೋಡೆಯು ದಕ್ಷಿಣ ಭಾಗದವರೆಗೆ ಮುಂದುವರೆಯುತ್ತದೆ. ಇದರಲ್ಲಿ ಯಾವುದೇ ಕೊತ್ತಳಗಳು ಕಂಡು ಬರುವುದಿಲ್ಲ. ಈ ಗೋಡೆಯು ೧೫ ಅಡಿ ಎತ್ತರ ೪ ಅಡಿ ದಪ್ಪವಾಗಿದೆ. ಇದರ ಪಶ್ಚಿಮ ಭಾಗದ ಆಳವಾದ ಪ್ರದೇಶವಿದೆ. ಅದರ ಉತ್ತರ ದಕ್ಷಿಣ ಮತ್ತು ಪಶ್ಚಿಮ ಭಾಗಗಳಿಗೆ ಸುತ್ತುವರಿದ ಕೋಟೆ ಇದೆ.

ಕೋಟೆಯ ಎರಡನೆಯ ಭಾಗವು ಸಂಪೂರ್ಣವಾಗಿ ತಗ್ಗಾದ ಪ್ರದೇಶಕ್ಕೆ ಸುತ್ತುವರೆದು ಗೋಡೆಯನ್ನು ನಿರ್ಮಿಸಲಾಗಿದೆ. ಮೊದಲನೆಯ ಕೋಟೆಯಿಂದ ವಾಯುವ್ಯ ಭಾಗದಲ್ಲಿ ಒಂದು ಪ್ರವೇಶ ದ್ವಾರವಿದೆ. ಈ ದ್ವಾರವು ಒಳಗಡೆಯಿಂದ ಎರಡು ವೃತ್ತಾಕಾರದ ಕೊತ್ತಳಗಳನ್ನು ಹೊಂದಿದೆ, ಇಲ್ಲಿಂದ ಪ್ರವೇಶಿಸಿದರೆ ಮುಂಭಾಗದಲ್ಲಿ ಸುಮಾರು ೨೫೦ ಅಡಿಯವರೆಗೆ ಯಾವುದೆ ಕಟ್ಟಡಗಳು ಇರುವುದಿಲ್ಲ. ನಂತರದಲ್ಲಿ ಎರಡು ಸುತ್ತಿನ ಕೋಟೆ ಗೋಡೆ ಇದೆ. ಈ ಎರಡರ ಮಧ್ಯದಲ್ಲಿ ೧೫ ರಿಂದ ೨೦ ಅಡಿ ಅಂತರವಿದ್ದು, ಅಲ್ಲಿ ಹಲವು ಸೈನಿಕರ ವಿಶ್ರಾಂತಿಯ ನೆಲೆಗಳಿವೆ. ಈ ಭಾಗದಲ್ಲಿ ಒಂದು ಚೌಕಾಕಾರದ ಕೊತ್ತಳವಿದೆ. ಇಲ್ಲಿಯ ಒಳಗೋಡೆಯು ತೆನೆಗಳು, ವೀಕ್ಷಣಾ ರಂಧ್ರಗಳು ಮತ್ತು ಇನ್ನಿತರ ಕೋಟೆ ಗೋಡೆಯ ಲಕ್ಷಣಗಳನ್ನು ಹೊಂದಿದೆ. ಈ ಭಾಗದ ಕೋಟೆ ಗೋಡೆಯ ೧೫ ರಿಂದ ೨೦ ಅಡಿ ಎತ್ತರದಲ್ಲಿದೆ. ಕೋಟೆಯ ಆವರಣದಲ್ಲಿ ದಕ್ಷಿಣ ಭಾಗಕ್ಕೆ ಆಳವಾದ ಸ್ಥಳವಿದೆ. ಇದಕ್ಕೆ ಅರ್ಧವೃತ್ತಾಕಾರ ಗೋಡೆಯನ್ನು ನಿರ್ಮಿಸಿ ಅಲ್ಲಿ ನೀರು ಸಂಗ್ರಹಿಸಲಾಗಿದೆ. ಈ ಭಾವಿಯಲ್ಲಿ ಕುದುರೆಗಳು ಮತ್ತು ಇತರ ಪ್ರಾಣಿಗಳು ನೀರು ಕುಡಿಯಬಹುದು. ಕೋಟೆಯ ದಕ್ಷಿಣ ಭಾಗದ ಗೋಡೆಯಲ್ಲಿ ಆರು ಚೌಕಾಕಾರದ ಕೊತ್ತಳಗಳಿವೆ. ಇವುಗಳ ತಳಪಾಯವು ಅಗಲವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತದೆ. ಈ ಗೋಡೆಯು ೬ ಅಡಿ ಅಗಲವಾಗಿದ್ದು ಅದರಲ್ಲಿ ಮೂರು ಅಡಿಯಲ್ಲಿ ತೆನೆಗಳನ್ನು ನಿರ್ಮಿಸಲಾಗಿದ್ದು, ಉಳಿದ ಮೂರು ಅಡಿಯಲ್ಲಿ ಸೈನಿಕರುಕಾವಲು ಮಾಡುತ್ತ ಕೋಟೆಯ ಉದ್ದಕ್ಕೂ ಸುತ್ತಾಡುವ ಸ್ಥಳವಿದೆ. ವಾಗಣಗೇರಿ ಕೋಟೆಯಂತೆ ಇದನ್ನು ನಿರ್ಮಿಸಲಾಗಿದೆ. ಎರಡನೆಯ ಭಾಗದ ಕೋಟೆಯ ಕೆಳಹಂತದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ದ್ವಾರವಿದೆ. ಇದರ ಮುಂಭಾಗದಲ್ಲಿ ತಗ್ಗಾದ ವಿಶಾಲವಾದ ಪ್ರದೇಶವಿದೆ. ಸುಮಾರು ೨೫೦ ಮೀಟರ ಉದ್ದ ೧೫೦ ಮೀಟರ ಅಗಲ ಈ ಸ್ಥಳದ ಪೂರ್ವ ಭಾಗಕ್ಕೆ ೧೦ ಅಡಿ ಎತ್ತರ ೬ ಅಡಿ ದಪ್ಪನೆಯ ಗೋಡೆಯನ್ನು ನಿರ್ಮಿಸಲಾಗಿದೆ. ಈ ನೀರಿನ ತಾಣವು ಕೋಟೆಗೆ ನೈಸರ್ಗಿಕ ಕಂದಕವಾಗಿ ರಕ್ಷಣೆ ಒದಗಿಸುತ್ತದೆ. ಇಲ್ಲಿಂದ ಮೂರನೆಯ ಹಂತದ ಕೋಟೆಯು ಆರಂಭವಾಗುತ್ತದೆ.

[illegible]

ಶಹಪೂರ ಕೋಟೆಯ ಮೂರನೆಯ ಹಂತವು ಎರಡನೆಯ ಬೆಟ್ಟದ ಮೇಲೆ ನಿರ್ಮಿಸಲಾಗಿದೆ. ಎರಡನೆಯ ಹಂತದ ಕೋಟೆಯ ಕೆಳಭಾಗದಿಂದ ಒಂದು ದ್ವಾರವು ಇದಕ್ಕೆ ಸಂಪರ್ಕವನ್ನು ಕಲ್ಪಿಸಿಕೊಡುತ್ತದೆ. ಇಲ್ಲಿಯ ಬೆಟ್ಟಕ್ಕೆ ಆವರಿಸಿಕೊಂಡಂತೆ ಕೋಟೆಯನ್ನು ನಿರ್ಮಿಸಲಾಗಿದೆ. ಇದರ ಪ್ರವೇಶಕ್ಕೆ ಪಶ್ಚಿಮ ಭಾಗದಲ್ಲಿ ಎರಡು ದ್ವಾರಗಳಿವೆ. ಈ ದ್ವಾರಗಳು ಎರಡು ಕೊತ್ತಳಗಳ ಮಧ್ಯದಲ್ಲಿ ೬ ಅಡಿ ಅಗಲ ೧೦ ಅಡಿ ಎತ್ತರವಾಗಿವೆ. ನೈಸರ್ಗಿಕವಾಗಿರುವ ಬಂಡೆಗಲ್ಲುಗಳನ್ನು ಬಳಸಿಕೊಂಡು ದ್ವಾರಗಳನ್ನು ನಿರ್ಮಿಸಲಾಗಿದೆ. ಎರಡು ದ್ವಾರಗಳ ಒಳಭಾಗದಲ್ಲಿ ಕಾವಲುಗಾರರ ಸ್ಥಳಗಳಿವೆ. ಕೋಟೆಯ ಸುತ್ತಲು ಪ್ರತಿ ೮೦ ರಿಂದ ೧೦೦ ಅಡಿ ಅಂತರದಲ್ಲಿ ಕೊತ್ತಳ ಅಥವಾ ಕಾವಲುಗೋಪುರಗಳಿವೆ. ಇವುಗಳ ಮೇಲ್ಭಾಗದಲ್ಲಿ ೩ ಅಡಿ ಎತ್ತರದ ತೆನೆಗಳಿವೆ. ಮೊದಲಿನ ಎರಡು ಹಂತದ ಕೋಟೆಗಿಂತ ಇದು ಭಿನ್ನವಾಗಿದೆ. ಆದ್ದರಿಂದ ಕಾಲಮಾನದ ದೃಷ್ಟಿಯಿಂದ ಮೊದಲಿನ ಕೋಟೆಗಳಿಗಿಂತ ಪುರಾತನವಾಗಿರುವಂತೆ ಕಂಡು ಬರುತ್ತದೆ.

ಈ ಭಾಗದಲ್ಲಿ ಯಾವುದೆ ರಕ್ಷಣಾ ಸಂಬಂಧಿ ಕಟ್ಟಡಗಳು ಇರುವುದಿಲ್ಲ. ಇದರ ಕೇಂದ್ರ ಭಾಗದಲ್ಲಿ ಆಳವಾದ ಒಂದು ನೀರಿನ ಆಶ್ರಯತಾಣವನ್ನು ನಿರ್ಮಿಸಲಾಗಿದೆ. ಇದರ ಸುತ್ತಲು ಅಗಲವಾದ ಮೆಟ್ಟಿಲುಗಳಿವೆ. ಇದನ್ನು ಹೊರತುಪಡಿಸಿ ಇತ್ತೀಚಿಗೆ ನಿರ್ಮಿಸಿರುವ ಒಂದು ದೇವಾಲಯವಿದೆ. ಆದರೆ ಇಲ್ಲಿ ಬೆಟ್ಟಕ್ಕೆ ಆವರಿಸಿಕೊಂಡಿರುವಂತೆ ಕೋಟೆಯ ನಿರ್ಮಾಣದ ಉದ್ದೇಶವನ್ನು ಕುರಿತು ಅವಲೋಕಿಸಿದಾಗ ಬಹು:ಶ ಇಲ್ಲಿ ಸೈನ್ಯವನ್ನು ಸಂಗ್ರಹಿಸಿಡಲು ಇದನ್ನು ನಿರ್ಮಿಸಿರುವಂತೆ ಕಂಡು ಬರುತ್ತದೆ. ಅದರಲ್ಲಿ ವಿಶೇಷವಾಗಿ ಅಶ್ವ ಪಡೆಯ ಸಂಗ್ರಹಕ್ಕಾಗಿ ಇದನ್ನು ಬಳಸುತ್ತಿರುವಂತೆ ಕಂಡು ಬರುತ್ತದ್ತೆ.. ಏಕೆಂದರೆ ಅಶ್ವಗಳಿಗೆ ಅನುಕೂಲವಾಗುವಂತೆ ಇದನ್ನು ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ಹರಿಯುವ ಮಂದಾಕಿನಿಯ ಸರೋವರದಿಂದ ಕುದುರೆಗಳಿಗೆ ನೀರು ಕುಡಿಯಲು ಅನುಕೂಲವಾಗುವಂತೆ ಇದರ ದ್ವಾರಗಳನ್ನು ನಿರ್ಮಿಸಲಾಗಿದೆ.

ಕೋಟೆಯ ಪಶ್ಚಿಮ ಭಾಗದಲ್ಲಿ ಒಂದು ಕೊತ್ತಳಕ್ಕೆ ಅಂಟಿಕೊಂಡಿರುವಂತೆ ಕೊನೆಯ ದ್ವಾರವಿದೆ. ಇಲ್ಲಿಂದ ಬೆಟ್ಟವನ್ನು ಇಳಿದು ಹೊರಗಡೆ ಬರಬಹುದು. ಈ ದ್ವಾರದ ಮುಂಭಾಗದಲ್ಲಿ ಸುಮಾರು ೫೦ ಅಡಿ ಉದ್ದನೆಯ ಬೃಹತ್ ಶಿಲೆಗಳು ಒಂದರ ಮೇಲೆ ಒಂದು ಆವರಿಸಿಕೊಂಡಿವೆ. ಇದು ಒಂದು ಕೃತಕ ನೀರಿನ ಆಶ್ರಯತಾಣದಂತೆ ಕಂಡು ಬರುತ್ತದೆ. ಬೆಟ್ಟದ ಮೇಲಿನಿಂದ ಹರಿದು ಬರುವ ನೀರು ಇಲ್ಲಿ ಸಂಗ್ರಹವಾಗುತ್ತದೆ. ಮೇಲಿನಿಂದ ಸೋಸಿ ಬರುವ ನೀರು ಅತ್ಯಂತ ಶುದ್ಧವಾಗಿರುತ್ತದೆ. ಈ ಭಾಗದಲ್ಲಿ ಸದಾಕಾಲ ನೀರು ಇರುವುದರಿಂದ ಅಂದಿನಿಂದ ಇಂದಿನವರೆಗೂ ಸ್ಥಳಿಯರು ಈ ನೀರನ್ನು ಕುಡಿಯಲು ಉಪಯೋಗಿಸುತ್ತಾರೆ. ಕೋಟೆಯ ಕಾವಲುಗಾರರು ಸಹ ಇದರ ನೀರನ್ನು ಬಳಸುತ್ತಿರುವಂತೆ ಕಂಡು ಬರುತ್ತದೆ.

ಬಂಡೆಯ ಕೆಳಭಾಗದಲ್ಲಿ ಸುಮಾರು ೭೦ ರಿಂದ ೯೦ ಅಡಿ ಕೆಳಭಾಗದಲ್ಲಿ ಬಂದರೆ ಶಹಾಪೂರ ನಗರಕ್ಕೆ ಬರುವ ಮಾರ್ಗವಿದೆ. ಬೆಟ್ಟದ ಕೆಳಭಾಗದಲ್ಲಿರುವ ಮಾರ್ಗವು ಚರಬಸವೇಶ್ವರ ದೇವಸ್ಥಾನಕ್ಕೆ ಬಂದು ಸೇರುತ್ತದೆ. ಕೆಳಭಾಗದಿಂದ ವೀಕ್ಷಿಸಿದಾಗ ಮೇಲ್ಭಾಗದ ಕೋಟೆ ಕೊತ್ತಲಗಳ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಬೆಟ್ಟವನ್ನು ಆವರಿಸಿಕೊಂಡು ಕೋಟೆಯನ್ನು ನಿರ್ಮಿಸಿರುವ ಉದ್ದೇಶ ಶತ್ರುಗಳಿಂದ ರಕ್ಷಣೆಯನ್ನು ಪಡೆಯಲು ಅಲ್ಲ ಏಕೆಂದರೆ ಇಷ್ಟೊಂದು ಎತ್ತರದ ಬೆಟ್ಟ ಹತ್ತುವದು ಅಸಾಧ್ಯವಾದುದು. ಆದ್ದರಿಂದ ಬೆಟ್ಟದ ತುದಿಯಲ್ಲಿ ರಕ್ಷಣಾ ಗೋಡೆಯನ್ನು ನಿರ್ಮಿಸಿರುವುದು ತಮ್ಮ ಸೈನ್ಯದ ರಕ್ಷಣೆಗಾಗಿ ಎನ್ನುವ ಉದ್ದೇಶ ಇದರಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಮೇಲ್ಭಾಗದಲ್ಲಿರುವ ಅಶ್ವಗಳು ಕೆಳಗಡೆ ಬೀಳಬಾರದಂತೆ ಈ ರೀತಿಯಲ್ಲಿ ಬೆಟ್ಟವನ್ನು ಆವರಿಸಿಕೊಂಡಂತೆ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಇಂತಹ ಅಂಶಗಳು ಶಹಾಪೂರ ಕೋಟೆಯಲ್ಲಿ ಕಂಡು ಬರುತ್ತವೆ. ಇದೆ ಅಂಶಗಳು ಯಾದಗಿರ ಮತ್ತು ವಾಗಣಗೇರಿಯ ಕೋಟೆಯಲ್ಲಿ ಗುರುತಿಸಲಾಗಿದೆ.

೧೭. ಯಾದಗಿರಿ ಕೋಟೆ

ಗುಲಬರ್ಗಾ ಜಿಲ್ಲೆಯಿಂದ ಆಗ್ನೇಯ ಭಾಗಕ್ಕೆ ೮೦ ಕಿ.ಮೀ. ದೂರದಲ್ಲಿರುವ ಈ ಪಟ್ಟಣವನ್ನು ಪ್ರಾಚೀನ ಶಾಸನಗಳಲ್ಲಿ 'ಎತಗಿರಿ' ಎಂದು ಉಲ್ಲೇಖಿಸಲಾಗಿದೆ[೬೬]. ಕಲ್ಯಾಣ ಚಾಲುಕ್ಯರ ಮೊದಲನೆಯ ರಾಜ್ಯಧಾನಿ ಯಾದಗಿರಿಯಾಗಿತ್ತು. ಕಲ್ಯಾಣ ಚಾಲುಕ್ಯ ಅರಸ ಜಯಸಿಂಹನು ಕ್ರಿ.ಶ. ೧೦೧೯ರಲ್ಲಿ ಎತಗಿರಿಯಿಂದ ಆಳುತ್ತಿದ್ದನೆಂದು ಶಾಸನಗಳಲ್ಲಿ ಉಲ್ಲೇಖವಿದೆ. ಇಲ್ಲಿಂದ ಇದುವರೆಗೆ ದೊರೆತ ಕನ್ನಡ ಮತ್ತು ಪರ್ಶಿಯನ ಶಾಸನಗಳಲ್ಲಿ ಕೋಟೆಯ ಕೆಲವು ಭಾಗಗಳ ನಿರ್ಮಾಣವನ್ನು ಕುರಿತು ಉಲ್ಲೇಖಿಸಲಾಗಿದೆ. ಕೋಟೆಯ ಅಗಸಿ ಮೇಲಿನ ಶಾಸನದಲ್ಲಿ ಇದನ್ನು ಸಗರದ "ಜಗನಾಥನು" ನಿರ್ಮಿಸಿದನೆಂದು ಹೇಳಲಾಗಿದೆ. ತೀರ್ಥಂಕರ ಬಸದಿಯ ಸಮೀಪದ ಬೆಟ್ಟದಲ್ಲಿರುವ ಶಾಸನವು ಅವರ ಧಾರ್ಮಿಕ ವಿಷಯವನ್ನು ಒಳಗೊಂಡಿದೆ. ಕೋಟೆಯ ಮೇಲ್ಬಾಗದ ತಲಾಬಿನ ಗೋಡೆಯ ಮೇಲೆ ಇರುವ ಶಾಸನವು (೧೫೪೬) ಒಂದನೆಯ ಇಬ್ರಾಹಿಂ ಆದಿಲ್‌ಶಹನಿಗೆ ಸಂಬಂಧಿಸಿದೆ[೬೭]. ಅಠಾರ ಮಸೀದಿಯ ದ್ವಾರದ ಮೇಲೆ ಇರುವ ಶಾಸನವು (೧೫೭೩) ಒಂದನೆ ಅಲಿ ಆದಿಲ್‌ಶಹನ ಹೆಸರನ್ನು ಉಲ್ಲೇಖಿಸುತ್ತದೆ. ಅಲ್ಲದೆ ವಿರ್ಜಾ ಅಲಿಯ ಮಗನಾದ ಖ್ವಾಜಾ ಹಸನ್ ಕಿರ್ಮಾನಿಯು ಈ ಮಸೀದಿಯನ್ನು ನಿರ್ಮಿಸಿದ ವಿಷಯವನ್ನು ಒಳಗೊಂಡಿದೆ. ಕ್ರಿ.ಶ. ೧೦೪೪ ರಿಂದ ೧೦೫೦ರ ಮಧ್ಯದಲ್ಲಿ ಚೋಳರ ಸೈನ್ಯ ಕೃಷ್ಣಾ ನದಿಯನ್ನು ದಾಟಿ ಬಂದು ಏತಗಿರಿಯನ್ನು ವಶಪಡಿಸಿಕೊಂಡು ಅಲ್ಲಿ ಹುಲಿಯ ಲಾಂಛನದ ವಿಜಯ ಸ್ತಂಭವನ್ನು ಸ್ಥಾಪಿಸಿದರು. ಚಾಲುಕ್ಯರ ಅರಸ ಆರನೆಯ ವಿಕ್ರಮಾದಿತ್ಯನ ಕ್ರಿ.ಶ. ೧೦೭೭ರಲ್ಲಿ ತನ್ನ ರಾಜ್ಯಧಾನಿಯಾದ ಏತಗಿರಿಯಲ್ಲಿ "ತುಲಾಭಾರ" ಮತ್ತು 'ಹಿರಣ್ಯ ಗರ್ಭ' ಧಾನಗಳನ್ನು ಮಾಡಿರುವ ಕುರಿತು ಉಲ್ಲೇಖಗಳಿವೆ.

ಯಾದಗಿರಿಯು ಚಾಲುಕ್ಯರ ರಾಜ್ಯಧಾನಿಯಾಗಿರುವುದರಿಂದ ಈ ಕೋಟೆ ಮೊದಲು ಅವರು ನಿರ್ಮಿಸಿರುವ ಸಾಧ್ಯತೆಗಳಿವೆ. ನಂತರ ಇದು ಬಹಮನಿ ಸುಲ್ತಾನರು, ಆದಿಲ್ ಶಾಹಿಗಳು ಹಾಗೂ ನಿಜಾಮರ ಕಾಲದಲ್ಲಿ ಹೆಚ್ಚಿನ ಬೆಳವಣಿಗೆ ಹೊಂದಿತು. ಕೋಟೆಯ ಕೆಲವು ಭಾಗಗಳು ಆದಿಲ್ ಶಾಹಿಗಳು ಮತ್ತು ನಿಜಾಮ ಶಾಹಿಗಳು ನಿರ್ಮಿಸಿರುವ ಕುರಿತು ಶಾಸನಗಳಲ್ಲಿ ಉಲ್ಲೇಖವಿದೆ. ಕೋಟೆಯ ಆಗ್ನೇ ಭಾಗದಲ್ಲಿನ "ನಿಜಾಮ್ ಬುರುಜ್"ನ್ನು ಹೈದ್ರಾಬಾದಿನ ನಿಜಾಮ್ ಅಲಿಖಾನನು ಕ್ರಿ.ಶ. ೧೭೮೫ರಲ್ಲಿ ಯಾದಗಿರಿಗೆ ಭೇಟಿ ನೀಡಿದ ನೆನಪಿಗಾಗಿ ಕಟ್ಟಿಸಲಾಗಿದೆ.

ಯಾದಗಿರಿ ಪಟ್ಟಣದ ಪೂರ್ವ ಭಾಗದ ಗುಡ್ಡದ ಮೇಲೆ ಮೂರು ಸುತ್ತಿನ ಗೋಡೆಯಿಂದ ಆವೃತಿಯಾಗಿರುವ ಕೋಟೆಯಿದೆ. ಪ್ರಸ್ತುತ ಗ್ರಾಮವು ಕೋಟೆಯ ಸುತ್ತಲು ಆವರಿಸಿಕೊಂಡಿದೆ. ಕೋಟೆಗೆ ಹತ್ತಲು ನಾಲ್ಕು ಕಡೆಯಿಂದ ಮಾರ್ಗಗಳಿವೆ. ಅವುಗಳಲ್ಲಿ ಚಟಾಣಿ ಮಾರ್ಗ, ಕೋಳಿವಾಡಾ ಮಾರ್ಗ, ಅಂಬೇಡ್ಕರ ಚೌಕ ಮಾರ್ಗದಿಂದ ಮತ್ತು ಪೋಲಿಸ ವಸತಿ ನಿಲಯದ ಹಿಂಭಾಗದಿಂದ. ಇದರಲ್ಲಿ ಕೋಟೆಯ ಉತ್ತರ ಭಾಗದಲ್ಲಿರುವ ಚಟಾಣಿ ಮಾರ್ಗವು ಪ್ರಮುಖ ಮಾರ್ಗವಾಗಿದೆ. ಉಳಿದವುಗಳು ಉಪಮಾರ್ಗಗಳಾಗಿವೆ. ಅಲ್ಲದೆ ಕೋಟೆಯ ಹೊರ ಗೋಡೆಯಲ್ಲಿ ಹಲವು ಗುಪ್ತ ಮಾರ್ಗಗಳಿವೆ. ಈ ಎಲ್ಲಾ ಮಾರ್ಗಗಳು ಕೋಟೆಯ ಮೇಲ್ಭಾಗದಲ್ಲಿರುವ ಅರಮನೆ, ಮಸೀದಿ, ಸಭಾಭವನ ಮತ್ತು ಇನ್ನಿತರ ಪ್ರಮುಖ ಕಟ್ಟಡಗಳಿಗೆ ಮಾರ್ಗ ಕಲ್ಪಿಸುತ್ತವೆ. ಈ ಸ್ಥಳವನ್ನು ರಾಜ್ಯಧಾನಿಯನ್ನಾಗಸಿಕೊಂಡು ಆಳಿರುವ ಪ್ರಮುಖ ಮನೆತನಗಳು ಕೋಟೆಯ ಹಲವು ಭಾಗಗಳನ್ನು ಬಲಪಡಿಸಿದರು. ಅಲ್ಲದೆ ತಮ್ಮ ಅನುಕೂಲತೆಗೆ ತಕ್ಕಂತೆ ಇಲ್ಲಿ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿಕೊಂಡರು.

ಗುಲಬರ್ಗಾ ಜಿಲ್ಲೆಯ ಗಿರಿದುರ್ಗಗಳಲ್ಲಿ ಇದು ಅತ್ಯಂತ ಪ್ರಮುಖ ಗಿರಿದುರ್ಗವಾಗಿದೆ. ಇದರ ಪ್ರವೇಶಕ್ಕೆ ಇರುವ ೮ ಪ್ರಮುಖ ದ್ವಾರಗಳು ಒಂದಕ್ಕಿಂತ ಮತ್ತೊಂದು ಸುಮಾರು ೫೦ ರಿಂದ ೮೦ ಅಡಿ ಅಂತರದಲ್ಲಿವೆ. ಕೆಲವು ದ್ವಾರಗಳ ಮಧ್ಯ ೧೦೦ ರಿಂದ ೧೫೦ ಅಡಿ ಅಂತರವಿದೆ. ಬೃಹತ ಬೆಟ್ಟದ ಮೇಲೆ ಕೋಟೆಯ ನಿರ್ಮಾಣ ಅದ್ಬುತ ಸಾಧನೆಯಾಗಿದೆ. ನಿಸರ್ಗಕ್ಕೆ ಸವಾಲಾಗಿ ಎತ್ತರವಾದ ಮತ್ತು ಬೃಹತ ಬಂಡೆಗಳನ್ನು ಬಳಸಿರುವುದು ಇಲ್ಲಿ ಕಂಡು ಬರುತ್ತದೆ. ಕೋಟೆಯ ನಿರ್ಮಾಣದಲ್ಲಿ ಇಂತಹ ಬೃಹತ್ ಬಂಡೆಗಳನ್ನು ಬಳಸಿಕೊಂಡು ಅದರ ಮೇಲೆ ತಮಗೆ ಅನುಕೂಲವಾಗುವಂತೆ ಗೋಡೆಗಳನ್ನು ನಿರ್ಮಿಸಲಾಗಿದೆ. ಅಲ್ಲದೆ ಎರಡು ಗುಡ್ಡಗಳನ್ನು ಜೋಡಿಸಲು ಅವುಗಳ ಮಧ್ಯ ಗೋಡೆಯನ್ನು ನಿರ್ಮಿಸಲಾಗಿದೆ. ಈ ರೀತಿಯ ಮಹತ್ವದ ಅಂಶಗಳನ್ನು ಈ ಕೋಟೆಯು ಒಳಗೊಂಡಿದೆ.

ಕೋಟೆಯ ತಳಭಾಗದಲ್ಲಿ ಕೆಲವು ರಕ್ಷಣಾ ಸಂಬಂಧಿ ಮತ್ತು ಧಾರ್ಮಿಕ ಕಟ್ಟಡಗಳು ಕಂಡು ಬರುತ್ತವೆ. ಅಲ್ಲಿಂದ ಸುಮಾರು ೨೦೦ ಅಡಿ ಎತ್ತರದವರೆಗೆ ಹಲವು ಮೆಟ್ಟಿಲುಗಳು ಕೋಟೆಯ ಪ್ರವೇಶಕ್ಕೆ

ನಿರ್ಮಿಸಲಾಗಿದೆ. ಅಗಲವಾದ ಮತ್ತು ಸ್ವಲ್ಪ ಎತ್ತರವಾದ ಈ ಮೆಟ್ಟಲುಗಳು ಸ್ಥಳೀಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ.

ಮೊದಲನೆಯ ಪ್ರವೇಶ ದ್ವಾರವು ಎರಡು ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ವೃತ್ತಾಕಾರದ ಈ ಕೊತ್ತಳಗಳು ತಳಭಾಗದಲ್ಲಿ ಅಗಲವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತವೆ. ದ್ವಾರವು ೧೦ ಅಡಿ ಅಗಲ ೧೫ ಡಿ ಎತ್ತರವಾಗಿವೆ. ಇದರ ನಿರ್ಮಾಣಕ್ಕೆ ಕಟೆದ ಕಲ್ಲುಗಳನ್ನು ಬಳಸಲಾಗಿದ್ದೂ ಇಲ್ಲಿ ಯಾವುದೇ ಕೆತ್ತನೆಗಳು ಇರುವುದಿಲ್ಲ. ಮುಂಭಾಗದಲ್ಲಿ ಎರಡು ಬದಿಯಲ್ಲಿ ಐದು ಅಡಿ ಕಲ್ಲಿನ ಕಂಬಗಳಿವೆ. ಅದರ ಮೇಲ್ಭಾಗದಲ್ಲಿ ರಂಧ್ರ ಹಾಕಲಾಗಿದೆ. ಇದು ದ್ವಾರದ ಸುರಕ್ಷತೆಗಾಗಿ ಕಬ್ಬಿಣದ ಸರಪಳಿಯನ್ನು ಜೋಡಿಸಲು ಈ ಕ್ರಮ ಅಳವಡಿಸಿರುವಂತೆ ಕಂಡು ಬರುತ್ತದೆ. ಗುಲಬರ್ಗಾ ಕೋಟೆಯ ಮುಂಭಾಗದಲ್ಲಿ ಇದೆ ಕ್ರಮವನ್ನು ಅಳವಡಿಸಲಾಗಿದೆ. ದ್ವಾರದ ಮೇಲ್ಭಾಗವು ನುಣುಪಾದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಕಮಾನಿನ ಮೇಲ್ಭಾಗದಲ್ಲಿ ಇರುವ ‘ಸಜ್ಜಾ’ ೩ ಅಡಿ ಹೊರಚಾಚಿಕೊಂಡಿದೆ.

ದ್ವಾರದ ಒಳಭಾಗದಲ್ಲಿ ಬಾಗಿಲುಗಳ ಜೋಡಣೆ ಮತ್ತು ಅದರ ಭದ್ರತೆಗೆ ಗುಳಿ ಹಾಕುವ ವ್ಯವಸ್ಥೆ ಇದೆ. ಆದರೆ ಪ್ರಸ್ತುತ ಈ ಕೋಟೆಯ ಯಾವುದೆ ದ್ವಾರಕ್ಕೆ ಕಟ್ಟಿಗೆಯ ಬಾಗಿಲುಗಳು ಇರುವುದಿಲ್ಲ. ದ್ವಾರದ ಎರಡು ಬದಿಯಲ್ಲಿ ‘L’ ಆಕಾರದ ಐದು ಕಾವಲುಗಾರರ ವಿಶ್ರಾಂತಿ ತಾಣಗಳಿವೆ. ಮೊದಲನೆಯ ದ್ವಾರದಿಂದ ಎರಡನೆಯ ದ್ವಾರದ ಒಳಗಡೆ ಸು. ೫೦x೫೦ ಅಡಿ ಸ್ಥಳದಲ್ಲಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳಿವೆ. ಅಲ್ಲದೆ ಪೂರ್ವ-ಪಶ್ಚಿಮ ಭಾಗದ ಕೋಟೆ ಗೋಡೆಯಲ್ಲಿ ಕೋಟೆಯ ಹೊರಭಾಗಕ್ಕೆ ಕಾವಲುಗಾರರು ಹೋಗಲು ಎರಡು ಚಿಕ್ಕ ದ್ವಾರಗಳಿವೆ. ಎರಡು ಕಡೆಯಲ್ಲಿ ಕೋಟೆಯು ಸುಮಾರು ೫೦ ಅಡಿ ಉದ್ದವಾಗಿದ್ದು ೧೫ ಅಡಿ ಎತ್ತರ, ೬ ಅಡಿ ದಪ್ಪವಾಗಿದೆ. ಈ ಭಾಗದ ಉಪದ್ವಾರಗಳು ೫ ಅಡಿ ಅಗಲ, ೮ ಅಡಿ ಎತ್ತರವಾಗಿದ್ದು, ಅದರ ನಿರ್ಮಾಣಕ್ಕೆ ಕಲ್ಲಿನ ಕಂಬಗಳ ಚೌಕಟ್ಟು ಬಳಸಲಾಗಿದೆ. ಈ ದ್ವಾರಗಳು ಹೊರಗಿನಿಂದ ಕಂಡು ಬರದಿದ್ದರೂ ಕೋಟೆಯ ಒಳಗಡೆ ಪ್ರವೇಶಕ್ಕೆ ಅನುಕೂಲವಾಗಿವೆ.

ಯಾದಗಿರಿಯ ಕೋಟೆಯ ಒಂದು ವಿಶೇಷತೆ ಎಂದರೆ ಪ್ರತಿಯೊಂದು ದ್ವಾರದ ಮುಂಭಾಗದಲ್ಲಿ ಬರುವ ಕೊತ್ತಳಕ್ಕೆ ಅಂಟಿಕೊಂಡಿರುವಂತೆ ಹೊರಹೋಗಲು ಉಪದ್ವಾರಗಳಿವೆ. ಈ ದ್ವಾರಗಳು ಎರಡು ಗೋಡೆಯ ಮಧ್ಯದಲ್ಲಿ ಕಾವಲುಗಾರರಿಗೆ ಕಾವಲು ಮಾಡಲು ಅನುಕೂಲವಾಗುವಂತೆ ನಿರ್ಮಿಸಲಾಗಿದೆ. ಪ್ರತಿಯೊಂದು ಕೊತ್ತಳದ ಬದಿಯಲ್ಲಿ ಗುಪ್ತದ್ವಾರಗಳು ಇರುವುದು ಇಲ್ಲಿಯ ವಿಶೇಷವಾಗಿದೆ. ಈ ರೀತಿಯ ರಚನೆಯು ಜಿಲ್ಲೆಯ ಯಾವ ಕೋಟೆಯಲ್ಲಿ ಕಂಡು ಬರುವುದಿಲ್ಲ. ಕೋಟೆಯ ಈ ಭಾಗದ ನಿರ್ಮಾಣಕ್ಕೆ ದಪ್ಪನೆಯ ಚೌಕಾಕಾರದ ಕಲ್ಲುಗಳನ್ನು ಬಳಸಲಾಗಿದೆ. ಇದರಲ್ಲಿ ಗಾರೆಯ ಬಳಕೆಯು ಇರುವುದಿಲ್ಲ.

ಆದ್ದರಿಂದ ಇದು ಕೋಟೆಯ ಆರಂಭಿಕ ಹಂತವಾಗಿರಬಹುದೆಂದು ಗುರುತಿಸಲಾಗಿದೆ. ನಂತರದ ಗೋಡೆಯ ನಿರ್ಮಾಣದಲ್ಲಿ ಬದಲಾವಣೆಯಾಗಿರುವುದು ಕಂಡು ಬರುತ್ತದೆ.

ಎರಡನೆಯ ದ್ವಾರವು ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿದೆ. ಇದಕ್ಕೆ ಯಾವುದೆ ಕೊತ್ತಳಗಳು ಇರುವುದಿಲ್ಲ. ಈ ದ್ವಾರವು ಸಂಪೂರ್ಣವಾಗಿ ಮುಂದಕ್ಕೆ ಚಾಚಿಕೊಂಡಿದೆ. ಅತ್ಯಂತ ಸರಳ ಶೈಲಿಯ ದ್ವಾರವು ೮ ಅಡಿ ಅಗಲ ೧೨ ಅಡಿ ಎತ್ತರವಾಗಿದೆ. ಇದರ ಪ್ರವೇಶಕ್ಕೆ ಮುಂಭಾಗದಲ್ಲಿ ೧೫ ಮೆಟ್ಟಿಲುಗಳಿವೆ. ಪ್ರವೇಶದ ಒಳಗಡೆ ೧೦ ಅಡಿ ಅಂತರದಲ್ಲಿ ಒಂದು ಕೊತ್ತಳವಿದೆ. ಇದರ ಮೇಲ್ಭಾಗದಲ್ಲಿ ವಿಕ್ಷಣಾ ರಂದ್ರಗಳಿವೆ. ಈ ಕೊತ್ತಳವು ಪ್ರವೇಶದ್ವಾರ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಒಂದು ವೇಳೆ ಶತ್ರುಗಳು ಕೋಟೆಯನ್ನು ಪ್ರವೇಶಿಸುತ್ತಿದ್ದರೆ, ಅವರ ಮೇಲೆ ಮೇಲಿನಿಂದ ಬಂಡೆ ಕಲ್ಲುಗಳನ್ನು ಹಾಕಿ ಅಲ್ಲಿಯೆ ಅವರನ್ನು ಹತ್ಯೆಗೊಳಿಸಲು ಈ ವ್ಯವಸ್ಥೆ ಮಾಡಲಾಗಿದೆ. ಇಲ್ಲಿಂದ ಮೂರನೆಯ ದ್ವಾರದ ಕಡೆಗೆ ಹೋಗಲು ಪೂರ್ವದ ಕಡೆಗೆ ಮಾರ್ಗವಿದೆ. ಅಲ್ಲಿಂದ ಅರ್ಧವೃತ್ತಾಕಾರದ ರಸ್ತೆಯು ಮೂರನೆಯ ದ್ವಾರಕ್ಕೆ ತಲುಪುತ್ತದೆ. ಈ ಮಧ್ಯದಲ್ಲಿ ಯಾವುದೆ ರಕ್ಷಣಾ ಸಂಬಂಧಿ ಕಟ್ಟಡಗಳು ಇರುವುದಿಲ್ಲ. ಎರಡು ಕಡೆಯ ದ್ವಾರದ ಒಳಭಾಗದಲ್ಲಿ ಕಾವಲುಗಾರ ತಂಗುದಾಣಗಳಿವೆ. ಬಲಭಾಗದಲ್ಲಿರುವ ದ್ವಾರದ ಒಳಗಡೆ ಸುಮಾರು ೩೦ ರಿಂದ ೪೦ ಜನ ಕಾವಲುಗಾರರಿಗೆ ವಿಶ್ರಾಂತಿಯ ಸ್ಥಳವಿದೆ. ಇಲ್ಲಿಯ ಕಾವಲುಗಾರರು ಮೂರನೆಯ ದ್ವಾರದ ರಕ್ಷಣೆ ಮಾಡುವುದರ ಜೊತೆಗೆ, ಕೋಟೆಯ ಹೊರಭಾಗದ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದ್ದರಿಂದ ಇಲ್ಲಿ ವಿಶಾಲವಾದ ಸ್ಥಳವಿದೆ.

ಮೂರನೆಯ ದ್ವಾರವು ಅತ್ಯಂತ ವಿಶಾಲವಾಗಿ ಮತ್ತು ಅಲಂಕಾರಯುಕ್ತ ಶೈಲಿಯಲ್ಲಿದೆ. ೮ ಅಡಿ ಅಗಲ ೧೨ ಅಡಿ ಎತ್ತರವಾಗಿರುವ, ಈ ದ್ವಾರದ ತೊಳುಗಳಿಗೆ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಚೌಕಾಕೃತಿಯ ದ್ವಾರದ ಮೇಲ್ಭಾಗದಲ್ಲಿ ಎರಡು ಅಡಿ ಎತ್ತರದವರೆಗೆ ಇಟಗೆಯ ಗೋಡೆಯನ್ನು ನಿರ್ಮಿಸಲಾಗಿದೆ. ದ್ವಾರದ ಮುಂಭಾಗದಲ್ಲಿ ಗಾರೆಯಲ್ಲಿ ಹೂಬಳ್ಳಿಗಳು, ನಕ್ಷತ್ರಗಳು, ರೇಖಾಚಿತ್ರ ಹಾಗೂ ಮುಂತಾದ ಅಲಂಕಾರಗಳಿವೆ. ಒಳಭಾಗದಲ್ಲಿ ಎರಡು ಕಡೆಯಲ್ಲಿ ೧೫x೧೫ ಅಳತೆಯ ಕಾವಲುಸ್ಥಳವಿದೆ. ೩ ಅಡಿ ಎತ್ತರದ ಮೇಲೆ ನಿರ್ಮಿಸಿರುವ ಈ ಸ್ಥಳಗಳು ಕಮಾನುಗಳ ಶೈಲಿಯನ್ನು ಹೊಂದಿವೆ. ಇದರ ಮೇಲ್ಭಾಗದಲ್ಲಿ ಗುಮ್ಮಟಗಳಿವೆ. ಈ ಸ್ಥಳಗಳಿಂದ ಕೋಟೆಯ ಒಳಗಡೆ ಪ್ರವೇಶಿಸಲು ಎರಡು ಬದಿಯಲ್ಲಿ ಚಿಕ್ಕ ದ್ವಾರಗಳಿವೆ. ದ್ವಾರದ ಒಳಗೆ ಕೋಟೆಯ ಎರಡು ಬದಿಗೆ ಹೋಗಲು ಮಾರ್ಗಗಳಿವೆ. ಇಲ್ಲಿಂದ ಕೋಟೆಯ ಸುತ್ತಲು ಇರುವ ಕೊತ್ತಳಗಳ ಕಡೆಗೆ ಹೋಗಬಹುದು. ಇಲ್ಲಿ ಕೆಲವು ಕಾವಲುಗೋಪುರಗಳು ಮತ್ತು ನೀರಿನ ಆಶ್ರಯ ತಾಣಗಳಿವೆ. ಮೊದಲನೆಯ ಮತ್ತು ಎರಡನೆಯ ಕೋಟೆಯ ಮಧ್ಯದಲ್ಲಿ ಇರುವ ವಿಶಾಲವಾದ ಸ್ಥಳವಿರುವುದು ಕಂಡುಬರುತ್ತದೆ. ಇಲ್ಲಿಂದ ನಾಲ್ಕನೆಯ ದ್ವಾರಕ್ಕೆ ಹೋಗಲು ಹಲವು ಮೆಟ್ಟಿಲುಗಳಿವೆ. ದ್ವಾರದ ಒಳಗಡೆ ೫ ಅಡಿ ಉದ್ದನೆಯ ಚಿಕ್ಕ ತೋಪು ಇದೆ. ಈ ತೋಪು

ಅದರ ಪಕ್ಕದಲ್ಲಿ ಇರುವ ಕಾವಲುಗೋಪುರದ ಮೇಲೆ ಇರುವುದನ್ನು ಬೇರೆ ಕಡೆಗೆ ಸಾಗಿಸಲು ಹೋಗಿ ಅದು ಅಲ್ಲಿ ಬಿದ್ದಿದೆ. ಈ ಭಾಗದಲ್ಲಿ ನಿರ್ಮಿಸಿರುವ ಕೊತ್ತಳಗಳ ವಿಶೇಷತೆಯೆಂದರೆ ಕೆಲವು ಕಡೆಯಲ್ಲಿ ಜೋಡು ಕೊತ್ತಳಗಳು ಅಥವಾ ಕಾವಲುಗೋಪುರಗಳಿವೆ. ಇದರಲ್ಲಿ ಹೊರಭಾಗದ ಕೊತ್ತಳಕ್ಕೆ ಒಳ ಪ್ರವೇಶಿಸಲು ದ್ವಾರ ಹಾಗೂ ಒಳಭಾಗದಲ್ಲಿ ಸೈನಿಕರಿಗೆ ತಂಗುದಾಣಗಳಿವೆ. ಅಲ್ಲಿಂದ ಮೆಟ್ಟಿಲುಗಳ ಮೂಲಕ ಮೇಲೆ ಹತ್ತಿ ಕೋಟೆಯ ಒಳಗಡೆ ಪ್ರವೇಶಿಸಬಹುದು. ಈ ರೀತಿಯ ದ್ವಾರಗಳು ಕೇವಲ ಕೋಟೆಯ ಕಾವಲುಗಾರರಿಗೆ ಮಾತ್ರ ತಿಳಿದಿರುತ್ತದೆ. ಬೇರೆ ಯಾರಿಗೂ ಇವುಗಳ ಮಾಹಿತಿ ಇರುವುದಿಲ್ಲ.

ನಾಲ್ಕನೆಯ ದ್ವಾರವು ಪಶ್ಚಿಮಕ್ಕೆ ಮುಖ ಮಾಡಿ ನಿರ್ಮಿಸಲಾಗಿದೆ. ಅತ್ಯಂತ ಸರಳ ಶೈಲಿಯ ಈ ದ್ವಾರವು ಕಮಾನಿನ ಆಕೃತಿಯಲ್ಲಿದೆ. ಇದು ಒಂದು ಕೊತ್ತಳಕ್ಕೆ ಅಂಟಿಕೊಂಡಿರುವಂತೆ ಕಂಡು ಬರುತ್ತದೆ. ಇದರ ಒಳಗಡೆ ಯಾವುದೇ ರಕ್ಷಣಾ ಸಂಬಂಧಿ ಕಟ್ಟಡಗಳು ಇರುವುದಿಲ್ಲ. ಮುಂದಿನ ದ್ವಾರದ ಪ್ರವೇಶಕ್ಕೆ ಅನುಕೂಲವಾಗುವಂತೆ ಒಳಗಡೆ ಖಾಲಿ ಸ್ಥಳವಿದೆ. ಇದರ ಮೇಲೆ ಶಾಸನಕ್ಕಾಗಿ ಸ್ಥಳಗಳಿವೆ. ಆದರೆ ಇಲ್ಲಿ ಪ್ರಸ್ತುತ ಯಾವುದೆ ಶಾಸನ ಇರುವುದಿಲ್ಲ.

೫ನೆಯ ದ್ವಾರವು ಉತ್ತರಕ್ಕೆ ಮುಖ ಮಾಡಿಕೊಂಡಿದ್ದು, ಇದರ ಬಲಬದಿಗೆ ಒಂದು ವೃತ್ತಾಕಾರದ ಕೊತ್ತಳವಿದೆ. ೬ ಅಡಿ ಅಗಲ ೮ ಅಡಿ ಎತ್ತರವಾಗಿರುವ ಇದರ ಚೌಕಟ್ಟು ಕಲ್ಲಿನ ಕಂಬಗಳಿಂದ ಕೂಡಿದೆ. ಒಳಗಡೆ ಎರಡು ಬದಿಯಲ್ಲಿ ಕಾವಲುಗಾರಿಗೆ ೧೫x೧೫ ಅಡಿ ಉದ್ದ ಅಗಲದ ಸ್ಥಳವಿದೆ. ಇದರ ಕಮಾನುಗಳು ಗಾರೆಯಿಂದ ಅಲಂಕಾರ ಮಾಡಲಾಗಿದ್ದೂ, ಮೇಲ್ಭಾಗದ ರಚನೆಯು ಆಕರ್ಷಕವಾಗಿದೆ. ಕೆಲವು ಗುಮ್ಮಟಗಳ ಒಳಭಾಗದ ಕೇಂದ್ರದಲ್ಲಿ ಕಲ್ಲಿನ ಬದಲು ಕಟ್ಟಿಗೆಯ ಕಂಬವನ್ನು ಬಳಸಲಾಗಿದೆ. ಗುಲಬರ್ಗಾ ಕೋಟೆಯ ಗುಮ್ಮಟಗಳ ಕೇಂದ್ರಭಾಗದಲ್ಲಿ ಚೂಪಾದ ಕಲ್ಲುಗಳನ್ನು (Key stone) ಬಳಸಿದರೆ, ಇಲ್ಲಿ ವೃತ್ತಾಕಾರದ ಕಲ್ಲುಗಳನ್ನು ಮತ್ತು ಕಟ್ಟಿಗೆಗಳನ್ನು ಬಳಸಿರುವುದು ಕಂಡು ಬರುತ್ತದೆ. ಎರಡು ಅಂಕಣಗಳ ಒಳಗೋಡೆಯಲ್ಲಿ ೨x೩ ಅಡಿ ಉದ್ದ ಅಗಲದ ದ್ವಾರಗಳಿವೆ. ೫ನೆಯ ದ್ವಾರದಿಂದ ೬ನೆಯ ದ್ವಾರಕ್ಕೆ ಹೋಗುವ ಮಾರ್ಗದಲ್ಲಿ ಕೋಟೆಯ ಮೂರನೆಯ ಸುತ್ತಿನ ಗೋಡೆ ಆರಂಭವಾಗುತ್ತದೆ. ಈ ಗೋಡೆಯು ಸಂಪೂರ್ಣವಾಗಿ ಇರದೆ ಅವಶ್ಯವಿರುವ ಕಡೆಯಲ್ಲಿ ಮಾತ್ರ ನಿರ್ಮಿಸಲಾಗಿದೆ. ಮಧ್ಯದ ಗೋಡೆಯನ್ನು ಹಿಡಿದರೆ ಅದು ನಾಲ್ಕನೆಯ ಸುತ್ತಿನ ಕೋಟೆ ಗೋಡೆಯಂತೆ ಕಂಡು ಬರುತ್ತದೆ. ಈ ರೀತಿಯ ಮಧ್ಯದ ಗೋಡೆಗಳು ಗುಲಬರ್ಗಾ ಜಿಲ್ಲೆಯ ಹಲವು ಕೋಟೆಗಳಲ್ಲಿ ಕಂಡು ಬರುತ್ತವೆ. ಶತ್ರುಗಳು ಇಂತಹ ಸ್ಥಳಗಳಿಂದ ಪ್ರವೇಶಿಸಬಹುದೆಂದು ರಕ್ಷಣಾ ಗೋಡೆಗಳನ್ನು ನಿರ್ಮಿಸಲಾಗಿರುತ್ತದೆ.

ಎರಡನೆ ಸುತ್ತಿನ ಕೋಟೆ ಗೋಡೆಯ ಸುತ್ತಲು ಹಲವು ಕಾವಲುಗೋಪುರಗಳಿಗೆ, ಇಲ್ಲಿಂದ ಮಾರ್ಗವಿದೆ. ಅವುಗಳ ಮೇಲೆ ತೋಪಿನ ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಬಲಭಾಗದ

ಕಾವಲುಗೋಪುರದ ಪಶ್ಚಿಮ ಭಾಗದಲ್ಲಿ ೧೨ ಅಡಿ ಉದ್ದನೆಯ ತೋಪು ಇದೆ. ಇದು ಪಶ್ಚಿಮ ಭಾಗದಲ್ಲಿದೆ. ಯಾದಗಿರ ಕೋಟೆಯ ತೋಪುಗಳು ಕೇಂದ್ರ ಭಾಗ ಮತ್ತು ತೋಪಿನ ಕಟ್ಟೆಗಳ ರಚನೆಯು ವಿಶೇಷತೆಯಿಂದ ಕೂಡಿದೆ. ಉಳಿದ ಕೋಟೆಗಳ ತೋಪುಗಳನ್ನು ಮತ್ತು ಅದರ ಕಟ್ಟೆಯ ರಚನೆಯನ್ನು ಕುರಿತು ರಕ್ಷಣಾ ಸಂಬಂಧಿ ಸ್ಮಾರಕಗಳು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಎರಡನೆಯ ಸುತ್ತಿನ ಕೋಟೆ ಗೋಡೆಯ ಮೇಲೆ ಚಿಕ್ಕ ಹಾಗೂ ದಪ್ಪನೆಯ ತೆನೆಗಳಿವೆ. ಆದರೆ ತೆನೆಗಳಲ್ಲಿ ಇರುವ ವಿಕ್ಷಣಾ ರಂಧ್ರಗಳು, ಅಂಬುಗಿಂಡಿಗಳು ಮತ್ತು ಬಂದೂಕು ರಂಧ್ರಗಳು ಭಿನ್ನವಾಗಿವೆ. ಪ್ರವೇಶದ ಬಲ ಮತ್ತು ಎಡಭಾಗಕ್ಕೆ ವಿಶಾಲವಾದ ನೀರಿನ ಆಶ್ರಯ ತಾಣಗಳಿವೆ. ಕೋಟೆಯ ಮೇಲ್ಭಾಗದಿಂದ ನೀರು ಹರಿದು ಬಂದು ಇಲ್ಲಿ ಸಂಗ್ರಹವಾಗುತ್ತದೆ. ಈ ನೀರು ಹರಿದು ಹೋಗದಂತೆ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಇವುಗಳ ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

೬ನೇ ದ್ವಾರವು ೫ನೆಯ ದ್ವಾರಕ್ಕಿಂತ ಅತ್ಯಂತ ಎತ್ತರವಾದ ಸ್ಥಳದಲ್ಲಿದೆ. ಈ ದ್ವಾರವು ಕಾಣದಂತೆ ಅದರ ಮುಂದೆ ವೃತ್ತಾಕಾರದ ತಡೆ ಗೋಡೆಯನ್ನು ನಿರ್ಮಿಸಲಾಗಿದೆ. ಅದರ ಮುಂಭಾಗದಲ್ಲಿ ೫ ಅಡಿ ಅಗಲದ ಪ್ರವೇಶವಿದೆ. ಇಲ್ಲಿಂದ ಮುಂದೆ ಹೋದರೆ ೬ನೆಯ ದ್ವಾರ ಬರುತ್ತದೆ. ಕಲ್ಲಿನಿಂದ ನಿರ್ಮಿಸಿದ ಇದರ ಚೌಕಟ್ಟುಗಳು ಮತ್ತು ಮೇಲ್ಭಾಗದ ಕಮಾನು ಆಕರ್ಷಕವಾಗಿದೆ. ೫ ಅಡಿ ಅಗಲ ೮ ಅಡಿ ಎತ್ತರದ ಈ ದ್ವಾರವು ಕಮಾನಿನ ಶೈಲಿಯಲ್ಲಿದೆ. ಇದರ ರಚನೆಗೆ ಬಳಸಿರುವ ಕಲ್ಲಿನ ಕಂಬಗಳು ಮತ್ತು ಮೇಲ್ಭಾಗದ ಭೋದಿಗೆಯು ಮೊದಲನೆಯ ದ್ವಾರವನ್ನು ಹೋಲುತ್ತದೆ. ಒಳಗಡೆ ೩ ಅಡಿ ಎತ್ತರದಲ್ಲಿ ಎರಡು ಬದಿಯಲ್ಲಿ ಕಾವಲುಗಾರರಿಗೆ ಆಶ್ರಯ ಸ್ಥಳವಿದೆ. ಒಳಭಾಗದಲ್ಲಿ ಒಂದು ಕೊತ್ತಳಕ್ಕೆ ಅಂಟಿಕೊಂಡ ದ್ವಾರವಿದೆ. ಕಾವಲುಗಾರರು ಇಲ್ಲಿಂದ ಹೊರಗೆ ಕೋಟೆಯನ್ನು ಕಾಯಲು ಹೋಗಬಹುದು.

ಕೋಟೆಯ ಈಶಾನ್ಯ ಭಾಗದಲ್ಲಿ ಹೊರ ಗೋಡೆಗೆ ಅಂಟಿಕೊಂಡ ದೊಡ್ಡ ನೀರಿನ ಸಂಗ್ರಹವಿದೆ. ಇಲ್ಲಿಂದ ನೀರು ಕೋಟೆಯ ನಾನಾ ಭಾಗಗಳಿಗೆ ತೆಗೆದುಕೊಂಡು ಹೋಗಬಹುದು. ಮೂರು ದ್ವಾರಗಳು ಈ ಭಾವಿಗೆ ಸಂಪರ್ಕ ಕಲ್ಪಿಸುತ್ತವೆ. ಎರಡು ದ್ವಾರಗಳು ಗ್ರಾಮಕ್ಕೆ ಸಂಪರ್ಕ ಹೊಂದಿದರೆ, ಮತ್ತೊಂದು ದ್ವಾರವು ಕೋಟೆಯ ಒಳಗಡೆ ಸಂಪರ್ಕ ಹೊಂದಿದೆ. ಈ ಭಾಗದ ಕೋಟೆಯ ಗೋಡೆಯ ಕೊತ್ತಳಗಳ ಮೇಲೆ ಮೂರು ತೋಪುಗಳಿವೆ. ಇಲ್ಲಿಯ ತೋಪುಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆಗೆದುಕೊಂಡು ಹೋಗುವಂತೆ ಅಳವಡಿಸಲಾಗಿದೆ. ಈ ಭಾಗದಲ್ಲಿ ಹಲವು ಬಗೆಯ ರಕ್ಷಣಾ ಸಂಬಂಧಿ ಕಟ್ಟಡಗಳಿವೆ.

೬ನೆಯ ದ್ವಾರದಿಂದ ೭ನೆಯ ದ್ವಾರಕ್ಕೆ ಹೋಗುವ ಮಾರ್ಗದ ಬಲಭಾಗದಲ್ಲಿ ಒಂದು ಕಾವಲುಗೋಪುರ ಹಾಗೂ ೧೦ ಅಡಿ ಉದ್ದನೆಯ ತೋಪು ಇದೆ. ಬಲಭಾಗಕ್ಕೆ ಮೇಲೆ ಹತ್ತಲು

ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಕೋಟೆಯ ಅಂತಿಮ ಸುತ್ತಿನ ಗೋಡೆ ಇದೆ. ಈ ಎರಡು ದ್ವಾರಗಳ ಮಧ್ಯ ೧೦೦ ರಿಂದ ೧೨೫ ಮೆಟ್ಟಿಲುಗಳಿವೆ.

ಎಳನೆಯ ದ್ವಾರವು ಪೂರ್ವಕ್ಕೆ ಮುಖ ಮಾಡಿಕೊಂಡಿದ್ದು ೫ ಅಡಿ ಅಗಲ ೮ ಅಡಿ ಎತ್ತರವಾಗಿದೆ. ಚೌಕಾಕಾರದ ಇವರ ಮೇಲ್ಭಾಗ ಕಮಾನಿನ ಶೈಲಿಯಲ್ಲಿದೆ. ಇದು ಸಂಪೂರ್ಣವಾಗಿ ಅವನತಿಯ ಹಂತದಲ್ಲಿದೆ. ಇದರ ಒಗಡೆ ಬಲಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳು ಹಾಗೂ ಎಡಭಾಗಕ್ಕೆ ಸುಮಾರು ೪೦ ಅಡಿ ಉದ್ದ ೨೦ ಅಡಿ ಅಗಲದ ಸೈನಿಕರ ಆಶ್ರಯ ತಾಣವಿದೆ. ಈ ರೀತಿ ಹಲವು ರಕ್ಷಣಾ ಕಟ್ಟಡಗಳನ್ನು ಇಲ್ಲಿ ನಿರ್ಮಿಸಲಾಗಿದೆ. ದ್ವಾರದ ಮುಂಭಾಗದಲ್ಲಿ ಇರುವ ಗೋಡೆಯ ಮೇಲೆ ಕ್ರಿ.ಶ. ೧೫೪೬ರ ಶಾಸನವಿದೆ. ಇದು ಅಲ್ಲಿರುವ ಒಂದು ಭಾವಿಯನ್ನು ಕುರಿತು ವಿವರಿಸುತ್ತದೆ.

ಕೊನೆಯ ದ್ವಾರದ ನಂತರ, ಬೆಟ್ಟದ ಮೇಲ್ಭಾಗದಲ್ಲಿ ಹಲವು ಬಗೆಯ ಕಟ್ಟಡಗಳು ಮತ್ತು ಅವಶೇಷಗಳಿವೆ. ಒಂದು ರಾಜ್ಯಧಾನಿಗೆ ಅವಶ್ಯವಾಗಿರುವ ಎಲ್ಲಾ ಬಗೆಯ ಕಟ್ಟಡಗಳು ಇಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾದ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ಕುರಿತು ಚರ್ಚಿಸಲಾಗಿದೆ. ಈ ಹಿಂದಿನ ಕೃತಿಗಳಲ್ಲಿ ಕೆಲವು ಕಟ್ಟಡಗಳ ಉಲ್ಲೇಖಗಳಿವೆ. ಆದರೆ ಕ್ಷೇತ್ರ ಅಧ್ಯಯನದಲ್ಲಿ ಬೇರೆ ಬೇರೆ ಬಗೆಯ ೨೫ ಕಟ್ಟಡಗಳನ್ನು ಗುರುತಿಸಲಾಗಿದೆ.

ಕೋಟೆಯ ಮೇಲ್ಭಾಗದಲ್ಲಿ ಈಶಾನ್ಯ ದಿಕ್ಕಿನಲ್ಲಿ ಬೃಹದಾಕಾರದ ನೀರಿನ ಸಂಗ್ರಹವಿದೆ. ಉತ್ತರದಿಂದ ಪೂರ್ವ ಭಾಗದವರೆಗೆ ಆವರಿಸಿಕೊಂಡಿರುವ ಈ ಸ್ಥಳಕ್ಕೆ ಅರ್ಧ ವೃತ್ತಾಕಾರದಲ್ಲಿ ಗೋಡೆಯನ್ನು ನಿರ್ಮಿಸಲಾಗಿದೆ. ೫ ಅಡಿ ದಪ್ಪನೆಯ ಈ ಗೋಡೆಯು ನೀರು ಪೋಲಾಗದಂತೆ ಭದ್ರವಾಗಿ ನಿರ್ಮಿಸಲಾಗಿದೆ. ಕೇಂದ್ರ ಭಾಗದಲ್ಲಿ ೨೦ ರಿಂದ ೨೫ ಅಡಿ ಎತ್ತರವಾಗಿದ್ದೂ, ಉಳಿದ ಭಾಗದಲ್ಲಿ ೫ ರಿಂದ ೧೫ ಅಡಿವರೆಗೆ ಎತ್ತರವಾಗಿದೆ. ಇದರ ಕೇಂದ್ರ ಭಾಗಕ್ಕೆ ಇಟ್ಟಿಗೆಯನ್ನು ಬಳಸಿ ಮೆಟ್ಟಿಲು ಆಕಾರದಲ್ಲಿ ರಚಿಸಲಾಗಿದೆ. ನೀರಿನ ತೇವಾಂಶವನ್ನು ಕಾಪಾಡಿಕೊಂಡು ಹೋಗಲು ಈ ಕ್ರಮ ಅಳವಡಿಸಲಾಗಿದೆ. ಮೇಲ್ಭಾಗದಿಂದ ಹರಿದು ಬರುವ ನೀರು ಸಂಪೂರ್ಣವಾಗಿ ಇಲ್ಲಿ ಸಂಗ್ರಹವಾಗುತ್ತದೆ. ಕೋಟೆಯ ಮೇಲ್ಭಾಗದಲ್ಲಿರುವ ಎಲ್ಲಾ ಕಟ್ಟಡಗಳಿಗೆ ಇಲ್ಲಿಂದ ನೀರು ಪೂರೈಸಲಾಗುತ್ತದೆ. ಗುಲಬರ್ಗಾ ಜಿಲ್ಲೆಯ ಗಿರಿದುರ್ಗಗಳಲ್ಲಿಯೇ ಇಲ್ಲಿ ಹೆಚ್ಚಿನ ಸಂಖ್ಯೆಯ ನೀರಿನ ಸಂಗ್ರಹಗಳಿವೆ. ಅದರಲ್ಲಿ ಕೆಲವು ಕೃತಕವಾಗಿದ್ದರೆ ಇನ್ನೂ ಕೆಲವು ನೈಸರ್ಗಿಕವಾಗಿರುವ ಬಂಡೆಗಳ ಮಧ್ಯದಲ್ಲಿ ನೀರು ಸಂಗ್ರಹವಾಗುತ್ತದೆ.

ಕೋಟೆಯ ದಕ್ಷಿಣ ಭಾಗದಲ್ಲಿ ಕಟೆದ ಕಲ್ಲಿನಲ್ಲಿ ನಿರ್ಮಿಸಿರುವ ಆಯತಾಕಾರದ ಭಾವಿ ಇದೆ. ಇದರ ಮಧ್ಯದಲ್ಲಿ ಒಂದು ಕಮಾನು ಇದ್ದೂ. ಇದಕ್ಕೆ ಎರಡು ಕಡೆಯಿಂದ ಪ್ರವೇಶ ದ್ವಾರಗಳಿವೆ. ಇದನ್ನು ಸ್ಥಳಿಯರು ಅಕ್ಕ ತಂಗಿಯರ ಭಾವಿ ಎಂದು ಕರೆಯುತ್ತಾರೆ. ಇಲ್ಲಿಯ ನೀರು ಬತ್ತಿ ಹೋಗುವುದಿಲ್ಲ. ಇವುಗಳ ಆಕಾರದ ಮೇಲೆ ಅಕ್ಕ ತಂಗಿಯರ ಭಾವಿ ಎಂದು ಕರೆಯುತ್ತಾರೆ. ಇವರ

ಸಮೀಪದಲ್ಲಿ ಕೋಟೆಯ ಹೊರಭಾಗಕ್ಕೆ ಹೋಗಲು ದ್ವಾರವಿದೆ. ಮಸೀದಿಯ ಉತ್ತರ ಭಾಗದಲ್ಲಿ ಆಯತಾಕಾರದ ಮತ್ತೊಂದು ಭಾವಿ ಇದೆ. ಆದರೆ ಇದಕ್ಕೆ ಮೆಟ್ಟಿಲುಗಳಿಲ್ಲ, ಮೇಲ್ಭಾಗದಿಂದ ನೀರು ಎತ್ತುವ ವ್ಯವಸ್ಥೆ ಮಾಡಲಾಗಿದೆ. ಈ ಸೇದಿ ಭಾವಿಯ ಸುತ್ತಲು ಅರಮನೆಗೆ ಸಂಬಂಧಿಸಿದ ಹಲವು ಬಗೆಯ ಅವಶೇಷಗಳಿವೆ. ಅಲ್ಲದೆ ಕೋಟೆಯ ಕೆಳಭಾಗದ ವೀಕ್ಷಣೆಗಾಗಿ ಆಕರ್ಷಕ ವೀಕ್ಷಣಾಲಯಗಳನ್ನು ರಚಿಸಲಾಗಿದೆ. ಇದು ಅರಸು ಪರಿವಾರದವರಿಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಈ ಮೂರು ಬಾವಿಗಳನ್ನು ಹೊರತು ಪಡಿಸಿ ಉಳಿದವುಗಳು ನೈಸರ್ಗಿಕ ಬಂಡೆಗಳ ಮಧ್ಯದಲ್ಲಿ ಸುಮಾರು ೧೫ ನೀರಿನ ಸಂಗ್ರಹಗಳಿವೆ. ಸಾಧ್ಯವಿದ್ದ ಮಟ್ಟಿಗೆ ನೀರಿನ ತೊಂದರೆ ಯಾಗದಂತೆ ಹೆಚ್ಚಿನ ಪ್ರಮಾಣದ ನೀರಿನ ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲಾ ಬಗೆಯ ನೀರಿನ ಆಶ್ರಯ ತಾಣಗಳು ಕೋಟೆಯ ಮೇಲ್ಭಾಗದ ಪ್ರಮುಖ ರಕ್ಷಣಾ ಸಂಬಂಧಿ ಸ್ಮಾರಕಗಳಾಗಿವೆ.

ಕೋಟೆಯ ಸುತ್ತಲು ಹಲವು ಬಗೆಯ ಕೊತ್ತಳಗಳು ಅಥವಾ ಕಾವಲುಗೋಪುರಗಳಿವೆ. ಆದರೆ ದಕ್ಷಿಣ ಭಾಗದಲ್ಲಿ ಸುಮಾರು ೪೦ ರಿಂದ ೫೦ ಅಡಿ ಎತ್ತರದ ಅರ್ಧವೃತ್ತಾಕಾರದ ವಿಶೇಷ ಕಾವಲುಗೋಪುರವಿದೆ. ಇದು ಇತ್ತೀಚಿಗೆ ನಿರ್ಮಿಸಿದಂತೆ ಕಂಡು ಬರುತ್ತದೆ. ಈ ಕಾವಲುಗೋಪುರವು ನೈಸರ್ಗಿಕ ಬಂಡೆಗಲ್ಲಿನ ಮೇಲೆ ಕಟೆದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಮೇಲ್ಭಾಗದಲ್ಲಿ ಸುತ್ತಲು ೧೫ ತೆನೆಗಳಿವೆ. ಇವುಗಳು ೩ ಅಡಿ ದಪ್ಪ ೪ ಅಡಿ ಎತ್ತರವಾಗಿದೆ. ಇದರ ವಿಶೇಷತೆ ಎಂದರೆ, ಕೇಂದ್ರಭಾಗದಲ್ಲಿ ತೋಪು ನಿಲ್ಲಿಸದೆ ಒಂದು ಬದಿಯಲ್ಲಿ ೩ ಅಡಿ ಆಳವಾದ ಸ್ಥಳದಲ್ಲಿ ತೋಪು ನಿಲ್ಲಿಸಲಾಗಿದೆ. ಇದರ ಸುತ್ತಲು ಬಂದೂಕು ರಂಧ್ರಗಳಿದ್ದೂ, ತೋಪು ಈ ರಂಧ್ರಗಳ ಮೂಲಕ ಸ್ಫೋಟಿಸಬಹುದಾಗಿದೆ. ಈ ರೀತಿಯ ಕಾವಲುಗೋಪುರ ಮತ್ತು ತೋಪು ಗುಲಬರ್ಗಾ ಜಿಲ್ಲೆಯ ಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ.

ಕೋಟೆಯ ಮೇಲ್ಭಾಗದಲ್ಲಿ ತುಪ್ಪದ ಮತ್ತು ಎಣೆಯ ಕಣಜಗಳಿವೆ. ಪೂರ್ವ ಭಾಗದಲ್ಲಿ ಒಂದೇ ಸಾಲಿನಲ್ಲಿ ೫ ದಾನ್ಯದ ಕಣಜಗಳಿವೆ. ವೃತ್ತಾಕಾರದ ಈ ಕಟ್ಟಡಗಳು ತಳಭಾಗದಲ್ಲಿ ದಪ್ಪವಾಗಿದ್ದು ಮೇಲೆ ಹೋದಂತೆ ಚಿಕ್ಕದಾಗಿವೆ. ಇದರ ಹೊರಭಾಗದಲ್ಲಿ ಮೇಲೆ ಹತ್ತಲು ೧೦ ರಿಂದ ೧೫ ಕಲ್ಲಿನ ಮೆಟ್ಟಿಲುಗಳಿವೆ. ೧೫ ಅಡಿ ಎತ್ತರವಾಗಿರುವ ಕಣಜಗಳಿಗೆ ಗಾಳಿ ಬೆಳಕಿಗಾಗಿ ಯಾವುದೇ ರಂಧ್ರಗಳು ಇರುವುದಿಲ್ಲ. ಇವುಗಳಲ್ಲಿ ದಾನ್ಯಗಳನ್ನು ತುಂಬಿ ನಂತರ ಅದನ್ನು ಮುಚ್ಚಲಾಗುತ್ತಿತ್ತು. ಹೆಚ್ಚಿನ ದಾನ್ಯಗಳ ಸಂಗ್ರಹದ ಅವಶ್ಯಕತೆ ಇರುವುದರಿಂದ ಇಲ್ಲಿ ಸಾಲಾಗಿ ಐದು ಕಣಜಗಳನ್ನು ನಿರ್ಮಿಸಲಾಗಿದೆ. ಆದರೆ ಪ್ರಸ್ತುತ ಇದರಲ್ಲಿ ಕೆಲವು ಕಣಜಗಳು ಅವನತಿಯ ಹಂತದಲ್ಲಿವೆ.

[illegible]

ಮೇಲ್ಭಾಗದ ಕೇಂದ್ರ ಸ್ಥಳದಲ್ಲಿ ನೆಲವನ್ನು ಅಗೆದು, ಕಟೆದ ಕಲ್ಲಿನಲ್ಲಿ ವೃತ್ತಾಕಾರದಲ್ಲಿ ನಿರ್ಮಿಸಿರುವ ಒಂದು ತುಪ್ಪದ ಕೊಳವಿದೆ. ಇದರಲ್ಲಿ ಸಂಗ್ರಹಿಸಲಾದ ತುಪ್ಪ ಹಾಳಾಗದಂತೆ ಅಥವಾ ಕಲುಸಿತಗೊಳ್ಳದಂತೆ ಮುಂಜಾಗ್ರತ ಕ್ರಮವಹಿಸಿ ಇದನ್ನು ನಿರ್ಮಿಸಲಾಗಿದೆ.

ಅಕ್ಕ ತಂಗಿಯರ ಭಾವಿಯ ಮುಂಭಾಗದಲ್ಲಿ ಮತ್ತೊಂದು ದ್ರವ ಪದಾರ್ಥದ ಸಂಗ್ರಹಕ್ಕಾಗಿ ಒಂದು ಕೊಳ್ಳವಿದೆ. ಇದು ಮೊದಲಿನ ಎರಡು ಕೊಳ್ಳಗಳಿಗಿಂತ ಭಿನ್ನವಾಗಿದೆ. ನೆಲವನ್ನು ಅಗೆದು ಅದರಲ್ಲಿ ೬x೬ ಆಕಾರದ ಚೌಕಾಕಾರದ ಗೋಡೆಯನ್ನು ನಿರ್ಮಿಸಿ, ಅದರ ಸುತ್ತಲು ೨ ಅಡಿ ಅಂತರದಲ್ಲಿ ಮತ್ತೊಂದು ಗೋಡೆ ನಿರ್ಮಿಸಲಾಗಿದೆ. ಮಧ್ಯದ ಕೊಳ್ಳದ ಸುತ್ತಲು, ನೀರು ಸಂಗ್ರಹಿಸುವ ಸಲುವಾಗಿ ಇದನ್ನು ನಿರ್ಮಿಸಿರುವಂತೆ ಕಂಡು ಬರುತ್ತದೆ. ಬೇಸಿಗೆ ಕಾಲದಲ್ಲಿ ಹೆಚ್ಚಿನ ಬಿಸಿಲಿನಿಂದ ಒಳಗಡೆಯ ಪದಾರ್ಥಗಳು ಕೆಡದಂತೆ ಸುತ್ತಲು ನೀರು ಸಂಗ್ರಹಿಸಿ ಸಮಪ್ರಮಾಣದ ಉಷ್ಣಾಂಶ ಕಾಪಾಡಿಕೊಂಡು ಬರಲು ಈ ಕ್ರಮ ಅಳವಡಿಸಿರಬಹುದು.

ತಲಾಬಿನ ಮೇಲ್ಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿರುವ ಒಂದು ಸರಳ ಶೈಲಿಯ ಕಟ್ಟಡವಿದೆ. ಇದರ ಒಳಭಾಗವು ೮ ಎತ್ತರವಾದ ಕಮಾನುಗಳಿಂದ ಕೂಡಿದೆ. ಅತ್ಯಂತ ಆಕರ್ಷಕ ಶೈಲಿಯ ಈ ಕಮಾನುಗಳು ಆದಿಲ್ ಶಾಹಿಗಳ ಕಟ್ಟಡಗಳನ್ನು ಹೋಲುತ್ತದೆ. ಇಷ್ಟೊಂದು ಅಲಂಕಾರಕ ಶೈಲಿಯನ್ನು ಹೊಂದಿರುವ ಈ ಕಟ್ಟಡವು ಸಭಾ ಭವನವಾಗಿರಬಹುದೆಂದು ಗುರುತಿಸಲಾಗಿದೆ. ಅದರ ಹಿಂಭಾಗದಲ್ಲಿ ವಿಶ್ರಾಂತಿ ಕೋಣೆಯಂತೆ ಕಂಡು ಬರುವ ಕಟ್ಟಡವಿದೆ. ಇದೇ ಶೈಲಿಯ ಕಟ್ಟಡವು ಶಹಾಪೂರ ಕೋಟೆಯಲ್ಲಿಯ ಕಂಡು ಬರುತ್ತದೆ. ಅದು ಸಭಾ ಭವನವೆಂದು ಗುರುತಿಸಲಾಗಿದೆ. ಆದ್ದರಿಂದ ಇದು ಸಹ ಸಭಾಭವವಾಗಿರಬಹುದು. ಇದರ ಹಿಂಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಮೇಲ್ಭಾಗವು ವೃತ್ತಾಕಾರದ ಚಿಕ್ಕ ಗುಮ್ಮಟಗಳನ್ನು ಹೊಂದಿದೆ. ಈ ರೀತಿಯ ಬೃಹತ್ ಕಮಾನುಗಳು ಮತ್ತು ಎತ್ತರವಾದ ಕಂಬಗಳು ನಮಗೆ ಯಾದಗಿರ ಕೋಟೆಯ ಯಾವ ಕಟ್ಟಡಗಳಲ್ಲಿಯು ಕಂಡು ಬರುವುದಿಲ್ಲ.

ಸಭಾ ಭವನದ ಹಿಂಭಾಗದಲ್ಲಿ ಇನ್ನೂ ಎರಡು ಆಯತಾಕಾರದ ಕಟ್ಟಡಗಳಿವೆ. ೨೦ ಅಡಿ ಅಗಲ ೪೦ ಅಡಿ ಉದ್ದವಾಗಿದ್ದು ಇದರ ಗೋಡೆ ೪ ಅಡಿ ದಪ್ಪವಾಗಿದೆ. ೧೫ ಅಡಿ ಎತ್ತರದ ಈ ಗೋಡೆಯಲ್ಲಿ ಯಾವುದೇ ಕಿಟಕಿಗಳು ಇರುವುದಿಲ್ಲ. ಇವುಗಳ ಗೋಡೆಗಳು ಅತ್ಯಂತ ಭದ್ರವಾಗಿದ್ದು, ಇದರಲ್ಲಿ ಯಾವುದೆ ಕಮಾನುಗಳು ಅಥವಾ ಅಲಂಕಾರಗಳು ಇರುವುದಿಲ್ಲ. ಆದ್ದರಿಂದ ಇವುಗಳು ಖಜಾನೆ ಅಥವಾ ಮದ್ದು ಗುಂಡಿನ ಸಂಗ್ರಹದ ಸಲುವಾಗಿ ನಿರ್ಮಿಸಿರುವಂತೆ ಕಂಡು ಬರುತ್ತವೆ. ಕೋಟೆಯ ಪಶ್ಚಿಮ ಭಾಗಕ್ಕೆ ಈ ರೀತಿಯ ಇನ್ನೂ ಕೆಲವು ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಆದರೆ ಅವುಗಳು ಸಂಪೂರ್ಣವಾಗಿ ನಾಶಗೊಂಡಿವೆ. ಅದರ ತಳಪಾಯ ಮಾತ್ರ ಉಳಿದುಕೊಂಡಿದೆ.

ಬೆಟ್ಟದ ಮೇಲಿನ ಪ್ರವೇಶ ದ್ವಾರದ ಬಲಬದಿಯಲ್ಲಿ ಇರುವ ಸಭಾ ಭವನದ ಪಕ್ಕದಲ್ಲಿ ಮಸೀದಿ ಇದೆ. ೪೦ ಅಡಿ ಅಗಲ ೬೦ ಅಡಿ ಉದ್ದನೆಯ ಈ ಮಸಿದಿಯು ಮುಂಭಾಗದಲ್ಲಿ ಕೆಳಹಂತದಲ್ಲಿ ಸುತ್ತಲು ಕೋಣೆಗಳಿವೆ. ಇದರ ಉತ್ತರ ಹಾಗೂ ದಕ್ಷಿಣ ಭಾಗದಲ್ಲಿ ೫ ಕೋಣೆಗಳಿವೆ. ಇಲ್ಲಿ ಧರ್ಮ ಗುರುಗಳು, ಸಂತರು ವಾಸವಾಗಿರಬಹುದು. ಇಲ್ಲಿಂದ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಏಕೆಂದರೆ ಇದು ಅರಮನೆಯ ಸಮೀಪದಲ್ಲಿದ್ದೂ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹೊಂದಿದೆ. ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಈ ಮಸೀದಿಯು ಮೂರು ವಿಶಾಲವಾದ ಕಮಾನುಗಳ ಪ್ರವೇಶವನ್ನು ಹೊಂದಿದೆ. ಇದರ ಪ್ರಾರ್ಥನಾ ಸ್ಥಳವು ಎರಡು ಹಂತದ ಕಮಾನುಗಳಿಂದ ಕೂಡಿದೆ. ಕಮಾನಿನ ಕೆಳಭಾಗದಲ್ಲಿ ೧೨ ಅಡಿ ಎತ್ತರದ ಜೋಡು ಕಲ್ಲಿನ ಕಂಬಗಳಿವೆ, ಹಾಗೂ ಇದರ ಮೇಲೆ ಅಷ್ಟಕೋನಾಕೃತಿಯ ಕಮಾನುಗಳಿವೆ. ಇದರ ಪಶ್ಚಿಮ ಭಾಗದ ಗೋಡೆಯಲ್ಲಿ ಹಲವು ಆಕಾರದ ಚಿಕ್ಕ ಚಿಕ್ಕ ಕಿಟಕಿಗಳು ಕಮಾನಿನ ಆಕಾರ ಹಾಗೂ ಚೌಕಾಕಾರದಲ್ಲಿವೆ. ಇಡಿ ಪ್ರಾಥನಾಲಯದ ಗೋಡೆಯನ್ನು ಇವುಗಳಿಂದ ಅಲಂಕಾರ ಮಾಡಲಾಗಿದೆ. ಹಿಂಭಾಗದಿಂದ ಅರಮನೆಗೆ ಹೋಗಲು ದ್ವಾರಗಳಿವೆ ಇವುಗಳ ಮೂಲಕ ಕೋಟೆಯ ಬೇರೆ ಬೇರೆ ಕಡೆಗೆ ಹೋಗಬಹುದು. ಪ್ರಾರ್ಥನಾಲಯದ ಎರಡು ಬದಿಯಲ್ಲಿ ೪ ಅಡಿ ಅಗಲದ ಸ್ಥಳವಿದೆ ಇಲ್ಲಿಂದ ಹೊರಹೋಗಲು ಮಾರ್ಗ ವಿದೆ.

ಈ ಕಟ್ಟಡದ ಮುಂಭಾಗದಲ್ಲಿ ೨೦x೪೦ ವಿಸ್ತೀರ್ಣದ, ೨ ಅಡಿ ತಗ್ಗಾದ ಸ್ಥಳವಿದೆ. ಇದರ ಸುತ್ತಲೂ ೮x೮ ಆಕಾರದ ಕೊಠಡಿಯ ಕಟ್ಟಡಗಳಿವೆ. ಒಂದು ರೀತಿಯಲ್ಲಿ ಇದು ಕೆಲವೆ ಜನರಿಗೆ ಮಾತ್ರ ಸೀಮಿತವಾಗಿ ರುವಂತೆ ಕಂಡುಬರುತ್ತದೆ. ಇದನ್ನು ಸಂಪೂರ್ಣವಾಗಿ ಗಾರೆಯ ಲೇಪನದಿಂದ ಅಲಂಕಾರ ಮಾಡಲಾಗಿದೆ. ಮೇಲ್ಭಾಗದಲ್ಲಿ ಉತ್ತರ ದಿಕ್ಕಿನಲ್ಲಿ ಹಲವು ಬಗೆಯ ವಿಕ್ಷಣಾಲಯಗಳಿವೆ. ಅದರಲ್ಲಿ ಕೋಟೆಯ ಉತ್ತರ ಭಾಗದಲ್ಲಿ ಅರಮನೆಯ ಸಮೀಪದಲ್ಲಿ ಬೆಟ್ಟದ ತುದಿಯಲ್ಲಿ ವಿಶೇಷ ವಿಕ್ಷಣಾಲಯವಿದೆ. ಒಳಭಾಗದಲ್ಲಿ ೮x೧೦ ಅಡಿ ಉದ್ದ ಅಗಲದ ಸ್ಥಳದಲ್ಲಿ ಕುಳಿತು ಹೊರಭಾಗದ ಚಲನ ವಲನಗಳನ್ನು ವೀಕ್ಷಿಸಬಹುದು. ಇಲ್ಲಿಂದ ಕೋಟೆಯ ಕೆಳಭಾಗವನ್ನು ಮತ್ತು ದ್ವಾರಗಳನ್ನು ವೀಕ್ಷಿಸಬಹುದು. ಈ ವೀಕ್ಷಣಾಲಯವು ನಯವಾದ ಕಮಾನುಗಳಿಂದ ಮತ್ತು ಗಾರೆಯಿಂದ ಲೇಪನದಿಂದ ನಿರ್ಮಿಸಲಾಗಿದೆ. ಇಷ್ಟೊಂದು ವ್ಯವಸ್ಥಿತವಾದ ಕಾವಲುಗೋಪುರವು ಅರಸು ಪರಿವಾರದವರಿಗಾಗಿ ರಚಿಸಿರುವಂತೆ ಕಂಡು ಬರುತ್ತದೆ.

ಮತ್ತೊಂದು ವೀಕ್ಷಣಾಲಯ ಉತ್ತರ ಭಾಗದ ಬೃಹತ ಬಂಡೆಯ ಮೇಲೆ ನಿರ್ಮಿಸಲಾಗಿದೆ. ಇದು ೬x೬ ಅಡಿ ಉದ್ದ ಅಗಲದ ಚೌಕಾಕಾರದಲ್ಲಿದ್ದು, ನಾಲ್ಕು ಕಡೆಯಲ್ಲಿ ತೆರೆದ ಕಮಾನುಗಳಿವೆ. ಇದು ಕೋಟೆಯ ಅತ್ಯಂತ ಎತ್ತರ ಭಾಗದಲ್ಲಿದೆ. ಇದರ ಪಕ್ಕದಲ್ಲಿ ಕಾವಲುಗಾರರ ವಸತಿ ನಿಲಯಗಳು ಹಾಗೂ ಸಮೀಪದಲ್ಲಿ ಮದ್ದು ಗುಂಡುಗಳ ಸಂಗ್ರಹವಿದೆ. ಕಾವಲುಗಾರರು ಚಿಕ್ಕ ಚಿಕ್ಕ ತೋಪುಗಳನ್ನು ಹಿಡಿದುಕೊಂಡು ಇಲ್ಲಿ ಕಾವಲು ಮಾಡುತ್ತಿದ್ದರು. ಇದರ ಸಮೀಪದಲ್ಲಿ ಸ್ಫೋಟಕ ವಸ್ತುಗಳು ಲಭವಾಗಿವೆ. ಅವುಗಳ ಕುರಿತು ಮದ್ದು

ಗುಂಡುಗಳ ವಿವರಣೆಯಲ್ಲಿ ಹೆಚ್ಚಿನ ವಿವರಣೆ ನೀಡಲಾಗಿದೆ. ಇಲ್ಲಿ ಲಭ್ಯವಾದ ಸ್ಫೋಟಕ ವಸ್ತುಗಳು "ಚಾಪಿಸ್" (ಬಳಪ) ಆಕಾರದಲಿದ್ದೂ, ಇವುಗಳನ್ನು ನೋಡಿದರೆ, ಸಣ್ಣ ಸಣ್ಣ ಬಂದೂಕುಗಳಿಗೆ ಬಳಸಲಾಗುತ್ತಿತ್ತೆಂದು ಕಂಡು ಬರುತ್ತದೆ[೬೮]. ಈ ಕಾವಲುಗೋಪುರದ ಸಮೀಪದಲ್ಲಿ ಹಾಳು ಬಿದ್ದ ಕಟ್ಟಡದ ತಳಪಾಯದಲ್ಲಿ ಇವುಗಳು ಲಭ್ಯವಾಗಿವೆ. ಈ ರೀತಿ ಯಾದಗಿರ ಕೋಟೆಯ ಮೇಲ್ಭಾಗದಲ್ಲಿ ಮತ್ತು ಇತರ ಭಾಗದ ಕೋಟೆ ಗೋಡೆಯ ಸಮೀಪದಲ್ಲಿ ಇಂತಹ ಸ್ಫೋಟಕ ವಸ್ತುಗಳ ಸಂಗ್ರಹ ಕಂಡು ಬರುತ್ತದೆ.

ಬೆಟ್ಟದ ಮೇಲ್ಭಾಗದ ಆಗ್ನೇಯ ದಿಕ್ಕಿನಲ್ಲಿರುವ ಕಾವಲುಗೋಪುರದ ಉತ್ತರ ಭಾಗದಲ್ಲಿರುವ ಸಭಾಭವನದ ಹಿಂಭಾಗದಲ್ಲಿ ಮೂರು ದೇವಾಲಯದ ಕಟ್ಟಡಗಳಿವೆ. ೬x೬ ಉದ್ದ ಅಗಲದ ಚೌಕಾಕಾರದ ಈ ದೇವಾಲಯಗಳು ೮ ಅಡಿ ಎತ್ತರವಾಗಿವೆ. ಒಳಗಡೆ ಯಾವುದೆ ವಿಗ್ರಹಗಳು ಇರುವುದಿಲ್ಲ. ನುಣುಪಾಗಿ ಕಟೆದ ಕಲ್ಲಿನಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ಒಂದು ದೇವಾಲಯದಲ್ಲಿ ಹುತ್ತ ಬೆಳೆದರೆ ಇನ್ನೂಳಿದ ದೇವಾಲಯಗಳಲ್ಲಿ ಕಪ್ಪನೆಯ ಮಣ್ಣಿನ ಸಂಗ್ರಹವಿದೆ. ಇಲ್ಲಿ ಸ್ಫೋಟಕ ವಸ್ತುವಿನ ಸಂಗ್ರಹವಿರುವಂತೆ ಕಂಡು ಬರುತ್ತದೆ. ಈ ದೇವಾಲಯಗಳ ರಚನೆ ಮತ್ತು ಇದಕ್ಕೆ ಬಳಸಿರುವ ಸಾಮಗ್ರಿಗಳನ್ನು ನೋಡಿದರೆ ಇದು ಇತ್ತೀಚಿಗೆ ನಿರ್ಮಿಸಿರುವಂತೆ ಕಂಡು ಬರುತ್ತದೆ. ಈ ರೀತಿಯ ಕಟ್ಟಡಗಳು ನಮಗೆ ಕೋಟೆಯ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ.

ಕೋಟೆಯ ದಕ್ಷಿಣ ಭಾಗದ ಎತ್ತರವಾದ ಗುಡ್ಡದ ಮೇಲೆ, ೧೫ ರಿಂದ ೨೦ ಅಡಿ ಎತ್ತರದ ವೃತ್ತಾಕಾರದ ಕಾವಲುಗೋಪುರವಿದೆ. ಇದಕ್ಕೆ ಮೇಲೆ ಹತ್ತಲು ಹಲವು ಮೆಟ್ಟಿಲುಗಳಿವೆ. ಇದರ ಮೇಲೆ ಮತ್ತೆ ೪ ಅಡಿ ಎತ್ತರದ ವೃತ್ತಾಕಾರದ ಗೋಡೆಯನ್ನು ನಿರ್ಮಿಸಿ, ಅದರ ಮೇಲೆ ತೋಪಿನ ಕಟ್ಟೆಯನ್ನು ರಚಿಸಿ, ಕೇದ್ರ ಭಾಗದಲ್ಲಿ ೨೦ ಅಡಿ ಉದ್ದನೆಯ ತೋಪು ಇಡಲಾಗಿದೆ. ಇದರ ಸುತ್ತಲು ೨ ಅಡಿ ಆಳವಾದ ಸ್ಥಳವಿದೆ. ಇದರಲ್ಲಿ ನೀರು ಸಂಗ್ರಹಿಸಲಾಗುತ್ತಿತ್ತು. ತೋಪಿನ ಕೇಂದ್ರ ಭಾಗದ ರಚನೆ ಮತ್ತು ಅದರ ಕೆಳಗಡೆ ಇರುವ ದಪ್ಪನೆಯ ಕಲ್ಲು ಒಡೆದು ಹೋಗಿದೆ. ಯಾದಗಿರ ಕೋಟೆಯ ಎಲ್ಲಾ ದೊಡ್ಡ ದೊಡ್ಡ ತೋಪುಗಳ ಕೆಳಭಾಗದಲ್ಲಿರುವ ಚೌಕಾಕಾರದ ಕಲ್ಲುಗಳು ಒಡೆದು ಎರಡು ಭಾಗಗಳಾಗಿವೆ[೬೯]. ಕಾರಣ ಇವುಗಳ ರಚನೆಯಲ್ಲಿ ಲೋಪದೋಷ ಕಂಡು ಬರುತ್ತದೆ. ತಳಭಾಗದಲ್ಲಿ ಕಲ್ಲಿಗೆ ಒಂದು ರಂದ್ರಹಾಕಿ ಅದಕ್ಕೆ ನೆಲದಲ್ಲಿರುವ ಒಂದು ಕಲ್ಲು ಅಥವಾ ಕಬ್ಬಿಣಕ್ಕೆ ಜೋಡಣೆ ಮಾಡಿ ಅದು ವೃತ್ತಾಕಾರದಲ್ಲಿ ತಿರುಗುವಂತೆ ಮಾಡಲಾಗಿದೆ. ತೋಪಿನ ಭಾರಕ್ಕೆ ತಳಭಾಗದ ಕಲ್ಲು ಮಧ್ಯದಲ್ಲಿ ಒಡೆದು ಎರಡು ಭಾಗಗಳಾಗಿರುತ್ತವೆ..

ಇದರ ಕೆಳಭಾಗದಲ್ಲಿ ೧೦ ಅಡಿ ಉದ್ದನೆಯ ತೋಪು ನೆಲದ ಮೇಲೆ ಬಿದ್ದಿದೆ. ಇದರ ಮುಂಭಾಗ ಕಿರಿದಾಗಿದ್ದು ಹಿಂದೆ ದಪ್ಪವಾಗಿದೆ. ಆದಿಲ್ ಶಾಹಿಗಳ ಶೈಲಿಯ ಈ ತೋಪಿನ ಮೇಲೆ ಅಲಂಕಾರದ ಕೆತ್ತನೆ ಇದೆ. ಈ ರೀತಿಯ ತೋಪುಗಳು ಯಾದಗಿರಿ, ಗುಲಬರ್ಗಾ, ಶಹಾಪೂರ, ಸುರಪುರ

ಮತ್ತು ಜಿಲ್ಲೆಯ ಇತರ ಕೋಟೆಗಳಲ್ಲಿ ಕಂಡು ಬರುವುದಿಲ್ಲ. ಕಾವಲುಗೋಪುರದ ಕೆಳಭಾಗದಲ್ಲಿ ಸೈನಿಕರಿಗೆ ರಕ್ಷಣೆ ಪಡೆಯಲು ಮತ್ತು ಮದ್ದು ಗುಂಡುಗಳ ಸಂಗ್ರಹಕ್ಕಾಗಿ ಸ್ಥಳವಿದೆ. ಇಲ್ಲಿ ಸುಮಾರು ೩೦ ರಿಂದ ೪೦ ಸೈನಿಕರು ಆಶ್ರಯ ಪಡೆಯಬಹುದು. ಪ್ರತಿಯೊಂದು ದೊಡ್ಡ ಕಾವಲುಗೋಪುರದ ಸಮೀಪದಲ್ಲಿ ಸೈನಿಕರ ಆಶ್ರಯ ತಾಣಗಳು ಮತ್ತು ಮದ್ದು ಗುಂಡಿನ ಸಂಗ್ರಹದ ಸ್ಥಳಗಳು ಕಂಡು ಬರುತ್ತವೆ.

ಯಾದಗಿರ ಕೋಟೆಯ ಮೇಲ್ಭಾಗದಲ್ಲಿ ಹಲವು ಬಗೆಯ ರಕ್ಷಣಾ ಸಂಬಂಧಿ ಕಟ್ಟಡಗಳಾದ, ಅರಮನೆ, ನೀರಿನ ಆಶ್ರಯ ತಾಣಗಳು, ಸಭಾಭವನ, ಮದ್ದಿನ ಮನೆ, ದೇವಾಲಯಗಳು, ಮಸೀದಿಗಳು, ಕಾವಲುಗೋಪುರಗಳು ಧಾನ್ಯದ, ತುಪ್ಪದ ಮತ್ತು ಎಣ್ಣೆಯ ಕಣಜಗಳು, ತೋಪುಗಳಂತಹ ಮುಂತಾದ ಕಟ್ಟಡಗಳು ಕಂಡು ಬರುತ್ತವೆ. ಒಂದು ರಾಜ್ಯದ ರಕ್ಷಣೆಗಾಗಿ ಅವಶ್ಯವಿರುವ ಎಲ್ಲಾ ಕಟ್ಟಡಗಳು ಯಾದಗಿರ ಕೋಟೆಯ ಮೇಲ್ಭಾಗದಲ್ಲಿ ಇವೆ. ಪಶ್ಚಿಮ ಭಾಗದಲ್ಲಿ ೨೦೦ ಅಡಿ ಅಂತರದಲ್ಲಿ ಮತ್ತೊಂದು ಬೆಟ್ಟವಿದೆ. ಇದಕ್ಕೆ ಸಂಪರ್ಕ ಕಲ್ಪಿಸಲು ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಕೋಟೆ ಗೋಡೆಯನ್ನು ವಿಸ್ತರಿಸಲಾಗಿದೆ. ಮೊದಲನೆಯ ಬೆಟ್ಟದಿಂದ ಎರಡನೆಯ ಬೆಟ್ಟಕ್ಕೆ ಹೋಗುವ ಮಧ್ಯದಲ್ಲಿ ಒಂದು ಮಾರ್ಗವಿದೆ. ಇಲ್ಲಿಂದ ಎರಡನೆಯ ಬೆಟ್ಟಕ್ಕೆ ಹೋಗಬಹುದು. ಈ ಭಾಗದಲ್ಲಿ ಒಂದು ಕಾವಲುಗೋಪುರವಿದೆ. ೧೦ ರಿಂದ ೧೫ ಅಡಿ ಎತ್ತರದ ವೃತ್ತಾಕಾರದ ಗೋಪುರದ ಕೇಂದ್ರ ಭಾಗದಲ್ಲಿ ೧೫ ಅಡಿ ಉದ್ದನೆಯ ತೋಪು ನೈರುತ್ಯ ಭಾಗಕ್ಕೆ ಮುಖ ಮಾಡಿ ನಿಲ್ಲಿಸಲಾಗಿದೆ. ಇದರ ನಂತರ ಕೋಟೆ ಗೋಡೆಯು ಅಂತ್ಯಗೊಳ್ಳುತ್ತದೆ.

ಅಕ್ಕ ತಂಗಿಯರ ಭಾವಿಯ ಹಿಂಭಾಗದಿಂದ ಕೆಳಗೆ ಬರಲು ದ್ವಾರವಿದೆ. ದಕ್ಷಿಣ ಭಾಗದಿಂದ ಕೋಟೆಗೆ ಒಟ್ಟು ಆರು ದ್ವಾರಗಳಿವೆ. ಅದರಲ್ಲಿ ಇದು ಮೊದಲನೆಯ ದ್ವಾರ. ಇಲ್ಲಿಂದ ಕೆಳಭಾಗದಲ್ಲಿ ಒಂದು ಬೃಹದ್ದಾಕಾರದ ಭಾವಿ ಇದೆ. ಇದರ ಮುಂಭಾಗದಲ್ಲಿ ಎರಡು ಬೆಟ್ಟಗಳ ಮಧ್ಯದಲ್ಲಿ ಒಂದು ದೇವಸ್ಥಾನವಿದೆ. ಪ್ರಸ್ತುತ ಇದು ಅಂಭಾಭವಾನಿ ದೇವಸ್ಥಾನವಾಗಿದ್ದು, ಇಲ್ಲಿ ಪೂಜೆ, ಪ್ರಾರ್ಥನೆ ನಡೆಯುತ್ತದೆ. ಈ ಬೆಟ್ಟದ ಮೇಲೆ ಕಲ್ಯಾಣಿ ಚಾಲುಕ್ಯರ ಅರಸ ೬ನೇ ವಿಕ್ರಮಾಧಿತ್ಯನ ಶಾಸನವಿದ್ದೂ, ಇದು ಆತನ ಆಳ್ವಿಕೆಯ ಮಹತ್ವವನ್ನು ಕುರಿತು ವಿವರಿಸುತ್ತದೆ. ಉತ್ತರ ಭಾಗಕ್ಕೆ ಒಂದು ಸೈನಿಕರ ಆಶ್ರಯ ತಾಣ ಮತ್ತು ಕಾವಲುಗೋಪುರ ಅದರ ಮೇಲೆ ೧೦ ಅಡಿ ಉದ್ದನೆಯ ತೋಪು ಇದೆ. ಇದರ ಸಮೀಪದಲ್ಲಿ, ಹನುಮಂತ, ನವಿಲು, ಸಾರಂಗ ಮತ್ತು ಮುಂತಾದ ಮುರ್ತಿ ಶಿಲ್ಪಗಳಿವೆ.

ಇದೆ ಬೆಟ್ಟದ ಸ್ವಲ್ಪ ಮುಂಭಾಗದಲ್ಲಿ ಬಂಡೆಯನ್ನು ಅರ್ಧವೃತ್ತಾಕಾರದಲ್ಲಿ ಕೊರೆದು ಒಳಗಡೆ ತೀರ್ಥಂಕರರ ನಿಂತ ಬಂಗಿಯ ರೇಖಾಚಿತ್ರಗಳಿವೆ. ಅದರ ಪಕ್ಕದಲ್ಲಿ ಎರಡು ಬದಿಯಲ್ಲಿ ಕುಳಿತ ವ್ಯಕ್ತಿಗಳ ರೇಖಾ ಚಿತ್ರಗಳಿವೆ. ಇದರಿಂದ ಕಲ್ಯಾಣ ಚಾಲುಕ್ಯರು ಮೊದಲು ಜೈನ ಧರ್ಮದ ಆರಾಧಕರೆಂದು ಕಂಡು ಬರುತ್ತದೆ. ದಕ್ಷಿಣ ಭಾಗದಲ್ಲಿ ಎರಡನೆಯ ದ್ವಾರದಿಂದ ಮುಂದೆ ಉಳಿದ ದ್ವಾರಗಳ ಮೂಲಕ ಇಂದಿನ

ಅಂಬೇಡ್ಕರ ಚೌಕ ಕಡೆಗೆ ಬರುವ ಮಾರ್ಗವಿದೆ. ಈ ಎಲ್ಲಾ ದ್ವಾರಗಳು ಸರಳವಾಗಿದ್ದು. ಕೆಲವು ದ್ವಾರಗಳು ಎರಡು ಕೊತ್ತಳಗಳ ಮಧ್ಯದಲ್ಲಿವೆ, ಮತ್ತೆ ಕೆಲವು ದ್ವಾರಗಳು ಚೌಕಾಕಾರದ ಕಲ್ಲಿನಲ್ಲಿ ರಚಿಸಲಾಗಿದೆ. ಈ ದ್ವಾರಗಳ ಮಧ್ಯದಲ್ಲಿ ಯಾವುದೆ ರಕ್ಷಣಾ ಸ್ಮಾರಕಗಳು ಕಂಡು ಬರುವುದಿಲ್ಲ. ಅಲ್ಲಲ್ಲಿ ಕೆಲವು ಕಾವಲುಗಾರರ ಆಶ್ರಯ ತಾಣಗಳು ಮತ್ತು ನೀರಿನ ತಾಣಗಳಿವೆ. ಕೋಟೆಯ ಮೂರು ಸುತ್ತಿನ ಗೋಡೆಯ ಮಧ್ಯದಲ್ಲಿ ಕಾವಲುಗಾರರಿಗೆ ಕಾವಲು ಮಾಡಲು, ಕೊತ್ತಳಗಳ ಪಕ್ಕದಲ್ಲಿ ಉಪದ್ವಾರಗಳಿವೆ. ಆನೇಯ ದ್ವಾರವು ಎರಡು ಬದಿಯಲ್ಲಿ ವೃತ್ತಾಕಾರದ ಬುರುಜುಗಳನ್ನು ಹೊಂದಿದೆ.

ಮೂರು ಸುತಿನ ಕೋಟೆ ಗೋಡೆಯನ್ನು ಹೊಂದಿರುವ ಯಾದಗಿರ ಕೋಟೆಯು ಅತ್ಯಂತ ಸುರಕ್ಷಿತ ಮತ್ತು ಸುಭದ್ರವಾಗಿದೆ. ಅಲ್ಲದೆ ಬೆಟ್ಟಕ್ಕೆ ಬೇರೆ ಮಾರ್ಗದಿಂದ ಪ್ರವೇಶಕ್ಕೆ ಅವಕಾಶವಿದ್ದರೆ ಅಲ್ಲಿಯು ಗೋಡೆಯನ್ನು ನಿರ್ಮಿಸಲಾಗಿದೆ. ಆದ್ದರಿಂದ ಕೋಟೆಯ ಒಳಗಡೆ ಪ್ರವೇಶಕ್ಕೆ ಬೇರೆ ಮಾರ್ಗದಿಂದ ಅಸಾಧ್ಯವಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೆಲವು ಪ್ರಮುಖ ಕೋಟೆಗಳು ಅತ್ಯಂತ ಸುರಕ್ಷಿತವಾಗಿವೆ. ಅದರಲ್ಲಿ ಯಾದಗಿರ ಕೋಟೆಯು ಒಂದಾಗಿದೆ.

೧೮. ಸುರಪುರ ಕೋಟೆ:

ಗುಲಬರ್ಗಾ ಜಿಲ್ಲೆಯ ತಾಲೂಕು ಕೇಂದ್ರವಾದ ಸುರಪುರವು ಗುಲಬರ್ಗಾದಿಂದ ದಕ್ಷಿಣಕ್ಕೆ ೧೧೦ ಕೀ.ಮಿ. ದೂರದಲ್ಲಿದೆ. ವಿಜಯನಗರ ಪತನಹೊಂದಿದನಂತರ ಹಲವು ಪಾಳೆಗಾರರು ತಲೆ ಎತ್ತಿದರು. ಅವರಲ್ಲಿ ಸುರಪುರದ ಗೋಸಲುವಂಶದ ನಾಯಕರು ಮೊದಲು ವಾಗಣಗೇರಿಯನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು. ನಂತರ ಸುರಪುರವನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ೧೩ ಜನ ನಾಯಕರು ಆಳ್ವಿಕೆಮಾಡಿದರು ಅವರಲ್ಲಿ ವೆಂಕಟಪ್ಪನಾಯಕ. ಇಮ್ಮಡಿ ವೆಂಕಟಪ್ಪನಾಯಕ ಹಾಗೂ ನಾಲ್ಕನೆಯ ವೆಕಟಪ್ಪ ನಾಯಕರು ಪ್ರಬಲ ಅರಸರಾಗಿದ್ದು. ಇವರ ಕಾಲದಲ್ಲಿ ಸುರಪುರ ಕೋಟೆ ಮತ್ತು ಹಲವು ಬಗೆಯ ರಕ್ಷಣಾ ಸ್ಮಾರಕಗಳು ನಿರ್ಮಾಣಗೊಂಡವು. ೭೦ ಕ್ರಿ. ಶ. ೧೭೦೭ ಪಿಡ್ಡ ನಾಯಕನು ವಾಗಣಗೇರಿ ಕೋಟೆಯನ್ನು ಮರುವಶ ಪಡಿಸಿಕೊಂಡು. ಸುರಪುರ ಎಂಬ ಹೊಸ ನಗರವನ್ನು ನಿರ್ಮಿಸಿ ಅದರ ರಕ್ಷಣೆಗಾಗಿ ನಗರದ ಸುತ್ತಲು ಕೋಟೆ ಹಾಗೂ ಕೇಂದ್ರಭಾಗದಲ್ಲಿ ವೇಣುಗೋಪಾಲ ಸ್ವಾಮಿಯ ದೇವಾಲಯದ ಅಡಿಪಾಯವನ್ನು ಹಾಕಿದನು. ಮುಂದೆ ಬಂದ ಪಾಮಾನಾಯಕನು (೧೭೨೭ -೧೭೪೧) ನಗರಕ್ಕೆ ಆವರಿಸಿಕೊಂಡಂತೆ ಹೊರ ಕೋಟೆಯನ್ನು ಹಾಗೂ ಅದರ ಸುತ್ತಲು ಆರು ಪ್ರಮುಖದ್ವಾರಗಳನ್ನು ನಿರ್ಮಿಸಿದನು. ವೆಂಕಟಪ್ಪ ನಾಯಕನು (೧೭೪೭ -೧೭೫೨) ಸುರಪುರ ನಗರದ ಮಧ್ಯದಲ್ಲಿ ಅರಮನೆಯನ್ನು ನಿರ್ಮಿಸಿದನು ಇದನ್ನು ಸ್ಥಳಿಯರು ಹಳೆದರ್ಬಾರ ಎಂದು ಕರೆಯುತ್ತಾರೆ. ಕೋಟೆಗೋಡೆಯ ಮಧ್ಯದಲ್ಲಿ ಹಲವು ಬಗೆಯ ಕಾವಲು ಗೋಪುರಗಳನ್ನು ಹಾಗೂ ಬುರುಜುಗಳನ್ನು ನಿರ್ಮಿಸಿ ಕೋಟೆಯನ್ನು ಬಲಪಡಿಸಿದನು. ಅಲ್ಲದೆ ಅವಶ್ಯ ವಿರುವ ಭಾಗಗಳಲ್ಲಿ ತೋಪುಗಳಿಗಾಗಿ

ವ್ಯವಸ್ಥೆಮಾಡಲಾಯಿತು. ನಾಲ್ಕನೆಯ ವೆಂಕಟಪ್ಪ ನಾಯಕನ ಕಾಲದಲ್ಲಿ ನಯಾದರ್ಭಾರ ಎನ್ನುವ ಹೊಸ ಅರಮನೆಯನ್ನು ನಿರ್ಮಿಸಲಾಯಿತು. ಇದೆ ಅರಮನೆಯ ಮುಂದೆ ಬ್ರಿಟಿಷರ ಪ್ರತಿನಿಧಿಯಾದ ಮೆಟೋಸ ಟೇಲರಗಾಗಿ ಟೇಲರ ಮಂಜಿಲ್ ಎನ್ನಾಗಿ ಮಾರ್ಪಡಿಸಲಾಯಿತು.

ಸುರಪುರ ನಗರಕ್ಕೆ ಆವರಿಸಿ ಕೊಂಡಿರುವಂತೆ ಎತ್ತರವಾದ ಗುಡ್ಡ ಪ್ರದೇಶದಲ್ಲಿ ಮತ್ತು ತಗ್ಗಾದ ಕಣಿವೆ ಪ್ರದೇಶವನ್ನು ಬಳಸಿಕೊಂಡು ಕೋಟೆಯನ್ನು ನಿರ್ಮಿಸಲಾಗಿದೆ. ಈ ಕೋಟೆಗೋಡೆಯು ಒಂದು ಬೆಟ್ಟದಿಂದ ಮತ್ತೊಂದು ಬೆಟ್ಟಕ್ಕೆ ಸಂಪರ್ಕವನ್ನು ಕಲ್ಪಿಸುತ್ತದೆ. ಬೆಟ್ಟಮಯ ಬೌಗೋಳಿಕ ಪರಿಸರದಲ್ಲಿ ನಿರ್ಮಿಸಿರುವ ಈ ಕೋಟೆಯನ್ನು ಗಿರಿದುರ್ಗಗಳ ಸಾಲಿನಲ್ಲಿ ಸೇರಿಸಲಾಗಿದೆ. ಕೋಟೆಗೋಡೆಯ ಒಟ್ಟು ಉದ್ದ ಸುಮಾರು ೬೪೦೦ ಮೀಟರಗಳು, ಅಲ್ಲದೆ ಅಂದಾಜು ೨ ಕೀ.ಮಿ. ದಿಂದ ೧.೫ ಕೀಮಿ. ವರೆಗೆ ಸುತ್ತಲಿನ ವಿಸ್ತೀರ್ಣ ಪ್ರದೇಶದಲ್ಲಿ ಕೋಟೆಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಯ ನಿರ್ಮಾಣಕ್ಕೆ ಒರಟು ಗುಂಡುಕಲ್ಲುಗಳನ್ನು ಮತ್ತು ಆಗ್ನೆಯ ಭಾಗದ ಗೋಡೆಗೆ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಗೋಡೆಯ ಮೇಲ್ಭಾಗದಲ್ಲಿ ತೆನೆಗಳ ರಚನೆಯ ಕಂಡು ಬರುತ್ತದೆ. ಆದರೆ ಪ್ರಸ್ತುತ ಎಲ್ಲಾ ತೆನೆಗಳು ಬಿದ್ದುಹೋಗಿವೆ. ಕೋಟೆಯ ಸುತ್ತಲು ಒಟ್ಟು ೩೪ ವೃತ್ತಾಕಾರದ ಹಾಗೂ ಅರ್ಧವೃತ್ತಾಕಾರದ ಕೊತ್ತಳಗಳಿವೆ. ಕೋಟೆಯ ಪ್ರವೇಶಕ್ಕೆ ವಿವಿಧ ದಿಕ್ಕಿನಲ್ಲಿ ಆರು ಪ್ರವೇಶದ್ವಾರಗಳಿವೆ. ಈ ಪ್ರವೇಶ ದ್ವಾರಗಳು ಅಲ್ಲಿಯ ಪರಿಸರಕ್ಕೆ ಅನಕೂಲಕರ ವಾಗುವಂತೆ ನಿರ್ಮಿಸಲಾಗಿದೆ. ಅದೇ ರೀತಿ ಗೋಟೆಯ ದಪ್ಪ ಮತ್ತು ಎತ್ತರ ಸಮಾನ ಆಕಾರದಲ್ಲಿ ಕಂಡು ಬರುವುದಿಲ್ಲ. ಏಕೆಂದರೆ ಬೆಟ್ಟ ಗುಡ್ಡಗಳಿಂದ ಕೂಡಿರುವ ಪ್ರದೇಶದಲ್ಲಿ ಅವುಗಳನ್ನು ಬಳಸಿಕೊಂಡು ಗೋಡೆ ನಿರ್ಮಿಸಿರುವುದರಿಂದ ಸಮಾನ ಆಕೃತಿಯು ಕಂಡು ಬರುವುದಿಲ್ಲ. ಆದರೆ ಸಾಮಾನ್ಯವಾಗಿ ೩ ಮೀಟರ ದಪ್ಪ ೪ ರಿಂದ ೮ ಮೀಟರ ಎತ್ತರದಲ್ಲಿದೆ.

ಕೋಟೆಯ ವಿವಿಧ ದಿಕ್ಕಿನಲ್ಲಿರುವ ಪ್ರವೇಶದ್ವಾರಗಳನ್ನು ಸ್ಥಳಿಯರು ಈ ಹೆಸರಿನಿಂದ ಕರೆಯುತ್ತಾರೆ.

೧. ದೇವಪುರ ಅಗಸಿ.

೨. ಮುಳ್ಳ ಅಗಸಿ.

೩. ರಂಗಪೇಟ ಅಗಸಿ.

೪. ಮುಳ್ಳ ಅಗಸಿ.

೫. ಕಪಲಿಯ ಬೆಂಚೆ ಅಗಸಿ.

೬. ವೆಂಕಟಾಪುರ ದಿಡಿ (ಅಗಸಿ).

ಇವುಗಳಲ್ಲಿ ಕೆಲವು ಅಗಸಿಗಳು ಎರಡು ಕೊತ್ತಳಗಳ ಮಧ್ಯದಲ್ಲಿದ್ದರೆ, ಮತ್ತೆ ಕೆಲವು ಅಗಸಿಗಳು ನೇರವಾದ ಗೋಡೆಯ ಮಧ್ಯದಲ್ಲಿ ಪ್ರವೇಶದ್ವಾರವನ್ನು ಹೊಂದಿದೆ. ಆದರೆ ಪ್ರತಿಯೊಂದು ಪ್ರವೇಶದ್ವಾರವು ಕಮಾನಿನ ಶೈಲಿಯನ್ನು ಹೊಂದಿದೆ. ಒಳಗಡೆ ಎರಡ ರಿಂದ ಮೂರು ಅಂಕಣಗಳ ಸೈನಿಕರ

ವಿಶ್ರಾಂತಿ ನಿಲಯಗಳಿವೆ. ಅಲ್ಲಿಂದ ಮುಂದೆ ಕೋಟೆಯ ಒಳಗಡೆ ಪ್ರವೇಶಕ್ಕೆ ಅನಕೂಲ ಮಾಡಿಕೊಡಲಾಗಿದೆ. ಕೆಲವು ದ್ವಾರಗಳ ಮುಂಭಾಗದಲ್ಲಿರುವ ಕೊತ್ತಳಗಳ ಮೇಲೆ ತೋಪಿನ ಕಟ್ಟಗಳಿವೆ. ಅತ್ಯಂತ ವಿಶಾಲವಾದ ತೋಪುಗಳ ತಳಪಾಯ, ಬೃಹತ ತೋಪನ್ನು ಹೊಂದಿರುವಂತೆ ಕಂಡು ಬರುತ್ತದೆ. ಆದರೆ ಪ್ರಸ್ತುತ ಇಲ್ಲಿಯ ಕಾವಲು ಗೋಪುರಗಳ ಮೇಲೆ ತೋಪುಗಳು ಕಂಡು ಬರುವುದಿಲ್ಲ.

ದೇವಪುರ ಅಗಸಿ ಅತ್ಯಂತ ವಿಶಾಲವಾಗಿದ್ದು, ಆಕರ್ಷಕ ಶೈಲಿಯಲ್ಲಿ ನಿರ್ಮಿಸಲಾಗಿದೆ. ನಗರ ದಕ್ಷಿಣ ಭಾಗದಲ್ಲಿರುವ ಈ ಪ್ರವೇಶದ್ವಾರವನ್ನು ಕುಂಬಾರ ಪೇಟ ಅಗಸಿ ಎಂದು ಸಹ ಕರೆಯುತ್ತಾರೆ. ಇದು ೨೦ ಅಡಿ ಎತ್ತರ ೧೫ ಅಡಿ ಅಗಲವಾಗಿದ್ದು ಕಮಾನಿನ ಆಕಾರದಲ್ಲಿದೆ. ಇದರ ರಚನೆಗೆ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ವಾಯುವ್ಯ ಭಾಗದ ಕೋಣೆಯಲ್ಲಿ ಬರುವ ಈ ದ್ವಾರಕ್ಕೆ ವಿಶೇಷ ರಕ್ಷಣೆಯನ್ನು ನೀಡಲಾಗಿದೆ. ಇದರ ಸುತ್ತಲು ಮೂರು ಕಾವಲು ಗೋಪುರಗಳು ಹಾಗೂ ಭದ್ರವಾದ ಗೋಡೆಯನ್ನು ನಿರ್ಮಿಸಲಾಗಿದೆ. ದ್ವಾರದ ಮುಂಭಾದಲ್ಲಿ ಆನೆ, ಸಿಂಹ, ನವಿಲು, ಮೀನು ಮುಂತಾದ ಪ್ರಾಣಿಗಳ ಚಿತ್ರಗಳು ಹಾಗೂ ವಾಧ್ಯಮೇಳ, ನೃತ್ಯನ ಭಂಗಿಯ ಶಿಲ್ಪಗಳು ಹಾಗೂ ಮಲ್ಲಯುದ್ದದ ದೃಶ್ಯಗಳು ದ್ವಾರದ ಮತ್ತೊಂದು ಬದಿಯಲ್ಲಿ ಕೆತ್ತಲಾಗಿದೆ. ಸುರಪುರದ ನಾಯಕರ ಕಾಲದ ಸಾಂಸ್ಕೃತಿಕ ಇತಿಹಾಸದ ರಚನೆಗೆ ಈ ಶಿಲ್ಪಗಳು ಪುರಕದಾಖಲೆಯನ್ನು ಒದಗಿಸುತ್ತವೆ.

ಸುರಪುರದ ಪೂರ್ವದಿಕ್ಕಿನಲ್ಲಿರುವ ದ್ವಾರವನ್ನು ಮುಳ್ಳ ಅಗಸಿ ಎಂದು ಕರೆಯುತ್ತಾರೆ. ಸೂರ್ಯನು ಮಾಡುದಿಕ್ಕನ್ನು ಮೂಡಲದಿಕ್ಕಿ ಎಂದು ಕರೆಯುತ್ತಾರೆ. ಆದರೆ ಗ್ರಾಮಸ್ಥರು ಅದನ್ನು ಮುಳ್ಳ ಅಗಸಿ ಎಂದು ಕರುಯುವ ರೂಡಿಯಾಗಿದೆ. ಈ ದ್ವಾರವು ೨೦ ಅಡಿ ಅಗಲ ೧೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ ದ್ವಾರದ ರಚನೆ ಮತ್ತು ಅದರ ಕೊತ್ತಳಗಳ ರಚನೆಯಲ್ಲಿ ಕಾಲಮಾನದ ಅಂತರ ಕಂಡು ಬರುತ್ತದೆ. ಮುಂಭಾಗದಲ್ಲಿ ಒರಟುಕಟ್ಟನಲ್ಲಿ ನಿರ್ಮಿಸಿದ ಕೊತ್ತಳಗಳಿವೆ. ಆದರೆ ಪ್ರಸ್ತುತ ಒಂದು ಕೊತ್ತಳವು ಉಳಿದ್ದಿದ್ದೂ ಅದರ ಮತ್ತೊಂದು ಕೊತ್ತಳ ಅವನತಿ ಹೊಂದಿದೆ.

ವೆಂಕಟಪುರ ದಿಡ್ಡಿಯು ಆಗ್ನೇಯ ದಿಕ್ಕಿನ ಸಮೀಪದಲ್ಲಿದೆ. ಗ್ರಾದ ಹೊರವಲಯದಲ್ಲಿ ನಿರ್ಮಿಸಿರುವ ಈ ದ್ವಾರಕ್ಕೆ ವಿಶೇಷ ರಕ್ಷಣೆ ವ್ಯವಸ್ಥೆ ಕಲ್ಪಿಸಿಕೊಡಲಾಗಿದೆ. ಏಕೆಂದರೆ ಇದರ ಮುಂಭಾದಲ್ಲಿ ಎತ್ತರವಾದ ಗುಡ್ಡ ಪ್ರದೇಶವಿದೆ. ಆಕ್ರಮಣಕಾರರು ಇಲ್ಲಿಯ ಬೆಟ್ಟಗಳ ಹಿಂಭಾಗದಲ್ಲಿ ಒಂದು ಅಲ್ಲಿರುವ ನಿಶಾನಿಮೊರಡಿಯನ್ನು ವಶಪಡಿಸಿಕೊಂಡು ಅಲ್ಲಿದ ನೇರವಾಗಿ ವೆಂಕಟಾಪುರ ದಿಡ್ಡಿಯ ದ್ವಾರವನ್ನು ದ್ವಂಶಗೊಳಿಸುತ್ತಿದ್ದರು. ಆದ್ದರಿಂದ ಈ ದ್ವರಕ್ಕೆ ಹೆಚ್ಚಿನ ರಕ್ಷಣೆಯನ್ನು ಒದಗಿಸಲಾಗಿತ್ತು. ಇಲ್ಲಿ ರಕ್ಷಣೆಗಾಗಿ ಸರ್ನೌಬತ್ತು ಹಾಗೂ ಸರಹವಾಲ್ದಾರರನ್ನು ನೇಮಿಸಿ ಅವರ ಕೈಕೆಗಳಗೆ ೬೦೦ ಬೇಡ ಸೈನಿಕರನ್ನು ನೀಡಲಾಯಿತು. ದ್ವಾರದ ಪಶ್ಚಿಮ ದಿಕ್ಕಿನಲ್ಲಿ ಇರುವ ಗುಡ್ಡಗಳನ್ನು ಹುಲಕಲ್ಲು ಗುಡ್ಡ ಲಂಬವಡಿ ಎಂದು ಕರೆಯುತ್ತಾರೆ. ಇವುಗಳನ್ನು ತೋಪುಗಳ ಸಹಾಯದಿಂದ ರಕ್ಷಣೆ ಮಾಡಲಾಗುತ್ತಿತ್ತು ಸುರಪುರ ತಾಲೂಕಿನ

ಶೆಳ್ಳಿಗಿಯ ಸಮೀಪದಲ್ಲಿ ಇರುವ ಕೃಷ್ಣ ನದಿಯವರೆಗೆ ಈ ಕಾವಲು ಪಡೆಯು ರಕ್ಷಣೆಯನ್ನು ಒದಗಿಸುತ್ತಿತ್ತು. ಈ ದ್ವಾರದ ಮತ್ತೊಂದು ಬದಿಯಲ್ಲಿ ಒಂದು ತೋಪುನಿಲ್ಲಿಸಲಾಯಿತು.

ಶಿಬಾರಬಂಡಿಯಲ್ಲಿ ರಾಮಬಾಣ ಗುಡಿಯಲ್ಲಿ ಸುಮಾರು ೨೦೦ ಸಂಖ್ಯೆಯ ಕಾವಲುಗಾರರಿದ್ದರು, ಇವರನ್ನು ರಾಮಬಾಣದವರೆಂದು ಹಾಗೂ ಬಾಳಸಂತೋಷರು ಎಂದು ಕರೆಯುತ್ತಾರೆ. ಇವರು ಗುಪ್ತಚರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇಡಿ ಸುರಪುರದ ಸೀಮಾರೇಖೆಯಲ್ಲಿ ಸಂಚರಿಸಿ ದಂಡೆ ಮತ್ತು ಆಕ್ರಮವಾದ ವಿಷಯಗಳನ್ನು ನಾಯಕರಿಗೆ ತಿಳಿಸುತ್ತಿದ್ದರು. ಸುರಪುರದ ಇತಿಹಾಸದಲ್ಲಿ ಇವರು ಮಹತ್ವದ ಪಾತ್ರವನ್ನು ವಹಿಸುತ್ತಾರೆ.

ಕಪಲಿಬೆಂಟ ಅಗಸಿಯ ಕುರಿತು ಸ್ಥಳಿಯ ವಿದ್ವಾಂಶರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೆ ಈ ದ್ವಾರವು ಪಶ್ಚಿಮ ಭಾದ ಕೋಟೆ ಗೋಡೆಯಲ್ಲಿ ಪಶ್ಚಿಮಕ್ಕೆ ಮುಖಮಾಡಿ ನಿರ್ಮಿಸಲಾಗಿದೆ. ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಿರುವ ಈ ದ್ವಾರವು ಮೊದಲು ಚೌಕಟ್ಟನಿಂದ ಕೂಡಿದ್ದು , ಅದರ ಕೇಂದ್ರದಲ್ಲಿ ಕಮಾನಿನ ಆಕಾರದಲ್ಲಿದೆ. ದ್ವಾರದ ರಚನೆಗೆ ಗಚ್ಚು ಬಳಸಿರುವುದು ಕಂಡು ಬರುತ್ತದೆ. ಇದರ ಮೇಲ್ಭಾಗದಲ್ಲಿ ಅರ್ಧ ವೃತ್ತಕಾರದ ಚಿಕ್ಕ ಚಿಕ್ಕ ತೆನೆಗಳಿವೆ. ೧೫ ಅಡಿ ಎತ್ತರ ೧೦ ಅಡಿ ಅಗಲವಾಗಿರುವ ಈ ದ್ವಾರದ ಒಳಭಾಗದಲ್ಲಿ ಎರಡು ಬದಿಯಲ್ಲಿ ಮೂರು ಅಂಕಣಗಳ ಸೈನಿಕರ ವಿಶ್ರಾಂತಿ ನಿಲಯಗಳಿವೆ. ಇದರ ಹಿಂಭಾಗದಲ್ಲಿ ಕಾವಲು ಗೋಪುರಗಳ ಮೇಲೆ ಹತ್ತಲು ಮೆಟ್ಟಲುಗಳಿವೆ. ಪ್ರಸ್ತುತ ಈ ದ್ವಾರದ ಹೆಚ್ಚಿನ ಭಾಗವು ನಾಶಹೊಂದಿದ್ದು ಸಂಪೂರ್ಣವಾಗಿ ಗಿಡ ಗಂಟಿಗಳಿಂದ ಆವರಿಸಿಕೊಂಡಿದೆ.

ಸಿದ್ದಾಪೂರ ಅಗಸಿಯು ಕೋಟೆಯ ವಾಯುವ್ಯ ಭಾಗದ ವಾಯುವ್ಯ ದಿಕ್ಕಿಗೆ ಮುಖಮಾಡಿ ನಿರ್ಮಿಸಲಾಗಿದೆ. ಇದು ಕುದುರೆ ಗುಡ್ಡ ಮತ್ತು ಸಿದ್ದಾಪೂರ ಬೆಟ್ಟಗಳಿಗೆ ಆವರಿಸಿಕೊಂಡಂತೆವ, ಸುರಪುರ, ಕೆಂಭಾವಿಯ ಮಾರ್ಗದಲ್ಲಿ ನಿರ್ಮಿಸಲಾಗಿದೆ. ಇದರ ಉತ್ತರ ಭಾಗದ ರಚನೆಯ ಸಂಪೂರ್ಣವಾಗಿ ನೆಲಸಮವಾಗಿದ್ದು, ದಕ್ಷಿಣ ಭಾಗದ ರಚನೆ ಮಾತ್ರ ಉಳಿದುಕೊಂಡಿದೆ. ಇದರಿಂದ ದ್ವಾರದ ಬಗೆಗೆ ಸ್ಪಷ್ಟವಾಗಿ ಹೇಳುವುದು ಕಷ್ಟಕರವಾಗಿದೆ. ದ್ವಾರದ ಮುಂಭಾಗದಲ್ಲಿ ಹನುಮಾನ ದೇವಸ್ಥಾನವಿದೆ. ದ್ವಾರದ ರಕ್ಷಣೆಗಾಗಿ ಅತ್ಯಂತ ಬಲಶಾಲಿಯಾದ ಕಾಲುಕಾರರ ಪಡೆಯನ್ನು ಇಲ್ಲಿ ನೇಮಿಸಲಾಗುತ್ತಿರುವಂತೆ ಕಂಡು ಬರುತ್ತದೆ. ರಂಗಂಪೇಟೆಯ ಅಗಸಿಯು ಸುರಪುರದ ಉತ್ತರ ಭಾಗದಲ್ಲಿ ಬರುವ ಎರಡು ಕಣಿವೆಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಇದರ ರಕ್ಷಣೆಗಾಗಿ ಸು.೬೦೦ ಜನ ಸೈನ್ಯವನ್ನು ಹೊಂದಿರುವ ಒಂದು ವಿಶೇಷ ಕಾವಲು ಪಡೆಯನ್ನು ಇಲ್ಲಿ ನೇಮಿಸಲಾಗಿತ್ತು.

ಸುರಪುರದ ಹೊರವಲಯದಲ್ಲಿ ಸುಮಾರು ೮ ರಿಂದ ೧೦ ಕೀ.ಮಿ ಅಂತರದಲ್ಲಿ ಕೆಲವು ಕಿಲ್ಲೆಗಳನ್ನು ರಚಿಸಿ, ಅಲ್ಲಿ ವಿಶೇಷ ಕಾವಲು ಪಡೆಯನನು ಮತ್ತು ಮದ್ದು ಗುಂಡುಗಳ ಸಂಗ್ರಹ ಮಾಡಲಾಗುತ್ತಿತ್ತು. ಆಕ್ರಮಣಕಾರರು ಸುರಪುರವನ್ನು ಗೆಲ್ಲುವ ಪೂರ್ವದಲ್ಲಿ ಸುತ್ತಲಿನ ಸ್ಥಳಗಳನ್ನು

[illegible]

ವಶಪಡಿಸಿಕೊಂಡು ನಂತರ ಸುರಪುರ ಕೋಟೆಯನ್ನು ಮುತ್ತಬೇಕು. ಆ ರೀತಿಯಿಂದ ಈ ಕೋಟೆಯ ಎಲ್ಲಾ ಭಾಗಗಳಲ್ಲಿ ಬಲಾಢ್ಯವಾದ ಸೈನಿಕ ಪಡೆಯನ್ನು ಇಡಲಾಗುತ್ತಿತ್ತು.

ಗ್ರಾಮದ ಕೇಂದ್ರಭಾಗದಲ್ಲಿ ಇರುವ ಒಳಕೋಟೆಯು ೩೫೦ ಮೀ ಉದ್ದ ೨೫೦ ಮೀ ಅಗಲವಾಗಿದೆ. ಆಯತಾಕಾರದಲ್ಲಿ ರಚನೆ ಗೊಂಡಿರುವ ಈ ಕೋಟೆಯು ೨೦ ಅಡಿ ಎತ್ತರದ ೮ ರಿಂದ ೬ ಅಡಿ ದಪ್ಪವಾಗಿದೆ. ಕೋಟೆಯ ಹೊರಗೋಡೆಯಲ್ಲಿ ಹೊರಭಾಗಕ್ಕೆ ಚಾಟಿಕೊಂಡಿರುವ ಕಿಟಕಿಗಳನ್ನು ನಿರ್ಮಿಸಲಾಗಿದೆ. ಸಮತಟವಾಇ ಇರುವ ಇದರ ಗೋಡೆಯ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಕಲ್ಲುಗಳನ್ನು ಹಾಗೂ ಗಾರೆಯನ್ನು ಬಳಸಲಾಗಿದೆ.

ಒಳಕೋಟೆಯ ಕೇಂದ್ರದಲ್ಲಿ ಪೂರ್ವದಿಕ್ಕಿಗೆ ಮುಖ ಮಾಡಿಕೊಂಡಿರುವ ಪ್ರವೇಶ ದ್ವಾರವಿದೆ. ೧೦ ಅಡಿ ಅಗಲ ೨೦ ಅಡಿ ಎತ್ತರವಾಗಿರುವ ಈ ದ್ವಾರದ ಉತ್ತರಗಂಗದ ಮೇಲೆ ನಾಯಕ ರಾಜಲಾಂಛನವಾದ ಎರಡು ಮೀನುಗಳ ಚಿತ್ರ ಹಾಗೂ ಎರಡು ಬದಿಯಲ್ಲಿ ಸೂರ್ಯ ಚಂದ್ರರ ಚಿತ್ರಗಳಿವೆ. ಈ ದ್ವಾರಕ್ಕೆ ಕಟ್ಟಿಗೆಯ ಕಪಾಡುಗಳಿವೆ. ಈ ಕೋಟೆಯ ಒಳಭಾಗದಲ್ಲಿ ಹಲವು ಬಗೆಯ ರಕ್ಷಣಾ ಸಂಬಂದಿ ಕಟ್ಟಡಗಳಿವೆ. ಅವುಗಳಲ್ಲಿ ಪ್ರಮುಖ ವಾದವುಗಳೆಂದರೆ ಹಳೆಯ ದರ್ಬಾರ ಮತ್ತು ನಯಾದರ್ಬಾರ ಎಂದು ಕರೆಯುವ ಅರಮನೆಗಳು. ನಾಲ್ಕು ಅಂತಸ್ತನಿಂದ ಕೂಡಿರುವ ಹಳೆಯ ಅರಮನೆಯು ಅನೇಕ ಕೊಠಡಿಗಳು, ಸಭಾಭವನ ಹಾಗೂ ಇತರ ಕಟ್ಟಡಗಳನನು ಹೊಂದಿದೆ. ಕಟ್ಟಿಗೆಯಿಂದ ನಿರ್ಮಿಸಿರುವ ಇದರ ದ್ವಾರಗಳು ಕಂಬಗಳು ಹಾಗೂ ಇತರ ಭಾಗಗಳು ಅತ್ಯಂತ ಕಲಾತ್ಮಕವಾಗಿವೆ.

ಒಳಕೋಟೆಯ ದಕ್ಷಣಭಾದಲ್ಲಿರುವ ಅರಮನೆಯನ್ನು ನಯಾದರ್ಬಾರ ಎಂದು ಕರೆಯುತ್ತಾರೆ. ಇದು ೧೯ ನೇಯ ಶತಮಾನದಲ್ಲಿ ಮೆಡೊಸ್ ಟೇಲರ್ನ ನೇತೃತ್ವದಲ್ಲಿ ನಿರ್ಮಿಸಲಾಯಿತು. ತನ್ನ ಆತ್ಮ ಚರಿತ್ರೆಯಲ್ಲಿ ಇದರ ದಿನ ನಿತ್ಯದ ಖರ್ಚುವೆಚ್ಚಗಳ ಲೆಕ್ಕ ಪತ್ರವನ್ನು ಬರೆದಿದ್ದಾನೆ. (೧೯೨೦). ಈ ಅರಮನೆಯು ಆಯತಾಕಾರದಲ್ಲಿ ನಿರ್ಮಿಸಿದ್ದೂ ಇದರ ಒಳಭಾಗದಲ್ಲಿ ದೊಡ್ಡ ದೊಡ್ಡ ಸಭಾಭವನಗಳು, ಕೊಠಡಿಗಳ ಮೂರು ಅಂತಸ್ತಿನನಲ್ಲಿ ನಿರ್ಮಿಸಲಾಗಿದೆ. ಅತ್ಯಂತ ರಕ್ಷಣಾತ್ಮಕವಾಗಿ ನಿರ್ಮಿಸಿರುವ. ಈ ಅರಮನೆಯ ಗುಲಬರ್ಗಾ ಜಿಲ್ಲೆಯಲ್ಲಿ ಆಳ್ವಿಕೆಮಾಡಿರುವ ಅರಸರ ಕೊನೆಯ ಅರಮನೆಯಾಗಿದೆ.

ಸುರಪುರದ ಒಳಕೋಟೆಯ ಪಶ್ಚಿಮಕ್ಕೆ ವೇಣುಗೋಪಾಲಸ್ವಾಮಿಯನ್ನು ತಮ್ಮ ಆರಾಧ್ಯದೈವವೆಂದು ಅರಮನೆಯ ಒಳಗಡೆ ದೇವಾಲಯವನ್ನು ನಿರ್ಮಿಸಿದರು. ಇದು ಬಹರಿ ಪಿಡ್ಡ ನಾಯಕನು ಕ್ರೀ.ಶ. ೧೭೭೯ರಲ್ಲಿ ನಿರ್ಮಿಸಿದ. ಮುಂದೆ ಬಂದ ರಾಮಪ್ಪನಾಯಕ, ಮೂರನೆಯ ಮಾಪನಾಯಕ ಮುಂತಾದವರು ದೇವಾಲಯವನ್ನು ವಿಸ್ತರಿಸಿದರು. ಇದರಲ್ಲಿ ಗರ್ಭಗೃಹ, ಅಂತರಾಳ, ಆರಾಧನಾ ಮಂಟಪ, ಸಭಾ ಮಂಟಪ ಮತ್ತು ೪೬ ಕಂಬಗಳ ಮುಖಮಂಟಪವನ್ನು ಹೊಂದಿದೆ. ಸುರಪುರ

ನಾಯಕರು ತಾವು ನಿರ್ಮಿಸಿರುವ ಪ್ರತಿಯೊಂದು ಕೋಟೆಯಲ್ಲಿ ಈ ದೇವಾಲಯವನ್ನು ನಿರ್ಮಿಸಿದರು ಇದರಿಂದ ತಾವು ಕೃಷ್ಣನ ವೇಣುಗೋಪಾಲ ನಿಂದ ರಕ್ಷಣೆ ಪಡೆದುಕೊಂಡಿರುವುದು ಕಂಡು ಬರುತ್ತದೆ.

೧೯. ವಾಗಣಗೇರಿ ಕೋಟೆ:

ಸುರಪುರ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ಏಳು ಕಿ.ಮೀ. ದೂರದಲ್ಲಿರುವ ವಾಗಣಗೇರಿಯು ಐತಿಹಾಸಿಕ ಮಹತ್ವದ ಸ್ಥಳವಾಗಿದೆ. ವಾಗಿನ್ ಗಿರಿ ಎನ್ನುವ ಹೆಸರು ವಾಕ+ಇನ್+ಗಿರಿ ಎಂಬ ಪದಗಳಲ್ಲಿ ವಿಂಗಡಿಸಲಾಗಿದೆ. ಇದರ ಅರ್ಥ "ಬಹ್ಮಗಿರಿ" ಎಂದಾಗುತ್ತದೆ. ಈಗಲೂ ಗ್ರಾಮದ ದೇವರಶಟ್ಟಿಯವರ ಹೊಲದಲ್ಲಿ ಬ್ರಹ್ಮಗುಡಿ ಇದೆ. ಸುರಪುರದ ನಾಯಕರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಈ ಪ್ರದೇಶವು ಭದ್ರವಾದ ಕೋಟೆ ಮತ್ತು ಇತರ ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಳನ್ನು ಹೊಂದಿದೆ. ಗಿಡ್ಡಿ ಪಿಡ್ಡ ನಾಯಕನು (೧೬೩೯ ರಿಂದ ೧೬೬೬) ತನ್ನ ಅಣ್ಣನಾದ ಲಿಂಗ ನಾಯಕನಿಂದ ಬೇರೆಯಾಗಿ ತನ್ನ ಹೆಂಡತಿಯರಾದ ಅವ್ವಮ್ಮಾ ನಾಗತಿ ಮತ್ತು ಹಮವ್ವ ನಾಗತಿಯರೊಂದಿಗೆ ವೀರಗೊಟ್ಟಕ್ಕೆ ಬಂದನು. ಅಲ್ಲಿಂದ ಪರಿವಾರ ಸಮೇತವಾಗಿ ಜಾಲಿ ಬೆಂಚಿನಲ್ಲಿ ಬಂದು ನೆಲೆಸಿದನು. ಆಗ ಪಿಡ್ಡನಾಯಕನೊಂದಿಗೆ ೩೭ ಪ್ರಮುಖರು ಮತ್ತು ದೇವಪುರದ ಮಿರಾಸಿದಾರರು, ೬ ಸಾವಿರ ಬೇಡರ ಪಡೆ, ೩ ಸಾವಿರ ಗೊಲ್ಲರ ಪಡೆ ಇತ್ತು. ಈ ಸೈನ್ಯದೊಂದಿಗೆ 'ಇಜೇರಿಯುದ್ಧ', 'ಕನ್ನೆಕೊಳ್ಳುರುಯುದ್ಧ', 'ಮಾಲಗತ್ತಿಯುದ್ದಗಳನ್ನು' ಕೈಗೊಂಡು ಮತ್ತೆ ಪುಂಡನ ಕಲ್ಲಿನಲ್ಲಿ ಬಂದು ನೆಲೆಸಿದ. ಬೈಚಬಾಳ ಸಮತಿನ 'ಕರ್ಸಿಹಳ್ಳಿಗೆ' ವಾಗಿಣಗಿರಿ ಎಂದು ಹೆಸರಿಸಿ, ಅಲ್ಲಿ ಕೋಟೆಯನ್ನು ನಿರ್ಮಿಸಿದ. ಈ ಕೋಟೆಯ ನಿರ್ಮಾಣದೊಂದಿಗೆ ಪಿಡ್ಡ ನಾಯಕನಿಗೆ ರಾಜಕೀಯ ಸ್ಥಿರತೆ ಲಭ್ಯವಾಯಿತು. ಇಲ್ಲಿಂದ ಪಿಡ್ಡನಾಯಕನು ಹಲವು ದಂಡ ಯಾತ್ರೆಗಳನ್ನು ಆಯೋಜಿಸಿ ತನ್ನ ರಾಜ್ಯ ವಿಸ್ತರಿಸಿದ. ಮುಂದೆ ಬಂದ ನಾಯಕರು ಈ ಕೋಟೆಯನ್ನು ಬಲಪಡಿಸಿ, ಅಲ್ಲಿ ಅವಶ್ಯವಿರುವ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಕೋಟೆ, ಕಾವಲುಗೋಪುರ ನೀರಿನ ತಂಗು ದಾಣಗಳು, ದೇವಾಲಯ, ಸೈನಿಕರ ವಸತಿ ನಿಲಯ ಮುಂತಾದವುಗಳನ್ನು ನಿರ್ಮಿಸಿದರು.

ಕೈಫಿಯತ್ತುಗಳಲ್ಲಿ ಉಲ್ಲೇಖವಾಗಿರುವಂತೆ ಬೇಡರ ನಾಯಕ ಮೊದಲನೆಯ ಪಿಡ್ಡನಾಯಕನು ಒಂದು ಸಣ್ಣ ಕೋಟೆಯನ್ನು ನಿರ್ಮಿಸಿದ. ಬಿಜಾಪುರ ಆದಿಲ್ ಶಾಹಿಗಳು ಔರಂಗಜೇಬನಿಂದ ಸೋತು ತಮ್ಮ ಹಲವು ಜಾಗಿರುದಾರರನ್ನು ಕಳೆದುಕೊಂಡರು. ಅವರಲ್ಲಿ ಸುರಪುರದ ಬೇಡರು ಒಬ್ಬರು. ಆದರೆ ಪಿಡ್ಡ ನಾಯಕನು ಔರಂಗಜೇಬನ ಆದಿನಕ್ಕೆ ಹೋಗದೆ ಕ್ರಿ.ಶ. ೧೬೯೧ರಲ್ಲಿ ಹೋರಾಟ ಆರಂಭಿಸಿ ವಿಫಲರಾದರು. ವಾಗಣಗೇರಿಯ ಕೋಟೆಯ ಮೇಲೆ ಮೊಗಲರು ನಿರಂತರವಾಗಿ ಕ್ರಿ.ಶ. ೧೬೬೧, ೧೬೯೨, ೧೬೯೪ರಲ್ಲಿ ದಾಳಿಗೈದರು ಆದರೆ ಕೋಟೆಯನ್ನು ವಶಪಡಿಸಿಕೊಳ್ಳಲಾಗಲಿಲ್ಲ. ಆದ್ದರಿಂದ ಕ್ರಿ.ಶ. ೧೭೦೫ ಔರಂಗಜೇಬನು ತನ್ನ ನೇತೃತ್ವದಲ್ಲಿ ಬಲಾಡ್ಯ ಸೈನ್ಯದೊಂದಿಗೆ ದಾಳಿಗೈದು ಈ ಕೋಟೆಯನ್ನು

ವಶಪಡಿಸಿಕೊಂಡನು. ಕೆಲವು ವರ್ಷಗಳಲ್ಲಿ ಇದನ್ನು ಪುನರ್‌ನಿರ್ಮಾಣಗೊಳಿಸಲು ಆರಂಭಿಸಿದ.೧ ಕೋಟೆಯ ಪುನರ್‌ನಿರ್ಮಾಣದ ನಂತರ ಇದಕ್ಕೆ "ರೆಹಮಾನ್‌ಭಾಷಖೇರಾ" ಎಂದು ಹೆಸರಿಸಿದ. ವಾಗಣಗೇರಿ ಕೋಟೆಯ ಪುನರ್‌ನಿರ್ಮಾಣದ ನಂತರ ಔರಂಗಜೇಬನು ದೇವಪುರದ ಬಳಿ ಬಿಡಾರು ಹಾಕಿದ. ಇದೇ ಕಾಲಕ್ಕೆ ಅನಾರೋಗ್ಯಕ್ಕೆ ಒಳಗಾಗಿ, ಗುಣಮುಖನಾಗದೆ, ಔರಂಗಬಾದಕ್ಕೆ ಹೊರಟು ಮಾರ್ಗದಲ್ಲಿ ಕ್ರಿ.ಶ. ೧೭೦೭ರಲ್ಲಿ ನಿಧಿನ ಹೊಂದಿದ. ಈ ರೀತಿ ವಾಗಣಗೇರಿಯ ಕೋಟೆ ಕಾಳಗವು ಔರಂಗಜೇಬನ ಕೊನೆಯ ಕದನವಾಗಿದೆ. ಆದ್ದರಿಂದ ಈ ಪ್ರದೇಶಕ್ಕೆ ಮೊಗಲ್ ಇತಿಹಾಸದಲ್ಲಿ ಭದ್ರ ಸ್ಥಾನವನ್ನು ಹೊಂದಿದೆ. ಮೊಗಲ್ ಆಧಿನದಲ್ಲಿರುವ ಈ ಕೋಟೆಯನ್ನು ೧೭೧೧ರಲ್ಲಿ ಪುನ ಬೇಡರ ನಾಯಕ ಎರಡನೆಯ ಪಿಡ್ಡನಾಯಕನು ವಶಪಡಿಸಿಕೊಂಡನು.

ವಾಗಣಗೇರಿಯ ಕೋಟೆಯು ಎರಡು ಹಂತದಲ್ಲಿ ನಿರ್ಮಾಣಗೊಂಡಿರುವುದರಿಂದ ಇದನ್ನು "ಪಡುಕೋಟೆ" ಎಂದು ಕರೆಯುತ್ತಾರೆ. ನೆಲದಿಂದ ೮೦ ಮೀಟರ ಎತ್ತರದ ಮೇಲೆ ಇರುವ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ. ಇದರ ಪ್ರವೇಶಕ್ಕೆ ಉತ್ತರ ಭಾಗದಲ್ಲಿ ೧೦೮ ಮೆಟ್ಟಿಲುಗಳಿವೆ. ಪ್ರತಿ ೮ ಮೆಟ್ಟಿಲುಗಳ ನಂತರ ೮ ಅಡಿ ಅಗಲವಾದ ಸ್ಥಳವಿದೆ. ಅದಾದ ನಂತರ ಎರಡನೆಯ ಹಂತದ ಮೆಟ್ಟಿಲುಗಳು ಆರಂಭವಾಗುತ್ತವೆ. ಈ ರೀತಿ ಒಟ್ಟು ೮ ಹಂತದಲ್ಲೀ ಪೂರ್ವ ಮತ್ತು ಉತ್ತರ ಭಾಗಕ್ಕೆ ಮುಖ ಮಾಡಿಕೊಂಡಿರುವ ವಿಶಾಲವಾದ ಮೆಟ್ಟಗಳಿಂದ ಕೋಟೆಗೆ ಪ್ರವೇಶವಿದೆ. ಈ ರೀತಿ ಮೆಟ್ಟಿಲುಗಳು ರಚಿಸಲು ಕಾರಣವೆಂದರೆ ಕುದುರೆಗಳು ಸಹ ಸಹಜವಾಗಿ ಮೇಲೆ ಹತ್ತಬಹುದೆಂದು ನಿರ್ಮಿಸಲಾಗಿದೆ. ಇದನ್ನು ಹೊರತು ಪಡಿಸಿ ಉಳಿದ ಯಾವ ಭಾಗದಿಂದಲೂ ಕೋಟೆಯು ಒಳಗಡೆ ಅಶ್ವಪಡೆಯನ್ನು ಸಾಗಿಸಲು ಸಾಧ್ಯವಿಲ್ಲ.

ಆಯತಾಕಾರದ ಈ ಕೋಟೆಯು ೩೫೦ ಮೀ. ಉದ್ದ ೨೫೦ ಮೀ. ಅಗಲವಾಗಿದೆ. ಇದರ ದಕ್ಷಿಣ ಭಾಗದ ಕೆಳಹಂತದಲ್ಲಿ ಬರುವ ಪ್ರದೇಶವನ್ನು ಆವರಿಸಿಕೊಂಡಂತೆ ಮತ್ತೊಂದು ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಉತ್ತರ ಭಾಗದಲ್ಲಿ ಬರುವ ಕೋಟೆಯ ಒಳಗಡೆ ಹಲವು ಬಗೆಯ ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಳಿವೆ. ಅವುಗಳಲ್ಲಿ ಪ್ರಮುಖವಾದುದು, ನೀರಿನ ಸಂಗ್ರಹ, ವೇಣು ಗೋಪಾಲ ಸ್ವಾಮಿ ದೇವಾಲಯ, ಕಾವಲುಗೋಪುರ ಮತ್ತು ಸೈನಿಕರ ನಿವಾಸ ಮುಂತಾದವುಗಳು. ಈ ಕೋಟೆಯು ಸ್ಥಳಿಯವಾಗಿ ಲಭ್ಯವಾಗುವ ಕೆಂಪು ವರ್ಣದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಕೋಟೆ ಗೋಡೆಯು ೨೦ ರಿಂದ ೨೫ ಅಡಿ ಎತ್ತರ ಹಾಗೂ ನಾಲ್ಕು ಅಡಿ ಅಗಲವಾಗಿದೆ. ಈ ಕೋಟೆಯ ಗೋಡೆಯು ಚೀನಾ ಮಹಾಗೋಡೆಯಂತೆ ಕೆಳಹಂತದಿಂದ ಎತ್ತರವಾದ ಪ್ರದೇಶದವರೆಗೆ ಹಾಗೆ ಮುಂದುವರೆಯುತ್ತದೆ. ಕಾವಲುಗಾರರು ಇಡಿ ಕೋಟೆಯನ್ನು ಅದರ ಮೇಲ್ಭಾಗದಿಂದ ಕಾವಲು ಮಾಡಬಹುದಾಗಿದೆ. ನಾಲ್ಕು ಅಡಿ ದಪ್ಪನೆಯ ಗೋಡೆಯಲ್ಲಿ ೨ ಅಡಿಯಲ್ಲಿ ಉತ್ತರದ ಗೋಡೆ ಆದರ

ಮೇಲೆ ೩ ಅಡಿ ಎತ್ತರದ ತೆನೆಗಳನ್ನು ರಚಿಸಲಾಗಿದೆ. ಅದರ ಹಿಂಭಾಗದಿಂದ ಕಾವಲುಗಾರರಿಗೆ ನಡೆದಾಡಲು ಸ್ಥಳಾವಕಾಶವಿದೆ. ಇಡಿ ಕೋಟೆಯ ಸುತ್ತಲು ಮೇಲ್ಭಾಗದಲ್ಲಿ ಇದೆ ವ್ಯವಸ್ಥೆಯನ್ನು ಮಾಡಲಾಗಿದೆ. ಮಾರ್ಗದಲ್ಲಿ ಕೆಲವು ಕಡೆ ಕಾವಲುಗಾರರಿಗೆ ಕೆಳಗೆ ಇಳಿಯಲು ಹಾಗೂ ಮೇಲೆ ಹತ್ತಲು ಮಧ್ಯದಲ್ಲಿ ಮೆಟ್ಟಿಲುಗಳಿವೆ. ಕೋಟೆಯ ಸುತ್ತಲು ಅರ್ಧವೃತ್ತಾಕಾರದ ತೆನೆಗಳು, ವಿವಿಧ ಆಕೃತಿಯ ವೀಕ್ಷಣಾರಂಧ್ರಗಳು, ಅಂಬುಗಿಂಡಿಗಳು ಹಾಗೂ ರಂಧ್ರಗಳಿವೆ. ಇಲ್ಲಿಯ ವೀಕ್ಷಣಾ ರಂಧ್ರಗಳ ವಿಶೇಷತೆ ಎಂದರೆ ಹೊರಗಿನ ಶತ್ರುಗಳ ಚಲನ ವಲನವನ್ನು ಸಂಪೂರ್ಣವಾಗಿ ವೀಕ್ಷಿಸಬಹುದು, ಆದರೆ ಒಳಗಿನ ಕಾವಲುಗಾರರ ಬಗ್ಗೆ ಯಾವುದೆ ಮಾಹಿತಿಯು ಶತ್ರುಗಳಿಗೆ ತಿಳಿಯುವುದಿಲ್ಲ. ಒಂದು ವೀಕ್ಷಣಾ ರಂಧ್ರವು ಮತ್ತೊಂದು ವೀಕ್ಷಣಾ ರಂಧ್ರವನ್ನು ಹೋಲುವುದಿಲ್ಲ. ಒಂದರಲ್ಲಿ ಮೂರು ರಂಧ್ರಗಿದ್ದರೆ, ಮತ್ತೊಂದರಲ್ಲಿ ೬, ೮ ಹಾಗೂ ೧೨ ರಂಧ್ರಗಳಿವೆ. ಈ ರೀತಿ ಬೇರೆ ಬೇರೆ ಶೈಲಿಯ ವೀಕ್ಷಣಾರಂಧ್ರಗಳು ಇರುವುದು ವಾಗಣಗೇರಿ ಕೋಟೆಯ ಒಂದು ವಿಶೇಷತೆಯಾಗಿದೆ. ಆಯತಾಕಾರದ ಕೋಟೆಯಲ್ಲಿ ವೃತ್ತಾಕಾರದ ಹಾಗೂ ಅರ್ಧವೃತ್ತಾಕಾರದ ಒಟ್ಟು ೯ ಬುರುಜುಗಳಿವೆ. ಇವುಗಳ ಮೇಲೆ ಯಾವುದೇ ತೋಪುಗಳು ಇರುವುದಿಲ್ಲ.

೨೦. ವನದುರ್ಗ ಕೋಟೆ :

ವನದುರ್ಗವು ಶಹಾಪೂರದಿಂದ ನೈರುತ್ಯಕ್ಕೆ ೨೪ ಕಿ.ಮೀ. ದೂರದಲ್ಲಿದ್ದೂ ಇದು ಶಹಪೂರ ಮತ್ತು ಸುರಪುರಗಳ ಕೇಂದ್ರ ಭಾಗದಲ್ಲಿದೆ. ಚಾರಿತ್ರಿಕ ಹಿನ್ನೆಲೆ ಹೊಂದಿರುವ ಈ ಗ್ರಾಮದ ಪಶ್ಚಿಮ ಭಾಗದಲ್ಲಿ ಸುರಪುರದ ನಾಯಕರ ಕಾಲದಲ್ಲಿ ನಿರ್ಮಿಸಿರುವ ಕೋಟೆಯಿದೆ. ಪ್ರಾರಂಭದಲ್ಲಿ ಕೋಟೆಯ ಹಾಗೂ ಗ್ರಾಮದ ಸುತ್ತಲು ಗಿಡಮರಗಳಿರುವುದರಿಂದ ಇದನ್ನು 'ವನದುರ್ಗ'ವೆಂದು ಕರೆಯಲಾಗಿದೆ. ಕೋಟೆಯ ದ್ವಾರದ ಎರಡು ಬದಿಯಲ್ಲಿ ಇರುವ ಸಂಸ್ಕೃತ ಶಾಸನವು (ದೇವನಾಗರಿಲೀಪಿ) ಈ ಕೋಟೆಯ ನಿರ್ಮಾಣವನ್ನು ಕುರಿತು ಉಲ್ಲೇಖಿಸುತ್ತದೆ. ಶಕೆ ೧೭೨೯ರಲ್ಲಿ (ಕ್ರಿ.ಶ. ೧೮೦೬) ಕ್ಷೇತ್ರ ಪಾಲನಾದ ವೇಣುಗೋಪಾಲಸ್ವಾಮಿಯ ವರಪುತ್ರನಾದ ಬಹರಿಬಹಾದ್ದೂರ ರಾಜಾ ಪಿಡ್ಡನಾಯಕನು ತನ್ನ ರಾಣಿ ವೆಂಕಮ್ಮಾಂಬಳ ಬೇಡಿಕೆಯಂತೆ ಕ್ರಿ.ಶ. ೧೮೦೬ "ವನದುರ್ಗ"ವನ್ನು ನಿರ್ಮಿಸಲು ಆರಂಭಿಸಿದನೆಂದು ಇದರಲ್ಲಿ ಉಲ್ಲೇಖಿಸಲಾಗಿದೆ.

ಗ್ರಾಮದ ನೈರುತ್ಯ ಭಾಗದಲ್ಲಿ ೨೦೦ ಮೀಟರಗಳ ಅಂತರದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ಕೋಟೆಯ ಪಶ್ಚಿಮ ಭಾಗದಲ್ಲಿ ಒಂದು ಸಣ್ಣ ಹಳ್ಳ ಹರಿಯುತ್ತದೆ. ಇದರಿಂದ ಹರಿದು ಬರುವ ನೀರನ್ನು ಕಂದಕಕ್ಕೆ ಬಳಸಲಾಗುತ್ತದೆ. ಈ ಕೋಟೆಯು ಚೌಕಾಕಾರದಲಿದ್ದು. ಪೂರ್ವದಿಂದ ಪಶ್ಚಿಮಕ್ಕೆ ೨೩೦ ಮೀಟರ ಉದ್ದ ಉತ್ತರದಿಂದ ದಕ್ಷಿಣಕ್ಕೆ ೨೨೦ ಮೀಟರ ವಿಸ್ತಾರವಾಗಿದೆ. ಇದರ ಕೇಂದ್ರ ಭಾಗದಲ್ಲಿ ಯಾವುದೇ

ಕಟ್ಟಡಗಳು ಇರುವುದಿಲ್ಲ ಆದರ್ದೆ ಎರಡು ಬದಿಯಲ್ಲಿ ಹಲವು ಬಗೆಯ ನಾಗರಿಕ ಮತ್ತು ಸೈನಿಕ ಕಟ್ಟಡದ ಅವಶೇಷಗಳಿವೆ.

ಕೋಟೆಯ ಮೊದಲನೆಯ ಪ್ರವೇಶ ದ್ವಾರವು ಎರಡು ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ೨೫ ಅಡಿ ಎತ್ತರದ ಈ ಕೊತ್ತಳಗಳು ವೃತ್ತಾಕಾರದಲ್ಲಿವೆ. ಪ್ರವೇಶದ್ವಾರವು ಹೊರಭಾಗದಲ್ಲಿ ಕಮಾನಿನ ಆಕೃತಿಯನ್ನು ಹೊಂದಿದ್ದು, ಕೇಂದ್ರದಲ್ಲಿ ಆಯತಾಕಾರದಲ್ಲಿ ಕಲ್ಲಿನ ಕಂಬಗಳಿಂದ ಕೂಡಿರುವ ಪ್ರವೇಶವಿದೆ. ಈ ದ್ವಾರದ ಮುಂಭಾಗದಲ್ಲಿ ವಿಶಾಲವಾದ ಅರ್ಧವೃತ್ತಾಕಾರದ ೨೦ ಅಡಿ ಎತ್ತರದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ದೂರದಿಂದ ವೀಕ್ಷಿಸಿದರೆ ದ್ವಾರವು ಕಂಡು ಬರುವುದಿಲ್ಲ. ಏಕೆಂದರೆ ತಡೆ ಗೋಡೆಯು ಒಂದು ಬದಿಯ ಕೊತ್ತಳದ ತುದಿಯಿದ್ದು ಆರಂಭಿಸಿ ಅರ್ಧವೃತ್ತಾಕಾರದಲ್ಲಿ ಮುಂದು ವರೆದು ಮತ್ತೊಂದು ಕೊತ್ತಳದವರೆಗೆ ಚಾಚಿಕೊಂಡಿರುತ್ತದೆ.

ಇಲ್ಲಿಯ ವಿಶಾಲವಾದ ಸ್ಥಳದಲ್ಲಿ ದ್ವಾರಪಾಲಕರು ಶಸ್ತ್ರಾಸ್ತ್ರಸಮೇತ ಸಿದ್ಧರಾಗಿ ನಿಲ್ಲುತ್ತಿದ್ದರು. ಕೋಟೆಯ ಕಾಳಗದಲ್ಲಿ ಇವರು ಪ್ರಮುಖ ಪಾತ್ರವಹಿಸುತ್ತಾರೆ. ಈ ರೀತಿ ಮೊದಲನೆಯ ಹಂತದಲ್ಲಿ ದ್ವಾರದ ರಕ್ಷಣೆಗಾಗಿ ವಿಶೇಷ ಪರಣಿತಿ ಹೊಂದಿರುವ ಕಾವಲು ಪಡೆ ಇಲ್ಲಿ ಕಾರ್ಯನಿರ್ವಹಿಸುತ್ತಿತ್ತು. ದ್ವಾರದ ಒಳಭಾಗದಲ್ಲಿ ಎರಡು ಬದಿಯಲ್ಲಿ ಮೂರು ಅಂಕಣಗಳ ಕಟ್ಟಡಗಳಿವೆ. ಇವು ಕಾವಲುಗಾರರ ತಂಗುದಾಣಗಳಾಗಿವೆ. ಇದರ ಒಳಭಾಗವು ಸಮತಟಾಗಿದ್ದೂ, ಇಲ್ಲಿಂದ ಎಡಭಾಗದ ಕೋಟೆ ಗೋಡೆಯು ಅರ್ಧವೃತ್ತಾಕಾರದಲ್ಲಿ ಮುಂದುವರೆಯುತ್ತದೆ. ಬಲಭಾಗದ ಗೋಡೆಯು ಎರಡು ಕೊತ್ತಳಗಳನ್ನು ಹೊಂದಿದ್ದು ನಂತರದಲ್ಲಿ ಎರಡನೆಯ ದ್ವಾರವಿದೆ. ಈ ದ್ವಾರದ ಉತ್ತರಂಗದ ಮೇಲೆ ಸೂರ್ಯ, ಚಂದ್ರ ಮತ್ತು ಮೀನಿನ ಉಬ್ಬು ಶಿಲ್ಪಗಳಿವೆ.

ಎರಡನೆಯ ದ್ವಾರವು ಮೊದಲನೆಯ ದ್ವಾರದಂತೆ ಎರಡು ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಕೊತ್ತಳಗಳು ೨೦ ಅಡಿ ಎತ್ತರವಾಗಿದ್ದು ಕೆಳಹಂತದಿಂದ ಮೇಲಿನವರೆಗೂ ಏಕರೂಪದಲ್ಲಿದೆ. ಕೊತ್ತಳ ಮತ್ತು ಕೋಟೆಯ ಗೋಡೆಯು ಎರಡು ಸಮನಾದ ಎತ್ತರದಲ್ಲಿವೆ. ದ್ವಾರದ ರಚನೆಗೆ ನುಣುಪಾಗಿ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಕಲ್ಲುಗಳು ಬಿಳಿ, ಕೆಂಪು ಮತ್ತು ಕಪ್ಪು ವರ್ಣದ ಕಲ್ಲುಗಳಿರುವುದರಿಂದ ಈ ದ್ವಾರವು ಆಕರ್ಷಕವಾಗಿ ಕಂಡು ಬರುತ್ತದೆ. ದ್ವಾರದ ಬಲಬದಿಯಲ್ಲಿ ೨ ಅಡಿ ಅಗಲ ೪ ಅಡಿ ಎತ್ತರದ ಒಂದು ಗುಪ್ತ ದ್ವಾರವಿದೆ. ಇದರ ವಿಶೇಷತೆ ಎಂದರೆ ಇದು 'L' ಆಕಾರದಲ್ಲಿ ಕೋಟೆಯ ಒಳಗಡೆ ಮುಂದುವರೆಯುತ್ತದೆ. ದ್ವಾರದ ಒಳಗಡೆ ೫ ಅಡಿ ಎತ್ತರದ ಮೇಲೆ ಎರಡು ಬದಿಯಲ್ಲಿ ಮೂರು ಅಂಕಣಗಳ ಸೈನಿಕರ ವಿಶ್ರಾಂತಿ ಸ್ಥಳಗಳಿವೆ. ಹೊರಭಾಗದ ಗುಪ್ತದ್ವಾರವು ಈ ಕಟ್ಟೆಯ ಕೆಳಹಂತದಲ್ಲಿದೆ. ಇಲ್ಲಿಂದ ಕೋಟೆಯ ಒಳಗಡೆ ಸಮತಟವಾದ ರಚನೆಯಿದೆ. ಈ ದ್ವಾರದ ಒಳಗಡೆ ಎರಡು ಬದಿಯಲ್ಲಿ ಕೋಟೆ ಗೋಡೆಯ ಮೇಲೆ ಹತ್ತಲು ಮೆಟ್ಟಲುಗಳಿವೆ. ಕೋಟೆಯ

ಹೊರಭಾಗದ ರಚನೆಗೆ ನುಣುಪಾದ ಕಲ್ಲುಗಳನ್ನು ಬಳಸಲಾಗಿದೆ. ಆದರೆ ಒಳಭಾಗದಲ್ಲಿ ಹೆಚ್ಚಿನ ಪ್ರಮಾಣದ ಮಣ್ಣನ್ನು ಬಳಸಲಾಗಿದೆ. ಅದರ ಜೊತೆಯಲ್ಲಿ ಒರಟಾದ ಕಲ್ಲುಗಳನ್ನು ಉಪಯೋಗಿಸಲಾಗಿದೆ.

ವನದುರ್ಗ ಕೋಟೆಯ ಮೂರು ದಿಕ್ಕಿನಲ್ಲಿ ಕೃತಕವಾದ ಕಂದಕವಿದೆ. ಕೋಟೆ ಗೋಡೆಯಿಂದ ೧೫ ರಿಂದ ೨೦ ಅಡಿ ಅಂತರದಲ್ಲಿ ಕಲ್ಲಿನಿಂದ ನಿರ್ಮಿಸಿದ ಕಂದಕವಿದೆ. ಕೆಲವು ಕಡೆಗಳಲ್ಲಿ ನೈಸರ್ಗಿಕವಾಗಿ ಕಲ್ಲಿನ ಬಂಡೆಯನ್ನು ಕೊರೆದು ಕಂದಕವನ್ನಾಗಿ ನಿರ್ಮಿಸಲಾಗಿದೆ. ಕೋಟೆಯ ಪ್ರವೇಶ ದ್ವಾರದ ಕಡೆಗೆ ಹೊರತು ಪಡಿಸಿ ಉಳಿದ ಮೂರು ಕಡೆಯಲ್ಲಿ ಕಂದಕವಿದೆ. ಈ ಕಂದಕವು ಅತ್ಯಂತ ಸುಸ್ಥಿತಿಯಲ್ಲಿದೆ. ಏಕೆಂದರೆ ನೈಸರ್ಗಿಕವಾಗಿರುವ ಕಲ್ಲನ್ನು ಸರಿಯಾದ ಪ್ರಮಾಣದಲ್ಲಿ ಕೊರೆದು ಕಂದಕ ನಿರ್ಮಿಸಲಾಗಿದೆ. ಕೋಟೆ ಗೋಡೆಯು ೨೦ ಅಡಿ ಎತ್ತರ ೪ ಅಡಿ ದಪ್ಪವಾಗಿದೆ. ಇದರ ತಳಭಾಗಕ್ಕಿಂತ ಮೇಲ್ಭಾಗದಲ್ಲಿ ಸ್ವಲ್ಪ ಚಿಕ್ಕದಾಗಿದೆ. ಉಳಿದ ಕೋಟೆಯಂತೆ ಈ ಗೋಡೆಯು ಇಳಿಜಾರು ಆಗಿರುವುದಿಲ್ಲ. ಇದರ ವಿಶೇಷತೆ ಎಂದರೆ ಪ್ರತಿ ಭಾಗದ ಗೋಡೆಯ ಮಧ್ಯದಲ್ಲಿ ಎರಡು ಕೊತ್ತಳಗಳಿವೆ. ಇದೆ ಕೋಟೆಯ ಸುತ್ತಲು ಒಟ್ಟು ೧೨ ಕೊತ್ತಳಗಳಿವೆ. ನಾಲ್ಕು ದಿಕ್ಕಿನಲ್ಲಿರುವ ಕೊತ್ತಳಗಳು ಬೃಹದ್ದಾಕಾರದಲ್ಲಿದ್ದು, ಕೇಂದ್ರದಲ್ಲಿರುವ ಎರಡು ಕೊತ್ತಳಗಳು ಚಿಕ್ಕದಾಗಿದೆ. ಈ ರೀತಿ ಪ್ರತಿಯೊಂದು ಭಾಗದ ಗೋಡೆಯಲ್ಲಿ ಸಮ ಪ್ರಮಾಣದ ಕೊತ್ತಳಗಳನ್ನು ನಿರ್ಮಿಸಲಾಗಿದೆ. ಕೇವಲ ಕೊತ್ತಳದ ಸುತ್ತಲು ತೆನೆಗಳಿದ್ದು ಗೋಡೆಯ ಮೇಲೆ ಸುತ್ತಲು ತೆನೆಗಳಲ್ಲಿ ಹಾಗೂ ತೋಪಿನ ರಚನೆಯು ಇರುವುದಿಲ್ಲ.

ಕೋಟೆಯ ಕೇಂದ್ರ ಭಾಗದಲ್ಲಿರುವ ಕೊತ್ತಳಗಳ ಮೇಲೆ ವಿಶೇಷವಾದ ಸೈನಿಕರ ತಂಗುದಾಣಗಳಿವೆ. ೬ ರಿಂದ ೮ ಚಿಕ್ಕ ಚಿಕ್ಕ ಸೈನಿಕರ ತಾಣಗಳಿವೆ, ಇವುಗಳು ಪರಸ್ಪರ ಒಂದರ ಮುಂದೆ ಒಂದರಂತೆ ನಿರ್ಮಿಸಿ, ಎರಡರ ಮಧ್ಯದಲ್ಲಿ ದಾರಿಯನ್ನು ಬಿಡಲಾಗಿದೆ. ಅಲ್ಲದೆ ಒಂದರಿಂದ ಮತ್ತೊಂದು ಸ್ಥಳಕ್ಕೆ ಸಂಪರ್ಕ ಹೊಂದಲು ವೀಕ್ಷಣಾ ರಂಧ್ರಗಳಿವೆ. ಈ ರೀತಿಯ ಸೈನಿಕರ ತಂಗುದಾಣಗಳು ಜಿಲ್ಲೆಯ ಯಾವ ಕೋಟೆಯಲ್ಲಿ ಕಂಡು ಬರುವದಿಲ್ಲ ಇದು ಇಲ್ಲಿಯ ಒಂದು ವಿಶೇಷತೆಯಾಗಿದೆ. ಪ್ರಸ್ತುತ ಕೋಟೆಯ ಕೆಲವು ಭಾಗ ಅಲ್ಲಲ್ಲಿ ನಾಶ ಹೊಂದುತ್ತಲಿದೆ. ಕೋಟೆಯ ಪಶ್ಚಿಮ ಭಾಗದ ಗೋಡೆಯ ಬಹುಪಾಲು ನಾಶ ಹೊಂದಿದೆ.

ಕೋಟೆಯ ಒಳಗಡೆ ಹಲವು ಬಗೆಯ ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಿವೆ. ಅದರಲ್ಲಿ ಈಶಾನ್ಯಭಾಗದಲ್ಲಿ ಆಂಜನೇಯ ದೇವಾಲಯ ಮತ್ತು ಅದರ ಹಿಂಭಾಗದಲ್ಲಿ ಸೈನಿಕರ ವಾಸದ ಮನೆಗಳಿವೆ. ಈ ಭಾಗದಲ್ಲಿ ಸಂಪೂರ್ಣವಾಗಿ ಜಾಲಿ ಗಿಡಗಳು ಬೆಳೆದಿರುವುದರಿಂದ ಅವುಗಳ ರಚನೆ ಬಗ್ಗೆ ಸರಿಯಾದ ಮಾಹಿತಿ ಲಭ್ಯವಾಗುವುದಿಲ್ಲ. ಅಲ್ಲದೆ ಕೆಲವು ಕಟ್ಟಡಗಳು ಸಂಪೂರ್ಣವಾಗಿ ಅವನತಿ ಹೊಂದಿವೆ. ಅವುಗಳಲ್ಲಿ ಕೆಲವು ನಿವಾಸಗಳು ೧೫x೨೦ ಆಕಾರದಲ್ಲಿದ್ದರೆ ಮತ್ತೆ ಕೆಲವು ಕಟ್ಟಡಗಳು ೧೦x೧೦ ಆಕಾರದಲ್ಲಿವೆ. ಅವುಗಳಲ್ಲಿ ಕೆಲವು ಕಟ್ಟಡಗಳಿಗೆ ಮೂರು ನಾಲ್ಕು ಕಮಾನಿನ ಆಕೃತಿಯ ಪ್ರವೇಶ

ದ್ವಾರಗಳಿವೆ. ಇನ್ನೂ ಕೆಲವು ಕಡೆಯಲ್ಲಿ ವೃತ್ತಾಕಾರದ ಕಟ್ಟಡದ ತಳಪಾಯವಿದೆ. ಕೋಟೆಯ ಆಗ್ನೇ ಭಾಗದಲ್ಲಿ ಮೂರು ಅಂಕಣಗಳಿಂದ ಕೂಡಿರುವ ಮಂಟಪವಿದೆ. ಈ ರೀತಿ ಕೋಟೆಯ ಒಳಗಡೆ ಹಲವು ಬಗೆಯ ಕಟ್ಟಡಗಳಿವೆ. ಪ್ರಸ್ತುತ ವನದುರ್ಗ ಕೋಟೆಯ ಒಳಭಾಗದಲ್ಲಿರುವ ಆಂಜನೆಯ ದೇವಸ್ಥಾನದ ಸುತ್ತಮುತ್ತಲು ಜನವಸತಿ ಇದೆ. ಅಲ್ಲದೆ ಕೋಟೆಯ ಕೇಂದ್ರ ಭಾಗದಲ್ಲಿರುವ ಸೇದಿ ಭಾವಿಯ ನೀರು ಇಂದಿಗೂ ಅಲ್ಲಿಯ ಜನರು ಕುಡಿಯಲು ಬಳಸುತ್ತಾರೆ.

ವನದುರ್ಗ ಕೋಟೆಯು ಅತ್ಯಂತ ಚಿಕ್ಕ ಕೋಟೆಯಾಗಿದ್ದರೂ ಅವಶ್ಯವಿರುವ ಎಲ್ಲಾ ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಳನ್ನು ಹೊಂದಿರುವುದರಿಂದ ಇದೊಂದು ಪರಿಪೂರ್ಣವಾದ ಕೋಟೆಯಾಗಿದೆ.

೨೧. ರಾಯನ ಪಾಳ್ಯಕೋಟೆ:

ಸುರಪುರ ತಾಲೂಕಿನ ಕೇಂದ್ರ ಸ್ಥಳದಿಂದ ೪೮ ಕೀ.ಮಿ. ದೂರದ ಕೃಷ್ಣಾನದಿಯಿಂದ ೯ ಕೀ.ಮಿ ದೂರದಲ್ಲಿ ಹಾಗೂ ದೋಣಿ ನದಿಯಿಂದ ೬ ಕೀ.ಮಿ. ದೂರದಲ್ಲಿ ಐತಿಹಾಸಿಕ ಸ್ಥಳವಾದ ರಾಯನ ಪಾಳ್ಯದಲ್ಲಿ ಕೋಟೆಯನ್ನು ನಿರ್ಮಿಸಲಾಗಿದೆ. ನೈಸರ್ಗಿಕವಾದ ನದಿಗಳಿಂದ ರಕ್ಷಣೆಯನ್ನು ಪಡೆದಿರುವ ಈ ಕೋಟೆಯ ಜಲದುರ್ಗ ಕಾಲವಾಗಿದೆ. ಈ ಕೋಟೆಯ ಕುರಿತು ದಿಲೇರ್ ಖಾನನ ದಾಳಿಯನ್ನು ಕುರಿತು ಆದಿಲ್ ಶಾಹಿಗಳ ಬಸತಿನ - ಅಲ್ - ಸಲಟೀನ ಎನ್ನುವ ಕೃತಿಯಲ್ಲಿ ಈ ಕೋಟೆಯ ಉಲ್ಲೇಖ ವಿದೆ. ಮೊಗಲ್ ಪ್ರಾಂತಾಧಿಕಾರಿಯಾದ ದಿಲೇರಖಾನನು ರಾಯನ ಪಾಳ್ಯ ಕೋಟೆಯ ಮೇಲೆ ಆಕ್ರಮಣಮಾಡಿ ಅದನ್ನು ಪಾಮ ನಾಯಕ ೧ ನಿಂದ ಹೊರಾದ ಮೂಲಕ ವಶಪಡಿಸಿಕೊಂಡನು. ಮೊಗಲ್ ಸೈನಿಕರು ಕೋಟೆಯನ್ನು ಆಕ್ರಮಿಸಿಕೊಳ್ಳುವುದರ ಜೊತೆಗೆ ಅಲ್ಲಿಯ ಮದ್ದಿನ ಮನೆಗೆ ಬೆಂಕಿ ಹಚ್ಚಿಧ್ವಂಶಗೊಳಿಸಿದರು. ಕೋಟೆಯ ಹೊರಭಾಗದಲ್ಲಿ ಆಂಜನೆಯ ದೇವಸ್ಥಾನವಿದೆ. ಕೋಟೆ ಮತ್ತು ದೇವಸ್ಥಾನವು ಏಕಕಾಲದಲ್ಲಿ ರಚನೆಯಾಗಿರುವಂತೆ ಕಂಡು ಬರುತ್ತದೆ. ಸುರಪುರ ಸಂಸ್ಥಾನದ ಸಾಮಂತರು ಈ ಕೋಟೆಯನ್ನು ನಿರ್ಮಿಸಿ ಅದರಲ್ಲಿ ಹಲವು ರಕ್ಷಣಾ ಸಂಬಂಧಿ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಅಲ್ಲದೆ ಇದು ಸಂಸ್ಥಾನಕ್ಕೆ ಉತ್ತರಭಾದ ಸೈನಿಕ ರಾಣೆಯಾಗಿ ಕಾರ್ಯನಿರ್ವಹಿಸುತ್ತಿತ್ತು.

ರಾಯನಪಾಳ್ಯದ ದಕ್ಷಣ ಭಾಗದಲ್ಲಿರುವ ಈ ಕೋಟೆಯು ಆಯಾತಾಕಾರದಲ್ಲಿ ರಚನೆಗೊಂಡಿರುವಂತೆ ಕಂಡು ಬರುತ್ತದೆ. ಬೆಟ್ಟಕ್ಕೆ ಆವರಿಸಿಕೊಂಡಿರುವಂತೆ ಪೂರ್ವದಿಂದ ಪಶ್ಚಿಮಕ್ಕೆ ೩೦೦ ಮಿ ಹಾಗೂ ಉತ್ತರದಿಂದ ದಕ್ಷಿಣಕ್ಕೆ ೨೫೦ ಮಿ ವಿಸ್ತೀರ್ಣದಲ್ಲಿ ಸ್ಥಳಿಯವಾಗಿ ಲಭ್ಯವಾಗುವ ಎರಡು ಕಲ್ಲಿನಲ್ಲಿ ಕೋಟೆಯ ಗೋಡೆಯನ್ನು ನಿರ್ಮಿಸಲಾಗಿದೆ. ಇದರ ದಕ್ಷಿಣ ಭಾಗವು ನೆಲಕ್ಕೆ ಸಮನಾದ ಆಕಾರದಲ್ಲಿದ್ದರೆ, ದಕ್ಷಿಣ ಭಾಗದಲ್ಲಿ ನೀರಿನಿಂದ ಆವೃತ್ತಿಯಾಗಿದೆ. ಈ ಕೋಟೆಯನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಕೋಟೆಯ ಮೊದಲನೆಯ ಭಾಗದಲ್ಲಿ ಒಂದು ಪ್ರವೇಶದ್ವಾರ ಮತ್ತು ನಾಲ್ಕು ಕೊತ್ತಳಗಳಿವೆ. ಇದರ ಒಂದು ಬದಿಯಲ್ಲಿ ನದಿಯು ಹರಿಯುತ್ತದೆ. ಇದರಿಂದ ಕೋಟೆಯು

ಜಲದುರ್ಗದಂತೆ ಕಂಡು ಬರುತ್ತದೆ. ಕೋಟೆಯ ಮೇಲ್ಭಾಗದ ರಚನೆಯು ಆಯಾತಾಕಾರದಲ್ಲಿದ್ದೂ, ನಾಲ್ಕು ಬದಿಯಲ್ಲಿ ಕಾವಲು ಗೋಪುರಗಳಿವೆ. ಇದರಲ್ಲಿ ಉತ್ತರ ಭಾಗದಲ್ಲಿರುವ ಎರಡು ಕಾವಲು ಗೋಪುರಗಳು ಅತ್ಯಂತ ಆಕರ್ಷಕ ಶೈಲಿಯಲ್ಲಿವೆ. ದಕ್ಷಿಣಭಾಗದ ಕಡೆಗೆ ಇರುವ ಕಾವಲು ಗೋಪುರಗಳು ೧೫ ಅಡಿ ಎತ್ತರವಾಗಿವೆ. ಪೂರ್ವಭಾಗದ ಕೋಟೆಗೋಡೆಯ ಮಧ್ಯದಲ್ಲಿ ಎತ್ತರವಾದ ಕಾವಲುಗೋಪುರವಿದೆ. ಪಶ್ಚಿಮ ಭಾಗದಲ್ಲಿರುವ ಇದರ ಪ್ರವೇಶದ್ವಾರವು ಎರಡು ಕೊತ್ತಳಗಳ ಮಧ್ಯದಲ್ಲಿ ನಿರ್ಮಿಸಲಾಗಿದೆ. ಇದರ ಮುಂಭಾಗದಲ್ಲಿ ತಡೆಗೋಡೆ ಇದ್ದೂ, ಕೋಟೆಯ ಒಳಭಾಗದಲ್ಲಿ ಎರಡು ಬದಿಯಲ್ಲಿ ಸೈನಿಕರ ವಸತಿನಿಲಯಗಳಿವೆ. ಇಲ್ಲಿಂದ ಕೋಟೆಯ ಒಳಭಾಗದ ರಚನೆಯು ಆರಂಭವಾಗುತ್ತದೆ. ಒಳಗಡೆ ಹಲವು ಬಗೆಯ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಇವುಗಳು ಸೈನಿಕರ ನಿಲಯಗಳು, ಕಾವಲು ಗೋಪುರಗಳು ಹಾಗೂ ದೇವಾಲಯಗಳ ರಚನೆಯಾಗಿರುವಂತೆ ಕಂಡು ಬರುತ್ತವೆ. ಅತ್ಯಂತ ಚಿಕ್ಕ ಕೋಟೆಯಾದರು ರಕ್ಷಣೆಯ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತದೆ. ಇದರ ನಿರ್ಮಾಣದಲ್ಲಿ ಸುರಪುರ ನಾಯಕರ ಇತರ ಕೋಟೆಗಳ ಲಕ್ಷಣಗಳು ಕಂಡು ಬರುತ್ತದೆ.

೨೨. ಇಜೇರಿ ಕೋಟೆ:

ಜೇವರ್ಗಿ ತಾಲೂಕು ಕೇಂದ್ರದ ನೈರುತ್ಯ ಭಾಗದಲ್ಲಿ ೨೦ ಕೀ.ಮಿ. ದೂರದಲ್ಲಿ ಇಜೇರಿ ಗ್ರಾಮವಿದೆ. ಜೇವರ್ಗಿ ಮತ್ತು ಯಡ್ರಾಮಿಯ ಕೇಂದ್ರ ಭಾಗದಲ್ಲಿರುವ ಈ ಗ್ರಾಮವು ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಇಲ್ಲಿ ಲಭ್ಯವಾದ ಶಿಲ್ಪಗಳು, ಅವಶೇಷಗಳು ಮತ್ತು ಶಾಸನಗಳಿಂದ ಇದರ ಪ್ರಾಚೀನತೆಯನ್ನು ತಿಳಿದುಕೊಳ್ಳಬಹುದು. ಇಲ್ಲಿ ದೊರೆತ ಒಂದು ಶಾಸನವು ಕಲ್ಯಾಣ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ ಮಾಹಿತಿಯನ್ನು ಒಳಗೊಂಡಿದೆ. ಶಾಸನದಲ್ಲಿ ಈ ಗ್ರಾಮವನ್ನು 'ಇರಜೇರಿ' ಎಂದು ಉಲ್ಲೇಖಿಸಲಾಗಿದೆ. ಹಿಂದೆ ಈ ಗ್ರಾಮವು ನರಿಬೋಳ - ೭೦ಕ್ಕೆ ಸೇರಿತ್ತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಮಧ್ಯಕಾಲಿನಲ್ಲಿ ಮುಸ್ಲಿಂರ ಆಳ್ವಿಕೆಗೆ ಒಳಪಟ್ಟ ಈ ಗ್ರಾಮವು ರಾಜಕೀಯವಾಗಿ ಪ್ರಾಮುಖ್ಯತೆಯನ್ನು ಪಡೆಯಿತು. ಆದ್ದರಿಂದ ಇಲ್ಲಿ ಹಲವು ರಕ್ಷಣಾ ವಾಸ್ತುಶಿಲ್ಪಶಿಲ್ಪಗಳು ರಚನೆಗೊಂಡವು ಅವುಗಳಲ್ಲಿ ಭದ್ರವಾದ ಕೋಟೆ, ಹುಡೆವು, ದೇವಸ್ಥಾನ, ಮಸೀದಿ ಹಾಗೂ ಇನ್ನಿತರ ಕಟ್ಟಡಗಳು.

ಸುರಪುರ ಸಂಸ್ಥಾನದ ಇಮ್ಮಡಿ ವೆಂಕಟಪ್ಪನಾಯಕನು (೧೭೭೩-೧೮೦೨) ನಿಜಾಮ, ಬ್ರಿಟಿಷರು, ಗುಡಗುಂಟಿಯ ನಾಯಕರು ಮತ್ತು ಇತರರೊಂದಿಗೆ ನಿರಂತರವಾಗಿ ಕಲಹದಲ್ಲಿ ತೊಡಗಿದ. ಆದ್ದರಿಂದ ಪ್ರಬಲವಾದ ಸೈನ್ಯವನ್ನು ಕಟ್ಟಿ ಅವುಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಗುಪ್ತವಾಗಿಡಲು ಹಲವೆಡೆ ಕೋಟೆಗಳನ್ನು ನಿರ್ಮಿಸಿದ. ಅದರಲ್ಲಿ ಇಜೇರಿಯ ಕಿಲ್ಲೆಯು ಒಂದಾಗಿದೆ[೮೩]. ವಿಶೇಷ ಸೈನಿಕ ಪಡೆಯನ್ನು

ಇಲ್ಲಿ ಸುರಕ್ಷಿತವಾಗಿಡಲು ಅತ್ಯಂತ ಭದ್ರವಾದ ಕೋಟೆಯನ್ನು ನಿರ್ಮಿಸಿ ಅದರ ರಕ್ಷಣೆಗಾಗಿ ಎರಡು ತೋಪುಗಳು, ೩೦೦ ರಾವುತರು ಹಾಗೂ ೨೦೦ ಜಟ್ಟರ ಪಡೆಯನ್ನು ನೇಮಿಸಿದನು.

ಗ್ರಾಮದ ನೈರುತ್ಯ ದಿಕ್ಕಿನಲ್ಲಿ ಚೌಕಾಕಾರದ ಕೋಟೆಯಿದೆ. ಸ್ಥಳೀಯವಾಗಿ ಲಭ್ಯವಾಗುವ ಕಪ್ಪನೆಯ ಕಟೆದ ಕಲ್ಲಿನಲ್ಲಿ ಇದನ್ನು ನಿರ್ಮಿಸಲಾಗಿದೆ. ಹೊರಭಾಗದ ಕಲ್ಲುಗಳು ನುಣುಪಾಗಿ ಕಟೆಯಲಾಗಿದ್ದು. ಒಳಭಾಗದಲ್ಲಿ ವರಟಾಗಿವೆ. ಇದರ ನಿರ್ಮಾಣಕ್ಕೆ ಗಾರೆಯನ್ನು ಬಳಸಿರುವುದಿಲ್ಲ. ಈ ಕೋಟೆಯ ರಕ್ಷಣೆಗಾಗಿ ೧೫ ರಿಂದ ೨೦ ಅಡಿ ಅಂತರದಲ್ಲಿ ಮತ್ತೊಂದು ಗೋಡೆಯನ್ನು ನಿರ್ಮಿಸಲಾಗಿದೆ. ಒಳಗೋಡೆಗಿಂತಲು ಕಿರಿದಾಗಿದ್ದು, ಇದು ಕೋಟೆಯ ಗೋಡೆಯಂತೆ ಕಂಡು ಬರುತ್ತದೆ. ಆದರೆ ಸ್ಥಳೀಯರ ಅಭಿಪ್ರಾಯದಲ್ಲಿ ಇದು ಕಂದಕವಾಗಿರಬಹುದೆಂದು ಹೇಳಲಾಗಿದೆ. ಕೋಟೆಯ ಸಮೀಪದಲ್ಲಿ ಒಂದು ಸಣ್ಣ ಹಳ್ಳ ಹರಿಯುತ್ತಿದ್ದು. ಅಲ್ಲಿಂದ ನೀರು ಕಂದಕಕ್ಕೆ ಹರಿಸಲಾಗುತ್ತಿತ್ತು. ಈ ಹಿನ್ನಲೆಯಲ್ಲಿ ಇದು ಕಂದಕವೆಂದು ಅವರ ಅಭಿಮತ. ಆದರೆ ಕೋಟೆಯ ಪ್ರವೇಶ ದ್ವಾರವನ್ನು ಪರಿಶೀಲಿಸಿದಾಗ ಅದರ ತಳಭಾಗ ನೆಲಕ್ಕೆ ಸಮನಾಗಿ ನಿರ್ಮಿಸಲಾಗಿದೆ. ಕಂದಕದ ನೀರು ನೇರವಾಗಿ ಕೋಟೆಯ ಒಳಗಡೆ ಪ್ರವೇಶಿಸುತ್ತದೆ. ಆದ್ದರಿಂದ ಇದು ಕಂದಕವೆಂದು ಹೇಳಲು ಸಾಧ್ಯವಿಲ್ಲ. ಆದರೆ ಇದು ಎರಡನೆಯ ಸುತ್ತಿನ ಗೋಡೆಯಂತೆ ಕಂಡು ಬರುತ್ತದೆ.

ಚೌಕಾಕಾರದಲ್ಲಿರುವ ಈ ಕೋಟೆಯ ಹೊರಭಾಗದಲ್ಲಿ ದ್ವಾರಕ್ಕೆ ಅನುಗುಣವಾಗಿ ಚೌಕಾಕಾರದ ಸುಮಾರು ೧೦ ರಿಂದ ೧೫ ಅಡಿ ಎತ್ತರದ ಗೋಡೆಯನ್ನು ನಿರ್ಮಿಸಲಾಗಿದೆ[೮೪]. ಪ್ರಸ್ತುತ ಈ ಗೋಡೆಯ ಕೆಲವು ಭಾಗಗಳಲ್ಲಿ ಮಾತ್ರ ಕಂಡು ಬರುತ್ತದೆ. ಉಳಿದ ಕಡೆಗೆ ಸಂಪೂರ್ಣವಾಗಿ ಅವನತಿ ಹೊಂದಿದೆ. ಆದರೆ ಇದರ ಉತ್ತರ ಭಾಗದಲ್ಲಿ ಮತ್ತೊಂದು ವಿಶೇಷ ತಡೆಗೋಡೆಯ ತಳಪಾಯ ಕಂಡು ಬರುತ್ತದೆ. ಈ ಗೋಡೆಯು ಕೇವಲ ಮುಂಭಾಗದಲ್ಲಿ ಉಳಿದುಕೊಂಡಿರುತ್ತದೆ. ಇದರ ತಳಪಾಯವು ಅತ್ಯಂತ ದಪ್ಪವಾಗಿರುವುದರಿಂದ ಈ ಗೋಡೆಯು ಕೋಟೆಯ ಗೋಡೆಯಂತೆ ೨೦ ರಿಂದ ೨೫ ಅಡಿ ಎತ್ತರವಾಗಿರಬಹುದೆಂದು ಹೇಳಲಾಗಿದೆ.

ಕೋಟೆಯ ಉತ್ತರ ಭಾಗದಲ್ಲಿ ಸಣ್ಣ ಹಳ್ಳ ಇರುವುದರಿಂದ ಅಲ್ಲಿಯ ನೀರು ಕೋಟೆಯ ಒಳಗಡೆ ಪ್ರವೇಶಿಸದಂತೆ ತಡೆ ಗೋಡೆಯನ್ನು ನಿರ್ಮಿಸಲಾಗಿದೆ. ಏಕೆಂದರೆ ಈ ಕೋಟೆಯು ಕುದುರೆಗಳ ಮತ್ತು ಸೈನ್ಯದ ರಕ್ಷಣೆಗಾಗಿ ನಿರ್ಮಿಸಿರುವುದರಿಂದ ಹಳ್ಳದ ಸಮೀಪದಲ್ಲಿ ಇದನ್ನು ನಿರ್ಮಿಸಲಾಗಿದೆ. ಕೋಟೆಯ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ಕೊತ್ತಳ ಅಥವಾ ಕಾವಲುಗೋಪುರಗಳಿವೆ. ಸುಮಾರು ೨೦ ರಿಂದ ೨೫ ಅಡಿ ಎತ್ತರವಾಗಿರುವ ಈ ಕಾವಲುಗೋಪುರಗಳು ವೀಕ್ಷಣಾ ರಂಧ್ರಗಳನ್ನು ಅಥವಾ ಅಂಬು ಗಿಂಡಿಗಳನ್ನು ಹೊಂದಿರುವುದಿಲ್ಲ. ಅಲ್ಲದೆ ಮೇಲ್ಭಾಗದಲ್ಲಿ ಯಾವುದೆ ತೋಪುಗಳು ಕಂಡು ಬರುವುದಿಲ್ಲ. ಕೋಟೆಯ ಗೋಡೆ ನಾಲ್ಕು ಅಡಿ ದಪ್ಪವಾಗಿದ್ದು ಮೇಲೆ ಸುತ್ತಾಡಲು ಅವಕಾಶವಿದೆ. ಆದರೆ ಗುಲಬರ್ಗಾ

ಜಿಲ್ಲೆಯಲ್ಲಿ ಬರುವ ಬಹುತೇಕ ಕೋಟೆಗಳ ಸುತ್ತಲು ತೆನೆಗಳಿವೆ. ಇಜೇರಿ ಕೋಟೆಯಲ್ಲಿ ತೆನೆಗಳ ರಚನೆ ಮಾಡಿರುವುದಿಲ್ಲ. ಇದರಿಂದ ನಮಗೆ ಕಂಡು ಬರುವುದೇನೆಂದರೆ, ಈ ಕೋಟೆ ಸೈನ್ಯದ ಸಂಗ್ರಹಕ್ಕಾಗಿ ನಿರ್ಮಿಸಲಾಗಿದೆ ಎಂದು ತೋರುತ್ತದೆ. ಕೋಟೆಯ ಒಳಭಾಗದಲ್ಲಿ ನಾಲ್ಕು ದಿಕ್ಕಿನ ಗೋಡೆಯ ಕೇಂದ್ರ ಭಾಗದಲ್ಲಿ ಮೇಲೆ ಹತ್ತಲು 'V' ವ್ಹಿ ಆಕಾರದಲ್ಲಿ ಮೆಟ್ಟಿಲುಗಳಿವೆ. ಪ್ರತಿ ಭಾಗದಲ್ಲಿ ೨೦ ಮೆಟ್ಟಿಲುಗಳಿವೆ. ಈ ರೀತಿಯ ಮೆಟ್ಟಿಲುಗಳು ಎಲ್ಲಾ ಕೋಟೆಗಳಲ್ಲಿ ಇರುವುದಿಲ್ಲ. ಇಜೇರಿ ಕೋಟೆಯ ವಿಶೇಷತೆಯಲ್ಲಿ ಇದು ಒಂದಾಗಿದೆ. ಇಲ್ಲಿಂದ ಮೇಲೆ ಹತ್ತಿ ಸೈನಿಕರು ಸುತ್ತಲು ಕಾವಲು ಮಾಡಬಹುದು. ಆದರೆ ಮೇಲ್ಭಾಗದಲ್ಲಿ ಕಾವಲುಗಾರರಿಗೆ ನೆಲೆ ನಿಲ್ಲಲು ಅವಕಾಶವಿರುವುದಿಲ್ಲ.

ಪೂರ್ವ ಭಾಗದ ಕೋಟೆಯ ಮಧ್ಯದಲ್ಲಿ ಪ್ರಮುಖವಾದ ಪ್ರವೇಶ ದ್ವಾರವಿದೆ. ಇದರ ಎರಡು ಬದಿಯಲ್ಲಿ ಕೊತ್ತಳಗಳು ಇರುವುದಿಲ್ಲ. ದ್ವಾರದ ಹೊರಭಾಗವು ಕಮಾನಿನ ಆಕೃತಿಯಂತೆ ಕಂಡು ಬಂದರೆ ಒಳಗಡೆ ಚೌಕಾಕಾರದ ಕಲ್ಲಿನ ಕಂಬದಿಂದ ಕೂಡಿದೆ. ಸುಮಾರು ೨೦ ಅಡಿ ಎತ್ತರದ ೧೦ ಅಡಿ ಅಗಲವಾಗಿದ್ದು. ದ್ವಾರದ ರಚನೆಗೆ ಬಳಸಿರುವ ಕಲ್ಲುಗಳಲ್ಲಿ ಹೆಚ್ಚಿನ ಅಲಂಕಾರವಿರುವುದಿಲ್ಲ. ಆದರೆ ಮೇಲ್ಭಾಗದ ಕಲ್ಲಿನ ಕೇಂದ್ರದಲ್ಲಿ ಹೂವಿನ ಚಿತ್ರ. ಅದರ ಎರಡು ಬದಿಯಲ್ಲಿ ಮೀನಿನ ಚಿತ್ರಗಳು ಮತ್ತು ನಂತರದಲ್ಲಿ ಸೂರ್ಯ-ಚಂದ್ರದ ಶಿಲ್ಪಗಳಿವೆ. ಈ ರೀತಿಯ ಶಿಲ್ಪಿಗಳು ಸುರಪುರದ ನಾಯಕರ ಕಾಲದಲ್ಲಿ ನಿರ್ಮಾಣಗೊಂಡ ಎಲ್ಲಾ ಕೋಟೆಗಳಲ್ಲಿ ಕಂಡು ಬರುತ್ತವೆ.

ದ್ವಾರದ ಒಳಭಾಗದಲ್ಲಿ ಸುಮಾರು ೧೦ ಅಡಿಯ ನಂತರ ಮತ್ತೊಂದು ಪ್ರವೇಶ ದ್ವಾರ ಕಂಡು ಬರುತ್ತದೆ. ಇಲ್ಲಿಂದ ಕೋಟೆಯ ಎಡ ಮತ್ತು ಬಲ ಭಾಗಕ್ಕೆ ಹೋಗಲು ಮಾರ್ಗವಿದೆ. ಇದರ ಮೇಲ್ಭಾಗವು ನಾಶ ಹೊಂದಿರುವುದರಿಂದ ದ್ವಾರದ ಶೈಲಿಯನ್ನು ಗುರುತಿಸುವುದು ಕಷ್ಟಕರವಾಗಿದೆ. ಈ ಎರಡು ದ್ವಾರಗಳನ್ನು ಹೊರತು ಪಡಿಸಿ ಕೋಟೆಯ ಒಳಭಾಗದಲ್ಲಿ ಯಾವುದೆ ಕಟ್ಟಡಗಳು ಅಥವಾ ಅದರ ಅವಶೇಷಗಳು ಕಂಡು ಬರುವುದಿಲ್ಲ. ಇಡಿ ಒಳಭಾಗದ ರಚನೆಯು ಸಮತಟ್ಟವಾಗಿದೆ. ಕೋಟೆಯ ಉತ್ತರ ಭಾಗದಲ್ಲಿ ತಡೆ ಗೋಡೆಯ ನಂತರ ಬರುವ ಎರಡನೆಯ ಸುತ್ತಿನ ಗೋಡೆಯ ಕೇಂದ್ರ ಭಾಗದಲ್ಲಿ ಒಂದು ಪ್ರವೇಶ ದ್ವಾರವಿದೆ. ಆದರೆ ಪ್ರಸ್ತುತ ಈ ಭಾಗವು ಸಂಪೂರ್ಣವಾಗಿ ನಾಶ ಹೊಂದಿರುವುದರಿಂದ ದ್ವಾರವನ್ನು ಗುರುತಿಸುವುದು ಕಷ್ಟಕರವಾಗಿದೆ[೮೫]. ತಡೆ ಗೋಡೆಯ ನಂತರ ಅದರ ಒಳಭಾಗದಲ್ಲಿ ಪ್ರವೇಶ ದ್ವಾರವಿರುವುದು ಸಾಮಾನ್ಯವಾಗಿದೆ. ಆದ್ದರಿಂದ ಈ ಭಾಗದಲ್ಲಿಯು ದ್ವಾರವಿರುವುದು ಅವಶ್ಯಕವಾಗಿದೆ. ಈ ರೀತಿ ಎರಡು ಪ್ರಮುಖ ದ್ವಾರಗಳನ್ನು ಹೊರತುಪಡಿಸಿ ಇತರ ಕಡೆಯಲ್ಲಿ ಮೂರು ಗುಪ್ತದ್ವಾರಗಳಿವೆ.

[illegible]

೨೩. ಚಿನ್ಮಳ್ಳಿ ಕೋಟೆ:

ಚಿನ್ಮಳ್ಳಿ ಕೋಟೆಯು ಅಫಜಲ್‌ಪುರ ತಾಲೂಕಿನಿಂದ ಆಗ್ನೇಯ ಭಾಗಕ್ಕೆ ೪೨ ಕಿ.ಮೀ. ಹಾಗೂ ಗುಲಬರ್ಗಾದಿಂದ ನೈರುತ್ಯಕ್ಕೆ ೫೩ ಕಿ.ಮೀ. ದೂರದಲ್ಲಿದೆ. ಭೀಮಾ ನದಿಯ ಎರಡದಂಡೆಯ ಮೇಲೆ ಬರುವ ಈ ಗ್ರಾಮವು ಪ್ರಮುಖ ಧಾರ್ಮಿಕ ಕೇಂದ್ರ ಸ್ಥಳವಾಗಿದೆ. ಇದನ್ನು ಪ್ರಾಚೀನ ಕಾಲದ ಶಾಸನಗಳಲ್ಲಿ 'ಚಿಲ್ಲಮಳೆ' 'ಚಿಲ್ಲಿಮೆಳೆ' ಎಂದು ಉಲ್ಲೇಖಿಸಲಾಗಿದೆ[೮೬]. ಅತನೂರು ಆಂಕ್ಕೆ ಸೇರಿದ ಈ ಗ್ರಾಮವು ಶ್ರೀಶೈಲ ಮಲ್ಲಿಕಾರ್ಜುನನ ವಾಸಸ್ಥಳವಾಗಿದ್ದು, ಇದಕ್ಕೆ 'ಅಭಿನವ ಕೈಲಾಸ' ಎಂದು ಕರೆಯಲಾಗಿದೆ. ಕಲ್ಯಾಣ ಕಲಚೂರಿಯರ ಕಾಲಕ್ಕೆ ಸೇರಿದ ಮಲ್ಲಿಕಾರ್ಜುನ ದೇವಾಲಯ ಕೋಟೆಯ ಉತ್ತರ ಭಾಗದಲ್ಲಿದೆ. ಈ ದೇವಾಲಯಕ್ಕೆ ಹಲವರು ದತ್ತಿ ಕೊಟ್ಟಿರುವ ವಿಷಯಗಳು ಅಲ್ಲಿಯ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಅದರಲ್ಲಿ ಕಲಂಬರಿಗೆ (ಕಲ್ಬುರ್ಗಿ) ಚೆಲ್ಲಿಸೆಟ್ಟಿ ಎಂಬ ವರ್ತಕನ ಹೆಸರು ಉಲ್ಲೇಖ ಗೊಂಡಿದೆ. ಇನ್ನೊಂದು ಶಾಸನದಲ್ಲಿ ಯಾದವ ಅರಸರ ಮಾಂಡಲಿಕರು ಈ ದೇವಾಲಯಗಳಿಗೆ ದತ್ತಿ ಕೊಟ್ಟಿರುವ ವಿವರಗಳಿವೆ.

ಚಿನ್ಮಳ್ಳಿಯಲ್ಲಿ ಗ್ರಾಮವನ್ನು ಸುತ್ತುವರಿದ ಕೋಟೆಯಿದೆ. ಇದರ ಪೂರ್ವ ಮತ್ತು ಪಶ್ಚಿಮಕ್ಕೆ ಮುಖ ಮಾಡಿರುವ ಎರಡು ಪ್ರಮುಖ ದ್ವಾರಗಳಿವೆ. ಅಲ್ಲದೆ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ಒಂದೊಂದು 'ದಿಡ್ಡಿ' (ಗುಪ್ತ) ಬಾಗಿಲುಗಳಿವೆ. ಪೂರ್ವ ಭಾಗದ ಕೋಟೆ ಗೋಡೆಯು ೨೦ ಅಡಿ ಎತ್ತರ ಹಾಗೂ ೫ ಅಡಿ ದಪ್ಪವಾಗಿದೆ. ೨೦೦ ಅಡಿಯ ಅಂತರದಲ್ಲಿ ಒಂದೊಂದು ಕೊತ್ತಳಗಳಿವೆ. ಮೊದಲಿನ ಎರಡು ಕೊತ್ತಳಗಳಿಗೆ ಕೆತ್ತನೆಯ ಕಲ್ಲುಗಳನ್ನು ಬಳಸಲಾಗಿದೆ. ಮೂರನೆಯ ಕೊತ್ತಳವು ಆಕರ್ಷಕ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ಹಿನ್ನೆಲೆಯಲ್ಲಿ ಕೊತ್ತಳಗಳನ್ನು ಅಧ್ಯಯನ ಮಾಡಿದರೆ, ಇವುಗಳ ನಿರ್ಮಾಣದ ಕಾಲಾವಧಿ ಬೇರೆ ಬೇರೆ ಯಾಗಿರುವಂತೆ ಕಂಡು ಬರುತ್ತದೆ.

ಪೂರ್ವ ಭಾಗದಲ್ಲಿರುವ ಮಾಹಾದ್ವಾರವು ಸಂಪೂರ್ಣವಾಗಿ ಅವನತಿ ಹೊಂದಿದ್ದು ಅದರ ಒಂದು ಬದಿಯಲ್ಲಿ ವೃತ್ತಾಕಾರದ ಕೊತ್ತಳದ ತಳಪಾಯ ಉಳಿದುಕೊಂಡಿದೆ. ಆದ್ದರಿಂದ ಈ ದ್ವಾರವು ಎರಡು ಕೊತ್ತಳಗಳ ಮಧ್ಯದಲ್ಲಿ ಇರುವಂತೆ ಕಂಡು ಬರುತ್ತದೆ. ಪ್ರಸ್ತುತ ಈ ಗ್ರಾಮಕ್ಕೆ ಇದೇ ಪ್ರವೇಶದ್ವಾರವಾಗಿದೆ. ಪೂರ್ವ ಭಾಗದ ಕೋಟೆಯು ಉತ್ತರ-ದಕ್ಷಿಣ ಭಾಗಕ್ಕೆ ಸರಳ ರೇಖೆಯಂತೆ ನೇರವಾಗಿ ರಚಿಸಲಾಗಿದೆ. ಈಶಾನ್ಯ ಭಾಗದಲ್ಲಿ ನದಿಗೆ ಅಂಟಿಕೊಂಡಂತೆ ನೇರವಾಗಿ ಮುಂದುವರೆಯುತ್ತದೆ. ಪಶ್ಚಿಮ ಭಾಗದಲ್ಲಿ ನದಿಯ ದಂಡೆಯ ಮೇಲೆ ಒಂದು ಕೊತ್ತಳವಿದೆ. ಅಲ್ಲಿಂದ ಈ ಕೋಟೆ ದಕ್ಷಿಣ ಭಾಗಕ್ಕೆ ಮುಂದುವರೆಯುತ್ತದೆ. ಪಶ್ಚಿಮ ಭಾಗದ ಗೋಡೆಯಲ್ಲಿ ಭೀಮಾನದಿಯ ಸಮೀಪದಲ್ಲಿ ಒಂದು ಉಪದ್ವಾರವಿದೆ. ಈ ದ್ವಾರವು ಯಥಾ ಸ್ಥಿತಿಯಲ್ಲಿದೆ. ಅತ್ಯಂತ ಸರಳ ಶೈಲಿಯಲ್ಲಿರುವ ಈ ದ್ವಾರವು ೧೨ ಅಡಿ ಎತ್ತರ ೧೦ ಅಡಿ ಅಗಲವಾಗಿದೆ. ಇದರ ರಚನೆಗೆ ಕಲ್ಲಿನ

ಕಂಬಗಳನ್ನು ಬಳಸಲಾಗಿದೆ. ಇದರ ಒಳಭಾಗದಲ್ಲಿ ಎರಡು ಬದಿಯಲ್ಲಿ ಕಾಲವಲುಗಾರರ ಕಟ್ಟಡಗಳಿವೆ. ಅಲ್ಲದೆ ವೀಕ್ಷಣಾ ರಂಧ್ರಗಳಿವೆ.

ಈ ಕೋಟೆಯ ರಚನೆಯು ಅರ್ಧವೃತ್ತಾಕಾರ ಹಾಗೂ ಉಳಿದ ಭಾಗ ನೇರವಾದ ಗೋಡೆಯಿಂದ ಕೂಡಿದೆ. ಇದರ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಕಪ್ಪನೆಯ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಹೊರಭಾಗದ ಗೋಡೆಯನ್ನು ವೀಕ್ಷಿಸಿದರೆ, ಕೆಳಭಾಗದಲ್ಲಿ ದಪ್ಪವಾಗಿದ್ದೂ, ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತದೆ. ಗೋಡೆಯ ಮೇಲ್ಭಾಗದಲ್ಲಿ ಕಾವಲುಗಾರರಿಗೆ ಸುತ್ತಾಡಲು ಸ್ಥಳಾವಕಾಶವಿದೆ. ಕೋಟೆಯ ನಿರ್ಮಾಣದಲ್ಲಿ ಗಾರೆಯ ಬಳಕೆ ಇರುವುದಿಲ್ಲ. ಚೌಕಾಕಾರದ ಹಾಗೂ ಆಯತಾಕಾರದ ಕಲ್ಲುಗಳನ್ನು ಒಂದ ಮೇಲೊಂದರಂತೆ ಜೋಡಿಸಲಾಗಿದೆ. ಪ್ರತಿಯೊಂದು ಕಲ್ಲು ಒಂದರಿಂದ ಒಂದುವರೆ ಅಡಿ ಎತ್ತರ ಹಾಗೂ ಅಗಲವಾಗಿದೆ. ಕೋಟೆಯ ಸುತ್ತಲು ತೆನೆಗಳು ಹಾಗೂ ಕಾವಲುಗಾರರ ನಿವಾಸಗಳು ಇರುವುದಿಲ್ಲ. ಈ ಹಿನ್ನಲೆಯಲ್ಲಿ ವೀಕ್ಷಿಸಿದಾಗ ಕೋಟೆಯು ೧೮-೧೯ನೆಯ ಶತಮಾನದಲ್ಲಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಇದರ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೆ ಶಾಸನಗಳು ಹಾಗೂ ಸಾಹಿತ್ಯದ ಆಧಾರಗಳು ಲಭ್ಯವಾಗಿರುವುದಿಲ್ಲ. ಗ್ರಾಮದಿಂದ ಪತ್ತೆಯಾಗಿರುವ ನಾಲ್ಕು ಶಾಸನಗಳಲ್ಲಿ ಕೋಟೆಯ ಉಲ್ಲೇಖವಿರುವುದಿಲ್ಲ. ಆದ್ದರಿಂದ ಇಲ್ಲಿಯ ದೇವಾಲಯದ ರಚನೆ ಕಾಲಕ್ಕೆ ಕೋಟೆ ನಿರ್ಮಾಣವಾಗಿರಲಿಲ್ಲವೆಂದು ತಿಳಿದು ಬರುತ್ತದೆ.

ಕೋಟೆಯ ಸುತ್ತಲು ಒಟ್ಟು ಏಳು ಕಾವಲುಗೋಪುರಗಳಿವೆ. ಇವುಗಳು ವೃತ್ತಾಕಾರದಲ್ಲಿದ್ದು ಅತ್ಯಂತ ಸರಳ ಶೈಲಿಯಲ್ಲಿ ನಿರ್ಮಿಸಲಾಗಿದೆ. ಉತ್ತರ ಭಾಗದಲ್ಲಿರುವ ಒಂದು ಕೊತ್ತಳವು (ಕಾವಲುಗೋಪುರವು) ಹುಡೆವಿನ ಶೈಲಿಯಲ್ಲಿದೆ. ಅದರ ಒಳಭಾಗದಲ್ಲಿ ಮೇಲೆ ಹತ್ತಲು ಮೆಟ್ಟಲುಗಳು ಮತ್ತು ಕಾವಲುಗಾರರಿಗೆ ಒಳಗಡೆ ವಿಶ್ರಾಂತಿಯ ಸ್ಥಳವಿದೆ. ಇದರ ಕೇಂದ್ರ ಭಾಗದಲ್ಲಿ ಕಟ್ಟಿಗೆಯ ಕಂಬವಿದ್ದೂ ಅದರ ಸುತ್ತಲು ಮೂರು ಅಂಕಣಗಳ ಕಮಾನುಗಳಿವೆ. ಗ್ರಾಮೀಣ ರಕ್ಷಣಾ ವಾಸ್ತುಶಿಲ್ಪಗಳಾದ ಹುಡೆವುಗಳನ್ನು ಹೋಲುತ್ತದೆ.

ಕೋಟೆಯ ಮೇಲ್ಭಾಗದಲ್ಲಿ ಕಾವಲುಗಾರರಿಗೆ ಕಾವಲು ಸ್ಥಳ ಹಾಗೂ ಕೆಳಗಡೆ ಬರಲು ಮೆಟ್ಟಲುಗಳನ್ನು ನಿರ್ಮಿಸಲಾಗಿದೆ. ಬುರುಜುಗಳಲ್ಲಿ ವೀಕ್ಷಣಾ ರಂಧ್ರಗಳು ಹಾಗೂ ಇತರ ರಕ್ಷಣಾ ಸಂಬಂಧಿ ವ್ಯವಸ್ಥೆಗಳು ಕಂಡು ಬರುತ್ತವೆ. ಪ್ರಸ್ತುತ ಕೋಟೆಯ ಒಳಭಾಗದಲ್ಲಿ ನಾಗರಿಕರ ಮನೆಗಳಿವೆ. ಅವುಗಳಲ್ಲಿ ಕೆಲವು ಮನೆಗಳು ಮಾತ್ರ ಕೋಟೆಯ ರಚನೆಯ ಕಾಲಕ್ಕೆ ನಿರ್ಮಾಣವಾಗಿರುವಂತೆ ಕಂಡು ಬರುತ್ತವೆ. ಉಳಿದ ಮನೆಗಳು ಇತ್ತೀಚಿನ ಕಾಲದಲ್ಲಿ ನಿರ್ಮಿಸಲಾಗಿದೆ. ಆದರೆ ಕೋಟೆಯ ಕೇಂದ್ರ ಭಾಗದಲ್ಲಿರುವ ದೇಸಾಯಿಗಳ ಮನೆ ಕೋಟೆಯೊಂದಿಗೆ ರಚನೆ ಗೊಂಡಿರುವಂತೆ ಕಂಡು ಬರುತ್ತದೆ. ಎರಡು ಅಂತಸ್ತಿನ ಈ ಕಟ್ಟಡವು ಹೆಚ್ಚಿನ ಸ್ಥಳವನ್ನು ಹೊಂದಿದೆ. ಆದರೆ ಈ ಮನೆಯಲ್ಲಿ ಜನವಸತಿಯು

ಇರುವುದಿಲ್ಲ. ಕೋಟೆಯ ಒಳಗಡೆ ಹೆಚ್ಚಿನ ನೀರಿನ ಸೌಲಭ್ಯವು ಇರುವುದಿಲ್ಲ. ಏಕೆಂದರೆ ಇದರ ಪೂರ್ವ ಭಾಗದಲ್ಲಿ ಭೀಮಾನದಿಯು ಹರಿಯುತ್ತದೆ. ಅಲ್ಲಿಂದ ನೀರು ತರಲು ಒಂದು ಸಣ್ಣ ದಿಡ್ಡಿ ಬಾಗಿಲು ಅಥವಾ ದ್ವಾರವಿದೆ. ಈ ದ್ವಾರದಿಂದ ಜನರು ನೀರು ತರುತ್ತಾರೆ. ಕೋಟೆಯ ಒಳಗಡೆ ಒಂದೆರಡು ಭಾವಿಗಳಿವೆ.

ಕೋಟೆಯ ಒಳಗಡೆ ಉತ್ತರ ಭಾಗದಲ್ಲಿ ಭೀಮಾ ನದಿಯ ಕಡೆಗೆ ಮುಖ ಮಾಡಿಕೊಂಡಿರುವ "ಮಲ್ಲಿಕಾರ್ಜುನ ದೇವಾಲಯ"ವಿದೆ. ಇದರ ಆವರಣದಲ್ಲಿ ಮೂರು ಶಾಸನಗಳಿವೆ[೮೭]. ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ಈ ದೇವಾಲಯವು ಕ್ರಿ.ಶ. ೧೨೧೪ರಲ್ಲಿ ರಚನೆಯಾಗಿರುತ್ತದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ದೇವಾಲಯ ನಿರ್ಮಾಣಗೊಂಡಿರುವುದೆಂದು ಇಲ್ಲಿ ದೊರೆತ ಶಾಸನಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಕೋಟೆಯ ನಿರ್ಮಾಣಕ್ಕಿಂತ ಮುಂಚೆ ಇಲ್ಲಿ ದೇವಾಲಯ ಅಸ್ತಿತ್ವದಲ್ಲಿತ್ತು. ಕಾಲಕ್ರಮೇಣ ಧಾರ್ಮಿಕವಾಗಿ ಪ್ರಮುಖ ಸ್ಥಾನ ಹೊಂದಿರುವ ಈ ಪ್ರದೇಶವು ರಾಜಕೀಯ ಪ್ರಾಮುಖ್ಯತೆಯನ್ನು ಪಡೆದು ಕೊಂಡಿತು. ಆದ್ದರಿಂದ ಗ್ರಾಮದ ರಕ್ಷಣೆಗಾಗಿ ಕೋಟೆಯನ್ನು ನಿರ್ಮಿಸಲಾಯಿತು.

ದೇವಸ್ಥಾನದ ಮುಂಭಾಗದಲ್ಲಿ ಸುಮಾರು ೬೦ ಅಡಿ ಅಂತರದಲ್ಲಿ ಕೋಟೆ ಗೋಡೆಯಲ್ಲಿ ಒಂದು ಚಿಕ್ಕದ್ವಾರವಿದೆ. ಇಲ್ಲಿಂದ ದೇವಸ್ಥಾನದ ಪೂಜೆ ಮತ್ತು ಇನ್ನಿತರ ಕಾರ್ಯಗಳಿಗೆ ನೀರನ್ನು ತರಲಾಗುತ್ತದೆ[೮೮]. ನದಿಯ ನೀರು ಹೆಚ್ಚಿದರು. ನೀರು ದೇವಾಲಯದಲ್ಲಿ ಪ್ರವೇಶಿಸದಂತೆ ರಕ್ಷಣಾ ಕ್ರಮ ಕೈಗೊಳ್ಳಲಾಗಿದೆ. ಚಿನ್ಮಳ್ಳಿ ಕೋಟೆಯು ಗ್ರಾಮ ರಕ್ಷಣೆಗಾಗಿ ದೇಶಮುಖರು ನಿರ್ಮಿಸಿರುವಂತೆ ಕಂಡು ಬರುತ್ತದೆ. ಆದರೆ ಇಲ್ಲಿಂದ ಆಳ್ವಿಕೆ ಮಾಡಿರುವ ಮನೆತನಗಳ ಕುರಿತು ಯಾವುದೆ ಮಾಹಿತಿಗಳು ಇರುವುದಿಲ್ಲ. ಆದ್ದರಿಂದ ಇದೊಂದು ಗ್ರಾಮ ರಕ್ಷಣೆಯ ಕೋಟೆಯೆಂದು ಪರಿಗಣಿಸಲಾಗಿದೆ.

೨೪. ಕಾಕಲವಾರ ಕೋಟೆ

ಯಾದಗಿರ ತಾಲೂಕಿನಿಂದ ೪೬ ಕಿ.ಮಿ. ದೂರದಲ್ಲಿರುವ ಈ ಗ್ರಾಮವು ಗುರಮಿಟಕಲ್‌ದ ಉತ್ತರ ಭಾಗದಲ್ಲಿ ೬ ಕಿ.ಮಿ. ದೂರದಲ್ಲಿದೆ. ಗುರುಮಿಟಕಲ್ ಸೇಡಂ ಮಾರ್ಗದಲ್ಲಿರುವ ಈ ಗ್ರಾಮವು ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ೧೮ನೆಯ ಶತಮಾನಕ್ಕೆ ಸಂಬಂಧಿಸಿದ ಕೋಟೆ ಮತ್ತು ಅರಮನೆ ಹಾಗೂ ರಕ್ಷಣಾ ಸಂಬಂಧಿ ಹಲವು ಕಟ್ಟಡಗಳಿವೆ. ಇಲ್ಲಿಯ ಕೋಟೆಯು ಗ್ರಾಮದ ಸುತ್ತಲು ಆವರಿಸಿಕೊಂಡಿದೆ.[೮೯] ನೈರುತ್ಯ ದಿಕ್ಕಿನಲ್ಲಿ ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿ ಕೋಟೆಯ ಪ್ರವೇಶ ದ್ವಾರವಿದೆ. ಅದರಲ್ಲಿ ಒಂದು ಕೊತ್ತಳವು ಸಂಪೂರ್ಣವಾಗಿ ನೆಲ ಸಮವಾಗಿದ್ದು, ಒಂದು ಕೊತ್ತಳವು ಮಾತ್ರ ಉಳಿದುಕೊಂಡಿದೆ. ವೃತ್ತಾಕಾರದಲ್ಲಿರುವ ಈ ಕೊತ್ತಳದ ತಳಭಾಗದಲ್ಲಿ ೧೦ ಅಡಿಯವರೆಗೆ ಕಲ್ಲಿನಲ್ಲಿ ನಿರ್ಮಿಸಿದ್ದು, ಅದರ ಮೇಲೆ ಸುಮಾರು ೧೫ ಅಡಿ ಎತ್ತರದವರೆಗೆ ಮಣ್ಣಿನಲ್ಲಿ

ನಿರ್ಮಿಸಲಾಗಿದೆ. ಈ ಎರಡು ಕೊತ್ತಳಗಳಿಗೆ ಅಂಟಿಕೊಂಡಿರುವಂತೆ ಗ್ರಾಮದ ಸುತ್ತಲು ಕೋಟೆಯನ್ನು ನಿರ್ಮಿಸಲಾಗಿದೆ. ಪ್ರಸ್ತುತವಾಗಿ ಕೋಟೆ ಗೋಡೆಯು ಅಲ್ಲಲ್ಲಿ ಮಾತ್ರ ಉಳಿದು ಕೊಂಡಿದೆ. ಕೋಟೆಯ ಮಧ್ಯದಲ್ಲಿ ಅವಶ್ಯವಿರುವ ಕಡೆಯಲ್ಲಿ ಕೊತ್ತಳಗಳನ್ನು ರಚಿಸಲಾಗಿದೆ. ಅವುಗಳಲ್ಲಿ ಕೆಲವು ಕೊತ್ತಳಗಳು ಮಾತ್ರ ಉಳಿದು ಕೊಂಡಿವೆ. ಗ್ರಾಮದ ಈಶಾನ್ಯ ಭಾಗದಲ್ಲಿ ಒಂದು ಕೊತ್ತಳವಿದೆ. ಅದರ ಮೇಲಿನ ಭಾಗವು ನಾಶಹೊಂದಿದ್ದು, ಕೆಳಹಂತ ಮಾತ್ರ ಉಳಿದು ಕೊಂಡಿದೆ. ಈ ಭಾಗದಲ್ಲಿ ಕೋಟೆಗೆ ಮತ್ತೊಂದು ಪ್ರವೇಶದ್ವಾರ ಇದ್ದಿರಬಹುದು. ಏಕೆಂದರೆ ಅಲ್ಲಿಗೆ ಕೋಟೆ ಗೋಡೆಯು ಮುಕ್ತಾಯಗೊಳ್ಳುತ್ತದೆ. ಗ್ರಾಮದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಕೋಟೆಯು ಸಂಪೂರ್ಣವಾಗಿ ಅವನತಿ ಹೊಂದಿದ್ದು, ಅದರ ಮೇಲೆ ಮನೆಗಳನ್ನು ನಿರ್ಮಿಸಲಾಗಿದೆ. ಮುಂದಿನ ಕೆಲವು ಭಾಗಗಳಲ್ಲಿ ಕೋಟೆಯ ಎತ್ತರವಾದ ಗೋಡೆಯು ಕಂಡು ಬರುತ್ತದೆ. ಇದು ಮಣ್ಣಿನ ಕೋಟೆಯಾಗಿರುವುದಿಂದ ಆದಷ್ಟು ಬೇಗನೆ ಅವನತಿ ಹೊಂದುತ್ತದೆ. ಇಲ್ಲಿಯ ಫಲವತ್ತಾದ ಮಣ್ಣು ಸ್ಥಳಿಯರು ಮನೆಗಳ ನಿರ್ಮಾಣಕ್ಕೆ ಬಳಸುತ್ತಾರೆ. ಅಲ್ಲದೆ ಕೆಲವು ಭಾಗಗಳಲ್ಲಿಯ ಸಂಪೂರ್ಣ ಮಣ್ಣನ್ನು ರೈತರು ತಮ್ಮ ಹೊಲಗಳಿಗೆ ಹಾಕುತ್ತಿದ್ದಾರೆ. ಈ ರೀತಿಯಾಗಿ ಕೋಟೆಯ ಬಹು ಭಾಗವು ಅವನತಿ ಹೊಂದುತ್ತಲಿದೆ. ಅದರಲ್ಲಿ ಕಾವಲುಗೋಪುರಗಳು ಸಂಪೂರ್ಣವಾಗಿ ಮಣ್ಣಿನಿಂದ ಕೂಡಿರುತ್ತವೆ. ಆದ್ದರಿಂದ ಇದರ ಮಣ್ಣನ್ನು ರೈತರು ತಮ್ಮ ಹೊಲಗಳಿಗೆ ಬಳಸುತ್ತಾರೆ.

ಕಾಕಲ್‌ವಾರ ದೇಸಾಯಿಗಳು ಈ ಭಾಗದಲ್ಲಿ ಹಲವು ಕೋಟೆಗಳನ್ನು ನಿರ್ಮಿಸಿದ್ದಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ಇಟಕಲ್, ಪುಟ್‌ಘಾಗ್, ಚಂದ್ರಕಿ, ಗುರುಮಿಟಕಲ್ ಗಾಜರಕೋಟೆ ಮುಂತಾದವುಗಳು. ಆದರೆ ಅವರ ಕೇಂದ್ರ ಸ್ಥಳವಾದ ಕಾಕಲ್‌ವಾರ್‌ನಲ್ಲಿ ದೇಸಾಯಿಗಳ ಅರಮನೆ ಇದೆ. ಸುರಪುರದ ನಾಯಕರ ಸಾಮಂತರಾದ ಕಾಕಲ್‌ವಾರ ದೇಸಾಯಿಗಳು ಈ ಭಾಗದಲ್ಲಿ ತಮ್ಮದೆಯಾದ ಪ್ರಭುತ್ವವನ್ನು ಸ್ಥಾಪಿಸಿದರು. ಅವರಂತೆ ತಮ್ಮ ಅಂತಸ್ತಿಗೆ ತಕ್ಕಂತೆ ಇವರು ಅರಮನೆಯನ್ನು ನಿರ್ಮಿಸಿಕೊಂಡರು. ಗ್ರಾಮದ ನೈರುತ್ಯ ಭಾಗದಲ್ಲಿರುವ ಅವರ ಅರಮನೆಯ ಸುತ್ತಲು ಒಂದು ಕೋಟೆಯನ್ನು ನಿರ್ಮಿಸಲಾಗಿದೆ. ಸುಮಾರು ೩೦೦ ಮೀಟರ ಉದ್ದ ೩೫೦ ಮೀಟರ ಅಗಲವಾಗಿರುವ ಪ್ರದೇಶದಲ್ಲಿ ಸುತ್ತಲು ಕೋಟೆಯನ್ನು ನಿರ್ಮಿಸಲಾಗಿದೆ. ಇದರ ಪ್ರವೇಶ ದ್ವಾರದ ರಚನೆಯಿಂದ ಇದು ಕೋಟೆಯಂತೆ ಕಂಡು ಬರುವುದಿಲ್ಲ. ಆದರೆ ಇದರ ಹಿಂಭಾಗದಲ್ಲಿ ಮತ್ತು ಉತ್ತರದ ಹಾಗೂ ದಕ್ಷಿಣ ಭಾಗದಲ್ಲಿ ಕೋಟೆಯ ಗೋಡೆಯ ರಚನೆ ಕಂಡು ಬರುತ್ತದೆ. ಅರಮನೆಯು ಕೋಟೆಯಿಂದ ಆವೃತ್ತವಾಗಿದೆ. ಅರಮನೆಯ ಸುತ್ತಲಿನ ಕಾವಲುಗೋಪುರಗಳ ಮೇಲೆ ತೋಪುಗಳನ್ನು ನಿಲ್ಲಿಸಲಾಗಿದೆ. ಪ್ರಸ್ತುತವಾಗಿ ಅರಮನೆಯ ಮುಂಭಾಗದಲ್ಲಿ ೧೦ ಅಡಿ ಉದ್ದನೆಯ ತೋಪನ್ನು ಇಡಲಾಗಿದೆ.

ಅರಮನೆಯ ಮುಂಭಾಗದಲ್ಲಿ ಸರಳವಾದ ಕಮಾನಿನ ಆಕಾರದ ಪ್ರವೇಶ ದ್ವಾರವಿದೆ. ಇದರ ಒಳಗಡೆ ಕಾವಲುಗಾರರಿಗೆ ವಿಶೇಷ ಸ್ಥಳವಿದೆ. ಅರಮನೆಯ ಪ್ರವೇಶ ದ್ವಾರದ ಬಲಬದಿಯಲ್ಲಿ

ಕಾವಲುಗಾರರಿಗೆ ಮೂರು ಕಮಾನುಗಳ ರಕ್ಷಣಾ ಸ್ಥಳಗಳಿವೆ. ಇಲ್ಲಿಯ ಸೈನಿಕರು ದ್ವಾರವನ್ನು ಹೊರಭಾಗದಿಂದ ರಕ್ಷಣೆ ಮಾಡುತ್ತಿದ್ದರು. ಇಲ್ಲಿಂದ ಒಳಗಡೆ ಪ್ರವೇಶಿಸಲು ಯಾವುದೆ ಗುಪ್ತ ಮಾರ್ಗಗಳು ಇರುವುದಿಲ್ಲ. ಸುಮಾರು ೬ ಅಡಿ ಅಗಲ ೮ ಅಡಿ ಎತ್ತರದ ಕಮಾನುಗಳಲ್ಲಿ ೧೦೦ ರಿಂದ ೧೫೦ ಜನ ಕಾವಲುಗಾರರು ನೆಲೆ ನಿಲ್ಲಿಸಬಹುದಾಗಿದೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ಮೂರು ಅಂಕಣಗಳ ವೀಕ್ಷಣಾ ರಂಧ್ರಗಳಿವೆ. ಇಲ್ಲಿಂದ ಕಾವಲುಗಾರರು ಕೋಟೆಯ ಹೊರಭಾಗದಲ್ಲಿ ನಡೆಯುವ ಚಟುವಟಿಕೆಗಳನ್ನು ವೀಕ್ಷಿಸಲು ಅನುಕೂಲವಾಗುತ್ತದೆ.

ದರ್ಬಾರ್ ಹಾಲ್‌ನ ಮೊದಲನೆಯ ಅಂತಸ್ತಿನಲ್ಲಿ ಹೆಚ್ಚಿನ ಸಂಖ್ಯೆಯ ಕೊಠಡಿಗಳಿರುವುದಿಲ್ಲ. ಅದನ್ನು ಸಂಪೂರ್ಣವಾಗಿ ಖಾಲಿ ಇಡಲಾಗಿದೆ. ಇದರ ಒಂದು ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ದೇಶಮುಖರು ಅರಮನೆಯಿಂದ ನೇರವಾಗಿ ಇಲ್ಲಿಗೆ ಪ್ರವೇಶಿಸುತ್ತಿದ್ದರು. ಇತರರು ಬರಲು ಬೇರೆ ಮಾರ್ಗಗಳಿವೆ. ಅರಸರು ಕುಳಿತುಕೊಳ್ಳಲು ವಿಶೇಷ ಸ್ಥಳವಿದೆ. ಇದನ್ನು ಕಟ್ಟಿಗೆಯಲ್ಲಿ ಸಿಂಹಾಸನದಂತೆ ರಚಿಸಲಾಗಿದೆ. ಸಂಪೂರ್ಣವಾಗಿ ಕಟ್ಟಿಗೆಯಿಂದ ನಿರ್ಮಿಸಿರುವ ಇದರ ಮೇಲೆ ಬಣ್ಣದ ಅಲಂಕಾರವಿದೆ. ಅಲ್ಲಿದೆ ಕೆಳಭಾಗದಲ್ಲಿ ಕೇಂದ್ರದಲ್ಲಿ ಗಂಡಭೇರುಂಡ ಹಾಗೂ ಎರಡು ಬದಿಯಲ್ಲಿ ಎರಡು ಕುದುರೆಯ ಚಿತ್ರಗಳಿವೆ. ಇದು ಸುರುಪುರ ನಾಯಕರ ಲಾಂಛನವನ್ನು ಹೋಲುತ್ತದೆ. ಇದರ ಕಂಬಗಳು ಸುಂದರವಾದ ಕೆತ್ತನೆಯಿಂದ ಕೂಡಿರುತ್ತವೆ. ಮುಂಭಾಗದಲ್ಲಿ ಹಾಗೂ ಬಲ ಬದಿಯಲ್ಲಿ ಅಧಿಕಾರಿಗಳಿಗೆ ಕೂಡಲು ಸ್ಥಳವಿದೆ.

ದರ್ಬಾರ್ ಹಾಲ್‌ನ ಕೇಂದ್ರ ಭಾಗದಲ್ಲಿ ಸುಮಾರು ೨೫ ಅಡಿ ಎತ್ತರದ ಆರು ಕಟ್ಟಿಗೆಯ ಕಂಬಗಳಿವೆ. ಮೈಸೂರು ಅರಮನೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಟ್ಟಿಗೆಯ ಅಲಂಕಾರವನ್ನು ಮಾಡಿರುವಂತೆ ಈ ಅರಮನೆಯಲ್ಲಿ ಕಟ್ಟಿಗೆಯನ್ನು ಬಳಸಲಾಗಿದೆ. ಈ ರೀತಿಯ ಇನ್ನೂ ಕೆಲವು ಕಂಬಗಳು ಇಲ್ಲಿಂದ ಬೇರೆ ಕಡೆಗೆ ಸ್ಥಳಾಂತರಿಸಲಾಗಿದೆ. ಇಲ್ಲಿ ಬಳಸಿರುವ ಪ್ರತಿಯೊಂದು ಕಟ್ಟಿಗೆಯ ಕಂಬವು ಅತ್ಯಂತ ಅಲಂಕಾರದಿಂದ ಕೂಡಿದೆ. ಆದರೆ ಪ್ರಸ್ತುತ ಈ ದರ್ಬಾರ್ ಹಾಲ್ ಅವನತಿಯ ಹಂತದಲ್ಲಿದೆ. ಅದರ ಎರಡು ಕಂಬಗಳು ಹಾಗೂ ಒಂದು ಬದಿಯ ಮೆಟ್ಟಿಲು ಮತ್ತು ಹಲವು ಕೋಣೆಯ ಮೇಲ್ಛಾವಣಿಯು ಸಂಪೂರ್ಣವಾಗಿ ಅವನತಿ ಹಂತದಲ್ಲಿದೆ. ಪ್ರಸ್ತುತ ಈ ಅರಮನೆಯ ಸಭಾಭವನ ದನಕರುಗಳನ್ನು ಕಟ್ಟಲು ಬಳಸಲಾಗುತ್ತಿದೆ. ಇದನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಇದರ ಒಳಗಡೆ ಪ್ರವೇಶವು ಸಹ ಕಷ್ಟಕರವಾಗಿದೆ, ಇದೆ ನಿರ್ಲಕ್ಷ್ಯ ಮುಂದುವರೆದರೆ ಇನ್ನೂ ಕೆಲವು ದಶಕಗಳಲ್ಲಿ ಸಂಪೂರ್ಣವಾಗಿ ನಾಶಹೊಂದುತ್ತದೆ.

ಅರಮನೆಯು ಎರಡು ಅಂತಸ್ತಿನಲ್ಲಿದ್ದು, ಕೆಳಹಂತದ ಕಟ್ಟಡ ಕಲ್ಲಿನಲ್ಲಿ ನಿರ್ಮಿಸಿದ್ದು, ಮೇಲಿನ ಅಂತಸ್ತಿಗೆ ಇಟ್ಟಿಗೆಯನ್ನು ಬಳಸಲಾಗಿದೆ. ಇದರ ಕೇಂದ್ರ ಭಾಗ ಮೂರು ಅಂತಸ್ತಿನಿಂದ ಕೂಡಿದೆ.

[illegible]

ದ್ವಾರದ ಒಳಗಡೆ ಸುಮಾರು ನೂರು ಮೀಟರ ಅಂತರದಲ್ಲಿ ದೇಶಮುಖರ ವಾಸದ ಮನೆ ಹಾಗೂ ಅವರ ಖಾಸಗಿ ಹಾಲ್ ಇದೆ. ವಾಸದ ಮನೆಯು ಸಹ ಎರಡು ಅಂತಸ್ತಿನಿಂದ ಕೂಡಿದೆ. ಒಳಗಡೆ ಹಲವು ಬೃಹತ್ ಕೋಣೆಗಳಿವೆ. ಈ ಎರಡು ಕಟ್ಟಡಗಳಲ್ಲಿ ಕಟ್ಟಿಗೆಯ ಅಲಂಕಾರವು ಅತ್ಯಂತ ಪ್ರಮುಖವಾಗಿದೆ. ಇಂದಿಗೂ ಸಹ ಅವರ ವಂಶಸ್ಥರು ಇದರಲ್ಲಿ ವಾಸವಾಗಿದ್ದಾರೆ. ಇದರ ಮುಂಭಾಗದಲ್ಲಿ ದೇಶಮುಖರು ಬಳಸಿರುವ ಹಲವು ಕೃಷಿಯ ವಸ್ತುಗಳು, ರಕ್ಷಣಾ ಸಂಬಂಧಿ ವಸ್ತುಗಳು ಹಾಗೂ ಇನ್ನಿತರ ವಸ್ತುಗಳನ್ನು ಇಡಲಾಗಿದೆ.

ಅರಮನೆಯ ಪಕ್ಕದಲ್ಲಿ ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಮೂರು ಅಂತಸ್ತಿನ ಮತ್ತೊಂದು ದರ್ಬಾರ ಹಾಲ್ ಇದೆ. ಇದರ ಒಳಭಾಗ ಸಂಪೂರ್ಣವಾಗಿ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಅದರಲ್ಲಿ ಆಮಂತ್ರಿತರಿಗೆ, ಅಥಿತಿಗಳಿಗೆ ಹಾಗೂ ಅಧಿಕಾರಿಗಳಿಗೆ ಪ್ರತ್ಯೇಕ ಕೋಣೆಗಳಿವೆ. ದರ್ಬಾರಿನ ಪ್ರಾರಂಭದಲ್ಲಿ ಎಲ್ಲರು ಹಾಜರಿದ್ದು, ತಮ್ಮ ಸ್ಥಾನವನ್ನು ಅಲಂಕರಿಸಿಕೊಳ್ಳುತ್ತಿದ್ದರು. ಇದರಲ್ಲಿ ಪ್ರಮುಖವಾಗಿ ರಾಜಕೀಯ ಹಾಗೂ ರಾಜಕಿಯೇತರ ವಿಷಯಗಳ ಕುರಿತು ಚರ್ಚೆ ನಡೆಯುತ್ತಿತ್ತು. ಇಲ್ಲಿಯ ನ್ಯಾಯಾಂಗ ವ್ಯವಸ್ಥೆಯು ವಿಶೇಷತೆಯಿಂದ ಕೂಡಿದೆ. ಅಪರಾಧಿಗಳನ್ನು ಸಭೆಯಲ್ಲಿ ನಿಲ್ಲಿಸಿ ಆತನ ಅಪರಾಧಗಳ ಕುರಿತು ಚರ್ಚಿಸಿ, ಆತನು ಅಪರಾಧಿ ಎಂದು ಸಾಬಿತಾದರೆ ಆತನನ್ನು ಅಲ್ಲೆ ಕಠಿಣ ಶಿಕ್ಷೆಗೆ ಗುರಿ ಪಡಿಸಲಾಗುತ್ತಿತ್ತು. ಕೆಲವು ಸಮಯದಲ್ಲಿ ಅಪರಾಧಿಗಳನ್ನು ಕುದಿಯುವ ಎಣ್ಣೆಯ ಮೇಲೆ ತೂಗಿ ಹಾಕುತ್ತಿದ್ದರು. ಇದಕ್ಕೆ ಸಂಬಂಧಿಸಿದಂತೆ ಹಲವು ಅವಶೇಷಗಳು ದರ್ಬಾರ್ ಹಾಲ್‌ನಲ್ಲಿ ಲಭ್ಯವಾಗುತ್ತವೆ.

ದರ್ಬಾರಹಾಲ್‌ನ ಎರಡನೆಯ ಮತ್ತು ಮೂರನೆಯ ಅಂತಸ್ತಿನಲ್ಲಿ ಹಲವು ಕೊಠಡಿಗಳಿವೆ. ಇಲ್ಲಿಯ ಪ್ರತಿಯೊಂದು ಕೊಠಡಿಯು ಎಲ್ಲಾ ಸೌಲಭ್ಯಗಳನ್ನು ಹೊಂದಿವೆ. ಈ ಕಟ್ಟಡಗಳ ರಚನೆಗೆ ಗಾರೆಯನ್ನು ಬಳಲಸಾಗಿದೆ. ಅಲ್ಲಿಯ ಒಂದು ಕೊಠಡಿಯಲ್ಲಿ ಕಾಕಲ್‌ವಾರ್ ದೇಶಮುಖರಾದ ಅಪ್ಪಿಪ್ಪ್ರಾ ರಾಜರ (ದೇಶಮುಖ್) ತೈಲವರ್ಣದ ಭಾವ ಚಿತ್ರವನ್ನು ಚಿತ್ರಿಸಲಾಗಿದೆ. ಮೂಲ ಚಿತ್ರಣವನ್ನು ಇಲ್ಲಿ ಹಾಗೆ ಕಾಪಾಡಿಕೊಂಡು ಬರಲಾಗಿದೆ[೯೦]. ಕೊನೆಯ ಅಂತಸ್ಥಿನ ಕಟ್ಟಡವು ಪ್ರಮುಖದ್ವಾರದ ಕಡೆಗೆ ಮೂರು ಕಮಾನುಗಳಿಂದ ಕೂಡಿದ್ದು ಒಳಗಡೆ ಅತ್ಯಂತ ಅಲಂಕೃತವಾಗಿದೆ. ಇದರ ನಿರ್ಮಾಣಕ್ಕೆ ಸಂಪೂರ್ಣವಾಗಿ ಇಟ್ಟಿಗೆ ಹಾಗೂ ಗಾರೆಯನ್ನು ಬಳಸಲಾಗಿದೆ. ಆದರೆ ಇದರ ಮೇಲ್ಭಾಗವು ಕುಸಿದು ಬಿದ್ದು, ಅದರ ಎರಡು ಕಡೆಯ ದ್ವಾರಗಳು ನಾಶಗೊಂಡಿವೆ. ಈ ರೀತಿ ದೇಶಮುಖರ ದರ್ಬಾರ ಹಾಲ್ (ಸಭಾಭವನ) ಅತ್ಯಂತ ಸುಸಜ್ಜಿತವಾಗಿದ್ದು ಅವಶ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹೊಂದಿದೆ. ಈ ಕಟ್ಟಡದ ಹೊರ ಭಾಗದ ಅಲಂಕಾರಕ್ಕೆ ವಿಶೇಷ ಗಮನ ಹರಿಸಲಾಗಿದೆ. ಇಲ್ಲಿಯ ಪ್ರತಿಯೊಂದು ಕಿಟಕಿಯು ತುಂಬಾ ಅಲಂಕಾರದಿಂದ ಕೂಡಿದೆ. ಇದರ ರಚನೆಗೆ ಇಟ್ಟಿಗೆ, ಗಾರೆ ಹಾಗೂ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಸುರಪೂರ ಅರಮನೆಯ ಕಿಟಕಿಯಂತೆ ಇವುಗಳನ್ನು ಸಹ ಅಲಂಕೃತವಾಗಿ ನಿರ್ಮಿಸಲಾಗಿದೆ.

ಹೊರಭಾಗದ ಗೋಡೆಯ ಮೇಲೆ ಗಾರೆಯನ್ನು ಬಳಸಲಾಗಿದೆ. ಗಾರೆಯ ಮೇಲೆ ಹಲವು ಬಗೆಯ ಅಲಂಕಾರ ರೇಖಾ ಚಿತ್ರಗಳು ಕಂಡು ಬರುತ್ತವೆ. ಈ ರೀತಿ ಕಾಕಲ್‌ವಾರ ದೇಶಮುಖರ ಅರಮನೆಯು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಅರಮನೆಗಳಲ್ಲಿಯೇ ಅತ್ಯಂತ ಪ್ರಮುಖವಾಗಿದೆ. ಇಲ್ಲಿಯ ಇನ್ನೂ ಕೆಲವು ಕಟ್ಟಡಗಳು ಅವನತಿ ಹೊಂದಿವೆ. ಆದ್ದರಿಂದ ಅವುಗಳ ಕುರಿತು ಮಾಹಿತಿ ನೀಡುವ ಕಷ್ಟಕರವಾಗಿದೆ.

ಅರಮನೆಯ ಮುಂಭಾಗದಲ್ಲಿ ೨೦x೨೦ ಆಕಾರದಲ್ಲಿ ಎರಡು ಅಂತಸ್ತಿನ ವಿಶೇಷ ಕಟ್ಟಡವನ್ನು ನಿರ್ಮಿಸಲಾಗಿದೆ. ಇದರ ಪ್ರವೇಶ ದ್ವಾರವು ಕಮಾನಿನ ಆಕೃತಿಯಲ್ಲಿದ್ದು ಕೇಂದ್ರ ಭಾಗದಲ್ಲಿ ಕಟ್ಟಿಗೆಯ ದ್ವಾರವಿದೆ. ಮೇಲಿನ ಅಂತಸ್ತಿನಲ್ಲಿ ವಿಶಾಲವಾದ ಸ್ಥಳವಿದೆ, ಅದರ ಎರಡು ಬದಿಯಲ್ಲಿ ೮x೧೨ ಅಡಿ ಅಗಲ ಮತ್ತು ಎತ್ತರದಲ್ಲಿ ಸುಂದರವಾದ ಗಾರೆಯ ಅಲಂಕಾರವಿದೆ. ಜಾಲಿಯಂತೆ ಕಂಡು ಬರುವ ಈ ಅಲಂಕಾರವು ಅತ್ಯಂತ ಪ್ರಮುಖವಾಗಿದೆ. ಇದರ ಮೇಲ್ಭಾಗದ ಕೇಂದ್ರದಲ್ಲಿ ಒಂದು ಗಡಿಯಾರವನ್ನು ಹಾಕಲಾಗಿದೆ. ಬ್ರಿಟಿಷರು ಒಂದು ಗಡಿಯಾರವನ್ನು ದೇಶಮುಖರಿಗೆ ಕಾಣಿಕೆಯಾಗಿ ನೀಡಿದ್ದರು, ಅದನ್ನು ಈ ರೀತಿ ಅಲಂಕೃತ ಕಟ್ಟಡ ಮೇಲ್ಭಾಗದಲ್ಲಿ ಇಡಲಾಗಿತ್ತೆಂದು ಸ್ಥಳಿಯರು ಹೇಳುತ್ತಾರೆ. ಕಟ್ಟಡವನ್ನು ಸಂಪೂರ್ಣವಾಗಿ ವೀಕ್ಷಿಸಿದಾಗ ಅದರ ಉದ್ದೇಶ ಸ್ಪಷ್ಟವಾಗಿ ಕಂಡು ಬರುತ್ತದೆ. ಗಡಿಯಾರಕ್ಕೆ ಕೇಂದ್ರದಲ್ಲಿ ಸ್ಥಳ ಬಿಡಲಾಗಿದೆ. ಅರಸು ಪರಿವಾರದವರಿಗೆ, ಅಧಿಕಾರಿ ವರ್ಗದವರಿಗೆ ಸಮಯ ತಿಳಿಯಲೆಂದು ಎಲ್ಲರಿಗೂ ಕಾಣುವಂತೆ ಅತ್ಯಂತ ಎತ್ತರವಾದ ಸ್ಥಳದಲ್ಲಿ ಗಡಿಯಾರವನ್ನು ಹಾಕಲಾಗಿತ್ತು.

ಅರಮನೆಯ ಸುತ್ತಲೂ ಇರುವ ಕೋಟೆಗೆ ನಾಲ್ಕು ಕಾವಲುಗೋಪುರಗಳಿವೆ. ಅಲ್ಲದೆ ಆವರಣದ ಒಳಭಾಗದಲ್ಲಿ ಎರಡು ಬಾವಿಗಳಿವೆ. ಈ ರೀತಿ ಕಾಕಲ್‌ವಾರದಲ್ಲಿ ರಕ್ಷಣಾ ಸಂಬಂಧಿ ಹಲವು ಕಟ್ಟಡಗಳಿವೆ. ಇವುಗಳ ಕುರಿತು ಸ್ಥಳಿಯರ ಮೌಖಿಕ ವಿವರವನ್ನು ಹೊರತು ಪಡಿಸಿ ನಮಗೆ ಯಾವುದೇ ಲಿಖಿತ ದಾಖಲೆಗಳು ಲಭ್ಯವಾಗುವುದಿಲ್ಲ. ಆದ್ದರಿಂದ ಕ್ಷೇತ್ರ ಅಧ್ಯಯನದ ಮಾಹಿತಿಯನ್ನು ಅವಲಂಬಿಸಿ ಇಲ್ಲಿಯ ಕೋಟೆ, ಅರಮನೆ, ಕಾವಲುಗೋಪುರ ಹಾಗೂ ಇತರ ಕಟ್ಟಡಗಳ ಬಗೆಗೆ ವಿವರಣೆ ನೀಡಲಾಗಿದೆ.

೨೫. ಚಂಡ್ರಕಿ ಕೋಟೆ

ಗುರುಮಿಟಕಲ್‌ದಿಂದ ಪೂರ್ವಕ್ಕೆ ೬ ಕಿ.ಮಿ. ದೂರದಲ್ಲಿರುವ ಈ ಗ್ರಾಮವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಗ್ರಾಮದ ಪೂರ್ವ ಭಾಗಕ್ಕೆ ಅರ್ಧ ಕಿ.ಮಿ. ದೂರದಲ್ಲಿ ಮಣ್ಣಿನಿಂದ ನಿರ್ಮಿಸಿರುವ ಕೋಟೆ ಇದೆ. ಕೋಟೆಗಳ ನಿರ್ಮಾಣಕ್ಕೆ ಹಲವು ಬಗೆಯ ವಸ್ತುಗಳನ್ನು ಬಳಸಲಾಗುತ್ತದೆ. ಆದರೆ ಸ್ಥಳೀಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಿಕೊಂಡು ಕೋಟೆ ನಿರ್ಮಿಸುವುದು ಸಾಮಾನ್ಯವಾಗಿದೆ. ಪ್ರಾಚೀನ ಸಾಹಿತ್ಯಗಳಲ್ಲಿ ಕಟ್ಟಿಗೆಯಕೋಟೆ, ಮಣ್ಣಿನಕೋಟೆ, ಇಟ್ಟಿಗೆಗಳಿಂದ ನಿರ್ಮಿಸಿರುವ ಕೋಟೆ ಮತ್ತು ವಿವಿಧ ಬಗೆಯ ಕಲ್ಲುಗಳನ್ನು ಬಳಸಿ ಕೋಟೆ ನಿರ್ಮಿಸಿರುವ ಉಲ್ಲೇಖವಿದೆ.

ಆದರೆ ಪ್ರಾರಂಭದಲ್ಲಿ ಕಟ್ಟಿಗೆಯ ಕೋಟೆಯನ್ನು ನಿರ್ಮಿಸಲಾಗುತ್ತಿರುವ ವಿಷಯ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಲಾಗಿದೆ. ಮೌರ್ಯರು ಮೊದಲು ಕಟ್ಟಿಗೆಯ ಕೋಟೆಯನ್ನು ನಿರ್ಮಿಸಿದರು. ಆದರೆ ಅದು ಬೆಂಕಿಗೆ ಆಹುತಿಯಾದ್ದರಿಂದ ಮತ್ತೆ ಕಲ್ಲಿನ ಕೋಟೆಯನ್ನು ನಿರ್ಮಿಸಿದರು.

ಶಾತವಾಹನ ಕಾಲದ ಕೋಟೆಗಳು ಇಟ್ಟಿಗೆಯಲ್ಲಿ ನಿರ್ಮಿಸಲಾಗಿದೆ. ಕ್ರಿ.ಪೂ. ೧ ರಿಂದ ೨ನೇ ಶತಮಾನದ ಕೋಟೆಗಳ ನಿರ್ಮಾಣಕ್ಕೆ ಇಟ್ಟಿಗೆಗಳ ಬಳಕೆ ಕಂಡು ಬರುತ್ತದೆ. ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಗೊಟ್ಟಂ ಗೊಟ್ಟಾ ಮತ್ತು ಚಿತ್ತಾಪೂರ ತಾಲೂಕಿನ ಸನ್ನತಿಯಲ್ಲಿ ಇಟ್ಟಿಗೆಯ ಕೋಟೆಗಳಿವೆ. ಇವುಗಳನ್ನು ಹೊರತು ಪಡಿಸಿ, ನಮಗೆ ಯಾದಗಿರ ಸಮೀಪದ ಗುರಮಿಠಕಲ್ ಪ್ರದೇಶದ ಸುತ್ತ ಮುತ್ತಲು ಬರುವ ಹಲವು ಪ್ರದೇಶಗಳಲ್ಲಿ ಮತ್ತು ಸೇಡಂ ತಾಲೂಕಿನ ಕೆಲವು ಭಾಗಗಳಲ್ಲಿ (ಆಂಧ್ರಪ್ರದೇಶದ ಗಡಿ ಭಾಗಗಳಲ್ಲಿ ಬರುವ ನಗರಗಳು) ಮಣ್ಣಿನ ಕೋಟೆಗಳು ಕಂಡು ಬರುತ್ತವೆ. ಈ ಕೋಟೆಗಳು ಕ್ರಿ.ಶ. ೧೭ನೇ ಶತಮಾನದಿಂದ ೧೯ನೇ ಶತಮಾನದಲ್ಲಿ ನಿರ್ಮಾಣಗೊಂಡಿರುವುದರಿಂದ, ಇವುಗಳು ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಗುಲಬರ್ಗಾ ಜಿಲ್ಲೆಯಲ್ಲಿ ಇಟ್ಟಿಗೆ, ಮಣ್ಣಿನ ಮತ್ತು ಕಲ್ಲಿನ ಕೋಟೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಗುರುಮಿಟಕಲ್, ಕಾಕಲವಾರ, ಚಂಡ್ರಕಿ, ಇಟಕಲ್, ಗಾಜರಕೋಟೆ, ಪುಟಪಾಕ್, ಮುದ್ದೋಳ ಮುಂತಾದ ಗ್ರಾಮಗಳಲ್ಲಿ ಮಣ್ಣಿನಲ್ಲಿ ನಿರ್ಮಿಸಿದ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಿವೆ. ಇವುಗಳಲ್ಲಿ ಗುರುಮಿಟಕಲ್, ಚಂಡ್ರಕಿ ಮತ್ತು ಕಾಕಲ್‌ವಾರ ಕೋಟೆಗಳು ಸುಸ್ಥಿತಿಯಲ್ಲಿದ್ದು, ಉಳಿದ ಕೋಟೆಗಳು ಸಂಪೂರ್ಣವಾಗಿ ಅವನತಿ ಹೊಂದಿರುತ್ತವೆ. ನಮಗೆ ಕೋಟೆಯ ಕೆಲವು ಭಾಗಗಳು ಮಾತ್ರ ಗುರುತಿಸಲು ಸಾಧ್ಯವಾಗುತ್ತದೆ. ಇನ್ನು ಕೆಲವು ದಶಕಗಳಲ್ಲಿ ಅವುಗಳು ಸಹ ಸಂಪೂರ್ಣವಾಗಿ ನೆಲಸಮವಾಗಬಹುದು. ಆದ್ದರಿಂದ ಅವುಗಳ ವಿವರ ಮತ್ತು ಛಾಯಾ ಚಿತ್ರಗಳನ್ನು ಈ ಅಧ್ಯಯನದಲ್ಲಿ ನೀಡಲಾಗಿದೆ.

ಪ್ರಸ್ತುತ ಚಂಡ್ರಕಿ ಕೋಟೆಯು ಹೈದ್ರಾಬಾದ ನಿಜಾಮನ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ. ಆತನ ಜಾಗಿರದಾರರು ನಿಜಾಮ ಸಂಸ್ಥಾನದ ಅವನತಿಯ ನಂತರ ಇದನ್ನು ಸ್ಥಳಿಯರಾದ ವಿಠಲರಾವ ತಂದೆ ಭಿಮಶೇನ್‌ರಾವ ಕುಲಕರ್ಣಿಯವರಿಗೆ ವಹಿಸಿಕೊಟ್ಟರು. ಸುಮಾರು ೨೦೦ ವರ್ಷಗಳಿಂದ ಕೋಟೆಯ ಒಳಗಡೆಯ ಭೂಮಿಯನ್ನು ಸಾಗುವಳಿ ಮಾಡಲಾಗಿದೆ. ಕಂದಾಯ ಇಲಾಖೆಯ ದಾಖಲೆಗಳ ಪ್ರಕಾರ ಸ.ನಂ. ೫ ರಲ್ಲಿ ೨೨ ಎಕರೆ ೧೧ ಗುಂಟೆಯ ಭೂಮಿ ಈ ಕೋಟೆಯ ಒಳಗಡೆ ಇದೆ. ಪ್ರಸ್ತುತ ಇದನ್ನು ರಘುನಾಥರಾವ ಕುಲಕರ್ಣಿಯವರ ಒಡೆತನಕ್ಕೆ ಸಂಬಂಧಿಸಿದೆ[೧]. ಇದರಲ್ಲಿ ಬತ್ತ, ತೊಗರಿ ಮತ್ತು ಇತರ ಬೆಳೆಗಳನ್ನು ಬೆಳೆಯುತ್ತಾರೆ. ಈ ಕೋಟೆಯು ಕಾಕಲವಾರ ಸಂಸ್ಥಾನದ ಲಕ್ಷ್ಮಣಪ್ಪ ದೊರೆಗಳ ಆಧೀನದಲ್ಲಿತ್ತು. ಕೋಟೆಯ ಒಳಭಾಗದಲ್ಲಿ ಸೇನಾ ಪಡೆಗಳ ನಾಯಕರ ವಸತಿ ನಿಲಯಗಳಿದ್ದವು. ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯವಾದ ನಂತರ ಇಲ್ಲಿಯ ಎತ್ತರ ಮರಗಳನ್ನು ಕಡೆದು ಕೋಟೆಯ

ಒಳಭಾಗವನ್ನು ಸ್ವಚ್ಛಗೊಳಿಸಿ, ಅದರ ಭೂಮಿಯನ್ನು ಸಾಗುವಳಿ ಮಾಡಲಾಯಿತು. ಈ ಕೋಟೆಯ ಒಳಭಾಗದಲ್ಲಿ ಹಲವು ಬಗೆಯ ರಕ್ಷಣಾ ಸಂಬಂಧಿ ಕಟ್ಟಡಗಳು ನೆಲಸಮವಾಗಿವೆ.

ಪ್ರಸ್ತುತ ಈ ಕೋಟೆಯು ಹೊಲಕ್ಕೆ ಬೇಲಿಯಂತೆ ಕಾರ್ಯನಿರ್ವಹಿಸುತ್ತದೆ. ಇದು ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರಕ್ಕೆ ಒಳಪಡದೆ, ಸಂಪೂರ್ಣವಾಗಿ ಈ ಕೋಟೆಯು ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಕಾಕಲ್‌ವಾರ ಕೋಟೆಯನ್ನು ಹೊರತು ಪಡಿಸಿ ಈ ಭಾಗದ ಎಲ್ಲಾ ಕೋಟೆಗಳು ನಿರ್ಲಕ್ಷಕ್ಕೆ ಒಳಗಾಗಿವೆ. ಗುರುಮಿಟಕಲ್ ಕೋಟೆಯು ಗ್ರಾಮದ ಕೇಂದ್ರ ಭಾಗದಲ್ಲಿದ್ದರೂ, ಅದಕ್ಕೆ ರಕ್ಷಣೆ ಇಲ್ಲ[೯೨].

ಚಂಡ್ರಕಿ ಕೋಟೆಗೆ ಪೂರ್ವ ದಿಕ್ಕಿನಲ್ಲಿ ಒಂದು ಪ್ರಮುಖ ದ್ವಾರವಿದೆ. ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ದಿಡ್ಡಿ ಬಾಗಿಲುಗಳಿವೆ. ಪ್ರಮುಖ ದ್ವಾರದ ಮುಂಭಾಗದಲ್ಲಿ ಅರ್ಧವೃತ್ತಾಕಾರದ ವಿಶಾಲವಾದ ತಡೆಗೋಡೆಯನ್ನು ನಿರ್ಮಿಸಲಾಗಿದ್ದು. ಅದರ ಒಳಭಾಗದಲ್ಲಿ ವಿಶಾಲವಾದ ಸ್ಥಳವಿದೆ. ಹೊರಗಿನಿಂದ ನೋಡಿದರೆ ಇದು ಒಂದು ಕೊತ್ತಳದಂತೆ ಕಂಡು ಬರುತ್ತದೆ. ದಕ್ಷಿಣ (ಆಗ್ನೇ) ದಿಕ್ಕಿನಲ್ಲಿ ಕೋಟೆಗೆ ಪ್ರವೇಶದ ಮಾರ್ಗವಿದೆ. ತಡೆಗೋಡೆಯ ಒಳಭಾಗ ಮತ್ತು ಹೊರಭಾಗದಲ್ಲಿ ಅಗಲವಾದ ಕಂದಕವಿದೆ. ತಡೆಗೋಡೆಯ ರಕ್ಷಣೆಗಾಗಿ ಈ ಕಂದಕವನ್ನು ನಿರ್ಮಿಸಲಾಗಿದೆ. ಗುಲಬರ್ಗಾ ಜಿಲ್ಲೆಯ ಕೆಲವು ಕೋಟೆಯ ಮುಂಭಾಗದಲ್ಲಿ ತಡೆಗೋಡೆಗಳಿವೆ. ಆದರೆ ಅದರ ರಕ್ಷಣೆಗಾಗಿ ಕಂದಕದ ವ್ಯವಸ್ಥೆಯು ಕಂಡು ಬರುವುದಿಲ್ಲ. ಚಂಡ್ರಕಿ ಕೋಟೆಯಲ್ಲಿ ಮಾತ್ರ ಈ ರೀತಿ ವಿಶೇಷ ರಕ್ಷಣಾ ಗೋಡೆಯಿದೆ. ಇದರ ತಳಭಾಗವು ೮ ರಿಂದ ೧೦ ಅಡಿಯವರೆಗೆ ಕಲ್ಲಿನಲ್ಲಿ ನಿರ್ಮಿಸಿ, ಅದರ ಮೇಲೆ ೫ ರಿಂದ ೮ ಅಡಿ ಮಣ್ಣಿನ ಗೋಡೆ ಹಾಗೂ ಮೇಲ್ಭಾಗದಲ್ಲಿ ತೆನೆಗಳಿವೆ. ತಡೆಗೋಡೆಯ ಉತ್ತರ ಭಾಗದಲ್ಲಿ ದೇವಾಲಯದ ಅವಶೇಷಗಳು ಮತ್ತು ಕಾವಲುಗಾರರ ನಿವೇಶಗಳಿವೆ. ಆದರೆ ಇವುಗಳ ಸಂಪೂರ್ಣವಾಗಿ ಅವನತಿ ಹೊಂದಿದ್ದು, ಕೇವಲ ನಾಗ, ಗಣಪತಿ, ಹನುಮಂತ (ಆಂಜನೆಯ)ನ ಮೂರ್ತಿ ಶಿಲ್ಪಗಳು ಉಳಿದಿವೆ. ದ್ವಾರದ ರಕ್ಷಣೆಗಾಗಿ ದೇವರು ಕೃಪೆ ಅವಶ್ಯವೆಂದು ಅರಿತ ಅರಸರು ಇಲ್ಲಿ ದೇವಾಲಯವನ್ನು ನಿರ್ಮಿಸಿದರು. ಅಲ್ಲದೆ ಇಲ್ಲಿ ವಿಶೇಷ ಕಾವಲು ಪಡೆಯ ಸಲುವಾಗಿ ಕೆಲವು ಕಟ್ಟಡಗಳಿವೆ.

ಪೂರ್ವಕ್ಕೆ ಮುಖ ಮಾಡಿರುವ ಕೋಟೆಯ ಪ್ರಮುಖ ದ್ವಾರವು ೧೫ ಅಡಿ ಅಗಲ ೨೫ ಅಡಿ ಎತ್ತರವಾಗಿದ್ದು, ಕಮಾನಿನ ಆಕಾರದಲ್ಲಿದೆ. ದ್ವಾರದ ಕಂಬಗಳ ನಿರ್ಮಾಣಕ್ಕೆ ಅಖಂಡ ಶಿಲೆಯನ್ನು ಬಳಸದೆ ಸಣ್ಣ ಸಣ್ಣ ಚೌಕಾಕಾರದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಇದರ ಒಂದು ಬದಿಯಲ್ಲಿ ಕೊತ್ತಳವಿದ್ದು, ಮತ್ತೊಂದು ಬದಿಯಲ್ಲಿ ಕೋಟೆ ಗೋಡೆಯಿದೆ. ಈ ದ್ವಾರದ ಪಕ್ಕದಲ್ಲೊಂದು ಚಿಕ್ಕ ಉಪದ್ವಾರವಿದೆ. (೪x೫) ಒಳಗಡೆ ಎರಡು ಬದಿಯಲ್ಲಿ ದ್ವಾರಪಾಲಕರಿಗೆ ಆಶ್ರಯದ ತಾಣಗಳಿವೆ. ಇದರ ಒಳಭಾಗದಲ್ಲಿ ಮತ್ತೊಂದು ಕಮಾನು ನಿರ್ಮಿಸಲಾಗಿದೆ. ದ್ವಾರದ ಎಡಬದಿಯಲ್ಲಿ ಒಂದು ಉಪದ್ವಾರವಿದೆ. ಮೊದಲನೆಯ ಉಪದ್ವಾರದಿಂದ ಎರಡನೆಯ ಉಪದ್ವಾರಕ್ಕೆ ನೇರವಾದ ಸಂಪರ್ಕವಿದೆ.

ಕೋಟೆಯ ಒಳಗಡೆ ಬಲಬದಿಯಲ್ಲಿ ನೇರವಾಗಿ ಕೆಲವು ಕಟ್ಟದ ಅವಶೇಷಗಳಿವೆ. ಅವುಗಳು ಸಂಪೂರ್ಣವಾಗಿ ನಾಶ ಹೊಂದಿರುವುದರಿಂದ ಅದರ ಬಗ್ಗೆ ನಿರ್ಧಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕೋಟೆಯ ಒಳಗಡೆ ನಾಲ್ಕು ಬಾವಿಗಳು, ದೇವಾಲಯ, ಕಾವಲುಗೋಪುರ ಮತ್ತು ಸಮಾದಿಗಳ ಅವಶೇಷಗಳಿವೆ.

ಚಂದ್ರಕಿ ಕೋಟೆಯು ವೃತ್ತಾಕಾರದಲ್ಲಿದ್ದು, ಸುತ್ತಲು ಸುಮಾರು ೨೫ ಕೊತ್ತಳಗಳಿವೆ. ಪ್ರತಿಯೊಂದು ಕೊತ್ತಳದ ಮಧ್ಯ ೬೦ ರಿಂದ ೧೦೦ ಅಡಿ ಅಂತರವಿದೆ. ಈ ಕೋಟೆಯ ವಿಶೇಷತೆ ಎಂದರೆ ತಳಭಾಗದಲ್ಲಿ ೧೦ ರಿಂದ ೧೫ ಅಡಿಯವರೆಗೆ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದಕ್ಕೆ ಬಳಸಿರುವ ಕಲ್ಲುಗಳು ಮಿಶ್ರ ವರ್ಣದಲ್ಲಿವೆ. ಗೋಡೆಯ ತಳಭಾಗವು ೬ ರಿಂದ ೮ ಅಡಿ ದಪ್ಪವಾಗಿದ್ದು, ಇದರ ಮಧ್ಯದಲ್ಲಿ ಕಲ್ಲು ಮತ್ತು ಮಣ್ಣಿನ ಮಿಶ್ರಣವಿದೆ. ಮೊದಲನೆಯ ಹಂತದ ರಚನೆಗೆ ಕಲ್ಲುಗಳನ್ನು ಬಳಸಲಾಗಿದೆ. ಎರಡನೆಯ ಹಂತದ ರಚನೆಯಲ್ಲಿ ಮಣ್ಣಿನ ಗೋಡೆ ಇದೆ. ಅದರ ಮೇಲೆ ತೆನೆಗಳು ಸಹ ಮಣ್ಣಿನಲ್ಲಿ ರಚಿಸಲಾಗಿದೆ. ಈ ಕೋಟೆಯ ಒಟ್ಟು ವಿಸ್ತಾರ ೩೮ ಎಕರೆ ಪ್ರದೇಶದಲ್ಲಿ ವ್ಯಾಪಸಿಕೊಂಡಿದೆ.

ಕೋಟೆಯ ಗೋಡೆಯ ಎರಡನೆಯ ಹಂತವು ಸಂಪೂರ್ಣವಾಗಿ ಹಾಳು ಮಣ್ಣಿನಿಂದ ಕೂಡಿದೆ. ಬಿಳಿ ವರ್ಣದ ಈ ಮಣ್ಣಿನಲ್ಲಿ ಹೆಚ್ಚಿನ ಗಟ್ಟಿತನವಿದೆ. ಇದನ್ನು ಹಂತ ಹಂತವಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಕಲ್ಲಿನ ನಿರ್ಮಾಣದ ನಂತರ ಅದರ ಮೇಲೆ ೪ ರಿಂದ ೬ ಮಣ್ಣಿನ ಹಂತಗಳಿವೆ. ಪ್ರತಿ ಹಂತವು ೨ ರಿಂದ ೩ ಅಡಿ ಎತ್ತರವಾಗಿದ್ದು ೪ ರಿಂದ ೬ ಅಡಿ ದಪ್ಪವಾಗಿವೆ. ಮೊದಲನೆಯ ಹಂತ ದಪ್ಪವಾಗಿದ್ದು ಮೇಲೆ ಹೋದಂತೆ ಕಿರಿದಾಗುತ್ತದೆ. ಮಣ್ಣನ್ನು ಮೊದಲು ಹದ ಮಾಡಿ ಅದನ್ನು ಚೌಕಾಕಾರದಲ್ಲಿ ಒಂದರ ಮೇಲೊಂದರಂತೆ ಜೋಡಿಸಲಾಗಿದೆ. ಈ ರೀತಿ ಇಡಿ ಕೋಟೆಯ ಸುತ್ತಲು ಮೊದಲನೆಯ ಹಂತವನ್ನು ನಿರ್ಮಿಸಿ ಕೆಲ ದಿನಗಳ ನಂತರ ಎರಡನೆಯ ಹಂತದ ರಚನೆ ಮಾಡಲಾಗುತ್ತಿತ್ತು. ಹೀಗೆ ಎಲ್ಲಾ ಹಂತಗಳನ್ನು ಮುಗಿಸಿದ ಮೇಲೆ ಆದರೆ ಮೇಲೆ ತೆನೆಗಳನ್ನು ರಚಿಸಲಾಗುತ್ತದೆ. ಇಡೀ ಕೋಟೆಯು ಮಣ್ಣಿನಲ್ಲಿ ರಚಿಸಲಾಗಿದೆ.

ಮಣ್ಣಿನ ಗೋಡೆಯಲ್ಲಿ ವೀಕ್ಷಣಾ ರಂದ್ರಗಳು, ಅಂಬು ಗಿಂಡಿಗಳು ಮೇಲಿನಿಂದ ನೀರು ಹರಿದು ಬರಲು ಹಲವು ರಂದ್ರಗಳನ್ನು ಮಾಡಲಾಗಿದೆ. ಕೋಟೆಯ ಹೊರಗೋಡೆಯಲ್ಲಿ ಈ ರಂದ್ರಗಳು ಕಂಡು ಬರುತ್ತವೆ. ಪ್ರತಿಯೊಂದು ಕೊತ್ತಳದ ಸುತ್ತಲು ಇದೆ ಕ್ರಮವನ್ನು ಅಳವಡಿಸಲಾಗಿದೆ. ಕೋಟೆ ಗೋಡೆಯು ಸುಮಾರು ೨೫ ರಿಂದ ೩೦ ಅಡಿ ಎತ್ತರವಾಗಿದ್ದು, ಅದರ ಮೇಲೆ ೪ ರಿಂದ ೬ ಅಡಿ ಎತ್ತರದ ತೆನೆಗಳಿವೆ. ಎಲ್ಲಾ ಭಾಗದ ಗೋಡೆಯು ಸುರಕ್ಷಿತವಾಗಿದೆ. ಆದರೆ ಪಶ್ಚಿಮ ಭಾಗದಲ್ಲಿ ಮಾತ್ರ ಎರಡು ಕೊತ್ತಲಗಳ ಮಧ್ಯದ ಗೋಡೆ ನಾಶ ಹೊಂದಿದೆ. ಮಣ್ಣಿನಲ್ಲಿ ನಿರ್ಮಿಸಿರುವ ಕೋಟೆ ಸುಮಾರು

ಎರಡು ಶತಮಾನಗಳಿಂದ ಮಳೆ, ಗಾಳಿ, ಬಿಸಿಲಿಗೆ ಹಾಳಾಗದೆ, ಉಳಿದುಕೊಂಡಿದೆ. ಆದರೆ ಇನ್ನೂ ಕೆಲವು ದಶಕಗಳ ನಂತರ ಕ್ರಮೇಣವಾಗಿ ಕೋಟೆಯು ನೆಲಸಮವಾಗಬಹುದು ಇದರ ಫಲವತ್ತಾದ ಮಣ್ಣನ್ನು ಸಾಗುವಳಿಗೆ ಬಳಸುತ್ತಿರುವುದರಿಂದ ಕೋಟೆ ನಿರ್ನಾಮ ಹೊಂದುವುದರಲ್ಲಿ ಸಂದೇಹವಿಲ್ಲ.

೨೬. ಗುರುಮಿಠಕಲ್ ಕೋಟೆ:

ಯಾದಗಿರ ತಾಲೂಕು ಕೇಂದ್ರದಿಂದ ಈಶಾನ್ಯ ಭಾಗಕ್ಕೆ ೪೦ ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ. ಕ್ರಿ.ಶ. ೧೧ನೆಯ ಶತಮಾನದಿಂದ ೧೮ನೆಯ ಶತಮಾನಕ್ಕೆ ಸಂಬಂಧಿಸಿದ ಹಲವು ಐತಿಹಾಸಿಕ ಸ್ಮಾರಕಗಳು ಇಲ್ಲಿ ಕಂಡು ಬರುತ್ತವೆ. ಅದರಲ್ಲಿ ವಿಶೇಷವಾಗಿ ಹಿಂದೂ-ಮುಸ್ಲಿಂ ಧರ್ಮಕ್ಕೆ ಸಂಬಂಧಿಸಿದ ಸ್ಮಾರಕಗಳು ಹಾಗೂ ಗ್ರಾಮದ ಕೇಂದ್ರ ಭಾಗದಲ್ಲಿ ೧೮ನೆಯ ಶತಮಾನಕ್ಕೆ ಸಂಬಂಧಿಸಿದ ಮಣ್ಣಿನ ಕೋಟೆಯು ಪ್ರಮುಖವಾಗಿದೆ[೯೩].

ಗುರಮಿಠಕಲ್ ಗ್ರಾಮದ ಪ್ರವೇಶಕ್ಕೆ ಪ್ರಮುಖವಾಗಿ ನಾಲ್ಕು ದ್ವಾರಗಳಿದ್ದವು. ಆದರೆ ಅದರಲ್ಲಿ ಪ್ರಸ್ತುತ ಒಂದು ದ್ವಾರವು ಮಾತ್ರ ಉಳಿದುಕೊಂಡಿದೆ. ಪಶ್ಚಿಮ ಭಾಗಕ್ಕೆ ಮುಖ ಮಾಡಿ ನಿರ್ಮಿಸಿರುವ ಈ ದ್ವಾರವು, ೧೦ ಅಡಿ ಅಗಲ ೧೫ ಅಡಿ ಎತ್ತರವಾದ ಕಮಾನಿನ ಆಕಾರದಲ್ಲಿದೆ. ಇದರ ಒಳಭಾಗದಲ್ಲಿ ಹಾಗೂ ಹೊರಭಾಗದಲ್ಲಿ ಸೈನಿಕರ ವಸತಿ ನಿಲಯಗಳು ಕಂಡು ಬರುವುದಿಲ್ಲ. ಆದರೆ ಇದರ ಎರಡು ಬದಿಯಲ್ಲಿ ಕೋಟೆ ಗೋಡೆಯು ಹೊರಗೆ ಚಾಚಿಕೊಂಡಿದೆ. ಈ ದ್ವಾರವು ಎರಡು ಹಂತದ ಕಮಾನುಗಳನ್ನು ಹೊಂದಿದೆ. ದ್ವಾರದ ಹೊರಭಾಗದಲ್ಲಿ ವಿಶಾಲವಾದ ಭಾವಿಯನ್ನು ಕಟೆದ ಕಲ್ಲಿನಲ್ಲಿ ನಿರ್ಮಿಸಿ, ಇದನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಇದರ ಮಧ್ಯದಲ್ಲಿ ಒಂದು ಬೃಹದಾಕಾರದ ಕಮಾನು ಹಾಗೂ ಅದರ ಮೇಲೆ ಹಲವು ಬಗೆಯ ಶಿಲ್ಪಗಳಿವೆ.

ಗ್ರಾಮದ ಕೇಂದ್ರ ಭಾಗದಲ್ಲಿ ವೃತ್ತಾಕಾರದಲ್ಲಿ ನಿರ್ಮಿಸಿರುವ ಮಣ್ಣಿನ ಕೋಟೆಯಿದೆ[೯೪]. ಇದರ ಅರ್ಧ ಭಾಗವು ಸಂಪೂರ್ಣವಾಗಿ ನಾಶ ಹೊಂದಿದ್ದು, ಇನ್ನೂ ಕೆಲವು ಭಾಗಗಳು ಉಳಿದುಕೊಂಡಿದೆ. ಅತ್ಯಂತ ಉತ್ತಮವಾದ ಈ ಕೋಟೆಯ ರಚನೆಗೆ ತಳಭಾಗದಲ್ಲಿ ೫ ರಿಂದ ೧೦ ಅಡಿ ಎತ್ತರದವರೆಗೆ ಕಲ್ಲನ್ನು ಬಳಸಿ ನಂತರ ೧೦ ರಿಂದ ೧೫ ಅಡಿಯವರೆಗೆ ಎತ್ತರವಾದ ಗೋಡೆಯನ್ನು ಮಣ್ಣಿನಲ್ಲಿ ನಿರ್ಮಿಸಲಾಗಿದೆ. ಇದರ ಸುತ್ತಲು ಹಲವು ಕಾವಲುಗೋಪುರಗಳು ಹಾಗೂ ಬುರುಜಗಳಿವೆ. ಇವುಗಳ ರಚನೆಯಲ್ಲಿಯು ಸಹ ಅದೇ ಶೈಲಿಯನ್ನು ಬಳಸಲಾಗಿದೆ. ಸುಮಾರು ೨x೨ ಅಡಿ ಉದ್ದ ಅಗಲದ ಚೌಕಾಕಾರದ ಮಣ್ಣಿನ ಮುದ್ದೆಗಳನ್ನು ಒಂದರ ಮೇಲೊಂದರಂತೆ ಜೋಡಿಸಲಾಗಿದೆ. ಅದರಲ್ಲಿ ವೀಕ್ಷಣಾ ರಂಧ್ರಗಳು, ಅಂಬು ಗಿಂಡಿಗಳು, ಹಾಗೂ ಬಂದೂಕ ರಂಧ್ರಗಳನ್ನು ನಿರ್ಮಿಸಲಾಗಿದೆ. ಚೌಕಾಕಾರದಲ್ಲಿ ನಿರ್ಮಿಸಿರುವ ಈ ಕೋಟೆ ಗೋಡೆಯ ಕೆಲವು ಭಾಗಗಳಲ್ಲಿ ಅರ್ಧವೃತ್ತಾಕಾರದಂತೆ ಕಂಡು ಬರುತ್ತದೆ. ಸುಮಾರು ೩೦೦ ಅಡಿ ಉದ್ದ ೩೦೦ ಅಡಿ ಅಗಲವಾಗಿರುವ ಈ ಕೋಟೆ ಗೋಡೆಯ ಮಧ್ಯದಲ್ಲಿ ಅರ್ಧ

ವೃತ್ತಾಕಾರದಗ್ಳ ಬುರುಜುಗಳಿವೆ. ಇದರಲ್ಲಿ ಕೆಲವು ಬುರುಜುಗಳು ಅವನತಿ ಹೊಂದಿವೆ. ಗೋಡೆಯಿಂದ ಹೊರಭಾಗಕ್ಕೆ ಚಾಚಿಕೊಂಡಿದ ಈ ಬುರುಜುಗಳು ಕುದುರೆ ಲಾಳಾಕಾರದಲ್ಲಿವೆ. ಇವುಗಳ ತಳಪಾಯ ಅಗಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತವೆ. ಪ್ರತಿಯೊಂದು ಬುರುಜುಗಳಲ್ಲಿ ಜಾಲಂಧ್ರಗಳನ್ನು ಬಿಡಲಾಗಿದೆ.

ಕೋಟೆಯು ಪ್ರಮುಖವಾಗಿ ಒಂದು ದ್ವಾರವನ್ನು ಹೊಂದಿದೆ. ಪೂರ್ವ ದಿಕ್ಕಿನಲ್ಲಿ ಕೋಟೆ ಗೋಡೆಯ ಕೇಂದ್ರ ಭಾಗಕ್ಕೆ ಎರಡು ಕುದುರೆ ಲಾಳಾಕಾರದ ಕೊತ್ತಳದ ಮಧ್ಯದಲ್ಲಿ ಕಮಾನಿನ ಆಕಾರದ ಸರಳವಾದ ದ್ವಾರವಿದೆ. ೧೨ ಅಡಿ ಅಗಲ ೧೫ ಅಡಿ ಎತ್ತರವಾಗಿರುವ ಈ ಪ್ರವೇಶ ದ್ವಾರವನ್ನು ಕಟೆದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ಇದರ ಎರಡು ಬದಿಯಲ್ಲಿರುವ ಕೊತ್ತಳಗಳು ಸಂಪೂರ್ಣವಾಗಿ ಹೊರಭಾಗಕ್ಕೆ ಚಾಚಿಕೊಂಡಿರುವುದರಿಂದ ಮಧ್ಯದಲ್ಲಿರುವ ದ್ವಾರವು ಕಂಡು ಬರುವುದಿಲ್ಲ. ದೂರದಿಂದ ವಿಕ್ಷೀಸಿದಾಗ ಒಂದು ಕೊತ್ತಳದ ನಂತರ ಮತ್ತೊಂದು ಕೊತ್ತಳವೆ ಕಂಡು ಬರುತ್ತದೆ. ವಿಶಾಲವಾದ ಹಾಗೂ ಬೃಹದ್ಧಾಕಾರದಲ್ಲಿರುವ ಈ ಕೊತ್ತಳಗಳು ಕೋಟೆ ಗೋಡೆಯಿಂದ ಸಂಪೂರ್ಣವಾಗಿ ಹೊರಭಾಗದಲ್ಲಿವೆ. ಉಳಿದ ಕೋಟೆಯ ಕೊತ್ತಳಗಳಂತೆ ಅರ್ಧ ವೃತ್ತಾಕಾರದಲ್ಲಿ ಇದ್ದು, ಕೋಟೆ ಗೋಡೆಗೆ ಅಂಟಿಕೊಂಡಿರುವುದಿಲ್ಲ. ಕುದುರೆ ಲಾಳಾಕಾರದಲ್ಲಿ ಇರುವ ಇವುಗಳ ಒಂದು ಭಾಗ ಮಾತ್ರ ಗೋಡೆಗೆ ಅಂಟಿಕೊಂಡಿದೆ. ಅದರಲ್ಲಿಯ ಎಡಬದಿಯಲ್ಲಿರುವ ಕೊತ್ತಳವು ವೃತ್ತಾಕಾರದಲ್ಲಿದ್ದು, ಕೋಟೆ ಗೋಡೆಯಿಂದ ಸಂಪೂರ್ಣವಾಗಿ ಪ್ರತ್ಯಕವಾಗಿದೆ. ಕೋಟೆಯ ಸುತ್ತಲು ಈ ರೀತಿಯ ಕೊತ್ತಳಗಳು ಕಂಡು ಬರುವುದಿಲ್ಲ. ದ್ವಾರದ ಮುಂಭಾಗದಲ್ಲಿ ವಿಶಾಲವಾದ ಸ್ಥಳವಿದ್ದೂ, ಇಲ್ಲಿ ದ್ವಾರಪಾಲಕರಿಗೆ ದ್ವಾರದ ರಕ್ಷಣೆಗಾಗಿ ಯಾವುದೆ ಸ್ಥಳಾವಕಾಶ ಇರುವುದಿಲ್ಲ. ವಿಶಾಲವಾದ ಮತ್ತು ಅತ್ಯಂತ ಮಹತ್ವದ್ದಾಗಿರುವ ಈ ಕೋಟೆಯಲ್ಲಿ ರಕ್ಷಣಾ ವ್ಯವಸ್ಥೆ ಇಲ್ಲದಿರುವುದು ಇದರ ಒಂದು ಪ್ರಮುಖ ಲೋಪದೋಷವಾಗಿರುವಂತೆ ಕಂಡು ಬರುತ್ತದೆ. ಆದರೆ ಇವುಗಳ ಬದಿಯಲ್ಲಿರುವ ಕೊತ್ತಳಗಳನ್ನು ಕುರಿತು ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿದಾಗ, ಕೋಟೆಯ ನಿರ್ಮಾಪಕರು ಇಲ್ಲಿ ವಿಶೇಷ ನೀತಿ ಅಳವಡಿಸಿರುವುದು ಕಂಡು ಬರುತ್ತದೆ. ಎರಡು ಬದಿಯಲ್ಲಿರುವ ವಿಶಾಲವಾದ ಕಾವಲುಗೋಪುರದ ಮೇಲಿನಿಂದ ಕಾವಲುಗಾರರು ದ್ವಾರದ ರಕ್ಷಣೆಯನ್ನು ಮಾಡುತ್ತಿದ್ದರು. ಆದ್ದರಿಂದ ಕೋಟೆಯ ದ್ವಾರದ ಮುಂಭಾಗದಲ್ಲಿ ಇಷ್ಟೊಂದು ವಿಶಾಲವಾದ ಸ್ಥಳವನ್ನು ಬಿಡಲಾಗಿದೆ. ಆಕ್ರಮಣಕಾರರು ದ್ವಾರದ ಸಮೀಪ ಬರುತ್ತಿದ್ದಂತೆಯೆ ಮೇಲಿನಿಂದ ಅವರ ಮೇಲೆ ಪ್ರತಿ ದಾಳಿಯನ್ನು ಆರಂಭಿಸುತ್ತಿದ್ದರು.

ಕೋಟೆಯ ಒಳಗಡೆ ಬಲಬದಿಯಲ್ಲಿ ಒಂದು ವಿಶಾಲವಾದ ಭಾವಿ ಇದೆ. ಇದರ ಕಮಾನುಗಳ ಎರಡು ಬದಿಯಲ್ಲಿ ನವಿಲಿನ ಶಿಲ್ಪಗಳನ್ನು ಕೆತ್ತಲಾಗಿದೆ. ಕೋಟೆಯ ಒಳಗಡೆ ನೀರಿನ ಸಂಗ್ರಹ ಅತ್ಯಂತ ಪ್ರಮುಖವಾಗಿರುವುದರಿಂದ ಒಳಗಡೆ ಒಟ್ಟು ಮೂರು ಭಾವಿಗಳಿವೆ. ಅವುಗಳಲ್ಲಿ ಎರಡು ಭಾವಿಗಳು ಸಂಪೂರ್ಣವಾಗಿ

ಮುಚ್ಚಿ ಹೋಗಿವೆ ದ್ವಾರದ ಬಳಿಯಲ್ಲಿರುವ ಈ ಬಾವಿಯು ಸಹ ಅವನತಿ ಹೊಂದುವ ಸ್ಥಿತಿಯಲ್ಲಿದೆ. ಈ ರೀತಿಯ ಹಲವು ಭಾವಿಗಳು ನಮಗೆ ಗುರುಮಿಟಕಲ್ ಗ್ರಾಮದ ಬೇರೆ ಬೇರೆ ಸ್ಥಳಗಳಲ್ಲಿ ಕಂಡು ಬರುತ್ತವೆ.

ಕೋಟೆಯ ಒಳಗಡೆ ಕೇಂದ್ರ ಭಾಗದಲ್ಲಿ ಮತ್ತು ಉತ್ತರ, ದಕ್ಷಿಣ ಭಾಗಕ್ಕೆ ಹಲವು ಬಗೆಯ ಕಟ್ಟಡಗಳು ಮತ್ತು ಅವನತಿ ಹೊಂದಿರುವ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳಲ್ಲಿ ಕೆಲವು ಕಟ್ಟಡಗಳು ಎರಡು ಅಂತಸ್ತಿ ನಲ್ಲಿ ನಿರ್ಮಿಸಲಾಗಿದೆ. ಕೋಟೆಯ ನೈರುತ್ಯ ಭಾಗದಲ್ಲಿರುವ ಎತ್ತರವಾದ ಕಮಾನಿನ ಪ್ರವೇಶ ದ್ವಾರವನ್ನು ಹೊಂದಿರುವ ಕಟ್ಟಡವು ರಾಜಕೀಯ ಚಟುವಟಿಕೆಗಳನ್ನು ನಡೆಸುವ ಸಭಾಭವನದಂತೆ ಕಂಡು ಬರುತ್ತದೆ. ಏಕೆಂದರೆ ಇದರ ಪ್ರವೇಶದ್ವಾರಕ್ಕೆ ಗಾರೆಯ ಲೇಪನ ಮಾಡಿದ್ದು, ಅದರ ಮೇಲೆ ಸುಂದರವಾದ ಹೂಬಳ್ಳಿಗಳ ಅಲಂಕಾರವಿದೆ. ಸುಮಾರು ೨೫ ಅಡಿ ಎತ್ತರವಾಗಿರುವ ಈ ಕಮಾನಿನ ಮುಂಭಾಗ ಮಾತ್ರ ಉಳಿದು ಕೊಂಡಿದ್ದು ಉಳಿದ ಭಾಗ ಅವನತಿ ಹೊಂದಿದೆ. ಇದರ ಸುತ್ತಲು ಹಲವು ಬಗೆಯ ಸಣ್ಣ ಸಣ್ಣ ಕಟ್ಟಡಗಳ ತಳಪಾಯಗಳಿವೆ. ಆದ್ದರಿಂದ ಇದು ಅತ್ಯಂತ ಮಹತ್ವದ ಕಟ್ಟಡದಂತೆ ಕಂಡು ಬರುತ್ತದೆ. ಇದರ ಮುಂಭಾಗದಲ್ಲಿ ಕಪ್ಪನೆಯ ಕಲ್ಲಿನಲ್ಲಿ ನಿರ್ಮಿಸಿರುವ ಮತ್ತೊಂದು ಆಕರ್ಷಕ ಕಟ್ಟಡವಿದೆ. ಎರಡು ಅಂತಸ್ತಿನ ಈ ಕಟ್ಟಡವು ನಾಲ್ಕು ಕಮಾನುಗಳನ್ನು ಹೊಂದಿದ್ದು, ಒಳಭಾಗದಲ್ಲಿ ವಿಶಾಲವಾದ ಸ್ಥಳವಿದೆ. ಇದರ ಬಲ ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಕೋಟೆಯ ಯಾವುದೆ ಭಾಗದಿಂದ ವೀಕ್ಷಿಸಿದರೂ ಈ ಕಟ್ಟಡ ಕಂಡು ಬರುತ್ತದೆ. ಕೋಟೆಯ ಕೇಂದ್ರ ಭಾಗದಲ್ಲಿರುವ ಈ ಕಟ್ಟಡವು ಅರಸರ ವೀಕ್ಷಣಾಲಯವಾಗಿರಬಹುದಾಗಿದೆ. ಏಕೆಂದರೆ ಇಲ್ಲಿಂದ ಕೋಟೆಯ ಒಳಗಡೆ ನಡೆಯುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸಬಹುದು. ಇದು ಮೂರು ದಿಕ್ಕಿನಲ್ಲಿ ತೆರೆದ ಕಮಾನುಗಳಿಂದ ಕೂಡಿರುತ್ತದೆ. ಇವುಗಳ ಆಧಾರದಿಂದ ಇದೊಂದು ವೀಕ್ಷಣಾಲಯವಾಗಿದೆ ಎಂದು ಹೇಳಲಾಗಿದೆ. ಈ ಕಟ್ಟಡದ ಸುತ್ತ ಮುತ್ತಲು ಹಲವು ಕಟ್ಟಡಗಳ ಅವಶೇಷಗಳಿವೆ. ಇವುಗಳ ರಕ್ಷಣೆಗಾಗಿ ಕಾವಲುಗಾರರಿಗಾಗಿ ಇರಲು ಈ ರೀತಿಯ ಕಟ್ಟಡಗಳು ನಿರ್ಮಿಸಿರಬಹುದು.

ಕೋಟೆಯ ಪಶ್ಚಿಮ ಭಾಗದಲ್ಲಿ ಒಂದು ಅತ್ಯಂತ ಎತ್ತರವಾದ ಕಾವಲುಗೋಪುರವಿದೆ. ಆದರೆ ಪ್ರಸ್ತುತ ಇದರ ಕೇಂದ್ರಭಾಗ ಮಾತ್ರ ಉಳಿದುಕೊಂಡಿದೆ. ಸುತ್ತಲಿನ ಕಲ್ಲುಗಳನ್ನು ಸ್ಥಳಿಯರು ಮನೆಯ ನಿರ್ಮಾಣಕ್ಕೆ ತೆಗೆದುಕೊಂಡು ಹೊಗಿರುವುದರಿಂದ ಅದರ ಎಲ್ಲಾ ಭಾಗಗಳು ಅವನತಿ ಹೊಂದಿವೆ. ಸುಮಾರು ೩೦ ಅಡಿ ಎತ್ತರವಾಗಿರುವ ಈ ಗೋಪುರವು ಅತ್ಯಂತ ಪ್ರಮುಖ ಕಟ್ಟಡವಾಗಿದೆ. ಮೂಲ ಕಟ್ಟಡವು ಮೇಲೆ ಹತ್ತಲು ಮೆಟ್ಟಿಲುಗಳನ್ನು ಹೊಂದಿರುತ್ತದೆ. ಅಲ್ಲದೆ ಇದರ ಮೇಲೆ ಬೃಹದಾಕಾರದ ತೋಪನ್ನು ನಿಲ್ಲಿಸಲಾಗಿತ್ತು, ಆದರೆ ಪ್ರಸ್ತುತ ಈ ತೋಪು ಗ್ರಾಮದ ಬಸ್ ನಿಲ್ದಾಣದ ಮುಂಭಾಗದಲ್ಲಿ ಇಡಲಾಗಿದೆ.

ಪ್ರಸ್ತುತ ಈ ಕಾವಲುಗೋಪುರದ ಸುತ್ತಲಿನ ಕಲ್ಲುಗಳು ಉರುಳಿ ಬಿದ್ದಿದ್ದು, ಇದರ ಸುತ್ತಲು ಗಿಡಮರಗಳು ಬೆಳೆದುಕೊಂಡಿರುವುದರಿಂದ ಇದರ ಸಮೀಪಕ್ಕೆ ಹೋಗುವುದು ಕಷ್ಟಕರವಾಗಿದೆ. ಅಲ್ಲದೆ

[illegible]

ಅದರ ಸಮೀಪದಲ್ಲಿ 'ಗಾರೆಯ' ಅವಶೇಷಗಳು ಕಂಡು ಬರುತ್ತವೆ. ಇದರಿಂದ ಮೇಲ್ಭಾಗದ ರಚನೆಗೆ ಗಾರೆಯನ್ನು ಬಳಸಿರುವಂತೆ ಕಂಡುಬರುತ್ತದೆ. ಈ ಕಾವಲುಗೋಪುರದ ಮುಂಭಾಗದಲ್ಲಿ ಸಾಲಾಗಿ ನಿರ್ಮಿಸಿರುವ ವಸತಿ ನಿಲಯಗಳ ಅವಶೇಷಗಳಿವೆ. ಆದರೆ ಅದರಲ್ಲಿ ಯಾವ ಕಟ್ಟಡವು ಪೂರ್ತಿಯಾಗಿ ಉಳಿದುಕೊಂಡಿರುವುದಿಲ್ಲ. ಕೋಟೆಯ ಒಳಭಾಗದಲ್ಲಿ ಹಲವು ಬಗೆಯ ರಕ್ಷಣಾ ಸಂಬಂಧಿ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಸಭಾಭವನ, ಅರಮನೆಗೆ ಸಂಬಂಧಿಸಿದ ಕಟ್ಟಡ, ನೀರಿನ ಆಶ್ರಯ ತಾಣಗಳು, ಸೈನಿಕರ ವಸತಿ ನಿಲಯಗಳು, ಕಾವಲುಗೋಪುರಗಳು ಹಾಗೂ ಇತರ ಕಟ್ಟಡಗಳು ಪ್ರಮುಖವಾಗಿದೆ.

೨೭. ಲಾಡಲಾಪುರ ಕೋಟೆ:

ವಾಡಿ-ನಾಲ್ವರ ರಸ್ತೆಯಲ್ಲಿ ಬರುವ ಬೆಟ್ಟದ ಕೆಳಭಾಗದಲ್ಲಿರುವ ಈ ಗ್ರಾಮದ ಸುತ್ತಲು ಕೋಟೆಯಿದೆ. ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಕಾಣುವ ಕೋಟೆ ಗೋಡೆಯು ಉಳಿದ ಭಾಗದಲ್ಲಿ ಸಂಪೂರ್ಣವಾಗಿ ನಾಶಗೊಂಡಿದೆ. ೧೦ ರಿಂದ ೧೫ ಅಡಿ ಎತ್ತರ ನಾಲ್ಕು ಅಡಿ ದಪ್ಪವಾಗಿರುವ ಈ ಕೋಟೆ ಗೋಡೆಯಲ್ಲಿ ಅಲ್ಲಲ್ಲಿ ಕೊತ್ತಳಗಳಿವೆ. ಈ ಕೋಟೆಯ ನಿರ್ಮಾಣದ ಉದ್ದೇಶ ಗ್ರಾಮದ ರಕ್ಷಣೆ ದಪ್ಪನೆಯ ಕಲ್ಲುಗಳಿಂದ ನಿರ್ಮಿಸಿರುವ ಈ ಗೋಡೆಯಲ್ಲಿ ಗಾರೆಯ ಬಳಕೆ ಕಂಡು ಬರುವುದಿಲ್ಲ. ಇದರ ರಚನಾ ವಿಧಾನ ಮತ್ತು ಸಾಮಗ್ರಿಗಳ ಬಳಕೆಯಿಂದ ಈ ಕೋಟೆಯು ಕ್ರಿ.ಶ. ೯ ರಿಂದ ೧೨ನೆಯ ಶತಮಾನದಲ್ಲಿ ನಿರ್ಮಿಸಿರುವಂತೆ ಕಂಡು ಬರುತ್ತದೆ.

ಪ್ರಸ್ತುತ ಈ ಕೋಟೆಯ ಹೊರಭಾಗದಲ್ಲಿ ಸುತ್ತಲು ಗ್ರಾಮವು ಆವರಿಸಿಕೊಂಡಿದೆ. ಆದರಿಂದ ಕೋಟೆ ಗೋಡೆಯು ದೂರದಿಂದ ಕಂಡು ಬರುವುದಿಲ್ಲ. ಗ್ರಾಮದ ಒಳಗಡೆ ಪ್ರವೇಶಿಸಿ, ಅದರ ಉತ್ತರ ಮತ್ತು ದಕ್ಷಿಣ ಭಾಗದಲ್ಲಿ ನೋಡಿದಾಗ ಮಾತ್ರ ಕೋಟೆಯ ಲಕ್ಷಣಗಳನ್ನು ಹೊಂದಿರುವ ಗೋಡೆ ಕಂಡು ಬರುತ್ತದೆ. ಗ್ರಾಮಸ್ಥರು ತಮ್ಮ ಬಾಹ್ಯ ರಕ್ಷಣೆಗೆ ಕೋಟೆಯನ್ನು ನಿರ್ಮಿಸಿಕೊಂಡು ಆಂತರಿಕ ರಕ್ಷಣೆಗೆ ಹಿಂದೂ-ಮುಸ್ಲಿಂ ದೇವಾಲಯಗಳನ್ನು ಸ್ಥಾಪಿಸಿಕೊಂಡರು. ಗ್ರಾಮದಲ್ಲಿ ಕೆಲವು ಪ್ರಾಚೀನ ಕಾಲದ ಭಾವಿಗಳಿವೆ. ಆದರೆ ಇವುಗಳ ಪ್ರಸ್ತುತವಾಗಿ ಬಳಕೆಯಲ್ಲಿ ಇರುವುದಿಲ್ಲ. ಈ ರೀತಿ ಲಾಡಲಾಪುರ ಗ್ರಾಮವು ಐತಿಹಾಸಿಕ ಹಿನ್ನಲೆಯನ್ನು ಒಳಗೊಂಡಿದ್ದು, ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಹೊಂದಿದೆ. ಇವುಗಳ ಕುರಿತು ಯಾವುದೆ ಸಾಹಿತ್ಯಗಳಲ್ಲಿ ಅಥವಾ ಗುಲಬರ್ಗಾ ಜಿಲ್ಲಾ ಗ್ಯಾಜಿಟಿಯರ್‌ನಲ್ಲಿ ಉಲ್ಲೇಖವಾಗಿರುವುದಿಲ್ಲ. ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ಇವುಗಳನ್ನು ಗುರುತಿಸಲಾಗಿದೆ.

ಅಡಿಟಿಪ್ಪಣಿಗಳು:

೧. Talwar.H.T., 1993 - 94 - An Interium Report on the Excavation at Sannati p. 12.

೨. ತೆಲಗಾವಿ ಲಕ್ಷ್ಮಣ, ೨೦೦೪ - ಮೌರ್ಯ ಮತ್ತು ಶಾತವಾಹನ ಯುಗ, ಪು. ೧೦೪.

೩. Joshi, S. K. 1985 - Defence Architecture in Earl Karnataka p. 48.

೪. Talwar.H.T., 1993 – 94 op. cit p.48.

೫. ವಾಣಿ ಎಸ್. ಎಸ್ ೨೦೦೮ - ಕ್ಷೇತ್ರ ಅಧ್ಯಯನದಲ್ಲಿ ದೊರೆತ ಅವಶೇಷಗಳ ಸಂಗ್ರಹ.

೬. ಕುಲಕರ್ಣಿ, ಜಿ. ಆರ್ (ಸಂ). ೧೯೮೫ - ಸಗರನಾಡು ದರ್ಶನ ಪು.೧೧.

೭. ಆಚಾರ್ ರಾಜಮನ್ನಾರ ಅಯ್ಯಾಂಗಾರ ೧೯೮೬ - ಸಗರನಾಡು (ಸಂದರ್ಶನ) ಪು. ೮.

೮. Aruni, S.K. 2004 - Surapura Samsthan Historical and Archacological study Poligar State in South India p. 63.

೯. ಪಾಟೀಲ . ಚನ್ನಬಸಪ್ಪ ಎಸ್. ೧೯೯೯ - ಕರ್ನಾಟಕದ ಕೋಟೆಗಳು ಪು. ೧೨೩.

೧೦. ಪಿ.ವಿ. ಕೃಷ್ಣಮೂರ್ತಿ ಮತ್ತು ವಸಂತ ಲಕ್ಷ್ಮಿ ಕೆ. ೨೦೦೦ - ಸೂರ್ಯಕೀರ್ತಿ (ಡಾ. ಸೂರ್ಯನಾಥ ಕಾಮತ ಅವರ ಅಭಿನಂದನ ಗ್ರಂಥ) ಪು. ೧೬೦.

೧೧. ವಾಣಿ ಎಸ್.ಎಸ್. ೨೦೦೯ - ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿ.

೧೨. ನಾಗರಾಜ.ಎಂ.ಜಿ. ಮತ್ತು ಕೃಷ್ಣಮೂರ್ತಿ ಪಿ.ವಿ. (ಸಂ) ೨೦೦೧. ಇತಿಹಾಸ ದರ್ಶನ ಸಂಪುಟ ೧೬. ಪು. ೨೩೨.

೧೩. Biradar Shrishail 1993 - Malkhed through the ages. p. 69.

೧೪. Joshi. S.K 1985 pF op Cit. p. 70.

೧೫. ಗೋಪಾಲ ಆರ್, ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಪು. ೬೦.

೧೬. ಪಾಟೀಲ ಚನ್ನಬಸಪ್ಪ, ಎಸ್.೧೯೯೯ - ಪೂರ್ವೋಕ್ತ ಪು. ೩೨.

೧೭. ಬಿರಾದಾರ ಶ್ರೀಶೈಲ್, ೨೦೦೯ - ಮಾನ್ಯಖೇಟ ದೆಡೆಗೆ ಐತಿಹಾಸಿಕ ನಡಿಗೆ ಪು. ೫೪.

೧೮. ಮುಡಬಿ ಗುಂಡೇರಾವ, ೧೯೯೯ - ಸೇಡಮ್ ತಾಲೂಕಿನ ಐತಿಹಾಸಿಕ ಸ್ಮಾರಕಗಳು ಪು. ೪೦.

೧೯. ಅದೇ ಪು. ೧೬.

೨೦. ಗೋಪಾಲ್. ಆರ್ , ೨೦೦೭ - ಪೂರ್ವೋಕ್ತ ಪು. ೩೬.

೨೧. ಶ್ರೀಶೈಲ್ ಬಿರಾದಾರ, ೨೦೦೫ - ಸೇಡಮ್ ಒಂದು ಸಾಂಸ್ಕೃತಿಕ ಅವಲೋಕನ ಪು. ೧೪.

೨೨. Biradar Shrishail 1993 - Malkhed throught the age. (unpublished M.Phil thises GUG), p. 16.

೨೩.ಮುಡಬಿ ಗುಂಡೇರಾವ್ , ೧೯೯೯ - ಪೂರ್ವೋಕ್ತ ಪು. ೩.

೨೪.ಬಿರಾದಾರ ಶ್ರೀಶೈಲ್ , ೨೦೦೯ - ಪೂರ್ವೋಕ್ತ ಪು. ೫೨.

೨೫.ಪಾಟೀಲ ಎಂ.ಬಿ. (ಸಂ) ೧೯೯೭ - ಗುಲಬರ್ಗಾ ಜಿಲ್ಲಾ ಗ್ಯಾಸೀಟಿಯರ್ ಪು. ೭೮೮.

೨೬.ಶ್ರೀಶೈಲ್ ಬಿರಾದಾರ, ೨೦೦೫ - ಪೂರ್ವೋಕ್ತ ಪು. ೧೮.

೨೭.ಮುಡಬಿ ಗುಂಡೇರಾವ್ , ೨೦೦೨ - ಸೇಡಿಂ ದುರ್ಗದ ಶಾಸನಗಳು ಪು. ೧೪.

೨೮.ಅದೇ ಪು. ೨೫.

೨೯.ಶ್ರೀಶೈಲ ಬಿರಾದಾರ, ೨೦೦೫ - ಪೂರ್ವೋಕ್ತ ಪು. ೧.

೩೦.ಪಾಟೀಲ್ ಎಂ.ಬಿ (ಸಂ) ೧೯೯೭ - ಪೂರ್ವೋಕ್ತ ಪು. ೬೭೬.

೩೧.ಮುಡಬಿ ಗುಂಡೇರಾವ್, ೨೦೦೨ - ಪೂರ್ವೋಕ್ತ ಪು. ೫೬.

೩೨.ಪಾಟೀಲ್ ಎಂ.ಬಿ (ಸಂ) ೧೯೯೭ - ಪೂರ್ವೋಕ್ತ ಪು. ೬೭೭.

೩೩.ಅದೇ ಪು. ೭೬೨.

೩೪.ಮುಡಬಿ ಗುಂಡೇರಾವ್, ೧೯೯೯ - ಪೂರ್ವೋಕ್ತ ಪು. ೪ - ೫.

೩೫.ಬಿರಾದಾರ ಶ್ರೀಶೈಲ್, ೨೦೦೯ - ಪೂರ್ವೋಕ್ತ ಪು. ೯೬.

೩೬.ಪರದೇಶಿ ಯಾದಪ್ಪ. ಬಿ ೨೦೦೦ - ಉತ್ತರ ಕರ್ನಾಟಕದ ಭಿತ್ತಿ ಚಿತ್ರಕತೆ ಒಂದು ಅಧ್ಯಯನ ಅಪ್ರಕಟಿಕ ಮಹಾಪ್ರಬಂದ ಕನ್ನಡ ವಿಶ್ವವಿಧ್ಯಾಲಯ ಹಂಪಿ. ಪು. ೬೧ -೬೨.

೩೭.ಪಾಟೀಲ್ ಎಂ.ಬಿ (ಸಂ) ೧೯೯೭ - ಪೂರ್ವೋಕ್ತ ಪು. ೭೨೧.

೩೮.ಗೋಪಾಲ್, ಆರ್., (ಸಂ) ೨೦೦೭ - ಪೂರ್ವೋಕ್ತ ಪು. ೧೩೩.

೩೯.ಶ್ರೀಶೈಲ್ ಬಿರಾದಾರ, ೨೦೦೫ - ಪೂರ್ವೋಕ್ತ ಪು. ೩೬.

೪೦.ಪಾಟೀಲ್, ಎಂ.ಬಿ. (ಸಂ) ೧೯೯೭ - ಪೂರ್ವೋಕ್ತ ಪು. ೭೨೬ .

೪೧.ಅದೇ, ಪು. ೬೮೧.

೪೨.ವಾಣಿ, ಎಸ್.ಎಸ್. ೨೦೦೭ - ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿ.

೪೩.ಗೋಪಾಲ್, ಆರ್. (ಸಂ) ೨೦೦೭ - ಪೂರ್ವೋಕ್ತ ಪು. ೧೨೪.

೪೪.ಪಾಟೀಲ್, ಎಂ.ಬಿ. (ಸಂ) ೧೯೯೭ - ಪೂರ್ವೋಕ್ತ ಪು. ೭೦೫.

೪೫. Yazdani, G. 1922 - Antiquities of Bidar. p. 63.

೪೬. M. Yaseen Quddusi and Sitaram Jagirdar. 2001 - persian Arabic and Urdu Inscriptions of Karnataka. pp. 169 -179.

೪೭. ಗೋಪಾಲ್, ಆರ್. (ಸಂ) ೨೦೦೭ - ಪೂರ್ವೋಕ್ತ ಪು. ೪೬೩.

೪೮. Wani Shambhuling. 1990 - Gulbarga city and its monuments unpublishied M.Phil thises, p. 18.

೪೯. ಪಡಶೆಟ್ಟಿ. ಸಿ.ಸಿ, ೨೦೦೫ - ಕಲಬುರ್ಗಿ ಕೋಟೆ ಪು. ೨೬.

೫೦. ಪಾಟೀಲ ಚನ್ನಬಸಪ್ಪ, ಎಸ್.೧೯೯೯ - ಪೂರ್ವೋಕ್ತ ಪು. ೧೧೭.

೫೧. ಸೋಮಶೇಖರ. ಎಸ್. ವೈ. ೨೦೦೯ - ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ. ಪು. ೧೮೯.

೫೨. ಪಿ.ವಿ. ಕೃಷ್ಣಮೂರ್ತಿ ಮತ್ತು ವಸಂತ ಲಕ್ಷ್ಮಿ ಕೆ. ೨೦೦೦ - ಸೂರ್ಯಕೀರ್ತಿ (ಡಾ. ಸೂರ್ಯನಾಥ ಕಾಮತ ಅವರ ಅಭಿನಂದನ ಗ್ರಂಥ) ಪು. ೧೬೧.

೫೩. Fischer, Klaus, 1955 - Firozabad on the Bhima and its environs. pp. 246 -55.

೫೪. Michell, Georga 1992 - Firozabad - Revisited pp. 176-80.

೫೫. ಪಾಟೀಲ ಚನ್ನಬಸಪ್ಪ, ಎಸ್.೧೯೯೯ - ಪೂರ್ವೋಕ್ತ ಪು. ೧೨೦.

೫೬. ಹಣಮಂತರಾವ್ ೨೦೦೭ - ಕ್ಷೇತ್ರ ಅಧ್ಯಯನದಲ್ಲಿ ಮಾಡಿರುವ ಸಂದರ್ಶನದ ವಿವರ

೫೭. ಪಾಟೀಲ್ ಎಂ.ಬಿ. (ಸಂ) ೧೯೯೭ - ಪೂರ್ವೋಕ್ತ ಪು. ೮೦೪.

೫೮. ಗೋಪಾಲ್. ಆರ್., (ಸಂ) ೨೦೦೭ - ಪೂರ್ವೋಕ್ತ ಪು. ೪೨.

೫೯. ದೇವಯ್ಯ ಗುತ್ತೇದಾರ ೨೦೦೯ - ಸಾಟಿ ಇಲ್ಲದ ಸಾತ್ ಗುಂಬಜ್. ಪ್ರಜಾವಾಣಿ ಪತ್ರೀಕೆಯ ಲೇಖನ. ದಿ. ೨೬ - ೨ -೦೯.

೬೦. ಕುಲಕರ್ಣಿ, ಜಿ.ಆರ್. ೧೯೮೫ - ಪೂರ್ವೋಕ್ತ ಪು. ೧೦.

೬೧. M. Yaseen Quddusi and sitaram Jagirdar. 2001 - op. cit., p. 186.

೬೨. Aruni . S.K. 2004 - op. cit., p. 68.

೬೩. Ibid.

೬೪. ಗೋಪಾಲ್. ಆರ್., (ಸಂ) ೨೦೦೭ - ಪೂರ್ವೋಕ್ತ ಪು. ೪೯೭..

೬೫. ಪ್ರಮೋದ ಜಿ.ಕೆ. ೨೦೧೦ - ಉಪೇಕ್ಷೆಗೆ ತುತ್ತಾದ ಸಗರ ನಾಡಿನ ಕೋಟೆ ಪ್ರಜಾವಾಣಿ ಲೇಖನ.

೬೬. ಪಾಟೀಲ ಎಂ.ಬಿ. ೧೯೯೭ - ಪೂರ್ವೋಕ್ತ, ಪು. ೭೬೭.

೬೭. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೧೩೦.

೬೮. S.S. Vani, 2009 - Recent trends in History, presented a paper in National Level Seminar held at N.V. College, Gulbarga.

೭೯.ಎಸ್.ಎಸ್. ವಾಣಿ, ೨೦೦೯ - ಯಾದಗಿರ ಕೋಟೆಯ ತಂಪುಗಳ ತಂತ್ರಜ್ಞಾನ, ಕರ್ನಾಟಕ ಇತಿಹಾಸ ಕಾಂಗ್ರೇಸ್, ಅಧಿವೇಶನ, ಬೆಂಗಳೂರಿನಲ್ಲಿ ಮಂಡಿಸಿದ ಲೇಖನ.

೭೦.ಬಿ. ಕೃಷ್ಣಮಾಚಾರ್ಯ, ೨೦೦೩ - ಮರೆಯಲಾಗದ ಸುರಪುರ ರಾಜರ ಚರಿತ್ರೆ, ಪು. ೫೨.

೭೧.Aruni, S.K. 2004 - Op. Cit., p. 90.

೭೨.ಬಾಸ್ಕರರಾವ ಮುಡಬೂಳ, ೨೦೦೧ - ಮರೆತು ಹೋದ ಸುರಪುರ ಇತಿಹಾಸ, ಪು. ೨೭.

೭೩.ಕೃಷ್ಣಮಾಚಾರ್ಯ, ಬಿ. ೨೦೦೩ - ಪೂರ್ವೋಕ್ತ, ಪು. ೯೪.

೭೪.ಕಪಟರಾಳ ಕೃಷ್ಣರಾಯರು, ೨೦೦೫ - ಸುರಪುರ ಸಂಸ್ಥಾನದ ಇತಿಹಾಸ, ಪು. ೯೬.

೭೫.Aruni S.K., 2004 - Op. Cit., p. 73.

೭೬.M. Yaseen Quddusi and Sitaram Jagirdar, 2001 - Op. Cit., p. 187.

೭೭.ಶಂಕರಲಿಂಗ ಮ್ಯಾಗೇರಿ, ೨೦೦೬ - ವನದುರ್ಗದ ಕ್ಷೇತ್ರಕಾರ್ಯದಲ್ಲಿ ಪಡೆದ ಮಾಹಿತಿ.

೭೮.ಪಾಟೀಲ ಚನ್ನಬಸಪ್ಪ ಎಸ್., ೧೯೯೯ - ಪೂರ್ವೋಕ್ತ, ಪು. ೨೫೬.

೭೯.ಶಿವಶರಣಪ್ಪ (ಇತರರು), ೨೦೦೬ - ಕೋಟೆಯ ಒಳಗಡೆ ವಾಸವಾಗಿರುವ ಜನರ ಸಂದರ್ಶನ ಮಾಹಿತಿ.

೮೦.Aruni, S.K. 2004 - Op. Cit., p. 69.

೮೧.ಸದಾನಂದ ಪಾಟೀಲ (ಸಂ.), ೨೦೦೪ - ಜೇವರಗಿ ತಾಲೂಕು ದರ್ಶನ, ಪು. ೧೮.

೮೨.ಪಾಟೀಲ, ಎಂ.ಬಿ. (ಸಂ.), ೧೯೯೭ - ಪೂರ್ವೋಕ್ತ, ಪು. ೬೮೫.

೮೩.ವಿಜಯೇಂದ್ರ ಕುಲಕರ್ಣಿ, ೨೦೦೬ - ಇಜೇರಿಯ ಐತಿಹಾಸಿಕ ಕೋಟೆಗೆ ಇದೇನು ಗತಿ ಬಂದಿದೆ, ಸಂಯುಕ್ತ ಕರ್ನಾಟಕ ಪತ್ರಿಕೆಯ ಲೇಖನ, ೨೪-೦೮-೨೦೦೬.

೮೪.ಪಾಟೀಲ ಚನ್ನಬಸಪ್ಪ, ಎಸ್. ೧೯೯೯ - ಪೂರ್ವೋಕ್ತ, ಪು. ೨೬೧.

೮೫.ಹನುಮಾಕ್ಷಿ ಗೋಗಿ, ೨೦೦೪ - ಗುಲಬರ್ಗಾ ಜಿಲ್ಲೆಯ ಶಾಸನಗಳು, ಪು. ೭೮.

೮೬.ಮಾಹಾಂತಸ್ವಾಮಿಜ, ೨೦೦೭ - ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ.

೮೭.ಚಂಡ್ರಕಿ, ಎಂ.ಎಂ. ೨೦೦೮ - ಕ್ಷೋತ್ರಕಾರ್ಯದಲ್ಲಿ ಪಡೆದ ಮಾಹಿತಿ.

೮೮.ಮಲ್ಲಿಕಾರ್ಜುನ ದೇಶಮುಖ, ೨೦೦೭ - ಪ್ರಸ್ತುತ ಕೋಟೆಯ ವಾರಸುದಾರರಿಂದ ಪಡೆದ ಮಾಹಿತಿ.

೮೯.ಕುಲಕರ್ಣಿ ರಘುನಾಥ, ೨೦೦೯ - ಕೋಟೆಯ ಮಾಲಿಕತ್ವವನ್ನು ಹೊಂದಿರುವರಿಂದ ಪಡೆದ ಮಾಹಿತಿ.

೯೦.ಬಸವರಾಜ, ಆಲೆಮನಿ, ೨೦೦೮ - ಇತಿಹಾಸ ನೆನಪಿಸುವ ಖಾಸಗಿ ಕೋಟೆ, ಪ್ರಜಾವಾಣಿ ಲೇಖನ, ೮ನೇ ಜೂನ್, ೨೦೦೮.

೯೧. ಬಸವರಾಜ, ಪಾಟೀಲ್ (ಸಂ.), ೨೦೦೬ - ಅಭಿನಂದನಾ ಗ್ರಂಥ, ಪು. ೧೬.

೯೨. ಪಾಟೀಲ್, ಎಂ.ಬಿ. (ಸಂ.), ೧೯೯೭ - ಪೂರ್ವೋಕ್ತ, ಪು. ೭೦೭.

೯೩. ಅದೇ.

೯೪. ಅರುಣಿ.ಎಸ್. ಕೆ. ೨೦೦೯ - ಮಣ್ಣಿನ ಕೋಟೆ ನೂತನ ಮಹಾವಿದ್ಯಾಲಯ ಗುಲಬರ್ಗಾದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಲೇಖನ.

ಅಧ್ಯಾಯ-೫
ರಕ್ಷಣಾ ಸಂಬಂಧಿ ಸ್ಮಾರಕಗಳು

ರಾಜ್ಯದ ರಕ್ಷಣೆಯಲ್ಲಿ ಕೋಟೆಯಷ್ಟೇ ಮಹತ್ವದ ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳ ಅಧ್ಯಯನವು ಪ್ರಮುಖವಾಗಿರುತ್ತವೆ. ಕೋಟೆಯ ನಿರ್ಮಾಪಕರು ತಮ್ಮ ಶಕ್ತಿಗಿಂತ ದೈವಿ ಶಕ್ತಿಯು ಶ್ರೇಷ್ಟವೆಂದು ತಿಳಿದುಕೊಂಡು ಕೋಟೆಯ ಒಳಗಡೆ ತಮ್ಮ ಕುಲದೇವರ ಅಥವಾ ಆರಾಧ್ಯದೇವರಿಗಾಗಿ ಸೂಕ್ತ ಸ್ಥಳಗಳಲ್ಲಿ ದೇವಾಲಯಗಳನ್ನು ನಿರ್ಮಿಸುತ್ತಾರೆ. ದೇವಾಲಯಗಳ ರಚನೆಯ ಉದ್ದೇಶ ತಮ್ಮ ಸಾಮ್ರಾಜ್ಯದ ರಕ್ಷಣೆ, ಪ್ರಜೆಗಳ ರಕ್ಷಣೆ ಮತ್ತು ಅರಸತ್ವದ ರಕ್ಷಣೆಯಾಗಿದೆ. ಅದೇ ರೀತಿಯಲ್ಲಿ ಅಪ್ರತ್ಯಕ್ಷವಾಗಿ ತಮ್ಮನ್ನು ರಕ್ಷಿಸಿಕೊಳ್ಳಲು ಹಲವು ಬಗೆಯ ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ದ್ವಾರ ಬಾಗಿಲುಗಳ ಕಾವಲುಗೋಪುರಗಳು, ಕೊತ್ತಲಗಳು, ಗುಪ್ತದ್ವಾರಗಳು, ಮದ್ದಿನ ಮನೆಗಳು, ಸೈನಿಕರ ವಸತಿ ನಿಲಯಗಳು, ದೇವಾಲಯಗಳು, ಮಸೀದಿಗಳು, ಕಣಜಗಳು, ನೀರಿನ ಸಂಗ್ರಹಗಳು, ಅರಮನೆಗಳು, ಮೂರ್ತಿ ಶಿಲ್ಪಗಳು, ಮುಂತಾದವುಗಳು ರಕ್ಷಣಾ ಸಂಬಂಧಿ ಕಟ್ಟಡಗಳಾಗಿವೆ. ಇವುಗಳ ಅಧ್ಯಯನದಿಂದ ಹಲವು ಮಹತ್ವದ ವಿಷಯಗಳು ಬೆಳಕಿಗೆ ಬರುತ್ತವೆ. ಪ್ರಾಚೀನ ಸಾಹಿತ್ಯಗಳಲ್ಲಿ ಇವುಗಳ ಕುರಿತು ಮಾಹಿತಿ ನೀಡಲಾಗಿದೆ. ಈ ಸ್ಮಾರಕಗಳ ನಿರ್ಮಾಣಕ್ಕೆ ಒಂದು ವಿಶೇಷ ಐತಿಹ್ಯವಿರುತ್ತದೆ. ಅವುಗಳ ವೈಜ್ಞಾನಿಕ ಅಧ್ಯಯನ ಅವಶ್ಯವಾಗಿದೆ. ಅಲ್ಲದೆ ಈ ಸ್ಮಾರಕಗಳ ರಚನೆಯ ಉದ್ದೇಶ ಹಿನ್ನೆಲೆ, ಶೈಲಿ, ಮಹತ್ವ ಮುಂತಾದ ಅಂಶಗಳನ್ನು ಕುರಿತು ಈ ಅಧ್ಯಾಯನದಲ್ಲಿ ಚರ್ಚಿಸಲಾಗಿದೆ.

೫.೧. ದೇವಾಲಯ ಹಾಗೂ ಮಸೀದಿಗಳು

'ಧರ್ಮೋರಕ್ಷತಿ:ರಕ್ಷಿತ:' ಎನ್ನುವಂತೆ "ಧರ್ಮವನ್ನು ಯಾರು ರಕ್ಷಿಸುತ್ತಾರೆಯೊ ಅವರನ್ನು ಧರ್ಮ ರಕ್ಷಿಸುತ್ತದೆ" ಈ ಭಾವನೆ ಧರ್ಮದಲ್ಲಿ ನಂಬಿಕೆ ಇಡುವ ಪ್ರತಿಯೊಬ್ಬರಲ್ಲಿ ಇರುತ್ತದೆ. ಆದ್ದರಿಂದ ದೇವರ ಬಗ್ಗೆ ಭಯ ಹಾಗೂ ಭಕ್ತಿಯ ಭಾವನೆಗಳು ಬೆಳೆದು ಬಂದಿವೆ. ದೇವರ ಆರಾಧನೆಯಿಂದ ಸು:ಖ, ಶಾಂತಿ, ನೆಮ್ಮದಿ ಮತ್ತು ರಕ್ಷಣೆ ದೊರೆಯುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ನಿರ್ಮಾಣಗೊಂಡ ಪ್ರತಿಯೊಂದು ಕೋಟೆಯಲ್ಲಿ ದೇವಾಲಯಗಳಿಗೆ ಪ್ರಮುಖ ಸ್ಥಾನವಿದೆ. ಕೋಟೆಯ ಒಳಭಾಗದಲ್ಲಿ ಸೂಕ್ತವಾದ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ಅರಸರು ತಮ್ಮ ಇಷ್ಟ ದೇವರ ದೇವಾಲಯವನ್ನು ನಿರ್ಮಿಸಿದ್ದಾರೆ. ಯುದ್ಧದ ಮುನ್ನ ಈ ದೇವರಿಗೆ ಪ್ರಾರ್ಥನೆಯನ್ನು ಸಲ್ಲಿಸಿ, ವಿಜಯದ ನಂತರ ದೇವರಿಗೆ ಅಮೂಲ್ಯವಾದ ವಸ್ತುಗಳನ್ನು ಕೊಡುಗೆಯಾಗಿ ಅರಸರು ಅರ್ಪಿಸುತ್ತಿದ್ದರು. ಕಾಲಕ್ರಮೇಣ ಪ್ರತಿಯೊಂದು ಕೋಟೆಯಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ದೇವಾಲಯಗಳು ಬೆಳೆದು ಬಂದವು.

[illegible]

[illegible]

ಕೋಟೆ ರಕ್ಷಣೆಯಲ್ಲಿ ದೇವಾಲಯಗಳ ಪಾತ್ರ ಅತಿ ಪ್ರಮುಖವಾಗಿದೆ. ಹಿಂದೂ ಕೋಟೆಗಳಲ್ಲಿ ದೇವಾಲಯಗಳು, ಮುಸ್ಲಿಂ ಕೋಟೆಗಳಲ್ಲಿ ಮಸೀದಿಗಳು ಬೆಳೆದು ಬಂದವು. ದೇವಾಲಯಗಳ ಧ್ವಂಸದಿಂದ ದಾಳಿಯ ಸ್ವರೂಪವನ್ನು ತಿಳಿದುಕೊಳ್ಳಬಹುದು. ಹಿಂದು ಕೋಟೆಗಳ ಮೇಲೆ ಆಕ್ರಮಣ ಮಾಡಿದ ಮುಸ್ಲಿಂ ಸೈನಿಕರು ಕೋಟೆಯನ್ನು ವಶಪಡಿಸಿಕೊಂಡು ನಂತರ ಅಲ್ಲಿಯ ದೇವಾಲಯವನ್ನು ಧ್ವಂಸ ಮಾಡುತ್ತಿದ್ದರು. ಹಲವು ಕೋಟೆಗಳಲ್ಲಿ ದೇವಾಲಯಗಳನ್ನು ಮಸೀದಿಗಳನ್ನಾಗಿ ಪರಿವರ್ತಿಸಲಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಸೋಮದೇವನ ನೀತಿ ವಾಕ್ಯಾಮೃತದಲ್ಲಿ ದೇವಾಲಯಗಳನ್ನು ಕುರಿತು ಹೇಳಲಾಗಿದೆ. ಆದ್ದರಿಂದ ಪ್ರತಿಯೊಂದು ಕೋಟೆಯಲ್ಲಿ ದೇವಾಲಯಗಳು ಅಥವಾ ಮಸೀದಿಗಳು ಅವಶ್ಯವಾಗಿರುತ್ತವೆ.

ಸನ್ನತಿಯ ಕೋಟೆಯ ಸಮೀಪದಲ್ಲಿ ಎರಡು ದೊಡ್ಡ ಸ್ತೂಪಗಳನ್ನು ನಿರ್ಮಿಸಲಾಗಿದೆ. ಶಾತವಾಹನರ ಕಾಲದಲ್ಲಿ ನಿರ್ಮಿಸಿರುವ ಈ ಸ್ತೂಪಗಳಿಂದ ಸನ್ನತಿಯಲ್ಲಿ ಆಳ್ವಿಕೆ ಮಾಡಿರುವ ಅರಸರು ಬೌದ್ಧ ಧರ್ಮದ ಅನುಯಾಯಿಗಳಾಗಿರುವಂತೆ ಎಂದು ಕಂಡು ಬರುತ್ತದೆ. ಇಲ್ಲಿಯ ಕನಗನಹಳ್ಳಿ ಮತ್ತು ಎಡೆನಹಳ್ಳಿಯ ಉತ್ಖನನದಲ್ಲಿ ಬೌದ್ಧ ಸ್ತೂಪಗಳಿಗೆ ಸಂಬಂಧಿಸಿದ ಅವಶೇಷಗಳು ಲಭ್ಯವಾಗಿದೆ.[೧] ಇದು ಬೌದ್ಧ ಇತಿಹಾಸದ ಮೇಲೆ ಹೊಸ ಬೆಳಕನ್ನು ಚಲ್ಲಿದೆ. ಇಲ್ಲಿಯ ಹಲವು ಫಲಕಗಳು ಗೌತಮ ಬುದ್ಧನ ಜೀವನ ಮತ್ತು ಭೋದನೆಗೆ ಸಂಬಂಧಿಸಿವೆ. ಅಶೋಕ ತನ್ನ ರಾಣಿಯರೊಂದಿಗೆ ನಿಂತಿರುವ ಚಿತ್ರ ಫಲಕ ಈ ಸ್ತೂಪದ ಸಮೀಪದಲ್ಲಿ ಲಭ್ಯವಾಗಿದೆ. ಇದು ಅಶೋಕನ ಮೊಟ್ಟಮೊದಲನೆಯ ಉಪಲಬ್ದದ ಅಪರೂಪದ ಮೂರ್ತಿ ಶಿಲ್ಪವಾಗಿದೆ. ಇದರ ಸಮೀಪದಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಚಂದ್ರಲಾಂಭ ದೇವಸ್ಥಾನವಿದೆ. ಇದು ಸಹ ಪ್ರಾಚೀನ ಕಾಲದ ದೇವಾಲಯಗಳಲ್ಲಿ ಒಂದಾಗಿದೆ.[೨] ಇಲ್ಲಿ ಆಳ್ವಿಕೆ ಮಾಡಿರುವ ರಾಜ ಮನೆತನಗಳು ದೇವಾಲಯಗಳಿಂದ ರಕ್ಷಣೆ ಪಡೆದುಕೊಂಡರೆಂದು ತಿಳಿದು ಬರುತ್ತದೆ.

ಮಾನ್ಯಖೇಡದ ರಾಷ್ಟ್ರಕೂಟರ ಕೋಟೆಯಲ್ಲಿ ಜೈನ ಬಸದಿಗಳು, ಶೈವ ದೇವಾಲಯಗಳು ಹಾಗೂ ಮುಸ್ಲಿಂ ಪ್ರಾರ್ಥನಾಲಯಗಳು ಕಂಡು ಬರುತ್ತವೆ. ಕೋಟೆಯ ಒಳಗಡೆ ಇರುವ ಹಲವು ದೇವಾಲಯಗಳು ಭಗ್ನಗೊಂಡಿರುವುದರಿಂದ ಇವುಗಳ ಬಗೆಗೆ ಸ್ಪಷ್ಟ ವಿವರಣೆ ಕಂಡು ಬರುವುದಿಲ್ಲ. ಆದರೆ ಕೋಟೆಯ ಸುತ್ತಲು ಹಾಗೂ ಒಳಗಡೆ ಹಲವು ಜೈನ ವಿಗ್ರಹಗಳು ಪತ್ತೆಯಾಗಿವೆ. ಇದರಿಂದ ರಾಷ್ಟ್ರಕೂಟ ಅರಸರು ಜೈನ ಧರ್ಮದ ಅವಲಂಭಿಗಳಾಗಿ ಆರಾಧಕರಾಗಿದ್ದರೆಂದು ಕಂಡು ಬರುತ್ತದೆ. ತಿರ್ಥಂಕರರಿಗೆ ಸಂಬಂಧಿಸಿದ ಹಲವು ಮೂರ್ತಿ ಶಿಲ್ಪಗಳು ಇಲ್ಲಿ ಲಭ್ಯವಾಗಿವೆ.[೩] ರಾಷ್ಟ್ರಕೂಟರ ಕಾಲಕ್ಕೆ ಬಹುಸಂಖ್ಯಾತರು ಜೈನರಾಗಿದ್ದರೆಂದು ಇವುಗಳಿಂದ ತಿಳಿದು ಬರುತ್ತದೆ.

ಚಿತ್ತಾಪುರ ತಾಲೂಕಿನ ನಾಗಾವಿ ಕೋಟೆಯಲ್ಲಿ ಹಲವು ದೇವಾಲಯಗಳು ಹಾಗೂ ಮಸೀದಿಗಳು ಇವೆ. ಕೋಟೆಯ ಪ್ರವೇಶದ ಮುಂಭಾಗದಲ್ಲಿ ನಂದೀಶ್ವರ ದೇವಸ್ಥಾನವಿದೆ. ಕಲ್ಯಾಣಿ ಚಾಲುಕ್ಯರ ಆರಂಭದ ಕಾಲದಲ್ಲಿ ಇದನ್ನು ರಚಿಸಲಾಗಿದೆ. ಇದರ ಹಿಂಭಾಗದಲ್ಲಿ ಒಂದು ಪುಷ್ಕರಣಿ ಇದೆ. ಈ ದೇವಸ್ಥಾನದ ಹಿಂಬದಿಯಲ್ಲಿ ಭದ್ರವಾದ ಗೋಡೆಯ ಮಧ್ಯದಲ್ಲಿ ಒಂದು ಪರಿವರ್ತನೆಗೊಂಡ ಮಸೀದಿ ಇದೆ. ಇದರ ರಚನೆಗೆ ದೇವಾಲಯದ ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯ ಈಶ್ಯಾನ್ಯ ಭಾಗದಲ್ಲಿ ರಕ್ಷಣಾ ಗೋಡೆಯ ಮಧ್ಯದಲ್ಲಿ ಒಂದು ಬದಿಯಲ್ಲಿ ಈಶ್ವರ ದೇವಸ್ಥಾನ ಹಾಗೂ ಮಸೀದಿಯ ಪ್ರಾರ್ಥನಾ ಸ್ಥಳ ಎರಡು ಇವೆ. ರಾಜರು ಹಿಂದೂ-ಮುಸ್ಲಿಂ ಸಮೂಹದ ಜನಾಂಗದ ರಕ್ಷಣೆಗಾಗಿ ಇವುಗಳನ್ನು ನಿರ್ಮಿಸಿದ್ದಾರೆ. ದೇವಾಲಯವು ಮುಖಮಂಟಪ, ನಂದಿ ಮಂಟಪ ಹಾಗೂ ಗರ್ಭ ಗೃಹ ವನ್ನು ಹೊಂದಿದೆ. ಕೋಟೆಯ ಎರಡನೆಯ ಭಾಗದಲ್ಲಿ ಇಸ್ಲಾಮಿಕ ಶೈಲಿಯ ಕಟ್ಟಡದ ಒಳಗಡೆ ಈರಪಯ್ಯನ ದೇವಸ್ಥಾನವಿದೆ.[೪] ಇದರ ಹಿಂಭಾಗದಲ್ಲಿ ಜೋಡು ಶಿಖರಗಳನ್ನು ಹೊಂದಿರುವ ಎರಡು ಗರ್ಭ ಗೃಹಗಳಿವೆ. ಇದರ ಒಳಗಡೆ ಯಾವುದೇ ಮೂರ್ತಿಶಿಲ್ಪ ಹಾಗೂ ಲಿಂಗ ಇರುವುದಿಲ್ಲ. ಕೋಟೆಯ ಆಗ್ನೇ ಭಾಗದಲ್ಲಿ ಪೂರ್ವಕ್ಕೆ ಮುಖ ಮಾಡಿಕೊಂಡಿರುವ 'ಸಂಜೀವ ಆಂಜನೆಯ' ದೇವಸ್ಥಾನವಿದೆ. ಈ ದೇವಾಲಯದ ನಿರ್ಮಾಣ ೧೯ನೆಯ ಶತಮಾನವಾದರೂ ಒಳಗಡೆಯ ಆಂಜನೇಯನ ಮೂರ್ತಿಶಿಲ್ಪವು ೧೪-೧೫ನೇಯ ಶತಮಾನದ್ದಾಗಿದೆ. ಕೋಟೆಯ ಈಶಾನ್ಯ ಭಾಗಕ್ಕೆ ಈಶ್ವರ ದೇವಸ್ಥಾನವಿದೆ. ಈ ರೀತಿ ನಾಗಾವಿ ಕೋಟೆಯ ನಾಲ್ಕು ಬದಿಯಲ್ಲಿ ಹಿಂದೂ-ಮುಸ್ಲಿಂ ದೇವಾಲಯಗಳು ಕೋಟೆಯ ರಕ್ಷಣೆಗಾಗಿ ಹಾಗೂ ತಮ್ಮ ಎಲ್ಲಾ ಪ್ರಜೆಗಳ ರಕ್ಷಣೆಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ.

ಗುಲಬರ್ಗಾ ಕೋಟೆಯಲ್ಲಿ ಹಿಂದೂ ಮತ್ತು ಮುಸ್ಲಿಂ ದೇವಾಲಯಕ್ಕೆ ಸಂಬಂಧಿಸಿದ ಸ್ಮಾರಕಗಳಿವೆ. ಜಾಮಿ ಮಸೀದಿಯು ಅತ್ಯಂತ ಭವ್ಯವಾದ ಪ್ರಾರ್ಥನಾಲಯವಾಗಿದೆ. ಈ ಕಟ್ಟಡವು ಕ್ರಿ.ಶ. ೧೩೬೭ರಲ್ಲಿ ಒಂದನೆಯ ಮಹಮ್ಮದನು ನಿರ್ಮಿಸಿದನೆಂದು ಅಲ್ಲಿಯ ಎರಡು ಪರ್ಶಿಯನ ಭಾಷೆಯ ಶಾಸನಗಳು ತಿಳಿಸುತ್ತವೆ.[೫] ಭಾರತದಲ್ಲಿಯೇ ಇದು ಅತ್ಯಂತ ದೊಡ್ಡ ಮಸೀದಿಯಾಗಿದೆ. ಇದರ ವಿಶೇಷತೆ ಎಂದರೆ ೨೧೬x೧೭೬ ಅಡಿ ಉದ್ದ ಹಾಗೂ ಅಗಲವಾಗಿರುವ ಪ್ರಾರ್ಥನಾಲಯದ ಮೇಲ್ಭಾಗವು ಗುಮ್ಮಟಗಳಿಂದ ಕೂಡಿದೆ.[೬] ಕೋಟೆಯ ಕೇಂದ್ರ ಭಾಗದಲ್ಲಿರುವ ಮಸೀದಿಯು ಉತ್ತರ ಭಾಗಕ್ಕೆ ಮುಖ ಮಾಡಿಕೊಂಡಿದೆ. ಇದರ ಪ್ರವೇಶಕ್ಕೆ ೨೧ ಮೆಟ್ಟಿಲುಗಳಿವೆ. ೩೦ ಅಡಿ ಎತ್ತರದ ಪ್ರವೇಶದ ಕಮಾನು ಅತ್ಯಂತ ಆಕರ್ಷಕವಾದ ಶೈಲಿಯಲ್ಲಿದೆ. ಇಂಡೊ-ಇಸ್ಲಾಂ ಶೈಲಿಯ ಈ ಕಟ್ಟಡವು ಪಶ್ಚಿಮಕ್ಕೆ ಮಾತ್ರ ಗೋಡೆಯನ್ನು ಹೊಂದಿದ್ದು ಉಳಿದ ಮೂರು ಭಾಗಗಳು ತೆರೆದ ಕಮಾನುಗಳಿಂದ ಕೂಡಿದೆ. ವಿಶಾಲವಾದ ಹಾಗೂ ಎತ್ತರವಾದ ಇದರ ಕಮಾನುಗಳು ಆಕರ್ಷಕವಾಗಿವೆ. ಇವುಗಳಲ್ಲಿ ಪರ್ಶಿಯನ್ ಶೈಲಿಯ ಪ್ರಭಾವವನ್ನು ಕಾಣಬಹುದು. ಒಳಗಡೆ ೧೧೫ ಕಂಬಗಳಿವೆ, ಈ ಕಂಬಗಳು ಕ್ರಮಬದ್ಧವಾಗಿ ಜೋಡಿಸಲಾಗಿದೆ. ಕಟ್ಟಡದ

ವಾಸ್ತುಶಿಲ್ಪಿ ಮಹಮ್ಮದ ರಫಿಯು ಉತ್ತರ ಏಷ್ಯಾಖಂಡದ ಪರ್ಶಿಯಾದಲ್ಲಿ ಬರುವ ಕಾರಡೋವಾದ ಖಜವಿನ್ ಪ್ರಾಂತದವನು. ಕಟ್ಟಡದ ಕೇಂದ್ರದಲ್ಲಿರುವ ಪ್ರಾರ್ಥನಾ ಸ್ಥಳವು ವಿಶಾಲವಾದ ಗುಮ್ಮಟವನ್ನು ಹೊಂದಿದೆ. ಗುಮ್ಮಟದ ಒಳಭಾಗದಲ್ಲಿ ಆಕರ್ಷಕವಾದ ಕಮಾನುಗಳು, ಕಂಬಗಳ ಅಲಂಕಾರ ಹಾಗೂ ಪ್ರತಿಯೊಂದು ಮೂಲೆಯಲ್ಲಿ ಎರಡು ಹಂತದ ಕಮಾನುಗಳಿವೆ. ಇದರ ಒಳಭಾಗದಲ್ಲಿ ಸುಂದರವಾದ ಕುರಾನಿನ ವಾಕ್ಯಗಳಿವೆ. ಬಹಮನಿ ಸುಲ್ತಾನರು ತಮ್ಮ ಪ್ರಜೆಗಳಿಗೆ ಇರುವ ಧಾರ್ಮಿಕ ಕೊರತೆಯನ್ನು ನೀಗಿಸಲು ಇಂತಹ ಭವ್ಯವಾದ ಮಸೀದಿಯನ್ನು ನಿರ್ಮಿಸಿದರು.

ಗುಲಬರ್ಗಾ ಕೋಟೆಯಲ್ಲಿ ಮತ್ತೊಂದು ಪ್ರಾರ್ಥನಾಲಯವಿದೆ. ಇದನ್ನು 'ಕಾಲಿಮಸೀದಿ' ಎಂದು ಕರೆಯುತ್ತಾರೆ. ಬಹಮನಿಯ ಪ್ರಾರಂಭಿಕ ಅರಸರು ಮೊದಲು ಈ ಮಸೀದಿಯನ್ನು ನಿರ್ಮಿಸಿದರು, ಅತ್ಯಂತ ಸರಳ ಶೈಲಿಯಲ್ಲಿರುವ ಈ ಮಸೀದಿಯ ರಚನೆಗೆ ಕಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಆದ್ದರಿಂದ ಇದನ್ನು ಕಾಲಿಮಸೀದಿ ಎಂದು ಕರೆಯುತ್ತಾರೆ. ಜಾಮಿ ಮಸೀದಿಯ ಮುಂಭಾಗದಲ್ಲಿ ಹಲವು ಧಾರ್ಮಿಕ ಕಟ್ಟಡಗಳಿವೆ. ಆದರೆ ಇವು ಸಂಪೂರ್ಣವಾಗಿ ಅವನತಿ ಹೊಂದಿವೆ. ಮೂಲತಹ ಹಿಂದು ಕೋಟೆಯಾಗಿರುವ ಇದರ ಒಳಗಡೆ ರಚನೆಗೆ ದೇವಾಲಯದ ಕಂಬಗಳನ್ನು ಬಳಸಿ ದ್ವಾರದ ಎರಡು ಬದಿಯಲ್ಲಿ ಮಂಟಪಗಳನ್ನು ರಚಿಸಲಾಗಿದೆ.[೭] ಕಲ್ಯಾಣಿ ಚಾಲುಕ್ಯ ಶೈಲಿಯನ್ನು ಹೋಲುವ ಈ ಕಂಬಗಳು ದೇವಾಲಯದ ರಚನೆಗೆ ಬಳಸಿರುವಂತೆ ಕಂಡು ಬರುತ್ತವೆ. ಸುಲ್ತಾನರು ತಮ್ಮ ಹಿಂದು ಪ್ರಜೆಗಳ ರಕ್ಷಣೆಗಾಗಿ ಇವುಗಳನ್ನು ನಾಶಗೊಳಿಸದೆ ಹಾಗೆ ಉಳಿಸಿಕೊಂಡು ಬಂದಿರುವಂತೆ ಕಂಡು ಬರುತ್ತದೆ. ಒಟ್ಟಿನಲ್ಲಿ ಹಿಂದೂ-ಮುಸ್ಲಿಂ ಧರ್ಮದ ಪ್ರಜೆಗಳ ರಕ್ಷಣೆಗಾಗಿ ಕೋಟೆಯ ಒಳಗಡೆ ಇವುಗಳನ್ನು ನಿರ್ಮಿಸಲಾಗಿದೆ.

ಬಹಮನಿ ಸುಲ್ತಾನರು ತಮ್ಮ ರಾಜ್ಯಧಾನಿಯನ್ನು ಫಿರೋಜಾಬಾದಗೆ ವರ್ಗಾಯಿಸಿ ಅಲ್ಲಿ ಕೋಟೆಯನ್ನು ಕಟ್ಟಿ ಅದರ ಒಳಗಡೆ ರಕ್ಷಣಾ ಸಂಬಂಧಿ ವಾಸ್ತುಶಿಲ್ಪಗಳಾದ ಮಸೀದಿಗಳನ್ನು ನಿರ್ಮಿಸಿದರು. ಕೋಟೆಯ ಕೇಂದ್ರ ಭಾಗದಲ್ಲಿ ಪೂರ್ವಕ್ಕೆ ಮುಖಮಾಡಿ ಜಾಮಿ ಮಸೀದಿ ಅತ್ಯಂತ ಪ್ರಮುಖ ಕಟ್ಟಡವಾಗಿದೆ.[೮] ಫಿರೋಜ ಶಹಾನು ಗುಲಬರ್ಗಾ ಮಾದರಿಯಲ್ಲಿ ಇದರ ಯೋಜನೆಯನ್ನು ತಯ್ಯಾರಿಸಿದ, ಸುಮಾರು ೧೦೦ ಅಡಿ ಅಗಲ ೧೫೦ ಅಡಿ ಉದ್ದನೆಯ ಸ್ಥಳದಲ್ಲಿ ಇದನ್ನು ನಿರ್ಮಿಸಲಾಗಿದೆ. ಇದರ ಪಶ್ಚಿಮ ಭಾಗವು ಗೋಡೆಯಿಂದ ಕೂಡಿದ್ದು, ಉಳಿದ ಮೂರು ಭಾಗಗಳು ಸರಳವಾದ ಕಮಾನುಗಳಿಂದ ಕೂಡಿದೆ. ಇದರ ಒಳಗಡೆ ಪಶ್ಚಿಮ ಭಾಗಕ್ಕೆ ೨೫ ಅಡಿ ಉದ್ದನೆಯವರೆಗೆ ೧೨ ಕಂಬಗಳಿಂದ ಕೂಡಿರುವ ಪ್ರಾರ್ಥನಾಲಯವಿದೆ. ಇದನ್ನು ನುಣುಪಾದ ಕಪ್ಪನೆಯ ಕಲ್ಲಿನಿಂದ ನಿರ್ಮಿಸಲಾಗಿದೆ. ಇದರ ಹಿಂಭಾಗದಲ್ಲಿ ಅರಮನೆ ಹಾಗೂ ಅರಸು ಪರಿವಾರದವರ ಹಲವು ಕಟ್ಟಡಗಳಿವೆ. ಪ್ರಸ್ತುತ ಈ ಮಸೀದಿಯ ಸಭಾಂಗಣವು ಸಂಪೂರ್ಣವಾಗಿ ನಾಶ ಹೊಂದಿದೆ. ಅದರ ಎಲ್ಲಾ ಕಂಬಗಳು ಹಾಗೂ ಮೇಲ್ಭಾಗದ ಕಟ್ಟಡ ಕುಸಿದು

ಬಿದ್ದಿರುವುದರಿಂದ ಇದರ ಶೈಲಿ, ರಚನೆ ಹಾಗೂ ವಿನ್ಯಾಸ ಕುರಿತು ಹೆಚ್ಚಿನ ಮಾಹಿತಿ ತಿಳಿದು ಬರುವುದಿಲ್ಲ. ವಿಶಾಲವಾದ ಕೋಟೆಯ ಒಳಭಾಗದಲ್ಲಿ ಇನ್ನೂ ಕೆಲವು ಧಾರ್ಮಿಕ ಕಟ್ಟಡಗಳು ಇರಬಹುದು. ಆದರೆ ಕೋಟೆಯ ಒಳಭಾಗದಲ್ಲಿ ಹೆಚ್ಚಿನ ಕಟ್ಟಡಗಳು ನಾಶ ಹೊಂದಿರುವುದರಿಂದ ಇವುಗಳು ಸಹ ನಾಶ ಹೊಂದಿರಬಹುದು. ಧರ್ಮವಂತನಾದ ಸುಲ್ತಾನ ಫಿರೋಜ್ ಶಹಾನು ತನ್ನ ಸಾಮ್ರಾಜ್ಯದ ಬೆಳವಣಿಗೆಗೆ ಹಾಗೂ ರಕ್ಷಣೆಗೆ ಧರ್ಮವನ್ನು ಸೂಕ್ತ ರೀತಿಯಲ್ಲಿ ಬಳಸಿಕೊಂಡ.

ಶಹಾಪೂರ ಕೋಟೆಯ ಮೇಲ್ಭಾಗದಲ್ಲಿ ಕೊನೆಯ ದ್ವಾರದ ಒಳಗಡೆ ಒಂದು ವಿಶಾಲವಾದ ಮಸೀದಿಯನ್ನು ನಿರ್ಮಿಸಲಾಗಿದೆ. ಔರಂಗಜೇಬನು ಕೋಟೆಯನ್ನು ವಶಪಡಿಸಿಕೊಂಡ ನಂತರ ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ಹಲವು ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿದನು. ಅವುಗಳಲ್ಲಿ ಪ್ರಾರ್ಥನಾಲಯ ಒಂದಾಗಿದೆ.[೬] ೧೫x೧೫ ಅಡಿ ಉದ್ದ ಅಗಲದ ಈ ಮಸೀದಿಯ ಪೂರ್ವ ಭಾಗಕ್ಕೆ ಕಮಾನಿನ ಆಕಾರದ ವಿಶಾಲ ಪ್ರವೇಶವಿದೆ. ಉಳಿದ ಮೂರು ಕಡೆಯಲ್ಲಿ ಗೋಡೆಯಿಂದ ಆವೃತ್ತವಾಗಿದೆ. ಎರಡನೆ ಹಂತದ ಕೋಟೆಯಲ್ಲಿ ಒಂದು ದೇವಾಲಯವಿದೆ. ಮೂಲತಃಹ ಹಿಂದೂಗಳಿಂದ ನಿರ್ಮಿತವಾಗಿರುವ ಈ ಕೋಟೆಯ ಪ್ರವೇಶದ ಮುಂಭಾಗದಲ್ಲಿ ಹಲವು ಪರಿವರ್ತನೆಗೊಂಡ ಧಾರ್ಮಿಕ ಕಟ್ಟಡಗಳಿವೆ. ಇವುಗಳ ಬಗೆಗೆ ಪೂರ್ಣ ಮಾಹಿತಿ ಯಾವುದೆ ಕೃತಿಯಲ್ಲಿ ಇರುವುದಿಲ್ಲ.

ಯಾದಗಿರ ಕೋಟೆಯಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮಕ್ಕೆ ಸಂಬಂದಿಸಿದ ಧಾರ್ಮಿಕ ಕಟ್ಟಡಗಳಿವೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ಈ ಕೋಟೆಯಿಂದ ಹಿಂದೂಗಳು ಆಳ್ವಿಕೆ ಮಾಡುತ್ತಿದ್ದರು. ಆಗ ಅವರು ತಮ್ಮ ರಕ್ಷಣೆಗೆ ದೇವಾಲಯಗಳನ್ನು ನಿರ್ಮಿಸಿಕೊಂಡರು. ಅದರಲ್ಲಿ ಕೋಟೆಯ ಕೆಳಭಾಗ ಬೃಹತ್ ಬಂಡೆಯಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ತೀರ್ಥಂಕರರ ಮೂರ್ತಿಗಳನ್ನು ಕೊರೆಯಲಾಗಿದೆ. ಇದರ ಸಮೀಪದಲ್ಲಿ ಒಂದು ಹಿಂದೂ ದೇವಾಲಯವಿದೆ. ಈ ಕೋಟೆಯನ್ನು ಆದಿಲ್ ಶಾಹಿಗಳು ವಶಪಡಿಸಿಕೊಂಡ ನಂತರ ಅದರ ಮೇಲ್ಭಾಗದಲ್ಲಿ ಒಂದು ಮಸೀದಿಯನ್ನು ನಿರ್ಮಿಸಿದರು. ಕೋಟೆಯ ಉತ್ತರ ಭಾಗದಲ್ಲಿ ಇರುವ ಮಸೀದಿಯು ಅತ್ಯಂತ ಆಕರ್ಷಕವಾಗಿದೆ. ಮೂರು ಅಂಕಣಗಳಿಂದ ಕೂಡಿರುವ ಈ ಮಸೀದಿಯು ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಹೊಂದಿದೆ. ಇದರ ರಚನೆಗೆ ಕಲ್ಲಿನ ಕಂಬಗಳನ್ನು ಬಳಸಲಾಗಿದೆ. ಮಸೀದಿಯ ಮುಂಭಾಗದಲ್ಲಿ ವಿಶಾಲವಾದ ಸ್ಥಳವಿದೆ. ಅಲ್ಲದೆ ಇದರ ಕೆಳಭಾಗದಲ್ಲಿ ಚಿಕ್ಕ ಚಿಕ್ಕ ಕೊಠಡಿಗಳಿವೆ. ಇಲ್ಲಿ ಸಾಧು ಸಂತರು ವಾಸವಾಗಿದ್ದು ಜನತೆಗೆ ಉಪದೇಶಗಳನ್ನು ನೀಡುತ್ತಿದ್ದರು.

ವಾಗಣಗೇರಿಯ ಕೋಟೆಯ ಒಳಗಡೆ ಈಶಾನ್ಯ ಭಾಗದಲ್ಲಿ ಅವನತಿ ಹೊಂದಿರುವ ದೇವಾಲಯದ ಅವಶೇಷಗಳಿವೆ. ಸುರಪುರ ನಾಯಕರ ಕಾಲದಲ್ಲಿ ನಿರ್ಮಿಸಿರುವ ಈ ಕೋಟೆಯಲ್ಲಿ ತಮ್ಮ ಇಷ್ಟ ದೇವರಾದ ವೇಣುಗೋಪಾಲ ಸ್ವಾಮಿಯ ದೇವಾಲಯನ್ನು ನಿರ್ಮಿಸಿದ್ದಾರೆ. ಪ್ರಸ್ತುತ ಕೋಟೆಯ

[illegible]

ಒಳಗಡೆ ದೇವಾಲಯಕ್ಕೆ ಸಂಬಂಧಿಸಿದ ಅವಶೇಷಗಳು ಸುತ್ತಲಿನ ಸ್ಥಳದಲ್ಲಿ ಬಿದ್ದಿವೆ. ಬೆಣಚದ ಕಲ್ಲಿನಲ್ಲಿ ಇರುವ ಕಂಬಗಳು, ಬೋದಿಗೆಗಳು ಮತ್ತು ಇತರ ಅವಶೇಷಗಳು ಆಕರ್ಷಕವಾಗಿವೆ. ಈ ದೇವಾಲಯದ ವೇದಿಕೆ ಮಾತ್ರ ಹಾಗೆ ಉಳಿದುಕೊಂಡಿದೆ. ಔರಂಗಜೇಬನ ಮುತ್ತಿಗೆಯ ಕಾಲಕ್ಕೆ ಮೊದಲು ದೇವಾಲಯವನ್ನು ಧ್ವಂಸಗೊಳಿಸಿ ನಂತರ ಕೋಟೆಯ ಪಶ್ಚಿಮ ಭಾಗಕ್ಕೆ ಒಂದು ಮಸೀದಿಯನ್ನು ಸ್ಥಾಪಿಸಿದ.[೧೦] ಇದನ್ನು ತನ್ನ ಮುಸ್ಲಿಂ ಪ್ರಜೆಗಳ ರಕ್ಷಣೆಗಾಗಿ ನಿರ್ಮಿಸಿದ. ವನದುರ್ಗ ಕೋಟೆಯಲ್ಲಿ ಈಶ್ವರ ದೇವಸ್ಥಾನ ಹಾಗೂ ಹನುಮಂತ ದೇವಸ್ಥಾನಗಳಿವೆ. ಈ ದೇವಾಲಯಗಳು ಕೋಟೆಯ ಪಶ್ಚಿಮ ಭಾಗದಲ್ಲಿವೆ. ಅತ್ಯಂತ ಸರಳ ಶೈಲಿಯಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಸುರಪುರ ಕೋಟೆಯ ಒಳಗಡೆ ವೇಣುಗೋಪಾಲ ಸ್ವಾಮಿ ದೇವಾಲಯವನ್ನು ಪೀತಾಂಬರ ಬಹರಿ ಪಿಡ್ಡನಾಯಕನ ಕಾಲದಲ್ಲಿ ಆರಂಭವಾಯಿತು. ಇದರ ಕಾರ್ಯ ರಮಣಪ್ಪ ನಾಯಕರ ಕಾಲದಲ್ಲಿ ಮುಕ್ತಾಯಗೊಂಡಿತು.

ಗುರಮಿಠಕಲ ಕೋಟೆಯಲ್ಲಿ ಯಾವುದೇ ಧಾರ್ಮಿಕ ಕಟ್ಟಡಗಳು ಉಳಿದಿರುವುದಿಲ್ಲ. ಚಂದ್ರಕಿಯ ಕೋಟೆಯ ಕೇಂದ್ರ ಭಾಗದಲ್ಲಿ ಮಲ್ಲಿಕಾರ್ಜುನ ದೇವಸ್ಥಾನವಿದೆ. ಪ್ರವೇಶದ್ವಾರದ ಮುಂಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿಕೊಂಡಿರುವ ಈ ದೇವಾಲಯದ ಸುತ್ತಲು ಎತ್ತರವಾದ ಗೋಡೆಯನ್ನು ನಿರ್ಮಿಸಲಾಗಿದೆ. ಗರ್ಭ ಗೃಹದಲ್ಲಿ ಶಿವಲಿಂಗವಿದೆ.[೧೧] ಮುಂಭಾಗದಲ್ಲಿರುವ ಮುಖ ಮಂಟಪ ಹಾಗೂ ಕಲ್ಯಾಣ ಮಂಟಪಗಳು ಕಲ್ಯಾಣಿ ಚಾಲುಕ್ಯರ ಶೈಲಿಯನ್ನು ಹೊಲುತ್ತವೆ.

ಗುಲಬರ್ಗಾ ಜಿಲ್ಲೆಯ ಇತರ ಕೋಟೆಗಳಾದ ಇಜೇರಿ ಕೋಟೆ ಕಾಕಲ್‌ವಾರ ಕೋಟೆ, ಬಂದರವಾಡ ಕೋಟೆ, ಅತನೂರು, ಪುಟಪಾಗ್, ಗಾಜರಕೋಟೆ, ಆಡಕಿ, ಶಿಲಾರಕೋಟ, ಮುದೋಳ ಕೋಟೆ, ಹಲಕಟ್ಟಿ, ಕೊಲ್ಲೂರು, ಇಂಗಳಕಿ ಮುಂತಾದ ಗ್ರಾಮ ರಕ್ಷಣೆ ಕೋಟೆಗಳಲ್ಲಿ ಈಶ್ವರ ದೇವಾಲಯ, ಮಲ್ಲಿಕಾರ್ಜುನ, ಆಂಜನೆಯ ಮತ್ತು ಇತರ ದೇವಾಲಯಗಳಿವೆ. ಒಟ್ಟಿನಲ್ಲಿ ಕೋಟೆಯ ರಕ್ಷಣೆಯಲ್ಲಿ ದೈವಿ ಶಕ್ತಿಯು ಅತ್ಯಂತ ಪ್ರಮುಖವಾಗಿದೆ ಎಂದು ಅರಿತುಕೊಂಡ ಎಲ್ಲಾ ಅರಸರು ಅಥವಾ ಸುಲ್ತಾನರು ತಮ್ಮ ತಮ್ಮ ಧರ್ಮಕ್ಕೆ ಸಂಬಂಧಿಸಿದ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಆದ್ದರಿಂದ ಅಪ್ರತ್ಯಕ್ಷವಾಗಿ ದೇವಾಲಯಗಳು ಸಹ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಾಗಿವೆ. ಎಲ್ಲಾ ಕೋಟೆಗಳಲ್ಲಿ ಪುರುಷ ದೇವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಅದರಲ್ಲಿ ವಿಶೇಷವಾಗಿ ಶಕ್ತಿ ಸಾಮರ್ಥ್ಯಕ್ಕೆ ಹೆಸರಾದ ಹನುಮಂತನ ಮೂರ್ತಿ ಶಿಲ್ಪವು ಎಲ್ಲಾ ಕೋಟೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಆತನ ಶಕ್ತಿ ನಮ್ಮನ್ನು ರಕ್ಷಿಸಲಿ ಎನ್ನುವ ಭಾವನೆ ಅರಸರಲ್ಲಿ ಇರುತ್ತದೆ. ಜಿಲ್ಲೆಯ ಪ್ರತಿಯೊಂದು ಕೋಟೆಯಲ್ಲಿ ಒಂದು ಅಥವಾ ಹೆಚ್ಚಿನ ದೇವಾಲಯಗಳು ನಿರ್ಮಾಣಗೊಂಡಿರುವದು ಕಂಡು ಬರುತ್ತದೆ.

[illegible]

೫.೨. ಅರಮನೆಗಳು

ಅರಸರನ್ನು ಹಾಗೂ ಅವರ ಪರಿವಾರದ ಸದಸ್ಯರನ್ನು ರಕ್ಷಿಸುವಲ್ಲಿ ಅರಮನೆಗಳು ಮಹತ್ವದ ಪಾತ್ರವಹಿಸುತ್ತವೆ. ರಾಜ್ಯದ ಸರ್ವಶ್ರೇಷ್ಠ ವ್ಯಕ್ತಿಯಾಗಿರುವ ಅರಸ ಹಾಗೂ ಆತನ ಪರಿವಾರದ ರಕ್ಷಣೆಗಾಗಿ ಎಲ್ಲರೂ ಶ್ರಮಿಸುತ್ತಿದ್ದರು. ಕೋಟೆಯಂತೆ ಅತ್ಯಂತ ಭದ್ರವಾದ ಅರಮನೆಯನ್ನು ಕೋಟೆಯ ಒಳಗಡೆ ಅಥವಾ ದೂರದ ಪ್ರದೇಶದಲ್ಲಿ ನಿರ್ಮಿಸಲಾಗುತ್ತಿತ್ತು. ಅರಸರು ರಾಣಿಯರ ರಕ್ಷಣೆಗಾಗಿ ಹಲವು ಬಗೆಯ ಅರಮನೆಗಳನ್ನು ನಿರ್ಮಿಸುತ್ತಿದ್ದರು. ಗುಲಬರ್ಗಾ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವ ಪ್ರತಿಯೊಂದು ಮನೆತನದ ಅರಸರು ತಮ್ಮ ರಕ್ಷಣೆಗಾಗಿ ಅರಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅರಸನು ಯಾವ ಅರಮನೆಯಲ್ಲಿದ್ದಾನೆ ಎನ್ನುವ ಮಾಹಿತಿಯು ಕೇವಲ ಅಂಗರಕ್ಷರಿಗೆ ಮಾತ್ರ ಇರುತ್ತದೆ. ಏಕೆಂದರೆ ಹಲವು ಯುದ್ಧಗಳಿಂದ ಹಲವರನ್ನು ಶತ್ರುಗಳನ್ನಾಗಿಸಿಕೊಂಡಿರುವ ಅರಸನಿಗೆ ಹೆಚ್ಚಿನ ಅಪಾಯಗಳು ಇರುತ್ತಿದ್ದವು. ಆದ್ದರಿಂದ ಕೆಲವು ಗೌಪ್ಯ ಸ್ಥಳಗಳಲ್ಲಿ ಅರಸನು ತನ್ನ ವಾಸಕ್ಕಾಗಿ ಅರಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದನು. ಗುಲಬರ್ಗಾ ಜಿಲ್ಲೆಯಲ್ಲಿ ಹಲವು ಕೋಟೆಗಳಿವೆ. ಆದರೆ ಕೆಲವು ಕೋಟೆಗಳಲ್ಲಿ ಮಾತ್ರ ಅರಮನೆಗೆ ಸಂಬಂಧಿಸಿದ ಅವಶೇಷಗಳು ಕಂಡು ಬರುತ್ತವೆ. ಉಳಿದ ಕೋಟೆಗಳಲ್ಲಿಯ ಅರಮನೆಗಳು ಧ್ವಂಸಗೊಂಡಿವೆ. ಏಕೆಂದರೆ ಆಕ್ರಮಣಕಾರರು ಕೋಟೆಯನ್ನು ವಶಪಡಿಸಿಕೊಂಡ ನಂತರ ಅರಮನೆಯ ಮೇಲೆ ದಾಳಿ ಮಾಡಿ ಅಲ್ಲಿಯ ಸಂಪತ್ತನ್ನು ವಶಪಡಿಸಿಕೊಳ್ಳುತ್ತಿದ್ದರು. ಅರಸರ ಆಳ್ವಿಕೆಯು ಅಂತ್ಯಗೊಂಡ ನಂತರ ಸ್ಥಳಿಯರು ಅರಮನೆಯನ್ನು ಸಂಪೂರ್ಣವಾಗಿ ಧ್ವಂಸಗೊಳಿಸಿ ಅಲ್ಲಿಯ ಕಲ್ಲು ಮಣ್ಣು ಸಮೇತ ಎಲ್ಲಾ ಅವಶೇಷಗಳನ್ನು ಹೊತ್ತುಕೊಂಡು ಹೋಗಿರುವುದರಿಂದ ಅರಮನೆಗೆ ಸಂಬಂಧಿಸಿದ ಅವಶೇಷಗಳು ಸಂಪೂರ್ಣವಾಗಿ ನಾಶ ಹೊಂದಿವೆ. ನಿಧಿಯ (ಸಂಪತ್ತಿನ) ಆಶೆಯಿಂದ ಆಸ್ಥಳವನ್ನು ತೋಡಿ ಉಳಿದ ಕಟ್ಟಡವನ್ನು ನೆಲಸಮ ಮಾಡಲಾಗಿದೆ. ಕೆಲವು ಕೋಟೆಗಳಲ್ಲಿ ಲಭ್ಯವಾದ ಅರಮನೆಯ ಅವಶೇಷಗಳನ್ನು ಆಧಾರವಾಗಿಟ್ಟುಕೊಂಡು ಅರಮನೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ೧೮ ಹಾಗೂ ೧೯ನೆಯ ಶತಮಾನದಲ್ಲಿ ಆಳ್ವಿಕೆ ಮಾಡಿರುವ ನಾಯಕರು ದೇಸಾಯಿಗಳು ಹಾಗೂ ದೇಶಮುಖರ ಅರಮನೆಗಳನ್ನು ಹಾಗೂ ಸಮಕಾಲೀನ ಬರಹಗಳನ್ನು ಆಧಾರವಾಗಿಟ್ಟುಕೊಂಡು ಅರಮನೆಯ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಗುಲಬರ್ಗಾ ಕೋಟೆಯಲ್ಲಿ ಅರಮನೆಗೆ ಸಂಬಂಧಿಸಿದ ಯಾವುದೇ ಕಟ್ಟಡಗಳ ಲಭ್ಯವಾಗಿರುವುದಿಲ್ಲ. ಆದರೆ ಜಾಮಿ ಮಸೀದಿಯ ಹಿಂಭಾಗದಲ್ಲಿ ಎತ್ತರವಾದ ಮಣ್ಣಿನ ದಿನ್ನೆಗಳಿವೆ, ಅಲ್ಲದೆ ಮಸೀದಿಯಿಂದ ಇಲ್ಲಿಗೆ ಹೋಗಲು ಪ್ರಮುಖ ಮಾರ್ಗವಿದೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಸ್ಥಳದಲ್ಲಿ ಅರಮನೆ ಹಾಗೂ ಇತರ ಪ್ರಮುಖ ಕಟ್ಟಡಗಳು ನಿರ್ಮಿಸಿರಬಹುದಾಗಿದೆ. ಪ್ರಾಚ್ಯವಸ್ತು ಇಲಾಖೆಯ ವರದಿಯ ಪ್ರಕಾರ ಈ ಸ್ಥಳದಲ್ಲಿ ಅರಮನೆಯ ಕಟ್ಟಡ ಇತ್ತೆಂದು ಹೇಳಲಾಗಿದೆ. ಭೂಉತ್ಖನನ ಕಾರ್ಯದಿಂದ ಇದರ ಬಗ್ಗೆ ಪೂರ್ಣ ಮಾಹಿತಿಯು ಲಭ್ಯವಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಅತ್ಯಂತ ಭದ್ರವಾದ

ತಳಪಾಯ ಕಂಡು ಬರುತ್ತದೆ. ಇದರ ಮೇಲೆ ಎರಡು ಅಥವಾ ಮೂರು ಅಂತಸ್ತಿನ ಕಟ್ಟಡ ರಚಿಸಲು ಸಾಧ್ಯ. ಬೀದರದಲ್ಲಿ ಲಭ್ಯವಾದ ಅರಮನೆಯ ಕಟ್ಟಡಗಳನ್ನು ಪ್ರಮುಖವಾಗಿಟ್ಟುಕೊಂಡು ಗುಲಬರ್ಗಾವನ್ನು ಆಳಿರುವ ಪ್ರಾರಂಭಿಕ ಸುಲ್ತಾನರು ಇದೆ ಸ್ಥಳದಲ್ಲಿ ಅರಮನೆಯನ್ನು ನಿರ್ಮಿಸಿರಬಹುದೆಂದು ಹೇಳಲಾಗಿದೆ.[೧೧] ಇಸ್ಲಾಂ ಸಂಪ್ರದಾಯದ ಪ್ರಕಾರ ಮಸೀದಿಯ ಸುತ್ತಮುತ್ತಲು ಅರಮನೆ ಇರುತ್ತದೆ. ಆದ್ದರಿಂದ ಬಹಮನಿ ಸುಲ್ತಾನರು ಇಲ್ಲಿ ತಮ್ಮ ಅರಮನೆಯನ್ನು ನಿರ್ಮಿಸಿರಬಹುದಾಗಿದೆ. ಕೋಟೆಯ ಒಳಗಡೆ ಆರನೆಯ ದ್ವಾರದ ಮೇಲ್ಭಾಗದಲ್ಲಿ ೧೫x೨೦ ಅಡಿ ಉದ್ದ ಅಗಲದ ಎರಡು ಅಂಕಣದ ಸ್ಥಳವಿದೆ. ಅಲಂಕಾರದಿಂದ ಕೂಡಿರುವ ಈ ಕಟ್ಟಡವು ಸುಲ್ತಾನ ವಾಸಸ್ಥಳಗಳಾಗಿರಬಹುದಾಗಿದೆ. ಈ ರೀತಿ ಕೋಟೆಯ ಒಳಗಡೆ ಇರುವ ಸುರಕ್ಷಿತ ಕಟ್ಟಡಗಳಲ್ಲಿ ಸುಲ್ತಾನರು ವಾಸವಾಗಿರುತ್ತಿದ್ದರು.

ಗುಲಬರ್ಗಾದಿಂದ ಉತ್ತರ ಭಾಗಕ್ಕೆ ೫ ಕಿ.ಮೀ. ದೂರದಲ್ಲಿ ಸುಲ್ತಾನಪುರ ಗ್ರಾಮವಿದೆ. ಇಲ್ಲಿ ಸುಲ್ತಾನರು ವಾಸವಾಗಿರುತ್ತಿದ್ದರು ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಅರಮನೆಗೆ ಸಂಬಂಧಿಸಿದ ಕೆಲವು ಕಟ್ಟಡಗಳು ಇಲ್ಲಿ ಕಂಡು ಬರುತ್ತವೆ.[೧೨] ೧೫೦ ಅಡಿ ಉದ್ದ ೨೦೦ ಅಡಿ ಅಗಲದ ಸ್ಥಳದ ಸುತ್ತಲು ಕೋಟೆಯನ್ನು ನಿರ್ಮಿಸಿ, ಒಳಗಡೆ ಕೆಲವು ಕಟ್ಟಡಗಳನ್ನು ನಿರ್ಮಿಸಲಾಗಿದೆ. ಪ್ರಸ್ತುತ ಈ ಪ್ರದೇಶದಲ್ಲಿಯ ಎಲ್ಲಾ ಕಟ್ಟಡಗಳು ಅವನತಿ ಹೊಂದಿವೆ. ಅದರಲ್ಲಿ ಕೇವಲ ಎರಡು ಭಾಗದ ಕಮಾನುಗಳು ಹಾಗೂ ಕೇಂದ್ರದ ಒಂದು ಗುಮ್ಮಟ ಮಾತ್ರ ಉಳಿದುಕೊಂಡಿದೆ.

ಫಿರೋಜಾಬಾದ ಕೋಟೆಯ ಒಳಗಡೆ ಹವಾನಿಯಂತ್ರಿತ ಅರಮನೆಯನ್ನು ಫಿರೋಜ್‌ಶಹಾನು ನಿರ್ಮಿಸಿದನು.[೧೩] ಜಾಮಿ ಮಸೀದಿಯ ಹಿಂಭಾಗದಲ್ಲಿ ಬೇರೆ ಬೇರೆ ಅರಮನೆಗಳನ್ನು ನಿರ್ಮಿಸಲಾಗಿದೆ. ಇಲ್ಲಿಯ ವಿಶಾಲವಾದ ಪ್ರದೇಶದಲ್ಲಿ ನಿರ್ಮಿಸಿರುವ ಹಲವು ಕಟ್ಟಡಗಳಲ್ಲಿ ಕೆಲವು ಕಟ್ಟಡಗಳು ಮಾತ್ರ ಉಳಿದು ಕೊಂಡಿವೆ. ಫಿರೋಜ್‌ಶಹಾನ ಕಾಲದಲ್ಲಿ ರಚನೆಗೊಂಡ ಕಟ್ಟಡಗಳಲ್ಲಿ ಹೊಸ ಶೈಲಿಯನ್ನು ಅಳವಡಿಸಲಾಗಿದೆ. ಅದರಲ್ಲಿ ಹವಾನಿಯಂತ್ರಿತ ಅರಮನೆಯು ಒಂದಾಗಿದೆ. ಪರ್ಶಿಯನ್ ಮೂಲದ ರಾಣಿಯರಿಗಾಗಿ ಇವುಗಳನ್ನು ನಿರ್ಮಿಸಲಾಯಿತು. ಭೀಮಾ ನದಿಯ ತೀರದಲ್ಲಿ ನಿರ್ಮಿಸಿರುವ ಈ ಅರಮನೆಯ ಹೊಸ ಮಾದರಿಯ ಕಟ್ಟಡವಾಗಿದೆ. ನದಿಯ ನೀರಿನ ಮೇಲಿನಿಂದ ಸೂಸಿ ಬರುವ ತಣ್ಣನೆಯ ಗಾಳಿಯು ನೇರವಾಗಿ ಅರಮನೆಯನ್ನು ಪ್ರವೇಶಿಸುವಂತೆ ರಚಿಸಲಾಗಿದೆ. ೮೦ x ೧೦೦ ಅಡಿ ಉದ್ದ ಅಗಲದಲ್ಲಿ ನಿರ್ಮಿಸಿರುವ ಈ ಕಟ್ಟಡವು ಕೇಂದ್ರದಲ್ಲಿ ಐದು ಅಂಕಣಗಳನ್ನು ಹೊಂದಿದೆ. ಚೌಕಾಕಾರದಲ್ಲಿರುವ ಅರಮನೆಯ ಮೇಲ್ಭಾಗದಲ್ಲಿ ನಾಲ್ಕು ಬದಿಯಲ್ಲಿ ಪಿರ‍್ಯಮಿಡ್ ಆಕಾರದ ಗೋಪುರಗಳು ಹಾಗೂ ಕೇಂದ್ರ ಭಾಗದಲ್ಲಿ ವೃತ್ತಾಕಾರದ ಗುಮ್ಮಟವಿದೆ. ಇವುಗಳ ಸುತ್ತಲು ನಾಲ್ಕು ಹಂತದಲ್ಲಿ ರಂಧ್ರಗಳನ್ನು ಹಾಕಲಾಗಿದೆ. ಈ ಕಟ್ಟಡದ ಎರಡು ಬದಿಯಲ್ಲಿ ಅರಮನೆಗಿಂತ ಎತ್ತರವಾದ ಗೋಡೆಯನ್ನು ನಿರ್ಮಿಸಲಾಗಿದೆ. ನದಿಯ ಮೇಲಿನಿಂದ ಬರುವ ತಣ್ಣನೆಯ ಗಾಳಿಯನ್ನು ತಡೆಹಿಡಿದು ಗುಮ್ಮಟಗಳ

ರಂಧ್ರದ ಮೂಲಕ ಅರಮನೆಯನ್ನು ಪ್ರವೇಶಿಸುವಂತೆ ಮಾಡಲಾಗಿದೆ. ಇದೊಂದು ಹೊಸ ಮಾದರಿಯ ಕಟ್ಟಡವಾಗಿದೆ. ಇದರ ಸುತ್ತಲು ಅರಮನೆಗೆ ಸಂಬಂಧಿಸಿದ ಇತರ ಕಟ್ಟಡಗಳ ಅವಶೇಷಗಳಿವೆ. ದಕ್ಷಿಣ ಭಾಗಕ್ಕೆ ಮುಖ ಮಾಡಿಕೊಂಡಿರುವ ೧೨ ಕಮಾನುಗಳ ಪ್ರವೇಶವನ್ನು ಹೊಂದಿರುವ ಎರಡು ಅಂತಸ್ತಿನ ಅರಮನೆಯು ಹಲವು ಕೊಠಡಿಗಳನ್ನು ಹೊಂದಿದೆ. ಆದರೆ ಇಲ್ಲಿ ಸಂಪೂರ್ಣವಾಗಿ ಮುಳ್ಳಿನ ಗಿಡಗಳು ಬೆಳೆದಿರುವುದರಿಂದ ಹೆಚ್ಚಿನ ಮಾಹಿತಿ ಸಂಗ್ರಹಿಸುವುದು ಸಾಧ್ಯವಾಗಲಿಲ್ಲ.

ಶಹಾಪೂರು ಬೆಟ್ಟದ ಕೋಟೆಯ ಮೇಲ್ಭಾಗದಲ್ಲಿ ಅರಮನೆಗೆ ಸಂಬಂಧಿಸಿದ ಹಲವು ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಔರಂಗಜೇಬನು ದಕ್ಷಿಣ ಭಾರತದ ಆಕ್ರಮಣದಲ್ಲಿ ಹಲವು ವರ್ಷಗಳವರೆಗೆ ಇಲ್ಲಿಯೇ ವಾಸವಾಗಿದ್ದನು. ಆದ್ದರಿಂದ ಆತನು ಅನುಕೂಲಕ್ಕಾಗಿ ಅರಮನೆ, ಮಸೀದಿ, ಸಭಾ ಭವನ ಹಾಗೂ ಇತರ ಕಟ್ಟಡಗಳನ್ನು ನಿರ್ಮಿಸಿದ ಮಸೀದಿಯ ಹಿಂಭಾಗದಲ್ಲಿ ೨೦೦ ಅಡಿ ಉದ್ದ, ೧೦೦ ಅಡಿ ಅಗಲದಲ್ಲಿ ಹಲವು ಕಟ್ಟಡಗಳನ್ನು ನಿರ್ಮಿಸಲಾಗಿದೆ ಈ ಎಲ್ಲಾ ಕಟ್ಟಡಗಳು ಅರಸು ಪರಿವಾರಕ್ಕೆ ಸಂಬಂಧಿಸಿದ ಕಟ್ಟಡಗಳಾಗಿವೆ. ಇದರ ಸಮೀಪದಲ್ಲಿ ಸಭಾ ಭವನ, ನೀರಿನ ಸಂಗ್ರಹ, ಕಾವಲುಗಾರರ ನಿವಾಸಗಳು ಹಾಗೂ ಹೆಚ್ಚಿನ ರಕ್ಷಣೆಗಾಗಿ ಎರಡು ಬದಿಯಲ್ಲಿ ಬೃಹದ್ಧಾಕಾರದ ತೋಪುಗಳನ್ನು ನಿಲ್ಲಿಸಲಾಗಿದೆ. ಆದರೆ ಪ್ರಸ್ತುತ ಇಲ್ಲಿಯ ಕಟ್ಟಡಗಳು ಅವನತಿ ಹೊಂದಿದ್ದು ಕೇವಲ ತಳಭಾಗದ ರಚನೆ ಮಾತ್ರ ಉಳಿದುಕೊಂಡಿವೆ.[೧೪]

ಸುರಪುರದಲ್ಲಿ ಎರಡು ಅರಮನೆಗಳಿವೆ, ಉತ್ತರ ಭಾಗದಲ್ಲಿ ಇರುವ ಅರಮನೆಯನ್ನು 'ಹಳೆ ದರ್ಬಾರ' (ಹಳೆ ಅರಮನೆ) ಎಂದು, ದಕ್ಷಿಣ ಭಾಗದಲ್ಲಿರುವ ಅರಮನೆಯನ್ನು ಹೊಸ ದರ್ಬಾರ ಎಂದು ಕರೆಯಲಾಗಿದೆ.[೧೫] ಹಳೆ ದರ್ಬಾರ ಕಟ್ಟಡವನ್ನು ರಾಜಾವೆಂಕಟಪ್ಪನಾಯಕನ ಕಾಲದಲ್ಲಿ (ಕ್ರಿ.ಶ. ೧೭೪೭-೫೨) ನಿರ್ಮಿಸಲಾಗಿದೆ ಎಂದು ಕೈಫಿಯತ್ತುಗಳಲ್ಲಿ ಉಲ್ಲೇಖಿಸಲಾಗಿದೆ. ನಾಲ್ಕು ಅಂತಸ್ತಿನಿಂದ ಕೂಡಿರುವ ಈ ಅರಮನೆಯು ಹಲವು ಆಯತಾಕಾರದ ಭವನಗಳನ್ನು, ವಿಶಾಲವಾದ ಪ್ರವೇಶ ದ್ವಾರಗಳನ್ನು ಹಾಗೂ ಹಲವು ಕೊಠಡಿಗಳನ್ನು ಹೊಂದಿದೆ. ಇತ್ತೀಚಿಗೆ ಇದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿರುವುದರಿಂದ ಹಳೆಯ ಕಟ್ಟಡ ಪೂರ್ತಿಯಾಗಿ ಉಳಿದುಕೊಂಡಿಲ್ಲ. ನಾಲ್ಕು ಅಂತಸ್ತಿನ ಅರಮನೆಯಲ್ಲಿ ಕಟ್ಟಿಗೆ ಬಳಕೆಯು ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ. ರಾಜರು ತಮ್ಮ ಅರಮನೆಯಿಂದಲೆ ವೇಣು ಗೋಪಾಲ ಸ್ವಾಮಿಯ ದರ್ಶನ ಪಡೆಯುವಂತೆ ಒಂದು ಕೋಣೆಯನ್ನು ನಿರ್ಮಿಸಲಾಗಿದೆ. ಅಲ್ಲದೆ ಇಲ್ಲಿಂದ ಕೆಲವು ಗುಪ್ತ ಮಾರ್ಗಗಳು ಬೇರೆ ಬೇರೆ ಸ್ಥಳಗಳಿಗೆ ಸಂಪರ್ಕ ಹೊಂದಿವೆ.

ದಕ್ಷಿಣ ಭಾಗದಲ್ಲಿರುವ 'ನಯಾದರ್ಬಾರ' (ಹೊಸ ಅರಮನೆ) ೧೯ನೆಯ ಶತಮಾನದಲ್ಲಿ ರಚನೆಗೊಂಡಿದೆ.[೧೬] ಮೊಡೋಸ್ ಟೈಲರ್‌ನ ಮೇಲ್ವಿಚಾರಣೆಯಲ್ಲಿ ಇದನ್ನು ನಿರ್ಮಿಸಲಾಗಿದೆ. ತನ್ನ ಆತ್ಮ ಚರಿತ್ರೆಯಲ್ಲಿ ಈ ಕುರಿತು ಉಲ್ಲೇಖಿಸಿದ್ದಾನೆ. ಈ ಅರಮನೆಯು ಮೂರು ಅಂತಸ್ತಿನಲ್ಲಿ ರಚಿಸಲಾಗಿದ್ದು.

[illegible]

ಇದರಲ್ಲಿ ವಿಶಾಲವಾದ ಆಯತಾಕಾರದ ಸಭಾ ಭವನಗಳು, ವಾಸದ ಕೊಠಡಿಗಳು, ಹಾಗೂ ಪ್ರತಿಯೊಂದು ಅಂತಸ್ತಿನ ದ್ವಾರಬಾಗಿಲುಗಳು ವಿಶೇಷತೆಯಿಂದ ಕೂಡಿವೆ. ಅರಸು ಪರಿವಾರದವರಿಗಾಗಿ ಹಾಗೂ ಮಂತ್ರಿ ಮಂಡಳದ ಸದಸ್ಯರಿಗಾಗಿ ಪ್ರತ್ಯೇಕ ನಿವಾಸಗಳನ್ನು ರಚಿಸಲಾಗಿದೆ. ಈ ಅರಮನೆಯ ಆಧಾರದ ಮೇಲೆ ಕೋಟೆಯಲ್ಲಿ ರಚನೆಗೊಂಡಿರುವ ಇತರ ಅರಮನೆಗಳ ಕುರಿತು ಮಾಹಿತಿ ಸಂಗ್ರಹಿಸಬಹುದಾಗಿದೆ.

ಯಾದಗಿರ ಕೋಟೆಯ ಮೇಲ್ಭಾಗದ ಜಾಮಿ ಮಸಿದಿಯ ಹಿಂಭಾಗದಲ್ಲಿ 'ಪಿರ್‌ಗೌಸ್‌ಮಹಲ' ಎಂದು ಕರೆಯುವ ಅರಮನೆಯ ಕಟ್ಟಡವಿದೆ.[೧೭] ಇದರ ಸುತ್ತಲು ಅರಸು ಪರಿವಾರದವರಿಗೆ ಸಂಬಂಧಿಸಿದ ಹಲವು ಕಟ್ಟಡಗಳಿವೆ. ವಿವಿಧ ಆಕೃತಿಯ ಕೊಠಡಿಗಳು, ಹಜಾರಗಳು ಹಾಗೂ ಇತರ ಕಟ್ಟಡಗಳ ಅವಶೇಷಗಳಿವೆ. ಈ ಕಟ್ಟಡಗಳು ಆದಿಲ್‌ಶಾಹಿ ಶೈಲಿಯನ್ನು ಹೊಲುತ್ತವೆ. ಕಮಾನುಗಳ ಮೇಲ್ಭಾಗದಲ್ಲಿ ಸುಂದರವಾದ ಅಕ್ಷರಗಳು ಹಾಗೂ ರೇಖಾಚಿತ್ರಗಳಿವೆ. ಅರಮನೆಯ ಸುತ್ತಲು ಕಾವಲುಗಾರರ ವಿಶ್ರಾಂತಿಯ ಸ್ಥಳಗಳಿವೆ. ಈ ರೀತಿಯಾಗಿ ಯಾದಗಿರ ಕೋಟೆಯ ಅರಮನೆಯು ಅತ್ಯಂತ ಸುಂದರವಾಗಿ ಹಾಗೂ ರಕ್ಷಣಾತ್ಮಕವಾಗಿ ನಿರ್ಮಿಸಲಾಗಿದೆ.

ಕಾಕಲ್‌ವಾರ ದೇಸಾಯಿಗಳ ಅರಮನೆಯು ಭದ್ರವಾದ ಕೋಟೆಯ ಮಧ್ಯದಲ್ಲಿ ರಚಿಸಲಾಗಿದೆ. ಅರಮನೆಯ ಆವರಣದ ಒಳಗಡೆ ಮೂರು ಅಂತಸ್ತಿನ ಕಟ್ಟಡಗಳಿವೆ. ದರ್ಭಾರ್‌ಹಾಲ್ ಹಾಗೂ ವಾಸದ ಮನೆಗಳಾಗಿ ವಿಂಗಡಿಸಲಾಗಿದೆ. ದರ್ಭಾರ್ ಹಾಲ್‌ನಲ್ಲಿ ವಿಶಾಲವಾದ ಸಭಾಭವನ, ಅರಸರು ಕೊಡುವ ಅಲಂಕೃತ ಕಟ್ಟಿಗೆಯ ಪೀಠ ಹಾಗೂ ಸಭಾ ಸದಸ್ಯರ ಕೊಠಡಿಗಳಿವೆ. ಮೂರು ಅಂತಸ್ತಿನ ಈ ಕಟ್ಟಡದಲ್ಲಿ ಆಮಂತ್ರಿತರಿಗೆ, ಅಥಿತಿಗಳಿಗೆ ವಿಶೇಷ ಸೌಲಭ್ಯಗಳಿಂದ ಕೂಡಿರುವ ಕೊಠಡಿಗಳಿವೆ. ಇದರ ಅತಿಥಿಗಳಿಗೆ ವಿಶೇಷ ಸೌಲಭ್ಯಗಳಿಂದ ಕೂಡಿರುವ ಕೊಠಡಿಗಳಿವೆ. ಇದರ ಹಿಂಭಾಗದಲ್ಲಿ ಅರಸರ ವಾಸದ ಮನೆ ಅಥವಾ ಅರಮನೆ ಇದೆ. ಎರಡು ಅಂತಸ್ಥಿನ ಈ ಕಟ್ಟಡದಲ್ಲಿ ಹಲವು ಬಗೆಯ ದೊಡ್ಡ ದೊಡ್ಡ ಕೊಠಡಿಗಳಿವೆ. ಒಳ ಭಾಗದಲ್ಲಿ ಕಟ್ಟಿಗೆಯ ಅಲಂಕೃತ ಕಂಬಗಳನ್ನು ಬಳಸಲಾಗಿದೆ. ಅರಮನೆಗೆ ಸುಂದರವಾದ ಕೆತ್ತನೆಯ ಅಲಂಕೃತ ಕಟ್ಟಿಗೆಗಳನ್ನು ಬಳಸಲಾಗಿದೆ.

ಚಿಂಚೋಳಿಯಲ್ಲಿ ದೇಶಮುಖವಾಡ ಅಥವಾ ರಾಣಿನಿವಾಸ ಎಂದು ಕರೆಯಲಾಗುವ ಅರಮನೆ ಇದೆ.[೧೮] ವಿಶಾಲವಾದ ಪ್ರದೇಶದಲ್ಲಿ ಒಂದು ಬದಿಯಲ್ಲಿ ಸಭಾಭವನ ಹಾಗೂ ಮತ್ತೊಂದು ಬದಿಯಲ್ಲಿ ಅರಮನೆಯನ್ನು ರಚಿಸಲಾಗಿದೆ. ಸಭಾಭವನದಿಂದ ಅರಮನೆಗೆ ಪ್ರವೇಶ ದ್ವಾರವಿದೆ. ಸುಮಾರು ೨೫೦ ಅಡಿ ಉದ್ದ ಹಾಗೂ ೩೦೦ ಅಡಿ ಅಗಲವಾದ ಸ್ಥಳದಲ್ಲಿ ಮೂರು ಅಂತಸ್ತಿನ ಕಟ್ಟಡದಲ್ಲಿ ಅರಮನೆಗೆ ಸಂಬಂಧಿಸಿದ ಅವಶೇಷಗಳಿವೆ. ಹಲವು ಕೋಣೆಗಳನ್ನು ಹೊಂದಿರುವ ಈ ಕಟ್ಟಡವು ರಕ್ಷಣೆಯ ದೃಷ್ಠಿಯಿಂದ ಅತ ಮಹತ್ವದ ಕಟ್ಟಡವಾಗಿದೆ. ಇಲ್ಲಿಂದ ಹೊರಗಡೆ ಹೋಗಲು ಹಲವು ಗುಪ್ತದ್ವಾರಗಳಿವೆ. ಈಗ ಅರಮನೆಯು ಸಂಪೂರ್ಣವಾಗಿ ನಾಶಹೊಂದಿದ್ದೂ ಕೇವಲ ಉತ್ತರ ಭಾಗದಲ್ಲಿ ೩೫ ಅಡಿ ಎತ್ತರದ

[illegible]

ಗೋಡೆ ಉಳಿದುಕೊಂಡಿದೆ. ಇದರಿಂದ ಇಡಿ ಅರಮನೆಯ ರಚನೆಯ ಬಗ್ಗೆ ತಿಳಿದುಕೊಳ್ಳಬಹುದು. ಬಂದರವಾಡ ಗೌಡರ ಅರಮನೆಯು ೨೦೦x೨೫೦ ಮೀಟರ ಉದ್ದ ಅಗಲದ ವಿಸ್ತಾರವಾದ ಸ್ಥಳದಲ್ಲಿ ನಿರ್ಮಿಸಲಾಗಿದೆ. ಇದರ ನಾಲ್ಕು ಬದಿಯಲ್ಲಿ ಒಂದೊಂದು ಕಾವಲುಗೋಪುರಗಳಿವೆ. ಹಲವು ಬಗೆಯ ಕೊಠಡಿಗಳಿಂದ ಕೂಡಿರುವ ಈ ಅರಮನೆ ರಕ್ಷಣಾ ದೃಷ್ಟಿಯಿಂದ ಮಹತ್ವದ ಕಟ್ಟಡವಾಗಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ದೇಸಾಯಿಗಳು, ದೇಶಮುಖರು, ಗೌಡರು ಹಾಗೂ ಇತರ ಆಳುವ ವರ್ಗದವರು ತಮ್ಮ ಅಂತಸ್ತಿಗೆ ತಕ್ಕಂತೆ ಅರಮನೆಗಳನ್ನು ರಚಿಸಿಕೊಂಡಿದ್ದಾರೆ. ಇನ್ನೂ ಕೆಲವು ಕೋಟೆಗಳಲ್ಲಿ ಅರಮನೆಗೆ ಸಂಬಂಧಿಸಿದಂತೆ ಯಾವುದೆ ಅವಶೇಷಗಳು ಲಭ್ಯವಾಗಿಲ್ಲ. ಭೂಉತ್ಖನನದಿಂದ ಅರಮನೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ ಬೆಳಕಿಗೆ ಬರಬಹುದು.

೫.೩. ನೀರಿನ ಸಂಗ್ರಹ (ಭಾವಿಗಳು):

ಜಗತ್ತಿನ ಪ್ರತಿಯೊಂದು ಜೀವಿಗೆ ನೀರು ಅಮೂಲ್ಯವಾದುದು[೧೯], ಆದ್ದರಿಂದ ನದಿಯ ತೀರದಲ್ಲಿ ಮಾನವನ ಉಗಮ ಆರಂಭವಾಯಿತು. ನಾಗರಿಕತೆಯ ಹುಟ್ಟು, ಬೆಳವಣಿಗೆ ಹಾಗೂ ಅವನತಿಗೆ ನದಿಗಳೇ ಕಾರಣವಾದವು. ಇದರ ಅವಶ್ಯಕತೆಯನ್ನು ಅರಿತುಕೊಂಡ ಮಾನವನು ತನ್ನ ಬದುಕನ್ನು ನೀರಿನ ಸಮೀಪದಲ್ಲೇ ಆರಂಭಿಸಿದ. ಹರಪ್ಪ ಸಂಸ್ಕೃತಿಯು ಸಿಂಧೂ ನದಿಯ ತೀರದಲ್ಲಿ ಆರಂಭವಾಯಿತು. ಇದೆ ಪರಂಪರೆಯಲ್ಲಿ ಸಾಮ್ರಾಜ್ಯಗಳು ನದಿಯ ಸಮೀಪದಲ್ಲಿ ತಲೆ ಎತ್ತಿದವು. ಪ್ರಾಚೀನ ಸಾಹಿತ್ಯದಲ್ಲಿ ನೀರು ಮತ್ತು ನಗರಕ್ಕೆ ಇರುವ ಸಂಬಂಧವನ್ನು ಉಲ್ಲೇಖಿಸಲಾಗಿದೆ. ಕೌಟಿಲ್ಯನು ಕೋಟೆಗಳ ಸ್ಥಳದ ಆಯ್ಕೆಯಲ್ಲಿ ನೀರಿನ ಮಹತ್ವವನ್ನು ಕುರಿತು ತನ್ನ ಕೃತಿಯಲ್ಲಿ ವಿವರಿಸಿದ್ದಾನೆ. ಪ್ರತಿಯೊಂದು ಬಲಾಢ್ಯ ಕೋಟೆಗಳು ಸುಲಭವಾಗಿ ನೀರು ಲಭ್ಯವಾಗುವ ಸ್ಥಳದಲ್ಲಿ ನಿರ್ಮಿಸಲಾಗುತ್ತದೆ. ಒಂದು ವೇಳೆ ನೀರು ದೊರೆಯದಿದ್ದಾಗ ಅರಸರು ತಮ್ಮ ರಾಜ್ಯಧಾನಿಯನ್ನು ಅಲ್ಲಿಂದ ಬೇರೆ ಕಡೆಗೆ ಬದಲಾವಣೆ ಮಾಡಿರುವುದು ಕಂಡು ಬರುತ್ತದೆ. ರಾಜ್ಯದ ಅಭಿವೃದ್ಧಿಯಲ್ಲಿ ನೀರು ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ಎರಡು ನದಿಗಳ ಮಧ್ಯದಲ್ಲಿ ರಾಜ್ಯಗಳು ತಲೆ ಎತ್ತಿದವು. ಭೀಮಾ-ಕೃಷ್ಣಾ ನದಿಗಳ ಮಧ್ಯದ ಫಲವತ್ತಾದ ಪ್ರದೇಶಗಳಿಗಾಗಿ ವಿಜಯ ನಗರ ಅರಸರಿಗೂ ಮತ್ತು ಬಹಮನಿಯ ಸುಲ್ತಾನರಿಗೂ ನಿರಂತರ ಸಂಘರ್ಷ ನಡೆಯಿತು.[೨೦]

ಕೋಟೆಯ ಒಳಗಡೆ ಅವಶ್ಯಕವಾಗಿ ನೀರಿನ ಸಂಗ್ರಹವಿರಬೇಕು. ಇಲ್ಲದಿದ್ದರೆ ಅಂತಹ ಕೋಟೆಯನ್ನು ಆಕ್ರಮಣಕಾರರು ಮುತ್ತಿ ಅದನ್ನು ಸರಳವಾಗಿ ವಶಪಡಿಸಿಕೊಳ್ಳುತ್ತಾರೆ. ಅಲ್ಲಾವುದ್ದೀನ ಖಿಲ್ಜಿಯು ಚಿತ್ತೋಡ ಕೋಟೆಯ ಮುತ್ತಿಗೆಯಲ್ಲಿ ಕೋಟೆಗೆ ಹೊರಗಿನಿಂದ ನೀರು ಪೂರೈಕೆಯಾಗುತ್ತಿರುವುದನ್ನು ತಿಳಿದುಕೊಂಡು ಅದರ ಸರಬರಾಜು ಕಡಿದು ಹಾಕಿದ. ಆಗ ಒಳಗಡೆಯ ಜನ ನೀರಿಗಾಗಿ ಆಹಾಕಾರಗೈದು ಕೋಟೆಯ ದ್ವಾರವನ್ನು ತೆಗೆದರು. ಇದು ಕೋಟೆಯ ಗೆಲುವಿಗೆ ಕಾರಣವಾಯಿತು.[೨೧] ಔರಂಗಜೇಬನು

ಆಗ್ರಾ ಕೋಟೆಯ ಮುತ್ತಿಗೆಯಲ್ಲಿ ಇದೇ ನೀತಿಯನ್ನು ಅನುಸರಿಸಿ ಉತ್ತರಾಧಿಕಾರತ್ವದ ಸಂಘರ್ಷದಲ್ಲಿ ವಿಜಯ ಸಾಧಿಸಿದ.[೨೨] ಆದ್ದರಿಂದ ನೀರು ರಕ್ಷಣಾ ಸಂಬಂಧಿ ಅಂಶಗಳಲ್ಲಿ ಅತ್ಯಂತ ಪ್ರಮುಖವಾಗಿದೆ.

ಗುಲಬರ್ಗಾ ಕೋಟೆಯ ಒಳಗಡೆ ಹಲವು ನೀರಿನ ಸಂಗ್ರಹಳಿವೆ. ಕೋಟೆಯ ಪ್ರಮುಖವಾದ ಭಾಗಗಳಲ್ಲಿ ಬೃಹತ್ ಭಾವಿಗಳನ್ನು ನಿರ್ಮಿಸಲಾಗಿದೆ.[೨೩] ಕೆಲವೊಂದು ಭಾವಿಗಳು ಪ್ರಾಣಿಗಳಿಗೆ ನೀರು ಕುಡಿಯಲು ಅನುಕೂಲವಾಗುವಂತೆ ರಚಿಸಲಾಗಿದೆ. ಕೋಟೆಯ ಪೂರ್ವ ಭಾಗದಲ್ಲಿ ಒಟ್ಟು ಆರು ಭಾವಿಗಳಿವೆ. ಇವುಗಳಲ್ಲಿ ಒಂದು ಪ್ರಾಣಿಗಳಿಗೆ ಅನುಕೂಲವಾಗುವಂತೆ ವಿಶಾಲವಾದ ಮೆಟ್ಟಿಲುಗಳು ಹಾಗೂ ವಿಸ್ತಾರವಾದ ಸ್ಥಳದಲ್ಲಿ ನಿರ್ಮಿಸಲಾಗಿದೆ. ಉಳಿದ ಎರಡು ಭಾವಿಗಳು ಅತ್ಯಂತ ವಿಶಾಲವಾದ ಹಾಗೂ ಆಳವಾಗಿವೆ ಮೊದಲನೆಯ ಭಾವಿಯು ಚೌಕಾಕಾರವಾಗಿದ್ದರೆ ಎರಡನೆಯ ಭಾವಿಯು ಕಮಾನಿನ ಆಕಾರದ ಪ್ರವೇಶ ದ್ವಾರವನ್ನು ಹೊಂದಿದೆ ಉಳಿದ ಎರಡು ಭಾವಿಗಳು ಆಯತಾಕರದಲ್ಲಿದ್ದು ಎರಡು ಬದಿಯಲ್ಲಿ ಮೆಟ್ಟಿಲುಗಳನ್ನು ಹೊಂದಿವೆ. ಕೊನೆಯ ಭಾವಿಯು ವೃತ್ತಾಕಾರದಲ್ಲಿದೆ. ಪ್ರಸ್ತುತ ಕೋಟೆಯ ಐದು ಭಾವಿಗಳು ನೀರಿನಿಂದ ಕೂಡಿವೆ. ಕೋಟೆಯ ಉತ್ತರ ಭಾಗದಲ್ಲಿ ಎರಡು ಗೋಡೆಗಳ ಮಧ್ಯದಲ್ಲಿ ಮೂರು ವಿಶಾಲವಾದ ಹಾಗೂ ಕಲ್ಲಿನಿಂದ ಕಟ್ಟಿರುವ ಭಾವಿಗಳಿವೆ. ಸೈನಿಕರಿಗೆ ಕಾವಲು ಸಂದರ್ಭದಲ್ಲಿ ಅನುಕೂಲವಾಗುವಂತೆ ಇವುಗಳನ್ನು ನಿರ್ಮಿಸಲಾಗಿದೆ.

ಮೊದಲನೆಯ ಭಾವಿಯು ಪೂರ್ವದ ಪ್ರವೇಶ ದ್ವಾರದ ಬಲಬದಿಯಲ್ಲಿದೆ. ಇದಕ್ಕೆ ಕೋಟೆಯ ಒಳಗಡೆಯಿಂದ ಪ್ರವೇಶವಿದೆ. ಈ ಭಾವಿಯು ಕೋಟೆಯ ಎರಡು ಗೋಡೆಗಳಿಗೆ ಅಂಟಿಕೊಂಡಿದೆ. ಎರಡನೆಯ ಭಾವಿಯ ಉತ್ತರ ಭಾಗದ ಎರಡು ಗೋಡೆಗಳ ಮಧ್ಯದಲ್ಲಿದೆ. ಚೌಕಾಕಾರದಲ್ಲಿರುವ ಈ ಭಾವಿಯು ಕಮಾನಿನ ಪ್ರವೇಶ ದ್ವಾರವನ್ನು ಹೊಂದಿದೆ. ಇದರ ಮೇಲ್ಭಾಗ ಆರು ಕಮಾನುಗಳಿಂದ ಕೂಡಿರುವ ಕಟ್ಟಡಗಳಿವೆ. ಇಲ್ಲಿಂದ ಕೋಟೆಯ ಹೊರಭಾಗಕ್ಕೆ ಹೋಗಲು ಕೆಳಹಂತದಲ್ಲಿ ಮತ್ತೊಂದು ಕಮಾನು ಇದೆ. ಈ ಭಾಗದಲ್ಲಿ ಇರುವ ಮತ್ತೊಂದು ನೀರಿನ ತಾಣವು ಅತ್ಯಂತ ಆಳವಾಗಿದೆ.

ಕೋಟೆಯ ಪಶ್ಚಿಮ ಭಾಗದ ಎರಡು ಗೋಡೆಗಳ ಮಧ್ಯದಲ್ಲಿ ಎರಡು ವಿಶಾಲವಾದ ಭಾವಿಗಳಿವೆ. ಇದರಲ್ಲಿ ಒಂದು ಭಾವಿಯು ಆನೆಗಳ ತರಬೇತಿಯ ಸ್ಥಳದ ಸಮೀಪದಲ್ಲಿದೆ. ಅಲ್ಲದೆ ಇದಕ್ಕೆ ವಿಶಾಲವಾದ ಮೆಟ್ಟಿಲುಗಳು ಇರುವುದರಿಂದ ಇದನ್ನು ಆನೆಗಳಿಗೆ ನೀರು ಕುಡಿಯಲು ನಿರ್ಮಿಸಿರುವಂತೆ ಕಂಡು ಬರುತ್ತದೆ. ಇನ್ನೊಂದು ಭಾವಿಯು ಚೌಕಾಕಾರದಲ್ಲಿದೆ. ಕೋಟೆಯ ಒಳಭಾಗದಲ್ಲಿ ಏಳನೆಯ ಪ್ರವೇಶ ದ್ವಾರದ ಬಲ ಬದಿಯಲ್ಲಿ ಕಪ್ಪನೆಯ ಕಲ್ಲಿನಲ್ಲಿ ನಿರ್ಮಿಸಿರುವ ಈ ಭಾವಿ ಆಳವಾಗಿದೆ. ಇದರ ಸುತ್ತ ಮುತ್ತಲು ಹಲವು ಕಟ್ಟಡಗಳು ಇರುವುದರಿಂದ ಎಲ್ಲರು ಇದರ ನೀರನ್ನು ಉಪಯೋಗಿಸುತ್ತಿರುವಂತೆ ಕಂಡು ಬರುತ್ತದೆ.[೨೪] ಪ್ರಸ್ತುತವಾಗಿ ಗುಲಬರ್ಗಾ ಕೋಟೆಯಲ್ಲಿರುವ ಎಲ್ಲಾ ನೀರಿನ ಆಶ್ರಯ ತಾಣಗಳಲ್ಲಿ ನೀರು ತುಂಬಿಕೊಂಡಿದೆ. ಇದಕ್ಕೆ ಕಾರಣ ಕಂದಕದಲ್ಲಿ ಯಾವಾಗಲೂ ನೀರು ತುಂಬಿಕೊಂಡಿರುವುದರಿಂದ ಭೂಮಿಯ ಅಂತರಾಳವು

ತೇವಾಂಶದಿಂದ ಕೂಡಿರುತ್ತದೆ. ಅಲ್ಲದೆ ಕೋಟೆಯ ಸಮೀಪದಲ್ಲಿ ಒಂದು ದೊಡ್ಡ ಕೆರೆ ಇದೆ. ಇದನ್ನು ಸ್ಥಳಿಯರು 'ಅಪ್ಪನ ಕೆರೆ' ಎಂದು ಕರೆಯುತ್ತಾರೆ.

ಶಹಾಪೂರ ಬೆಟ್ಟದ ಕೋಟೆಯಲ್ಲಿ ನೀರಿನ ಸಂಗ್ರಹಕ್ಕೆ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ. ಬೆಟ್ಟದ ಮೇಲ್ಭಾಗದಲ್ಲಿ ನೀರನ್ನು ಸಂಗ್ರಹಿಸುವುದು ಕಷ್ಟದ ಕೆಲಸವಾಗಿದೆ. ಬೆಟ್ಟದ ಮೇಲ್ಭಾಗದಲ್ಲಿ ಬರುವ ಎಲ್ಲಾ ತಗ್ಗಾದ ಕಲ್ಲು ಬಂಡೆಗಳ ಮಧ್ಯದಲ್ಲಿ ನೀರು ನಿಲ್ಲುವಂತೆ ಮಾಡಲಾಗಿದೆ. ಅಲ್ಲದೆ ಎತ್ತರವಾದ ಭಾಗದಿಂದ ನೀರು ಕೆಳಗಡೆ ಹರಿದು ಬರುವ ಸ್ಥಳಗಳಿಗೆ ತಡೆಗೋಡೆಯನ್ನು ನಿರ್ಮಿಸಿ ಅಲ್ಲಿ ನೀರು ಸಂಗ್ರಹಿಸಲಾಗಿದೆ. ಕೋಟೆಯ ವಾಯುವ್ಯ ಭಾಗದಲ್ಲಿ ಅಂದರೆ ಅರಮನೆ ಅವಶೇಷಗಳ ಸಮೀಪದಲ್ಲಿ ಇರುವ ತಗ್ಗಾದ ಪ್ರದೇಶವನ್ನು ನೀರಿನ ಸಂಗ್ರಹದ ಸ್ಥಳವನ್ನಾಗಿ ಪರಿವರ್ತಿಸಲಾಗಿದೆ. ಅತ್ಯಂತ ವಿಶಾಲವಾದ ಸ್ಥಳದಲ್ಲಿ ಸದಾ ನೀರು ನಿಲ್ಲುವ ಹಾಗೆ ರಚಿಸಲಾಗಿದೆ. ಅಲ್ಲದೆ ಕೆಳಗೆ ಇಳಿದು ಬರಲು ಕಮಾನು ಹಾಗೂ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.

ಶಹಾಪೂರ ಕೋಟೆಯನ್ನು ಮೂರು ಹಂತದಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಕೋಟೆಯಲ್ಲಿ ಹಲವು ಕಲ್ಲು ಬಂಡೆಗಳ ಮಧ್ಯದಲ್ಲಿ ಮಳೆಯ ನೀರಿನ ಸಂಗ್ರಹಗಳು ಇವೆ. ಕೆಲವು ಕಡೆ ಎರಡು ತಗ್ಗಾದ ಪ್ರದೇಶಗಳಿಗೆ ನೀರಿನ ಸಂಪರ್ಕ ಕಲ್ಪಿಸಿಕೊಡಲಾಗಿದೆ. ಒಂದರಲ್ಲಿ ತುಂಬಿದ ನೀರು ನಂತರ ಮತ್ತೊಂದು ಭಾಗಕ್ಕೆ ಹೋಗುವಂತೆ ಮಾಡಲಾಗಿದೆ. ಕೋಟೆಯ ಎರಡನೆಯ ಭಾಗವು ಅತ್ಯಂತ ಇಳಿಜಾರಿನ ಪ್ರದೇಶವನ್ನು ಹೊಂದಿರುವುದರಿಂದ ಅದರ ಬಲ ಬದಿಯಲ್ಲಿರುವ ಕೊತ್ತಳದ ತಳಭಾಗದಲ್ಲಿ ತಡೆ ಗೋಡೆಯನ್ನು ನಿರ್ಮಿಸಿ ಅಲ್ಲಿ ನೀರನ್ನು ಸಂಗ್ರಹಿಸಲಾಗಿದೆ. ಇದು ಕೋಟೆಯ ಅತ್ಯಂತ ದೊಡ್ಡ ನಿರಿನ ಸಂಗ್ರಹವಾಗಿದೆ. ಕೋಟೆಯ ಎರಡನೆಯ ಭಾಗದಿಂದ ಮೂರನೆಯ ಹಂತದ ಕಡೆಗೆ ಹೋಗುವ ಮಾರ್ಗದಲ್ಲಿ ಅತ್ಯಂತ ತಗ್ಗಾದ ಭಾಗವಿದೆ. ಇದರ ಒಂದು ಬದಿಯಲ್ಲಿ ಸುಮಾರು ೨೦೦ ಅಡಿ ಉದ್ದನೆಯ ತಡೆಗೋಡೆಯನ್ನು ನಿರ್ಮಿಸಿ ಇಲ್ಲಿ ನೀರು ಸಂಗ್ರಹಿಸಲಾಗಿದೆ. ಕೋಟೆಯ ಸುತ್ತಲು ಇರುವ ಅಶ್ವಗಳಿಗೆ ಹಾಗೂ ಇತರ ಪ್ರಾಣಿಗಳಿಗೆ ನೀರು ಕುಡಿಯಲು ಇದು ಸೂಕ್ತವಾದ ಸ್ಥಳವಿದೆ. ಕೋಟೆಯ ಮೂರನೆಯ ಭಾಗದಲ್ಲಿ ಕಟೆದ ಕಲ್ಲುಗಳಿಂದ ನಿರ್ಮಿಸಿರುವ ಒಂದು ಚೌಕಾಕಾರದ ನೀರಿನ ಸಂಗ್ರಹವಿದೆ. ಶಹಾಪೂರ ಕೋಟೆಯಲ್ಲಿ ಇದು ಒಂದು ಕೃತಕ ನೀರಿನ ಸಂಗ್ರಹ (ಬಾವಿ)ವಾಗಿದೆ. ಉಳಿದವುಗಳು ನೈಸರ್ಗಿಕ ಬಂಡೆಗಳನ್ನು ಬಳಸಿ ನಿರ್ಮಿಸಲಾಗಿದೆ. ಪಶ್ಚಿಮ ಭಾಗದ ಕೊನೆಯ ದ್ವಾರದ ಮುಂಭಾಗದಲ್ಲಿ ಬೃಹತ್ ಬಂಡೆಗಳ ಮಧ್ಯದಲ್ಲಿ ಉದ್ದನೆಯ ನೀರಿನ ಸಂಗ್ರಹವಿದೆ. ಇಲ್ಲಿಯ ನೀರು ಯಾವಾಗಲೂ ಪರಿಶುದ್ಧವಾಗಿರುತ್ತವೆ. ಶಹಾಪೂರ ಕೋಟೆಯ ದಕ್ಷಿಣ ಭಾಗದಲ್ಲಿ ಮಂದಾಕಿನಿ ಸರೋವರ ಎಂದು ಕರೆಯುವ ಹಳ್ಳವಿದೆ.[೨೫] ಕೋಟೆಯ ಮೇಲ್ಭಾಗದಲ್ಲಿರುವ ಜೀವ ರಾಶಿಗಳಿಗೆ ಇಲ್ಲಿಯ ನೀರು ರಕ್ಷಣೆಯನ್ನು ಒದಗಿಸುತ್ತದೆ.

ಯಾದಗಿರಿಯ ಬೆಟ್ಟದ ಕೋಟೆಯಲ್ಲಿ ಮಳೆಯ ನೀರಿನ ಸಂಗ್ರಹಕ್ಕೆ ವಿಶೇಷ ವ್ಯವಸ್ಥೆ ಮಾಡಲಾಗಿದೆ. ಕೋಟೆಯ ಸುತ್ತಲು ಸೂಕ್ತವಾದ ಸ್ಥಳಗಳಲ್ಲಿ ನೀರಿನ ಸಂಗ್ರಹಗಳಿವೆ. ಆದಿಲ್‌ಶಾಹಿ ಸುಲ್ತಾನ ಮೊದಲನೆಯ ಇಬ್ರಾಹಿಂ ಆದಿಲ್‌ಶಹನು ಇಲ್ಲಿ ಮೊತಿತಲಾಬ ಎನ್ನುವ ಕೊಳ್ಳ ಹಾಗೂ ಪಾತಾಳನಗರಿ ಭಾವಿಗಳನ್ನು ನಿರ್ಮಿಸಿದನೆಂದು ಕೋಟೆಯಲ್ಲಿಯ ಒಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೨೬] ಈ ಎರಡು ನೀರಿನ ಸಂಗ್ರಹದ ಸ್ಥಳಗಳು ಅತ್ಯಂತ ವಿಶಾಲವಾಗಿವೆ. ಬೆಟ್ಟದ ಮೇಲಿನಿಂದ ಹರಿದು ಬರುವ ನೀರು ಇಲ್ಲಿ ಸಂಗ್ರಹವಾಗುತ್ತದೆ. ಇದರ ಮುಂಭಾಗದಲ್ಲಿ ಒಂದು ಭದ್ರವಾದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಕಲ್ಲು ಮತ್ತು ಇಟ್ಟಿಗೆಯಿಂದ ನಿರ್ಮಿಸಿರುವ ಈ ಗೋಡೆಯು ೬ ಅಡಿ ದಪ್ಪ ೧೦ ರಿಂದ ೨೦ ಅಡಿ ಎತ್ತರವಾಗಿದೆ. ಕೋಟೆಯ ಮೇಲ್ಭಾಗದಲ್ಲಿ ಮೂರು ವಿಶಾಲವಾದ ನೈಸರ್ಗಿಕ ತಗ್ಗಾದ ಪ್ರದೇಶಗಳಲ್ಲಿ ನೀರನ್ನು ಸಂಗ್ರಹಿಸಲಾಗಿದೆ. ಇಲ್ಲಿ ಸಾಧ್ಯವಿದ್ದ ಮಟ್ಟಿಗೆ ಹೆಚ್ಚಿನ ನೀರು ಸಂಗ್ರಹವಾಗಿರುತ್ತದೆ. ಇದರ ಮುಂಭಾಗದಲ್ಲಿ ಕೋಟೆಯ ದಕ್ಷಿಣ ಭಾಗಕ್ಕೆ ಜೋಡು ಭಾವಿಗಳಿವೆ, ಇದನ್ನು ಸ್ಥಳಿಯರು ಅಕ್ಕ-ತಂಗಿಯರ ಭಾವಿ ಎಂದು ಕರೆಯುತ್ತಾರೆ. ಆಯತಾಕಾರದಲ್ಲಿರುವ ಈ ಭಾವಿಯನ್ನು ಕಟೆದ ಕಲ್ಲುಗಳಲ್ಲಿ ನಿರ್ಮಿಸಲಾಗಿದೆ. ಮಧ್ಯದಲ್ಲಿರುವ ಕಮಾನು ಭಾವಿಯನ್ನು ಎರಡು ಭಾಗಗಳಲ್ಲಿ ವಿಂಗಡಿಸುತ್ತದೆ. ಆದ್ದರಿಂದ ಇದರ ದೊಡ್ಡ ಭಾಗವನ್ನು ಅಕ್ಕನ ಭಾವಿ ಎಂದು ಇದರ ಚಿಕ್ಕ ಭಾಗವನ್ನು ತಂಗಿ ಭಾವಿ ಎಂದು ಕರೆಯಲಾಗಿದೆ. ಕೋಟೆಯ ಕೆಳಭಾಗದಲ್ಲಿ ಇರುವ ವಿಶಾಲವಾದ ಸ್ಥಳದಲ್ಲಿ ವೃತ್ತಾಕಾರದ ಮತ್ತು ಅತ್ಯಂತ ಆಳವಾದ ಭಾವಿ ಇದೆ. ಇವು ಜೈನ ಮೂರ್ತಿ ಶಿಲ್ಪಗಳಿರುವ ಸ್ಥಳದ ಸಮೀಪದಲ್ಲಿದೆ. ಈ ರೀತಿ ಯಾದಗಿರ ಕೋಟೆಯಲ್ಲಿ ಸಾಧ್ಯವಿದ್ದ ಮಟ್ಟಿಗೆ ಮಳೆ ನೀರಿನ ಸಂಗ್ರಹಕ್ಕಾಗಿ ವಿಶೇಷ ಕ್ರಮ ಅಳವಡಿಸಿರುವುದು ಕಂಡು ಬರುತ್ತದೆ.

ವಾಗಣಗೇರಿ ಕೋಟೆಯ ಪ್ರವೇಶ ದ್ವಾರದ ಒಳಗಡೆ ೫೦ ಅಡಿ ಅಂತದಲ್ಲಿ ಚೌಕಾಕಾರದ ಭಾವಿ ಇದೆ.[೨೭] ಇದರ ಮೂರು ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಈ ಭಾವಿಯನ್ನು ಕೋಟೆಯ ನಿರ್ಮಾಣದ ಕಾಲಕ್ಕೆ ರಚಿಸಲಾಗಿದೆ. ಇದರ ಸಮೀಪದಲ್ಲಿ ವೇಣುಗೋಪಾಲಸ್ವಾಮಿಯ ದೇವಾಲಯ ಹಾಗೂ ಮತ್ತೊಂದು ಬದಿಯಲ್ಲಿ ಮಸೀದಿ ಇದೆ. ಈ ಭಾವಿಯನ್ನು ಸೈನಿಕರ ಉಪಯೋಗಕ್ಕಾಗಿ ನಿರ್ಮಿಸಲಾಗಿದೆ. ಇದನ್ನು ಹೊರತು ಪಡಿಸಿ ಕೋಟೆಯ ಒಳಭಾಗದಲ್ಲಿ ಯಾವುದೇ ನೀರಿನ ಸಂಗ್ರಹವಿರುವುದಿಲ್ಲ. ಕೋಟೆಯ ದಕ್ಷಿಣ ಭಾಗಕ್ಕೆ ಒಂದು ಸಣ್ಣ ಹಳ್ಳ ಹರಿಯುತ್ತಿರುವುದರಿಂದ ಕುದುರೆಗಳಿಗೆ ನೀರಿನ ತೊಂದರೆ ಇರುವುದಿಲ್ಲ. ಇದೇ ರೀತಿ ವನದುರ್ಗ ಕೋಟೆಯ ಪಶ್ಚಿಮ ಭಾಗದಲ್ಲಿ ಒಂದು ವೃತ್ತಾಕಾರದ ಸೇದಿ ಭಾವಿ ಇದೆ. ಇಲ್ಲಿಯ ಇನ್ನೂ ಎರಡು ಭಾವಿಗಳು ಸಂಪೂರ್ಣವಾಗಿ ಮುಚ್ಚಿ ಹೋಗಿವೆ.

ಚಂಡ್ರಕಿ ಕೋಟೆಯಲ್ಲಿ ಮೂರು ದೊಡ್ಡ ಭಾವಿಗಳಿವೆ.[೨೮] ಕೋಟೆಯ ಈಶಾನ್ಯ ಭಾಗ, ಆಗ್ನೇಯ ಭಾಗ ಮತ್ತು ಪಶ್ಚಿಮ ಭಾಗದಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಅದರಲ್ಲಿ ಈಶಾನ್ಯ ಭಾಗದ ಭಾವಿ ಮಾತ್ರ ಸುಸ್ಥಿತಿಯಲ್ಲಿ ಉಳಿದುಕೊಂಡಿದೆ. ಉಳಿದ ಎರಡು ಭಾವಿಗಳು ಮಣ್ಣಿನಿಂದ ಹೂತುಕೊಂಡಿವೆ. ಈ

ರೀತಿ ಗುಲಬರ್ಗಾ ಜಿಲ್ಲೆಯ ಸ್ಥಳದುರ್ಗ ಹಾಗೂ ಗಿರಿದುರ್ಗಗಳಲ್ಲಿ ಸೈನಿಕರ, ಅರಸು ಪರಿವಾರದವರ ಹಾಗೂ ಇತರ ಪ್ರಾಣಿಗಳ ರಕ್ಷಣೆಗಾಗಿ ನೀರಿನ ಸಂಗ್ರಹಕ್ಕೆ ಹೆಚ್ಚಿನ ಮಹತ್ವ ನೀಡಿರುವುದು ಕಂಡು ಬರುತ್ತದೆ. ಇನ್ನೂ ನದಿಗಳ ತೀರದಲ್ಲಿರುವ ಫಿರೋಜಾಬಾದ, ಮಳಖೇಡ, ಕೊಲ್ಲೂರು, ಸನ್ನತ್ತಿ ಹಾಗೂ ಇನ್ನಿತರ ಕೋಟೆಗಳಲ್ಲಿ ನೀರಿನ ಸಂಗ್ರಹದ ಅವಶ್ಯಕತೆ ಪ್ರಮುಖವಾಗಿರುವುದಿಲ್ಲ. ಆದರೂ ಇಂತಹ ಕೋಟೆಗಳಲ್ಲಿ ಕೆಲವು ಭಾವಿಗಳನ್ನು ನಿರ್ಮಿಸಲಾಗಿದೆ. ಜಿಲ್ಲೆಯ ಗ್ರಾಮದ ಸುತ್ತಲು ಇರುವ ಕೋಟೆಗಳ ಒಳಭಾಗದಲ್ಲಿ ನೀರಿನ ವ್ಯವಸ್ಥೆ ಮಾಡಲಾಗಿದೆ.

೫.೪. ಸೈನಿಕರ ನಿವಾಸಗಳು (ತಂಗು ದಾಣಗಳು)

ರಾಜ್ಯದ ರಕ್ಷಣೆಯಲ್ಲಿ ಸೈನಿಕರು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾರೆ. ಅಂತಹ ಸೈನಿಕರ ರಕ್ಷಣೆಗಾಗಿ ಕೋಟೆಯ ಒಳಗಡೆ ತಂಗುದಾಣಗಳನ್ನು ನಿರ್ಮಿಸಲಾಗುತ್ತದೆ. ಕೋಟೆಯ ಒಳಗಡೆ ಅರಸು ಪರಿವಾರ, ಆಡಳಿತಕ್ಕೆ ಸಂಬಂಧಿಸಿದ ಸದಸ್ಯರು ಹಾಗೂ ಸೈನಿಕರಿಗೆ ಮಾತ್ರ ಅವಕಾಶವಿರುತ್ತದೆ. ದಿನದ ೨೪ ಗಂಟೆಗಳ ಕಾಲ ಕೋಟೆಯನ್ನು ಕಾವಲು ಮಾಡುವ ಸೈನಿಕರಿಗೆ ಕೋಟೆಯ ಒಳಗಡೆ ವಸತಿ ನಿಲಯಗಳನ್ನು ನಿರ್ಮಿಸಲಾಗುತ್ತದೆ. ಅದರಲ್ಲಿ ಕೋಟೆಯ ಪ್ರಮುಖ ಭಾಗಗಳಾದ ದ್ವಾರಬಾಗಿಲುಗಳು, ಅರಮನೆ, ಖಜಾನೆ, ಮದ್ದಿನ ಮನೆ, ಸಭಾಭವನ ಮುಂತಾದ ಸ್ಥಳಗಳಲ್ಲಿ ಇವುಗಳನ್ನು ನಿರ್ಮಿಸಲಾಗುತ್ತದೆ. ಇವುಗಳನ್ನು ಹೊರತು ಪಡಿಸಿ, ಕೋಟೆ ಗೋಡೆಯ ಸುತ್ತಲು ಇರುವ ತೆನೆಗಳ ಹಿಂಭಾಗದಲ್ಲಿ ಸೈನಿಕರಿಗೆ ರಕ್ಷಣೆಯ ಸ್ಥಳವಿರುತ್ತದೆ. ಇಂತಹ ಸ್ಥಳಗಳು ಹೊರಭಾಗದಿಂದ ಕಾಣದಂತೆ ಪ್ರತಿ ಮೂರು ಅಥವಾ ನಾಲ್ಕು ತೆನೆಗಳ ನಂತರ ಒಂದೊಂದು ಸೈನಿಕರ ರಕ್ಷಣಾ ಸ್ಥಳಗಳಿವೆ. ಬಿಸಿಲು, ಮಳೆ, ಗಾಳಿಯಿಂದ ರಕ್ಷಣೆ ಮಾಡಿಕೊಂಡು ಕೋಟೆಯ ಕಾವಲು ಮಾಡುವ ಸೈನಿಕರಿಗಾಗಿ ಇವುಗಳನ್ನು ರಚಿಸಲಾಗಿದೆ. ಇದರ ಒಳಗಡೆ ವೀಕ್ಷಣಾ ರಂದ್ರಗಳು ಹಾಗೂ ಕೆಳಭಾಗದಲ್ಲಿ ಅಂಬುಗಿಂಡಿಗಳು ಇರುತ್ತವೆ. ಇವುಗಳ ಮೂಲಕ ದೂರದಿಂದ ಬರುವ ಶತ್ರುಗಳ ಚಲನವಲನವನ್ನು ವೀಕ್ಷಿಸಿ ಅದರ ವಿರುದ್ಧ ಕ್ರಮ ಕೈಗೊಳ್ಳುತ್ತಿದ್ದರು.

ಕೋಟೆಯ ಒಳಗಡೆ ಹಾಗೂ ದ್ವಾರಗಳ ಮುಂಭಾಗದಲ್ಲಿ ಕೋಟೆಯ ರಕ್ಷಣೆಗಾಗಿ ವಿಶೇಷ ಕಾವಲು ಪಡೆ ಇರುತ್ತಿತ್ತು. ಅವರು ಆಕ್ರಮಣಕಾರರನ್ನು ಬರದಂತೆ ಕೋಟೆಯ ಹೊರಭಾಗದಲ್ಲಿ ಇದ್ದು ಕೋಟೆಯ ರಕ್ಷಣೆ ಮಾಡುತ್ತಿದ್ದರು. ಅಂತಹ ಸೈನಿಕರಿಗಾಗಿ ಕೋಟೆಯ ಹೊರಭಾಗದಲ್ಲಿ ವಸತಿ ನಿಲಯಗಳನ್ನು ನಿರ್ಮಿಸಲಾಗುತ್ತದೆ. ಕೋಟೆ ಕಾಳಗದಲ್ಲಿ ಆಕ್ರಮಣಕಾರರು ಮೊದಲು ಈ ಪಡೆಯೊಂದಿಗೆ ಹೋರಾಡಿ, ಅವರನ್ನು ಹತಗೊಳಿಸಿ ನಂತರ ಕೋಟೆಯ ಒಳಗಡೆ ಶತ್ರುಸೈನ್ಯ ಪ್ರವೇಶಿಸಬೇಕು. ಆದ್ದರಿಂದ ಇಲ್ಲಿಯ ಕಾವಲು ಪಡೆಗೆ ಅವಶ್ಯವಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

ಗುಲಬರ್ಗಾ ಕೋಟೆಯಲ್ಲಿ ಹಲವು ಬಗೆಯ ಸೈನಿಕರ ವಸತಿ ನಿಲಯಗಳಿವೆ.[೨೯] ವಾಯುವ್ಯ ದಿಕ್ಕಿನಲ್ಲಿರುವ ಪ್ರವೇಶ ದ್ವಾರದ ಮುಂಭಾಗದಲ್ಲಿ ೧೦೦ ಅಡಿ ಉದ್ದ ೭೫ ಅಡಿ ಅಗಲದ ಸ್ಥಳದಲ್ಲಿ

ದ್ವಾರಪಾಲಕರ ರಕ್ಷಣೆ ಪಡೆಯ ಸಲುವಾಗಿ ವಸತಿ ನಿಲಯಗಳಿವೆ. ಅಲ್ಲದೆ ಇದರ ಹೊರಭಾಗದಲ್ಲಿ ಎರಡು ಬದಿಯಲ್ಲಿ ಕಮಾನುಗಳಿಂದ ಕೂಡಿದ ಕಟ್ಟಡಗಳಿವೆ ಇಲ್ಲಿರುವ ಎಲ್ಲಾ ಕಟ್ಟಡಗಳು ಸೈನಿಕರಿಗಾಗಿ ನಿರ್ಮಿಸಲಾಗಿದೆ. ಕೋಟೆಯ ದ್ವಾರದ ಒಳಭಾಗದ ಬಲ ಬದಿಯಲ್ಲಿ ಗೋಡೆಗೆ ಅಂಟಿ ಕೊಂಡಿರುವಂತೆ ಮೂರು ವಸತಿ ನಿಲಯಗಳಿವೆ. ಪ್ರತಿಯೊಂದು ಕಟ್ಟಡದಲ್ಲಿ ಸುಮಾರು ೨೦ ರಿಂದ ೨೫ ಸೈನಿಕರು ವಿಶ್ರಾಂತಿ ಪಡೆಯಬಹುದು. ಕಮಾನಿನ ಆಕಾರದ ಪ್ರವೇಶದ್ವಾರವನ್ನು ಹೊಂದಿರುವ ಈ ಕಟ್ಟಡಗಳು ಎರಡು ಅಂಕಣಗಳನ್ನು ಹೊಂದಿದೆ. ಈ ಕಟ್ಟಡಗಳು ಸೈನಿಕರಿಗೆ ಅವಶ್ಯವಾಗಿರುವ ಎಲ್ಲಾ ಸೌಲಭ್ಯಗಳನ್ನು ಹೊಂದಿರುತ್ತವೆ. ಇಲ್ಲಿರುವ ಸೈನಿಕರು ದ್ವಾರದ ರಕ್ಷಣೆಗಾಗಿ ಸದಾ ಕಾರ್ಯ ನಿರತರಾಗಿರುತ್ತಿದ್ದರು. ಕೋಟೆಯ ಎರಡನೆಯ ದ್ವಾರದ ನಂತರ ಏಡಭಾಗಕ್ಕೆ ಕೋಟೆ ಗೋಡೆಯ ಒಳಗಡೆ ಮೂರು ಅಂಕಣಗಳಿಂದ ಕೂಡಿದ ಒಂದು ದೊಡ್ಡ ವಸತಿ ನಿಲಯವಿದೆ. ಇದರಲ್ಲಿ ಸುಮಾರು ೧೦೦ ಸೈನಿಕರು ರಕ್ಷಣೆಯನ್ನು ಪಡೆಯಬಹುದು. ಕೋಟೆಯ ಹೊರಭಾಗದವರೆಗೆ ಚಾಚಿಕೊಂಡಿರುವ ಈ ಕಟ್ಟಡದ ಕೊನೆಯ ಭಾಗಕ್ಕೆ ಒಂದು ಚಿಕ್ಕ ಗುಪ್ತದ್ವಾರವಿದೆ. ಸೈನಿಕರು ಇಲ್ಲಿಂದ ಕೋಟೆಯ ಹೊರಭಾಗಕ್ಕೆ ಹೋಗಲು ಅನುಕೂಲವಾಗುವಂತೆ ಇವುಗಳನ್ನು ರಚಿಸಲಾಗಿದೆ.

ಗುಲಬರ್ಗಾ ಕೋಟೆಯಲ್ಲಿ ನಾಲ್ಕು ಪ್ರಕಾರದ ಸೈನಿಕರ ವಸತಿ ನಿಲಯಗಳಿವೆ. ಮೊದಲನೆಯದಾಗಿ ಕೋಟೆಯ ಒಳಗೋಡೆಯಲ್ಲಿ ವಿಶಾಲವಾದ ಸಾಮೂಹಿಕ ವಸತಿಗೃಹಗಳು ಉತ್ತರ, ಪೂರ್ವ ಹಾಗೂ ಪಶ್ಚಿಮ ಭಾಗದಲ್ಲಿ ಈ ರೀತಿಯ ವಸತಿಗೃಹಗಳಿವೆ. ಕೋಟೆ ಒಳಗೋಡೆಯು ೩೦ ರಿಂದ ೪೦ ಅಡಿ ದಪ್ಪವಾಗಿರುವುದರಿಂದ ಅದರ ಒಳ ಬದಿಯಲ್ಲಿ ಚಿಕ್ಕ ಕಮಾನಿನ ಪ್ರವೇಶದ್ವಾರವಿದೆ. ಒಳಗಡೆ ಸುಮಾರು ೧೦೦ ರಿಂದ ೧೫೦ ಜನ ಸೈನಿಕರು ನೆಲೆ ನಿಲ್ಲಲು ಸ್ಥಳವಿದೆ. ಈ ರೀತಿಯ ವಸತಿ ನಿಲಯಗಳು ಹೆಚ್ಚಿನ ಸೈನಿಕರಿಗೆ ರಕ್ಷಣೆಯನ್ನು ನೀಡುತ್ತವೆ.

ಎರಡನೆಯ ಹಂತದ ವಸತಿ ನಿಲಯಗಳು ಕೋಟೆಯ ಒಳಗೋಡೆಯ ಮೇಲೆ ವೃತ್ತಾಕಾರದಲ್ಲಿ ಅಥವಾ ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಇವುಗಳು ಸಹ ಸಾಮೂಹಿಕ ವಸತಿ ನಿಲಯಗಳಾಗಿವೆ. ಇಂತಹ ಕಟ್ಟಡಗಳು ಕೋಟೆಯ ಮೂರನೆಯ ಹಾಗೂ ನಾಲ್ಕನೆಯ ದ್ವಾರದ ಮೇಲ್ಭಾಗದಲ್ಲಿವೆ. ಇಲ್ಲಿ ಹೆಚ್ಚಿನ ಸಂಖ್ಯೆಯ ಸೈನಿಕರು ನೆಲೆ ನಿಂತು ಕೋಟೆಯ ಪ್ರಮುಖ ಸ್ಥಳಗಳನ್ನು ರಕ್ಷಣೆ ನೀಡುತ್ತಿದ್ದರು. ಏಳನೆಯ ದ್ವಾರದ ಎರಡು ಬದಿಯಲ್ಲಿಯ ಕೊತ್ತಳಗಳ ಒಳಭಾಗದಲ್ಲಿ ವಿಶಾಲವಾದ ತಂಗುದಾಣಗಳಿವೆ. ಇದರ ಒಳಗಡೆ ಹಲವು ವೀಕ್ಷಣಾ ರಂಧ್ರಗಳಿವೆ, ಇದರ ಪ್ರವೇಶದ್ವಾರವು ೪x೬ ಅಡಿ ಅಗಲ ಎತ್ತರವಾಗಿದೆ. ಅದಕ್ಕೆ ಒಂದು ಬದಿಯಲ್ಲಿ ಮೇಲೆ ಹತ್ತಲು ಮೆಟ್ಟಲುಗಳಿವೆ. ಮೇಲ್ಭಾಗದಲ್ಲಿ ತೋಪಿಗಾಗಿ ರಚನೆ ಮಾಡಿರುವ ವೃತ್ತಾಕಾರದ ತೋಪು ಕಟ್ಟೆ ಇದೆ. ಕೆಲವು ಕಾವಲುಗಾರರು ಮೇಲೆ ನಿಂತು ಕಾವಲು

ಮಾಡುತ್ತಿದ್ದಾಗ ಉಳಿದವರು ಒಳಗಡೆ ವಿಶ್ರಾಂತಿ ಪಡೆಯುತ್ತಿದ್ದರು. ಈ ರೀತಿಯ ವಸತಿ ನಿಲಯಗಳು ಕೋಟೆಯ ಉಳಿದ ಭಾಗಗಳಲ್ಲಿ ಕಂಡು ಬರುತ್ತವೆ.

ಮೂರನೇ ಹಾಗೂ ನಾಲ್ಕನೆಯ ಹಂತದ ವಸತಿ ನಿಲಯಗಳೆಂದರೆ ಕೋಟೆ ಗೋಡೆಯ ಬದಿಯಲ್ಲಿ ನಿರ್ಮಿಸಿರುವ ಸೈನಿಕರ ವಸತಿ ನಿಲಯಗಳು. ಕೋಟೆಯ ವಾಯುವ್ಯ ಭಾಗದಲ್ಲಿರುವ ಕೋಟೆ ಗೋಡೆಗೆ ಅಂಟಿಕೊಂಡಿರುವ ಸಾಲು ವಸತಿ ನಿಲಯಗಳಿವೆ. ಪ್ರತಿಯೊಂದು ಕಟ್ಟಡದಲ್ಲಿ ೧೫ ರಿಂದ ೨೦ ಸೈನಿಕರು ವಿಶ್ರಾಂತಿ ಪಡೆಯಬಹುದು. ಈ ರೀತಿಯ ಹಲವು ವಸತಿ ನಿಲಯಗಳಿವೆ. ಕೊನೆಯದಾಗಿ ಕೋಟೆಯ ಹೊರಗೋಡೆಯ ಹಿಂಭಾಗದಲ್ಲಿ ತೆನೆಗಳ ಕೆಳಭಾಗದಲ್ಲಿ ಸಾಲಾಗಿ ಸೈನಿಕರ ತಂಗು ದಾಣಗಳಿವೆ. ೩x೪ ಅಡಿ ಉದ್ದ ಅಗಲದ ಕಟ್ಟಡದಲ್ಲಿ ಒಬ್ಬ ಸೈನಿಕನು ಆಶ್ರಯ ಪಡೆಯಬಹುದು. ಇವುಗಳನ್ನು ಹೊರತು ಪಡಿಸಿ ಕೋಟೆಯ ಕೆಲವು ಪ್ರಮುಖ ಸ್ಥಳಗಳಲ್ಲಿ ಸೈನಿಕರ ತಂಗುದಾಣಗಳಿವೆ.

ಫೀರೋಜಾಬಾದ ಕೋಟೆಯ ಪ್ರತಿಯೊಂದು ದ್ವಾರದ ಸಮೀಪದಲ್ಲಿ ಅಥವಾ ಒಳ ಹಾಗೂ ಹೊರ ಭಾಗಗಳಲ್ಲಿ ಸೈನಿಕರ ವಸತಿ ನಿಲಯಗಳಿವೆ.[೩೦] ಗುಲಬರ್ಗಾ ದ್ವಾರದ ಒಳಭಾಗ ಎರಡು ಬದಿಯಲ್ಲಿ ಎರಡು ಅಂಕಣಗಳಲ್ಲಿ ಸೈನಿಕರ ತಂಗುದಾಣಗಳಿವೆ. ಕಾವಲುಗಾರರು ಮೇಲೆ ಹತ್ತಲು ಮೆಟ್ಟಿಲುಗಳಿವೆ. ಶಹಪೂರ ದ್ವಾರದ ಮುಂಭಾಗದಲ್ಲಿ ಕಾವಲು ಪಡೆಯ ಸಲುವಾಗಿ ವಿಶೇಷ ವ್ಯವಸ್ಥೆಯನು ಮಾಡಲಾಗಿದೆ. ದ್ವಾರದ ಹೊರಭಾಗದಲ್ಲಿ ಇರುವ ಗೋಡೆಯ ಎರಡು ಬದಿಯಲ್ಲಿ ಕಮಾನಿನ ಆಕಾರದ ದ್ವಾರ ಹೊಂದಿರುವ ಚೌಕಾಕಾರದ ವಸತಿ ನಿಲಯಗಳಿವೆ. ಸುಮಾರು ೮೦x೮೦ ಅಡಿ ಉದ್ದ ಅಗಲದ ಸ್ಥಳವನ್ನು ಕಾವಲುಗಾರರಿಗಾಗಿ ಮೀಸಲಾಗಿಸಲಾಗಿದೆ. ಈ ದ್ವಾರದ ಒಳಭಾಗದಲ್ಲಿ ಎರಡು ಬದಿಯಲ್ಲಿ ಮೂರು ಅಂಕಣಗಳಿಂದ ಕೂಡಿದ ಸ್ಥಳವಿದೆ. ಎರಡು ಅಂತಸ್ತಿನಲ್ಲಿರುವ ಈ ಕಟ್ಟಡಗಳಲ್ಲಿ ಹೆಚ್ಚಿನ ಸೈನಿಕರು ವಿಶ್ರಾಂತಿ ಪಡೆಯಬಹುದು. ದ್ವಾರದ ಮೇಲ್ಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳಗಳಿವೆ. ಈ ಕೋಟೆಯ ಕೇಂದ್ರ ಭಾಗದಲ್ಲಿ ಇರುವ ಅರಮನೆಯ ಸುತ್ತಲು ಹಾಗೂ ಅದರ ಉತ್ತರ ಭಾಗದಲ್ಲಿ ಹಲವು ಕಾವಲುಗಾರರ ವಸತಿ ನಿಲಯಗಳ ಅವಶೇಷಗಳಿವೆ. ಫೀರೋಜಾಬಾದ ಕೋಟೆಯ ಪಶ್ಚಿಮ ಭಾಗದ ದ್ವಾರದ ಮುಂಭಾಗದಲ್ಲಿ ಹಾಗೂ ಒಳಗಡೆ ಕಾವಲುಗಾರರಿಗೆ ಹಲವು ಪ್ರಕಾರದ ವಸತಿ ನಿಲಯಗಳನ್ನು ನಿರ್ಮಿಸಲಾಗಿದೆ.

ಶಹಾಪೂರ ಹಾಗೂ ಯಾದಗಿರ ಕೋಟೆಯಲ್ಲಿ ಬರುವ ಎಲ್ಲಾ ಪ್ರವೇಶದ್ವಾರಗಳಿಗೂ ಹಾಗೂ ಪ್ರತಿಯೊಂದು ಕೊತ್ತಳಗಳ ಸಮೀಪದಲ್ಲಿ ಕಾವಲುಗಾರರಿಗೆ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಶಹಾಪೂರ ಕೋಟೆಯ ನಾಲ್ಕನೆಯ ಪ್ರವೇಶ ದ್ವಾರದ ಒಳಭಾಗದಲ್ಲಿ ಸುಮಾರು ೧೦೦ ಅಡಿ ಉದ್ದನೆಯ ಸ್ಥಳದಲ್ಲಿ ಸೈನಿಕರ ವಸತಿ ನಿಲಯಗಳಿವೆ. ಇದು ಕೋಟೆಯ ಕೇಂದ್ರ ಭಾಗವಾಗಿರುವುದರಿಂದ ಇಲ್ಲಿ ಹೆಚ್ಚಿನ ಸಂಖ್ಯೆಯ ಸೈನ್ಯದ ಅವಶ್ಯಕತೆ ಇರುವುದರಿಂದ ಹೆಚ್ಚಿನ ಸಂಖ್ಯೆಯ ವಸತಿ ನಿಲಯಗಳನ್ನು ರಚಿಸಲಾಗಿದೆ.[೩೧]

ಈ ಎರಡು ಕೋಟೆಗಳು ಬೆಟ್ಟದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ಚಾಚಿಕೊಂಡಿರುವುದರಿಂದ ಎಲ್ಲಾ ಭಾಗಗಳಲ್ಲಿ ಸೈನಿಕರಿಗೆ ಅನುಕೂಲವಾಗುವಂತೆ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಯಾದಗಿರ ಕೋಟೆಯು ಹೆಚ್ಚಿನ ವಿಸ್ತಾರವನ್ನು ಹೊಂದಿರುವುದರಿಂದ ಇಲ್ಲಿ ಹೆಚ್ಚಿನ ಸಂಖ್ಯೆಯ ವಸತಿ ನಿಲಯಗಳಿವೆ. ದಕ್ಷಿಣ ಭಾಗದಲ್ಲಿರುವ ದ್ವಾರವು (ಅಂಬೇಡ್ಕರ ಚೌಕ) ಬೆಟ್ಟದ ಕೆಳಹಂತದಲ್ಲಿದ್ದರು ಇದರ ಎರಡು ಬದಿಯಲ್ಲಿ ಕಾವಲುಗಾರರ ತಂಗುದಾಣಗಳಿವೆ. ಒಳಭಾಗದಲ್ಲಿರುವ ಒಂದು ವಿಶೇಷ ತಂಗುದಾಣ ಅತ್ಯಂತ ಚಿಕ್ಕ ಪ್ರವೇಶ ದ್ವಾರ ಹೊಂದಿದೆ. ಆದರೆ ಒಳಭಾಗದಲ್ಲಿ ಸುಮಾರು ೩೦ ರಿಂದ ೪೦ ಸೈನಿಕರು ವಿಶ್ರಾಂತಿ ಪಡೆಯಬಹುದು.

ಮಳಖೇಡ ಕೋಟೆಯ ಮೂರು ಪ್ರವೇಶದ್ವಾರಗಳ ಒಳ ಹಾಗೂ ಹೊರ ಭಾಗದಲ್ಲಿ ಸೈನಿಕರ ವಿಶ್ರಾಂತಿ ತಾಣಗಳಿವೆ. ಮೂರನೆಯ ದ್ವಾರದ ಒಳ ಬದಿಯಲ್ಲಿ ಬಲಭಾಗಕ್ಕೆ ಅವನತಿ ಹೊಂದಿರುವ ಹಲವು ವಸತಿ ನಿಲಯಗಳ ಅವಶೇಷಗಳು ಕಂಡು ಬರುತ್ತವೆ.[೨] ಕೋಟೆ ಪೂರ್ವ ದಿಕ್ಕಿನಲ್ಲಿ ಹಲವು ಬಗೆಯ ಕಟ್ಟಡಗಳ ಅವಶೇಷಗಳು ಕಂಡು ಬರುತ್ತವೆ. ಇವುಗಳ ಕೇಂದ್ರ ಭಾಗದಲ್ಲಿ ಒಂದು ಕಾವಲುಗೋಪುರವಿದೆ. ಆದ್ದರಿಂದ ಇದರ ಸುತ್ತಮುತ್ತಲು ಸೈನಿಕರ ವಸತಿ ನಿಲಯಗಳಿರಬಹುದೆಂದು ಇತಿಹಾಸಕಾರರ ಅಭಿಪ್ರಾಯವಾಗಿದೆ. ಅದೇ ರೀತಿ ನದಿಯ ಸಮೀಪದಲ್ಲಿರುವ ಪ್ರತಿಯೊಂದು ಬುರುಜುಗಳ ಸಮೀಪದಲ್ಲಿ ಹಾಗೂ ಕಾವಲುಗೋಪುರಗಳ ಸಮೀಪದಲ್ಲಿ ಸೈನಿಕರ ತಂಗು ದಾಣಗಳಿವೆ.

ಚಂಡ್ರಕಿಯ ಕೋಟೆಯ ಪ್ರವೇಶದ್ವಾರದ ಮುಂಭಾಗದಲ್ಲಿ ಅರ್ಧವೃತ್ತಾಕಾರದ ತಡೆ ಗೋಡೆಯಿದೆ. ಅದರ ಬಲಬದಿಯಲ್ಲಿ ದೇವಾಲಯಕ್ಕೆ ಅಂಟಿಕೊಂಡಿರುವಂತೆ ಹಲವು ಸೈನಿಕರ ವಸತಿ ನಿಲಯಗಳು ಹಾಗೂ ದ್ವಾರದ ಒಳಭಾಗದಲ್ಲಿ ಎರಡು ಬದಿಯಲ್ಲಿ ೧೦x೧೫ ಅಡಿ ಉದ್ದ ಅಗಲದ ತಂಗುದಾಣಗಳಿವೆ. ಕೋಟೆಯ ಪ್ರವೇಶ ದ್ವಾರದ ಉತ್ತರ ಹಾಗೂ ದಕ್ಷಿಣ ಭಾಗದಲ್ಲಿ ಅವನತಿ ಹೊಂದಿರುವ ಹಲವು ವಸತಿ ನಿಲಯದ ಕಟ್ಟಡಗಳಿವೆ.

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ವಾಗಣಗೇರಿ ಹಾಗೂ ವನದುರ್ಗ ಕೋಟೆಗಳ ಪ್ರವೇಶ ದ್ವಾರದ ಎರಡೂ ಬದಿಯಲ್ಲಿ ಸೈನಿಕರಿಗೆ ಆಯಕಟ್ಟಿನ ಸ್ಥಳಗಳನ್ನು ನಿರ್ಮಿಸಲಾಗಿದೆ. ಕೋಟೆಯ ಒಳಭಾಗದಲ್ಲಿ ಹಲವು ಪ್ರಕಾರದ ವಸತಿನಿಲಯಗಳಿವೆ.[೩] ಅದರಲ್ಲಿ ವನದುರ್ಗ ಕೋಟೆಯ ಪೂರ್ವ ಹಾಗೂ ಪಶ್ಚಿಮ ಭಾಗದಲ್ಲಿ ಸಾಲು ವಸತಿ ನಿಲಯಗಳಿವೆ. ಅವುಗಳ ಸಂಪೂರ್ಣವಾಗಿ ಅವನತಿ ಹೊಂದಿದ್ದು, ಅದರ ತಳಭಾಗ ಮಾತ್ರ ಉಳಿದುಕೊಂಡಿದೆ. ನಾಗಾವಿ ಕೋಟೆಯ ಪೂರ್ವ ಭಾಗದ ದ್ವಾರದ ಸಮೀಪದಲ್ಲಿ ವೀರ ಆಂಜನೆಯ ದೇವಸ್ಥಾನದ ಸಮೀಪ ಸೈನಿಕರ ವಸತಿ ನಿಲಯಗಳಿವೆ. ಪ್ರತಿಯೊಂದು ಕಟ್ಟಡದ ಗೋಡೆಯು ೮ ರಿಂದ ೧೦ ಅಡಿಯವರೆಗೆ ಉಳಿದುಕೊಂಡು ಅದರ ಮೇಲ್ಭಾಗ ನಾಶ ಹೊಂದಿದೆ. ಇದನ್ನು

ವೀಕ್ಷಿಸಿದಾಗ ಸೈನಿಕರ ವಸತಿ ನಿಲಯಗಳ ಬಗ್ಗೆ ಕಲ್ಪನೆ ಬರುತ್ತದೆ. ಈ ದೃಶ್ಯ ಹರಪ್ಪ ಮತ್ತು ಮಹೆಂಜೋದಾರೊ ನಗರದ ವಸತಿ ನಿಲಯಗಳ ತಳಪಾಯದಂತೆ ಕಂಡು ಬರುತ್ತದೆ.

ಜಿಲ್ಲೆಯಲ್ಲಿ ಬರುವ ಕಾಕಲ್‌ವಾರ, ಗುರುಮಿಠಕಲ್, ಪುಟ್‌ಘಾಗ್, ಚಿನ್ಮಳ್ಳಿ, ಇಜೇರಿ ಹಾಗೂ ಇತರ ಕೋಟೆಗಳಲ್ಲಿ ಸೈನಿಕರ ತಂಗುದಾಣಗಳು ಅಥವಾ ವಸತಿ ನಿಲಯಗಳಿವೆ. ಗ್ರಾಮ ರಕ್ಷಣೆಗಾಗಿ ನಿರ್ಮಿಸಿರುವ ಕೋಟೆಯನ್ನು ಹೊರತು ಪಡಿಸಿ ಇತರ ಎಲ್ಲಾ ಕೋಟೆಗಳಲ್ಲಿ ಇಂತಹ ವ್ಯವಸ್ಥೆಯು ಕಂಡು ಬರುತ್ತದೆ. ರಾಜ್ಯವನ್ನು ರಕ್ಷಿಸುವ ಕೋಟೆ, ಕೋಟೆಯನ್ನು ರಕ್ಷಿಸುವ ಸೈನಿಕರು ಹಾಗೂ ಸೈನಿಕರನ್ನು ರಕ್ಷಿಸುವ ವಸತಿ ನಿಲಯಗಳು ರಕ್ಷಣಾ ಸಂಬಂಧಿ ವಾಸ್ತು ಶಿಲ್ಪಗಳಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿವೆ.

೫.೫. ಮದ್ದಿನ ಮನೆಗಳು:

ಕ್ರಿ.ಶ. ೧೨ನೆಯ ಶತಮಾನದ ಯುದ್ಧರಂಗದಲ್ಲಿ ಮದ್ದು ಗುಂಡುಗಳ ಬಳಕೆಯು ಆರಂಭವಾಯಿತು. ಪರ್ಶಿಯಾದಲ್ಲಿ ಆರಂಭವಾದ ಈ ಪದ್ಧತಿಯು ಇಲ್ತಿಮಷ್ ಹಾಗೂ ತುಘಲಕರ ಕಾಲಕ್ಕೆ ಭಾರತದಲ್ಲಿ ಬಳಕೆಗೆ ಬಂದಿತು. ಆಗ ಇದು ಅಷ್ಟೊಂದು ಪರಿಣಾಮಕಾರಿ ಯುದ್ಧ ಪದ್ಧತಿಯಾಗಿ ಕಂಡು ಬರಲಿಲ್ಲ. ಬಹಮನಿ ಸುಲ್ತಾನರ ಕಾಲಕ್ಕೆ ಈ ಪದ್ಧತಿ ಬೆಳಕಿಗೆ ಬಂದಿತು. ಇವರ ಸೈನ್ಯದಲ್ಲಿರುವ ಹೆಚ್ಚಿನ ಅಧಿಕಾರಿಗಳು ಪರ್ಶಿಯನ್ನರಾಗಿದ್ದರಿಂದ ಅವರು ಕಲಿತ ಫಿರಂಗಿಗಳ ಬಳಕೆಯನ್ನು ಸ್ಥಳಿಯ ಯುದ್ಧದಲ್ಲಿ ಬಳಸತೊಡಗಿದರು. ಕ್ರಿ.ಶ. ೧೩೬೫ರಲ್ಲಿ ವಿಜಯನಗರದೊಂದಿಗೆ ನಡೆದ ಯುದ್ಧದಲ್ಲಿ ಬಹಮನಿ ಸುಲ್ತಾನರು ಫಿರಂಗಿಗಳನ್ನು ಬಳಸಿ ಗೆಲುವು ಸಾಧಿಸಿದರು. ಈ ಹಿನ್ನಲೆಯಲ್ಲಿ ಮುಂದೆ ಬಂದ ಸುಲ್ತಾನರು ಈ ಪದ್ಧತಿಯನ್ನು ಅಳವಡಿಸಿಕೊಳ್ಳಲು ಆರಂಭಿಸಿದರು.[೩೪] ಇದಕ್ಕಾಗಿ ತಮ್ಮ ಕೋಟೆಗಳಲ್ಲಿ ಮದ್ದು ಗುಂಡುಗಳ ಸಂಗ್ರಹಕ್ಕೆ ವಿಶೇಷ ವ್ಯವಸ್ಥೆಯನ್ನು ಮಾಡಿದರು. ಶತ್ರುಗಳಿಗೆ ಕಾಣದಂತೆ ಅತ್ಯಂತ ಸುರಕ್ಷಿತವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅದರ ರಕ್ಷಣೆ ಸೂಕ್ತ ಕಟ್ಟಡಗಳನ್ನು ನಿರ್ಮಿಸಿದರು. ಯುದ್ಧದ ಸೋಲು ಗೆಲುವು ಫಿರಂಗಿ ವ್ಯವಸ್ಥೆಯನ್ನು ಅವಲಂಭಿಸಿರುತ್ತಿತ್ತು.[೩೫]

ಗುಲಬರ್ಗಾ ಕೋಟೆಯಲ್ಲಿ ಹಲವು ಬಗೆಯ ಮದ್ದಿನ ಮನೆಗಳಿವೆ. ಕೋಟೆಯ ಸುತ್ತಲು ಇರುವ ೨೬ ಬೃಹತ್ ತೋಪುಗಳ ಸಮೀಪದಲ್ಲಿ ಒಂದೊಂದು ಮದ್ದಿನ ಸಂಗ್ರಹವಿದೆ. ತೋಪುಕಟ್ಟೆಯ ಕೆಳ ಭಾಗದಲ್ಲಿ ೬x೮ ಉದ್ದಗಲದ ಸ್ಥಳಗಳಿವೆ. ಇಲ್ಲಿ ಮದ್ದು ಗುಂಡುಗಳನ್ನು ಸಂಗ್ರಹ ಮಾಡಿಕೊಳ್ಳುತ್ತಿದ್ದರು. ಏಕೆಂದರೆ ಕೋಟೆ ಮುತ್ತಿಗೆಯ ಕಾಲದಲ್ಲಿ ಸಮೀಪದಲ್ಲಿರುವ ಮದ್ದುಗುಂಡುಗಳನ್ನು ಫಿರಂಗಿಗಳಿಗೆ ಬಳಸಲಾಗುತ್ತಿತ್ತು. ಕೋಟೆಯ ಒಳಗೋಡೆಗೆ ಹೊಂದಿಕೊಂಡಿರುವಂತೆ ಮದ್ದಿನ ಮನೆಗಳಿವೆ. ವಾಯುವ್ಯ ಭಾಗದಲ್ಲಿ ಒಂದು ಬೃಹದಾಕಾರದ ತೋಪಿನ ಹಿಂಭಾಗದಲ್ಲಿ ಭದ್ರವಾದ ಕಟ್ಟಡವಿದೆ. ಇಲ್ಲಿ ಮದ್ದು ಗುಂಡುಗಳನ್ನು ಸಂಗ್ರಹಿಸಲಾಗುತ್ತಿದ್ದೆ. ಯುದ್ಧ ಕಾಲದಲ್ಲಿ ಈ ಭಾಗದಲ್ಲಿರುವ ಎಲ್ಲಾ ತೋಪುಗಳಿಗೆ ಇಲ್ಲಿಂದ ಸ್ಫೋಟಕ ವಸ್ತುಗಳನ್ನು ರವಾನಿಸಲಾಗುತ್ತಿತ್ತು. ಪ್ರಸ್ತುತ ಈ ಕಟ್ಟಡವು ಸಂಪೂರ್ಣವಾಗಿ ನಾಶ ಹೊಂದಿದ್ದು

[illegible]

...ಂಡಿವೆ. ಇದರ ಕೆಳಭಾಗದಲ್ಲಿ ಕೆಲವು ಸಣ್ಣ ಸಣ್ಣ

...ಲ್ಲಿ ವೃತ್ತಾಕಾರದ ಒಂದು ದೊಡ್ಡ ಮದ್ದಿನ
ಅಡಿ ನೆಲದಲ್ಲಿ ಹಾಗೂ ಉಳಿದ ಹತ್ತು
೩x೬ ಅಗಲ ಎತ್ತರದಲ್ಲಿದೆ. ಮದ್ದಿನ
...ಕಲವು ನಿಟ್ಟಿನ ಮುಂಜಾಗ್ರತ ಕ್ರಮ
ಕೊಂಡಿರುವಂತೆ ಐದು ಮೆಟ್ಟಿಲುಗಳಿವೆ.

ಭ... ...ದ್ರದಲ್ಲಿ ಒಂದು ರಂಧ್ರವಿದೆ. ಅವಶ್ಯವಿರುವಾಗ ಅದನ್ನು ತೆಗೆದು ಮತ್ತೆ ಭದ್ರವಾಗಿ ಮುಚ್ಚುವಂತೆ ಮಾಡಲಾಗಿದೆ. ಈ ಸ್ಥಳವನ್ನು ಸ್ಥಳಿಯರು ನಮಕ್‌ಕೋಟಾ (ಉಪ್ಪಿನ ಸಂಗ್ರಹ) ಎಂದು ಕರೆಯುತ್ತಾರೆ. ಇದರ ಹೊರ ಭಾಗದಲ್ಲಿ ೧೫ ರಿಂದ ೨೦ ಅಡಿ ಅಂತರದಲ್ಲಿ ಸುತ್ತಲು ಚೌಕಾಕಾರದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ೨೫ ಅಡಿ ಎತ್ತರದ ಗೋಡೆಯ ಮೇಲ್ಭಾಗದಲ್ಲಿ ತೆನೆಗಳಿರುವುದರಿಂದ ಇದು ಸಹ ಒಂದು ಕೋಟೆಯಂತೆ ಕಂಡು ಬರುತ್ತದೆ. ಈ ರೀತಿಯ ವಿಶೇಷ ಭದ್ರತೆಯನ್ನು ನಮಕಕೋಟಾಕ್ಕೆ ಅವಶ್ಯವಿರುವುದಿಲ್ಲ. ಆದ್ದರಿಂದ ಇದು ಮದ್ದೀನ ಸಂಗ್ರಹವಾಗಿರ ಬಹುದಾಗಿದೆ. ಕೋಟೆಯ ಸುತ್ತಲು ಇರುವ ಬೃಹತ ತೋಪುಗಳಿಗೆ ಹಾಗೂ ಯುದ್ಧಕ್ಕೆ ಹೋಗುವಾಗ ಇಲ್ಲಿ ಸಂಗ್ರಹವಾದ ಸ್ಫೋಟಕ ವಸ್ತುವನ್ನು ತೆಗೆದುಕೊಂಡು ಹೋಗುತ್ತಿದ್ದರು. ಕೋಟೆಯ ಕೇಂದ್ರಭಾಗದಲ್ಲಿರುವ ರಣಮಂಡಲದ ಮೇಲ್ಭಾಗದಲ್ಲಿ ಮೂರು ದೊಡ್ಡ ತೋಪುಗಳಿವೆ. ಅವುಗಳಿಗಾಗಿ ಅದರ ಕೆಳಭಾಗದಲ್ಲಿ ಒಂದು ಮದ್ದಿನ ಸಂಗ್ರಹವಿದೆ.[೩೭] ಆದರೆ ಇದನ್ನು ಪ್ರಸ್ತುತ ಸಂಪೂರ್ಣವಾಗಿ ಮುಚ್ಚಲಾಗಿದೆ. ಅದೆ ರೀತಿ ದಕ್ಷಿಣ ಭಾಗದಲ್ಲಿರುವ ಕಾಲಾಬುರುಜ್‌ನ ಕೆಳಭಾಗದಲ್ಲಿ ಮದ್ದಿನ ಸಂಗ್ರಹಗಳಿವೆ.

ಜಾಮಿ ಮಸೀದಿಯ ಆಗ್ನೇಯ ಭಾಗದಲ್ಲಿ ಒಂದು ನೆಲ ಮಾಳಿಗೆಯ ಕಟ್ಟಡವಿದೆ. ಅದರ ಸುತ್ತಲಿನ ಎಲ್ಲಾ ಕಟ್ಟಡಗಳು ನೆಲಸಮವಾಗಿವೆ. ಅದರಲ್ಲಿ ಒಂದು ಕಡೆ ಒಂದು ಚಿಕ್ಕ ಕಿಂಡಿಯಿದ್ದು ಅಲ್ಲಿಂದ ಕೆಳಗಡೆ ವೀಕ್ಷಿಸಿದಾಗ ಒಳಗಡೆ ವಿಶಾಲವಾದ ಸ್ಥಳವಿದೆ. ಇದು ಸಹ ಮದ್ದಿನ ಮನೆಯಾಗಿದೆ. ಏಕೆಂದರೆ ಮದ್ದಿನ ಮನೆಗಳ ನಿರ್ಮಾಣದ ಎಲ್ಲಾ ಲಕ್ಷಣಗಳು ಈ ಕಟ್ಟಡಗಳಲ್ಲಿ ಕಂಡು ಬರುತ್ತವೆ. ಅರಮನೆಯ ರಕ್ಷಣೆಗಾಗಿ ವಿಶೇಷ ಕ್ರಮ ಜರುಗಿಸುವಂತೆ ಮದ್ದಿನ ಮನೆಗಳ ರಕ್ಷಣೆಗಾಗಿ ಹಲವು ಮುಂಜಾಗ್ರತ ಕ್ರಮ ಕೈಗೊಳ್ಳಬೇಕೆಂದು ಕೌಟಿಲ್ಯ ತನ್ನ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ.

ಯಾದಗಿರ ಕೋಟೆಯಲ್ಲಿ ಎಂಟು ಬೃಹತ್ ತೋಪುಗಳು ಹಾಗೂ ಹಲವು ಕಡೆಯಲ್ಲಿ ಚಿಕ್ಕ ಚಿಕ್ಕ ತೋಪುಗಳನ್ನು ನಿಲ್ಲಿಸಲಾಗಿದೆ. ಆದ್ದರಿಂದ ಅವುಗಳ ಬಳಕೆಗೆ ಅವಶ್ಯವಿರುವ ಸ್ಫೋಟಕ ವಸ್ತುಗಳ ಸಂಗ್ರಹಗಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಅದರಲ್ಲಿ ಕೆಲವು ಮದ್ದಿನ ಸಂಗ್ರಹ ತೋಪಿನ

ಸಮೀಪದಲ್ಲಿದ್ದರೆ ಮತ್ತೆ ಕೆಲವು ಬೆಟ್ಟದ ಮೇಲ್ಭಾಗದಲ್ಲಿವೆ. ಕೆಲವು ಮದ್ದಿನ ಸಂಗ್ರಹಗಳು ನೆಲವನ್ನು ಕೊರೆದು ಕೆಳಭಾಗದಲ್ಲಿ ನಿರ್ಮಿಸಲಾಗಿದೆ. ಸುಮಾರು ೬x೬ ಉದ್ದ-ಅಗಲದ ಸ್ಥಳವನ್ನು ಸುತ್ತುವರೆದ ಗೋಡೆಯನ್ನು ನಿರ್ಮಿಸಿ ಅದರ ಮೇಲ್ಭಾಗದಲ್ಲಿ ಒಂದು ಚಿಕ್ಕ ವೃತ್ತಾಕಾರದ ಕಿಂಡಿಯನ್ನು ಬಿಡಲಾಗಿದೆ. ಒಳಗಡೆಯ ಕಲ್ಲುಗಳು ನುಣುಪಾಗಿ ಕಟೆದು ಎರಡು ಕಲ್ಲುಗಳ ಮಧ್ಯದಲ್ಲಿ ಅಂತರವಿರದಂತೆ ಜೋಡಿಸಲಾಗಿದೆ. ಕೆಳಭಾಗದ ತೇವಾಂಶದಿಂದ ಮದ್ದು ತನ್ನ ಶಕ್ತಿಯನ್ನು ಕಳೆದುಕೊಳ್ಳಬಹುದೆಂದು ಮುಂಜಾಗ್ರತ ಕ್ರಮ ಕೈಗೊಳ್ಳಲಾಗಿದೆ. ಇದರ ಮೇಲೆ ಸರಿಯಾದ ಆಕಾರದ ಕಲ್ಲು ಇಟ್ಟರೆ ಇದರ ಬಗ್ಗೆ ಶತ್ರುಗಳಿಗೆ ಮಾಹಿತಿ ಸಿಗುವುದಿಲ್ಲ. ಬೆಟ್ಟದ ಮೇಲ್ಭಾಗದಲ್ಲಿ ೮x೮ ಅಡಿ ಉದ್ದ ಅಗಲ ಹಾಗೂ ೫ ಅಡಿ ಎತ್ತರದ ಕಟ್ಟಡವಿದೆ. ಇದು ಸಹ ಮದ್ದಿನ ಸಂಗ್ರಹಕ್ಕಾಗಿ ನಿರ್ಮಿಸಲಾಗಿದೆ. ಯಾದಗಿರ ಕೋಟೆಯಲ್ಲಿ ಹಲವು ಎಣ್ಣೆಯ ಅಥವಾ ತುಪ್ಪದ ಕೊಳ್ಳಗಳು ಹಾಗೂ ಮದ್ದಿನ ಮನೆಗಳು ಇರುವುದರಿಂದ ಈ ಎರಡು ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಪ್ರತ್ಯೇಕಿಸುವುದು ಕಷ್ಟಕರವಾಗಿದೆ.[೩೮]

ಯಾದಗಿರ ಕೋಟೆಯ ಕೇಂದ್ರಭಾಗದಲ್ಲಿರುವ ಅತ್ಯಂತ ಎತ್ತರವಾದ ಕಾವಲುಗೋಪುರದ ಕೆಳಭಾದಲ್ಲಿ ೪x೪ ಅಡಿ ಆಕಾರದ ಮದ್ದಿನ ಸಂಗ್ರಹವಿದೆ. ಇದರ ಪ್ರವೇಶ ದ್ವಾರವು ೨x೩ ಅಡಿ ಉದ್ದ ಅಗಲವಾಗಿದ್ದು. ಈ ಗೋಪುರದ ಮೇಲೆ ಎರಡು ಬೃಹತ್ ತೋಪುಗಳಿರುವುದರಿಂದ ಅವುಗಳಿಗೆ ಬೇಕಾಗುವಷ್ಟು ಮದ್ದನ್ನು ಇಲ್ಲಿ ಸಂಗ್ರಹಿಸಲಾಗುತ್ತಿತ್ತು. ಈ ರೀತಿ ಬೇರೆ ಬೇರೆ ಭಾಗಗಳಲ್ಲಿರುವ ದೊಡ್ಡ ದೊಡ್ಡ ತೋಪುಗಳ ಸಮೀಪದಲ್ಲಿ ಮದ್ದಿನ ಮನೆಗಳಿವೆ. ಕೋಟೆಯ ಕೇಂದ್ರ ಭಾಗದಲ್ಲಿ ಇರುವ ಮೂರು ಚಿಕ್ಕ ದೇವಾಲಯಗಳ ಒಳಭಾಗದಲ್ಲಿ ಎತ್ತರವಾದ ಕಪ್ಪನೆಯ ಮಣ್ಣಿನ (ಬೂದಿ) ದಿನ್ನೆಗಳಿವೆ.[೩೯] ಇವುಗಳಲ್ಲಿ ಮದ್ದು ಸಂಗ್ರಹಿಸಿ ಇಡಲಾಗುತ್ತಿತ್ತು. ಅಂತಹ ಸಂಗ್ರಹಕ್ಕೆ ಬೆಂಕಿ ಬಿದ್ದಾಗ, ಅದು ಈ ರೀತಿ ಬೂದಿಯಾಗಿ ಪರಿವರ್ತನೆಯಾಗಿದೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಅಂತಹ ವಸ್ತುಗಳನ್ನು ಸಂಗ್ರಹಿಸಲಾಗಿದೆ. ದೇವಾಲಯಗಳ ಒಳಭಾಗದಲ್ಲಿ ಯಾವುದೇ ಮೂರ್ತಿ ಶಿಲ್ಪಗಳು ಇರುವುದಿಲ್ಲ. ಕೋಟೆಯ ವಾಯುವ್ಯ ಭಾಗದಲ್ಲಿ ಒಂದು ಚೌಕಾಕಾರದ ಕಟ್ಟಡವಿದೆ. ಅದು ಸಂಪೂರ್ಣವಾಗಿ ಶಿಥಿಲಗೊಂಡಿದೆ. ಅದರ ಕೆಳಭಾಗದಲ್ಲಿ ಕೆಲವು ಮಣ್ಣಿನ ದಿನ್ನೆಗಳಿವೆ. ಇವುಗಳನ್ನು ಅಗೆಯುತ್ತಾ ಹೋದಂತೆ ಒಳಭಾಗದಲ್ಲಿ ಸ್ಫೋಟಕ ವಸ್ತುಗಳು ಲಭ್ಯವಾಗುತ್ತವೆ. ಆದ್ದರಿಂದ ಇದು ಒಂದು ದೊಡ್ಡ ಪ್ರಮಾಣದ ಮದ್ದಿನ ಸಂಗ್ರಹದ ಸ್ಥಳವಾಗಿರುವಂತೆ ಕಂಡು ಬರುತ್ತದೆ. ಇಲ್ಲಿ ಲಭ್ಯವಾದ ಸ್ಫೋಟಕ ವಸ್ತುಗಳನ್ನು ಸಂಗ್ರಹಿಸಿ ಅವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸುಮಾರು ಮೂರರಿಂದ ಆರು ಇಂಚು ಉದ್ದ ಒಂದು ಇಂಚು ದಪ್ಪವಾಗಿರುವ ಈ ಸ್ಫೋಟಕ ವಸ್ತುಗಳು ಬಿಳಿಯ ವರ್ಣದಲ್ಲಿವೆ. ಇವುಗಳ ಒಂದು ತುದಿಗೆ ಬೆಂಕಿ ಹಚ್ಚಿದರೆ, ಪೂರ್ತಿ ಮುಗಿಯುವವರೆಗೆ ಹೊತ್ತಿಕೊಂಡು ಉರಿಯುತ್ತದೆ. ಇದರಿಂದ ಹೊರಬರುವ ಬೆಂಕಿ ಕೆಂಪು ಮತ್ತು ನೀಲಿ ವರ್ಣದಲ್ಲಿರುತ್ತದೆ. ಆದರಿಂದ ಹೊರಬರುವ ಹೊಗೆಯಲ್ಲಿ ಗಂಧಕಾಮ್ಲದ ವಾಸನೆ

ಇರುತ್ತದೆ. ಪೂರ್ತಿಯಾಗಿ ಉರಿದ ನಂತರ ಅದು ಕಪ್ಪನೆಯ ಬೂದಿಯಾಗಿ ಪರಿವರ್ತನೆಯಾಗುತ್ತದೆ. ಈ ರೀತಿ ಯಾದಗಿರ ಕೋಟೆಯಲ್ಲಿ ಇಂದಿಗೂ ಮದ್ದು ಗುಂಡುಗಳ ಸಂಗ್ರಹದ ಸುತ್ತ ಮುತ್ತಲು ಇಂತಹ ವಸ್ತುಗಳು ಲಭ್ಯವಾಗುತ್ತವೆ.

ಶಹಾಪೂರ ಕೋಟೆಯ ಮೇಲ್ಭಾಗದಲ್ಲಿ ಪ್ರಸ್ತುತ ಆರು ತೋಪುಗಳಿವೆ. ಅವುಗಳ ಸಮೀಪದಲ್ಲಿ ಮದ್ದಿನ ಸಂಗ್ರಹಗಳಿವೆ. ಸಭಾಭವನದ ಹಿಂಭಾಗದಲ್ಲಿ ದಕ್ಷಿಣಕ್ಕೆ ಮುಖ ಮಾಡಿ ನಿರ್ಮಿಸಿರುವ ಕಾವಲುಗೋಪುರದ ಕೆಳಭಾಗದಲ್ಲಿ ೪x೬ ಅಡಿ ಉದ್ದ ಅಗಲದ ಮದ್ದಿನ ಮನೆ ಇದೆ. ಅಲ್ಲದೆ ಕೋಟೆಯ ಪ್ರಮುಖ ಸ್ಥಳಗಳಲ್ಲಿ ತೋಪುಗಳ ಸಮೀಪದಲ್ಲಿ ವೃತ್ತಾಕಾರದ ಹಾಗೂ ಚೌಕಾಕೃತಿಯ ಮದ್ದಿನ ಸಂಗ್ರಹಗಳಿವೆ. ಸುರಪುರ ಕೋಟೆಯ ಕೆಲವು ಬುರುಜುಗಳ ಮೇಲೆ ತೋಪುಗಳು ಇರುವುದರಿಂದ ಇಲ್ಲಿಯ ಮದ್ದಿನ ಸಂಗ್ರಹಗಳಿರಬಹುದು. ವಾಗಣಗೇರಿ ಕೋಟೆಯಲ್ಲಿ ಅತಿ ಹೆಚ್ಚಿನ ಮದ್ದಿನ ಮನೆಗಳಿವೆ. ಕ್ರಿ.ಶ. ೧೭ ಹಾಗೂ ೧೮ನೆಯ ಶತಮಾನದಲ್ಲಿ ಮದ್ದುಗುಂಡುಗಳ ಬಳಕೆಯು ಹೆಚ್ಚಾಗಿರುವುದರಿಂದ ಅವುಗಳ ಸಂಗ್ರಹವು ಅವಶ್ಯವಾಯಿತು. ಔರಂಗಜೇಬನು ಈ ಕೋಟೆಯ ಮುತ್ತಿಗೆಯಲ್ಲಿ ನಿರಂತರ ಗುಂಡಿನ ಕಾಳಗ ಆರಂಭಿಸಿದ.[೪೦] ಅದಕ್ಕೆ ಪ್ರತಿಯಾಗಿ ಬೇಡರ ಸೈನ್ಯವು ಭಾರಿ ಪ್ರಮಾಣದ ಗುಂಡಿನ ಪ್ರತಿ ದಾಳಿ ಆರಂಭಿಸಿತು. ಕೊನೆಯ ಹಂತದ ಹೋರಾಟದಲ್ಲಿ ಹೊರಗಿನಿಂದ ಬಂದ ಒಂದು ಬೆಂಕಿಯ ಚಂಡು ಪ್ರಮುಖ ಮದ್ದಿನ ಮನೆಯ ಮೇಲೆ ಬಿದ್ದಿರುವುದರಿಂದ ಇಡಿ ಮದ್ದಿನ ಮನೆಯು ಸ್ಫೋಟಗೊಂಡು ಭಾರಿ ಶಬ್ದ ಉಂಟಾಯಿತು.[೪೧] ಈ ಘಟನೆಯ ಕೆಲ ಸಮಯದ ನಂತರ ಕೋಟೆಯು ಮೊಗಲರ ವಶವಾಯಿತು. ಈ ರೀತಿ ಕೋಟೆಯ ರಕ್ಷಣೆಯಲ್ಲಿ ಇವುಗಳ ಪಾತ್ರ ಅತಿ ಪ್ರಮುಖವಾಗಿದೆ. ಮದ್ದು ಗಾಳಿ, ಬೆಳಕು, ನೀರು ಹಾಗೂ ಇತರ ಕ್ರಿಮಿ ಕಿಟಗಳಿಂದ ಹಾಳಾಗದಂತೆ ಪ್ರತಿ ನಾಲ್ಕು ದಿನಗಳಿಗೊಮ್ಮೆ ಅದನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲಾಗುತ್ತಿತ್ತು. ಈ ಎಲ್ಲಾ ಕಾರ್ಯವು ಮದ್ದಿನ ಮನೆಯ ಸಂಗ್ರಹದ ಮೇಲಾಧಿಕಾರಿಯ ನೇತೃತ್ವದಲ್ಲಿ ನಡೆಯುತ್ತಿತ್ತು.[೪೨]

ಗುಲಬರ್ಗಾ ಜಿಲ್ಲೆಯ ಚಂಡ್ರಕಿಯ ಕೋಟೆಯ ಒಳಭಾಗದ ಹೊಲದಲ್ಲಿ ತಾಮ್ರದ ನಾಣ್ಯಗಳು ಲಭ್ಯವಾಗಿವೆ. ಇವುಗಳನ್ನು ತೋಪಿನ ಒಳಗಡೆ ಹಾಕಲು ಬಳಸಲಾಗುತ್ತಿತ್ತು. ಆದ್ದರಿಂದ ಮದ್ದು ಗುಂಡಿನ ಸಂಗ್ರಹದಂತೆ ಹಲವು ಆಕಾರದ ತಾಮ್ರದ ನಾಣ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಇಂತಹ ನಾಣ್ಯಗಳು, ಸ್ಥಳಿಯರಿಗೆ ಲಭ್ಯವಾಗಿವೆ. ಈ ಹೊಲವನ್ನು 'ದಂಡಿನಹೊಲ' ಎಂದು ಕರೆಯುತ್ತಾರೆ. ಅದೇ ರೀತಿ ಮಳಖೇಡ, ಗುರುಮಠಕಲ್, ಕಾಕಲ್‌ವಾರ ಹಾಗೂ ಇತರ ಕೋಟೆಗಳಲ್ಲಿ ಮದ್ದಿನ ಮನೆಗಳು ಸಂಪೂರ್ಣವಾಗಿ ನಾಶ ಹೊಂದಿವೆ. ಆದರೆ ಅಲ್ಲಿ ತೋಪುಗಳು ಇರುವುದರಿಂದ ಮದ್ದಿನ ಮನೆಗಳು ಇರಬಹುದಾಗಿದೆ. ಇವುಗಳ ಕುರಿತ ಮಾಹಿತಿ ಹೆಚ್ಚಿನ ಸಂಶೋಧನೆಯಿಂದ ಬೆಳಕಿಗೆ ಬರಬಹುದು.

೫.೬. ತೋಪುಗಳು:

ಕ್ರಿ.ಶ. ೧೨ನೆಯ ಶತಮಾನದಲ್ಲಿ ಜಗತ್ತಿನ ಯುದ್ಧ ಪದ್ಧತಿಯಲ್ಲಿ ಹಲವು ಬದಲಾವಣೆಗಳಾದವು. ಅದರಲ್ಲಿ 'ಸಿಡಿಮದ್ದಿನ' ಬಳಕೆಯು ಪ್ರಮುಖವಾಗಿದೆ. ಇದರ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಪರ್ಶಿಯಾದಲ್ಲಿ ಆರಂಭವಾದ ಈ ಪದ್ಧತಿ ಕಾಲ ಕ್ರಮೇಣ ಭಾರತದಲ್ಲಿ ಜಾರಿಗೆ ಬಂದಿತು. ದೆಹಲಿ ಸುಲ್ತಾನರ ಕಾಲದಲ್ಲಿ ಈ ಪದ್ಧತಿಯು ಅಷ್ಟೊಂದು ಪರಿಣಾಮಕಾರಿಯಾಗಿ ಕಂಡು ಬರಲಿಲ್ಲ. ಬಹಮನಿ ಸಾಮ್ರಾಜ್ಯದ ಸ್ಥಾಪನೆಯ ನಂತರ, ಇಲ್ಲಿಯ ಸುಲ್ತಾನರು ಪರ್ಶಿಯನ್ ಮೂಲದವರಾಗಿರುವುದರಿಂದ ಆ ದೇಶದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಇವರು ಪರ್ಶಿಯಾದಂತೆ ತಮ್ಮ ಯುದ್ಧ ಪದ್ಧತಿಯಲ್ಲಿ ಸಿಡಿ ಮದ್ದಿನ ಬಳಕೆ ಆರಂಭಿಸಿದರು; ದಕ್ಷಿಣ ಭಾರತದಲ್ಲಿ ಮೊಟ್ಟ ಮೊದಲು ಬಾರಿಗೆ ಫಿರಂಗಿಗಳ ಬಳಕೆಯನ್ನು ಜಾರಿಗೆ ತಂದವರು ಬಹಮನಿ ಸುಲ್ತಾನರು.[೪೩] ಒಂದನೆ ಮಹಮ್ಮದ ಶಹಾ, ಮುಜಾಹಿದ ಶಹಾ, ಫಿರೋಜ್ ಶಹಾ ಮುಂತಾದ ಸುಲ್ತಾನರು ತಮ್ಮ ಯುದ್ಧಗಳಲ್ಲಿ ಸಿಡಿ ಮದ್ದುಗಳನ್ನು ಬಳಸಲು ಆರಂಭಿಸಿದರು.

ಕ್ರಿ.ಶ. ೧೩೬೫ರ ದೊಆಬ್ ಯುದ್ಧದಲ್ಲಿ ವಿಜಯನಗರದ ವಿರುದ್ಧ ಫಿರಂಗಿಗಳನ್ನು ಬಳಸಿ ಜಯ ಹೊಂದಿದರು.[೪೪] ಅಂದಿನಿಂದ ಯುದ್ಧ ಪದ್ಧತಿಯಲ್ಲಿ ಹಾಗೂ ರಕ್ಷಣಾ ವಾಸ್ತುಶಿಲ್ಪಗಳಲ್ಲಿ ಹಲವು ಬದಲಾವಣೆಗಳಾದವು. ಫಿರಂಗಿಗಳ ಬಳಕೆಯ ಮಹತ್ವವನ್ನು ಅರಿತುಕೊಂಡ ಬಹಮನಿಯ ಸುಲ್ತಾನರು ತಮ್ಮ ಸೈನ್ಯದಲ್ಲಿ ಪರ್ಶಿಯನ್ ಮೂಲದವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿದರು. ಮುಂದಿನ ಎಲ್ಲಾ ಯುದ್ಧಗಳಲ್ಲಿ ಹಾಗೂ ತಮ್ಮ ಕೋಟೆಗಳ ರಕ್ಷಣೆಗಾಗಿ ತೋಪುಗಳನ್ನು ಬಳಸಲು ಆರಂಭಿಸಿದರು. ಅಂದಿನಿಂದ ಕೋಟೆಗಳು ಬಲಿಷ್ಠ ಗೊಂಡವು, ಗೋಡೆಯ ದಪ್ಪ ಹಾಗೂ ಎತ್ತರ ವೃದ್ಧಿಗೊಂಡಿತು. ಗುಲಬರ್ಗಾದ ಬಹಮನಿ ಸುಲ್ತಾನರಿಂದ ಆರಂಭವಾದ ಈ ಯುದ್ಧ ಪದ್ಧತಿ ಕಾಲಕ್ರಮೇಣ ರಾಜ್ಯದ ಹಾಗೂ ದೇಶದ ಇತರ ಭಾಗಗಳಲ್ಲಿ ಬೆಳವಣಿಗೆ ಹೊಂದಿತ್ತು.

ಗುಲಬರ್ಗಾ ಕೋಟೆಯಲ್ಲಿ ಸಿಡಿಮದ್ದಿನ ಬಳಕೆಗಾಗಿ ಹಲವು ತೋಪುಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ಬೃಹತ್ ತೋಪುಗಳನ್ನು ಕಾವಲುಗೋಪುರ ಅಥವಾ ಬುರುಜುಗಳ ಮೇಲೆ ಇಡಲಾಗಿದೆ. ಚಿಕ್ಕ ಚಿಕ್ಕ ತೋಪುಗಳನ್ನು ಯುದ್ಧ ಭೂಮಿಯಲ್ಲಿ ಬಳಸಲಾಗುತ್ತಿತ್ತು. ಕೋಟೆಯ ರಕ್ಷಣೆಗಾಗಿ ಸುತ್ತಲು ೨೬ ತೋಪುಗಳನ್ನು ನಿಲ್ಲಿಸಲಾಗಿದೆ.[೪೫] ವಿವಿಧ ದಿಕ್ಕಿನ ಕಡೆಗೆ ಮುಖ ಮಾಡಿಕೊಂಡಿರುವ ತೋಪುಗಳು ಕೋಟೆ ಕಾಳಗದಲ್ಲಿ ಬಳಸಿ, ಆಕ್ರಮಣಕಾರರನ್ನು ಹಿಮ್ಮೆಟ್ಟಿಸಲಾಗುತ್ತಿತ್ತು. ಗುಲಬರ್ಗಾ ಕೋಟೆಯಲ್ಲಿ ೫ ಅಡಿ ಉದ್ದನೆ ತೋಪುಗಳಿಂದ ಹಿಡಿದು ೨೫ ಅಡಿ ಉದ್ದನೆಯ ದೈತ್ಯಾಕಾರದ ತೋಪುಗಳಿವೆ. ಅವುಗಳಲ್ಲಿ ಕೆಲವು ತೋಪುಗಳು ಬಹಳ ಆಕರ್ಷಕ ಶೈಲಿಯಲ್ಲಿವೆ. ಅದರ ಮೇಲೆ ಹೂಬಳ್ಳಿಗಳ ಅಲಂಕಾರ, ಸರಪಳಿಗಳು, ವೃತ್ತಾಕಾರದಲ್ಲಿ ತಿರುಗುವ ಮೀನುಗಳು ಹಾಗೂ ಪರ್ಶಿಯನ್ ಭಾಷೆಯ ಶಾಸನಗಳನ್ನು ಕೆತ್ತಲಾಗಿದೆ.[೪೬]

ಕೋಟೆಯ ಒಳಗಡೆ ಇರುವ ರಣಮಂಡಲದ ಮೇಲೆ ಮೂರು, ಹದಿನೈದು ಅಡಿ ಉದ್ದನೆಯ ತೋಪುಗಳಿವೆ. ಉತ್ತರ, ಪೂರ್ವ ಹಾಗೂ ದಕ್ಷಿಣ ಭಾಗಕ್ಕೆ ಮುಖ ಮಾಡಿ ಇವುಗಳನ್ನು ನಿಲ್ಲಿಸಲಾಗಿದೆ. ಜಾಮಿ ಮಸೀದಿಯ ಹಿಂಭಾಗದಲ್ಲಿ ಇರುವ ಕಾಲಿಬುರುಜ್ ಮೇಲೆ ೨೫ ಅಡಿ ಉದ್ದನೆಯ ಬೃಹದಾಕಾರದ ತೋಪು ಇದೆ. ಇದು ಇಡಿ ಪಶ್ಚಿಮ ಭಾಗವನ್ನು ನಿಯಂತ್ರಿಸುತ್ತದೆ. ಹಾಗೆಯೆ ಕೋಟೆಯ ನಾಲ್ಕು ಮೂಲೆಗಳಲ್ಲಿ ಹಾಗೂ ಕೇಂದ್ರ ಭಾಗದಲ್ಲಿ ಮತ್ತು ಇತರ ಪ್ರಮುಖ ಭಾಗದಲ್ಲಿ ದೊಡ್ಡ ದೊಡ್ಡ ತೋಪುಗಳನ್ನು ನಿಲ್ಲಿಸಲಾಗಿದೆ. ಇನ್ನುಳಿದ ಭಾಗಗಳಲ್ಲಿ, ಸಾಮಾನ್ಯವಾಗಿ ಎಲ್ಲಾ ಬುರುಜುಗಳ ಮೇಲೆ ಅವಶ್ಯಕತೆಗೆ ತಕ್ಕಂತೆ ತೋಪುಗಳನ್ನು ಇಡಲಾಗಿದೆ. ಪ್ರಸ್ತುತ ಕೋಟೆಯಲ್ಲಿ ಕೆಲವೊಂದು ತೋಪುಗಳು ಉಳಿದುಕೊಂಡಿವೆ. ಕೆಲವು ಬುರುಜುಗಳ ಮೇಲೆ ಕೇವಲ ತೋಪಿನ ಕಟ್ಟೆ ಇದೆ ಆದರೆ ಅಲ್ಲಿ ತೋಪುಗಳು ಕಂಡು ಬರುವುದಿಲ್ಲ.

ಕೋಟೆಯ ಹೊರಗಡೆ ಈಶಾನ್ಯ ಭಾಗದಲ್ಲಿರುವ "ಲೋಹಾರಗಲ್ಲಿ" (ಲೋಹಗಳಿಂದ ಆಯುಧ ತಯಾರಿಸುವ ಕಾರ್ಮಿಕರ ವಸತಿಯ ಪ್ರದೇಶ)ಯಲ್ಲಿ ತೋಪಿನ ಬಿಡಿ ಭಾಗಗಳನ್ನು ತಯಾರಿಸಲಾಗುತಿತ್ತು.[೪೭] ನಂತರ ಅವುಗಳನ್ನು ನಿಗದಿಪಡಿಸಿದ ಸ್ಥಳದಲ್ಲಿ ಜೋಡಿಸಿ, ಅದಕ್ಕೆ ಸರಿಯಾದ ಪ್ರಮಾಣದಲ್ಲಿ ಉಷ್ಣತೆಯನ್ನು ನೀಡಿ ಬೇಸೆಯಲಾಗುತ್ತಿತ್ತು. ಇದು ತೋಪಿನ ರಚನೆಯ ಮೊದಲನೆಯ ಹಂತವಾಗಿದೆ. ಆದಿಲ್‌ಶಾಹಿಗಳ ಕಾಲಕ್ಕೆ ಇವುಗಳ ಮೇಲೆ ಸುಂದರವಾದ ಲಿಪಿ, ಹೂಬಳ್ಳಿಗಳ ಅಲಂಕಾರ ಹಾಗೂ ಚಿತ್ರಗಳನ್ನು ಕೆತ್ತಲಾಯಿತು. ಗುಲಬರ್ಗಾ ಕೋಟೆಯಲ್ಲಿ ಈ ಎರಡು ಬಗೆಯ ತೋಪುಗಳು ಇವೆ.

ತೋಪುಗಳನ್ನು ನಿಲ್ಲಿಸಲು ವೃತ್ತಾಕಾರದ ತೋಪಿನ ಕಟ್ಟೆಯನ್ನು ನಿರ್ಮಿಸಿ, ಅದರ ಕೇಂದ್ರ ಭಾಗದಲ್ಲಿ ಬೃಹತ್ ಬಂಡೆಯ ಕೇಂದ್ರದಲ್ಲಿ ರಂದ್ರಗಳನ್ನು ಹಾಕಿ ಅದರ ಮೇಲೆ ತೋಪನ್ನು ನಿಲ್ಲಿಸಲಾಗುತ್ತದೆ. ಈ ತೋಪಿನ ಹಿಂಭಾಗದಲ್ಲಿ ಅರ್ಧವೃತ್ತಾಕಾರದ ಗೋಡೆಯನ್ನು ನಿರ್ಮಿಸಲಾಗುತ್ತದೆ. ದೊಡ್ಡ ಪ್ರಮಾಣದ ತೋಪಿನ ಸುತ್ತಲು ಎರಡು ಅಡಿ ಅಗಲ ಮೂರು ಅಡಿ ಆಳವಾದ ಗಾರೆಯನ್ನು ತೋಡಿ ಅದರಲ್ಲಿ ನೀರು ಸಂಗ್ರಹಿಸಲಾಗುತ್ತಿತ್ತು.[೪೮] ಏಕೆಂದರೆ ಸ್ಫೋಟದಿಂದ ಬೆಂಕಿ ಹತ್ತಿ ಅನಾಹುತ ಆಗ ಬಹುದೆಂದು ಮುಂಜಾಗ್ರತಾ ಕ್ರಮವಾಗಿ ಈ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಕಾಲಾಬುರುಜ್ ಮೇಲೆ ಇರುವ ೨೫ ಅಡಿ ಉದ್ದನೆಯ ತೋಪಿನ ಹಿಂಭಾಗದಲ್ಲಿ ೮x೮ ಅಡಿ ಉದ್ದ ಅಗಲ ಹಾಗೂ ೬ ಅಡಿ ಎತ್ತರದ ನೀರಿನ ಸಂಗ್ರಹವಿದೆ. ತೋಪಿಗೆ ಬೆಂಕಿ ಹಚ್ಚಿದ ತಕ್ಷಣ ಸ್ಫೋಟದ ಶಬ್ದಕ್ಕೆ ಕಿವಿಗಳು ಹಾಳಾಗಬಹುದೆಂದು ಕಾವಲುಗಾರರು ನೀರಿನಲ್ಲಿ ಮುಳುಗುತ್ತಿದ್ದರು.[೪೯]

ಶಹಪೂರ ಕೋಟೆಯಲ್ಲಿ ಕೆಲವು ಬುರುಜುಗಳ ಮೇಲೆ ತೋಪುಗಳಿವೆ. ಬೆಟ್ಟದ ತುದಿಯಲ್ಲಿ ಇರುವ ಬುರುಜುಗಳ ಮೇಲೆ ಮೂರು ತೋಪುಗಳಿವೆ.[೫೦] ಇವು ಗುಲಬರ್ಗಾ ಕೋಟೆಯ ತೋಪುಗಳನ್ನು ಹೋಲುತ್ತವೆ. ಮೂರನೆಯ ದ್ವಾರದ ಬಲಬದಿಯಲ್ಲಿರುವ ಕೊತ್ತಳದ ಮೇಲೆ ೧೨ ಅಡಿ ಉದ್ದನೆಯ

ತೋಪು ಇದೆ. ಈ ತೋಪು ಕೋಟೆಯ ಮೊದಲನೆಯ ಪ್ರವೇಶದ್ವಾರಕ್ಕೆ ಮುಖಮಾಡಿ ನಿಲ್ಲಿಸಲಾಗಿದೆ. ತೋಪಿನ ಮುಂಭಾಗದಲ್ಲಿ ಸರಪಳಿಯ ಅಲಂಕಾರ ಮಾಡಲಾಗಿದೆ. ಶಹಾಪೂರು ಕೋಟೆಯ ಮೇಲ್ಭಾಗದಲ್ಲಿ ಒಟ್ಟು ಆರು ತೋಪುಗಳಿವೆ. ಇದರಲ್ಲಿ ಅರಮನೆಯ ಹಿಂಭಾಗದಲ್ಲಿ ೧೫ ಅಡಿ ಉದ್ದನೆಯ ತೋಪು ಇದೆ. ನೈರುತ್ಯ ದಿಕ್ಕಿಗೆ ಮುಖ ಮಾಡಿರುವ ಈ ತೋಪು ಇಡಿ ಕೋಟೆಯಲ್ಲಿಯೆ. ಅತ್ಯಂತ ದೊಡ್ಡದಾಗಿದೆ. ಅದರ ಹಿಂಭಾಗದ ರಚನೆಗೆ ವಿಶೇಷ ಗಮನ ನೀಡಲಾಗಿದೆ.

ರಾಷ್ಟ್ರಕೂಟರ ಮಳಖೇಡ ಕೋಟೆಯ ಕಾವಲುಗೋಪುರದ ಮೇಲೆ ಒಂದು ತೋಪಿನ ಕಟ್ಟೆಯನ್ನು ನಿರ್ಮಿಸಲಾಗಿದೆ.[೫೧] ಆದರೆ ಅದರ ಮೇಲೆ ಬಹಮನಿಯರ ಕಾಲದ ತೋಪು ಇದೆ. ಈ ತೋಪಿನ ಅರ್ಧಭಾಗ ನಾಶ ಹೊಂದಿದ್ದು, ಕಾವಲುಗೋಪುರದ ಕೆಳಭಾಗದಲ್ಲಿದೆ. ಇದನ್ನು ಹೊರತು ಪಡಿಸಿ ಮತ್ತೆ ಯಾವುದೇ ತೋಪುಗಳು ಕಂಡು ಬರುವುದಿಲ್ಲ. ಈ ರೀತಿ ಜಿಲ್ಲೆಯ ಚಂದ್ರಕಿ ಕೋಟೆ, ಗುರುಮಠಕಲ್ ಕೋಟೆ ಹಾಗೂ ಕಾಕಲ್‌ವಾರ ಕೋಟೆಗಳಲ್ಲಿ ಒಂದೊಂದು ತೋಪುಗಳಿವೆ. ಸುಮಾರು ೧೦ ರಿಂದ ೧೫ ಅಡಿ ಉದ್ದನೆಯ ಈ ತೋಪುಗಳು ಬಹಮನಿ ಹಾಗೂ ಆದಿಲ್‌ಶಾಹಿ ಶೈಲಿಯಲ್ಲಿವೆ.

ಶಹಾಪೂರ ಹಾಗೂ ಸುರಪುರ ತಾಲೂಕುಗಳಲ್ಲಿ ಬರುವ ವನದುರ್ಗ ಹಾಗೂ ವಾಗಣಗೇರಿಯ ಕೋಟೆಯ ಬುರುಜುಗಳ ಮೇಲ್ಭಾಗದಲ್ಲಿ ತೋಪುಗಳಿಗಾಗಿ ವಿಶೇಷ ವ್ಯವಸ್ಥೆ ಮಾಡಲಾಗಿದೆ.[೫೨] ಅಲ್ಲದೆ ಕೋಟೆಯ ಕಾಳಗದಲ್ಲಿ ಔರಂಗಜೇಬನ ಸೈನ್ಯದೊಂದಿಗೆ ಹೋರಾಟದಲ್ಲಿ ಫಿರಂಗಿಗಳನ್ನು ಬಳಸಲಾಯಿತು. ನಾಯಕರ ಕಾಲಕ್ಕೆ ಹಲವು ಚಿಕ್ಕ ಚಿಕ್ಕ ತೋಪುಗಳ ಬಳಕೆಯು ಆರಂಭವಾಗಿರುವುದರಿಂದ, ದೊಡ್ಡ ದೊಡ್ಡ ತೋಪುಗಳು ನಮಗೆ ಲಭ್ಯವಾಗಿರುವುದಿಲ್ಲ.

ಯಾದಗಿರ ಕೋಟೆಯಲ್ಲಿ ಆರು ತೋಪುಗಳಿವೆ. ಇಲ್ಲಿಯ ಪ್ರತಿಯೊಂದು ಬುರುಜುಗಳು ಹಾಗೂ ಕಾವಲುಗೋಪುರಗಳ ಮೇಲೆ ತೋಪಿಗಾಗಿ ವಿಶೇಷ ವ್ಯವಸ್ಥೆಯನ್ನು ಮಾಡಲಾಗಿದೆ. ಕೋಟೆಯ ನಾಲ್ಕನೆಯ ದ್ವಾರದ ಒಳಗಡೆ ೮ ಅಡಿ ಉದ್ದನೆಯ ತೋಪು ಇದೆ. ಇದರ ಸಮೀಪದಲ್ಲಿ ಒಂದು ವೃತ್ತಾಕಾರದ ಕಾವಲುಗೋಪುರವಿದೆ. ಕೆಳಗಡೆ ಬಿದ್ದಿರುವ ಈ ತೋಪು ಮೊದಲು ಕಾವಲುಗೋಪುರ ಮೇಲೆ ಇಡಲಾಗಿತ್ತು. ಈ ಭಾಗದಲ್ಲಿರುವ ಎರಡು ಬುರುಜುಗಳ ಮೇಲೆ ತೋಪುಗಳಿವೆ.[೫೩] ಕೆಳಭಾಗದಲ್ಲಿರುವ ತೀರ್ಥಂಕರ ಮುಂಭಾಗದಲ್ಲಿರುವ ಬುರುಜಿನ ಮೇಲೆ ೧೫ ಅಡಿ ಉದ್ದನೆಯ ಕೆಲವು ಚಿಕ್ಕ ಚಿಕ್ಕ ಕೊತ್ತಳಗಳ ಮೇಲೆ ವೃತ್ತಾಕಾರ ಸ್ಥಳದ ಕೇಂದ್ರದಲ್ಲಿ ಮೂರು ಅಡಿ ಎತ್ತರದ ಕಲ್ಲಿನ ಕಂಬದ ಮೇಲೆ ತೋಪುಗಳನ್ನು ನಿಲ್ಲಿಸುವ ವ್ಯವಸ್ಥೆ ಮಾಡಲಾಗಿದೆ. ಹೊಸ ಮಾದರಿಯ ತೋಪಿನ ಕಟ್ಟೆಗಳ ರಚನೆ ಇಲ್ಲಿ ಕಂಡು ಬರುತ್ತದೆ. ಆದಿಲ್‌ಶಾಹಿ ಸುಲ್ತಾನರು ಈ ಹೊಸ ಮಾದರಿಯನ್ನು ಆರಂಭಿಸಿದರು. ಇದು ನಮಗೆ ಕೇವಲ ಯಾದಗಿರಿ ತೋಪಿನ ತಳಭಾಗದಲ್ಲಿ ಮಾತ್ರ ಕಂಡು ಬರುತ್ತವೆ.

ಕೋಟೆಯ ಕೇಂದ್ರಭಾಗದಲ್ಲಿ ವಿಶಾಲವಾದ ಹಾಗೂ ಎತ್ತರವಾದ ಒಂದು ವೃತ್ತಾಕಾರದ ಕಾವಲುಗೋಪುರದ ಮೇಲೆ ಎರಡು ತೋಪುಗಳಿವೆ. ಅವುಗಳಲ್ಲಿ ಒಂದು ಬಹಮನಿ ಶೈಲಿಯ ತೋಪು ೧೫ ಅಡಿ ಉದ್ದವಾಗಿದೆ. ಇದನ್ನು ತೋಪಿನ ಕಟ್ಟೆಯ ಕೇಂದ್ರ ಭಾಗದಲ್ಲಿ ಇಡಲಾಗಿದೆ. ಇದರ ಕೆಳಭಾಗದಲ್ಲಿ ೧೦ ಅಡಿ ಉದ್ದನೆಯ ತೋಪು ಆದಿಲ್‌ಶಾಹಿ ಶೈಲಿಯಲ್ಲಿದೆ.[೫೪] ಈ ರೀತಿ ಅವಶ್ಯಕತೆಗೆ ತಕ್ಕಂತೆ ಯಾವುದಾದರೂ ಒಂದು ತೋಪನ್ನು ಬಳಸಲಾಗುತ್ತಿತ್ತು. ಕೋಟೆಯ ಪಶ್ಚಿಮ ಭಾಗದಲ್ಲಿ ಇರುವ ಕೊತ್ತಳದ ಮೇಲೆ ೧೫ ಅಡಿ ಉದ್ದನೆಯ ತೋಪು ದಕ್ಷಿಣಕ್ಕೆ ಮುಖ ಮಾಡಿ ನಿಲ್ಲಿಸಲಾಗಿದೆ. ಬೃಹತ ತೋಪುಗಳ ಕೆಳಭಾಗದಲ್ಲಿ ೩x೩ ಅಡಿ ದಪ್ಪನೆಯ ಕಲ್ಲುಗಳಿವೆ. ಇವುಗಳ ಕೇಂದ್ರ ಭಾಗದಲ್ಲಿ 'ಫ್ಲಸ್' (+) ಆಕಾರದಲ್ಲಿ ಕಲ್ಲನ್ನು ಕೆತ್ತಿ ಅದರಲ್ಲಿ ತೋಪಿನ ಕೇಂದ್ರಭಾಗವನ್ನು ಇಡಲಾಗುತ್ತದೆ.[೫೫] ಆದರೆ ಇಲ್ಲಿಯ ತೋಪಿನ ಕೆಳಗಿನ ಎಲ್ಲಾ ಕಲ್ಲುಗಳು ತೋಪಿನ ಭಾರ ತಾಳಲಾಗದೆ ಒಡೆದಿವೆ. ಕೆಲವು ತೋಪುಗಳ ಪಕ್ಕದಲ್ಲಿ ಎರಡು ಅಥವಾ ಮೂರು ಒಡೆದು ಕಲ್ಲುಗಳು ಬಿದ್ದಿವೆ. ಈ ಪದ್ಧತಿಯು ಅತ್ಯಂತ ಲೋಪದೋಷದಿಂದ ಕೂಡಿರುವುದರಿಂದ ಈ ಶೈಲಿಯು ಮತ್ತೆ ಯಾವ ಕೋಟೆಯಲ್ಲಿಯು ಬಳಸಲಿಲ್ಲ. ಆದ್ದರಿಂದ ಗುಲಬರ್ಗಾ ಕೋಟೆಯ ತೋಪುಗಳಿಗೆ ಬಳಸಿರುವ ಮಾದರಿಯನ್ನು ಇತರ ಎಲ್ಲಾ ಕೋಟೆಯಲ್ಲಿ ಬಳಸಲಾಗಿದೆ.

ಕೋಟೆಯ ರಕ್ಷಣೆಯಲ್ಲಿ ಹಾಗೂ ಯುದ್ಧ ಭೂಮಿಯಲ್ಲಿ ಗೆಲ್ಲಲು ತೋಪುಗಳ ಬಳಕೆಯು ಅತ್ಯಂತ ಪ್ರಮುಖವಾಗಿದೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಎಲ್ಲಾ ಪ್ರಮುಖ ಕೋಟೆಗಳಲ್ಲಿ ತೋಪುಗಳನ್ನು ಇಡಲಾಗಿದೆ.

೫.೭. ಶಿಲ್ಪಗಳು:

ಕೋಟೆಯ ಗೋಡೆಗಳ ಮೇಲೆ ಅಥವಾ ಒಳಗಡೆಯ ಇತರ ಕಟ್ಟಡಗಳ ಮೇಲೆ ಹಲವು ಬಗೆಯ ಉಬ್ಬು ಶಿಲ್ಪಗಳನ್ನು ಸಾಂಕೇತಿಕವಾಗಿ ಕೆತ್ತಲಾಗುತ್ತದೆ. ಇಂತಹ ಶಿಲ್ಪಗಳು ಕೋಟೆಯ ದ್ವಾರಗಳ ಕಮಾನುಗಳ ಮೇಲೆ, ಸಭಾ ಭವನದ ಗೋಡೆಗಳ ಮೇಲೆ ಹಾಗೂ ಕೋಟೆ ಗೋಡೆಯ ಹೊರ ಮತ್ತು ಒಳ ಭಾಗಗಳಲ್ಲಿ ಕೆತ್ತಲಾಗುತ್ತದೆ. ಈ ಶಿಲ್ಪಗಳು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಸ್ಥಿತಿ ಗತಿಯನ್ನು ತಿಳಿದುಕೊಳ್ಳಲು ಸಹಾಯಕವಾಗಿವೆ. ಗುಲಬರ್ಗಾ ಜಿಲ್ಲೆಯಲ್ಲಿ ಹಿಂದೂ ಮತ್ತು ಮುಸ್ಲಿಂರ ಕಾಲದಲ್ಲಿ ನಿರ್ಮಿಸಿರುವ ಕೋಟೆಗಳು ಇರುವುದರಿಂದ ಹಿಂದೂ ಅರಸರ ಕೋಟೆಗಳಲ್ಲಿ ಮಾತ್ರ ಇವುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತೇವೆ. ಆದರೆ ಮುಸ್ಲಿಂ ಸುಲ್ತಾನರ ಕೋಟೆಗಳಲ್ಲಿ ಗಾರೆಯಿಂದ ಮಾಡಿರುವ ಹೂಬಳ್ಳಿಗಳು, ಪ್ರಾಣಿ ಪಕ್ಷಿಗಳು, ರೇಖಾ ಚಿತ್ರಗಳು ಹಾಗೂ ಅಕ್ಷರಗಳು ಕಂಡು ಬರುತ್ತವೆ. ವಿಶ್ವಕರ್ಮನು ಕೋಟೆಗಳಲ್ಲಿ ರಾಜ ಚಿಹ್ನೆ, ಸೈನಿಕರು, ಸಿಂಹ, ಆನೆ, ಕುದುರೆ, ಹಂಸಪಕ್ಷಿ, ಹಾವು, ಮೀನು ಮುಂತಾದ ಶಿಲ್ಪಗಳು ಇರುವುದು ಅವಶ್ಯ ಎಂದು ಹೇಳಿದ್ದಾನೆ.[೫೬] ಈ ಎಲ್ಲಾ ಚಿತ್ರಗಳು ಕಾಲಕ್ರಮೇಣ

ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡು ಪೂಜೆ, ಪ್ರಾರ್ಥನೆಗೆ ಒಳಗಾಗಿವೆ. ಆದ್ದರಿಂದ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಲ್ಲಿ ಇವುಗಳು ಪ್ರಾಮುಖ್ಯತೆಯನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಗುಲಬರ್ಗಾ ಕೋಟೆಯ ವಾಯುವ್ಯ ದ್ವಾರದ ಹೊರ ಭಾಗದ ಗೋಡೆಯ ಮೇಲೆ ಸಪ್ತ ಮಾತೃಕೆಯರ ಮೂರ್ತಿಶಿಲ್ಪಗಳಿವೆ. ೨ ಅಡಿ ಅಗಲ ೫ ಅಡಿ ಉದ್ದನೆಯ ಕಲ್ಲಿನ ಮೇಲೆ ಶಿಲ್ಪಗಳನ್ನು ಕೆತ್ತಲಾಗಿದೆ. ಈ ಮೂರ್ತಿ ಶಿಲ್ಪಗಳು ಕೋಟೆಯ ನಿರ್ಮಾಣದ ಕಾಲದಿಂದಲೂ ಇದೆ ಸ್ಥಳದಲ್ಲಿವೆ. ಆದರೆ ಇತ್ತಿಚಿಗೆ ಇವುಗಳು ಉದ್ಭವಗೊಂಡ ಮೂರ್ತಿ ಶಿಲ್ಪಗಳೆಂದು ನಾಗರಿಕರು ಅದಕ್ಕೆ ಅಂಟಿಕೊಂಡಿರುವಂತೆ 'ಬಾಲ ಹನುಮಾನ' ದೇವಾಲಯವನ್ನು ಕಟ್ಟಿ ಅಲ್ಲಿ ಪೂಜೆ ಪ್ರಾರ್ಥನೆಯನ್ನು ಆರಂಭಿಸಿದ್ದಾರೆ. ಆದ್ದರಿಂದ ಈ ಮೂರ್ತಿಗಳು ಕೋಟೆಯ ರಕ್ಷಣೆಯನ್ನು ಬಿಟ್ಟು ಪೂಜೆಗೆ ಒಳಗಾಗಿರುವುದು ಕಂಡು ಬರುತ್ತದೆ.

ಕೋಟೆಯ ಪಶ್ಚಿಮ ಭಾಗದ ಹೊರಗೋಡೆಯ ಮೇಲೆ ಎರಡು ಆನೆಗಳು ಪರಸ್ಪರ ಒಂದರ ಮುಂದೆ ಒಂದು ನಿಂತಿರುವ ಶಿಲ್ಪಗಳಿವೆ. ಇದನ್ನು ಇಲ್ಲಿ ಸಾಂಕೇತಿಕವಾಗಿ ಬಳಸಲಾಗಿದೆ. ಏಕೆಂದರೆ ಇದರ ಒಳಭಾಗಕ್ಕೆ ವಿಶಾಲವಾದ ತಗ್ಗಾದ ಪ್ರದೇಶವಿದೆ. ಆ ಸ್ಥಳಕ್ಕೆ ಒಳಗಡೆಯಿಂದ ಪ್ರವೇಶವಿದೆ. ಈ ದ್ವಾರವನ್ನು 'ಹಾಥಿಗೇಟ್' ಎಂದು ಕರೆಯುತ್ತಾರೆ. ಇಲ್ಲಿ ಆನೆಗಳಿಗೆ ಯುದ್ಧದ ತರಬೇತಿಯನ್ನು ನೀಡಲಾಗುತ್ತಿತ್ತು. ಇದರ ಸಾಂಕೇತವಾಗಿ ಹೊರಭಾಗದಲ್ಲಿ ಆನೆಯ ಚಿತ್ರಗಳ ಶಿಲ್ಪವಿದೆ.[೫೭] ಕೋಟೆಯ ಒಳಭಾಗದಲ್ಲಿರುವ ಈ ಭಾಗದ ದ್ವಾರದ ಎರಡು ಬದಿಯಲ್ಲಿ ಸಾಲು ಆನೆಗಳ ಶಿಲ್ಪಗಳಿವೆ. ಈ ದ್ವಾರದ ರಚನೆಗೆ ನುಣುಪಾಗಿ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಇದರ ಸುತ್ತಲು ಹೂಬಳಿಯ ಅಲಂಕಾರವಿದೆ. ಗುಲಬರ್ಗಾ ಕೋಟೆಯಲ್ಲಿಯೇ ಅತ್ಯಂತ ಆಕರ್ಷಕವಾದ ಕೆತ್ತನೆಯಿಂದ ಕೂಡಿದ ದ್ವಾರವಾಗಿದೆ. ಕೋಟೆಯ ದಕ್ಷಿಣ ಭಾಗದ ಹೊರಗೋಡೆಯ ಮೇಲೆ ಎರಡು ಸಿಂಹಗಳು ಒಂದರ ಮೇಲೆ ಒಂದು ನಿಂತಿರುವ ಶಿಲ್ಪಗಳಿವೆ. ಇದು ಬಹಮನಿ ಸೈನ್ಯದ ಶಕ್ತಿಯ ಸಂಕೇತವಾಗಿದೆ. ಕೋಟೆಯ ಒಳಗಡೆಯ ಹಲವು ಭಾಗಗಳಲ್ಲಿ ಸಾಲು ಆನೆಗಳು, ನವಿಲುಗಳು, ಸಾರಂಗಗಳು, ಸಿಂಹಗಳ ಶಿಲ್ಪಗಳಿವೆ ಹಾಗೂ ಅಲಂಕಾರಕ್ಕಾಗಿ ಹೂಬಳ್ಳಿಗಳು ನಕ್ಷತ್ರ, ತೋರಣ ಮುಂತಾದ ಕೆತ್ತನೆಗಳು ಕೋಟೆಯಲ್ಲಿ ಕಂಡು ಬರುತ್ತವೆ.

ಜಾಮಿಮಸೀದಿಯ ಕೇಂದ್ರಭಾಗದಲ್ಲಿರುವ ಗುಮ್ಮಟದ ಒಳಗಡೆ ಗಾರೆಯ ಅಲಂಕಾರವಿದೆ. ಇಲ್ಲಿಯ ಕಮಾನುಗಳ ರಚನೆ, ಕಂಬಗಳು, ವಿಶಾಲವಾದ ಕೋನಗಳು ಹಾಗೂ ಸುತ್ತಲು ಗಾರೆಯಲ್ಲಿ ಬರೆದಿರುವ ಕುರಾರಿನ ಅಕ್ಷರಗಳಿಂದ ಗುಮ್ಮಟವನ್ನು ಅಲಂಕರಿಸಲಾಗಿದೆ.[೫೮] ಕಮಾನುಗಳ ಕೇಂದ್ರದಲ್ಲಿ ಒಂದು ವೃತ್ತಾಕಾರದ ಗಾರೆಯ ರಚನೆ ಇದೆ. ಇದು ಬಹಮನಿಯರ ಎಲ್ಲಾ ಕಮಾನುಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಅಲ್ಲದೆ ಕಮಾನಿನ ಎರಡು ಬದಿಯಲ್ಲಿ ಗಾರೆಯಿಂದ ವೃತ್ತಾಕಾರದಲ್ಲಿ ರೇಖಾ ಚಿತ್ರಗಳ ಅಲಂಕಾರವಿದೆ.[೫೯] ಈ ಎರಡು ಲಕ್ಷಣಗಳು ಬಹಮನಿಯರ ಕಾಲದ ಕಟ್ಟಡಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತವೆ.

ಕೋಟೆಯಲ್ಲಿಯ ಕೆಲವು ತೋಪುಗಳ ಮೇಲೆ ಅಲಂಕಾರಗಳಿವೆ ಉತ್ತರ ಭಾಗದ ಗೋಡೆಯ ಒಳಗೋಡೆಯ ಮೇಲಿನ ತೋಪಿನ ಮೇಲೆ ಮೀನಿನ ಚಿತ್ರಗಳನ್ನು ಕೆತ್ತಲಾಗಿದೆ.[೬೦] ಆಗ್ನೇಯ ಭಾಗದಲ್ಲಿ ದೇವಾಲಯಕ್ಕೆ ಸಂಬಂಧಿಸಿದ ಅವಶೇಷಗಳಲ್ಲಿ ಹೆಚ್ಚಿನ ಶಿಲ್ಪಗಳು ಹಾಗೂ ಹೂಬಳ್ಳಿಗಳ ಅಲಂಕಾರಗಳಿವೆ. ಗುಲಬರ್ಗಾ ಕೋಟೆಯಲ್ಲಿ ಹಿಂದೂ ಹಾಗೂ ಮುಸ್ಲಿಂ ಸಂಪ್ರದಾಯಕ್ಕೆ ಸಂಬಂಧಿಸಿದ ಶಿಲ್ಪಗಳಿವೆ.

ಫಿರೋಜಾಬಾದ ಕೋಟೆಯ ದ್ವಾರಗಳು, ಅರಮನೆ, ಕಮಾನುಗಳು ಜಾಮಿ ಮಸೀದಿ ಹಾಗೂ ಇತರ ಪ್ರಮುಖ ಸ್ಥಳಗಳಲ್ಲಿ ಗಾರೆಯ ಅಲಂಕಾರ ಹಾಗೂ ಗಾರೆಯಲ್ಲಿ ನಿರ್ಮಿಸಿರುವ ಶಿಲ್ಪಗಳಿವೆ.[೬೧] ಗುಲಬರ್ಗಾ ದ್ವಾರದ ಹೊರಭಾಗದಲ್ಲಿ ಎರಡು ಬದಿಯಲ್ಲಿ ವೃತ್ತಾಕಾರದ ಹೂಗಳ ಶಿಲ್ಪಗಳಿವೆ. ಅರಮನೆಯ ಸಮೀಪದಲ್ಲಿ ಇರುವ ಒಂದು ಕಮಾನಿನ ಎರಡು ಬದಿಯಲ್ಲಿ ಹುಲಿಯ ಶಿಲ್ಪಗಳಿವೆ. ಗಾರೆಯಲ್ಲಿ ನಿರ್ಮಿಸಿರುವ ಈ ಶಿಲ್ಪಗಳಲ್ಲಿ ಒಂದು ಬದಿಯ ಶಿಲ್ಪ ಮಾತ್ರ ಉಳಿದುಕೊಂಡಿದೆ. ಈ ರೀತಿ ಬಹಮನಿಯ ಕಟ್ಟಡಗಳಲ್ಲಿ ಹುಲಿಯ ಚಿತ್ರಗಳು ಕಂಡು ಬರುವುದು ಅತಿ ವಿರಳ. ಇಲ್ಲಿ ಅರಸು ಪರಿವಾರದವರಿಗೆ ಮಾತ್ರ ಅವಕಾಶ ಎನ್ನುವುದರ ಸೂಚಕವಾಗಿ ಇದನ್ನು ಬಳಸಿರುವಂತೆ ಕಂಡು ಬರುತ್ತದೆ. ಜಾಮಿ ಮಸೀದಿಯ ಪ್ರತಿಯೊಂದು ಕಮಾನಿನ ಮೇಲೆ ಹಾಗೂ ಸಭಾ ಭವನದ ಒಳಗಡೆಯ ಗುಮ್ಮಟದಲ್ಲಿ ಹಲವು ಬಗೆಯ ಗಾರೆಯ ಅಲಂಕಾರವಿದೆ. ಮಳಖೇಡ ಕೋಟೆಯಲ್ಲಿ ದ್ವಾರಪಾಲಕರ ಎತ್ತರವಾದ ಮೂರ್ತಿ ಶಿಲ್ಪ ತಲೆ ಕೆಳಗೆ ಮಾಡಿ ಹಾಕಲಾಗಿದೆ.[೬೨] ಅಲ್ಲದೆ ಕೋಟೆಯ ಒಳಗಡೆ ಜೈನ ಧರ್ಮಕ್ಕೆ ಸಂಬಂಧಿಸಿದ ತೀರ್ಥಂಕರರ ಮೂರ್ತಿ ಶಿಲ್ಪಗಳಿವೆ.[೬೩] ಶಹಪೂರ ಕೋಟೆಯ ಕೆಲವು ದ್ವಾರಗಳ ಉತ್ತರಂಗದ ಮೇಲೆ ಸೂರ್ಯ, ಚಂದ್ರ ಹೂಬಳ್ಳಿಗಳ ಚಿತ್ರಗಳಿವೆ. ಇಲ್ಲಿಯ ತೋಪುಗಳನ್ನು ಸಹ ಕೆತ್ತನೆಯಿಂದ ಅಲಂಕರಿಸಲಾಗಿದೆ.

ಸುರಪುರ ಕೋಟೆಯ ದೇವಪೂರ ದ್ವಾರದ ಹೊರಭಾಗದಲ್ಲಿಯು ಹಾಗೂ ಒಳಗಡೆಯಲ್ಲಿ ಹಲವು ಪ್ರಾಣಿ-ಪಕ್ಷಿ, ಹೂಬಳ್ಳಿ ಹಾಗೂ ಮನುಷ್ಯರ ಶಿಲ್ಪಗಳಿವೆ. ಬಲಬದಿಯಲ್ಲಿ ಆನೆಯ ಚಿತ್ರವಿದೆ. ಎಡಭಾಗದಲ್ಲಿ ನಾಗ ಶಿಲ್ಪಗಳು ಹಾಗೂ ಮಲ್ಲಯುದ್ಧದ ದೃಶ್ಯಗಳಿವೆ.[೬೪] ಅಲ್ಲದೆ, ಒಳಭಾಗದ ಗೋಡೆಯ ಮೇಲೆ ಆನೆಗಳು, ವಾಧ್ಯಮೇಳದ ದೃಶ್ಯಾವಳಿಗಳು ಹಾಗೂ ಮೀನಿನ ಚಿತ್ರಗಳಿವೆ. ಈ ದ್ವಾರದ ಮೇಲೆ ಹೆಚ್ಚಿನ ಶಿಲ್ಪಗಳು ಕಂಡು ಬರುತ್ತವೆ. ಇವುಗಳಿಂದ ಸುರಪುರ ನಾಯಕರ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ಇತಿಹಾಸವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಹಳೆಯ ದರ್ಬಾರದ ಪ್ರವೇಶ ದ್ವಾರದ ಮೇಲೆ ಸೂರ್ಯ ಚಂದ್ರ ಹಾಗೂ ಮೀನಿನ ಚಿತ್ರಗಳಿವೆ. ದರ್ಬಾರಿನ ಒಳಗಡೆ ಇರುವ ಮೂರು ಅಂತಸ್ತಿನ ಕಟ್ಟಡಗಳಲ್ಲಿ ಇರುವ ಕೋಣೆಗಳಲ್ಲಿ ನಾಯಕರ ಲಾಂಛನ 'ಗರುಡ'ದ ಚಿತ್ರಗಳಿವೆ. ವಾಗಣಗೇರಿ ಕೋಟೆಯ ಒಳಭಾಗದಲ್ಲಿರುವ ವೇಣುಗೋಪಾಲ ಸ್ವಾಮಿಯ ದೇವಾಲಯಕ್ಕೆ ಸಂಬಂಧಿಸಿದ

ಕಂಬಗಳ ಮೇಲೆ ವೈಷ್ಣವ ಧರ್ಮದ ಹಲವು ದೇವರುಗಳ ಮೂರ್ತಿ ಶಿಲ್ಪಗಳಿವೆ. ಇಲ್ಲಿಯ ಕಂಬಗಳು ಅತ್ಯಂತ ಅಲಂಕಾರ ಶೈಲಿಯಲ್ಲಿ ರಚಿಸಲಾಗಿದೆ.

ಯಾದಗಿರ ಕೋಟೆಯ ಐದನೆಯ ದ್ವಾರದ ಒಳಗಡೆಯ ಗೋಡೆಯ ಮೇಲೆ ರಾಮ, ಲಕ್ಷ್ಮಣ ಮತ್ತು ಆಂಜನೆಯರ ಉಬ್ಬು ಶಿಲ್ಪಗಳಿವೆ. ರಾಮನು ತನ್ನ ಕೈಯಲ್ಲಿ ಮುದ್ರೆಯ ಉಂಗುರವನ್ನು ಹಿಡಿದಿದ್ದಾನೆ. ರಾಮಾಯಣದಲ್ಲಿ ಬರುವ ಒಂದು ದೃಶ್ಯಕ್ಕೆ ಸಂಬಂಧಿಸಿದ ಶಿಲ್ಪವೂ ಇದೆ. ಒಂದು ಕಾವಲುಗೋಪುರದ ಬಳಿಯಲ್ಲಿ 'ಮಂಗಗಳ' ಶಿಲ್ಪಗಳಿವೆ.[೬೫] ಇವುಗಳು ಹನುಮಂತನ ರೂಪವೆಂದು ಇಲ್ಲಿ ಪ್ರತಿಬಿಂಬಿಸಲಾಗಿದೆ. ಕೋಟೆಯ ಕೆಳಭಾಗದಲ್ಲಿ ಇರುವ ಒಂದು ಬೃಹತ್ ಬಂಡೆಯ ಒಳಭಾಗದಲ್ಲಿ ಜೈನ ಧರ್ಮಕ್ಕೆ ಸಂಬಂಧಿಸಿದ ವೃಷಬೇಂದ್ರ, ಪಾರ್ಶ್ವನಾಥ ಹಾಗೂ ಮಹಾವೀರರ ರೇಖಾ ಚಿತ್ರಗಳಿವೆ. ಇದರ ಮುಂಭಾಗದಲ್ಲಿ ಹನುಮಂತ, ನಾಗ, ಪಕ್ಷಿಗಳು ಹಾಗೂ ವೀರಗಲ್ಲುಗಳ ಚಿತ್ರಗಳಿವೆ. ಈ ಎಲ್ಲಾ ಶಿಲ್ಪಗಳು ಕೋಟೆಯ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾದ ದಾಖಲೆಗಳನ್ನು ಒದಗಿಸುತ್ತವೆ.

ನಾಗಾವಿ ಕೋಟೆಯ ಒಳಭಾಗದಲ್ಲಿ ಇರುವ ದೇವಸ್ಥಾನ ಹಾಗೂ ಮಸೀದಿಗಳಲ್ಲಿ ಹಲವು ಶಿಲ್ಪಗಳು ಹಾಗೂ ರೇಖಾಚಿತ್ರಗಳು ಕಂಡು ಬರುತ್ತವೆ. ರಾಮಾಯಣ, ಮಹಾಭಾರತದ ಹಲವು ದೃಶ್ಯಗಳು ಇಲ್ಲಿಯ ದೇವಾಲಯಗಳ ಮೇಲೆ ಕೆತ್ತಲಾಗಿದೆ. ಈರಪ್ಪಯ್ಯನ ದೇವಸ್ಥಾನದ ಮುಂಭಾಗದಲ್ಲಿರುವ ಮಂಟಪಗಳ ಕಮಾನುಗಳ ಮೇಲೆ ಆನೆ, ನವಿಲು, ಸಿಂಹಗಳು, ಸಾರಂಗಗಳು ಮತ್ತು ಹೂಬಳ್ಳಿಗಳ ಶಿಲ್ಪಗಳಿವೆ. ಸಂಜೀವ ಆಂಜನೆಯ ದೇವಸ್ಥಾನದ ಮೇಲ್ಭಾಗದಲ್ಲಿ 'ಹತ್ತುತಲೆಯ ರಾವಣ' ರಾಮನ ವನವಾಸದ ದೃಶ್ಯ, ಬೇಟೆಯ ದೃಶ್ಯಗಳನ್ನು ಸುಣ್ಣದ ಕಲ್ಲುಗಳ ಮೇಲೆ ಕೆತ್ತಲಾಗಿದೆ. ಕೋಟೆಯ ಈಶಾನ್ಯ ಭಾಗದಲ್ಲಿರುವ ಭಾವಿಯ ಸುತ್ತಲು ಹಲವು ಮೂರ್ತಿ ಶಿಲ್ಪಗಳನ್ನು ಇಡಲಾಗಿದೆ. ಅದೇ ರೀತಿ ಸೇಡಂ, ಮುದನೂರು, ಶಿಲಾರಕೋಟ ಮುಂತಾದ ಕೋಟೆಗಳ ದ್ವಾರದ ಮೇಲೆ ಮೂರ್ತಿಶಿಲ್ಪಗಳಿವೆ.

ಗ್ರಾಮ ರಕ್ಷಣೆಗಾಗಿ ನಿರ್ಮಿಸಿರುವ ಕೋಟೆ ಗೋಡೆಗಳ ಮೇಲೆ, ದ್ವಾರದ ಮೇಲೆ ಹಲವು ಬಗೆಯ ಮೂರ್ತಿ ಶಿಲ್ಪಗಳಿವೆ ಗ್ರಾಮದ ಒಳಗಡೆ ದೇವಾಲಯಗಳೂ ಇವೆ.[೬೬] ದೇವರು ನಮ್ಮನ್ನು ರಕ್ಷಿಸುತ್ತಾನೆ ಎನ್ನುವ ಕಲ್ಪನೆಯು ಎಲ್ಲಾ ಕಾಲಮಾನದಲ್ಲಿ ಇರುವುದರಿಂದ ದೇವಾಲಯಗಳ ಬಗ್ಗೆ ಅಥವಾ ಧಾರ್ಮಿಕ ಸ್ಥಳಗಳ ಬಗ್ಗೆ ಪೂಜ್ಯ ಭಾವನೆ ಇದೆ.

೫.೮. ಕಣಜಗಳು:

ಕೋಟೆಯಲ್ಲಿ ನೀರಿನಷ್ಟೇ ಅವಶ್ಯವಾದುದು ಆಹಾರ ಸಾಮಗ್ರಿಗಳು. ಕೋಟೆಯ ಒಳಗಡೆ ಆಹಾರ ಧಾನ್ಯಗಳ ಸಂಗ್ರಹಕ್ಕೆ ಹೆಚ್ಚಿನ ಆಧ್ಯತೆ ನೀಡಲಾಗುತ್ತದೆ. ಕೌಟಿಲ್ಯನು ಹೇಳಿರುವಂತೆ ಕೋಟೆಯ ಒಳಗಡೆ ಸಂಗ್ರಹಿಸಿ ಇಡಬೇಕಾದ ಪ್ರಮುಖ ವಸ್ತುಗಳಲ್ಲಿ ಆಹಾರ ಧಾನ್ಯಗಳು ಒಂದಾಗಿದೆ.[೬೭] ವರ್ಷ ವಿಡಿ ಅವಶ್ಯವಿರುವ ಆಹಾರ ಧಾನ್ಯಗಳ ಸಂಗ್ರಹದ ಕಟ್ಟಡಗಳಿಗೆ 'ಕಣಜಗಳು' ಎಂದು ಕರೆಯುತ್ತಾರೆ. ಎಲ್ಲಾ

ವಸ್ತುಗಳ ಸಂಗ್ರಹದಲ್ಲಿಯೇ ಇದು ಮಹತ್ವವಾದುದು ಎಂದು ನೀತಿ ವಾಕ್ಯಾಮೃತದಲ್ಲಿ ಹೇಳಲಾಗಿದೆ.[೧೮] ಇದರಲ್ಲಿ ಎಂತಹ ದಾನ್ಯಗಳನ್ನು ಸಂಗ್ರಹಿಸಬೇಕೆಂದು ಕೌಟಿಲ್ಯನು ತನ್ನ ಕೃತಿಯಲ್ಲಿ ಹೇಳಿದ್ದಾನೆ.[೧೯] ಹೊಸ ಧಾನ್ಯಗಳು ಬಂದಾಗ ಹಳೆಯ ಧಾನ್ಯಗಳು ತೆಗೆಯಬೇಕು, ಅಲ್ಲದೆ ಅದರ ಸ್ವಚ್ಛತೆಯ ಕಡೆಗೆ ಗಮನಹರಿಸಬೇಕು. ಇವುಗಳ ಮೇಲ್ವಿಚಾರಣೆಗಾಗಿ ವಿಶೇಷ ದಳವನ್ನು ರಚಿಸಬೇಕು. ಅದರ ಮೇಲೆ ಒಬ್ಬ ಅಧ್ಯಕ್ಷನಿರಬೇಕು.[೨೦] ಗಿರಿದುರ್ಗಗಳಲ್ಲಿ ಅಮನೆಯ ಸಮೀಪದಲ್ಲಿ ಹಾಗೂ ಭದ್ರವಾದ ಕಾವಲು ಹೊಂದಿರುವ ಸ್ಥಳಗಳಲ್ಲಿ ಇವುಗಳನ್ನು ಕಲ್ಲಿನಿಂದ ರಚಿಸಲಾಗಿದೆ. ಸ್ಥಳದುರ್ಗಗಳಲ್ಲಿ ಧಾನ್ಯ ಸಂಗ್ರಹಕ್ಕೆ ನೆಲವನ್ನು ಅಗೆದು ಕಲ್ಲಿನಲ್ಲಿ ಕಟ್ಟಿದ 'ಹಗೆ'ಯಲ್ಲಿ ಧಾನ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಗುಲಬರ್ಗಾ ಜಿಲ್ಲೆಯ ಎಲ್ಲಾ ಗಿರಿದುರ್ಗಗಳಲ್ಲಿ ಕಲ್ಲಿನಿಂದ ನಿರ್ಮಿಸಿರುವ ವೃತ್ತಾಕಾರದ ಕಣಜಗಳಿವೆ. ಕೋಟೆ ಕಾಳಗದಲ್ಲಿ ಆಕ್ರಮಣಕಾರರು ಇವುಗಳ ಮೇಲೆ ದಾಳಿ ಮಾಡಿ ಇದರಲ್ಲಿ ಸಂಗ್ರಹಿಸಿರುವ ದವಸಧಾನ್ಯಗಳನ್ನು ವಶಪಡಿಸಿಕೊಳ್ಳುತ್ತಿದ್ದರು.

ಅರಸರು ಇನ್ನೂ ಕೆಲವು ಸಮಯದಲ್ಲಿ ತಮ್ಮ ಆಧೀನದಲ್ಲಿರುವ ಗ್ರಾಮಗಳಲ್ಲಿ ವೃತ್ತಾಕಾರದ ಹಾಗೂ ಚೌಕಾಕಾರದ ಕಣಜಗಳನ್ನು ನಿರ್ಮಿಸಿ, ಅಲ್ಲಿ ತೆರಿಗೆಯ ಮೂಲಕ ಸಂಗ್ರಹಿಸಿದ ದವಸ ಧಾನ್ಯಗಳನ್ನು ಅದೆ ಗ್ರಾಮದಲ್ಲಿ ಇಟ್ಟು ಅವಶ್ಯಕತೆ ಬಂದಾಗ ಅವುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಜಿಲ್ಲೆಯಲ್ಲಿ ಈ ರೀತಿಯ ಕೆಲವು ಗ್ರಾಮಗಳಿವೆ.

ಶಹಾಪೂರ ಬೆಟ್ಟದ ಕೋಟೆಯ ಮೇಲ್ಭಾಗದಲ್ಲಿ ಆರನೆಯ ದ್ವಾರದ ಒಳಗಡೆ ಎಡಭಾಗದಲ್ಲಿ ಮೂರು ವೃತ್ತಾಕಾರದ ಕಲ್ಲಿನಲ್ಲಿ ನಿರ್ಮಿಸಿರುವ ಕಣಜಗಳಿವೆ. ಅವುಗಳಲ್ಲಿ ಎರಡು ಕಣಜಗಳು ಸಮಾನ ಆಕಾರದಲ್ಲಿವೆ.[೨೧] ೨೦ ಅಡಿ ಎತ್ತರ ೧೦ ಅಡಿ ವೃತ್ತಾಕಾರದಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಇವುಗಳ ರಚನೆಗೆ ಸ್ಥಳೀಯವಾಗಿ ಲಭ್ಯವಾಗುವ ಕಲ್ಲುಗಳನ್ನು ಬಳಸಲಾಗಿದೆ. ಮೇಲ್ಭಾಗದಲ್ಲಿ ವೃತ್ತಾಕಾರದ ಮುಚ್ಚಳಿಕೆಯಿಂದ ಮುಚ್ಚುವಂತೆ ಮಾಡಲಾಗಿದೆ. ಈ ಎರಡು ಕಣಜಗಳು ಒಂದರ ಪಕ್ಕದಲ್ಲಿ ಒಂದು ಇರುವುದರಿಂದ ಒಂದು ಕಣಜಕ್ಕೆ ಮೆಟ್ಟಿಲುಗಳಿವೆ. ಇದರ ಬದಿಯಲ್ಲಿ ಮತ್ತೊಂದು ೨೦ ಅಡಿ ಎತ್ತರವಾದ ಹಾಗೂ ವಿಶಾಲವಾದ ವೃತ್ತಾಕಾರದ ಕಣಜವಿದೆ.[೨೨] ಇದರ ಸುತ್ತಲು ಗೋಡೆಗೆ ಅಂಟಿಕೊಂಡಿರುವಂತೆ ಮೆಟ್ಟಿಲುಗಳಿವೆ. ಒಳಗಡೆ ಸಂಗ್ರಹಿಸಿದ ಧಾನ್ಯಗಳನ್ನು ಮಳೆ, ಗಾಳಿ, ಬಿಸಿಲಿನಿಂದ ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದರು. ಕೋಟೆಯ ಮೇಲ್ಭಾಗದಲ್ಲಿ ಕೆಲವು ಅತ್ಯಂತ ಸುರಕ್ಷಿತವಾದ ಚೌಕಾಕಾರದ ಸ್ಥಳಗಳಿವೆ. ಇವುಗಳನ್ನು ಧಾನ್ಯ ಸಂಗ್ರಹದ ಸ್ಥಳಗಳೆಂದು ಗುರುತಿಸಲಾಗಿದೆ. ಕೋಟೆಯ ಮೇಲ್ಭಾಗದಲ್ಲಿ ಸಭಾಭವನದ ಹಿಂಭಾಗದಲ್ಲಿ ಅದಕ್ಕೆ ಅಂಟಿಕೊಂಡಿರುವಂತೆ ಒಂದು ವೃತ್ತಾಕಾರದ ಕಟ್ಟಡವಿದೆ. ೧೫ ಅಡಿ ಎತ್ತರವಾಗಿರುವ ಇದರ ಕೇಂದ್ರ ಭಾಗದಲ್ಲಿ ದ್ವಾರವಿದೆ. ಒಳಗಡೆ ಇಳಿಯಲು ಮೆಟ್ಟಿಲುಗಳಿವೆ. ಇದರಿಂದ ಕಣಜಗಳಿಗೆ ಮಧ್ಯದಲ್ಲಿ ಚಿಕ್ಕ ದ್ವಾರಗಳು ಇರುತ್ತವೆ ಎಂದು ಕಂಡು ಬರುತ್ತದೆ. ಇದನ್ನು ಹೊರತು ಪಡಿಸಿ ಉಳಿದ ಕಣಜಗಳಿಗೆ ಮೇಲ್ಭಾಗದಿಂದ ಧಾನ್ಯವನ್ನು ಹಾಕುತ್ತಿದ್ದರು ಹಾಗೂ ಅಲ್ಲಿಂದಲೆ ತೆಗೆಯುತ್ತಿದ್ದರು.

ಕೆಲವು ಸಂದರ್ಭಗಳಲ್ಲಿ ಮೇಲ್ಭಾಗವನ್ನು ತೆಗೆದು ಗಾಳಿ ಬೆಳಕಿಗೆ ಕೆಲವು ದಿನಗಳವರೆಗೆ ಹಾಗೆ ಬಿಟ್ಟು ನಂತರ ಮತ್ತೆ ಮುಚ್ಚಲಾಗುತ್ತಿತ್ತು.

ಯಾದಗಿರ ಕೋಟೆಯ ಮೇಲ್ಭಾಗದಲ್ಲಿ ವೃತ್ತಾಕಾರದ ಹಾಗೂ ಚೌಕಾಕಾರದ ಹಲವು ಕಣಜಗಳಿವೆ. ಅದರಲ್ಲಿ ಐದು ವೃತ್ತಾಕಾರದ ಕಣಜಗಳಿದ್ದೂ, ಅವುಗಳನ್ನು ಇಳಿಜಾರು ಪ್ರದೇಶದಲ್ಲಿ ನಿರ್ಮಿಸಲಾಗಿದೆ. ೧೫ ರಿಂದ ೨೦ ಅಡಿ ಎತ್ತರವಾಗಿರುವ ಈ ಕಟ್ಟಡಗಳು ಅತ್ಯಂತ ಭದ್ರವಾಗಿವೆ. ಇದರಲ್ಲಿ ಒಂದು ಕಣಜಕ್ಕೆ ಮಧ್ಯದಲ್ಲಿ ದ್ವಾರವಿದೆ. ಉಳಿದ ನಾಲ್ಕು ಕಣಜಗಳಿಗೆ ಮೇಲ್ಭಾಗದಿಂದ ಧಾನ್ಯ ಹಾಕಬಹುದಾಗಿದೆ. ಇವುಗಳು ಸ್ಥಳೀಯವಾಗಿ ಲಭ್ಯವಾಗುವ ಬಿಳಿವರ್ಣದ ಬೆಣಚದ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ತಳಭಾಗದಲ್ಲಿ ವಿಶಾಲವಾಗಿರುವ ಈ ಕಟ್ಟಡಗಳಿಗೆ ಆಯತಾಕಾರದ ಕಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಪ್ರತಿಯೊಂದು ಕಣಜಗಳಿಗೆ ಹೊರಭಾಗದಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇವುಗಳು ವಿಭಿನ್ನ ಆಕಾರದಲ್ಲಿ ಇರುವುದರಿಂದ ಇವುಗಳನ್ನು ಬೇರೆ ಬೇರೆ ಧಾನ್ಯಗಳ ಸಂಗ್ರಹಕ್ಕಾಗಿ ಬಳಸಲಾಗುತ್ತಿರುವಂತೆ ಕಂಡು ಬರುತ್ತದೆ.[೭೩] ಚೌಕಾಕಾರದ ಕಣಜವು ೪೦ ಅಡಿ ಉದ್ದ ೨೦ ಅಡಿ ಅಗಲವಾದ ಭದ್ರವಾದ ಗೋಡೆಯನ್ನು ಹೊಂದಿದೆ. ಇದರ ಉತ್ತರ ಭಾಗದಲ್ಲಿ ಒಂದು ಚಿಕ್ಕ ಪ್ರವೇಶದ್ವಾರವಿದೆ. ೧೫ ಅಡಿ ಎತ್ತರದ ಇದರ ಗೋಡೆಯು ೪ ಅಡಿ ದಪ್ಪವಾಗಿದೆ. ಈ ಕಟ್ಟಡಗಳಿಗೆ ಯಾವುದೆ ರಂಧ್ರಗಳು ಇರುವುದಿಲ್ಲ. ಆದ್ದರಿಂದ ಇದು ಒಂದು ಕಣಜವಾಗಿರಬಹುದಾಗಿದೆ.

ಇವುಗಳನ್ನು ಹೊರತು ಪಡಿಸಿ ಜಿಲ್ಲೆಯ ಇತರ ಕೋಟೆಗಳಲ್ಲಿ ದವಸ ಧಾನ್ಯಗಳ ಸಂಗ್ರಹಕ್ಕೆ ನೆಲವನ್ನು ತೋಡಿ, ಅಲ್ಲಿ 'ಹಗೆ'ಯನ್ನು ನಿರ್ಮಿಸಿ ಅದರಲ್ಲಿ ಧಾನ್ಯಗಳನ್ನು ಸಂಗ್ರಹಿಸುತ್ತಿದ್ದರು. ಇವುಗಳನ್ನು ಗುರುತಿಸುವುದು ಕಷ್ಟಕರವಾಗಿದೆ. ಅಂತಹ ಸ್ಥಳಗಳು ಗುಲಬರ್ಗಾ ಕೋಟೆಯಲ್ಲಿ ಆಗ್ನೇಯ ಭಾಗದಲ್ಲಿ ಹಾಗೂ ಜಾಮಿಮಸೀದಿಯ ವಾಯವ್ಯ ಭಾಗದಲ್ಲಿ ಕಂಡು ಬರುತ್ತವೆ. ಆದರೆ ಅವುಗಳು ಸಂಪೂರ್ಣವಾಗಿ ಮುಚ್ಚಿ ಹೋಗಿದ್ದು, ಆದರ ಕೆಲವು ಭಾಗ ಮಾತ್ರ ಉಳಿದುಕೊಂಡಿದೆ.

೫.೯. ತುಪ್ಪದ ಅಥವಾ ಎಣ್ಣೆಯ ಕೊಳಗಳು

ರಕ್ಷಣಾ ಸಂಬಂಧಿ ವಾಸ್ತುಶಿಲ್ಪಗಳಲ್ಲಿ ತುಪ್ಪದ ಅಥವಾ ಎಣ್ಣೆಯ ಕೊಳಗಳು ಸಹ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಗುಲಬರ್ಗಾ ಜಿಲ್ಲೆಯ ಹೆಚ್ಚಿನ ಕೋಟೆಗಳಲ್ಲಿ ಇವುಗಳು ಕಂಡು ಬರುವುದಿಲ್ಲ, ಆದರೆ ಯಾದಗಿರ ಕೋಟೆಯಲ್ಲಿ ಮಾತ್ರ ಕಂಡು ಬರುತ್ತವೆ. ತುಪ್ಪ ಅಥವಾ ಎಣ್ಣೆಯನ್ನು ಕೋಟೆಯಲ್ಲಿ ಸಂಗ್ರಹಿಸುವ ಉದ್ದೇಶ, ಇದನ್ನು ಯುದ್ಧದಲ್ಲಿ ಗಾಯಗೊಂಡ ಸೈನಿಕರ ಗಾಯಗಳಿಗೆ ಹಚ್ಚುತ್ತಿದ್ದರು.[೭೪] ಈ ಎರಡು ದ್ರವಗಳಲ್ಲಿ ರೋಗ ನಿರೋಧಕ ಶಕ್ತಿಯಿರುತ್ತದೆ. ಇಂದಿನ ವೈಜ್ಞಾನಿಕ ಯುಗದಲ್ಲಿ ಕೆಲವು ಗಾಯಗಳಿಗೆ ಎಣ್ಣೆ ಅಥವಾ ತುಪ್ಪವನ್ನು ಹಚ್ಚುವ ಪದ್ಧತಿಯಿದೆ. ಬಹು ವರ್ಷಗಳಿಂದ ಸಂಗ್ರಹಿಸಿದ ತುಪ್ಪದಲ್ಲಿ ಹೆಚ್ಚಿನ ರೋಗ ನಿರೋಧಕ ಶಕ್ತಿ ಇರುತ್ತದೆ. ಆದ್ದರಿಂದ ಅದನ್ನು ಕಲ್ಲಿನಿಂದ ನಿರ್ಮಿಸಿದ

ಕೊಡದಲ್ಲಿ ಹಾಕಿ ನೆಲದಲ್ಲಿ ಇಟ್ಟು, ಕೆಲವು ವರ್ಷಗಳ ನಂತರ ಇದನ್ನು ಬಳಸಲಾಗುತ್ತಿತ್ತು. ಇನ್ನೂ ಕೆಲವು ಸಂದರ್ಭದಲ್ಲಿ ಅಂಗಾಂಗಳವೃದ್ಧಿಗಾಗಿ ಹಾಗೂ ಸೈನಿಕರು ಮಲ್ಲಯುದ್ಧಗಳಲ್ಲಿ ಇದನ್ನು ಬಳಸುತ್ತಿದ್ದರು. ಶತ್ರುಗಳ ಕೈಯಿಂದ ಜಾರಿ ಬರಲು ತಮ್ಮ ಶರೀರಕ್ಕೆ ಇದೆ ಎಣ್ಣೆಯನ್ನು ಬಳಸುತ್ತಿದ್ದರು.

ಯಾದಗಿರ ಕೋಟೆಯ ಮೇಲ್ಭಾಗದಲ್ಲಿ ಮೂರು ತುಪ್ಪದ ಕೊಳಗಳಿವೆ.[೭೫] ಅದರಲ್ಲಿ ಎರಡು ನೆಲದ ಒಳಭಾಗದಲ್ಲಿದ್ದರೆ, ಒಂದು ಮೇಲ್ಭಾಗದಲ್ಲಿ ರಚಿಸಲಾಗಿದೆ. ಮೇಲ್ಭಾಗದಲ್ಲಿರುವ ಕೊಳವು ೬x೬ ಅಡಿ ಉದ್ದ ಅಗಲವಾದದ್ದು ನಾಲ್ಕು ಅಡಿ ಎತ್ತರವಾಗಿದೆ. ಇದರ ಮೇಲ್ಭಾಗದಲ್ಲಿ ಒಂದು ಚೌಕಾಕಾರದ ೨x೨ ಅಡಿ ಉದ್ದ ಅಗಲದ ರಂಧ್ರವಿದೆ ಇಲ್ಲಿಂದ ಒಳಗಡೆ ದ್ರವರೂಪದ ವಸ್ತುವನ್ನು ಸಂಗ್ರಹಿಸಿ, ಅವಶ್ಯವಿರುವಾಗ ಅದನ್ನು ಹೊರತೆಗೆಯಲಾಗುತ್ತಿತ್ತು. ಕಾಲಕ್ರಮೇಣ ಈ ರೀತಿಯ ಕೊಳಗಳು ಸುರಕ್ಷಿತವಲ್ಲವೆಂದು ಭೂಮಿಯ ಒಳಗಡೆ ನಿರ್ಮಿಸಲಾಯಿತು.

ಇತರ ಎರಡು ತುಪ್ಪದ ಕೊಳಗಳು ಭೂಮಿಯ ಕೆಳಭಾಗದಲ್ಲಿ ನಿರ್ಮಿಸಲಾಗಿದೆ. ಅದರಲ್ಲಿ ಒಂದು ವೃತ್ತಾಕಾರದಲ್ಲಿದ್ದರೆ ಮತ್ತೊಂದು ಚೌಕಾಕಾರದಲ್ಲಿದೆ. ವೃತ್ತಾಕಾರದಲ್ಲಿರುವ ಕೊಳವನ್ನು ದೊಡ್ಡ ಬಂಡೆ ಗಲ್ಲಿನಲ್ಲಿ ಕೊರೆದು ಮಾಡಿದಂತೆ ಕಂಡು ಬರುತ್ತದೆ. ಅತ್ಯಂತ ನುಣುಪಾದ ಕೆತ್ತನೆಯಿಂದ ಕೂಡಿರುವ ಇದರ ಒಳಭಾಗದಲ್ಲಿ ಯಾವುದೆ ರಂಧ್ರಗಳು ಇರುವುದಿಲ್ಲ. ಏಕೆಂದರೆ ಒಳಗಡೆ ಇರುವ ಎಣ್ಣೆ ಅಥವಾ ತುಪ್ಪವು ಸೋರಿಹೋಗದಂತೆ ಅಥವಾ ಕರಗಿ ಆವಿಯಾಗಿ ಹೋಗದಂತೆ ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳಲಾಗಿದೆ.

ಕೋಟೆಯ ಕೇಂದ್ರದಲ್ಲಿರುವ ನೀರಿನ ಆಶ್ರಯ ತಾಣದ ಸಮೀಪದಲ್ಲಿ ೧೦x೧೦ ಅಡಿ ಉದ್ದ ಅಗಲದ ಸ್ಥಳವನ್ನು ಆರು ಅಡಿ ಆಳವಾಗಿ ತೋಡಿ ಅದರ ಒಳಭಾಗದಲ್ಲಿ ನುಣುಪಾಗಿ ಕಟೆದ ಕಲ್ಲುಗಳನ್ನು ಸರಿಯಾಗಿ ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ನಿರ್ಮಿಸುತ್ತಿದ್ದರು. ಮೇಲ್ಭಾಗವು ಸಹ ಕಲ್ಲಿನಿಂದ ಮುಚ್ಚಲು ಕೇಂದರದಲ್ಲಿ ಒಂದು ಚಿಕ್ಕ ರಂಧ್ರವನ್ನು ಬಿಡಲಾಗಿದೆ. ಇದರ ನಿರ್ಮಾಣಕ್ಕೆ ಬಿಳಿ ವರ್ಣದ ಬೆಣಚು ಕಲ್ಲುಗಳನ್ನು ಬಳಸಿರುವುದರಿಂದ ಮತ್ತಷ್ಟು ಸ್ವಚ್ಛವಾಗಿ ಕಂಡು ಬರುತ್ತದೆ. ಒಳಗಡೆ ಸಂಗ್ರಹಿಸಿದ ದ್ರವ ವಸ್ತು ಯಾವುದೇ ಕಾರಣದಿಂದಲೂ ಹಾಳಾಗಿ ಹೋಗದಂತೆ ರಚಿಸಲಾಗಿದೆ. ಸುತ್ತಲು ೪ ಅಡಿ ಆಳವಾದ ಸ್ಥಳವಿದೆ. ಇದರ ಸುತ್ತಲು ಕಂದಕದ ಹಾಗೆ ತಗ್ಗಾದ ಪ್ರದೇಶದಲ್ಲಿ ನೀರಿನ ಸಂಗ್ರಹದ ವ್ಯವಸ್ಥೆ ಮಾಡಲಾಗಿದೆ. ಇದರ ಉದ್ದೇಶ ಬೇಸಿಗೆಯ ಕಾಲದಲ್ಲಿ ಒಳಗಡೆ ಸಂಗ್ರಹಿಸಿದ ತುಪ್ಪ ಅಥವಾ ಎಣ್ಣೆಯು ಬಂಡೆಗಳ ಕಾವಿನಿಂದ ಆವಿಯಾಗಿ ಕರಗಿ ಹೋಗದಂತೆ ಹಾಗೂ ಕ್ರಿಮಿಕೀಟಗಳಿದ ರಕ್ಷಿಸಲು ಸುತ್ತಲು ನೀರನ್ನು ಹಾಯಿಸಲಾಗುತ್ತಿತ್ತು. ಈ ರೀತಿ ವಿಶೇಷ ಮುನ್ನೆಚ್ಚರಿಕೆಯಿಂದ ನಿರ್ಮಿಸಿರುವ ತುಪ್ಪದ ಕಣಜಗಳು ಕರ್ನಾಟಕದ ಯಾವ ಕೋಟೆಗಳಲ್ಲಿ ಕಂಡು ಬರುವುದಿಲ್ಲ.

೫.೧೦. ಎಣ್ಣೆ ಕುದಿಸುವ ಸ್ಥಳಗಳು

ರಕ್ಷಣಾ ಸಂಬಂಧಿ ಕಟ್ಟಗಳಲ್ಲಿ ಈ ಸ್ಥಳಗಳು ವಿಶೇಷವಾದ ಪಾತ್ರವಹಿಸುತ್ತದೆ. ಸಾಮಾನ್ಯವಾಗಿ ಸ್ಥಳದುರ್ಗಗಳ ರಕ್ಷಣೆಗೆ ಕೈಗೊಳ್ಳುವ ಹೆಚ್ಚಿನ ವ್ಯವಸ್ಥೆಯಲ್ಲಿ ಇದು ಒಂದಾಗಿದೆ. ಕೋಟೆಕಾಳಗದಲ್ಲಿ ಶತ್ರುಗಳು ಎಷ್ಟೆ ಪ್ರಯತ್ನಿಸಿದರು ಕೋಟೆ ಅವರ ವಶವಾಗದಂತ ಅಕ್ರಮಣಕಾರರನ್ನು ತಡೆಹಿಡಿಯುವಲ್ಲಿ ಇವುಗಳ ಪಾತ್ರ ಪ್ರಮುಖವಾಗಿದೆ. ಕೋಟೆಯ ಒಳಗೋಡೆಯಲ್ಲಿ ಸುತ್ತಲು ಇವುಗಳನ್ನು ನಿರ್ಮಿಸಲಾಗುತ್ತದೆ. ೬ ರಿಂದ ೮ ಅಡಿ ಅಗಲವಾಗಿದ್ದು, ಕೋಟೆಗೋಡೆಯ ಸಮನಾದ ಎತ್ತರದಲ್ಲಿ ಇವುಗಳನ್ನು ರಚಿಸಲಾಗುತ್ತದೆ. ನೊಡಲು ಒಲೆಯಂತೆ ಕಂಡು ಬರುವ ಈ ಕಟ್ಟಡಗಳನ್ನು ಪ್ರಾರಂಭದ ಕೆಲವು ಕೃತಿಗಳಲ್ಲಿ ಆನೆಯಲಾಳಗಳೆಂದು ಹೇಳಲಾಗಿದೆ. ಪಟ್ಟದ ಆನೆಗಳ ಸಲುವಾಗಿ ಇವುಗಳನ್ನು ನಿರ್ಮಿಸಲಾಗಿದೆ. ಎಂದು ಪ್ರೊ. ಸಿ.ಸಿ ಪಡ ಶೆಟ್ಟಿಯವರು ತಮ್ಮ ಕಲಬುರ್ಗಿಕೋಟೆ ಎನ್ನುವ ಕೃತಿಯಲ್ಲಿ ಹೇಳಿದ್ದಾರೆ. ಆದರೆ ಇವುಗಳ ರಚನಾ ವಿಧಾನವನ್ನು ನೋಡಿದಾಗ, ಇಲ್ಲಿ ಆನೆಗಳು ನಿಲ್ಲಿಸುವುದು ಅಸಾಧ್ಯವೆಂದು ಕಂಡು ಬರುತ್ತದೆ. ಆನೆಗಳ ಗ್ರಾತ್ರಕ್ಕಿಂತ ಕಡಿಮೆ ವಿಸ್ತೀರ್ಣ ಹೊಂದಿರುವ ಈ ಸ್ಥಳಗಳಲ್ಲಿ ಆನೆಗಳಿಗೆ ಕೂಡಲು, ನಿಲ್ಲಲು ಅಥವಾ ಆಕಡೆ ಈಕಡೆಗೆ ಕತ್ತು ಹೊರಳಿಸಲು ಸಾಧ್ಯವಿಲ್ಲ. ಇಂತಹ ಅಂಶಗಳನ್ನು ಕೂಲಂಕುಶವಾಗಿ ಪರೀಕ್ಷಿಸಿದಾಗ ಇವುಗಳ ನಿಜವಾದ ರಚನೆಯ ಉದ್ದೇಶ ಕಂಡು ಬಂದಿತು.

ಈ ಸ್ಥಳಗಳನ್ನು ಎಣ್ಣೆ ಅಥವಾ ನೀರನ್ನು ಕಾಯಿಸಲು ನಿರ್ಮಿಸಿರುವಂತೆ ಕಂಡು ಬರುತ್ತದೆ. ಏಕೆಂದರೆ ಇದರಲ್ಲಿ ಕುದಿಯು ದ್ರವ ರೂಪದ ವಸ್ತುವನ್ನು ಹೊರಗಿನಿಂದ ಆಕ್ರಮಣ ಮಾಡುವ ಶತ್ರುಗಳ ಮೇಲೆ ಎಸೆಯಲಾಗುತ್ತಿತ್ತು. ಕುದಿಯುವ ಎಣ್ಣೆ ಅಥವಾ ನೀರು ಆಕ್ರಮಣಕಾರರ ಮೇಲೆ ಸಿಡಿದಾಗ ಅವರು ತೊಂದರೆಯನ್ನು ಅನುಭವಿಸಿ ಮುತ್ತಿಗೆಯಿಂದ ಹಿಂದೆ ಸರಿಯುತ್ತಿದ್ದರು. ಇಂತಹ ಕಟ್ಟಡಗಳು ಗುಲಬರ್ಗಾ ಕೋಟೆಯನ್ನು ಹೊರತು ಪಡಿಸಿ ಮತ್ತೆಯಾವ ಕೋಟೆಯಲ್ಲಿಯು ಕಂಡು ಬರುವುದಿಲ್ಲ. ಬಹಮನಿ ಸುಲ್ತಾನರು ಈ ರೀತಿಯ ಕಟ್ಟಡಗಳನ್ನು ಕೋಟೆ ಕಾಳಗದಲ್ಲಿ ಬಳಸುತ್ತಿದ್ದರು. ಸುಮಾರು ೫೦ - ೬೦ ವರ್ಷಗಳ ಹಿಂದೆ ಇವುಗಳ ಮೇಲೆ ಕಬ್ಬಿಣದಿಂದ ಮಾಡಿರುವ ದೊಡ್ಡ ಕಡಾಯ ಇಡಲಾಗಿತ್ತೆಂದು ಇಲ್ಲಿಯ ನಿವಾಸಿಗಳು ಹೇಳಿದ್ದಾರೆ. ಕಲಬುರ್ಗಿಯ ಕೋಟೆಯ ಉತ್ತರ ಭಾಗದ ಕೋಟೆಯ ಒಳ ಗೋಡೆಗೆ ಅಂಟಿಕೊಂಡಿರುವಂತೆ ಎರಡು ಎಣ್ಣೆ ಕುದಿಸುವ ರಕ್ಷಣಾ ಸಂಬಂಧಿ ಕಟ್ಟಡಗಳಿವೆ. ಇವುಗಳು ರಚನೆಯಲ್ಲಿ ಒಲೆಯಂತೆ ಕಂಡು ಬರುತ್ತದೆ. ತಳಭಾದಲ್ಲಿ ಅಗಲವಾಗಿದ್ದೂ, ಮೇಲೆ ಹೋದಂತೆ ಒಳಭಾಗಕ್ಕೆ ಚಾಚಿಕೊಂಡಿವೆ. ಇದರ ಮೇಲೆ ಎಣ್ಣೆಯ ಪಾತ್ರೆಯು ಸಮ ಪ್ರಮಾಣದಲ್ಲಿ ಇಡಲಾಗುತ್ತದೆ. ಹೊರ ಗೋಡೆಯ ಮುಂಭಾಗದಲ್ಲಿ ವಿಸ್ತರವಾದ ಮತ್ತು ಹೆಚ್ಚಿನ ಸ್ಥಳವಿರುವುದರಿಂದ ಈ ಭಾಗಗಳಿಗೆ ಹೆಚ್ಚಿನ ರಕ್ಷಣೆಯ ಅವಶ್ಯಕತೆ ಇರುವುದಾಗಿ ಇವುಗಳನ್ನು ನಿರ್ಮಿಸಲಾಗಿದೆ. ಕೋಟೆಯ ದಕ್ಷಿಣಭಾಗದ ಗೋಡೆಯ ಮಧ್ಯಭಾಗದಲ್ಲಿ ಎರಡು ಎಣ್ಣೆ ಕುದಿಸುವ ಸ್ಮಾರಕಗಳಿವೆ. ಈ ಭಾಗದಲ್ಲಿ ಕೋಟೆಯ ಹೊರಭಾಗದ್ದು

[illegible]

ಅತ್ಯಂತ ವಿಶಾಲವಾಗಿದೆ. ಕುದಿಯುವ ಎಣ್ಣೆ ಅಥವಾ ನೀರು ನೇರವಾಗಿ ಶತ್ರುಗಳ ಮೇಲೆ ಎರಗುವಂತೆ ಇವುಗಳನ್ನು ನಿರ್ಮಿಸಲಾಗಿದೆ. ಅದೇ ರೀತಿ ಪಶ್ಚಿಮ ಭಾಗದ ಗೋಡೆಯ ಮಧ್ಯದಲ್ಲಿ ಒಂದು ಹಾಗೂ ಏಳನೆಯ ಪ್ರವೇವ ದ್ವಾರದ ಸಮೀಪದಲಲಿ ಒಂದು ಇಂತಹ ಕಟ್ಟಡವಿದೆ. ಈ ಎಲ್ಲಾ ರಕ್ಷಣಾ ಸಂಬಂಧಿ ಕಟ್ಟಡಗಳು ಸಮಾನ ಆಕಾರದಲ್ಲಿ ನಿರ್ಮಿಸಲಾಗಿದೆ. ಇಂತಹ ವ್ಯವಸ್ಥೆಯು ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಸುಮಾರು ಐವತ್ತು ಕೋಟೆಗಳಲ್ಲಿ ಯಾವ ಕೋಟೆಯಲ್ಲಿವು ಕಂಡು ಬರುವುದಿಲ್ಲ.

೫.೧೧. ಮುಗಿಲಟ್ಟಣಿಕೆಗಳು

ಕೋಟೆಯ ಗೋಡೆಯ ಮೇಲ್ಭಾಗದಲ್ಲಿ ಎತ್ತರವಾದ ರಚನೆಯನ್ನು 'ಅಟ್ಟಾಲಕ' 'ಅಟ್ಟಣಿಕೆ' ಎಂದು ಕರೆಯುತ್ತಾರೆ. ಪ್ರಾಚೀನ ಸಾಹಿತ್ಯದಲ್ಲಿ ಇವುಗಳ ಮಹತ್ವವನ್ನು ಕುರಿತು ಹೇಳಲಾಗಿದೆ. ಇವುಗಳು ಕೋಟೆಯ ಅಂಗ ಭಾಗಗಳಲ್ಲಿ ಅತ್ಯಂತ ಪ್ರಮುಖವಾದ ಪಾತ್ರವಹಿಸುತ್ತದೆ. ಕಾವಲು ಗೋಪುರಗಳಂತೆ ಕಂಡು ಬರುವ ಈ ಕಟ್ಟಡಗಳು ಅವುಗಳಿಗಿಂತ ಎತ್ತರವಾಗಿರುತ್ತವೆ. ವೈರಿಗಳು ಚಲನವಲನವನ್ನು ದೂರದಿಂದಲೆ ವೀಕ್ಷಿಸಲು ಸಹಾಯಕವಾಗುತ್ತವೆ. ಇಲ್ಲಿಯ ಕಾವಲಗಾರರು ಆಕ್ರಮಣಕಾರರ ವಿಷಯ ತಮ್ಮ ಸೈನಿಕರಿಗೆ ತಿಳಿಸಿ ಅವರನ್ನು ಯುದ್ದಕ್ಕೆ ಸಿದ್ದರನ್ನಾಗಿಸುತ್ತವೆ. ಇವುಗಳ ಮತ್ತೋಂದು ಪ್ರಮುಖ ಉದ್ದೇಶವೆಂದರೆ ಇಲ್ಲಿ ಸ್ವಲ್ಪಮಟ್ಟಿನ ಯುದ್ಧ ಸಾಮಗ್ರಿಗಳು ಅಥವಾ ತೋಪುಗಳನ್ನು ನಿಲ್ಲಿಸಲಾಗುತ್ತದೆ. ಕೋಟೆಯ ವಿವಿಧ ಭಾಗಗಳಲ್ಲಿ ವಿವಿಧ ಟ್ಟಾಲಕಗಳನನು ನಿರ್ಮಿಸಲಾಗುತ್ತಿರುವ ವಿಷಯ ನಾಗಚಂದ್ರನ ಪಂಪ ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ.

ಯುದ್ಧ ಸಂಧರ್ಭದಲ್ಲಿ ಜಯ ಅಪಜಯಗಳ ಸೂಚಕದ ಸಂಕೇತವಾದ ದ್ವಜಗಳನ್ನು ಹಾರಿಸಲು ಇವುಗಳನ್ನು ಬಳಸಲಾಗುತ್ತಿತ್ತು. ಅಲ್ಲದೆ ದೂರದಲ್ಲಿರುವ ಶತ್ರುಗಳನ್ನು ಇಲ್ಲಿಂದ ಗುರುತಿಸಿ ಬಾಣಗಳಿಂದ ಆಕ್ರಮಣಕಾರರ ಮೇಲೆ ಪ್ರತಿ ದಾಳಿಯನ್ನು ಮಾಡಲಾಗುತ್ತಿತ್ತು. ಇವುಗಳ ಮೇಲೆ ಹಾರಾಡುವ ದ್ವಾಜದ ರಕ್ಷಣೆಯನ್ನು ಮಾಡುವ ಜವಾಬ್ದಾರಿ ಅಲ್ಲಿಯ ಕಾವಲುಗಾರರಿಗೆ ವಹಿಸಿಕೊಡಲಾಗುತ್ತಿದೆ. ಗುಲಬರ್ಗಾ ಜಿಲ್ಲೆಯ ಕೆಲವು ಕೋಟೆಗಳ ಮೇಲ್ಭಾಗದಲ್ಲಿ ಇಂತಹ ರಕ್ಷಣಾ ಸ್ಮಾರಕಗಳು ಕಂಡು ಬರುತ್ತವೆ. ಅವುಗಳಲ್ಲಿ ಗುಲಬರ್ಗಾ ಕೋಟೆಯ ಆಗ್ನೆ ಭಾಗದಲ್ಲಿ ಒಳಗೋಡೆಯ ಮೇಲ್ಭಾಗದಲ್ಲಿರುವ ವಿಶಾಲ ಸ್ಥಳದಲ್ಲಿ ನಿರ್ಮಿಸಿರುವ ಇದರ ಸುತ್ತ ಮುತ್ತಲು ಕಾವಲುಗಾರರಿಗೆ ರಕ್ಷಣಾತ್ಮಕ ಸ್ಥಳಗಳು ಹಾಗೂ ಮದ್ದು ಗುಂಡುಗಳ ಸಂಗ್ರಹಕ್ಕಾಗಿ ಸ್ಥಳಾವಕಾಶವಿದೆ. ಕೋಟೆಯ ಪಶ್ಚಿಮ ಭಾಗದಲ್ಲಿರುವ ಒಳಗೋಡೆಯ ಮೇಲ್ಭಾಗದಲ್ಲಿ ೫ ಅಡಿ ಎತ್ತರದ ಮತ್ತೊಂದು ಮುಗಿಲಟ್ಟಣಿಕೆ ಇದೆ. ಇದರ ಮುಂಭಾಗದಲ್ಲಿ ಒಂದು ಕಾಮುಗೋಪುರ ಹಾಗೂ ತೋಪಿನ ರಚನೆಯು ಕಂಡು ಬರುತ್ತದೆ. ಈ ಎರಡು ಕಟ್ಟಡಗಳಲ್ಲಿ ವ್ಯತ್ಯಾಸವಿರುವುದರಿಂದ ಮೊದಲು ಸೂಚಿಸಿರುವ ಕಟ್ಟಡ ಮುಗಿಲಟ್ಟಣಿಕೆಯಾಗಿದೆ.

[illegible]

ಯಾದಗಿರ ಮತ್ತು ಶಹಪೂರು ಕೋಟೆಗಳಲ್ಲಿ ಇಂತಹ ರಕ್ಷಣಾ ಸಂಬಂಧಿ ಕಟ್ಟಡಗಳು ಕಂಡುಬರುತ್ತವೆ. ಯಾದಗಿರ ಕೋಟೆಯ ಎರಡನೆಯ ಗೋಡೆಯ ಮೇಲ್ಭಾಗದಲ್ಲಿರುವ ಒಂದು ಕಾವಲು ಗೋಪುರದ ಮೇಲೆ ಇದನ್ನು ನಿರ್ಮಿಸಲಾಗಿದೆ. ಆಕಾಶದ ಎತ್ತರಕ್ಕೆ ಕಾಣುವ ಈ ಕಟ್ಟವು ಶತ್ರುಗಳ ಚಲನವಲನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಶಹಾಪೂರ ಕೋಟೆಯ ಮೇಲ್ಭಾಗದಲ್ಲಿ ದಕ್ಷಿಣ ಭಾಗದಲ್ಲಿ ಇರುವ ಅರಮನೆಯ ಹಿಂಭಾಗದಲ್ಲಿ ೬ ಅಡಿ ಎತ್ತರದ ಮುಗಿಲಟ್ಟಣಿಕೆಯ ಕಟ್ಟಡವಿದೆ. ವಾಗಣಗೇರಿಕೋಟೆಯ ಒಳಭಾಗದಲ್ಲಿರು ಬೃಹತ ಬಂಡೆಯ ಮೇಲೆ ೫ ಅಡಿ ಎತ್ತರದ ವೃತ್ತಾಕಾರದ ಕಟ್ಟಡ ನಿರ್ಮಿಸಲಾಗಿದೆ. ಈ ಕೋಟೆಯ ಮೇಲೆ ದಾಳಿಮಾಡಿದ ಔರಂಗಜೇಬನು ಇದನ್ನು ವಶಪಡಿಸಿಕೊಂಡನಂತರ ಕೋಟೆಯ ಒಳಭಾಗದ ಮುಗಿಲಟ್ಟಣಿಕೆಯ ಮೇಲೆ ಮೊಗಲ ಸಾಮ್ರಾಜ್ಯದ ದ್ವಜವನ್ನು ಹಾರಿಸಿದ. ಈ ರೀತಿ ಗುಲಬರ್ಗಾ ಕೋಟೆಯಲ್ಲಿ ಬರುವ ಕೆಲವು ಕೋಟೆಗಳಲ್ಲಿ ರಕ್ಷಣಾ ಸಂಬಂಧಿ ಕಟ್ಟಡಗಳಾದ ಮುಗಿಲಟ್ಟಣಿಕೆಗಳು ಕಂಡು ಬರುತ್ತವೆ.

ಟಿಪ್ಪಣಿಗಳು:

೧. ತೆಲಗಾವಿ ಲಕ್ಷ್ಮಣ, ೨೦೦೪ - ಮೌರ್ಯ ಮತ್ತು ಶಾತವಾಹನ ಯುಗ, ಪು. ೧೦೦-೦೨.

೨. ಅಕ್ಕಿ ಡಿ.ಎಸ್. ೨೦೦೦ - ಜೈನ ವಿಗ್ರಹಗಳು, ಪು. ೭.

೩. Biradar Shrishail 2005 - Jainism in Karnataka, Unpublished Ph.D. Thesis, Gulbarga University, Gulbarga, p. 70.

೪. ಪಾಟೀಲ, ಎಂ.ಬಿ. (ಸಂ.) ೧೯೯೭ - ಗುಲಬರ್ಗಾ ಜಿಲ್ಲೆಯ ಗ್ಯಾಸೆಟಿಯರ್, ಪು. ೭೨೨.

೫. M. Yaseen Quddusi and Sitaram Jagirdar, 2001 - Persian, Arabic and Urdu Inscription in Karnataka, p. 78.

೬. Percy Brown 1956 - Indian Architecture (Islamic Period), pp. 50-54.

೭. Wani Shambhuling S. 1990 - Gulbarga City and Its Monuments, Unpulibhsed M.Phil. Dissertation, Gulbarga University, Gulbarga, p. 107-108.

೮. ಪಿ.ವಿ ಕೃಷ್ಣಮೂರ್ತಿ ಮತ್ತು ಕೆ. ವಸಂತ ಲಕ್ಷ್ಮಿ (ಸಂ.) ೨೦೦೦ - ಸೂರ್ಯಕೀರ್ತಿ, ಪು. ೧೬೨-೬೩.

೯. Aruni S.K. 2004 - Surpur Samsthana Historical and ARcheological Study poligar State in South India, p. 67.

೧೦. Ibid, p. 76.

೧೧. ಬಸವರಾಜ ಆಲೆಮನೆ ೨೦೦೬ - ಇತಿಹಾಸ ನೆನಪಿಸುವ ಖಾಸಗಿ ಕೋಟೆ, ಪಜಾವಾಣಿ ಲೇಖನ, ಪು. ೧೧.

೧೨. ನಾಗರಾಜ್ ಎಂ. ಜಿ. ಮತ್ತು ಕೃಷ್ಣಮೂರ್ತಿ ಪಿ.ಜಿ. (ಸಂ.) ೨೦೦೦ - ಇತಿಹಾಸ ದರ್ಶನ, ಪು. ೨೩೩.

೧೩. Fischer Klaus 1995 - Firozabad on the Bhima and its Environs, p. 86.

೧೪. ಬಸವರಾಜ ಅಲೆಮನೆ ೨೦೦೮ - ಪೂರ್ವೋಕ್ತ, ಲೇಖನ.

೧೫. Aruni S.K. 2004 - Op. Cit., p. 101.

೧೬. Ibid, p. 98.

೧೭. Ibid, p. 102.

೧೮. ಪಾಟೀಲ್ ಚನ್ನಬಸಪ್ಪ ಎಸ್. ೧೯೯೯ - ಕರ್ನಾಟಕದ ಕೋಟೆಗಳು, ಪು. ೧೩೩.

೧೯. ಬೀಮಪ್ಪ ಬೋನಾಳ ೧೯೯೮ - ಚಿಂಚೋಳಿ ತಾಲೂಕು ದರ್ಶನ, ಪು. ೧೬.

೨೦. ರಮೇಶ ಸ.ಚಿ. ೨೦೦೫ - ನೀರು ಒಂದು ಜಾನಪದ ನೋಟ, ಪು. ೧.

೨೧. ಸೋಮಶೇಖರ ವೈ.ಎಸ್. ೨೦೦೯ - ವಿಜಯ ನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ಪು. ೧೨೬.

೨೨. ಜ್ಯೋಶಿ ಡಿ.ಟಿ. ೧೯೯೦ - ಮದ್ಯಕಾಲೀನ ಭಾರತದ ಇತಿಹಾಸ, ಪು. ೫೨.

೨೩. ಹೂಗಾರ ಬಿ.ಪಿ. ೧೯೯೮ - ಭಾರತದ ಇತಿಹಾಸ ೧೫೨೬-೧೯೬೪, ಪು. ೨೨೦.

೨೪. Wani Shambhuling S. 1990 - Op. Cit., p. 105.

೨೫. M. Yaseen Quddusi and Sitaram Jagiradar 2001 - Op. Cit., p. 180.

೨೬. ಜಿ.ಆರ್. ಕುಲಕರ್ಣಿ (ಸಂ.) ೧೯೮೫ - ಸಗರನಾಡ ದರ್ಶನ, ಪು. ೬.

೨೭. ಪಾಟೀಲ್ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೧೩೦.

೨೮. Aruni S.K. 2004, Op. Cit., p. 77.

೨೯. ಬಸವರಾಜ ಅಲೆಮನೆ ೨೦೦೮ - ಪೂರ್ವೋಕ್ತ.

೩೦. ಗೋಪಾಲ್ ಆರ್. (ಸಂ.) ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ೪೬೨.

೩೧. Fischer Klaus, 1955 - Op. Cit., p. 48.

೩೨. ಪಾಟೀಲ ಚನ್ನಬಸಪ್ಪ ೧೯೯೯ - ಪುರ್ವೋಕ್ತ, ಪು. ೧೨೮-೨೯.

೩೩. Joshi S.K. 1985 – Defence Architecture in Early Karnataka, pp. 73-74.

೩೪. ಕಪಟರಾಳ ಕೃಷ್ಣರಾಯರು ೨೦೦೫ - ಸುರಪುರ ಸಂಸ್ಥಾನದ ಇತಿಹಾಸ, ಪು. ೬೮.

೩೫. Chopra P.N. (Oth) 1979 - History of South India, Vol. II, p. 66.

೩೬. ಸೋಮಶೇಖರ್ ಎಸ್.ವೈ. ೨೦೦೯ - ಪೂರ್ವೋಕ್ತ, ಪು. ೧೮೭, ೧೮೯.

೩೭. Jean Deloche, 2004 – Gun Powder Artillery and Militery Architecturer in South India, (IH of S 40.4), p. 589.

೩೮. Ibid, p. 576.

೩೯. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು.

೪೦. ಶಂಭುಲಿಂಗ ಎಸ್. ವಾಣಿ ೨೦೦೮ - ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಸಿಡಿಮದ್ದಿನ ಅವಶೇಷಗಳು.

೪೧. ಕಪಟರಾಳ ಕೃಷ್ಣರಾಯರು ೨೦೦೫ - ಪೂರ್ವೋಕ್ತ, ಪು. ೭೪.

೪೨. ಅದೇ.

೪೩. ಕೃಷ್ಣಭಟ್ ಕೆ. (ಅನು) ೨೦೦೯ - ಕೌಟಿಲ್ಯನ ಅರ್ಥಶಾಸ್ತ್ರ, ಪು. ೧೦೨.

೪೪. R. Bala Subramaniarm 2005 - Development of Cannon Technology in India, p. 503.

೪೫. Ibid, p. 505.

೪೬. Wani Shambhuling S. 1990 - Op. Cit., p. 16.

೪೭. ಆರ್. ಗೋಪಾಲ್ (ಸಂ.) ೨೦೦೭ - ಪೂರ್ವೋಕ್ತ, ಪು. ೨೧೯.

೪೮. Wani Shambhuling S. 1990 - Op. Cit., p. 18.

೪೯. Jean Deloche, 2004 – Op. Cit., pp. 577-79.

೫೦. ಆರ್. ಗೋಪಾಲ್ (ಸಂ.) ೨೦೦೭ - ಪೂರ್ವೋಕ್ತ, ಪು. ೨೧೮.

೫೧. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೧೨೮.

೫೨. Joshi, S.K. 1985, Op. Cit., p. 73.

೫೩. ಭಾಸ್ಕರ್‌ರಾವ ಮುಡಬೂಳ ೨೦೦೧ - ಮರೆತು ಹೋದ ಸುರಪುರ ಇತಿಹಾಸ, ಪು. ೨೨.

೫೪. ಪಾಟೀಲ್ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೨೩೪.

೫೫. ಪಾಟೀಲ ಎಂ.ಬಿ. ೧೯೯೭ - ಪುರ್ವೋಕ್ತ, ಪು. ೭೬೭.

೫೬. ಶಭುಲಿಂಗ ಎಸ್. ವಾಣಿ ೨೦೦೯ - ಬಹಮನಿ ಮತ್ತು ಆದಿಲ್‌ಶಾಹಿಗಳ ತೋಪು ನಿರ್ಮಾಣದ ತಂತ್ರಜ್ಞಾನ, ಕ.ಇ.ಅ. ಬೆಂಗಳೂರು ಸಮ್ಮೇಳನದಲ್ಲಿ ಮಂಡಿಸಿದ ಲೇಖನ.

೫೭. ವಿಠಲರಾವ್ ಗಾಯಕ್ವಾಡ (ಅನು) ೨೦೦೩ - ಲಜ್ಜಾಗೌರಿ, ಪು. ೬೭.

೫೮. Wani Shambhuling, S. 1990 - Op. Cit., p. 106.

೫೯. Brown Percy, 1956 - Op. Cit., pp. 50-51.

೬೦. ಎಸ್. ಎಸ್. ವಾಣಿ ೨೦೦೫ - ಸೇಡಂನಲ್ಲಿ ಜರುಗಿದ ಕರ್ನಾಟಕ ಇತಿಹಾಸ ಅಕಾಡೆಮಿ (ರಿ.) ಸಮ್ಮೇಳನದಲ್ಲಿ ಮಂಡಿಸಿದ, ಲೇಖನ.

೬೧. J.N. Kamalpurkar 1961 – The Deccan Forts, p. 65.

೬೨. Percy Brown, 1956, Op. Cit., p. 51.

೬೩. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೩೦.

೬೪. Biradar Shrishail 1993 - Malkhed through the ages, Unpublished M.Phil., Gulbarga University, Gulbarga, p. 72-73.

೬೫. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೨೫೫.

೬೬. ಅದೇ, ಪು. ೧೩೨.

೬೭. Vijayalaxmi, K.S. (Ed.) 2006 Studies in Karnataka History and Culture, (P.V.I.K.H.C.) pp. 140-141.

೬೮. ಕೃಷ್ಣ ಭಟ್ ಕೆ. (ಅನು) ೨೦೦೦ - ಕೌಟಿಲ್ಯನ ಅರ್ಥಶಾಸ್ತ್ರ, ಪು. ೧೦೨.

೬೯. ದೀಕ್ಷಿತ್ ಜಿ.ಎಸ್. ಮತ್ತು ಇತರರು (ಸಂ.) ೨೦೦೦ - ಆಚರ್ಯ ಸೋಮದೇವ ವಿಚಲಿತ ನೀತಿ ವಾಕ್ಯಮೃತಂ, ಪು. ೨೧೮.

೭೦. ಕೃಷ್ಣ ಭಟ್ ಕೆ. (ಅನು) ೨೦೦೦ - ಪೂರ್ವೋಕ್ತ, ಪು. ೧೦೮.

೭೧. ಅದೇ, ಪು. ೧೩೯.

೭೨. ಪಾಟೀಲ ಚನ್ನಬಸಪ್ಪ ಎಸ್., ೧೯೯೯ - ಪೂರ್ವೋಕ್ತ, ಪು. ೧೨೬.

೭೩. ಡಾ. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಕರ್ನಾಟಕ ಕೋಟೆಗಳು, ಪು. ೧೨೬.

೭೪. ಪಾಟೀಲ ಬಿ.ಎಂ. (ಸಂ.) ೧೯೯೭ - ಪೂರ್ವೋಕ್ತ, ಪು. ೭೬೭.

೭೫. ಅರುಣಿ ಎಸ್.ಕೆ. ೨೦೦೯ - ಯಾದಗಿರ ಪ್ರದೇಶದ ಕೋಟೆಗಳು, ರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಲೇಖನ (ನೂತನ ವಿದ್ಯಾಲಯ ಗುಲಬರ್ಗಾದಲ್ಲಿ).

೭೬. ಪಾಟೀಲ ಚನ್ನಬಸಪ್ಪ ಎಸ್. ೧೯೯೯ - ಪೂರ್ವೋಕ್ತ, ಪು. ೧೩೪.

ಅಧ್ಯಾಯ-೬

ಗ್ರಾಮ ರಕ್ಷಣಾ ವಾಸ್ತುಶಿಲ್ಪ

ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೆ ಆಳಿರುವ ರಾಜರುಗಳು ತಮ್ಮ ರಾಜ್ಯಧಾನಿಗಳ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸಿಕೊಂಡರು. ಇವುಗಳ ಕುರಿತು ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಗ್ರಾಮಗಳ ರಕ್ಷಣೆಯ ಕಡೆಗೆ ಗಮನ ಹರಿಸಿದಾಗ, ನಮಗೆ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಹುಡೆವುಗಳು (ಗುಡೆ) ಕಂಡುಬರುತ್ತವೆ. ಇವುಗಳ ಕುರಿತು ಇದುವರೆಗೆ ಹೆಚ್ಚಿನ ಅಧ್ಯಯನಗಳು ನಡೆದಿರುವುದಿಲ್ಲ.[೧] ಆದ್ದರಿಂದ ಗ್ರಾಮ ರಕ್ಷಣೆಗಾಗಿ ನಿರ್ಮಿಸಿರುವ 'ರಕ್ಷಣಾ ಕಟ್ಟಡಗಳ' ಕುರಿತು ಅಧ್ಯಯನ ಕೈಗೊಳ್ಳುವುದು ಅಗತ್ಯವಾದ್ದರಿಂದ, ಅವುಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಅವುಗಳ ಜೊತೆಗೆ ಗ್ರಾಮಗಳ ಹೊರಭಾಗದಲ್ಲಿ ನಿರ್ಮಿಸಿರುವ ದ್ವಾರಗಳು, ಗ್ರಾಮ ರಕ್ಷಣಾ ಗೋಡೆಗಳು, ಭಾವಿಗಳು ವಾಡೆಗಳು (ನಿವಾಸಗಳು) ಹಾಗೂ ಇನ್ನಿತರ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳ ಬಗ್ಗೆ ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಕೋಟೆಗಳು ರಾಜ್ಯಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದಂತೆ. ಹುಡೆವುಗಳು ಗ್ರಾಮಗಳನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.[೨] ಆದರೆ ಇವುಗಳ ಕುರಿತು ಯಾವುದೇ ದಾಖಲೆಗಳು ಅಥವಾ ಶಾಸನಗಳು ಲಭ್ಯವಾಗಿಲ್ಲ.

ಐತಿಹಾಸಿಕ ಹಿನ್ನೆಲೆಯುಳ್ಳ ಪ್ರತಿಯೊಂದು ಗ್ರಾಮಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಹುಡೆವುಗಳು ಕಂಡು ಬರುತ್ತವೆ. ಇನ್ನೂ ಕೆಲವು ಗ್ರಾಮಗಳಲ್ಲಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳನ್ನು ನಿರ್ಮಿಸಲಾಗಿದೆ. ಹುಡೆವುಗಳು ಗ್ರಾಮೀಣ ಪ್ರದೇಶದ ಕಲೆ, ವಾಸ್ತುಶಿಲ್ಪ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿ ಹಾಗೂ ಇನ್ನಿತರ ಅಂಶಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತವೆ.[೩] ಹುಡೆವುಗಳು ಭೀಮಾ, ಕೃಷ್ಣಾ ಹಾಗೂ ತುಂಗಭದ್ರ ನದಿಗಳ ತೀರದಲ್ಲಿ ಬರುವ ಗ್ರಾಮಗಳು ಹಾಗೂ ಬಯಲು ಸೀಮೆಯ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಅದರಲ್ಲಿ ವಿಶೇಷವಾಗಿ ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ, ಅಫಜಲ್‌ಪುರ, ಜೇವರ್ಗಿ ಮತ್ತು ಆಳಂದ ತಾಲೂಕಿನ ಗ್ರಾಮಗಳಲ್ಲಿ ಹೆಚ್ಚಿನ ಸಂಖ್ಯೆಯ ಹುಡೆವುಗಳು ಕಂಡು ಬರುತ್ತವೆ. ಆದರೆ ಪ್ರದೇಶದಲ್ಲಿ ಯಾವುದೆ ಪ್ರಮುಖ ಕೋಟೆಗಳು ನಿರ್ಮಾಣಗೊಂಡಿರುವುದಿಲ್ಲ.

೬.೧. ಹುಡೆವುಗಳ ಲಕ್ಷಣಗಳು:

ಗುಲಬರ್ಗಾ ಜಿಲ್ಲೆಯಲ್ಲಿ ಹಲವು ಬಗೆಯ ಹುಡೇವುಗಳಿವೆ. ಅವುಗಳಲ್ಲಿ ಕೆಲವು ಹುಡೆವುಗಳ ರಚನೆ, ವಿನ್ಯಾಸ, ಮತ್ತು ಶೈಲಿಯಲ್ಲಿ ಹೋಲಿಕೆ ಇದೆ. ಇವುಗಳ ನಿರ್ಮಾಣಕ್ಕೆ ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ಬಳಸಿ ಹುಡೆವುಗಳನ್ನು ನಿರ್ಮಿಸಲಾಗಿದೆ. ಅವುಗಳ ಲಕ್ಷಣಗಳು ಈ ಕೆಳಗಿನಂತಿವೆ. ಹುಡೆವುಗಳು ಈ ಕೆಳಗಿನ ಲಕ್ಷಣಗಳನ್ನು ಹೊಂದಿವೆ.

೧. ಹುಡೆವುಗಳನ್ನು ವೃತ್ತಾಕಾರದಲ್ಲಿ, ಚೌಕಾಕೃತಿಯಲ್ಲಿ ಹಾಗೂ ಕೋನಾಕೃತಿಯಲ್ಲಿ ನಿರ್ಮಿಸಲಾಗಿದೆ.

೨. ಪ್ರತಿಯೊಂದು ಹುಡೆವು ೩೦ ರಿಂದ ೪೦ ಅಡಿ ಎತ್ತರ ಹಾಗೂ ಕನಿಷ್ಠ ೧೦ ಅಡಿ ವಿಸ್ತೀರ್ಣವಾಗಿರುತ್ತದೆ.

೩. ಹುಡೆವುಗಳ ಒಟ್ಟು ಎತ್ತರದ ೧/೩ ಭಾಗ ಆಳವಾದ ತಳಪಾಯವನ್ನು ಹೊಂದಿರುತ್ತವೆ.

೪. ಗ್ರಾಮದ ಕೇಂದ್ರ ಭಾಗದಲ್ಲಿ ಅಥವಾ ನಾಲ್ಕು ದಿಕ್ಕಿನಲ್ಲಿ ಇವುಗಳನ್ನು ನಿರ್ಮಿಸಲಾಗುತ್ತದೆ.

೫. ೧೮ ಮತ್ತು ೧೯ನೆಯ ಶತಮಾನದಲ್ಲಿ ನಿರ್ಮಿಸಿರುವ ಹುಡೆವುಗಳ ನಿರ್ಮಾಣಕ್ಕೆ ದೇವಾಲಯದ ಕಂಬಗಳು, ಬೋದಿಗಳು, ಮೂರ್ತಿ ಶಿಲ್ಪಗಳು ಹಾಗೂ ಇನ್ನಿತರ ಕೆತ್ತನೆಯ ಕಲ್ಲುಗಳನ್ನು ಬಳಸಲಾಗಿದೆ.

೬. ಪ್ರತಿಯೊಂದು ಹುಡೆವು ರಚನೆಯಲ್ಲಿ ಮೂರು ಅಥವಾ ನಾಲ್ಕು ಹಂತಗಳಲ್ಲಿ ವಿಭಾಗಿಸಬಹುದು.

೭. ಹುಡೆವುಗಳ ಪ್ರವೇಶದ್ವಾರ ತಳಭಾಗದಿಂದ ೧೦ ರಿಂದ ೧೫ ಅಡಿ ಎತ್ತರದಲ್ಲಿ ಚೌಕಾಕಾರ ಅಥವಾ ಕಮಾನಿನ ಆಕಾರದಲ್ಲಿ ಇರುತ್ತದೆ.

೮. ಹುಡೆವಿನ ಒಳಗಡೆ ಪ್ರವೇಶಿಸಿದ ನಂತರ ಮೇಲೆ ಹತ್ತಲು ಮೆಟ್ಟಲುಗಳಿರುತ್ತವೆ. ಎರಡನೆಯ ಹಂತದ ರಚನೆಯಲ್ಲಿ ಕಮಾನುಗಳ ರಚನೆ ಕಂಡು ಬರುತ್ತವೆ. ಇಲ್ಲಿ ಕಾವಲುಗಾರರಿಗೆ ರಕ್ಷಣಾ ಸ್ಥಳವಿರುತ್ತದೆ.

೯. ಮೂರನೆಯ ಹಂತದ ರಚನೆಯಲ್ಲಿ ಮೇಲ್ಭಾಗಕ್ಕೆ ಹೋಗಲು ಚಿಕ್ಕ ಪ್ರವೇಶದ ಕಿಂಡಿ ಇರುತ್ತದೆ.

೧೦.ಹುಡೆವುಗಳ ಮೇಲ್ಭಾಗದಲ್ಲಿ ಸುತ್ತಲು ರಕ್ಷಣಾ ಗೋಡೆ ಇರುತ್ತದೆ. ಅಲ್ಲದೆ ಅದರ ಮೇಲೆ ತೆನೆಗಳು ಇರುತ್ತವೆ.

೧೧.ಹುಡೆವುಗಳ ನಿರ್ಮಾಣಕ್ಕೆ ಬಳಸಿರುವ ಸಾಮಗ್ರಿಗಳು ಹಾಗೂ ಅದರ ಎತ್ತರದ ಆಧಾರದ ಮೇಲೆ ಕಾಲಮಾನವನ್ನು ಗುರುತಿಸಬಹುದು.

೧೨.ಇವುಗಳ ರಚನೆಗೆ ಸುತ್ತಲು ಕೆಲವು ಭಾಗಗಳಲ್ಲಿ ಕೆತ್ತನೆಯ ಕಲ್ಲುಗಳನ್ನು ಹೂಬಳ್ಳಿಗಳ ರಚನೆ, ಪ್ರಾಣಿ ಪಕ್ಷಿಗಳ ಉಬ್ಬು ಶಿಲ್ಪಗಳ ಕಲ್ಲುಗಳನ್ನು ಬಳಸಲಾಗಿದೆ.

೧೩.ಜಿಲ್ಲೆಯ ಕೆಲವು ಹುಡೆವುಗಳಿಗೆ ಮಾತ್ರ ಗಾರೆಯನ್ನು ಬಳಸಲಾಗಿದೆ. ಹೆಚ್ಚಿನ ಹುಡೆವುಗಳು ಗಾರೆಯನ್ನು ಹೊಂದಿರುವುದಿಲ್ಲ.

೧೪.ಹುಡೆವಿನ ರಚನೆಗೆ ತಳಭಾಗದಲ್ಲಿ ದಪ್ಪನೆಯ ಕಲ್ಲುಗಳು, ಮಧ್ಯದಲ್ಲಿ ಮಧ್ಯಮ ಗಾತ್ರದ ಕಲ್ಲುಗಳು ಹಾಗೂ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಕಲ್ಲುಗಳನ್ನು ಬಳಸಲಾಗಿದೆ.

೧೫.ಹುಡೆವಿನ ಮೇಲ್ಭಾಗದಲ್ಲಿ ಕೋಟೆಗಳಿಗೆ ಇರುವಂತೆ ಅಂಬು ಗಿಂಡಿಗಳು, ವೀಕ್ಷಣಾ ರಂದ್ರಗಳು ಹಾಗೂ ಕಾವಲುಗಾರರಿಗೆ ರಕ್ಷಣಾ ಸ್ಥಳಗಳಿರುತ್ತವೆ.

೬.೨. ಹುಡೆವುಗಳ ಮಹತ್ವ:

ಹುಡೆವುಗಳ ರಚನೆ, ಉದ್ದೇಶ ಮತ್ತು ಮಹತ್ವದ ಕುರಿತು ಯಾವುದೇ ಲಿಖಿತ ದಾಖಲೆಗಳು ಲಭ್ಯವಾಗಿಲ್ಲ. ಆದರೆ ಇವುಗಳ ರಚನೆಯ ವಿಧಾನ ಮತ್ತು ಶೈಲಿಯನ್ನು ಕುರಿತು ತಿಳಿದುಕೊಂಡು ಅವುಗಳ ಮಹತ್ವವನ್ನು ವಿವರಿಸಲಾಗಿದೆ.[೪]

೬.೨.೧. ಗ್ರಾಮಸ್ಥರ ರಕ್ಷಣಾ ಕಟ್ಟಡಗಳು:

ಗುಲಬರ್ಗಾ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಇರುವ ಹುಡೆವುಗಳಿಂದ ಆ ಭಾಗದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದು. ಮಧ್ಯಕಾಲಿನಲ್ಲಿ ವಿಜಯನಗರ ಮತ್ತು ಬಹಮನಿ ರಾಜ್ಯಗಳಿಗೆ ಹಾಗೂ ಬಿಜಾಪುರದ ಆದಿಲ್‌ಶಾಹಿ ರಾಜ್ಯ ಮತ್ತು ಮರಾಠರಿಗೆ ನಿರಂತರ ಸಂಘರ್ಷಗಳು ನಡೆದವು. ಈ ಸಂದರ್ಭದಲ್ಲಿ ಗ್ರಾಮದ ರಕ್ಷಣೆಯು ಒಂದು ಪ್ರಮುಖ ಸವಾಲಾಗಿತ್ತು. ಅವರ ಸೈನಿಕ ಕಾರ್ಯಾಚರಣೆಯಿಂದ ಗ್ರಾಮಗಳು ತುಂಬಾ ಕಷ್ಟನಷ್ಟ ಅನುಭವಿಸಿದವು. ಅಂತಹ ವಿಷಯಗಳನ್ನು ಗ್ರಾಮಸ್ಥರು ಮುಂಚಿತವಾಗಿ ತಿಳಿದುಕೊಂಡು ಅದರ ವಿರುದ್ಧ ತಾತ್ಕಾಲಿಕವಾಗಿ ರಕ್ಷಣೆಯನ್ನು ಪಡೆಯಲು ಇವುಗಳನ್ನು ನಿರ್ಮಿಸಿಕೊಂಡರು ಕೋಟೆಗಳ ರಕ್ಷಣೆಗಾಗಿ ಕಾವಲುಗೋಪುರಗಳು ಅಥವಾ ಕೊತ್ತಳಗಳು ನಿರ್ಮಾಣಗೊಂಡಿರುವುದನ್ನು ಅರಿತುಕೊಂಡು, ಅದೆ ಮಾದರಿಯಲ್ಲಿ ಹುಡೆವುಗಳನ್ನು ನಿರ್ಮಿಸಲಾಯಿತು.[೫] ಚಿನ್ಮಳ್ಳಿಯ ಕೋಟೆಯ ಪೂರ್ವ ಭಾಗದಲ್ಲಿ ಇರುವ ಒಂದು ಕಾವಲುಗೋಪುರವು ಹುಡೆವುವನ್ನು ಹೊಲುತ್ತದೆ. ಇದರ ಒಳಗಡೆ ಮೇಲೆ ಹತ್ತಲು ಮೆಟ್ಟಿಲುಗಳು ಹಾಗೂ ಮೇಲ್ಭಾಗದಲ್ಲಿ ಕಮಾನುಗಳಿವೆ. ಅದೆ ರೀತಿ ಮಳಖೇಡ ಕೋಟೆಯ ಕೇಂದ್ರ ಭಾಗದಲ್ಲಿರುವ ಕಾವಲುಗೋಪುರವು ಹುಡೆವಿನ ರಚನೆಯನ್ನು ಹೋಲುತ್ತವೆ. ಯಾದಗಿರ ಕೋಟೆಯ ಉತ್ತರ ಭಾಗದಲ್ಲಿ ಇರುವ ಎರಡು ಕಾವಲುಗೋಪುರಗಳಿಗೆ ಮೇಲೆ ಹತ್ತಲು ಮೆಟ್ಟಿಲುಗಳು ಹಾಗೂ ಸೈನಿಕರಿಗೆ ಎರಡು ಹಂತದಲ್ಲಿ ರಕ್ಷಣಾ ಸ್ಥಳಗಳಿವೆ. ಇದೆ ಶೈಲಿ ಮುಂದೆ ಹುಡೆವುಗಳಲ್ಲಿ ಮುಂದುವರೆದಿರುವುದು ಕಂಡು ಬರುತ್ತದೆ.

ಹುಡೆವುಗಳು ಎತ್ತರವಾದ ಕಟ್ಟಡಗಳಾಗಿದ್ದು, ಮೇಲ್ಭಾಗದಿಂದ ವೀಕ್ಷಿಸಿದಾಗ ಸುಮಾರು ಮೈಲುಗಳವರೆಗೆ ಇರುವ ಮಾಹಿತಿ ತಿಳಿದುಕೊಳ್ಳಬಹುದು. ಒಂದು ವೇಳೆ ಆಕ್ರಮಣಕಾರರು ಗ್ರಾಮದ ಕಡೆಗೆ ಆಗಮಿಸುತ್ತಿದ್ದರೆ, ಈ ವಿಷಯವನ್ನು ಮುಂಚಿತವಾಗಿ ತಿಳಿದುಕೊಂಡು ಅದಕ್ಕೆ ತಕ್ಕ ಕ್ರಮ ಕೈಗೊಳ್ಳಬಹುದು. ಪ್ರತಿಯೊಂದು ಹುಡೆವಿನ ಮೇಲ್ಭಾಗದಲ್ಲಿ ಹಗಲು-ರಾತ್ರಿ ಕಾವಲುಗಾರರು ಕುಳಿತು ಕಾವಲು ಮಾಡುತ್ತಿದ್ದರು. ಒಂದು ವೇಳೆ ದಾಳಿ ಸಂಭವಿಸಿದರೆ, ಗ್ರಾಮದ ಮುಖ್ಯಸ್ಥರು ತಮ್ಮ ಸಂಪತ್ತಿನೊಂದಿಗೆ ಇವುಗಳಲ್ಲಿ ರಕ್ಷಣೆ ಪಡೆಯುತ್ತಿದ್ದರು. ಏಕೆಂದರೆ ಇವುಗಳ ಸಮೀಪದಲ್ಲಿ ಅವರ ವಾಸದ ಮನೆಗಳು ಇರುತ್ತಿದ್ದವು. ಆಕ್ರಮಣಕಾರರು ಗ್ರಾಮವನ್ನು ಕೊಳ್ಳೆ ಹೊಡೆದು, ಕೊನೆಗೆ ಇದನ್ನು ಮುತ್ತಿದಾಗ ಮೇಲ್ಭಾಗದಿಂದ ಕಾವಲುಗಾರರು ಆಕ್ರಮಣಕಾರರ ಮೇಲೆ ಕಲ್ಲಿನ ಬಂಡೆಗಳನ್ನು ಎತ್ತಿ ಹಾಕುತ್ತಿದ್ದರು.

ಯಾವ ರೀತಿ ಕೋಟೆಯ ಸುತ್ತಲು ಇರುವ ಕೊತ್ತಳಗಳ ಮೇಲಿನಿಂದ ಶತ್ರುಗಳ ಮೇಲೆ ಪ್ರತಿ ದಾಳಿ ನಡೆಯಿಸಲಾಗುತ್ತಿತ್ತೊ, ಅದೇ ರೀತಿಯಲ್ಲಿ ಇದರ ಸುತ್ತಲು ದಾಳಿಗೆ ಪ್ರತಿದಾಳಿ ನಡೆಯುತ್ತಿತ್ತು. ಈ ಎಲ್ಲಾ ಕಾರಣಗಳಿಂದ ಹುಡೆವುಗಳು ಗ್ರಾಮದ ಹಾಗೂ ಗ್ರಾಮಸ್ಥರ ರಕ್ಷಣೆಗಾಗಿ ನಿರ್ಮಿಸಲಾಗುತ್ತಿರುವಂತೆ ಕಂಡು ಬರುತ್ತದೆ.[೬] ಗುಲಬರ್ಗಾ ಜಿಲ್ಲೆಯ ಹಲವು ಹುಡೆಗಳ ಸಮೀಪದಲ್ಲಿ ಗುಡೆಗಳು (ವಾಡೆ) ಕಂಡು ಬರುತ್ತವೆ. ಇವುಗಳಲ್ಲಿ ದೇಸಾಯಿಗಳು, ದೇಶಮುಖರು, ಪಟೇಲರು ಅಥವಾ ಗ್ರಾಮದ ಮುಖ್ಯಸ್ಥರು ವಾಸವಾಗಿರುತ್ತಿದ್ದರು.[೭] ಆಕ್ರಮಣಕಾರರು ಹುಡೆವಿನ ಮೇಲೆ ಹತ್ತಲು ಸಾಧ್ಯವಾಗದಂತೆ ಇವುಗಳನ್ನು ನಿರ್ಮಿಸಲಾಗುತ್ತದೆ. ಕೆಲವು ಸಂದರ್ಭದಲ್ಲಿ ಹುಡೆವಿನ ದ್ವಾರಗಳನ್ನು ಕಲ್ಲಿನಿಂದ ಮುಚ್ಚಲಾಗುತ್ತಿತ್ತು.

೬.೨.೨. ಸಂಕೇತ ರವಾನಿಸುವ ಕೇಂದ್ರಗಳು:

ಜೇವರ್ಗಿ, ಚಿತ್ತಾಪೂರ, ಆಳಂದ ಹಾಗೂ ಅಫಜಲ್‌ಪುರ ತಾಲೂಕುಗಳಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮಗಳಲ್ಲಿ ಹುಡೆವುಗಳು ಕಂಡು ಬರುತ್ತವೆ. ಒಂದು ಗ್ರಾಮದ ಹುಡೆವಿನ ಮೇಲೆ ನಿಂತರೆ ಮತ್ತೊಂದು ಗ್ರಾಮದ ಹುಡೆವು ಕಾಣುತ್ತವೆ. ಈ ರೀತಿ ಗ್ರಾಮಗಳಲ್ಲಿ ಎತ್ತರವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಹುಡೆವುಗಳನ್ನು ನಿರ್ಮಿಸಲಾಗುತ್ತಿತ್ತು.[೮] ಆದ್ದರಿಂದ ಇವುಗಳು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಮಾಹಿತಿ ರವಾನಿಸು ಕಟ್ಟಡಗಳಾಗಿ ಕಾರ್ಯನಿರ್ವಹಿಸುತ್ತಿರುವುದು ಕಂಡು ಬರುತ್ತದೆ. ಆಕ್ರಮಣಕಾರರ ಗ್ರಾಮವನ್ನು ಮುತ್ತಿದಾಗ ಈ ವಿಷಯವನ್ನು ಮುಂದಿನ ಗ್ರಾಮಕ್ಕೆ ತಿಳಿಸಲು ಇವುಗಳನ್ನು ಬಳಸಲಾಗುತ್ತಿತ್ತು. ಈ ರೀತಿ ಒಂದು ವಿಷಯವನ್ನು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ, ಅಲ್ಲಿಂದ ಕೇಂದ್ರ ಸ್ಥಳಕ್ಕೆ ಮಾಹಿತಿ ತಲುಪಿಸಲಾಗುತ್ತಿತ್ತು. ತುರ್ತು ವಿಷಯ ಕುರಿತು ಮುಂದಿನ ಎಲ್ಲಾ ಗ್ರಾಮಗಳಿಗೆ ಮಾಹಿತಿ ನೀಡಲು ಈ ಕಟ್ಟಡಗಳನ್ನು ಬಳಸಲಾಗುತ್ತಿತ್ತು. ಆಕ್ರಮಣಕಾರರು ಆಗಮಿಸುತ್ತಿರುವುದನ್ನು ಕಂಡ ಮೊದಲನೆಯ ಗ್ರಾಮವು ಅದಕ್ಕೆ ತಕ್ಕ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡು, ನಂತರ ಈ ವಿಷಯ ಮುಂದಿನ ಗ್ರಾಮಕ್ಕೆ ಸಂದೇಶ ಕಳುಹಿಸಲಾಗುತ್ತಿತ್ತು. ಹುಡೆವುಗಳ ಒಳಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಕಟ್ಟಿಗೆಗಳ ಸಂಗ್ರಹವಿರುತ್ತದೆ.[೯] ಅಲ್ಲಿಯ ಕಟ್ಟಿಗೆಗೆ ಬೆಂಕಿ ಹಚ್ಚಿದಾಗ ಅದರ ಹೊಗೆಯು ಅತ್ಯಂತ ಎತ್ತರಕ್ಕೆ ಹೋಗಿ ಸುತ್ತಲಿನ ಗ್ರಾಮಗಳಿಗೆ ಇದರ ಕುರಿತು ಮುನ್ನೆಚ್ಚರಿಕೆಯನ್ನು ನೀಡುತ್ತಿದ್ದವು. ಇದರಲ್ಲಿ 'ಹೊಗೆ'ಯು ಒಂದು ಸಂಕೇತಕ್ಕಾಗಿ ಬಳಸಿದರೆ, 'ಬೆಂಕಿಯ ಜ್ವಾಲೆ' ಎದ್ದರೆ ಅದನ್ನು ತುರ್ತು ಪರಿಸ್ಥಿತಿಯ ಸಂಕೇತವಾಗಿ ಬಳಸಲಾಗುತ್ತಿತ್ತು. ಆದ್ದರಿಂದ ಪ್ರತಿಯೊಂದು ಗ್ರಾಮದಲ್ಲಿ ಎತ್ತರವಾದ ಸ್ಥಳಗಳಲ್ಲಿ ಇವುಗಳನ್ನು ನಿರ್ಮಿಸಲಾಗುತ್ತಿತ್ತು.

ಉದಾಹರಣೆಗೆ, ಜೇವರ್ಗಿ ತಾಲೂಕಿನ ಔರಾದ ಹುಡೆವು, ಕಟ್ಟಿಸಂಗಾವಿ ಹುಡೆವು, ಹಸನಾಪುರ ಹುಡೆವು, ಫರತಾಬಾದ ಹುಡೆವಿನ ಮೂಲಕ ಒಂದು ಮಾಹಿತಿ ಅತಿ ಶೀಘ್ರದಲ್ಲಿಯೆ ಕೇಂದ್ರ ಸ್ಥಳಕ್ಕೆ (ಗುಲಬರ್ಗಾ) ತಲುಪುತ್ತಿತ್ತು. ಇದೇ ರೀತಿ ಚಿತ್ತಾಪುರ ಹಾಗೂ ಅಫಜಲ್‌ಪುರ ತಾಲುಕಗಳಲ್ಲಿ ಬರುವ

ಗ್ರಾಮಗಳಲ್ಲಿ ಹುಡೆವುಗಳನ್ನು ನಿರ್ಮಿಸಲಾಗಿದೆ. ಇದರಿಂದ ಜಿಲ್ಲೆಯ ಎಲ್ಲಾ ಗ್ರಾಮಗಳಿಗೆ ಒಂದು ವಿಷಯ ಅತಿ ಶೀಘ್ರದಲ್ಲಿ ತಲುಪುತ್ತಿತ್ತು. ಈ ಹಿನ್ನೆಲೆಯಲ್ಲಿ ಇವುಗಳನ್ನು ಸಂಕೇತ ರವಾನಿಸುವ ಕಟ್ಟಡಗಳಾಗಿ ನಿರ್ಮಿಸಲಾಗಿರುವುದು ಕಂಡು ಬರುತ್ತದೆ. ಇದು ಪ್ರಾಯೋಗಿಕವಾಗಿ ಅತಿ ಸೂಕ್ತ ಎಂದು ಕಂಡುಬರುತ್ತದೆ. 'ಇತಿಹಾಸವು ಮೇಲಿಂದ ಮೇಲೆ ಪುನರಾವರ್ತನೆ ಗೊಳ್ಳುತ್ತದೆ'. ಎನ್ನುವ ಅಭಿಪ್ರಾಯಕ್ಕೆ ಇದೊಂದು ಸೂಕ್ತ ಉದಾಹರಣೆಯಾಗಿದೆ. ೨೧ ನೇಯ ಶತಮಾನದಲ್ಲಿ ಬಳಕೆ ಬಂದ ಮೊಬೈಲಗಳು ಎತ್ತರವಾದ ಟಾವರಗಳ ಸಹಾಯದಿಂದ ಕಾರ್ಯ ನಿರ್ವಹಿಸುತ್ತವೆ. ಈ ಟಾವರಗಳು ಒಂದು ಮೊಬೈಲನಿಂದ ಸಂದೇಶವನ್ನು ಬರಮಾಡಿಕೊಂಡು ಮತ್ತೊಂದು ಮೊಬೈಲಗೆ ಸುದ್ದಿಯನ್ನು ರವಾನಿಸುತ್ತವೆ. ಆದರಂತೆ ಪ್ರತಿಯೊಂದು ಗ್ರಾಮದಲ್ಲಿ ಎತ್ತರವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಟಾವರಗಳನ್ನು ನಿಲ್ಲಿಸಲಾಗುತ್ತದೆ. ಇವುಗಳು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸಂದೇಶ ರವಾನಿಸುವ ಕಾರ್ಯ ಮಾಡುತ್ತವೆ. ಈ ಟಾವರಗಳು (ಎತ್ತರವಾದ ಕಂಬಗಳು) ಹುಡೆವುಗಳ ಮಾದರಿಯಲ್ಲಿ ನಿರ್ಮಿಸಲಾಗಿದೆ. ತಳಭಾಗದಲ್ಲಿ ಅಗಲವಾಗಿದ್ದು ಮೇಲೆ ಹೊಂದತೆ ಕಿರಿದಾಗುತ್ತದೆ. ಅದರ ಮೇಲೆ ಹತ್ತಲು ಮೆಟ್ಟಲುಗಳು ಹಾಗೂ ಮಧ್ಯದಲ್ಲಿ ಅವಶ್ಯವಿರುವ ಉಪಕರಣಗಳನ್ನು ಜೋಡಿಸಲಾಗುತ್ತದೆ. ಈ ಎಲ್ಲಾ ಲಕ್ಷಣಗಳು ನಾವು ಹುಡೆವುಗಳಲ್ಲಿ ಕಾಣುತ್ತೇವೆ. ಹುಡೆವುಗಳ ಮುಂದುವರೆದ ಕಾರ್ಯಚರಣೆಯೇ ಇಂದಿನ ಮೊಬೈಲಗಳ ಬಳಕೆಯಾಗಿರುವಂತೆ ಕಂಡುಬರುತ್ತವೆ. ಮಧ್ಯ ಯುಗದಲ್ಲಿ ಹುಡೆವುಗಳು ಇದೆ ಉದ್ದೇಶದಿಂದ ರಚನೆಗೊಂಡಿರುತ್ತವೆ. ಆದ್ದರಿಂದ ಈ ಎರಡು ವಸ್ತುಗಳ (ಟಾವರ ಮತ್ತು ಹುಡೆ) ಶೈಲಿ ಉದ್ದೇಶ ಸ್ವರೂಪ ಮತ್ತು ವ್ಯಾಪ್ತಿಪ್ರದೇಶ ಒಂದೆಯಾಗಿರುತ್ತದೆ.

೬.೨.೩. ಆಡಳಿತ ನಿರ್ವಹಣೆಯ ಕಟ್ಟಡಗಳು:

ಕೋಟೆಗಳ ರಕ್ಷಣೆಗಾಗಿ "ಕಿಲ್ಲೆದಾರನು" ಇರುವಂತೆ ಹುಡೆವುಗಳ ರಕ್ಷಣೆಗಾಗಿ 'ಹುಡೆದವರು', 'ನಾಯಕವಾಡೆಯವರು' ಎನ್ನುವ ವಿಶೇಷ ವರ್ಗದವರು ಹಲವು ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು.[8] ಹುಡೆಗಳ ರಕ್ಷಣೆಯ ಜೊತೆಗೆ ಇವರು ಗ್ರಾಮದಲ್ಲಿ ಬರುವ ಮತ್ತು ಹೋಗುವವರ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದರು. ಇವರ ಕಾರ್ಯ ವೈಖರಿಯ ಕುರಿತು ನಿರ್ದಿಷ್ಟವಾದ ದಾಖಲೆಗಳು ಇರುವುದಿಲ್ಲ. ಕೇವಲ ಮೌಖಿಕ ಹೇಳಿಕೆಯ ಪ್ರಕಾರ ಇವರ ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. ಜೇವರ್ಗಿ ತಾಲೂಕಿನ ಔರಾದ ಮತ್ತು ಹಸನಾಪೂರ ಗ್ರಾಮಗಳಲ್ಲಿ ಸ್ಥಳಿಯರನ್ನು ವಿಚಾರಿಸಿದಾಗ, ಕೆಲವು ದಶಕಗಳ ಹಿಂದೆ ಹುಡೆವುಗಳ ತಳಭಾಗದಲ್ಲಿರುವ ಕಟ್ಟೆಯನ್ನು ಪಂಚಾಯತಿಗಾಗಿ ಬಳಸಲಾಗುತ್ತಿತ್ತು ಎಂದು ವಿವರಿಸಿದರು. ಅಪರಾಧಿಗಳ ಅಪರಾಧವನ್ನು ಸಾಭಿತುಪಡಿಸುವದಕ್ಕಾಗಿ ಹುಡೆವಿನ ಒಳಭಾಗದಲ್ಲಿರುವ ಗ್ರಾಮ ದೇವತೆಯ ಮೇಲೆ ಆಣೆ ಪ್ರಮಾಣ ಮಾಡಿಸಿ ನಂತರ ತೀರ್ಪು ನೀಡಲಾಗುತ್ತಿತ್ತು. ಈ ರೀತಿ ಗ್ರಾಮಗಳ ಆಡಳಿತ

[illegible]

ನಿರ್ವಹಣೆಗಾಗಿ ಇವುಗಳನ್ನು ಬಳಸಲಾಗುತ್ತಿರುವುದು ಕಂಡು ಬರುತ್ತದೆ. ಇಲ್ಲಿ ಕಾರ್ಯನಿರ್ವಹಿಸುವ ಜನ ಪ್ರತಿನಿಧಿಗಳಿಗೆ 'ಹುಡೆದವರು' 'ನಾಯಕವಾಡೆ'ದವರು ಎಂದು ಕರೆಯಲಾಗುತ್ತದೆ. ಇಂದಿಗೂ ಕೆಲವು ಗ್ರಾಮಗಳಲ್ಲಿ 'ನಾಯಕವಾಡಿ' ವರ್ಗದವರು ಕಂಡು ಬರುತ್ತಾರೆ. ಅವರ ಹೇಳಿಕೆಯ ಪ್ರಕಾರ ಇವುಗಳ ಮೇಲ್ವಿಚಾರಣೆ ಮತ್ತು ಇಲ್ಲಿಯ ಕಾರ್ಯನಿರ್ವಹಣೆ ಅವರಿಗೆ ಸಂಬಂಧಿಸಿರುವಂತೆ ಕಂಡು ಬರುತ್ತದೆ.[೧೦]

ಹುಡೆವುಗಳ ಕುರಿತು ಪ್ರಾರಂಭದ ಕೆಲವು ಲೇಖನಗಳು ಹಾಗೂ ಬರವಣಿಗೆಗಳಲ್ಲಿ ಇವುಗಳು ವೃತ್ತಾಕಾರದಲ್ಲಿರುವುದರಿಂದ ದಾನ್ಯ ಸಂಗ್ರಹದ ಕಟ್ಟಡಗಳು ಎಂದು ಗುರುತಿಸಲಾಗಿದೆ. ಏಕೆಂದರೆ ಕೋಟೆಯಲ್ಲಿ ಇರುವ ಕಣಜಗಳಂತೆ ಕಂಡು ಬರುವುದರಿಂದ ಇವುಗಳನ್ನು ಕಣಜ ಎಂದು ಗುರುತಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಕೃಷಿಯು ಪ್ರಮುಖ ಬೇಸಾಯವಾಗಿರುವುದರಿಂದ ಬೆಳೆದ ಹೆಚ್ಚಿನ ಬೆಳೆಯನ್ನು ಗ್ರಾಮದ ರೈತರ ಇದರಲ್ಲಿ ಸಂಗ್ರಹಿಸಿಡುತ್ತಿದ್ದರೆಂದು ಹೇಳಲಾಗಿದೆ. ಆದರೆ ಇವುಗಳ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸದೆ, ಅಥವಾ ಇದರ ಒಳಗಡೆ ಪ್ರವೇಶಿಸಿ ಮೇಲೆ ಹತ್ತಿ ವೀಕ್ಷಿಸದೆ ಕೇವಲ ದೂರದಿಂದ ನೋಡಿ ಕಣಜಗಳೆಂದು ಹೇಳಿರುವಂತೆ ಕಂಡು ಬರುತ್ತದೆ. ಹುಡೆವುಗಳ ಶೈಲಿ ಮತ್ತು ಅವುಗಳ ರಚನಾ ಕಾಲಮಾನವನ್ನು ಆಧಾರವಾಗಿಟ್ಟುಕೊಂಡು ವೀಕ್ಷಿಸಿದಾಗ ಇವುಗಳು ಗ್ರಾಮರಕ್ಷಣಾ ಕಟ್ಟಡಗಳೆಂದು ಗುರುತಿಸಲಾಗಿದೆ. ಏಕೆಂದರೆ ೧೫ನೆಯ ಶತಮಾನದಿಂದ ೧೯ನೆಯ ಶತಮಾನದಲ್ಲಿ ಗ್ರಾಮಗಳ ರಕ್ಷಣೆ ಅವಶ್ಯವಾಗಿತ್ತು. ಇಲ್ಲಿಯ ಅಧಿಕಾರಿಗಳು ತಮ್ಮ ಗ್ರಾಮಗಳ ರಕ್ಷಣೆಗಾಗಿ ಇಂತಹ ಕಟ್ಟಡಗಳನ್ನು ನಿರ್ಮಿಸಿದರು.[೧೧] ಆದ್ದರಿಂದ ಈ ಕಟ್ಟಡಗಳು ಗ್ರಾಮೀಣ ರಕ್ಷಣಾ ಸ್ಮಾರಕಗಳೆಂದು ಗುರುತಿಸಲಾಗಿದೆ.

ಹುಡವುಗಳ ರಚನೆಯನ್ನು ವೀಕ್ಷಿಸಿದರೆ, ಪ್ರಾರಂಭದ ೧೦ ರಿಂದ ೧೫ ಅಡಿ ಎತ್ತರದವರೆಗೆ ಕಲ್ಲು ಮತ್ತು ಮಣ್ಣಿನಿಂದ ತುಂಬಲಾಗುತ್ತದೆ. ಎರಡನೆಯ ಹಂತದ ಪ್ರಾರಂಭದಲ್ಲಿ ಮೇಲೆ ಹತ್ತಲು ೧೫ ರಿಂದ ೨೦ ಮೆಟ್ಟಿಲುಗಳು ಇರುತ್ತವೆ. ಒಂದು ಭಾಗದ ಗೋಡೆಗೆ ಮೆಟ್ಟಿಲುಗಳು ಅಂಟಿಕೊಂಡಿರುವುದರಿಂದ ಅದರ ಉಳಿದ ಭಾಗ ಸಹ ಪೊಳ್ಳಾಗಿ ಇರುವುದಿಲ್ಲ ಮೂರನೆಯ ಹಂತದಲ್ಲಿ ೮ ರಿಂದ ೧೦ ಅಡಿ ಎತ್ತರದ ಕಮಾನುಗಳಿಂದ ಕೂಡಿರುವ ಖಾಲಿ ಸ್ಥಳವಿರುತ್ತದೆ. ಇದರಲ್ಲಿ ಸುಮಾರು ೨೫ ರಿಂದ ೩೦ ಜನರಿಗೆ ಸ್ಥಳಾವಕಾಶ ಇರುತ್ತದೆ. ಇಲ್ಲಿ ದಾನ್ಯ ಸಂಗ್ರಹಕ್ಕೆ ಅವಕಾಶವಿರುವುದಿಲ್ಲ. ಕೊನೆಯ ಹಂತದಲ್ಲಿ ಹುಡೆವಿನ ಮೇಲ್ಭಾಗಕ್ಕೆ, ಹತ್ತಲು ಯಾವುದೆ ಮೆಟ್ಟಿಲುಗಳು ಇರುವುದಿಲ್ಲ. ಗೋಡೆಗೆ ಅಂಟಿಕೊಂಡು ಮೇಲೆ ಹತ್ತಿದಾಗ ಅಲ್ಲಿ ೪ ರಿಂದ ೬ ಅಡಿ ಎತ್ತರದ ರಕ್ಷಣಾ ಗೋಡೆ ಮತ್ತು ಕಾವಲುಗಾರರಿಗೆ ರಕ್ಷಣಾ ಸ್ಥಳ ಇರುತ್ತದೆ. ಈ ಅಂಶವನ್ನು ಪ್ರಮುಖವಾಗಿ ಇಟ್ಟುಕೊಂಡು ಇವುಗಳನ್ನು ರಕ್ಷಣಾ ಸಂಬಂಧಿ ಕಟ್ಟಡಗಳೆಂದು ಗುರುತಿಸಲಾಗಿದೆ.

೬.೩. ಗುಲಬರ್ಗಾ ಜಿಲ್ಲೆಯ ಪ್ರಮುಖ ಹುಡೆವುಗಳು

೬.೩.೧. ಫರಹತಾಬಾದ:

ಗುಲಬರ್ಗಾ ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೦ ಕೀ.ಮಿ. ದೂರದ ಈ ಗ್ರಾಮದಲ್ಲಿ ಹಲವು ಐತಿಹಾಸಿಕ ಅವಶೇಷಗಳಿವೆ. ಗುಲಬರ್ಗಾ ಜೇವರ್ಗಿಯ ರಸ್ತೆಯ ಮಧ್ಯದಲ್ಲಿ ಪ್ರಮುಖ ರಸ್ತೆಯಿಂದ ಒಂದು ಕೀ.ಮಿ. ಒಳಗಡೆ ಈ ಗ್ರಾಮವಿದೆ. ಫರಹತಾಬಾದನಲ್ಲಿ ಒಟ್ಟು ಐದು ಹುಡೆವುಗಳಿವೆ. ಅದರಲ್ಲಿ ಹಳೆಯ ಗ್ರಾಮವನ್ನು ಆವರಿಸಿಕೊಂಡ ರಕ್ಷಣಾ ಗೋಡೆಯ ನಾಲ್ಕು ದಿಕ್ಕಿನಲ್ಲಿ ನಾಲ್ಕು ಕಾವಲುಗೋಪುರಗಳಂತೆ ಹುಡೆವುಗಳನ್ನು ರಚಿಸಲಾಗಿದೆ. ಇವುಗಳು ರಕ್ಷಣಾ ಗೋಡೆ (ಕೋಟೆ)ಗೆ ಅಂಟಿಕೊಂಡಿರುವುದರಿಂದ ಅವುಗಳನ್ನು ಕೊತ್ತಳಗಳೆಂದು ಗುರುತಿಸಿ, ಕೋಟೆಗಳ ಅಧ್ಯಾಯದಲ್ಲಿ ಇವುಗಳ ಕುರಿತು ಚರ್ಚಿಸಲಾಗಿದೆ. ಅಭ್ಯಸಿಸಲಾಗಿದೆ. ಇವುಗಳನ್ನು ಹೊರತು ಪಡಿಸಿ, ಗ್ರಾಮದ ಕೇಂದ್ರ ಭಾಗದಲ್ಲಿ ಆಕರ್ಷಕವಾದ ಮತ್ತು ವಿಶಾಲವಾದ ಹುಡೆವು ಇದೆ.

ಐದು ಅಡಿ ಎತ್ತರವಾದ ಕಟ್ಟೆಯ ಮೇಲೆ ಇದನ್ನು ನಿರ್ಮಿಸಲಾಗಿದೆ. ಇದರ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಹುಡೆವಿನ ಪೂರ್ವ ಭಾಗದ ರಚನೆಯು ನೇರವಾಗಿದ್ದು, ಇದರ ಪಶ್ಚಿಮ ಭಾಗ ಅರ್ಧವೃತ್ತಾಕಾರ ಅಥವಾ ಕುದುರೆ ಲಾಳಾಕಾರದಲ್ಲಿ ನಿರ್ಮಿಸಲಾಗಿದೆ. ಪೂರ್ವ ದಿಕ್ಕಿನಲ್ಲಿ ಹದಿನೈದು ಅಡಿ ಎತ್ತರದ ಮೇಲೆ ಪ್ರವೇಶದ್ವಾರವಿದೆ. ಎರಡನೆಯ ಹಂತದ ರಚನೆಯಲ್ಲಿ ಕಾವಲುಗಾರರಿಗೆ ಅತ್ಯಂತ ವಿಶಾಲವಾದ ಸ್ಥಳವಿದ್ದು, ಅದರ ಕೇಂದ್ರದಲ್ಲಿ ಚೌಕಾಕಾರದ ಕಲ್ಲಿನಿಂದ ನಿರ್ಮಿಸಿದ ೧೦ ಅಡಿ ಎತ್ತರದ ಕಂಬವಿದೆ. ಕಂಬಕ್ಕೆ ಅಂಟಿಕೊಂಡಿರುವಂತೆ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇದರ ಒಳಗಡೆ ಕಾವಲುಗಾರರಿಗೆ ಸ್ಥಳಾವಕಾಶವಿದೆ. ಹುಡೆವಿನ ಗೋಡೆಯ ಸುತ್ತಲು ವೀಕ್ಷಣಾ ರಂಧ್ರಗಳು, ಜಾಲಂಧ್ರಗಳಿವೆ. ಮೇಲ್ಭಾಗದಲ್ಲಿ ಅಂದರೆ ಮೂರನೆಯ ಹಂತದಲ್ಲಿ ಹುಡೆವಿನ ಮೇಲ್ಭಾಗಕ್ಕೆ ಸುತ್ತಲು ರಕ್ಷಣಾ ಗೋಡೆ ಹಾಗೂ ವೀಕ್ಷಣಾ ರಂಧ್ರಗಳಿವೆ. ಈ ರೀತಿಯ ವಿಶೇಷ ಶೈಲಿಯ ಹುಡೆವು ಜಿಲ್ಲೆಯ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ. ನೋಡಲು ಅತ್ಯಂತ ಆಕರ್ಷಕವಾಗಿದ್ದು, ಇದರ ರಚನೆಗೆ ಬಳಸಿರುವ ಕಲ್ಲುಗಳು ಒಂದರ ಮೇಲೆ ಒಂದು ಕ್ರಮಬದ್ದವಾಗಿ ಜೋಡಿಸಿರುವಂತೆ ಕಂಡು ಬರುತ್ತದೆ.

ಫರಹತಾಬಾದ ಹುಡೆವಿನ ಮುಂಭಾಗದಲ್ಲಿ ಆಯತಾಕಾರದ ದೊಡ್ಡ ಭಾವಿ ಇದೆ. ಸುಮಾರು ೨೫ ರಿಂದ ೪೦ ಅಡಿ ಆಳವಾಗಿರುವ ಈ ಭಾವಿಯನ್ನು ಕಟೆದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಗ್ರಾಮದ ಕೇಂದ್ರ ಭಾಗದಲ್ಲಿ ಹುಡೆವು ಮತ್ತು ಭಾವಿಯನ್ನು ನೋಡಿದರೆ ಇದೊಂದು ಪ್ರಮುಖ ಸ್ಥಳವಾಗಿರುವಂತೆ ಕಂಡು ಬರುತ್ತದೆ. ಫರಹತಾಬಾದನಲ್ಲಿ ಕೋಟೆ, ಹುಡೆವು ಹಾಗೂ ಅರಮನೆಗಳ ಅವಶೇಷಗಳಿದ್ದರೂ ಇಲ್ಲಿ ಆಳ್ವಿಕೆ ಮಾಡಿರುವ ಯಾವುದೇ ಮನೆತನಗಳ ಬಗ್ಗೆ ದಾಖಲೆಗಳು ಲಭ್ಯವಾಗಿರುವದಿಲ್ಲ.

ಗ್ರಾಮದ ದಕ್ಷಿಣ ಭಾಗದಲ್ಲಿ ೧೫ ಅಡಿಯ ಎತ್ತರದ ಮತ್ತೊಂದು ಹುಡೆವು ಉಳಿದುಕೊಂಡಿದೆ. ಕೋಟೆಯ ಗೋಡೆಗೆ ಅಂಟಿಕೊಂಡಿರುವ ಈ ಸ್ಮಾರಕ ಕೊತ್ತಳ ಹಾಗೂ ಹುಡೆವಿನ ಲಕ್ಷಣಗಳನ್ನು ಹೊಂದಿದೆ. ಇದರ ಮೇಲ್ಭಾಗವು ಸಂಪೂರ್ಣವಾಗಿ ನಾಶಹೊಂದಿದ್ದು, ಕೇವಲ ಮೊದಲನೆಯ ಹಂತದ ರಚನೆ ಮಾತ್ರ ಉಳಿದುಕೊಂಡಿದೆ. ಇದರ ಪ್ರವೇಶದ್ವಾರ, ಮೆಟ್ಟಿಲು ಮತ್ತು ರಚನಾ ವಿಧಾನಗಳನ್ನು ವೀಕ್ಷಿಸಿದಾಗ ಇದೊಂದು ಪರಿಪೂರ್ಣವಾದ ಹುಡೆವು ಎಂದು ಕಂಡುಬರುತ್ತದೆ. ಆದರೆ ಇಲ್ಲಿ ಕಂಡು ಬರುವ ಗಮನಾರ್ಹ ಅಂಶವೆಂದರೆ ಗ್ರಾಮೀಣ ಪ್ರದೇಶದಲ್ಲಿ ನಿರ್ಮಿಸಿರುವ ಗ್ರಾಮ ರಕ್ಷಣಾ ಕೋಟೆಯಲ್ಲಿ ಕಾವಲುಗೋಪುರ ಅಥವಾ ಕೊತ್ತಳಗಳು "ಹುಡೆವಿನ" ಶೈಲಿಯಲ್ಲಿರುವುದು ಕಂಡು ಬರುತ್ತವೆ. ಆದ್ದರಿಂದ ಸಾಮಾನ್ಯವಾಗಿ ಎಲ್ಲಾ ಗ್ರಾಮ ರಕ್ಷಣಾ ಗೋಡೆಯ ಮಧ್ಯದಲ್ಲಿ ಹುಡೆವುಗಳಿರುತ್ತವೆ.

೬.೩.೨. ಹಾಗರಗುಂಡಗಿ:

ಈ ಗ್ರಾಮವು ಫರಹತಾಬಾದನಿಂದ ನೈರುತ್ಯದಿಕ್ಕಿಗೆ ೬ ಕೀ.ಮಿ. ದೂರದಲ್ಲಿದ್ದು. ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನದಲ್ಲಿ ಶಿವಶರಣರ ಆಶ್ರಯ ತಾಣವಾದ ಈ ಗ್ರಾಮಕ್ಕೆ ಪ್ರಾಚೀನ ಪರಂಪರೆ ಇದೆ. ಈ ಕುರಿತು ಇದುವರೆಗೆ ಯಾವುದೆ ಶಾಸನಗಳು ಲಭ್ಯವಾಗಿಲ್ಲ. ಪ್ರಸ್ತುತ ಗ್ರಾಮದಲ್ಲಿ ಎರಡು ಹುಡೆವುಗಳು ಉಳಿದುಕೊಂಡಿವೆ.[೧೨] ಪಶ್ಚಿಮ ಭಾಗದಲ್ಲಿರುವ ಹುಡೆವು ವೃತ್ತಾಕಾರದಲ್ಲಿದ್ದರೆ, ದಕ್ಷಿಣ ಭಾಗದ ಹುಡೆವು ಚೌಕಾಕಾರದಲ್ಲಿದೆ. ಪಶ್ಚಿಮ ಭಾಗದ ಹುಡೆವಿನ ೧೫ ಅಡಿ ಎತ್ತರದಲ್ಲಿ ಪ್ರವೇಶ ದ್ವಾರವಿದೆ. ಒಳಗಡೆ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಇದರ ಕೊನೆಯ ಹಂತದ ರಚನೆಗೆ ಕೆತ್ತನೆಯ ಕಲ್ಲುಗಳನ್ನು ಬಳಸಲಾಗಿದೆ. ಮೇಲ್ಭಾಗದಲ್ಲಿ ವೃತ್ತಾಕಾರದ ರಕ್ಷಣಾ ಗೋಡೆ ಹಾಗೂ ಜಾಲಂದ್ರಗಳಿವೆ. ದಕ್ಷಿಣ ಭಾಗದ ಹುಡೆವು ೨೦ ಅಡಿ ಉದ್ದ ೨೦ ಅಡಿ ಅಗಲದ ಚೌಕಾಕೃತಿಯಲ್ಲಿದೆ. ೫ ಅಡಿ ಎತ್ತರದ ತಳಪಾಯದ ಮೇಲೆ ಇದನ್ನು ನಿರ್ಮಿಸಲಾಗಿದೆ. ಹತ್ತು ಅಡಿಯ ಎತ್ತರದ ನಂತರದ ಎರಡನೆಯ ಹಂತದ ರಚನೆಯಲ್ಲಿ ೧೨ ಮೆಟ್ಟಿಲುಗಳಿವೆ. ಮೂರನೆಯ ಹಂತದಲ್ಲಿ ೧೫ ಅಡಿ ಎತ್ತರದ ಗೋಡೆಯಿದೆ. ಅದರ ಕೇಂದ್ರ ಭಾಗದಲ್ಲಿಯ ರಚನೆಯು ಸಂಪೂರ್ಣವಾಗಿ ನಾಶಗೊಂಡಿದ್ದು, ಕೇವಲ ಗೋಡೆಯು ಮಾತ್ರ ಉಳಿದುಕೊಂಡಿದೆ. ಗೋಡೆಯ ಮೇಲ್ಭಾಗದಲ್ಲಿ ವೀಕ್ಷಣಾ ಕಿಂಡಿಗಳು ಮತ್ತು ಜಾಲಂದ್ರಗಳಿವೆ.

ಸ್ಥಳಿಯರ ಅಭಿಪ್ರಾಯದಂತೆ ಗ್ರಾಮದಲ್ಲಿ ಇನ್ನೂ ಎರಡು ಹುಡೆವುಗಳಿದ್ದವು. ಅವುಗಳು ಸಂಪೂರ್ಣವಾಗಿ ನಾಶಗೊಂಡಿವೆ. ಆದರೆ ಅವರು ಸೂಚಿಸಿದ ಸ್ಥಳವನ್ನು ವೀಕ್ಷಿಸಿದಾಗ ಅಲ್ಲಿ ನಮಗೆ ಹುಡೆವಿಗೆ ಸಂಬಂಧಿಸಿದ ಹಲವು ಬಗೆಯ ಕುರುಹುಗಳು ಪತ್ತೆಯಾದವು. ಇವುಗಳ ಆಧಾರದ ಮೇಲೆ ಗ್ರಾಮದ ರಕ್ಷಣೆಗಾಗಿ ಸುತ್ತಲು ನಾಲ್ಕು ಹುಡೆವುಗಳು ನಿರ್ಮಿಸಿರುವುದಾಗಿ ಕಂಡು ಬರುತ್ತದೆ.

ಹಾಗರಗುಂಡಗಿಯ ಪೂರ್ವ ದಿಕ್ಕಿನಲ್ಲಿ ಒಂದು ಪ್ರವೇಶ ದ್ವಾರವಿದೆ. ಇದನ್ನು 'ಅಗಸಿ' ಎಂದು ಕರೆಯುತ್ತಾರೆ. ಇದು ೧೫ ಅಡಿ ಅಗಲ, ೨೫ ಅಡಿ ಎತ್ತರದ ಕಮಾನಿನ ಆಕಾರದಲ್ಲಿದೆ. ಗ್ರಾಮಗಳ

ರಕ್ಷಣೆಯಲ್ಲಿ ಇವುಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಇನ್ನೂ ಕೆಲವು ಗ್ರಾಮಗಳಲ್ಲಿ ಇದರ ಎರಡು ಬದಿಗೆ ಅಂಟಿಕೊಂಡಿರುವಂತೆ ರಕ್ಷಣಾ ಗೋಡೆ (ಕೋಟೆ)ಯನ್ನು ನಿರ್ಮಿಸಲಾಗುತ್ತದೆ. ಜಿಲ್ಲೆಯಲ್ಲಿ ಕೆಲವು ಗ್ರಾಮಗಳ ಸುತ್ತಲು ರಕ್ಷಣಾ ಗೋಡೆ ಕಂಡು ಬರುತ್ತದೆ. ಆದರೆ ಈ ಗೋಡೆಯ ಹೆಚ್ಚಿನ ಭಾಗ ನಾಶಗೊಂಡಿದೆ. ಏಕೆಂದರೆ ಗ್ರಾಮಗಳು ವಿಸ್ತಾರಗೊಳ್ಳುತ್ತಾ ಹೊಂದಂತೆ ಗ್ರಾಮಸ್ಥರು ಹುಡೆವುಗಳ ಕಲ್ಲು ಮಣ್ಣಿನಿಂದ ತಮ್ಮ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ.

೬.೩.೩. ಕೌವಲಗಾ (ಬಿ):

ಫರಹತಾಬಾದನಿಂದ ನೈರುತ್ಯಕ್ಕೆ ೧೫ ಕೀ.ಮಿ. ದೂರದಲ್ಲಿ ಚಿನ್ಮಳ್ಳಿ ರಸ್ತೆಯ ಎಡಭಾಗಕ್ಕೆ ಕೌಲಗಾ (ಕೆ) ಬಲಭಾಗಕ್ಕೆ ೧ ಕಿ.ಮಿ. ಒಳಗಡೆ ಕೌವಲಗಾ (ಬಿ) ಗ್ರಾಮವಿದೆ. ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಿಸಿದ ಕೆಲವು ಅವಶೇಷಗಳು ಲಭ್ಯವಾಗಿವೆ. ಇವುಗಳಿಗಿಂತ ಪೂರ್ವದಲ್ಲಿ ನಿರ್ಮಿಸಿರುವ ಗ್ರಾಮ ರಕ್ಷಣಾ ಗೋಡೆಯಿದೆ. ಆದರೆ ಪ್ರಸ್ತುತವಾಗಿ ಕೋಟೆಯ ಕೆಳಹಂತದ ರಚನೆ ಮಾತ್ರ ಉಳಿದಿದ್ದು. ಮೇಲಿನ ಭಾಗವೆಲ್ಲ ನಾಶ ಹೊಂದಿದೆ. ಗ್ರಾಮದ ಪೂರ್ವ ದಿಕ್ಕಿನಲ್ಲಿ ಸುಮಾರು ೨೦೦ ಮೀಟರ ಉದ್ದನೆಯ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಕೋಟೆಯ ಒಳಭಾಗದಲ್ಲಿ ಕಾವಲುಗೋಪುರಗಳು, ಕಾವಲುಗಾರರ ನಿವೇಶನಗಳು ಹಾಗೂ ಗುಪ್ತದ್ವಾರಗಳ ರಚನೆಯು ಕಂಡು ಬರುತ್ತದೆ. ಈ ಕೋಟೆಯ ನಿರ್ಮಾಣಕ್ಕೆ ಸ್ಥಳಿಯವಾಗಿ ಲಭ್ಯವಾಗುವ ಕತ್ತನೆ ಇಲ್ಲದ ಒರಟು ಕಲ್ಲುಗಳನ್ನು ಬಳಸಲಾಗಿದೆ. ಇದರ ತಳ ಭಾಗವು ದಪ್ಪವಾಗಿದ್ದು ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗುತ್ತದೆ. ಇದು ಕೋಟೆಯ ಎಲ್ಲಾ ಲಕ್ಷಣಗಳನ್ನು ಹೊಂದಿದೆ.

ಗ್ರಾಮದ ಹೊರವಲಯದಲ್ಲಿ ಚೌಕಾಕೃತಿಯ ೪೦ ಅಡಿ ಎತ್ತರದ ಕಟ್ಟಡವಿದೆ. ೧೫ ಅಡಿ ಉದ್ದ, ೧೫ ಅಡಿ ಅಗಲದ ಈ ಕಟ್ಟಡದ ಒಳ ಭಾಗದಲ್ಲಿ ಯಾವುದು ರಚನೆ ಕಂಡು ಬರುವುದಿಲ್ಲ. ಅದರ ದಕ್ಷಿಣ ಮತ್ತು ಪಶ್ಚಿಮ ಭಾಗದ ಅರ್ದ ಗೋಡೆಯು ಅವನತಿ ಹೊಂದಿದೆ. ಉಳಿದ ಎರಡು ಭಾಗದ ಗೋಡೆಯು ಬೀಳುವ ಹಂತದಲ್ಲಿದೆ. ಹೊಲದಲ್ಲಿ ನಿರ್ಮಿಸಿರುವ ಈ ಕಟ್ಟಡವನ್ನು ಕಳಕಿ ಅಥವಾ ಕಟಕಿಗಳನ್ನು (ಸೌದೆ) ಹಾಕಲು ಬಳಸುತ್ತಿದ್ದರೆ. ಆದ್ದರಿಂದ ಈ ಕಟ್ಟಡದ ಬಗ್ಗೆ ಸ್ಪಷ್ಟವಾಗಿ ಹೇಳುವುದು ಅಸಾಧ್ಯವಾಗಿದೆ. ಒಟ್ಟಿನಲ್ಲಿ ಇದರ ಹೊರ ಲಕ್ಷಣಗಳಿಂದ ಹುಡೆವಿನಂತೆ ಕಂಡು ಬಂದರೆ ಒಳಗಡೆ ಅಂತಹ ಯಾವ ಲಕ್ಷಣಗಳು ಕಂಡು ಬರುವುದಿಲ್ಲ.

೬.೪. ಜೇವರ್ಗಿ ತಾಲೂಕು:

೬.೪.೧. ಕಟ್ಟಿಸಂಗಾವಿ:

ಕಟ್ಟಿಸಂಗಾವಿಯು ಜೇವರ್ಗಿ ತಾಲೂಕಿನಿಂದ ಉತ್ತರಕ್ಕೆ ೬ ಕಿ.ಮೀ. ದೂರದಲ್ಲಿದೆ. ಭೀಮಾನದಿಯ ತೀರದಲ್ಲಿ ಬರುವ ಈ ಗ್ರಾಮವು ಫಲವತ್ತಾದ ಭೂಮಿಯನ್ನು ಹೊಂದಿದೆ. ಅಲ್ಲದೆ ಇದೊಂದು

ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಗ್ರಾಮವಾಗಿದೆ. ೧೨ನೆಯ ಶತಮಾನದ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿರುವ ದೇವಾಲಯವಿದೆ. ಗ್ರಾಮದ ಉತ್ತರ ಭಾಗದಲ್ಲಿ ನದಿಗೆ ಹೊಂದಿಕೊಂಡಿರುವಂತೆ ಅವಶ್ಯವಿರುವ ಕಡೆಯಲ್ಲಿ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ.[೧೩] ಇನ್ನೂಳಿದ ಕೆಲವು ಭಾಗಗಳಲ್ಲಿ ನದಿಯ ನೀರು ಗ್ರಾಮವನ್ನು ಪ್ರವೇಶಿಸದಂತೆ ಕಟ್ಟೆಗಳನ್ನು ಕಟ್ಟಲಾಗಿದೆ. ಆದ್ದರಿಂದ ಈ ಗ್ರಾಮಕ್ಕೆ ಕಟ್ಟಿಸಂಗಾವಿ ಎಂದು ಹೆಸರು ಬಂದಿದೆ.

ಕಟ್ಟಿಸಂಗಾವಿ ಗ್ರಾಮದ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳನ್ನು ನಿರ್ಮಿಸಲಾಗಿದೆ.[೧೪] ಅವುಗಳಲ್ಲಿ ಮೂರು ಹುಡೆವು ನಾಶಹೊಂದಿದ್ದು, ಪ್ರಸ್ತುತ ಒಂದು ಹುಡೆವು ಮಾತ್ರ ಉಳಿದುಕೊಂಡಿದೆ. ಜೇವರ್ಗಿ ತಾಲೂಕಿನಲ್ಲಿ ಬರುವ ಆಕರ್ಷಕ ಹುಡೆವುಗಳಲ್ಲಿ ಇದು ಒಂದಾಗಿದೆ. ನದಿಯ ಸಮೀಪದಲ್ಲಿರುವ ಈ ರಕ್ಷಣಾ ಕಟ್ಟಡವು ೩೦ ಅಡಿ ಎತ್ತರ, ೧೦ ಅಡಿ ವಿಸ್ತೀರ್ಣ ಹೊಂದಿದ್ದು ವೃತ್ತಾಕರದಲ್ಲಿದೆ. ಪೂರ್ವ ದಿಕ್ಕಿಗೆ ಮುಖ ಮಾಡಿರುವಂತೆ ೩ ಅಡಿ ಉದ್ದ, ಹಾಗೂ ೪ ಅಡಿ ಎತ್ತರದ ಪ್ರವೇಶದ್ವಾರವಿದೆ. ಒಳಗಡೆ ಬಲಗೋಡೆಗೆ ಅಂಟಿಕೊಂಡಿರುವಂತೆ, ಒಟ್ಟು ೨೦ ಮೆಟ್ಟಿಲುಗಳಿವೆ. ಪ್ರತಿ ಒಂದು ಅಡಿ ಎತ್ತರದಲ್ಲೊಂದು ಮೆಟ್ಟಿಲುಗಳಿವೆ. ಮೂರನೆಯ ಹಂತದ ರಚನೆಯಲ್ಲಿ ಕೇಂದ್ರ ಭಾಗದಲ್ಲಿ ಕಲ್ಲಿನಿಂದ ನಿರ್ಮಿಸಿರುವ ೮ ಅಡಿ ಎತ್ತರದ ಒಂದು ಕಂಬವಿದೆ. ಇದರ ಮೇಲೆ ಛತ್ತು (ಮೇಲ್ಛಾವಣಿ) ಹಾಕಲಾಗಿದೆ. ಈ ಕಂಬದಿಂದ ವೃತ್ತಾಕಾರದಲ್ಲಿರುವ ಗೋಡೆಗೆ ಅಂಟಿಕೊಂಡಿರುವಂತೆ ಒಟ್ಟು ೧೪ ಕಮಾನುಗಳಿವೆ. ಅತ್ಯಂತ ಆಕರ್ಷಕ ರೀತಿಯಲ್ಲಿ ನಿರ್ಮಿಸಿರುವ ಕಮಾನುಗಳು ಫಿರೋಜಾಬಾದ ಕೋಟೆಯ ಕಮಾನುಗಳನ್ನು ಹೋಲುತ್ತವೆ. ಈ ರೀತಿ ಸುಂದರವಾದ ಮತ್ತು ಆಕರ್ಷಕವಾದ ಹಲವು ಕಮಾನುಗಳು ಮತ್ತೆ ಯಾವ ಹುಡೆವುಗಳಲ್ಲಿ ಕಂಡು ಬರುವುದಿಲ್ಲ.

ಕಮಾನುಗಳಿಂದ ಏಳು ಅಡಿ ಎತ್ತರದಲ್ಲಿ ಮಣ್ಣಿನ ಮೇಲ್ಛಾವಣಿ (ಛತ್ತು) ಇದೆ. ಇದರ ಮೇಲೆ ಹತ್ತಲು ಗೋಡೆಗೆ ಅಂಟಿಕೊಂಡಿರುವಂತೆ ಮೂರು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ.. ಇಲ್ಲಿಂದ ೩X೩ ಅಡಿ ಚೌಕಾಕೃತಿಯ ಸಣ್ಣ ಕಿಂಡಿಯ ಮೂಲಕ ಮೇಲೆ ಹತ್ತಬಹುದು. ಪ್ರತಿಯೊಂದು ಹುಡೆವುಗಳಲ್ಲಿ ಇದೆ ರೀತಿಯ ವ್ಯವಸ್ಥೆಯು ಕಂಡು ಬರುತ್ತದೆ. ಮೇಲ್ಭಾಗದಲ್ಲಿ ಸುತ್ತಲು ಐದು ಅಡಿ ಎತ್ತರದ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಅದರ ಮಧ್ಯದಲ್ಲಿ ಕೆಲವು ವೀಕ್ಷಣಾ ರಂಧ್ರಗಳನ್ನು ಬಿಡಲಾಗಿದೆ.

ಕಟ್ಟಿಸಂಗಾವಿ ಗ್ರಾಮದ ಉಳಿದ ಮೂರು ಹುಡೆವುಗಳು ಸಂಪೂರ್ಣವಾಗಿ ಅವನತಿ ಹೊಂದಿವೆ. ಅವುಗಳ ಸಾಮಗ್ರಿಗಳಿಂದ ಸುತ್ತಮುತ್ತಲಿನ ಜನರು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಆದ್ದರಿಂದ ಅವುಗಳ ಬಗ್ಗೆ ನಮಗೆ ಯಾವುದೇ ಮಾಹಿತಿಯು ಲಭ್ಯವಾಗುವುದಿಲ್ಲ. ಆದರೆ ಅತ್ಯಂತ ಪ್ರಮುಖವಾದ ಗ್ರಾಮಗಳಲ್ಲಿ ಮಾತ್ರ ಗ್ರಾಮದ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳಿರುತ್ತವೆ. ಈ ಹಿನ್ನಲೆಯಲ್ಲಿ ಕಟ್ಟಿಸಂಗಾವಿ ಗ್ರಾಮವು ಐತಿಹಾಸಿಕ ಪ್ರಮುಖ ಗ್ರಾಮಗಳಲ್ಲಿ ಒಂದಾಗಿದೆ. ನದಿಯ ತೀರದಲ್ಲಿರುವ ಈ

ಗ್ರಾಮ ಫಲವತ್ತಾದ ಭೂಮಿಯನ್ನು ಹೊಂದಿರುವುದರಿಂದ ಗ್ರಾಮದ ಆರ್ಥಿಕ ಸ್ಥಿತಿ ಉತ್ತಮವಾಗಿರುವುದರಿಂದ ಗ್ರಾಮದ ರಕ್ಷಣೆಗಾಗಿ ವಿಶೇಷ ರಕ್ಷಣಾ ಕಟ್ಟಡಗಳನ್ನು ನಿರ್ಮಿಸಿರುವಂತೆ ಕಂಡು ಬರುತ್ತದೆ.

೬.೪.೨. ಆವರಾದ ಹುಡೆವು:

ಜೇವರ್ಗಿಯ ದಕ್ಷಿಣಕ್ಕೆ ಆರು ಕಿ.ಮಿ. ದೂರದಲ್ಲಿರುವ ಈ ಗ್ರಾಮವು ನರಬೊಳ ೨೦ಕ್ಕೆ ಸೇರಿದ್ದು, ಇಲ್ಲಿಂದ ಇದುವರೆಗೆ ಲಭ್ಯವಾದ ಶಾಸನಗಳಿಂದ ಈ ಗ್ರಾಮವು ಶಾತವಾಹನರ ಕಾಲದಿಂದಲೂ ಐತಿಹಾಸಿಕ ಮಹತ್ವದ ಸ್ಥಾನವನ್ನು ಹೊಂದಿರುವಂತೆ ಕಂಡು ಬರುತ್ತದೆ. ಅಲ್ಲದೆ ೧೨ನೆಯ ಶತಮಾನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೆಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವುಗಳನ್ನು ಹೊರತು ಪಡಿಸಿ ಗ್ರಾಮದಲ್ಲಿ ಉತ್ತಮ ಸ್ಥಿತಿಯಲ್ಲಿರುವ ಹುಡೆವು ಇದೆ.[೧೫] ಗ್ರಾಮದ ಕೇಂದ್ರ ಭಾಗದಲ್ಲಿರುವ ಈ ಹುಡೆವು ೪೦ ಅಡಿ ಎತ್ತರವಾಗಿದೆ. ಪ್ರಾರಂಭದಲ್ಲಿ ೫ ಅಡಿ ಎತ್ತರದ ವೃತ್ತಾಕಾರದ ಕಟ್ಟೆಯ ಮೇಲೆ ಇದನ್ನು ನಿರ್ಮಿಸಲಾಗಿದೆ. ವೃತ್ತಾಕಾರದಲ್ಲಿರುವ ಇದರ ದ್ವಾರವು ಉತ್ತರಕ್ಕೆ ಮುಖ ಮಾಡಿಕೊಂಡಿದ್ದು, ಇದರ ಒಳಗಡೆ ೨೫ ಮೆಟ್ಟಲುಗಳಿವೆ. ಎರಡನೆಯ ಹಂತದಲ್ಲಿ ನಾಲ್ಕು ಕಂಬಗಳ ಮೇಲೆ ೯ ಕಮಾನುಗಳಿವೆ. ಬಹಮನಿ ಶೈಲಿಯಲ್ಲಿರುವ ಈ ಕಮಾನುಗಳು ೧೦ ಅಡಿ ಎತ್ತರವಾಗಿವೆ. ಇಲ್ಲಿ ಕಾವಲುಗಾರರಿಗೆ ನೆಲೆ ನಿಲ್ಲಲು ಸ್ವಲ್ಪ ಹೆಚ್ಚಿನ ಸ್ಥಳವಿದೆ. ಮೂರನೆಯ ಹಂತದಲ್ಲಿ ಮೇಲ್ಭಾಗಕ್ಕೆ ಹತ್ತಲು ಯಾವುದೇ ಮೆಟ್ಟಲುಗಳು ಇರುವುದಿಲ್ಲ. ಗೋಡೆಗೆ ಅಂಟಿಕೊಂಡು ಹತ್ತಬೇಕು. ಮೇಲ್ಭಾಗದಲ್ಲಿ ಸುತ್ತಲು ಆರು ಅಡಿ ಎತ್ತರದ ರಕ್ಷಣಾ ಗೋಡೆ ಇದೆ.[೧೬] ವೃತ್ತಾಕಾರದಲ್ಲಿರುವ ಈ ಗೋಡೆಯ ಎಂಟು ದಿಕ್ಕುಗಳಲ್ಲಿ ಹೊರಗಡೆ ಚಾಚಿಕೊಂಡ ವೃತ್ತಾಕಾರದ ವೀಕ್ಷಣಾ ರಂದ್ರಗಳಿವೆ. ಇದರಲ್ಲಿ ಕಾವಲುಗಾರರು ಕುಳಿತುಕೊಂಡು ವೀಕ್ಷಣೆ ಮಾಡುವಂತೆ ಇದನ್ನು ನಿರ್ಮಿಸಲಾಗಿದೆ. ಹುಡೆವಿನಿಂದ ಹೊರಚಾಚಿಕೊಂಡಿರುವ ಈ ಗೋಡೆಯಲ್ಲಿ ಅಂಬುಗಿಂಡಿಗಳು, ವೀಕ್ಷಣಾ ರಂದ್ರಗಳಿವೆ. ಹೊರಗಿನಿಂದ ವಿಕ್ಷೀಸಿದರೆ ಇಲ್ಲಿ ಕಾವಲುಗಾರರು ಇದ್ದಾರೆ ಎನ್ನುವುದು ಕಂಡು ಬರುವುದಿಲ್ಲ. ಕೋಟೆಯ ತೆನೆಗಳ ಹಿಂಭಾಗದಲ್ಲಿ ಇರುವ ಸೈನಿಕರ ರಕ್ಷಣಾ ಸ್ಥಳವನ್ನು ಇದು ಹೊಲುತ್ತದೆ. ಕೋಟೆಗಳ ಪ್ರಭಾವ ಹುಡೆವುಗಳ ಮೇಲೆ ಆಗಿರುವುದನ್ನು ಇಲ್ಲಿ ಗುರುತಿಸಬಹುದು.

೬.೪.೩. ಹಸನಾಪುರ ಹುಡೆವು:

ಜೇವರ್ಗಿಯಿಂದ ಉತ್ತರಕ್ಕೆ ೮ ಕೀ.ಮಿ. ದೂರದಲ್ಲಿರುವ ಭೀಮಾ ನದಿಯ ಎಡದಂಡೆಯ ಮೇಲಿನ ಗ್ರಾಮದ ಹೊರಭಾಗದಲ್ಲಿ ೪೦ ಅಡಿ ಎತ್ತರದ ವೃತ್ತಾಕಾರದ ಹುಡೆವು ಇದೆ. ಇದರ ತಳಭಾಗದಲ್ಲಿ ೮ ಅಡಿ ಎತ್ತರದ ಚೌಕಾಕಾರ ಕಟ್ಟೆಯನ್ನು ರಚಿಸಿ, ಅದರ ಮೇಲ್ಭಾಗದಲ್ಲಿ ಹುಡೆವು ನಿರ್ಮಿಸಲಾಗಿದೆ. ಹುಡೆವಿನ ತಳಭಾಗದ ರಕ್ಷಣೆಗಾಗಿ ಈ ರೀತಿ ಚೌಕಾಕಾರದ ಕಟ್ಟೆಯನ್ನು ನಿರ್ಮಿಸಲಾಗಿದೆ. ಕೆಲವು ಗ್ರಾಮಗಳಲ್ಲಿ ಹುಡೆವಿನ ರಕ್ಷಣೆಗೆ ಸುತ್ತಲು ಕಟ್ಟೆಯನ್ನು ನಿರ್ಮಿಸಲಾಗಿದೆ.

ಆದರೆ ಹಸನಾಪುರದ ಹುಡೆವಿನ ತಳಭಾಗಲ್ಲಿರುವ ಕಟ್ಟೆಯು ಹುಡೆವಿನ ರಚನೆಯ ಕಾಲಕ್ಕೆ ರಚಿಸಲಾಗಿದೆ. ಉತ್ತರ ದಿಕ್ಕಿನಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ಒಳಗಡೆಯ ಪ್ರವೇಶಕ್ಕೆ ೩ ಅಗಲ ೪ ಅಡಿ ಎತ್ತರದ ಪ್ರವೇಶ ದ್ವಾರವಿದೆ. ಇಲ್ಲಿಂದ ಮೇಲೆ ಹತ್ತಲು ೧೫ ಮೆಟ್ಟಿಲುಗಳಿವೆ. ಮೂರನೆಯ ಹಂತದ ರಚನೆಯಲ್ಲಿ ಕಾವಲುಗಾರರಿಗೆ ಸ್ಥಳಾವಕಾಶವಿದೆ. ಉಳಿದ ಹುಡೆವಿಗಿಂತ ಇಲ್ಲಿ ಕಡಿಮೆ ಸ್ಥಳವಿದೆ. ಇಲ್ಲಿಂದ ಮೇಲೆ ಹತ್ತಲು ಗೋಡೆಗೆ ಅಂಟಿಕೊಂಡಿರುವಂತೆ ೧೦ ಮೆಟ್ಟಿಲುಗಳಿವೆ. ಮೇಲ್ಭಾಗದಲ್ಲಿ ಹುಡೆವಿನ ಸುತ್ತಲು ರಕ್ಷಣಾ ಗೋಡೆ, ಅದರ ಮಧ್ಯದಲ್ಲಿ ಕಾವಲುಗಾರರಿಗೆ ಆಶ್ರಯದ ಸ್ಥಳ ಮತ್ತು ವೀಕ್ಷಣಾ ರಂಧ್ರಗಳಿವೆ. ಮೇಲ್ಭಾಗದಲ್ಲಿ ನಾಲ್ಕು ದಿಕ್ಕಿನಲ್ಲಿ ಚೌಕಾಕಾರದ ಗೋಡೆಯು ಹೊರಗಡೆ ಚಾಚಿಕೊಂಡಿದೆ. ಅವರಾದ ಹುಡೆವಿನ ರಚನೆಗೂ, ಇದರ ರಚನೆಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಇದರಿಂದ ಹುಡೆವುಗಳ ರಚನೆಯ ಕಾಲಮಾನವನ್ನು ಗುರುತಿಸಲು ಸಾಧ್ಯವಾಗುತ್ತದೆ.

೬.೬. ಸುರಪುರ ತಾಲೂಕಿನ ಹುಡೆವುಗಳು:

೬.೬.೧. ಮುದನೂರು:

ಸುರಪುರದಿಂದ ವಾಯುವ್ಯಕ್ಕೆ ೩೫ ಕಿ.ಮೀ. ದೂರದಲ್ಲಿದೆ, ಈ ಗ್ರಾಮ ಹುಣಸಗಿ ಕೆಂಭಾವಿಯ ರಸ್ತೆಯಲ್ಲಿದೆ. ಈ ಗ್ರಾಮದಿಂದ ಇದುವರೆಗೆ ಹಲವು ಶಾಸನಗಳು ಲಭ್ಯವಾಗಿವೆ. ವಚನಕಾರನಾದ ಜೇಡರ ದಾಸಿಮಯ್ಯನು ಈ ಗ್ರಾಮದಲ್ಲಿ ಜನಿಸಿದನು. ಇದನ್ನು ಶಾಸನಗಳಲ್ಲಿ ದಕ್ಷಿಣ ವಾರಣಾಸಿ ಮುದುನೀರು ಎಂದು ಉಲ್ಲೇಖಿಸಲಾಗಿದೆ. ಅಲ್ಲದೆ 'ಮಹಾಅಗ್ರಹಾರಮುದುನೀರು' 'ಶಾಸನದ ಮನೆ ಅಗ್ರಹಾರ' 'ರಾಮದತ್ತಿ ಅಗ್ರಹಾರ' ಎಂದು ಕರೆಯಲಾಗಿದೆ. ಇದು ಹಿಂದೆ ಸಗರ - ೫೦೦ಕ್ಕೆ ಸೇರಿದ್ದು ಧಾರ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕೇಂದ್ರ ಸ್ಥಳವಾಗಿದೆ. ಕಲ್ಯಾಣಿ ಚಾಲುಕ್ಯರ ೬ನೇ ವಿಕ್ರಮಾದಿತ್ಯ ಮತ್ತು ಎರಡನೆಯ ಜಗದೇಕಮಲ್ಲರು ಇಲ್ಲಿ ದೇವಾಲಯಗಳನ್ನು ನಿರ್ಮಿಸಿ, ಅವುಗಳಿಗೆ ದಾನದತ್ತಿ ನೀಡಿರುವ ವಿಷಯ ಇಲ್ಲಿಯ ಶಾಸನಗಳಲ್ಲಿದೆ. ಕಲಚೂರಿಯರ ಅರಸ ಬಿಜ್ಜಳನು ಇಲ್ಲಿ ತೀರ್ಥಗಳನ್ನು ನಿರ್ಮಿಸಿರುವ ಕುರಿತು ಮತ್ತು ದೇವಾಲಯಗಳಿಗೆ ಧಾನದತ್ತಿ ನೀಡಿರುವ ವಿಷಯವನ್ನು ಉಲ್ಲೇಖಿಸುತ್ತವೆ.[೧೭]

ಚಿಕ್ಕಮುದನೂರು ಮತ್ತು ಹಿರೆಮುದನೂರುನಲ್ಲಿ ೧೨ ಮತ್ತು ೧೩ನೆಯ ಶತಮಾನಕ್ಕೆ ಸಂಬಂಧಿಸಿರುವ ದೇವಾಲಯಗಳು, ತೀರ್ಥಗಳು, ಶಾಸನಗಳು ಮತ್ತು ಇನ್ನಿತರ ಸ್ಮಾರಕಗಳಿವೆ. ಅಲ್ಲದೆ ಗ್ರಾಮ ರಕ್ಷಣಾ ವಾಸ್ತುಶಿಲ್ಪಗಳಾದ ಹುಡೆವುಗಳಿವೆ. ಮುದನೂರನಲ್ಲಿ ಒಟ್ಟು ನಾಲ್ಕು ಹುಡೇವುಗಳಿವೆ. ಅವುಗಳಲ್ಲಿ ಪ್ರಸ್ತುತ ಮೂರು ಕಟ್ಟಡಗಳು ಮಾತ್ರ ಉಳಿದುಕೊಂಡಿವೆ. ಗ್ರಾಮದ ಆಗ್ನೇಯ ಭಾಗದಲ್ಲಿ ವೃತ್ತಾಕಾರದ ಹುಡೆವು ಇದೆ. ಅದರ ೧೫ ಅಡಿ ಎತ್ತರದ ಮೇಲೆ ಉತ್ತರ ದಿಕ್ಕಿಗೆ ಮುಖ ಮಾಡಿರುವ ೩x೪ ಉದ್ದ ಅಗಲದ ಪ್ರವೇಶ ದ್ವಾರವಿದೆ. ಎರಡನೆಯ ಹಂತದಲ್ಲಿ ಮೂರು ಅಂಕಣಗಳ ಸ್ಥಳವಿದೆ. ಇದರ ರಚನೆಗೆ ದೇವಸ್ಥಾನಕ್ಕೆ ಬಳಸಿರುವ ಕಲ್ಲಿನ ಕಂಬಗಳನ್ನು ಉಪಯೋಗಿಸಲಾಗಿದೆ. ಇಲ್ಲಿಂದ ೨೫

ಮೆಟ್ಟಿಲುಗಳ ನಂತರ, ೨೦ ಅಡಿ ಎತ್ತರದಲ್ಲಿ ಮೇಲ್ಛಾವಣಿ ಹಾಕಲಾಗಿದೆ. ಇದರ ಕೇಂದ್ರದಲ್ಲಿ ೧೫ ಅಡಿ ಎತ್ತರವಾದ ಕಲ್ಲಿನ ಕಂಬವಿದೆ. ಅದರ ಮೇಲೆ ಸುತ್ತಲು ವೃತ್ತಾಕಾರದ ರಕ್ಷಣಾ ಗೋಡೆ ನಿರ್ಮಿಸಲಾಗಿದೆ. ಇದರ ಹೊರಭಾಗದಲ್ಲಿ ದೇವರ ಮೂರ್ತಿ ಶಿಲ್ಪ ಹೊಂದಿರುವ ಕಲ್ಲುಗಳನ್ನು ಬಳಸಲಾಗಿದೆ.

ಗ್ರಾಮದ ಉತ್ತರ ಭಾಗದಲ್ಲಿ ಸುಮಾರು ೩೦ ಅಡಿ ಎತ್ತರದ ಹುಡೆವು ಇದೆ. ಚೌಕಾಕಾರದ ೫ ಅಡಿ ಎತ್ತರದ ವೇದಿಕೆಯ ಮೇಲೆ ಇದನ್ನು ನಿರ್ಮಿಸಲಾಗಿದೆ. ಇದರ ತಳಭಾಗದ ರಚನೆಯಲ್ಲಿ ಕೆತ್ತನೆಯ ಕಲ್ಲುಗಳನ್ನು ಬಳಸಲಾಗಿದ್ದು, ಈ ಕಲ್ಲುಗಳನ್ನು ಸಮೀಪದ ದೇವಾಲಯದಿಂದ ತಂದು ಇಲ್ಲಿ ಜೋಡಿಸಿರುವಂತೆ ಕಂಡು ಬರುತ್ತದೆ. ಇದರ ರಚನೆಗೆ ಸ್ಥಳಿಯವಾಗಿ ಲಭ್ಯವಾಗುವ ಸುಣ್ಣದ ಕಲ್ಲಿನಲ್ಲಿ ನಿರ್ಮಿಸಿದ್ದರೂ, ಅಲ್ಲಲ್ಲಿ ಕಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಇವುಗಳನ್ನು ನಂತರದಲ್ಲಿ ಜೋಡಿಸಿರುವಂತೆ ಕಂಡು ಬರುತ್ತದೆ. ಇವುಗಳ ಮೇಲೆ ವಿವಿಧ ಬಗೆಯ ಶಿಲ್ಪಗಳಿವೆ. ಇದರ ಹಿಂಬದಿಯಲ್ಲಿ ಮೇಲೆ ಹತ್ತಲು ಮೆಟ್ಟಿಲುಗಳು ಹಾಗೂ ೧೦ ಅಡಿ ಎತ್ತರ ಮೇಲೆ ಪ್ರವೇಶ ದ್ವಾರವಿದೆ. ಎರಡನೆಯ ಹಂತದ ಕಟ್ಟಡವು ಸಂಪೂರ್ಣವಾಗಿ ನಾಶ ಹೊಂದಿದೆ. ಅಲ್ಲಿ ಮೆಟ್ಟಿಲುಗಳ ಕಲ್ಲುಗಳು ಮಾತ್ರ ಲಭ್ಯವಾಗುತ್ತವೆ. ಇವುಗಳ ಆಧಾರದ ಮೇಲೆ ಎರಡನೆಯ ಹಂತದಲ್ಲಿ ಕಟ್ಟಡಗಳು ಇರುವಂತೆ ಕಂಡು ಬರುತ್ತದೆ. ಪ್ರಸ್ತುತ ಇದರ ಮೇಲೆ ಜೋಡು ಮರಗಳು ಒಂದು ಆಲದ ಮರ, ಮತ್ತೊಂದು ಹುಣಸಿಯ ಮರ ಎತ್ತರವಾಗಿ ಬೆಳೆದಿವೆ.

ಗ್ರಾಮದ ಪಶ್ಚಿಮ ಭಾಗದಲ್ಲಿ ೨೦x೨೦ ಅಡಿ ಉದ್ದ ಅಗಲದ ಚೌಕಾಕಾರದ ಹುಡೆವು ಇದೆ. ಇದರ ಪ್ರವೇಶ ದ್ವಾರವು ತಳಭಾಗದಲ್ಲಿದೆ. ಇಲ್ಲಿಂದ ಮೇಲೆ ಹತ್ತಲು ೨೦ ಅಗಲವಾದ ಮೆಟ್ಟಿಲುಗಳಿವೆ. ಇದರ ರಚನೆಗೆ ಕೆಂಪು ವರ್ಣದ ಸುಣ್ಣದ ಕಲ್ಲುಗಳನ್ನು ಬಳಸಲಾಗಿದೆ. ಪ್ರಸ್ತುತ ಇದರ ಸುತ್ತಲು ಗ್ರಾಮದ ಪ್ರಮುಖರು ಮನೆಯನ್ನು ನಿರ್ಮಿಸುತ್ತಿದ್ದಾರೆ. ಇಡಿ ಹುಡೆವು ಮನೆಯ ಒಳಗಡೆ ಬರುವಂತೆ ಮಾಡಲಾಗಿದೆ. ಕೆಲವು ವರ್ಷಗಳ ನಂತರ ಈ ಕಟ್ಟಡ ಕಂಡು ಬರುವುದಿಲ. ಮುದನೂರು ಗ್ರಾಮವು ಧಾರ್ಮಿಕ ಮತ್ತು ಸಾಂಸ್ಕೃತಿಕ ರಂಗದಲ್ಲಿ ಪ್ರಮುಖವಾಗಿರುವಂತೆ ರಕ್ಷಣಾ ರಂಗದಲ್ಲಿಯು ಪ್ರಮುಖವಾದ ಹುಡೆವುಗಳನ್ನು ಹೊಂದಿರುವುದು ಕಂಡು ಬರುತ್ತದೆ.

೬.೬. ಚಿತ್ತಾಪೂರ

೬.೬.೧. ಇಂಗಳಗಿ ಹುಡೆವು:

ತಾಲೂಕು ಕೇಂದ್ರವಾದ ಚಿತ್ತಾಪೂರದಿಂದ ನೈರುತ್ಯಕ್ಕೆ ೧೮ ಕೀ.ಮಿ. ವಾಡಿ ಜಂಕ್ಷನದಿಂದ ಪಶ್ಚಿಮಕ್ಕೆ ೬ ಕಿ.ಮೀ. ದೂರದಲ್ಲಿ ಇರುವ ಈ ಗ್ರಾಮವು ಕಾಗಿಣ ನದಿಯ ಎಡದಂಡೆಯ ಮೇಲಿದೆ. ಶಾಸನಗಳಲ್ಲಿ ಇದನ್ನು 'ಇಂಗುಣಿಗೆ', 'ಯಂಗುಳಿಗೆ', 'ಯಂಗಿಣಿಗೆ' ಎಂದು ಉಲ್ಲೇಖಿಸಲಾಗಿದ್ದು, ಅರಲು ೩೦೦ಕ್ಕೆ ಸೇರಿದೆ. ಇಲ್ಲಿ ಕಲ್ಯಾಣಿ ಚಾಲುಕ್ಯರ ಮತ್ತು ಸೇವುಣರ ಕಾಲದಲ್ಲಿ ನಿರ್ಮಾಣಗೊಂಡಿರುವ ಆರು

[illegible]

ದೇವಾಲಯಗಳಿವೆ. ದೇವಾಲಯಗಳನ್ನು ಹೊರತು ಪಡಿಸಿ ರಕ್ಷಣಾ ಸ್ಮಾರಕಗಳಾದ 'ಅಗಸಿ', 'ಭಾವಿಗಳು' ಮತ್ತು 'ಹುಡೆವು'ಗಳು ಇವೆ.[೨೮] ಕಾಗಿಣಾ ನದಿಯ ತೀರದಲ್ಲಿರುವ ಈ ಗ್ರಾಮವು ಫಲವತ್ತಾದ ಭೂಮಿಯನ್ನು ಹೊಂದಿದೆ. ಕೃಷಿಯು ಪ್ರಮುಖವಾದ ಈ ಗ್ರಾಮವು ಆರ್ಥಿಕವಾಗಿ ಅತ್ಯಂತ ಶ್ರೀಮಂತವಾಗಿರುವುದರಿಂದ ಇದರ ರಕ್ಷಣೆಗೆ ಹಲವು ಹುಡೆಯಗಳನ್ನು ನಿರ್ಮಿಸಲಾಗಿದೆ. ಚಿತ್ತಾಪೂರ ತಾಲೂಕಿನಲ್ಲಿ ಬರುವ ಹುಡೆವುಗಳು ಇತರ ಹುಡೆವುಗಳಿಗಿಂತ ಭಿನ್ನವಾಗಿವೆ.

ಇಂಗಳಗಿಯಲ್ಲಿ ಎರಡು ಬಗೆಯ ಹುಡೆವುಗಳಿವೆ. ದಕ್ಷಿಣ ದಿಕ್ಕಿನಲ್ಲಿರುವ ಹುಡೆವು ವೃತ್ತಾಕಾರದಲ್ಲಿದ್ದೂ, ೪೦ ಅಡಿ ಎತ್ತರವಾಗಿವೆ. ಇದರ ಮೊದಲನೆಯ ಹಂತದ ರಚನೆಯು ಅತ್ಯಂತ ವಿಶಾಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತದೆ. ೧೫ ಅಡಿಯ ಎತ್ತರದಲ್ಲಿ ಪ್ರವೇಶ ದ್ವಾರವಿದೆ. ಆದರ ಒಳಗಡೆ ಒಂದು ಕಂಬದ ರಚನೆ ಕಂಡು ಬರುತ್ತದೆ. ಆದರೆ ಪ್ರವೇಶದ್ವಾರದ ಒಳಗಡೆ ೩ ಅಡಿಎತ್ತರದ ಕಂಬ ಉಳಿದುಕೊಂಡಿದೆ. ಇದರ ಮೇಲ್ಭಾಗವು ಸಂಪೂರ್ಣವಾಗಿ ಅವನತಿ ಹೊಂದಿದೆ. ವಿಶಾಲವಾದ ತಳಪಾಯದ ಆಧಾರದ ಮೇಲೆ ಇದು ಸುಮಾರು ೪೦ ಅಡಿ ಉತ್ತರವಾಗಿರಬಹುದೆಂದು ಹಾಗೂ ಪ್ರವೇಶ ದ್ವಾರದ ಒಳಗಡೆ ಕೇಂದ್ರದಲ್ಲಿ ಕಂಬದ ರಚನೆ ಕಂಡು ಬರುವುದರಿಂದ ಜಿಲ್ಲೆಯ ಇತರ ಹುಡೆವುಗಳಂತೆ ಇದು ಸಹ ಇರಬಹುದೆಂದು ಊಹಿಸಲಾಗಿದೆ. ಇದರ ಸಮೀಪದಲ್ಲಿ ಇರುವ ದೇಸಾಯಿಗಳ ಮನೆಯು ಅತ್ಯಂತ ರಕ್ಷಣಾತ್ಮಕವಾಗಿದೆ. ಇವರು ನಿಜಾಮನಿಂದ ಜಹಗೀರನ್ನು ಪಡೆದುಕೊಂಡು ಗ್ರಾಮದ ತೆರಿಗೆ ವಸುಲಿ ಕಾರ್ಯ ನಿರ್ವಹಿಸುತ್ತಿದ್ದರು.

ಇಂಗಳಗಿಯ ಗ್ರಾಮದಲ್ಲಿರುವ ಮತ್ತೊಂದು ಹುಡೆವು ಗ್ರಾಮದ ದಕ್ಷಿಣ ಭಾಗದಲ್ಲಿದೆ. ಗುಲಬರ್ಗಾ ಜಿಲ್ಲೆಯ ಹುಡೆವುಗಳಲ್ಲಿಯೆ ಇದು ಆತ್ಯಂತ ವಿಶೇಷ ಶೈಲಿಯಲ್ಲಿದೆ. ಮಿನಾರುಗಳ ಶೈಲಿಯಲ್ಲಿ ಇವುಗಳನ್ನು ನಿರ್ಮಿಸಲಾಗಿದೆ. ಇಲ್ಲಿ ಸಮಾನ ಎತ್ತರ ಹಾಗೂ ಒಂದೆ ಶೈಲಿಯ ಜೋಡು ಹುಡೆವುಗಳಿವೆ. ಸುಮಾರು ೪೦ ಅಡಿ ಎತ್ತರದಲ್ಲಿರುವ ಈ ಕಟ್ಟಡಗಳು ಬಹಮನಿ ಶೈಲಿಯ ಮಿನಾರಗಳನ್ನು ಹೋಲುತ್ತವೆ. ಇವುಗಳು ತಳಭಾಗದಲ್ಲಿ ವಿಶಾಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತ ಹೋಗುತ್ತವೆ. ಇವುಗಳನ್ನು ನಾಲ್ಕು ಹಂತಗಳಲ್ಲಿ ವಿಂಗಡಿಸಲಾಗಿದೆ. ಪ್ರತಿ ಹಂತವು ೧೦ ಅಡಿಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯ ಹಂತದಲ್ಲಿ ತಳಭಾಗದಿಂದ ೧೦ ಅಡಿ ಎತ್ತರದವರೆಗಿನ ರಚನೆಯು ಅತ್ಯಂತ ಸರಳವಾಗಿದೆ. ಇದರಲ್ಲಿ ಮೇಲೆ ಹತ್ತಲು ಕೆಲವು ಮೆಟ್ಟಿಲುಗಳಿವೆ ವೃತ್ತಾಕಾರದಲ್ಲಿ ಮುಂದುವರೆಯುವ ಈ ಮೆಟ್ಟಿಲುಗಳು ಎರಡನೆಯ ಹಂತದಲ್ಲಿ ಸ್ವಲ್ಪ ಚಿಕ್ಕ ಆಕೃತಿಯನ್ನು ಹೊಂದಿವೆ. ಇಲ್ಲಿ ಸುತ್ತಲು ನಾಲ್ಕು ದಿಕ್ಕಿನಲ್ಲಿ ವೀಕ್ಷಣಾ ರಂಧ್ರಗಳಿವೆ. ಅವುಗಳ ಹೊರ ಹಾಗೂ ಒಳಭಾಗದಲ್ಲಿ ಗಾರೆಯಿಂದ ಅಲಂಕಾರ ಮಾಡಲಾಗಿದೆ. ಹೀಗೆ ಮುಂದಿನ ಎರಡು ಹಂತಗಳಲ್ಲಿ ಮೇಲೆ ಹೋದಂತೆ ಕಿರಿದಾಗುತ್ತಾ ಹೋಗುತ್ತವೆ. ಪ್ರತಿ ಹಂತದಲ್ಲಿ ನಾಲ್ಕು ವೀಕ್ಷಣಾ ರಂಧ್ರಗಳಿವೆ. ಒಂದು ಹುಡೆವಿನಲ್ಲಿ ಒಟ್ಟು ೧೨ ವೀಕ್ಷಣಾ ರಂಧ್ರಗಳಿವೆ.

ಕಾವಲುಗಾರು ಏಕ ಕಾಲಕ್ಕೆ ನಾಲ್ಕು ಕಡೆಯಲ್ಲಿ ವೀಕ್ಷಣೆ ಮಾಡುವಂತೆ ಇವುಗಳನ್ನು ನಿರ್ಮಿಸಲಾಗಿದೆ. ಒಳಭಾಗದಲ್ಲಿ ಗಾರೆಯಿಂದ ಅಲಂಕಾರ ಮಾಡಲಾಗಿದೆ. ಹೊರ ಭಾಗದಲ್ಲಿ ಗಾರೆಯ ಲೇಪನವಿದೆ. ಸಂಪೂರ್ಣವಾಗಿ ಈ ಜೋಡು ಹುಡೆವುಗಳ ರಚನೆಗೆ ಗಾರೆಯನ್ನು ಬಳಸಲಾಗಿದೆ. ಇದರ ಕೊನೆಯ ಹಂತದ ರಚನೆಯು ಗುಮ್ಮಟದಿಂದ ಕೂಡಿದೆ. ಈ ಗುಮ್ಮಟವು ಇಂಡೊ-ಇಸ್ಲಾಮಿಕ್ ವಾಸ್ತು ಶೈಲಿಯಲ್ಲಿದೆ. ಗುಮ್ಮಟದ ಸುತ್ತಲು ಇರುವ ಗೋಡೆಯ ಮೇಲೆ ತೆನೆಗಳಿವೆ. ಪ್ರತಿ ಹಂತದಲ್ಲಿ ಕಾವಲುಗಾರರಿಗೆ ವಿಶ್ರಾಂತಿಯ ಸ್ಥಳವಿದೆ.

ಸಂಪೂರ್ಣವಾಗಿ ಇಸ್ಲಾಂ ಶೈಲಿಯಲ್ಲಿರುವ ಹುಡೆವು ಬಹಮನಿಯರ ವಾಸ್ತು ಶೈಲಿಯ ಲಕ್ಷಣಗಳನ್ನು ಹೊಂದಿದೆ. ಅತ್ಯಂತ ಒಳ್ಳೆಯ ಸ್ಥಿತಿಯಲ್ಲಿರುವ ಈ ಕಟ್ಟಡವು ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾಗಿದೆ. ಇದರಿಂದ ಒಳಗಡೆ ಇರುವ ಗಾರೆಯ ಅಲಂಕಾರವು ನಾಶಹೊಂದುತ್ತಲಿದ್ದೂ, ಅಲ್ಲಲ್ಲಿ ಮಾತ್ರ ಉಳಿದಿರುವುದು ಕಂಡು ಬರುತ್ತದೆ. ಇನ್ನೂ ಕೆಲವು ದಶಕಗಳಲ್ಲಿ ಹೊರಭಾಗದಲ್ಲಿರುವ ಗಾರೆಯು ಸಹ ನಾಶ ಹೊಂದಬಹುದು.

೬.೭. ಅಫಜಲ್‌ಪೂರ ತಾಲೂಕು:

೬.೭.೧. ಗೊಬ್ಬೂರ (ಬಿ):

ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಈಶಾನ್ಯಕ್ಕೆ ೩೪ ಕಿ.ಮೀ. ದೂರದ, ಅಫಜಲಪುರ ಮತ್ತು ಗುಲಬರ್ಗಾ ರಸ್ತೆಯ ಮಧ್ಯದಲ್ಲಿದೆ. ಪ್ರಾಚೀನ ಶಾಸನಗಳಲ್ಲಿ ಇದನ್ನು ಗೊಬ್ಬೂರ ಅಥವಾ ಸಂತೆಗೊಬ್ಬುರು ಎಂದು ಉಲ್ಲೇಖಿಸಲಾಗಿದೆ. ಈ ಗ್ರಾಮವು ಪ್ರಾಚೀನ ಆಳಂದ ೧೦೦೦ (ಸಾಸಿರ) ನಾಡಿನ ಆಡಳಿತಕ್ಕೆ ಒಳಪಟ್ಟಿತು. ಕಲ್ಯಾಣಿ ಚಾಲುಕ್ಯರು, ಕಲಚೂರಿಯರು ಇಲ್ಲಿ ದೇವಾಲಯಗಳನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ಹಲವು ಗ್ರಾಮಗಳನ್ನು ದತ್ತಿ ನೀಡಿರುವ ಉಲ್ಲೇಖಗಳಿವೆ. ಪ್ರಸ್ತುತ ಗ್ರಾಮದಲ್ಲಿ ಹಿಂದೂ-ಮುಸ್ಲಿಂ ಶೈಲಿಯ ಹಲವು ಸ್ಮಾರಕಗಳು ಕಂಡು ಬರುತ್ತವೆ.

ಗ್ರಾಮದ ಪೂರ್ವ ದಿಕ್ಕಿನಲ್ಲಿ ಶರಣಬಸವೇಶ್ವರ ದೇವಸ್ಥಾನದ ಹತ್ತಿರ ಸುಮಾರು ೩೦೦ ಅಡಿ ಉದ್ದ ಹಾಗೂ ೩೦೦ ಅಡಿ ಅಗಲದ ಚೌಕಾಕಾರದ ಸ್ಥಳದಲ್ಲಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳಿವೆ.[೯೯] ಇವುಗಳಿಗೆ ಅಂಟಿಕೊಂಡಂತೆ ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಆದರೆ ಪ್ರಸ್ತುತ ಈ ಗ್ರಾಮದಲ್ಲಿ ಈಶಾನ್ಯ ಮತ್ತು ನೈರುತ್ಯ ದಿಕ್ಕಿನಲ್ಲಿ ಎರಡು ಹುಡೆವುಗಳು ಮಾತ್ರ ಉಳಿದುಕೊಂಡಿವೆ. ಉಳಿದ ಎರಡು ಹುಡೆವುಗಳು ನಾಶಗೊಂಡಿವೆ. ಸಣ್ಣ ಕೋಟೆಯ ನಾಲ್ಕು ದಿಕ್ಕಿನಲ್ಲಿ ನಾಲ್ಕು ಕಾವಲುಗೋಪುರಗಳು ಇರುವಂತೆ, ನಾಲ್ಕು ಹುಡೆವುಗಳನ್ನು ನಿರ್ಮಿಸಿರಬಹುದಾಗಿದೆ. ಈ ಹುಡೆವುಗಳ ಗ್ರಾಮ ರಕ್ಷಣೆಗಿಂತ ಇಲ್ಲಿಯ ಆಡಳಿತ ಅಧಿಕಾರಿಯ ರಕ್ಷಣೆಗಾಗಿ ನಿರ್ಮಿಸಿರುವಂತೆ ಕಂಡು ಬರುತ್ತದೆ. ಇನ್ನೂ ಕೆಲವು ಪ್ರದೇಶಗಳಲ್ಲಿ ಎತ್ತರವಾದ ಕಲ್ಲು ಮಣ್ಣಿನ ರಾಶಿಯು ಕಂಡು ಬರುತ್ತದೆ. ಇದು ಅವನತಿ ಹೊಂದಿರುವ

ಕಟ್ಟಡಗಳ ಸಾಮಗ್ರಿಗಳಿಂದ ಈ ರೀತಿಯಲ್ಲಿ ಮಣ್ಣಿನ ದಿನ್ನೆಗಳಾಗಿ ನಿರ್ಮಾಣಗೊಂಡಿರಬಹುದು. ದೇಸಾಯಿ ಅಥವಾ ದೇಶಮುಖರು ತಮ್ಮ ನಿವಾಸವನ್ನು ನಿರ್ಮಿಸಿಕೊಂಡು ಒಳಗಡೆ ತಮಗೆ ಅವಶ್ಯವಿರುವ ಕಟ್ಟಡಗಳನ್ನು ನಿರ್ಮಿಸಿಕೊಂಡಿರಬಹುದು ಮತ್ತು ಅವರ ರಕ್ಷಣೆಗಾಗಿ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳು ಮತ್ತು ಅದಕ್ಕೆ ಸುತ್ತುವರಿದ ರಕ್ಷಣಾ ಗೋಡೆಯನ್ನು ನಿರ್ಮಿಸಿದ್ದಾರೆ.

ಈಶಾನ್ಯ ದಿಕ್ಕಿನಲ್ಲಿ ಸುಮಾರು ೪೦ ಅಡಿ ಎತ್ತರ ಹಾಗೂ ೧೫ ಅಡಿ ವಿಸ್ತೀರ್ಣದ ವೃತ್ತಾಕಾರದ ಹುಡೆವು ಇದೆ. ಇದರ ನಿರ್ಮಾಣಕ್ಕೆ ತಳಭಾಗದಲ್ಲಿ ದಪ್ಪನೆಯ ಕಲ್ಲುಗಳನ್ನು ಬಳಸಲಾಗಿದ್ದು, ಮೇಲೆ ಹೋದಂತೆ ಚಿಕ್ಕ ಚಿಕ್ಕ ಕಲ್ಲುಗಳಿಂದ ನಿರ್ಮಿಸಲಾಗಿದೆ. ೨೦ ಅಡಿ ಎತ್ತರದ ಮೇಲೆ ೩x೪ ಅಡಿ ಉದ್ದ ಅಗಲದ ಪ್ರವೇಶ ದ್ವಾರವಿದೆ. ಎರಡನೆಯ ಹಂತದ ಕೇಂದ್ರದಲ್ಲಿ ೨೦ ಅಡಿ ಎತ್ತರದ ಕಲ್ಲಿನಿಂದ ನಿರ್ಮಿಸಿರುವ ಕಂಬವಿದೆ. ಈ ರೀತಿ ಕೆಲವು ಹುಡೆವುಗಳ ಕೇಂದ್ರದಲ್ಲಿ ಕಲ್ಲಿನ ಕಂಬವಿದ್ದು, ಅದರ ಮೇಲ್ಭಾಗದಲ್ಲಿ ಭಾವಣಿ ಹಾಕಿರುವುದು ಕಂಡು ಬರುತ್ತದೆ. ಇಲ್ಲಿಂದ ಮೇಲೆ ಹತ್ತಲು ಗೋಡೆಗೆ ಅಂಟಿಕೊಂಡಿರುವಂತೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಕೊನೆಯ ಹಂತದಲ್ಲಿ ಮೇಲ್ಭಾಗದಲ್ಲಿ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಲಾಗಿದೆ. ಇದರ ಮೇಲ್ಭಾವಣಿಯು ಕುಸಿದು ಬಿದ್ದಿರುವುದರಿಂದ ಮೇಲಿನ ರಚನೆಯ ಬಗ್ಗೆ ನಿರ್ಧಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಪ್ರಸ್ತುತ ಈ ಹುಡೆವು ಅವನತಿಯ ಹಂತದಲ್ಲಿದೆ. ಇದರ ಮಧ್ಯದ ಮತ್ತು ತಳಭಾಗದ ಗೋಡೆಯಲ್ಲಿ ಒಂದು ದೊಡ್ಡ ಬಿರುಕು ಉಂಟಾಗಿರುವುದರಿಂದ ಆ ಭಾಗದ ಕಲ್ಲು ಮತ್ತು ಮಣ್ಣು ಸಂಪೂರ್ಣವಾಗಿ ಬಿದ್ದು ಹೋಗಿದೆ. ಇನ್ನೂ ಕೆಲವು ದಶಕಗಳಲ್ಲಿ ಇಡೀ ಕಟ್ಟಡವು ನೆಲಸಮ ಆಗುವುದರಲ್ಲಿ ಸಂದೇಹವಿಲ್ಲ. ತಾಲೂಕಿನ ಹುಡೆವುಗಳಲ್ಲಿಯೇ ಇದು ಅತ್ಯಂತ ಎತ್ತರವಾದ ಮತ್ತು ಬೃಹದ್ದಾಕಾರದ ಹುಡೆವಾಗಿದೆ. ಅಲ್ಲದೆ ಇದರ ಮತ್ತೊಂದು ವಿಶೇಷತೆ ಎಂದರೆ, ಪ್ರವೇಶ ದ್ವಾರವು ಅತ್ಯಂತ ಎತ್ತರದಲ್ಲಿ ನಿರ್ಮಿಸಿರುವುದು. ಯಾವುದೆ ಕಾರಣಕ್ಕೂ ಶತ್ರುಗಳು ಇದನ್ನು ಹತ್ತದಂತೆ ಮುಂಜಾಗ್ರತ ಕ್ರಮವಹಿಸಿ ನಿರ್ಮಿಸಲಾಗಿದೆ. ಇಂತಹ ಮಹತ್ವದ ರಕ್ಷಣಾ ಕಟ್ಟಡಗಳ ಮಾಹಿತಿ ಸಂಗ್ರಹವು ಅತಿ ಪ್ರಮುಖವಾಗಿದೆ. ಏಕೆಂದರೆ ಉಳಿದ ಎರಡು ಹುಡೆವುಗಳ ಬಗ್ಗೆ ಗ್ರಾಮಸ್ಥರಿಗೆ ಯಾವುದೆ ನಿರ್ದಿಷ್ಟ ಮಾಹಿತಿ ಇರುವುದಿಲ್ಲ.

ನೈರುತ್ಯ ಭಾಗದಲ್ಲಿರುವ ಮತ್ತೊಂದು ಹುಡೆವು ೪೦ ಅಡಿ ಎತ್ತರವಾಗಿದೆ. ಇದರ ರಚನೆಗೆ ಬಳಸಿರುವ ಸಾಮಗ್ರಿಗಳು, ಶೈಲಿ ಮತ್ತು ರಚನಾ ವಿಧಾನವನ್ನು ವೀಕ್ಷಿಸಿದರೆ, ಇದು ಮೊದಲನೆಯ ಹುಡೆವಿಗಿಂತ ಪ್ರಾಚೀನವಾಗಿರುವಂತೆ ಕಂಡು ಬರುತ್ತದೆ. ಇದು ಮೊದಲನೆಯ ಹುಡೆವಿಗಿಂತ ಭಿನ್ನವಾಗಿದೆ. ಇದರ ಪ್ರವೇಶದ್ವಾರವು ೧೫ ಅಡಿ ಎತ್ತರದಲ್ಲಿದು, ಹುಡೆವಿನ ನಿರ್ಮಾಣಕ್ಕೆ ಉಬ್ಬು ಶಿಲ್ಪಗಳನ್ನು ಬಳಸಲಾಗಿದೆ. ಜಿಲ್ಲೆಯಲ್ಲಿ ಬರುವ ಹುಡೆವುಗಳನ್ನು ಇದು ಹೋಲುತ್ತದೆ. ಎರಡನೆಯ ಹಂತದ

ರಚನೆಯಲ್ಲಿ ೨೦ ಮೆಟ್ಟಿಲುಗಳು ನಂತರದ ಹಂತದಲ್ಲಿ ಕಾವಲುಗಾರರಿಗೆ ವಿಶ್ರಾಂತಿಯ ಸ್ಥಳ ಮತ್ತು ಮೇಲ್ಭಾಗಕ್ಕೆ ಹತ್ತಲು ಗೋಡೆಗೆ ಅಂಟಿಕೊಂಡಿರುವಂತೆ ೮ ಮೆಟ್ಟಿಲುಗಳು ಉಳಿದಕೊಂಡಿವೆ. ಎರಡು ಹುಡೆವುಗಳು ಅವನತಿಯ ಹಂತದಲ್ಲಿರುವುದನ್ನು ಕಂಡು ಗ್ರಾಮಸ್ಥರು ಸಂಪೂರ್ಣವಾಗಿ ಅದರ ಸಾಮಗ್ರಿಯಿಂದ ಸಮೀಪದಲ್ಲಿರುವ ಭಾವಿಯನ್ನು ಮುಚ್ಚಲಾಗಿದೆ ಎಂದು ಹೇಳುತ್ತಾರೆ. ಈ ನಾಲ್ಕು ಹುಡೆವುಗಳನ್ನು ಜೋಡಿಸುವಂತೆ ಸುತ್ತಲು ರಕ್ಷಣಾ ಗೋಡೆ ನಿರ್ಮಿಸಿರುವಂತೆ ಕಂಡು ಬರುತ್ತದೆ. ಅದರ ಮೇಲಿಂದ ಕಾವಲುಗಾರರು ಒಂದು ಹುಡೆವಿನಿಂದ ಮತ್ತೊಂದು ಹುಡೆವಿಗೆ ಬರುತ್ತಿದ್ದರು. ಆದ್ದರಿಂದ ಹುಡೆವುಗಳ ಪ್ರವೇಶ ದ್ವಾರವು ೨೦ ಅಡಿ ಎತ್ತರದಲ್ಲಿ ನಿರ್ಮಿಸಲಾಗಿದೆ. ನಾಲ್ಕು ಹುಡೆವುಗಳ ಕೇಂದ್ರ ಭಾಗದಲ್ಲಿ ಕಟೆದ ಕಲ್ಲಿನಲ್ಲಿ ನಿರ್ಮಿಸಿರುವ ಸುಂದರವಾದ ಸೇದಿಭಾವಿ ಇದೆ. ಈ ಭಾವಿಯು ಎರಡು ಹಂತದ ರಚನೆಯನ್ನು ಹೊಂದಿದೆ. ಮೊದಲನೆಯ ಹಂತದ ರಚನೆಯು ೩೦ ಅಡಿ ಉದ್ದ ೩೦ ಅಡಿ ಅಗಲ ಹಾಗೂ ೨೦ ಅಡಿ ಆಳವಾಗಿದೆ ಈ ಭಾಗವನ್ನು ಕಟೆದ ಕಲ್ಲುಗಳಿಂದ ನಿರ್ಮಿಸಲಾಗಿದೆ. ಭಾವಿಯ ಎರಡನೆಯ ಹಂತದ ರಚನೆಯಲ್ಲಿ, ಮೊದಲನೆಯ ಹಂತದ ಕೇಂದ್ರದಲ್ಲಿ ೧೫ ಅಡಿ ಉದ್ದ ೧೫ ಅಡಿ ಅಗಲ ಹಾಗೂ ೨೫ ಅಡಿ ಆಳವಾದ ಮತ್ತೊಂದು ಭಾವಿಯ ರಚನೆಇದೆ. ಇಷ್ಟೊಂದು ಸುರಕ್ಷಿತ ಮತ್ತು ಸುಂದರವಾದ ಭಾವಿಯು ಜಿಲ್ಲೆಯ ಯಾವ ಭಾಗದಲ್ಲಿಯು ಕಂಡು ಬರುವುದಿಲ್ಲ.

೬.೭.೨. ಚಿಣಮಗೇರಾ:

ತಾಲೂಕ ಕೇಂದ್ರವಾದ ಅಫಜಲಪುರದಿಂದ ೨೬ ಕಿ.ಮೀ. ಹಾಗೂ ಚೌಡಾಪುರ ಕ್ರಾಸ್‌ದಿಂದ ೩ ಕೀ.ಮಿ. ದೂರದಲ್ಲಿದೆ. ಇದು ಚೌಡಾಪುರ ಮತ್ತು ಚಿನ್ಮಳ್ಳಿಯ ರಸ್ಥೆಯಲ್ಲಿ ಬರುತ್ತದೆ. ಪ್ರಾಚೀನ ಶಾಸನಗಳಲ್ಲಿ ಈ ಗ್ರಾಮವನ್ನು 'ಚಿಣಮಗೇರೆ' ಎಂದು ಉಲ್ಲೇಖಿಸಲಾಗಿದೆ. ಅಲ್ಲದೆ ಇದು ಆಳಂದೆ ೧೦೦೦ ನಾಡು ಹಾಗೂ ಅತನೂರ ೮೦ ಕಂಪಣಕ್ಕೆ ಸೇರಿತ್ತು. ಗ್ರಾಮಲ್ಲಿ ದೇವಾಲಯಗಳು, ವೀರಗಲ್ಲು, ಮಾಸ್ತಿಗಲ್ಲು ಮತ್ತು ಭಾವಿಗಳು ಹಾಗೂ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳಾದ ಹಲವು ಹುಡೆವುಗಳಿವೆ.

ಗ್ರಾಮದ ಕೇಂದ್ರ ಭಾಗದಲ್ಲಿ ೨೦ ಅಡಿ ಅಗಲ ೩೦ ಅಡಿ ಎತ್ತರದ ಚೌಕಾಕಾರದ ಹುಡೆವು ಇದೆ. ಇದನ್ನು ೧೦ ಅಡಿ ಎತ್ತರದ ಕಟ್ಟೆಯ ಮೇಲೆ ನಿರ್ಮಿಸಲಾಗಿದೆ. ಆದ್ದರಿಂದ ಇದರ ಪ್ರವೇಶ ದ್ವಾರವು ಕಟ್ಟೆಯ ಮೇಲಿನಿಂದ ಪ್ರಾರಂಭವಾಗುತ್ತದೆ. ಇದರ ಪ್ರವೇಶ ದ್ವಾರವು ೪x೬ ಅಡಿ ಉದ್ದ ಅಗಲವಾಗಿದೆ. ಇದರ ಒಳಗಡೆ ೧೭ ಮೆಟ್ಟಿಲುಗಳಿವೆ, ಈ ಮೆಟ್ಟಿಲುಗಳು ಎರಡು ಹಂತದಲ್ಲಿವೆ. ಮೊದಲನೆಯ ಹಂತದಲ್ಲಿ ಪಶ್ಚಿಮಕ್ಕೆ ಮುಖ ಮಾಡಿದ್ದೂ ನಂತರ ದಕ್ಷಿಣಕ್ಕೆ ತಿರುಗುತ್ತವೆ. ಎರಡನೆಯ ಹಂತದ ರಚನೆಯಲ್ಲಿ ೧೦x೧೫ ಅಡಿ ಉದ್ದ ಅಗಲದ ಕಾವಲುಗಾರರಿಗೆ ವಿಶ್ರಾಂತಿಯ ಸ್ಥಳವಿದೆ. ಈ ಭಾಗದಲ್ಲಿ ಪೂರ್ವಕ್ಕೆ ಒಂದು (೬x೮) ಕಮಾನು ಹಾಗೂ ಅದರ ಹಿಂಭಾಗದ ಗೋಡೆಯಲ್ಲಿ ಮತ್ತೊಂದು ೨x೩ ಆಕಾರದ ವೀಕ್ಷಣಾ ಕಿಂಡಿ ಇದೆ. ಮೂರು ಕಮಾನುಗಳಿಂದ ಕೂಡಿರುವ ಈ

ಹುಡೆವು ಒಂದು ವಿಶೇಷತೆಯನ್ನು ಹೊಂದಿದೆ. ಕಮಾನುಗಳ ರಚನೆಯಲ್ಲಿ ಬಹಮನಿ ಮತ್ತು ಆದಿಲ್ ಶಾಹಿಗಳ ಪ್ರಭಾವವನ್ನು ಕಾಣಬಹುದು. ಹುಡೆವಿನ ಸುತ್ತಲು ಅದೇ ಶೈಲಿಯಲ್ಲಿ ನಿರ್ಮಿಸಿರುವ ಮನೆಗಳಿವೆ. ಇವುಗಳ ಪ್ರಭಾವ ಮನೆಗಳ ನಿರ್ಮಾಣದಲ್ಲಿ ಉಂಟಾಗಿರುವುದು ಕಂಡು ಬರುತ್ತದೆ. ಈ ಮನೆಗಳು ದೊಡ್ಡಪ್ಪಗೌಡ ಮತ್ತು ಸಣ್ಣಪ್ಪಗೌಡರಿಗೆ ಸೇರಿವೆ. ಪ್ರಸ್ತುತ ಹುಡೆವು ಸಹ ಅವರ ಆಧೀನಕ್ಕೆ ಸಂಬಂಧಿಸಿರುತ್ತದೆ. ಈ ಕುರಿತು ಅವರಿಂದ ಮಾಹತಿಯನ್ನು ಪಡೆದುಕೊಳ್ಳಲಾಯಿತು. ಅವರ ಹೇಳಿಕೆಯಂತೆ ತಮ್ಮ ಪೂರ್ವಜರು ಗ್ರಾಮದ ಮೇಲ್ವಿಚಾರಕರಾಗಿದ್ದು ಗ್ರಾಮಕ್ಕೆ ಸಂಬಂಧಿಸಿದ ಎಲ್ಲಾ ಬಗೆಯ ತಂಟೆ ತಕರಾರುಗಳಿಗೆ ಸೂಕ್ತವಾದ ತೀರ್ಪು ನೀಡುತ್ತಿದ್ದರು. ಪ್ರಸ್ತುತ ದೊಡ್ಡಪ್ಪಗೌಡರ ಪೂರ್ವಜರ ಹೆಸರು ಸಹ ದೊಡ್ಡಪ್ಪಗೌಡ ಆಗಿತ್ತು. ಅವರನ್ನು ಗ್ರಾಮಸ್ಥರು 'ದೊಡ್ಡ ಮನುಷ್ಯ'ರೆಂದು ಗೌರವಿಸುತ್ತಿದ್ದರು. ಅವರ ಸಹೋದರನನ್ನು 'ಸಣ್ಣಪ್ಪಗೌಡ'ಎಂದು ಕರೆಯುತ್ತಿದ್ದರು. ಇಬ್ಬರು ಸಹೋದರರು ಗ್ರಾಮದ ರಕ್ಷಣೆಗಾಗಿ ಹುಡೆವು ಮತ್ತು ತಮ್ಮ ರಕ್ಷಣೆಗಾಗಿ ವಾಡೆಗಳನ್ನು ನಿರ್ಮಿಸಿಕೊಂಡರು ಅವರಿಂದ ನಿರ್ಮಾಣಗೊಂಡ ವಾಡೆದಲ್ಲಿಯೆ ನಾವು ವಾಸವಾಗಿದ್ದೇವೆ ಎಂದು ವಿವರಿಸಿದರು. ಪ್ರಸ್ತುತ ಹುಡೆಗಳನ್ನು ಕಟ್ಟಿಗೆ ಮತ್ತು ಕಣಕಿಯನ್ನು ಸಂಗ್ರಹಿಸಲು ಉಪಯೋಗಿಸುತ್ತಿದ್ದಾರೆ[೨೦].

೬.೭.೩. ಅತನೂರು:

ತಾಲೂಕು ಕೇಂದ್ರವಾದ ಅಫಜಲ್‌ಪುರದಿಂದ ಈಶಾನ್ಯ ದಿಕ್ಕಿಗೆ ೧೦ ಕಿ.ಮಿ. ದೂರದಲ್ಲಿ ಹಾಗೂ ಗುಲಬರ್ಗಾ ಅಫಜಲ್‌ಪುರ ರಸ್ತೆಯಲ್ಲಿ ಬರುತದೆ. ಶಾಸನಗಳಲ್ಲಿ ಈ ಗ್ರಾಮವನ್ನು 'ಅತ್ತಿನೂರು' ೮೦ ಎಂದು ಉಲ್ಲೇಖಿಸಲಾಗಿದೆ. ಹಿಂದೆ ಆಳಂದೆ ೧೦೦೦ (ಸಾಸಿರ) ನಾಡಿಗೆ ಸೇರಿದ ಇದು ೮೦ ಗ್ರಾಮಗಳ ಆಡಳಿತದ ಕೇಂದ್ರ ಸ್ಥಳವಾಗಿತ್ತು. ಗ್ರಾಮದಲ್ಲಿ ಶೈವ ಹಾಗೂ ಜೈನ ಧರ್ಮಕ್ಕೆ ಸಂಬಂಧಿಸಿದ ಹಲವು ಅವಶೇಷಗಳು ಲಭ್ಯವಾಗಿವೆ.

ಗ್ರಾಮದ ಕೇಂದ್ರ ಭಾಗದಲ್ಲಿ ೪೦ ಅಡಿ ಎತ್ತರದ ವೃತ್ತಾಕಾರದ ಹುಡೆವು ಇದೆ. ಇದನ್ನು ಪ್ರಮುಖವಾಗಿ ನಾಲ್ಕು ಹಂತಗಳಲ್ಲಿ ವಿಂಗಡಿಸಲಾಗಿದೆ. ಇದರ ರಚನೆಗೆ ಕಪ್ಪನೆಯ ಆಯತಾಕಾರದ ಕಲ್ಲುಗಳನ್ನು ಬಳಸಲಾಗಿದೆ. ಇದರ ಸುತ್ತಲೂ ಹಲವು ಮೂರ್ತಿ ಶಿಲ್ಪಗಳು, ಹೂಬಳ್ಳಿಗಳ ರಚನೆ, ನವಿಲು, ಸಾರಂಗ ಹಾಗೂ ಇತರ ಪ್ರಾಣಿಗಳ ಉಬ್ಬು ಶಿಲ್ಪಗಳಿವೆ. ಈ ಹುಡೆವಿನಲ್ಲಿ ಹೆಚ್ಚಿನ ಸಂಖ್ಯೆಯ ಶಿಲ್ಪಗಳನ್ನು ಬಳಸಲಾಗಿದೆ. ಇಲ್ಲಿರುವ ಎಲ್ಲಾ ಗ್ರಾಮ ದೇವತೆಗಳು ತಮ್ಮನ್ನು ರಕ್ಷಿಸುತ್ತಾರೆ ಎನ್ನುವ ಭಾವನೆಯಿಂದ ಇವುಗಳನ್ನು ಬಳಸಲಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಕಲೆ, ವಾಸ್ತು ಶಿಲ್ಪ ಮತ್ತು ಧಾರ್ಮಿಕ ಸ್ಥಿತಿ ಗತಿಗಳನ್ನು ತಿಳಿದು ಕೊಳ್ಳಲು ಸಹಾಯಕವಾಗುತ್ತವೆ.

ಹುಡೆವಿನ ಮೊದಲನೆಯ ಹಂತದ ರಚನೆಯಲ್ಲಿ ತಳಭಾಗದಿಂದ ೧೦ ಅಡಿಯ ಎತ್ತರದವರೆಗೆ ದಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಅತ್ಯಂತ ವಿಶಾಲವಾದ ತಳಭಾಗಕ್ಕೆ ಹೆಚ್ಚಿನ ಭದ್ರತೆಗಾಗಿ ವಿಶೇಷ

ಕ್ರಮ ಕೈಗೊಳ್ಳಲಾಗಿದೆ. ಎರಡನೆಯ ಹಂತದ ರಚನೆಗೆ ಆಯತಾಕಾರದ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ೧೦ ಅಡಿಯ ಎತ್ತರದವರೆಗೆ ಒಂದೆ ಆಕಾರದ ಕಲ್ಲುಗಳನ್ನು ಬಳಸಲಾಗಿದೆ. ಮೂರನೆಯ ಹಂತದ ರಚನೆಯಲ್ಲಿ ಉಬ್ಬು ಶಿಲ್ಪಗಳು, ಗಾಳಿ ಬೆಳಕಿಗಾಗಿ ರಂಧ್ರಗಳನ್ನು ಬಿಡಲಾಗಿದ್ದು, ಅದರ ಮೇಲ್ಭಾಗದಲ್ಲಿ ಎರಡು ಅಡಿಯವರೆಗೆ ಕಲ್ಲುಗಳನ್ನು ಹೊರಗಡೆ ಚಾಚಿಕೊಂಡಂತೆ ನಿರ್ಮಿಸಲಾಗಿದೆ. ಇದರಿಂದ ಹುಡೆವು ಅತ್ಯಂತ ಅಲಂಕೃತವಾಗಿ ಕಂಡು ಬರುತ್ತದೆ. ಕೊನೆಯ ಹಂತದ ರಚನೆಯಲ್ಲಿ ಮೇಲ್ಭಾಗದಲ್ಲಿ ಸುತ್ತಲು ರಕ್ಷಣಾ ಗೋಡೆಯನ್ನು ನಿರ್ಮಿಸಿ, ಅಲ್ಲಿ ಕಾವಲುಗಾರರಿಗೆ ಸ್ಥಳಾವಕಾಶ ಮಾಡಿಕೊಡಲಾಗಿದೆ. ಈ ರೀತಿ ಗ್ರಾಮದ ಉಳಿದ ನಾಲ್ಕು ದಿಕ್ಕಿನಲ್ಲಿ ನಾಲ್ಕು ಹುಡೆವುಗಳು ಇರುವುದಾಗಿ ಗ್ರಾಮಸ್ಥರ ಅಭಿಪ್ರಾಯವಾಗಿದೆ. ಅವುಗಳ ಕಲ್ಲುಗಳಿಂದ ದೇವಸ್ಥಾನವನ್ನು ನಿರ್ಮಿಸಲಾಗಿರುವ ವಿಷಯವನ್ನು ಪ್ರಸ್ತಾಪಿಸುತ್ತಾರೆ. ಗ್ರಾಮದಲ್ಲಿ ಒಟ್ಟು ಐದು ಹುಡೆವುಗಳಿದ್ದವು, ಅವುಗಳಲ್ಲಿ ಕೇಂದ್ರ ಭಾಗದ ಒಂದು ಕಟ್ಟಡ ಮಾತ್ರ ಉಳಿದಿದೆ ಎಂದು ಸ್ಥಳಿಯರ ಅಭಿಪ್ರಾಯವಾಗಿದೆ. ಪ್ರಸ್ತುತ ಇದು ಯಾರ ಆಧಿನಕ್ಕೂ ಒಳಪಡದೆ ನಿರ್ಲಕ್ಷಕ್ಕೆ ಒಳಗಾಗಿದೆ. ಇದರ ಸುತ್ತಲೂ ಗ್ರಾಮಸ್ಥರು ಕಸವನ್ನು ಹಾಕಲು ತಿಪ್ಪಿಗಳನ್ನು ನಿರ್ಮಿಸಿಕೊಂಡಿದ್ದಾರೆ.

೬.೭.೪. ಹಾಲಮದರಿ (ಮದರಾ ಕೆ.):

ತಾಲೂಕ ಕೇಂದ್ರವಾದ ಅಫಜಲ್‌ಪುರದಿಂದ ೧೮ ಕಿ.ಮೀ. ದೂರದಲ್ಲಿದೆ. ಚೌಡಾಪುರ ಮತ್ತು ಅಫಜಲ್‌ಪುರ ರಸ್ತೆಯ ಒಳಭಾಗದಲ್ಲಿ ೬ ಕಿ.ಮೀ. ದೂರದ ಈ ಗ್ರಾಮದ ಐತಿಹಾಸಿಕ ಮಹತ್ವವನ್ನು ಕುರಿತು ಇದುವರೆಗೆ ಯಾವುದೆ ಶಾಸನ ಅಥವಾ ಸ್ಮಾರಕಗಳು ಲಭ್ಯವಾಗಿಲ್ಲ. ಆದರೆ ಗ್ರಾಮದ ಕೇಂದ್ರ ಭಾಗದಲ್ಲಿ ರಕ್ಷಣೆಗಾಗಿ ನಿರ್ಮಿಸಿರುವ ಹುಡೆವು ಇದೆ. ೪೦ ಅಡಿ ಎತ್ತರವಾಗಿರುವ ಇದರ ರಚನೆಗೆ ಸ್ಥಳಿಯವಾಗಿ ಲಭ್ಯವಾಗುವ ಕಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ೧೫ ಅಡಿ ಎತ್ತರದಲ್ಲಿ ೩x೪ ಅಡಿ ಉದ್ದ ಅಗಲದ ಪ್ರವೇಶ ದ್ವಾರವಿದೆ. ಒಳಗಡೆ ಕೇಂದ್ರದಲ್ಲಿ ೧೦ ಅಡಿ ಉದ್ದನೆಯ ಕಂಬದ ಸುತ್ತಲು ಕಾವಲುಗಾರರಿಗೆ ಸ್ಥಳವಿದೆ. ಪ್ರಸ್ತುತ ಈ ಕಟ್ಟಡದ ಕೇಂದ್ರ ಭಾಗದಲ್ಲಿ ದೊಡ್ಡ ಬಿರುಕು ಉಂಟಾಗಿದ್ದೂ ಅದರ ಕಲ್ಲುಗಳು ಉರುಳಿ ಬಿದ್ದಿವೆ. ಇನ್ನೂ ಕೆಲವು ದಶಕಗಳಲ್ಲಿ ಅದರ ಉಳಿದ ಭಾಗವು ಸಂಪೂರ್ಣವಾಗಿ ನಾಶ ಹೊಂದುತ್ತದೆ.

ಇಲ್ಲಿಂದ ೪ ಕಿ.ಮೀ. ದೂರದಲ್ಲಿರುವ ಬೊಸಗಾ (ಕೆ) ಗ್ರಾಮದಲ್ಲಿ ಒಂದು ಹುಡೆವಿನ ಅವಶೇಷದ ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದೆ. ಅದರ ಕೇಂದ್ರ ಭಾಗದ ೧೦ ಅಡಿ ಎತ್ತರ, ೬ ಅಡಿ ದಪ್ಪದ ಗೋಡೆಯ ಅವಶೇಷ ಮಾತ್ರ ಉಳಿದುಕೊಂಡಿದೆ. ಪ್ರಸ್ತುತ ಗ್ರಾಮದಲ್ಲಿ ರಸ್ತೆಯ ಕಾರ್ಯ ನಡೆದಿರುವುದರಿಂದ ರಸ್ತೆಗೆ ಅಂಟಿಕೊಂಡಿರುವ ಈ ಕಟ್ಟಡ ರಸ್ತೆಯ ಕಾಮಗಾರಿಯಲ್ಲಿ ಅವನತಿ ಹೊಂದಿದರೂ, ಹೊಂದಬಹುದು. ಈ ರೀತಿ ಇದೆ ಮಾರ್ಗದಲ್ಲಿ ಬರುವ ಇನ್ನೂ ಕೆಲವು ಐತಿಹಾಸಿಕ

ಗ್ರಾಮಗಳಲ್ಲಿ ಒಂದೊಂದು ಹುಡೆವುಗಳಿವೆ. ಅವುಗಳೆಲ್ಲವು ಒಂದೆ ಶೈಲಿಯಲ್ಲಿ ಇರುವುದರಿಂದ ಅವುಗಳ ವಿವರಣೆ ಅಗತ್ಯವಿಲ್ಲವೆಂದು ಕೈ ಬಿಡಲಾಗಿದೆ.

೬.೮. ಸೇಡಂ ತಾಲೂಕಿನ ಹುಡೆವುಗಳು:

ಸೇಡಂ ತಾಲೂಕಿನಲ್ಲಿ ಬರುವ, ಹಲವು ಪ್ರಾಚೀನ ಪರಂಪರೆ ಹೊಂದಿರುವ ಪ್ರತಿಯೊಂದು ಗ್ರಾಮಗಳಲ್ಲಿ ಹುಡೆವುಗಳು ಕಂಡು ಬರುತ್ತವೆ. ಅದರಲ್ಲಿ ಕೊಡ್ಲಾದ ಹುಡೆವುಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ಹುಡೆವುಗಳು ಸ್ಥಳಿಯವಾಗಿ ಲಭ್ಯವಾಗುವ ಸುಣ್ಣದ ಕಲ್ಲುಗಳಲ್ಲಿ ನಿರ್ಮಿಸಲಾಗಿದೆ. ಆಯಾತಕಾರದಲ್ಲಿ ಇರುವ ಈ ಕಲ್ಲುಗಳು ಹುಡೆವುಗಳ ತಳ ಭಾಗದಲ್ಲಿ ದಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಜಿಲ್ಲೆಯ ಇತರ ಹುಡೆವುಗಳಂತೆ ಇಲ್ಲಿಯ ಹುಡೆವುಗಳು ಸಹ ಎತ್ತರ ಮತ್ತು ವಿಶಾಲವಾಗಿವೆ.

ಸೇಡಂದಿಂದ ಮುದೋಳ ರಸ್ತೆಯಲ್ಲಿ ಬರುವ ಒಂದು ಗ್ರಾಮವನ್ನು 'ಹೂಡಾಗ್ರಾಮ' ಎಂದು ಕರೆಯುತ್ತಾರೆ. ಈ ಗ್ರಾಮದಲ್ಲಿ ನಾಲ್ಕು ದಿಕ್ಕಿಗೆ ನಾಲ್ಕು ಎತ್ತರವಾದ ಹುಡೆವುಗಳಿವೆ. ಅವುಗಳಲ್ಲಿ ಪ್ರಸ್ತುತವಾಗಿ ಕೇವಲ ಎರಡು ಹುಡೆವುಗಳು ಮಾತ್ರ ಉಳಿದು ಕೊಂಡಿವೆ. ಗ್ರಾಮದ ಆಗ್ನೇಯ ಮತ್ತು ನೈರುತ್ಯ ದಿಕ್ಕಿನಲ್ಲಿರುವ ಹುಡೆವುಗಳು ೨೦ ಅಡಿ ಎತ್ತರವಾಗಿದ್ದು ಅದರ ಮಧ್ಯದಲ್ಲಿ ಪ್ರವೇಶ ದ್ವಾರವಿದೆ. ಅಲ್ಲಿಂದ ಮೇಲೆ ಹತ್ತಲು ಆರು ಮೆಟ್ಟಲುಗಳಿವೆ. ಒಳಗಡೆ ಕಾವಲುಗಾರರಿಗೆ ರಕ್ಷಣೆಯ ಸ್ಥಳ ವಿದೆ. ಈ ಗ್ರಾಮದ ಮತ್ತೊಂದು ವಿಶೇಷತೆಯೆಂದರೆ ಇಲ್ಲಿ 'ಹುಡೇಶ್ವರ' ದೇವಾಲಯವಿದೆ. ಈ ಕಾರಣಗಳಿಂದ ಇದನ್ನು ಹುಡಾ ಗ್ರಾಮ ಎಂದು ಕರೆಯಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಈ ರೀತಿಯ ಹೆಸರಿನ ಗ್ರಾಮವು ನಮಗೆ ಮತ್ತೊಂದು ಗ್ರಾಮ ಅಥವಾ ಹುಡೇಶ್ವರ ದೇವಸ್ಥಾನವು ಇರುವುದಿಲ್ಲ.

ಕೋಡ್ಲಾ ಗ್ರಾಮಕ್ಕೆ ಹೋಗುವ ಮಾರ್ಗದ ಮಧ್ಯದಲ್ಲಿ ೨೦ ಅಡಿ ಎತ್ತರದ ಹುಡೆವು ಇದೆ. ಇದು ಉತ್ತರ ದಿಕ್ಕಿಗೆ ಮುಖ ಮಾಡಿಕೊಂಡಿದ್ದು. ೮ ಅಡಿ ಎತ್ತರದಲ್ಲಿ ಪ್ರವೇಶ ದ್ವಾರವಿದೆ. ರಸ್ತೆಯ ಪಕ್ಕದಲ್ಲಿ ಹುಡೆವುಗಳನ್ನು ನಿರ್ಮಿಸುವುದು ಅತ್ಯಂತ ವಿರಳವಾಗಿದೆ. ಆದರೆ ಇಲ್ಲಿ ಹುಡೆವುಗಳು ಸಂಕೇತ ರವಾನಿಸುವ ಕಟ್ಟಡಗಳು ಎಂದು ಹೇಳುವುದು ಸೂಕ್ತವಾಗಿ ಕಂಡುಬರುತ್ತದೆ ಎರಡು ಗ್ರಾಮಗಳಿಗೆ ಸಂದೇಶ ರವಾನಿಸಲು ಇದನ್ನು ನಿರ್ಮಸಲಾಗಿದೆ. ಹುಡಾ-ಕೊಡ್ಲಾ - ಹಂದರಕಿ - ಅಲ್ಲೂರ ಕೆ - ಅಲ್ಲೂರ ಬಿ ಈ ಎಲ್ಲಾ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಮಧ್ಯದಲ್ಲಿ ಹುಡೆವುಗಳನ್ನು ನಿರ್ಮಿಸಲಾಗಿದೆ.

ಕೋಡ್ಲಾ ಸೇಡಂ ತಾಲೂಕು ಕೇಂದ್ರದಿಂದ ೧೫ ಕೀಲೊಮೀಟರ ದೂರದಲ್ಲಿದ್ದು, ಹಂದರಕಿಯ ಮಾರ್ಗದಲ್ಲಿದೆ. ಐತಿಹಾಸಿಕ ಹಿನ್ನೆಲೆ ಹೊಂದಿರುವ ಈ ಗ್ರಾಮದಲ್ಲಿ ಕೋಟೆ, ಹುಡೆವು ಮತ್ತು ಅಗಸಿಗಳಿವೆ. ಆದರೆ ಪ್ರಸ್ತುತ ಅಧ್ಯಾಯದಲ್ಲಿ ಹುಡೆವುಗಳ ವಿವರಣೆ ನೀಡಲಾಗಿದೆ. ಈ ಗ್ರಾಮದಲ್ಲಿ ಗ್ರಾಮದ ಸುತ್ತಲೂ ನಾಲ್ಕು ಹುಡೆವುಗಳು ಹಾಗೂ ಕೇಂದ್ರ ಭಾಗದಲ್ಲಿ ಒಂದು ದೊಡ್ಡ ಹುಡೆವು ಇವೆ.

ಈ ಎಲ್ಲಾ ಹುಡೆವುಗಳು ಸ್ಥಳಿಯವಾಗಿ ಲಭ್ಯವಾಗುವ ಕಪ್ಪನೆಯ ಕಲ್ಲಿನಲ್ಲಿ ನಿರ್ಮಿಸಲಾಗಿದೆ. ೩೦ ರಿಂದು ೩೫ ಅಡಿ ಎತ್ತರವಾಗಿರುವ ಈ ಕಟ್ಟಡಳು ೮ ಅಡಿ ವಿಸ್ತೀರ್ಣವಾಗಿವೆ. ಪ್ರತಿಯೊಂದು ಹುಡೆವಿನಲ್ಲಿ ೧೫ ಅಡಿ ಎತ್ತರದಲ್ಲಿ ಪ್ರವೇಶ ದ್ವಾರ, ಮೆಟ್ಟಿಲುಗಳು, ಕಾವಲುಗಾರರ ಸ್ಥಳಗಳು ಹಾಗೂ ಮೇಲ್ಭಾಗದಲ್ಲಿ ಸುತ್ತಲೂ ರಕ್ಷಣಾ ಗೋಡೆ ನಿರ್ಮಿಸಲಾಗಿದೆ. ಇವುಗಳ ರಚನೆಯಲ್ಲಿ ಚಿತಾಪೂರ ಹುಡೆವುಗಳ ಪ್ರಭಾವ ಕಂಡು ಬರುತ್ತವೆ. ಪ್ರಸ್ತುವ ಈ ಗ್ರಾಮದಲ್ಲಿ ಮೂರು ಹುಡೆವುಗಳು ಮತ್ತು ಒಂದು ಅಗಸಿ ಉಳಿದುಕೊಂಡಿದೆ. ಉಳಿದಂತೆ ಎಲ್ಲಾ ರಕ್ಷಣಾ ಸಂಬಂಧಿ ಕಟ್ಟಗಳು ಅವನತಿ ಹೊಂದಿವೆ. ಅತ್ಯಂತ ಆಕರ್ಷಕವಾಗಿರುವ ಈ ಹುಡೆವುಗಳು ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾಗಿವೆ. ಒಂದು ವೇಳೆ ಇದೆ ರೀತಿ ಮುಂದುವರೆದರೆ ಕೆಲವು ದಶಕಗಳಲ್ಲಿ ಇವುಗಳು ಕೂಡಾ ನಾಶ ಹೊಂದುತ್ತವೆ.

ಹಂದರಕಿಯಿಂದ ಅಲ್ಲೂರ (ಬ) ಮಾರ್ಗದಲ್ಲಿ ಬರುವ ಅಲ್ಲೂರ (ಕೆ) ಗ್ರಾಮದಲ್ಲಿ ನಾಲ್ಕೂ ದಿಕ್ಕಿನಲ್ಲಿ ನಾಲ್ಕೂ ಹುಡೆವುಗಳಿವೆ. ಅವುಗಳಲ್ಲಿ ಎರಡು ಹುಡೆವುಗಳು ಹೊಲದಲ್ಲಿದ್ದೂ ಇನ್ನೂ ಎರಡು ಗ್ರಾಮದ ಹೊರ ಭಾಗದಲ್ಲಿವೆ. ೨೦ ಅಡಿ ಎತ್ತರ ೧೦ ಅಡಿ ವಿಸ್ತೀರ್ಣವಾಗಿರುವ ಈ ಕಟ್ಟಡಗಳ ಮೇಲ್ಭಾಗದಲ್ಲಿ ಕಾವಲುಗಾರರಿಗೆ ರಕ್ಷಣಾಸ್ಥಳ ಹಾಗೂ ವಿಕ್ಷಣಾ ರಂಧ್ರಗಳು ಕಂಡು ಬರುವುದಿಲ್ಲ. ಅಲ್ಲೂರ (ಬ) ಹೈಹಯರ ರಾಜಧಾನಿಯಾಗಿದ್ದು ಮುಂದೆ ಅದು ಅವನತಿ ಹೊಂದಿನ ನಂತರ ಈ ಗ್ರಾಮವು ಪ್ರಸಿದ್ದಿಯನ್ನು ಪಡೆಯಿತು. ಆದ್ದರಿಂದ ಇಲ್ಲಿ ಹುಡೆವುಗಳು ರಚನೆಗೊಂಡಂತೆ ಕಂಡು ಬರುತ್ತವೆ.

ಒಟ್ಟಿನಲ್ಲಿ ಸೇಡಂ ತಾಲೂಕಿನ ಹುಡೆವುಗಳು ಸಹ ಇತರ ತಾಲೂಕಗಳ ಹುಡೆವುಗಳಂತೆ ನಿರ್ಲಕ್ಷಕ್ಕೆ ಒಳಗಾಗಿವೆ. ಅದರಲ್ಲಿ ಹೆಚ್ಚಿನ ಗ್ರಾಮದ ಹುಡೆವುಗಳು ಸಂಪೂರ್ಣವಾಗಿ ನಾಶಹೊಂದಿವೆ. ಈ ಎಲ್ಲಾ ಹುಡೆವುಗಳು ಸೇಡಂ ತಾಲೂಕಿನ ಸಂಸ್ಕೃತಿಕ ಇತಿಹಾಸದ ಅಧ್ಯಯನಕ್ಕೆ ಪೂರಕ ಮಾಹತಿಯನ್ನು ಒದಗಿಸುತ್ತವೆ.

೬.೯. ಹುಡೆವುಗಳ ಕಾಲಮಾನ:

ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹುಡೆವುಗಳು ಕಂಡು ಬರುತ್ತವೆ. ಆದರೆ ಅವುಗಳ ಕುರಿತು ಯಾವುದೇ ಲಿಖಿತ ಮಾಹಿತಿಗಳು ಇದುವರೆಗೆ ಲಭ್ಯವಾಗಿಲ್ಲ. ಅವುಗಳ ನಿರ್ಮಾಪಕರು ಹಾಗೂ ವಾರಸುದಾರರು ಇವಗಳ ಮಾಹಿತಿ ಸಂಗ್ರಹದಕಡೆಗೆ ಸಂಪೂರ್ಣವಾಗಿ ನಿರ್ಲಕ್ಷ ತೋರಿದ್ದಾರೆ. ಜಿಲ್ಲೆಯ ಹಲವು ಹುಡೆವುಗಳ ಮಾಹಿತಿ ಸಂಗ್ರಹಿಸಲು ಹೋದಾಗ, ಕೆಲವು ಹುಡೆವುಗಳು ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾದರೆ ಮತ್ತೆ ಕೆಲವು ಖಾಸಗಿಯವರ ಒಡೆತನದಲ್ಲಿ ಇರುವುದು ಕಂಡುಬಂದಿತು. ತಮ್ಮ ಒಡೆತನದಲ್ಲಿದ್ದ ಹುಡೆವುಗಳ ರಚನೆಯ ಕಾಲ ಅವರಿಗೆ ಸ್ಪಷ್ಟವಾಗಿಗೊತ್ತಿರುವುದಿಲ್ಲ. ಎಲ್ಲಾ ಹುಡೆಗಳ ಮಾಹಿತಿ ಸಂಗ್ರಹಿಸಿದ ನಂತರ ಅವುಗಳ ರಚನೆ, ವಿನ್ಯಾಸ, ಬಳಸಿರುವ ಸಾಮಗ್ರಿಗಳು ಮತ್ತು ಹುಡೆವುಗಳ ಸಂಖ್ಯೆಗಳಿಗೆ ಅನುಗುಣವಾಗಿ ಇವುಗಳ ಕಾಲವನ್ನು ನಿರ್ಧರಿಸಬಹುದಾಗಿದೆ.

ಜಿಲ್ಲೆಯ ಹೆಚ್ಚಿನ ಹುಡೆವುಗಳು ಕೋಟೆಯಲ್ಲಿ ರಚಿಸಿರುವ ಕಾವಲುಗೋಪುರ ಅಥವಾ ಕೊತ್ತಳದಂತೆ ಇರುವುದರಿಂದ, ಇದನ್ನು ಆಧಾರವಾಗಿಟ್ಟುಕೊಂಡು ಹುಡೆವುಗಳ ಕಾಲವನ್ನು ನಿರ್ಧರಿಸಬಹುದಾಗಿದೆ. ಕ್ರಿ.ಶ. ೧೫ನೆಯ ಶತಮಾನದಲ್ಲಿ ಕೋಟೆಗಳ ರಚನೆಯಲ್ಲಿ ಬುರುಜುಗಳು ಪ್ರಮುಖ ಪಾತ್ರವಹಿಸಿದವು. ಆದ್ದರಿಂದ ಹುಡೆವುಗಳು ೧೫ನೆಯ ಶತಮಾನದಿಂದ ೧೯ನೆಯ ಶತಮಾನದ ಆರಂಭದವರೆಗೆ ರಚನೆಗೊಂ ಡಿರುವಂತೆ ಕಂಡುಬರುತ್ತದೆ. ಜಿಲ್ಲೆಯ ಕೆಲವು ಹುಡೆವುಗಳು ೧೨ನೆಯ ಶತಮಾನದ ದೇವಾಲಯಗಳ ಅವಶೇಷಗಳ ಬಳಸಿರುವುದರಿಂದ, ಅವುಗಳನ್ನು ಆಧಾರವಾಗಿಟ್ಟುಕೊಂಡು ಇವುಗಳ ರಚನೆ ೧೩ನೇ ಶತಮಾನದಿಂದ ಆರಂಭವಾಗಿರುವಂತೆ ಕಂಡು ಬರುತ್ತದೆ. ಉದಾ: ಸುರಪುರ ತಾಲೂಕಿನ ಮುದನೂರು ಗ್ರಾಮದಲ್ಲಿ ಇರುವ ಒಂದು ಹುಡೆವುದ ರಚನೆಯಲ್ಲಿ ಹೆಚ್ಚಿನ ಸಂಖ್ಯೆಯ ದೇವಾಲಯದ ಅವಶೇಷಗಳು ಬಳಸಿರುವುದು ಕಂಡು ಬರುತ್ತದೆ. ಒಟ್ಟಿನಲ್ಲಿ ೧೩-೧೪ನೆಯ ಶತಮಾನದಿಂದ ಈ ಹುಡೆವುಗಳ ರಚನೆಯ ಕಾಲ ಆರಂಭವಾಯಿತು. ಮಧ್ಯ ಯುಗದಲ್ಲಿ ಗ್ರಾಮಗಳ ರಕ್ಷಣಗಾಗಿ ಹುಡೆವುಗಳು ಹುಟ್ಟಿಕೊಂಡು ಶತಶತಮಾನಗಳವರೆಗೆ ಅವುಗಳು ತಮ್ಮ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿವೆ. ಒಟ್ಟಿನಲ್ಲಿ ಗ್ರಾಮ ರಕ್ಷಣೆಯ ವಾಸ್ತುಶಿಲ್ಪಗಳನ್ನು ಪರಿಶೀಲಿಸಿ ಅವುಗಳ ಕಾಲಮಾನವನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದೆ.

೬.೯.೧. ಮೊದಲನೆಯ ಹಂತ:

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಪ್ರಮುಖ ಹುಡೆವುಗಳ ಕ್ಷೇತ್ರಅಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿ ಮತ್ತು ಸುತ್ತಲಿನ ಪರಿಸರವನ್ನು ಗಮನದಲ್ಲಿಟ್ಟುಕೊಂಡು ಅವುಗಳ ಕಾಲವನ್ನು ಮೂರು ಹಂತದಲ್ಲಿ ವಿಭಾಗಿಸಲಾಗಿದೆ. ೧೨ನೆಯ ಶತಮಾನದಿಂದ ೧೩ನೆ ಶತಮಾನದಲ್ಲಿ ನಿರ್ಮಾಣಗೊಂಡ ಕೋಟೆಗಳ ಬುರುಜುಗಳ ಶೈಲಿಯನ್ನು ಹೋಲುವ ಹುಡೆವುಗಳು ಚಿತ್ತಾಪೂರ, ಅಫಜಲ್‌ಪುರ ಮತ್ತು ಆಳಂದ ತಾಲೂಕಿನಲ್ಲಿ ಕಂಡು ಬರುತ್ತವೆ. ಅತನೂರು, ಹಾಲಮದರಿ, ಅಳ್ಳೊಳ್ಳಿ, ಇವಣಿ, ಬೆಳಗುಂಪಾ, ಮುಗಟಾ ಮುಂತಾದ ಹುಡೆವುಗಳು ವೃತ್ತಾಕಾರದಲ್ಲಿದ್ದು, ಇವುಗಳ ರಚನೆಗೆ ದಪ್ಪನೆಯ ಕಲ್ಲುಗಳನ್ನು ಬಳಸಲಾಗಿದೆ. ಅಲ್ಲದೆ ಮೇಲ್ಭಾಗದಲ್ಲಿ ಕಾವಲುಗಾರರಿಗೆ ವಿಶೇಷ ಸ್ಥಳಾವಕಾಶ ಇರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಇದು ಹುಡೆವುಗಳ ರಚನೆಯ ಆರಂಭದಕಾಲ ಎಂದು ಪರಿಗಣಿಸಲಾಗಿದೆ. ಈ ಎಲ್ಲಾ ಹುಡೆವುಗಳು ೧೩ನೆಯ ಶತಮಾನದಿಂದ ೧೫ನೆಯ ಶತಮಾನದಲ್ಲಿ ರಚನೆಯಾಗಿರುವುದು ಕಂಡುಬರುತ್ತದೆ.

೬.೯.೨. ಎರಡನೆಯ ಹಂತ:

ಮಧ್ಯಕಾಲಿನ ಅವಧಿಯಲ್ಲಿ ಕೋಟೆಗಳ ನಿರ್ಮಾಣದಲ್ಲಿ ಬದಲಾವಣೆ ಆರಂಭವಾಯಿತು. ಏಕೆಂದರೆ ಯುದ್ಧ ಪದ್ಧತಿಯಲ್ಲಿ ಮದ್ದುಗುಂಡುಗಳ ಬಳಕೆಯಿಂದ ರಕ್ಷಣಾ ವಾಸ್ತುಶಿಲ್ಪಶಿಲ್ಪಗಳ ರಚನೆಯಲ್ಲಿ ಹೊಸ ಬದಲಾವಣೆ ಉಂಟಾಯಿತು. ಕೋಟೆಯ ಬುರುಜುಗಳು, ಕಾವಲುಗೋಪುರಗಳು ಮತ್ತು ಕೋಟೆ

ಗೋಡೆಯ ದಪ್ಪ ಎತ್ತರ ಮತ್ತು ಬಳಕೆಯ ಸಾಮಗ್ರಿಗಳಲ್ಲಿ ಹೊಸತನ ಆರಂಭವಾಯಿತು. ಬಹಮನಿಯರ ಕೋಟೆ, ಯಾದಗಿರ ಕೋಟೆ, ಶಹಾಪೂರ ಕೋಟೆಗಳಲ್ಲಿ ಇಂತಹ ಲಕ್ಷಣಗಳು ಕಂಡು ಬರುತ್ತವೆ. ಈ ಎಲ್ಲಾ ಕೋಟೆಗಳು ೧೫ನೆಯ ಶತಮಾನದಿಂದ ೧೭ನೆಯ ಶತಮಾನದಲ್ಲಿ ರಚನೆಗೊಂಡವು. ಅಲ್ಲದೆ ಕೊತ್ತಳಗಳ ರಚನೆಯಲ್ಲಿ ಬದಲಾವಣೆ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಅವುಗಳಲ್ಲಿ ಚೌಕಾಕಾರ ಕೋನಾಕಾರ ಮುಂತಾದವುಗಳು. ಚೌಕಾಕಾರ, ಅಷ್ಟಕೋನಾಕಾರದಲ್ಲಿ ರಚಿಸಲಾಯಿತು.

ನಗರಗಳ ರಕ್ಷಣಾ ವಾಸ್ತುಶಿಲ್ಪಗಳ ಪ್ರಭಾವ ಕ್ರಮೇಣವಾಗಿ ಗ್ರಾಮೀಣ ರಕ್ಷಣಾ ಕಟ್ಟಡಗಳ ಮೇಲೆ ಆರಂಭವಾಯಿತು. ಈ ನಿಟ್ಟನಲ್ಲಿ ಜಿಲ್ಲೆಯ ಹಲವು ಗ್ರಾಮಗಳ ಹುಡೆವುಗಳು ನಿರ್ಮಾಣಗೊಂಡವು. ಅವುಗಳಲ್ಲಿ ಜೇವರ್ಗಿ ತಾಲೂಕಿನ ಔರಾದ, ಕಟ್ಟಿಸಂಗಾವಿ, ಹಸನಾಪುರ, ಚಿತ್ತಾಪುರದ ಇಂಗಳಗಿ, ಕೋರವಾರ, ದಂಡೋತಿ, ಗುಲಬರ್ಗಾ ತಾಲೂಕಿನ ಹಾಗರಗುಂಡಗಿ, ಕೌಲಗಾ (ಬಿ), ಅಫಜಲಪುರ ತಾಲೂಕಿನ ಗೊಬ್ಬುರ, ಅತನೂರು, ಸುರಪುರ ತಾಲೂಕಿನ ಮುದನೂರು ಸೇಡಂ ತಾಲೂಕಿನ ಹೂಡಾ, ಕೋಡ್ಲಾ, ಹಂದರಕಿ, ಅಲ್ಲೂರು ಆಳಂದ ತಾಲೂಕಿನ ನಿಂಬರಗಾ, ಬಡದಾಳ, ಬೂಸನೂರ ಮುಂತಾದ ಹುಡೆವುಗಳು ಅತ್ಯಂತ ಭದ್ರವಾಗಿ ಮತ್ತು ದಪ್ಪನೆಯ ಕಲ್ಲಿನಲ್ಲಿ ರಚಿಸಲಾಗಿದೆ. ಅಲ್ಲದೆ ಅವುಗಳ ಸುತ್ತಲು ಮೂರ್ತಿ ಶಿಲ್ಪಗಳು, ಹೂಬಳ್ಳಿಗಳ ಅಲಂಕಾರ ಹಾಗೂ ಮೇಲ್ಭಾಗದಲ್ಲಿ ಎತ್ತರವಾದ ಗೋಡೆ, ಅದರ ಮೇಲೆ ಸುತ್ತಲು ತೆನೆಗಳು ಹಾಗೂ ಅದರ ಹಿಂಭಾಗದಲ್ಲಿ ಕಾವಲುಗಾರರಿಗೆ ರಕ್ಷಣೆಯ ಸ್ಥಳ ಇವುಗಳನ್ನು ಪರಿಶೀಲಿಸಿದಾಗ ಇಲ್ಲಿ ಕೋಟೆಯ ಪ್ರಭಾವ ಕಂಡು ಬರುತ್ತದೆ.. ಈ ಎಲ್ಲಾ ಅಂಶಗಳನ್ನು ಗಮನಿಸಿ ಹುಡೆವುಗಳ ರಚನೆಯ ಕಾಲವನ್ನು ನಿರ್ಧರಿಸಲಾಗಿದೆ. ಕೋಟೆಗಳು ಪ್ರಮುಖ ಸ್ಥಳಗಳಲ್ಲಿ ನಿರ್ಮಿಸಿರುವಂತೆ, ಹುಡೆವುಗಳು ಪ್ರಮುಖ ಗ್ರಾಮಗಳಲ್ಲಿ ನಿರ್ಮಿಸಲಾಗಿದೆ. ಇವುಗಳ ರಚನೆಯ ಆಧಾರದ ಮೇಲೆ ಗ್ರಾಮದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳಬಹುದು. ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನದಲ್ಲಿ ಗ್ರಾಮಗಳ ರಕ್ಷಣೆಯ ಅವಶ್ಯಕತೆ ಇರುವುದರಿಂದ ಇವುಗಳನ್ನು ನಿರ್ಮಿಸಲಾಯಿತು. ಆಕ್ರಮಣಕಾರರ ವಿರುದ್ಧ ರಕ್ಷಣೆಯು ಅನಿವಾರ್ಯವಾಗಿತ್ತು. ನಗರಗಳು ಮತ್ತು ಗ್ರಾಮಗಳು ಇಂತಹ ಸ್ಥಿತಿಯಲ್ಲಿ ತಮ್ಮ ರಕ್ಷಣೆ ಕಡೆಗೆ ವಿಶೇಷ ಗಮನ ಹರಿಸಿ, ಭದ್ರವಾದ ರಕ್ಷಣಾ ಸ್ಮಾರಕಗಳನ್ನು ನಿರ್ಮಿಸಿಕೊಂಡರು. ಈ ನಿಟ್ಟನಲ್ಲಿ ನಿರ್ಮಾಣಗೊಂಡ ಜಿಲ್ಲೆಯ ಹಲವು ಹುಡೆವುಗಳ ರಚನೆಯ ಕಾಲಮಾನದಲ್ಲಿ ಎರಡನೆಯ ಹಂತವೆಂದು ಗುರುತಿಸಲಾಗಿದೆ.

೬.೯.೩. ತೃತೀಯ ಹಂತ:

ದಕ್ಷಿಣ ಭಾರತದ ಪ್ರಮುಖ ಮನೆತನಗಳಾದ ವಿಜಯನಗರ ಮತ್ತು ಬಹಮನಿಯ ಸುಲ್ತಾನರು ಅವನತಿ ಹೊಂದಿದ ನಂತರ ಹಲವು ಚಿಕ್ಕ ಸಾಮಂತರು ಸ್ವತಂತ್ರರಾದರು. ಇವರು ತಮ್ಮ ಆದಿನದಲ್ಲಿರುವ ಅಧಿಕಾರಿಗಳಿಗೆ ಕೆಲವು ಗ್ರಾಮಗಳನ್ನು ದತ್ತಿಯಾಗಿ ನೀಡಿದರು, ಅವರಿಗೆ ಗ್ರಾಮೀಣ ಪ್ರದೇಶವಲ್ಲಿ

ವಾಸವಾಗಿದ್ದು ತೆರಿಗೆ ಸಂಗ್ರಹ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು. ಕಾಲಕ್ರಮೇಣ ಇವರು ತಮ್ಮ ರಕ್ಷಣೆಗಾಗಿ ಹುಡೆವುಗಳನ್ನು ನಿರ್ಮಿಸಿಕೊಂಡರು. ಇವರ ಕಾಲದಲ್ಲಿ ವೃತ್ತಾಕಾರದ, ಚೌಕಾಕಾರದ ಮತ್ತು ಕುದುರೆ ಲಾಳಾಕಾರದ ಹುಡೆವುಗಳು ಮತ್ತು ಅವುಗಳ ಸಮೀಪದಲ್ಲಿ ತಮ್ಮ ವಾಸಕ್ಕಾಗಿ 'ವಾಡೆ'ಗಳನ್ನು ನಿರ್ಮಿಸಿದರು. ಈ ಕಾಲಾವಧಿಯ ಹುಡೆವುಗಳು, ಗುಲಬರ್ಗಾ, ಜೇವರ್ಗಿ, ಅಫಜಲ್‌ಪುರ ತಾಲೂಕಿನಲ್ಲಿ ಕಂಡು ಬರುತ್ತವೆ. ಇವುಗಳ ರಚನೆಗೆ ಕಟೆದ ಕಲ್ಲುಗಳನ್ನು ಬಳಸಲಾಗಿದೆ. ಕ್ರಿ.ಶ. ೧೭ನೆಯ ಶತಮಾನದಿಂದ ೧೯ನೆಯ ಶತಮಾನದಲ್ಲಿ ಈ ಶೈಲಿಯ ಹುಡೆವುಗಳ ನಿರ್ಮಾಣಗೊಂಡವು. ಈ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯ ಹುಡೆವುಗಳು ರಚನೆಗೊಂಡಿವೆ. ಈ ಹಂತದಲ್ಲಿ ಬರುವ ಎಲ್ಲಾ ಹುಡೆವುಗಳು ಉತ್ತಮ ಸ್ಥಿತಿಯಲಿವೆ. ಅವುಗಳ ಮೇಲ್ಭಾಗದಲ್ಲಿ ಸುತ್ತಲು ಅಲಂಕಾರಕ ರಚನೆ ಕಂಡು ಬರುತ್ತದೆ. ಇದು ಹುಡೆವುಗಳ ರಚನೆಯ ತೃತೀಯ ಹಂತವೆಂದು ಗುರುತಿಸಲಾಗಿದೆ.

ಗ್ರಾಮೀಣ ಭಾಗದಲ್ಲಿ ಇವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಆದ್ದರಿಂದ ಹಲವು ಹುಡೆವುಗಳು ಅವನತಿಯ ಹಂತದಲ್ಲಿವೆ. ಇನ್ನೂ ಕೆಲವು ದಶಕಗಳಲ್ಲಿ ಜಿಲ್ಲೆಯ ಹೆಚ್ಚಿನ ಸಂಖ್ಯೆಯ ಹುಡೆವುಗಳು ಅವನತಿ ಹೊಂದುತ್ತವೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲೆಯ ಪ್ರಮುಖ ಹುಡೆವುಗಳ ಮಾಹಿತಿ ನೀಡಲಾಗಿದೆ. ಈ ಎಲ್ಲಾ ಹುಡೆವುಗಳ ವಿಶ್ಲೇಷಣೆಯು ಸಂಪೂರ್ಣವಾಗಿ ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಮಾಹತಿಯನ್ನು ಅವಲಂಬಿಸಿರುತ್ತದೆ.

೬.೧೦. ಆಳಂದ ತಾಲೂಕಿನ ಹುಡೆವುಗಳು

ಆಳಂದ ತಾಲೂಕು ಚಾರಿತ್ರಿಕ ಮಹತ್ವದ ಕೇಂದ್ರ ಸ್ಥಳವಾಗಿದ್ದು, ಇದನ್ನು ಪ್ರಾಚೀನ ಶಾಸನಗಳಲ್ಲಿ 'ಆಲನ್ದಾಪುರ', 'ಅಲಂದೆ' ಎಂದು ಉಲ್ಲೇಖವಾಗಿದೆ. ಹಿಂದೆ ಇದು ಒಂದು ಸಾವಿರ ಹಳ್ಳಿಗಳ ಆಡಳಿತ ಕೇಂದ್ರ ಸ್ಥಳವಾಗಿದ್ದು, ಪ್ರಮುಖ ವ್ಯಾಪಾರ ಕೇಂದ್ರವಾಗಿರುವ ಕುರಿತು ಕೆಲವು ಉಲ್ಲೇಖಗಳಿವೆ. ರಷ್ಯಾದ ಪ್ರವಾಸಿ, ನಿಕತಿನ್ ಹೇಳುವಂತೆ ಇದ್ದೊಂದು ಜನಸಂದರ್ಶಿಯ ನಗರವಾಗಿದೆ. ಇಲ್ಲಿ ಪ್ರತಿದಿನ ಕುದುರೆಗಳ ವ್ಯಾಪಾರ ನಡೆಯುತತಿದ್ದೆಂದು ಉಲ್ಲೇಖಿಸಿದ್ದಾನೆ. ಕ್ರಿ.ಶ. ೧೦೮೨ರ ಶಾಸನಗಳಲ್ಲಿ ಚಾಲುಕ್ಯರ ಯುವರಾಜ ಮಲ್ಲಿಕಾರ್ಜುನನು ಅಲಂದೆ - ೧೦೦ ಕಾಡನ್ನು ಆಳುತ್ತಿದ್ದನೆಂದು ಉಲ್ಲೇಖಿಸಲಾಗಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಹಲವು ರಕ್ಷಣಾ ಸಂಬಂಧಿ ಸ್ಮಾರಕಗಳು ಅವನತಿಗೊಂಡಿದ್ದೂ, ಕೇವಲ ದೇವಾಲಯಗಳು ಮಾತ್ರ ಉಳಿದುಕೊಂಡಿವೆ. ಕ್ರಿ.ಶ. ೧೫ನೇಯ ಶತಮಾನದಲ್ಲಿ ಅಧಿಕಾರಕ್ಕೆ ಬಂದ ಆದಿಲ್ ಷಾಹಿಗಳು ಅಲಂದೆ - ೧೦೦೦ ನಾಡನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡು ಹಲವು ಮಸೀದಿಗಳನ್ನು ನಿರ್ಮಿಸಿದರು. ೧೬೪೧-೪೨ರ ಶಾಸನದಲ್ಲಿ ಆಲಂದದಲ್ಲಿ ನಿರ್ಮಿಸಿರುವ ದರ್ಗಾದ ಕುರಿತು ಉಲ್ಲೇಖಗಳಿವೆ.

ತಾಲೂಕು ಕೇಂದ್ರದಿಂದ ಆಗ್ನೇಯ ದಿಕ್ಕಿನಲ್ಲಿ ಕಡಗಂಚಿಯಿಂದ ೧೦ ಕಿ.ಮೀ. ದೂರದಲ್ಲಿರುವ ನರೋಣಾ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಪೌರಾಣಿಕ ಹಿನ್ನಲೆಯಿಂದ ಕೂಡಿರುವ ಈ ಗ್ರಾಮದಲ್ಲಿ

ರಾಮನು ರಾವಣನನ್ನು ಸಂಹರಿಸಿ ಬಂದು ಕೆಲಕಾಲ ಇಲ್ಲೆ ನೆಲೆಸಿದನೆಂದು ಉಲ್ಲೇಖಗಳಿವೆ. ಅದೆ ರೀತಿ ಅಗಸ್ತ್ಯ ಮಹರ್ಷಿಗಳು ಇಲ್ಲೆ ತಂಗಿದರೆಂದು ಐತಿಹ್ಯವಿದೆ. ಗ್ರಾಮದಲ್ಲಿ ರಕ್ಷಣೆಗೆ ಸಂಬಂಧಿಸಿದಂತೆ ೧೭ನೇಯ ಶತಮಾನದಲ್ಲಿ ನಿರ್ಮಿಸಿರುವ 'ಅಗಸಿ' ಮತ್ತು ಹುಡೆವುಗಳಿದ್ದರೂ. ಆದರೆ ಪ್ರಸ್ತುತ ಅಲ್ಲಿಯ ಹುಡೆವುಗಳು ಅವನತಿ ಹೊಂದಿದ್ದು, ಅಗಸಿ ಮಾತ್ರ ಉಳಿದುಕೊಂಡಿದೆ. ಗ್ರಾಮದ ರಕ್ಷಣೆಗಾಗಿ ಇದನ್ನು ನಿರ್ಮಿಸಲಾಗಿದೆ.

ಮಾಡಿಯಾಳ ಅಳಂದದಿಂದ ನೈರುತ್ಯಕ್ಕೆ ೨೪ ಕಿ.ಮೀ. ದೂರದಲ್ಲಿದ್ದು, ಪ್ರಾಚೀನ ಶಾಸನಗಳಲ್ಲಿ 'ಮಾಡಿಘಾಳ' 'ಅಗ್ರಹಾರ ಮಾಡಿಘಾಳ' ಎಂದು ಉಲ್ಲೇಖಗೊಂಡಿದೆ. ಅಲಂದ – ೧೦೦೦ ನಾಡಿನಲ್ಲಿ ಬರುವ ಗೊಂಡ–೧೨೦ರ ಕೇಂದ್ರ ಸ್ಥಳವಾಗಿತ್ತು. ಗ್ರಾಮಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದ ದೇವಾಲಯಗಳು ಲಭ್ಯವಾಗಿವೆ. ಧಾರ್ಮಿಕ ಕೇಂದ್ರಸ್ಥಳ ಈ ಗ್ರಾಮದ ಸುತ್ತಲು ರಕ್ಷಣಾ ಗೋಡೆ ಇತ್ತೇಂದು ಸ್ಥಳಿಯರ ಅಭಿಪ್ರಾಯವಾಗಿದೆ. ಕ್ಷೇತ್ರ ಅಧ್ಯಯನದಲ್ಲಿ ಶಂಕರಗೌಡ ಪಾಟೀಲರಿಂದ ಈ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಆದರೆ ರಕ್ಷಣೆಯ ಗೋಡೆಗೆ ಸಂಬಂಧಿಸಿದಂತೆ ಯಾವುದೆ ಅವಶೇಷಗಳು ದೊರೆಯಲಿಲ್ಲ. ಅದೇ ರೀತಿ ಮಾದನಹಿಪ್ಪರ ಗ್ರಾಮವು ಚಾರಿತ್ರಿಕ ಮತ್ತು ಧಾರ್ಮಿಕ ಕೇಂದ್ರಸ್ಥಳವಾಗಿದೆ. ಮಹಾರಾಷ್ಟ್ರದ ಗಡಿ ಭಾಗದಲ್ಲಿರುವ ಈ ಗ್ರಾಮದಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ರಚನೆಗೊಂಡ ಹಲವು ದೇವಾಲಯಗಳಿವೆ. ಆದರೆ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೆ ರಕ್ಷಣಾ ಸಂಬಂಧಿ ಸ್ಮಾರಕಗಳು ಕಂಡು ಬರುವುದಿಲ್ಲ.

೬.೧೦.೧. ನಿಂಬರ್ಗಾ:

ತಾಲೂಕು ಕೇಂದ್ರವಾದ ಆಳಂದದಿಂದ ದಕ್ಷಿಣಕ್ಕೆ ೨೦ ಕಿ.ಮೀ. ದೂರದಲ್ಲಿದ್ದೂ, ಪ್ರಾಚೀನ ಶಾಸನಗಳಲ್ಲಿ 'ನಿಂಬರಗಿ' ಎಂದು ಉಲ್ಲೇಖಿಸಲಾಗಿದೆ. ಈ ಗ್ರಾಮವು ಆಳಂದ–೧೦೦ ನಾಡಿನಲ್ಲಿ ಬರುವ ಗೊಂಕ–೧೨೦ ಕಂಪಣಕ್ಕೆ ಸೇರಿದ ಪ್ರಮುಖ ಪ್ರಾಂತವಾಗಿದೆ. ಕಲ್ಯಾಣಿ ಚಾಲುಕ್ಯರಿಗೆ ಸಂಬಂಧಿಸಿದಂತೆ ಕೆಲವು ಶಾಸನಗಳು ಲಭ್ಯವಾಗಿವೆ. ಮುಮ್ಮಡಿ ಸೋಮೇಶ್ವರನು, ೬ನೇಯ ವಿಕ್ರಮಾದಿತ್ಯನ ಕಾಲದಲ್ಲಿ ನಿರ್ಮಿಸಿರುವ ಕಲ್ಲಿದೇವೇಶ್ವರ, ಚನ್ನಕೇಶವ ಹಾಗೂ ಉದಯಾದಿತ್ಯ ದೇವಾಲಯಗಳಿವೆ. ರಕ್ಷಣಾ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದಂತೆ ಗ್ರಾಮದ ನಾಲ್ಕು ಬದಿಯಲ್ಲಿ ನಾಲ್ಕು ಹುಡೆವುಗಳು ಹಾಗೂ ಕೇಂದ್ರ ಭಾಗದಲ್ಲಿ ಒಂದು ಹುಡೆವುಗಳಿದ್ದವು. ಆದರೆ ಪ್ರಸ್ತುತ ನಗರದಲ್ಲಿ ಒಂದು ಹುಡೆವು ಮಾತ್ರ ಉಳಿದುಕೊಂಡಿದ್ದೂ, ಸುತ್ತಲಿನ ಹುಡೆವುಗಳು ಅವನತಿ ಹೊಂದಿವೆ. ವೃತ್ತಾಕಾರದಲ್ಲಿರುವ ಈ ರಕ್ಷಣಾ ಕಟ್ಟಡವು ೩೦ ಅಡಿ ಎತ್ತರವಾಗಿದ್ದೂ, ಇದರ ಪ್ರವೇಶ ದ್ವಾರವು ೧೦ ಅಡಿ ಎತ್ತರದಲ್ಲಿದೆ. ಸ್ಥಳೀಯವಾಗಿ ದೊರೆಯುವ ಕಪ್ಪನೆಯ ಕಲ್ಲಿನಲ್ಲಿ ನಿರ್ಮಿಸಿರುವ ಈ ಕಟ್ಟಡವು ಎತ್ತರದ ಸ್ಥಳದಲ್ಲಿ ನಿರ್ಮಿಸಲಾಗಿದೆ. ಹುಡೆವಿನ ಒಳಭಾಗದಲ್ಲಿ ಕಾವಲುಗಾರರಿಗೆ ರಕ್ಷಣೆಗೆ ಸ್ಥಳವಿದ್ದೂ, ಸುತ್ತಲು ವೀಕ್ಷಣಾ ರಂಧ್ರಗಳಿವೆ, ಇದೆ ಮಾರ್ಗದಲ್ಲಿ ಬರುವ ಹಡಲಗಿ, ಸಾವಳಗಿ, ಹೊಡಲ ಮುಂತಾದ ಗ್ರಾಮಗಳಲ್ಲಿ ಒಂದೊಂದು ಹುಡೆವುಗಳಿವೆ. ೧೯ನೇಯ ಶತಮಾನದ ರಚನೆಯನ್ನು ಹೋಲುವ ಈ ಕಟ್ಟಡಗಳು ಸರಳ ಶೈಲಿಯಲ್ಲಿವೆ.

೬.೧೦.೨. ಕಡಗಂಚಿ:

ತಾಲೂಕ ಕೇಂದ್ರದಿದ ನೈಋತ್ಯಕ್ಕೆ ೧೯ ಕಿ.ಮೀ. ದೂರದಲ್ಲಿದ್ದೂ, ಆಳಂದ ಗುಲಬರ್ಗಾ ರಸ್ತೆಯ ಮಧ್ಯದಲ್ಲಿದೆ. ಚಾರಿತ್ರಿಕ ಮತ್ತು ಪೌರಾಣಿಕ ಮಹತ್ವ ಹೊಂದಿರುವ ಈ ಗ್ರಾಮವನ್ನು ಶಾಸನಗಳಲ್ಲಿ 'ಕಡಗಂಚಿ' ಎಂದು ಉಲ್ಲೇಖಿಸಲಾಗಿದೆ. ಅಂಕುಲಗೆಯ ಕೋಟೆಯ ಬಾಸ್ಕರ ಭಟ್ಟನು ಇಲ್ಲಿ ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಿಸಿ ಅದಕ್ಕೆ ಭೂ ದಾನವನ್ನು ನೀಡಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ರಕ್ಷಣಾ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದಂತೆ ಗ್ರಾಮದ ಹೊರಭಾಗದಲ್ಲಿ ಉತ್ತರಕ್ಕೆ ಮುಖ ಮಾಡಿ ನಿರ್ಮಿಸಿರುವ 'ಅಗಸಿ' ಇದೆ. ಎರಡು ವೃತ್ತಾಕಾರದ ಕೊತ್ತಳಗಳ ಮಧ್ಯದಲ್ಲಿರುವ ಅಗಸಿಯು ಕಮಾನಿನ ಆಕಾರದಲ್ಲಿದೆ. ಇದರ ಒಂದು ಬದಿಯಲಲಿ ಸಪ್ತಮಾತ್ರಿಕೆಯ ಶಿಲ್ಪಗಳು ಹಾಗೂ ಹೂ ಬಳ್ಳಿಗಳ ಚಿತ್ರಗಳಿವೆ. ಅಗಸಿಯ ಬಲಬದಿಯಲ್ಲಿ ಚೌಕಾಕಾರದ ಕಟ್ಟಡದ ರಚನೆಯು ಕಂಡು ಬರುತ್ತದೆ. ಈ ಗೋಡೆಯ ೫೦ ಅಡಿ ಉದ್ದದವರೆಗೆ ಮುಂದುವರೆದಿದ್ದು ನಂತರ ಸಂಪೂರ್ಣವಾಗಿ ಅವನತಿ ಹೊಂದಿದ್ದೂ ಅದರ ಸಾಮಗ್ರಿಗಳಿಂದ ನಾಗರಿಕರ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದ ಗ್ರಾಮ ರಕ್ಷಣಾ ಗೋಡೆಯು ನಾಶಗೊಂಡಿರುವಂತೆ ಕಂಡು ಬರುತ್ತದೆ.

ಗ್ರಾಮದ ಹೊರವಲಯದಲ್ಲಿ ದಕ್ಷಿಣ ಭಾಗಕ್ಕೆ ಒಂದು ವಿಶಾಲವಾದ ಚೌಕಾಕಾರದ ನೀರಿನ ಆಶ್ರಯ ತಾಣವಿದೆ. ಕಟೆದ ಕಲ್ಲಿನಿಂದ ನಿರ್ಮಿಸಿರುವ ಈ ಭಾವಿಯು ೮೦x೮೦ ಅಡಿ ಉದ್ದ ಅಗಲವಾಗಿದ್ದು ಕೆಳಹಂತದವರೆಗೆ ತಲುಪಲು ಹಲವು ಮೆಟ್ಟಿಲುಗಳಿವೆ. ಇದರ ನಿರ್ಮಾಣ ಕುರಿತು ಇದುವರೆಗೆ ಯಾವುದೆ ಶಾಸನಗಳು ಲಭ್ಯವಾಗಿಲ್ಲ.

ಅಲಂದೆ - ೧೦೦೦ ನಾಡು ಎಂದು ಹೆಸರು ವಾಸಿಯಾಗಿರುವ ಪ್ರಸ್ತುತ ಆಳಂದ ತಾಲೂಕಿನಲ್ಲಿ ಯಾವುದೇ ಕೋಟೆಗಳು ಲಭ್ಯವಾಗಿರುವುದಿಲ್ಲ. ಕಾರಣ ಕೇವಲ ವ್ಯಾಪಾರ-ವಾಣಿಜ್ಯಕ್ಕೆ ಹೆಸರು ವಾಸಿಯಾಗಿರುವ ಈ ಪ್ರದೇಶದಲ್ಲಿ ಯಾವುದೆ ಅರಸು ಮನೆತನಗಳು ಅಧಿಕಾರ ಮಾಡದಿರುವುದು ಕಂಡು ಬರುತ್ತದೆ. ಕಲ್ಯಾಣಿ ಚಾಲುಕ್ಯರ ಆಳ್ವಿಕೆಯಲ್ಲಿ ಈ ತಾಲೂಕು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಹೀಗಾಗಿ ಚಾಲುಕ್ಯ ಅರಸರು ಇಲ್ಲಿ ಯಾವುದೇ ಕೋಟೆಯನ್ನು ನಿರ್ಮಿಸದೆ, ದೇವಾಲಯಗಳ ರಚನೆಗೆ ಪ್ರಾಮುಖ್ಯತೆಯನ್ನು ನೀಡಿರುವಂತೆ ಕಂಡು ಬರುತ್ತದೆ. ಆದರೆ ೧೮ ಮತ್ತು ೧೯ನೇಯ ಶತಮಾನದಲ್ಲಿ ದೇಸಾಯಿಗಳು, ದೇಶಮುಖರು, ಜಮಿನ್ದಾರರು ಪಾಟೀಲರಗಳ ಕಾಲದಲ್ಲಿ ಹಲವು ಹುಡೆವುಗಳು ಮತ್ತು ವಾಡೆಗಳು ರಚನೆಯಾಗಿರುವುದು ಕಂಡು ಬರುತ್ತದೆ. ಒಟ್ಟಿನಲ್ಲಿ ಆಳಂದ ತಾಲೂಕಿನಲ್ಲಿ ರಕ್ಷಣಾ ವಾಸ್ತು ಶಿಲ್ಪಕ್ಕೆ ಸಂಬಂಧಿಸಿದಂತೆ ಹುಡೆವುಗಳು ಮಾತ್ರ ಕಂಡು ಬರುತ್ತವೆ.

[illegible]

ಟಿಪ್ಪಣಿಗಳು:

೧. ಸಿ. ಮಹದೇವ - ೧೯೯೮ - "ವಿಜಯನಗರೋತ್ತರ ಕಾಲದಲ್ಲಿ ಬಳ್ಳಾರಿ ಪ್ರದೇಶದ ಗ್ರಾಮ ರಕ್ಷಣಾ ವಾಸ್ತು ಮತ್ತು ರಾಜಕೀಯ ಸ್ಥಿತಿಗತಿ", ಪು. ೧೪೦-೪೧.

೨. ದೇಸಾಯಿ, ಜೈಡ್.ಎ., ಶೇರವಾನಿ, ಎಚ್.ಕೆ. - ೧೯೭೪ - ಆರ್ಕಿಟೆಕ್ಟರ್ ದ ಬಹಮನಿಸ್ ಪಿ.ಎಮ್. ಜ್ಯೋಷಿ (ಸಂ.), ಹಿಸ್ಟರಿ ಆಫ್ ಮೆಡಿವಲ್ ಡೆಕ್ಕನ್ಆರ್ಕಿಟೆಕ್ಟರ್ ದ ಬಹಮನಿಸ್ ಪು. ೨೫೩-೩೦೪.

೩. ಜ್ಯೋಷಿ, ಪಿ.ಎಮ್. ೧೯೭೪ (ಸಂ.), ಹಿಸ್ಟರಿ ಆಪ್ ಮೆಡಿವಲ್ ಡೆಕ್ಕನ್, ಪು. ೩೦೪-೧೪.

೪. ಗಣೇಶ ಅಮೀನಗಡ ೨೦೦೯ - ವಾಡೆಗಳೆಂಬ ಗತವೈಭವ, ಕರ್ನಾಟಕ ದರ್ಶನ ಪ್ರಜಾವಾಣಿ ಪತ್ರಿಕೆ, ಲೇಖನ ದಿನಾಂಕ ೧೦-೧೨-೨೦೦೯.

೫. Vijaylaxmi, S.K. (Ed.) 2006 - Studies in Karnataka History and Culture, p. 140.

೬. ಡಾ. ಎಸ್.ಕೆ. ಅರುಣಿ ೨೦೦೨ - ಹುಡೆ ಅಥವಾ ಹುಡೆವು: ಮಧ್ಯಕಾಲೀನ ಡೆಕ್ಕನದ ಗ್ರಾಮ ರಕ್ಷಣಾ ವಾಸ್ತು ಒಂದು ಅವಲೋಕನ, ಪು. ೧೩೯.

೭. Vijaylaxmi, S.K. (Ed.) 2006 Op. Cit., p. 141.

೮. ಭಾಸ್ಕರರಾವ್ ಮುಡಬೂಳ ೨೦೦೧ - ಮರೆತುಹೋದ ಸುರಪುರ ಇತಿಹಾಸ, ಪು. ೨೨.

೯. ಡಾ. ಎಸ್.ಕೆ. ಅರುಣಿ, ೨೦೦೬೦ - ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಆಂಡ್ಯ ಕಲ್ಚರಿ, ಪು. ೧೩೯.

೧೦.ಮಾಣಿಕ ಭುರೆ ೨೦೦೯-ರಕ್ಷಣೆಗೆ ಅವಶೇಷಗಳ ಮೊರೆ, ಪ್ರಜಾವಾಣಿ ಲೇಖನ, ದಿನಾಂಕ -೧೨-೨೦೦೯.

೧೧.ರಾಜಣ್ಣಾ ಕೆ ೧೯೭೪-ರೈಸ್ ಆಂಡ್ಯ ಪಾಲ್ಆಪ್‌ದ ಪಾಳೆಗಾರ್ಸ್ ಆಫ್ ತಮಿಳುನಾಡು, ಪು. ೩೮-೪೦.

೧೨.ಎಂ.ಬಿ. ಪಾಟೀಲ ೧೯೯೭ - ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಪು. ೭೯೮.

೧೩.ಅದೇ, ಪು. ೬೯೨.

೧೪.ವಿಜೆಯಂದ್ರ ಕುಲಕರ್ಣಿ ಮಳ್ಳಿ ೨೦೦೬ - ಇಜೇರಿಯ ಐತಿಹಾಸಿಕ ಕೋಟೆಗೆ ಇದೇನು ಗತಿ ಬಂದಿದೆ, ಸಂಯುಕ್ತ ಕರ್ನಾಟಕ, ವಿಶೇಷ ಪುರವಣಿಗೆ, ಪು. ೪.

೧೫.ಗೋಪಾಲ.ಆರ್., (ಸಂ.) ೨೦೦೭ - ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು. ४೧.

೧೬.Vijaylaxmi, S.K. (Ed.) 2006 -Op. Cit., p. 144.

೧೭.ಎಂ.ಬಿ. ಪಾಟೀಲ ೧೯೯೭ - ಪೂರ್ವೋಕ್ತ, ಪು. ೭೫೯.

೧೮.ಅದೇ, ಪು. ೬೮೪.

೧೯.ಅದೇ, ಪು. ೭೧೫.

೨೦.ಅದೇ, ಪು. ೭೨೦.

೨೧.ಅದೇ, ಪು. ೭೮೦.

೨೨.ಹಸನ್ ಸಿರಾಜ್ ಸೈಯದ್, ೧೯೨೦ - 'Bedav', ಪು. ೩೪-೪೩.

೨೩.ವಿಜಯಲಕ್ಷ್ಮಿ, ಕೆ.ಎಸ್.(ಸಂ.)೨೦೦೬-ಸ್ಟಡೀಜ್ ಇನ್ ಕರ್ನಾಟಕ ಹಿಸ್ಟರಿ ಆಂಡ್ ಕಲ್ಚರ್, ಪು. ೧೩೯.

೨೪.ಎಂ.ಬಿ. ಪಾಟೀಲ್ (ಸಂ.) - ೧೯೯೭ - ಕರ್ನಾಟಕ ರಾಜ್ಯ ಗ್ಯಾಸೇಟಿಯರ್, ಗುಲಬರ್ಗಾ ಜಿಲ್ಲೆ.

೨೫.ಬ್ರೇಸ್ಸಿ, ಮಾರಟಿನ್ - ೧೯೯೦, ಫೋರ್ಟ್ಸ ಆಂಡ್ಯ್ ಫೋರ್ಟಿಫೀಕೇಶನ್ಸ್, ಪು. ೮೦.

ಅಧ್ಯಾಯ-೭

ಸಮಾರೋಪ

ಪ್ರಸ್ತುತ ಮಹಾಪ್ರಬಂಧದಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳ ಕುರಿತು ಹಾಗೂ ಪ್ರಮುಖ ಹುಡೆವುಗಳ ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಆಳುವ ವರ್ಗದವರು ತಮ್ಮ ಅಧಿಕಾರವನ್ನು ಶಾಶ್ವತವಾಗಿ ಮುಂದುವರೆಯಿಸಿಕೊಂಡು ಹೋಗಲು ಭದ್ರವಾದ ಕೋಟೆಗಳನ್ನು ನಿರ್ಮಿಸಿಕೊಂಡರು. ಒಂದು ಕೋಟೆಯ ನಂತರ ಮತ್ತೊಂದು ಕೋಟೆಗೆ ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಅದನ್ನು ಸಾಮ್ರಾಜ್ಯವನ್ನಾಗಿ ಮಾಡಲು ಯತ್ನಿಸಿದರು. ಕೋಟೆಗಳು ಅರಸರ ಅರಸತ್ವವನ್ನು ಕೆಲವು ಶತಮಾನಗಳವೆರೆಗೆ ಮುಂದುವರೆಯಿಸಿಕೊಂಡು ಹೋಗಲು ಸಹಾಯಕವಾಗುತ್ತವೆ. ಇದುವರೆಗಿನ ಅಧ್ಯಯನಗಳಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಒಂದೆರಡು ಕೋಟೆಗಳಿಗೆ ಮಾತ್ರ ಮಹತ್ವ ನೀಡಿ, ಸಣ್ಣ ಪುಟ್ಟ ಕೋಟೆಗಳು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಎಲ್ಲಾ ಕೋಟೆಗಳನ್ನು ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಾದೇಶಿಕ ಇತಿಹಾಸದ ಕಡೆಗೆ ವಿಶೇಷ ಗಮನ ಹರಿಸಲಾಗಿದೆ. ಅಲ್ಲದೆ ವಿನಾಶದ ಅಂಚಿನಲ್ಲಿರುವ ಕೋಟೆಗಳ ಕಡೆಗೆ ಗಮನ ಹರಿಸಿ ಅವುಗಳನ್ನು ಸಂರಕ್ಷಣೆಯ ಸಾಲಿನಲ್ಲಿ ಸೇರಿಸುವ ಪ್ರಯತ್ನ ಮಾಡಲಾಗಿದೆ.

'ರಕ್ಷಣಾ ವಾಸ್ತುಶಿಲ್ಪ' ಎಂದ ತಕ್ಷಣ ಎಲ್ಲರ ಗಮನಕ್ಕೆ ಬರುವ ಕಟ್ಟಡಗಳು ಕೋಟೆಗಳಾಗಿವೆ. ಇವುಗಳು ರಾಜ್ಯದ ರಕ್ಷಣೆಗಾಗಿ ನಿರ್ಮಿಸಿರುವ ಕಟ್ಟಡಗಳಾಗಿವೆ. ಈ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರಲ್ಲಿ ಕೋಟೆಯ ಪ್ರಕಾರಗಳು, ರಚನಾ ವಿಧಾನ, ಸ್ವರೂಪ ಅದರ ಅಂಗ ಭಾಗಗಳ ಕಾರ್ಯವೈಖರಿಯನ್ನು ಕುರಿತು ಚರ್ಚಿಸಲಾಗಿದೆ. ಅಲ್ಲದೆ ರಕ್ಷಣೆಗೆ ಸಂಬಂಧಿಸಿದ ಇತರ ಕಟ್ಟಡಗಳಾದ ಕಾವಲುಗೋಪುರ, ದ್ವಾರಬಾಗಿಲುಗಳು, ನೀರಿನ ಆಶ್ರಯ ತಾಣ, ಬಂದೂಕು ರಂಧ್ರಗಳು, ಸೈನಿಕರ ತಂಗುದಾಣಗಳು, ದೇವಾಲಯ, ಮಸೀದಿ, ಕಣಜ, ಮದ್ದಿನ ಮನೆ ಮುಂತಾದವುಗಳನ್ನು ಪ್ರತ್ಯೇಕವಾಗಿ ಚರ್ಚಿಸಲಾಗಿದೆ. ಗ್ರಾಮ ರಕ್ಷಣೆಗೆ ಸಂಬಂಧಿಸಿದಂತೆ ರಕ್ಷಣಾ ಗೋಡೆಗಳು, ಹುಡೆವುಗಳು, ವಾಡೆಗಳು, ಅಗಸಿ ಮುಂತಾದವುಗಳ ರಚನಾ ವಿಧಾನ ಅವುಗಳ ಮಹತ್ವ ಹಾಗೂ ಉದ್ದೇಶಗಳನ್ನು ಕುರಿತು ಹೇಳಲಾಗಿದೆ.

ಇದುವರೆಗೆ ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಕೋಟೆಗಳ ಸಮಗ್ರ ಅಧ್ಯಯನ ನಡೆಯದಿರಲು ಕಾರಣ, ಸಂಪೂರ್ಣವಾಗಿ ಕ್ಷೇತ್ರ ಅಧ್ಯಯನದಿಂದ ಕೂಡಿರುವ ವಿಷಯವಾದ್ದರಿಂದ ಹೆಚ್ಚಿನ ಖರ್ಚು ವೆಚ್ಚ ಹಾಗೂ ಸಮಯ ವಿಳಂಭದಿಂದ ಕೂಡಿರುತ್ತದೆ. ಆದ್ದರಿಂದ ಗುಲಬರ್ಗಾ ಜಿಲ್ಲೆಯ ಕುರಿತಾದ ಹಿಂದಿನ ಹೆಚ್ಚಿನ ಸಂಶೋಧನೆಗಳು ಕ್ಷೇತ್ರಅಧ್ಯಯನದಿಂದ ಹೊರತಾಗಿರುವುದು ಕಂಡುಬರುತ್ತದೆ. ಕೆಲವು

ಕೋಟೆಗಳ ಕುರಿತು ಬಿಡಿ ಬಿಡಿ ಅಧ್ಯಯನಗಳು, ಲೇಖನಗಳು ಮತ್ತು ಪತ್ರಿಕಾ ವರದಿಗಳು ಪ್ರಕಟಗೊಂಡಿವೆ. ಗುಲಬರ್ಗಾ, ಶಹಾಪೂರ, ಸುರಪುರ, ಯಾದಗಿರ, ವಾಗಣಿಗೇರ, ಮಳಖೇಡ, ಕೋಟೆಗಳನ್ನು ಒಳಗೊಂಡಂತೆ ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾಗಿರುವ ಫರಹತಾಬಾದ, ಹೊಳಕುಂದಾ, ಇಜೇರಿ, ಚಿನ್ಮಳ್ಳಿ, ಚಂಡ್ರಕಿ, ಇಟಕಲ್, ಪುಟ್‌ಪಾಕ, ಕಾಕಲ್‌ವಾರ್, ಕೊಲ್ಲೂರು, ಅಳ್ಳೊಳ್ಳಿ, ಅಡಕಿ, ದಂಡೋತಿ, ಮುಂತಾದ ಕೋಟೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರತಿಯೊಂದು ಕೋಟೆಗಳ ಛಾಯಾಚಿತ್ರ, ನಕ್ಷೆಗಳನ್ನು ಸಿದ್ದಪಡಿಸಿ, ಒಂದು ಕೋಟೆಗೂ, ಮತ್ತೊಂದು ಕೋಟೆಯಲ್ಲಿಯು ಇರುವ ವ್ಯತ್ಯಾಸವನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಹೀಗೆ ಜಿಲ್ಲೆಯಲ್ಲಿ ಬರುವ ಎಲ್ಲಾ ಕೋಟೆಗಳನ್ನು ದಾಖಲಿಸಿ, ಅವುಗಳ ಕುರಿತು ವಿಶ್ಲೇಷಿಸುವ ಪ್ರಯತ್ನವು ಸಹ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಬರುವ ಗಿರಿದುರ್ಗಗಳು ಸುಸ್ಥಿತಿಯಲ್ಲಿದ್ದು, ಸ್ಥಳದುರ್ಗಗಳು ಮಾತ್ರ ಅವನತಿಯ ಹಂತದಲ್ಲಿವೆ. ಸ್ಥಳದುರ್ಗಗಳಿಗಿಂತ ಗಿರಿದುರ್ಗಗಳೆ ಹೆಚ್ಚು ಸುರಕ್ಷಿತವೆಂದು ಇದರಿಂದ ಸ್ಪಷ್ಟವಾಗಿ ಕಂಡು ಬರುತ್ತದೆ. ನೈಸರ್ಗಿಕ ರಕ್ಷಣೆಯ ಕೋಟೆಗಳಲ್ಲಿ ನದಿಯ ದಂಡೆಯ ಮೇಲೆ ನಿರ್ಮಿಸಿರುವ ಕೋಟೆಗಳಿಗಿಂತ ಗಿರಿದುರ್ಗಗಳು ಶ್ರೇಷ್ಠವಾಗಿವೆ. ಏಕೆಂದರೆ, ನದಿಯ ಪ್ರವಾಹದಿಂದ ನೀರು ಕೋಟೆಯ ಒಳಗಡೆ ಪ್ರವೇಶಿಸಿ ಹಾನಿಯನ್ನುಂಟು ಮಾಡಬಹುದು. ಇಂತಹ ದೃಷ್ಟಾಂತಗಳು ಗುಲಬರ್ಗಾ ಜಿಲ್ಲೆಯಲ್ಲಿವೆ. ಉದಾಹರಣೆಗೆ - ಫಿರೋಜಾಬಾದ ಕೋಟೆಯು ಭೀಮಾ ನದಿಯ ದಂಡೆಯ ಮೇಲೆ ನಿರ್ಮಿಸಲಾಗಿದ್ದು, ನದಿಯಿಂದ ಕೋಟೆಗೆ ರಕ್ಷಣೆ ದೊರೆಯಬಹುದೆಂದು ಬಹಮನಿ ಅರಸ ಫಿರೋಜ್ ಶಹ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡು ಕೋಟೆಯನ್ನು ನಿರ್ಮಿಸಿದ, ಆದರೆ ದುರಾದೃಷ್ಟವೆನ್ನುವಂತೆ ಭೀಮಾ ನದಿಯ ಪ್ರವಾಹದಿಂದ ಕೋಟೆಯಲ್ಲಿ ಅಪಾರ ಹಾನಿ ಸಂಭವಿಸಿತು. ಇದರಿಂದ ಮುಂದೆ ಬಂದ ಸುಲ್ತಾನರು ಇದನ್ನು ತಮ್ಮ ಕೇಂದ್ರ ಸ್ಥಳವನ್ನಾಗಿ ಮಾಡಿಕೊಳ್ಳದೆ ರಾಜಧಾನಿಯನ್ನು ಬೇರೆ ಕಡೆಗೆ ವರ್ಗಾಯಿಸಿದರು. ಇಂತಹ ಲೋಪ ದೋಷಗಳನ್ನು ಅರಿತುಕೊಂಡ ಅರಸರು ಬೆಟ್ಟ ಪ್ರದೇಶಗಳು ಅತ್ಯಂತ ಸುರಕ್ಷಿತವೆಂದು ತಿಳಿದುಕೊಂಡು ಆ ಸ್ಥಳದಲ್ಲಿ ಕೋಟೆಯನ್ನು ನಿರ್ಮಿಸಿದರು. ಜಿಲ್ಲೆಯ ಶಹಾಪೂರ, ಸುರಪುರ, ವಾಗಣಗೇರಿ, ಯಾದಗಿರ ಲಾಡಲಾಪುರ, ಅಲ್ಲೂರ (ಬಿ) ಮುಂತಾದ ಗಿರಿದುರ್ಗಗಳು ಇಂದಿಗೂ ಅತ್ಯಂತ ಸುರಕ್ಷಿತವಾಗಿವೆ.

ಕೋಟೆಯ ಕೆಲವು ಭಾಗಗಳಲ್ಲಿ ಹೊಸ ರಚನೆಗಳು ಕಂಡು ಬರುತ್ತವೆ. ಯುದ್ಧ ತಂತ್ರಗಳು ಬದಲಾವಣೆಯಂತೆ ಕೋಟೆಯಗಳ ರಚನೆಯಲ್ಲಿ ಬದಲಾವಣೆ ಉಂಟಾಯಿತು. ಅದರಲ್ಲಿ ಕೋಟೆ ಗೋಡೆಯ ದಪ್ಪ ಮತ್ತು ಎತ್ತರಗಳನ್ನು ಹೆಚ್ಚಿಸಲಾಯಿತು. ಗುಲಬರ್ಗಾ ಕೋಟೆಯಲ್ಲಿ ಫಿರಂಗಿಗಳ ಬಳಕೆ ಕಾಲಕ್ಕೆ ಬದಲಾವಣೆ ಉಂಟಾಯಿತು. ಕೋಟೆ ಗೋಡೆಯನ್ನು ೧೦ ಅಡಿ ಎತ್ತರ ಹಾಗೂ ೧೫ ರಿಂದ ೨೦ ಅಡಿ ದಪ್ಪವಾಗಿ ಪುನರ್‌ನಿರ್ಮಿಸಲಾಯಿತು. ಕೋಟೆ ಗೋಡೆಯನ್ನು ಸೂಕ್ಷ್ಮವಾಗಿ

[illegible]

ಅವಲೋಕಿಸಿದಾಗ ಮೊದಲಿನ ತೆನೆಗಳ ಸಂದುಗಳಲ್ಲಿ ಗೋಡೆಯನ್ನು ನಿರ್ಮಿಸಿ ಮತ್ತೆ ಕೊನೆಯ ಹಂತದಲ್ಲಿ ತೆನೆಗಳನ್ನು ನಿರ್ಮಿಸಲಾಗಿದೆ. ಇಂತಹ ಅಂಶಗಳು ಪೂರ್ವ ಮತ್ತು ಪಶ್ಚಿಮ ಭಾಗದ ಗೋಡೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ. ಇಂತಹ ಬದಲಾವಣೆಗಳು ಸ್ಥಳದುರ್ಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ.

ಬೆಟ್ಟದ ಮೇಲೆ ನಿರ್ಮಿಸಿರುವ ಕೋಟೆಗಳ ವಿಸ್ತಾರ ಸೀಮಿತವಾಗಿರುತ್ತದೆ. ಏಕೆಂದರೆ ಬೆಟ್ಟಕ್ಕೆ ಆವರಿಸಿಕೊಂಡು ಅದೇ ರೀತಿ ಕೋಟೆಯನ್ನು ನಿರ್ಮಿಸಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಕೋಟೆಯ ರಚನೆ ಕುರಿತು ಹೇಳುವುದು ಕಷ್ಟಕರ. ಅವುಗಳು ವೃತ್ತಾಕಾರ, ಚೌಕಾಕಾರ ಅಥವಾ ಆಯತಾಕಾರದ ರಚನೆಯನ್ನು ಹೊಂದಿದ್ದು, ಅವುಗಳ ಅನಿಯಮಿತ ಆಕಾರವನ್ನು ಹೊಂದಿರುತ್ತವೆ. ಉದಾಹರಣೆಗೆ ಶಹಾಪುರ ಕೋಟೆಯು ಮೂರು ಹಂತದಲ್ಲಿರುವ ಬೆಟ್ಟವನ್ನು ಆವರಿಸಿಕೊಂಡಿದೆ. ಬೆಟ್ಟಕ್ಕೆ ಅನುಗುಣವಾಗಿ ಗೋಡೆಯನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಇವುಗಳ ನಿರ್ಮಾಣಕ್ಕೆ ಸ್ಥಳಿಯವಾಗಿ ದೊರೆಯುವ ಸಾಮಗ್ರಿಗಳನ್ನು ಬಳಸಲಾಗುತ್ತದೆ. ಎರಡು ಬೆಟ್ಟಗಳನ್ನು ಜೋಡಿಸಲು ಮಧ್ಯದಲ್ಲಿ ಗೋಡೆಯನ್ನು ನಿರ್ಮಿಸಲಾಗುತ್ತದೆ. ಇಂತಹ ಗೋಡೆಯ ರಚನೆಗಳು ಶಹಾಪೂರ, ಸುರಪುರ, ವಾಗಣಗೇರಿ ಹಾಗೂ ಯಾದಗಿರಗಳಲ್ಲಿ ಕಂಡು ಬರುತ್ತವೆ. ಈ ರೀತಿಯ ಕೋಟೆಗಳಲ್ಲಿ ಎತ್ತರವಾದ ಬಂಡೆಗಳ ಮೇಲೆ ಕಾವಲುಗೋಪುರಗಳು, ಬುರುಜುಗಳು, ಮುಗಿಲಟ್ಟಣಿಕೆಗಳು ನಿರ್ಮಿಸಲಾಗುತ್ತದೆ.

ಕೋಟೆಯ ಕೆಲವು ಭಾಗಗಳನ್ನು ಕಾಲಕ್ಕೆ ತಕ್ಕಂತೆ ಪುನರ್‌ರಚಿಸಲಾಗಿದೆ. ಬಾಣದ ರಂಧ್ರಗಳನ್ನು ವೀಕ್ಷಣಾರಂಧ್ರಗಳನ್ನಾಗಿ ಪರಿವರ್ತಿಸಲಾಯಿತು. ಮತ್ತೆ ಇವುಗಳನ್ನು ಬಂದೂಕು ರಂಧ್ರಗಳಾಗಿ ಬಳಸಲಾಯಿತು. ಅಲ್ಲದೆ ಒಂದು ಕಿಂಡಿಯಲ್ಲಿ ಹಲವು ರಂಧ್ರಗಳಾಗಿ ವಿಭಾಗಿಸಿರುವುದು ಕಂಡು ಬರುತ್ತದೆ. ಕಾವಲುಗೋಪುರದ ಕೇಂದ್ರ ಭಾಗದಲ್ಲಿ ಮತ್ತೊಂದು ವೃತ್ತಾಕಾರದ ಕಟ್ಟಡವನ್ನು ನಿರ್ಮಿಸಿ ಅದರ ಮೇಲೆ ಫಿರಂಗಿಗಳನ್ನು ನಿಲ್ಲಿಸಲಾಗಿದೆ. ಯಾದಗಿರ ಕೋಟೆಯ ಕೆಲವು ಕಾವಲುಗೋಪುರಗಳನ್ನು ಈ ರೀತಿಯಾಗಿ ಪರಿವರ್ತನೆ ಗೊಳಿಸಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿ ಆಳ್ವಿಕೆ ಮಾಡಿರುವ ಎಲ್ಲಾ ರಾಜಕೀಯ ಮನೆತನಗಳು ಪ್ರತ್ಯೇಕವಾದ ಕೋಟೆಯನ್ನು ನಿರ್ಮಿಸಲು ಸಾಧ್ಯವಾಗಲಿಲ್ಲ ಇಂತಹ ಸಂದರ್ಭಗಳಲ್ಲಿ ದುರ್ಬಲವಾದ ರಾಜಕೀಯ ಮನೆತನವನ್ನು ಬದಿಗೊತ್ತಿ ಅವರ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ತಮ್ಮ ಅನುಕೂಲತೆಗೆ ತಕ್ಕಂತೆ ರಕ್ಷಣಾ ಸ್ಮಾರಕಗಳಲ್ಲಿ ಬದಲಾವಣೆ ಮಾಡಲಾಯಿತು. ಉದಾಹರಣೆಗೆ ಗುಲಬರ್ಗಾ ಕೋಟೆಯು ಮೂಲತ: ರಾಜಾ ಗುಲಚಂದನಿಂದ ನಿರ್ಮಿಸಲಾಗಿದ್ದು, ಇದನ್ನೆ, ಅಲ್ಲಾವುದ್ದೀನ್ ಹಸನ ಬಹಮನ್ ಶಹಾ ವಶಪಡಿಸಿಕೊಂಡು ಮೂಲ ಕೋಟೆಯಲ್ಲಿ ಬದಲಾವಣೆ ಮಾಡಿರುವುದು ಕಂಡು ಬರುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ಬಹಮನಿ ಸಾಮ್ರಾಜ್ಯವು ಅಸ್ತಿತ್ವಕ್ಕೆ ಬಂದ ಮೇಲೆ ಹೆಚ್ಚಿನ ಕೋಟೆಗಳು ರಚನೆಗೊಂಡವು ಇವುಗಳು ಮೊದಲಿನ ಕೋಟೆಗಳಿಗಿಂತ ಅತ್ಯಂತ ಭದ್ರವಾಗಿ ಮತ್ತು ರಕ್ಷಣಾತ್ಮಕವಾಗಿ ನಿರ್ಮಿಸಿರುವುದು ಕಂಡು ಬರುತ್ತದೆ. ಬಹಮನಿ ಸಲ್ತಾನರ ಕಾಲದಲ್ಲಿ ವಿಜಯನಗರದೊಂದಿಗೆ ನಿರಂತರ ಸಂಘರ್ಷ ಮುಂದುವರೆದಿರುವುದರಿಂದ ರಕ್ಷಣಾ ಸ್ಮಾರಕಗಳಲ್ಲಿ ಹಲವು ಬದಲಾವಣೆಗಳನ್ನು ತರಲಾಯಿತು. ಕ್ರಿ.ಶ. ೧೬-೧೭ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಕೋಟೆಗಳಲ್ಲಿ ಇವುಗಳ ಪ್ರಭಾವ ಉಂಟಾಗಿರುವುದು ಕಂಡು ಬರುತ್ತದೆ. ಜಿಲ್ಲೆಯಲ್ಲಿ ಬರುವ ಎಲ್ಲಾ ಕೋಟೆಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ.

೧. ಬಹಮನಿಯರ ಪೂರ್ವದ ಕೋಟೆಗಳು (ಪ್ರಾಚಿನ ಕಾಲದ ಕೋಟೆಗಳು).

೨. ಬಹಮನಿಯರ ಸಮಕಾಲೀನ ಕೋಟೆಗಳು (ಮಧ್ಯಕಾಲಿನ ಕೋಟೆಗಳು).

೩. ಬಹಮನಿಯರ ನಂತರದ ಕೋಟೆಗಳು (ಆಧುನಿಕ ಕೋಟೆಗಳು).

ಮೊದಲನೆಯ ವರ್ಗದ ಕೋಟೆಗಳಲ್ಲಿ ಕೋಟೆಕಾಳಗಗಳನ್ನು ಎದುರಿಸುವ ಸಾಮರ್ಥ್ಯ ಇರುವುದಿಲ್ಲ, ಅಂತಹ ಕೋಟೆಗಳು ಅವನತಿಯ ಹಂತದಲ್ಲಿವೆ. ಉದಾಹರಣೆಗೆ ಸನ್ನತಿ, ಮಳಖೇಡ, ಸಗರ, ಶಹಾಪುರದ ಮೊದಲನೆಯ ಕೋಟೆ ಹಾಗೂ ಇತರ ಗ್ರಾಮರಕ್ಷಣಾ ಕೋಟೆಗಳು ಆಕ್ರಮಣಕಾರರ ದಾಳಿಗೆ ತುತ್ತಾಗಿ ಅವನತಿ ಹೊಂದಿರುತ್ತವೆ. ಮಳಖೇಡ ಕೋಟೆಯ ಹೆಚ್ಚಿನ ಭಾಗವು ನಾಶ ಹೊಂದಿದ್ದು, ಹೊರಗೋಡೆ ಹಾಗೂ ಒಳಗೋಡೆಗಳು, ಕಾವಲುಗೋಪುರಗಳು ಮತ್ತು ಒಳಗಡೆ ಇರುವ ಎಲ್ಲಾ ಬಗೆಯ ರಕ್ಷಣಾ ಸಂಬಂಧಿ ಕಟ್ಟಡಗಳು ಆಕ್ರಮಣಕಾರರ ದಾಳಿಗೆ ನಾಶಹೊಂದಿವೆ.

ಎರಡನೆಯ ವರ್ಗದ ಕೋಟೆಗಳು ೧೪ನೆಯ ಶತಮಾನದಿಂದ ೧೬ನೆಯ ಶತಮಾನದ ಪೂರ್ವ ಭಾಗದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣಗೊಂಡವು. ಈ ಅವಧಿಯ ಕೋಟೆಗಳನ್ನು ಕಾಲಮಾನ ಹಾಗೂ ಮೊದಲನೆಯ ವರ್ಗದ ಕೋಟೆಗಳಲ್ಲಿಯ ಲೋಪ ದೋಷಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಿಸಲಾಯಿತು. ಈ ಕೋಟೆಗಳು ಜಿಲ್ಲೆಯಲ್ಲಿ ಇಂದಿಗೂ ಭದ್ರವಾದ ಸ್ಥಿತಿಯಲ್ಲಿವೆ. ಆಕ್ರಮಣಗಳನ್ನು ಎದುರಿಸುವ ಸಾಮರ್ಥ್ಯ ಈ ಕೋಟೆಗಳಲ್ಲಿ ಕಂಡು ಬರುತ್ತದೆ. ಬಹಮನಿ ಸುಲ್ತಾನರು ತಾವು ವಶಪಡಿಸಿಕೊಂಡ ಕೋಟೆಗಳನ್ನು ಪುನರ್‌ನಿರ್ಮಾಣಗೊಳಿಸಿ, ಅವಶ್ಯವಿರುವ ರಕ್ಷಣಾ ಸಂಬಂಧಿ ಕಟ್ಟಡಗಳನ್ನು ನಿರ್ಮಿಸಿದರು. ಗುಲಬರ್ಗಾ, ಫಿರೋಜಾಬಾದ, ಹೊಳಕುಂದಾ, ಶಹಾಪೂರ, ಕೋಟೆಗಳು ಬಹಮನಿಯರ ಕಾಲದಲ್ಲಿ ನಿರ್ಮಿಸಲಾಗಿದೆ. ಇವುಗಳನ್ನು ಹೊರತು ಪಡಿಸಿ, ಮಳಖೇಡ, ಯಾದಗಿರ, ಕೋಟೆಗಳನ್ನು ಪುನರ್‌ನಿರ್ಮಾಣಗೊಳಿಸಿರುವ ಕುರಿತು ಕೆಲವು ಶಾಸನಗಳಲ್ಲಿ ಉಲ್ಲೇಖಗಳಿವೆ. ಪ್ರಸ್ತುತ ಈ ಕೋಟೆಯಲ್ಲಿ ಪುನರ್‌ನಿರ್ಮಾಣಗೊಂಡ ಕಟ್ಟಡಗಳು ಉತ್ತಮ ಸ್ಥಿತಿಯಲ್ಲಿವೆ.

ಕೊನೆಯ ಅವಧಿಯ ಪ್ರಮುಖ ಕೋಟೆಗಳೆಂದರೆ ಸುರಪುರ, ವಾಗಣಗೇರಿ, ಚಿನ್ಮಳ್ಳಿ, ವನದುರ್ಗ, ರಾಯನ್‌ಪಾಳ್ಯ, ಮುಂತಾದ ಕೋಟೆಗಳು. ಇವುಗಳು ಸುರಪುರದ ನಾಯಕರ ಕಾಲದಲ್ಲಿ ನಿರ್ಮಿಸಿಲಾಗಿದೆ. ಈ ಕೋಟೆಗಳು ಮೊದಲಿನ ಕೋಟೆಗಳಿಗಿಂತ ಬಲಿಷ್ಠ ಹಾಗೂ ಭದ್ರವಾಗಿವೆ. ಮೊದಲಿನ ಕೋಟೆಗಳಿಗಿಂತ ಹೆಚ್ಚಿನ ಸುರಕ್ಷತೆಯ ಕ್ರಮಗಳನ್ನು ಅಳವಡಿಸಿರುವುದು ಇಲ್ಲಿ ಕಂಡು ಬರುತ್ತವೆ. ಉದಾಹರಣೆಗೆ ಕಾವಲುಗಾರರು ಕೋಟೆಯ ಮೇಲ್ಭಾಗದಲ್ಲಿ ಸುತ್ತಲು ತಿರುಗಾಡಲು ಸುರಕ್ಷಿತ ಮಾರ್ಗವನ್ನು ಕಲ್ಪಿಸಲಾಗಿದೆ. ಐದು ಅಡಿ ದಪ್ಪನೆಯ ಗೋಡೆಯ ಅರ್ಧಭಾಗದಲ್ಲಿ ೩ ಅಡಿಯಲ್ಲಿ ಎತ್ತರದ ಗೋಡೆ ಹಾಗೂ ಅದರ ಮೇಲೆ ಅರ್ಧವೃತ್ತಾಕಾರದ ತೆನೆಯನ್ನು ನಿರ್ಮಿಸಲಾಗಿದೆ. ಉಳಿದ ಅರ್ಧ ಭಾಗದಲ್ಲಿ ಕಾವಲುಗಾರರಿಗೆ ಕೋಟೆಯ ಸುತ್ತಲು ಕಾವಲು ಮಾಡಲು ಮಾರ್ಗವನ್ನು ನಿರ್ಮಿಸಲಾಗಿದೆ. ಗೋಡೆಯ ಹಿಂಭಾಗದಲ್ಲಿರುವ ಕಾವಲುಗಾರರ ಬಗೆಗೆ ಯಾವುದೆ ಮಾಹಿತಿಯು ಆಕ್ರಮಣಕಾರರಿಗೆ ತಿಳಿಯುವುದಿಲ್ಲ. ಇಂತಹ ವ್ಯವಸ್ಥೆಯು ವಾಗಣಗೇರಿ, ಚಂಡ್ರಕಿ, ಗುರಮಿಠಕಲ್, ಕೋಟೆಗಳಲ್ಲಿ ಕಂಡುಬರುತ್ತದೆ. ಅಲ್ಲದೆ ವೀಕ್ಷಣಾ ರಂದ್ರಗಳಲ್ಲಿ ಹಲವು ಮಾರ್ಪಾಡುಗಳನ್ನು ಮಾಡಲಾಗಿದೆ. ಕಾವಲುಗಾರರಿಗೆ ಕೆಳಗೆ ಇಳಿಯಲು ಹಾಗೂ ಮೇಲೆ ಹತ್ತಲು **'v'** ಆಕಾರದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಈ ರೀತಿಯ ರಚನೆ ಮೊದಲಿನ ಎರಡು ಪ್ರಕಾರದ ಕೋಟೆಗಳಲ್ಲಿ ಕಂಡು ಬರುವುದಿಲ್ಲ.

ಸುರಪುರ ನಾಯಕರ ಸಾಮಂತರಾದ ಕಾಕಲ್‌ವಾರ ದೇಸಾಯಿಗಳು ಹಾಗೂ ಇತರ ಪ್ರಮುಖ ಜಾಗಿರದಾರರು ತಮ್ಮ ಪ್ರದೇಶದಲ್ಲಿ ಮಣ್ಣಿನ ಕೋಟೆಗಳನ್ನು ನಿರ್ಮಿಸಿಕೊಂಡರು. ಕೊನೆಯ ಭಾಗದಲ್ಲಿ ನಿರ್ಮಾಣಗೊಂಡ ಈ ಕೋಟೆಗಳ ಮೇಲೆ ಮೊದಲಿನ ಮೂರು ಪ್ರಕಾರದ ಕೋಟೆಗಳ ಪ್ರಭಾವ ಕಂಡು ಬರುತ್ತದೆ. ಕಲ್ಲಿನಲ್ಲಿ ನಿರ್ಮಿಸಿರುವ ಕೋಟೆಯ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಈ ಕೋಟೆಗಳ ನಿರ್ಮಾಣಕ್ಕೆ ಹಾಳುಮಣ್ಣನ್ನು ಬಳಸಿ, ಅದರಲ್ಲಿಯೇ ತೆನೆಗಳು, ಜಾಲಂದ್ರಗಳು, ವೀಕ್ಷಣಾಕಿಂಡಿ ಮುಂತಾದ ಅಂಗ ಭಾಗಗಳನ್ನು ನಿರ್ಮಿಸಲಾಗಿದೆ. ಗುರಮಿಟ್‌ಕಲ್ ಸುತ್ತಮುತ್ತಲಿನ ಪರಿಸರದಲ್ಲಿ ನಿರ್ಮಾಣಗೊಂಡ ಚಂಡ್ರಕಿ, ಗುರಮಿಟಕಲ್, ಕಾಕಲ್‌ವಾರ್, ಪುಟ್‌ಪಾಕ, ಇಟಕಲ್, ಗಾಜರಕೋಟ್, ಮುಂತಾದ ಕೋಟೆಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಾಳುಮಣ್ಣನ್ನು ಬಳಸಲಾಗಿದೆ. ಈ ಕೋಟೆಗಳು ಆಕ್ರಮಣ ದೃಷ್ಟಿಯಿಂದ ಭದ್ರವಾಗಿರದಿದ್ದರೂ ರಚನೆಯ ವಿಧಾನದಿಂದ ಪ್ರಾಮುಖ್ಯತೆಯನ್ನು ಪಡೆದಿವೆ. ಇದರಿಂದ ಸ್ಥಳೀಯರ ಹೋರಾಟ ಪದ್ಧತಿಯನ್ನು ತಿಳಿದುಕೊಳ್ಳಬಹುದು. ಈ ಕೋಟೆಗಳು ಅವರ ಸಾಮರ್ಥ್ಯದ ಪ್ರತೀಕವಾಗಿವೆ.

ಕೋಟೆಯ ನಿರ್ಮಾಣದಲ್ಲಿ ಕಾರ್ಯನಿರ್ವಹಿಸಿದ ಕಾರ್ಮಿಕ ವರ್ಗದವರ ಕುರಿತು ಯಾವುದೇ ಲಿಖಿತ ದಾಖಲೆಗಳು ಲಭ್ಯವಿಲ್ಲ. ಆದರೆ ಕೆಲವು ಕೋಟೆಯ ನಿರ್ಮಾಣ ಕಾಲಕ್ಕೆ ಸಜೀವ ಬಲಿ ನೀಡಿರುವ ಕುರಿತು ಜಾನಪದ ಗೀತೆಗಳಲ್ಲಿ ಹಾಗೂ ಆಚರಣೆಗಳಲ್ಲಿ ಕಾಣಬಹುದು. ಗುಲಬರ್ಗಾ ಕೋಟೆಯ ಪೂರ್ವ ದ್ವಾರದ ಸಮೀಪದಲ್ಲಿ ಒಂದು ಕಾವಲುಗೋಪುರದ ನಿರ್ಮಾಣದ ಸಂದರ್ಭದಲ್ಲಿ

ಇದು ಮೇಲಿಂದ ಮೇಲೆ ಬೀಳುತ್ತಿರುವಾಗ ಜ್ಯೋತಿಷ್ಯರ ಸಲಹೆಯಂತೆ ಅಲ್ಲಿ ಗರ್ಭಿಣಿ ಹೆಣ್ಣುಮಗಳನ್ನು ಬಲಿ ಕೊಡಲಾಯಿತು. ಇಂದಿಗೂ ಆ ಸ್ಥಳದಲ್ಲಿ ಪ್ರತಿ ವರ್ಷ ಭೋವಿ ಸಮಾಜದವರು ಪೂಜೆಯನ್ನು ಸಲ್ಲಿಸುವ ಸಂಪ್ರದಾಯವಿದೆ. ಈ ರೀತಿ ಸುರಪುರ ಮತ್ತು ವಾಗಣಗೇರಿ ಕೋಟೆಗಳ ನಿರ್ಮಾಣಕ್ಕೆ ಬಲಿಯನ್ನು ನೀಡಿರುವ ವಿಷಯ ಕೈಫಿಯತ್ತುಗಳಲ್ಲಿ ಉಲ್ಲೇಖಿಸಲಾಗಿದೆ. ಕೋಟೆಯ ನಿರ್ಮಾಣಕ್ಕೆ ಅವಶ್ಯವಿರುವ ಕಾರ್ಮಿಕ ವರ್ಗದವರು ಕೋಟೆಯ ಸಮೀಪದಲ್ಲಿಯೆ ವಾಸವಾಗಿರುತ್ತಿದ್ದರು. ಅಂತಹ ವರ್ಗದ ಜನರು ವಾಸಿಸುವ ಬಡಾವಣೆಗಳು ಪ್ರತ್ಯೇಕ ಹೆಸರಿನಿಂದ ಗುರುತಿಸಲಾಗಿದೆ. ಉದಾಹರಣೆಗೆ ಗುಲಬರ್ಗಾ ಕೋಟೆಯ ಸಮೀಪದಲ್ಲಿ ಇರುವ ಲೋಹರಗಲ್ಲಿಯಲ್ಲಿ ಫಿರಂಗಿ ಹಾಗೂ ಶಸ್ತ್ರಾಸ್ತ್ರ ತಯ್ಯಾರಿಸುವ ಕಾರ್ಮಿಕರು ವಾಸವಾಗಿರುತ್ತಿದ್ದರು. ಇಂದಿಗೂ ಇಲ್ಲಿ ಹೆಚ್ಚಿನ ಸಂಖ್ಯೆಯ ಜನ ಲೋಹದ ಕಾರ್ಯದಲ್ಲಿ ತೊಡಗಿದ್ದಾರೆ. ಸುರಪುರ ಕೋಟೆಯ ಹೊರ ಭಾಗದಲ್ಲಿ 'ಕೋಟಕಾರರು' ಎನ್ನುವ ವಿಶೇಷ ವರ್ಗ ವಾಸವಾಗಿರುವ ಉಲ್ಲೇಖಗಳಿವೆ.

ಕೋಟೆಯ ನಿರ್ಮಾಣದಲ್ಲಿ ತೊಡಗಿರುವ ಕಾರ್ಮಿಕರಿಗೆ ಸ್ಥಳಿಯ ಸಾಂಸ್ಕೃತಿಕ ಹಿನ್ನೆಲೆ ಇರದೆ ಇರುವುದು ಕಂಡು ಬರುತ್ತದೆ. ಕೋಟೆಯ ನಿರ್ಮಾಣಕ್ಕೆ ಬಳಸಿರುವ ಕಲ್ಲುಗಳನ್ನು ಸರಿಯಾದ ಕ್ರಮದಲ್ಲಿ ಅಳವಡಿಸಿರುವುದಿಲ್ಲ. ಅವುಗಳಲ್ಲಿ ಹೂ ಬಳ್ಳಿಗಳ ಪ್ರಾಣಿ ಪಕ್ಷಿಗಳ ಶಿಲ್ಪದ ಕಲ್ಲುಗಳು ದೇವರ ಶಿಲ್ಪಗಳು ಮುಂತಾದವುಗಳು ತಲೆ ಕೆಳಗೆ ಮಾಡಿ ಹಾಕಿರುವುದು ಕಂಡು ಬರುತ್ತದೆ. ಕೆಲವು ಕೋಟೆಗಳಲ್ಲಿ ದೇವರ ಮೂರ್ತಿ ಶಿಲ್ಪಗಳು ತಲೆ ಕೆಳಗೆ ಮಾಡಿ ಹಾಕಿರುವುದು ಕಂಡು ಬರುತ್ತದೆ. ಇಲ್ಲಿ ಉದ್ದೇಶ ಪೂರ್ವಕವಾಗಿ ಹಿಂದೂ ವಿರೋದಿ ಕಾರ್ಮಿಕರು ಈ ರೀತಿ ಬಳಸಿರುವುದು ಕಂಡುಬರುತ್ತದೆ. ಗುಲಬರ್ಗಾ ಕೋಟೆಯ ಕೆಲವು ಭಾಗಗಳಲ್ಲಿ ನಕ್ಷತ್ರಾಕಾರದ ರಚನೆಗಳು, ಪ್ರಾಣಿಗಳ ಶಿಲ್ಪಗಳು ತಲೆಕೆಳಗಾಗಿ ನಿರ್ಮಿಸಲಾಗಿದೆ. ಅದೇ ರೀತಿ ಮಳಖೇಡ ಕೋಟೆಯ ಪಶ್ಚಿಮ ಭಾಗದ ಹೊರಗೋಡೆಯಲ್ಲಿ ದ್ವಾರ ಪಾಲಕರ ಶಿಲ್ಪಗಳನ್ನು ಅಡ್ಡಡ್ಡವಾಗಿ ಹಾಕಿ ಕಟ್ಟಲಾಗಿದೆ. ಕೋಟೆಯ ಕೇಂದ್ರ ಭಾಗದಲಲಿರುವ ಕಾವಲುಗೋಪುರದ ಪ್ರವೇಶ ದ್ವಾರಕ್ಕೆ ಗರ್ಭ ಗೃಹದ ಕಲ್ಲಿನ ಚೌಕಟ್ಟುಗಳನ್ನು ಬಳಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಕೈಗೊಂಡಾಗ ಮುಸ್ಲಿಂ ಕಾರ್ಮಿಕರು ಕೋಟೆಯ ನಿರ್ಮಾಣದಲ್ಲಿ ಕಾರ್ಯ ನಿರ್ವಹಿಸಿರುವಂತೆ ಕಂಡು ಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಕೆಲವು ವಿಷಯಗಳಲ್ಲಿ ನಿರ್ಧಿಷ್ಟವಾದ ಉತ್ತರ ಕಂಡು ಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಅವನತಿ ಹೊಂದಿರುವ ಕೋಟೆಗಳ ಸಾಮಗ್ರಿಗಳಿಂದ ಅದರ ರಚನೆಯ ವಿಧಾನವನ್ನು ಕುರಿತು ಸ್ಪಷ್ಟವಾಗಿ ಹೇಳುವುದು ಕಷ್ಟಕರವಾಗಿದೆ. ಕೆಲವು ಸಂದರ್ಭಗಳಲ್ಲಿ ಕ್ಷೇತ್ರ ಅಧ್ಯಯನಕ್ಕೆ ಹೋದಾಗ ಒಂದು ಪ್ರಮುಖವಾದ ಕಟ್ಟಡದ ಸುತ್ತಲು ಮುಳ್ಳಿನ ಕಂಟಿಗಳು ಆವರಿಸಿಕೊಂಡಿರುತ್ತವೆ. ಅದನ್ನು ತೆಗೆದು ಅದರ ಛಾಯಾಚಿತ್ರ ತೆಗೆಯಲು ಸಾಧ್ಯವಾಗಲಿಲ್ಲ. ಏಕೆಂದರೆ

[illegible]

ನಿರ್ಜನ ಪ್ರದೇಶದಲ್ಲಿರುವ ಈ ಕೋಟೆಗಳಲ್ಲಿ ಭಯಾನಕ ವಾತಾವರಣವಿರುತ್ತದೆ. ಒಂದು ಕಡೆ ಕಳ್ಳಕಾಕರ ತೊಂದರೆ ಮತ್ತೊಂದು ಕಡೆ ವಿಷಜಂತುಗಳ ಭಯ ಇಂತಹ ಸಂದರ್ಭದಲ್ಲಿ ಆದಷ್ಟು ಬೇಗನೆ ಆ ಸ್ಥಳದಿಂದ, ಮುಂದೆ ಹೋಗುವ ಪ್ರಸಂಗ ಬರುತ್ತದೆ. ಕಲಬುರ್ಗಿಯ ಕೋಟೆಯ ದಕ್ಷಿಣ ಭಾಗದಲ್ಲಿರುವ ದಟ್ಟವಾದ ಜಾಲಿ ಗಿಡಗಳ ಮಧ್ಯದಲ್ಲಿ ಪ್ರವೇಶಿಸಿ ಸುಮಾರು ಎರಡು ತಾಸುಗಳವರೆಗೆ ದಾರಿ ಕಾಣದೆ ತೊಂದರೆ ಅನುಭವಿಸಲಾಯಿತು. ವನದುರ್ಗ ಕೋಟೆಯಲ್ಲಿ, ಫಿರೋಜಾಬಾದ ಕೋಟೆಯಲ್ಲಿ ಇಂತಹ ತೊಂದರೆ ಅನುಭವಿಸಲಾಯಿತು. ಗಿರಿದುರ್ಗಗಳ ಕ್ಷೇತ್ರ ಅಧ್ಯಯನ ಮತ್ತಷ್ಟು ತೊಂದರೆದಾಯಕವಾದುದು, ಇಲ್ಲಿಯ ಕೆಲವು ಬತೇರಿಗಳಿಗೆ ತಲುಪಲು ಮಾರ್ಗಗಳೆ ಇರುವುದಿಲ್ಲ. ಅಂತಹ ಸಂದರ್ಭದಲ್ಲಿ ಅಲ್ಲಿಗೆ ಹೋಗದೆ, ದೂರದಿಂದ ಛಾಯಾ ಚಿತ್ರ ತೆಗೆದು ಅದರ ಮೂಲಕ ಮಾಹಿತಿ ನೀಡವುದು ಅನಿವಾರ್ಯವಾಗುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ಕೋಟೆಗಳನ್ನು ಹೊರತು ಪಡಿಸಿ, ರಕ್ಷಣೆಗೆ ಸಂಬಧಿಸಿದಂತೆ ಗ್ರಾಮೀಣ ಪ್ರದೇಶದಲ್ಲಿ **ರಕ್ಷಣಾ ಗೋಡೆ, ಅಗಸಿ, ಹುಡೆ** ಮತ್ತು **ವಾಡೆ**ಗಳು ಕಂಡು ಬರುತ್ತವೆ. ಇವುಗಳ ಕುರಿತು ಇದುವರೆಗೆ ಯಾವುದೆ ಅಧ್ಯಯನಗಳು ನಡೆದಿರುವುದಿಲ್ಲ. ಇವುಗಳ ಕುರಿತು ಯಾವುದೆ ಲೀಖಿತ ಮಾಹಿತಿಗಳು ಲಭ್ಯವಾಗುವುದಿಲ್ಲ. ಇಂತಹ ರಕ್ಷಣಾ ಸ್ಮಾರಕಗಳನ್ನು ಕುರಿತು ಪ್ರಥಮ ಬಾರಿಗೆ ಪ್ರಸ್ತುತ ಅಧ್ಯಯನದಲ್ಲಿ ಇವುಗಳ ಹುಟ್ಟು ಮತ್ತು ಬೆಳವಣೆಗೆಯನ್ನು ಚರ್ಚಿಸಲಾಗಿದೆ. ಕೋಟೆಗಳ ನಿರ್ಮಾಣ ಕಾಲದ ನಂತರ ನಿರ್ಮಿಸಲಾಗಿರುವ ಈ ಕಟ್ಟಡಗಳು ಕೋಟೆಗಳಿಗಿಂತ ಮುಂಚೆಯೇ ಅವನತಿ ಹೊಂದುತ್ತಲಿವೆ. ಕಾರಣ ಇವುಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ನೂರಾರು ಸಂಖ್ಯೆಯಲ್ಲಿರುವ ಹುಡೆಗಳಲ್ಲಿ ಕನಿಷ್ಟ ಒಂದು ಹುಡೆವು ಸಹ ಸರಕಾರದ ರಕ್ಷಣೆಗೆ ಒಳಪಟ್ಟಿರುವುದು ಕಂಡು ಬರುವುದಿಲ್ಲ. ಇವುಗಳಲ್ಲಿ ಕೆಲವು ಹುಡೆವುಗಳು ಖಾಸಗಿಯವರ ಒಡೆತನದಲ್ಲಿವೆ. ಇನ್ನೂ ಕೆಲವು ಕಟ್ಟಡಗಳು ಗ್ರಾಮಸ್ಥರಿಂದ ನಾಶ ಹೊಂದಿವೆ ಹಾಗೂ ಹೊಂದುತ್ತಲಿವೆ. ಅಲ್ಲದೆ ಗ್ರಾಮಗಳ ಬೆಳವಣಿಗೆಯಿಂದ ಇವುಗಳು ಅವನತಿ ಹೊಂದುತ್ತಲಿವೆ. ಉದಾಹರಣೆಗೆ ಅಫಜಲ್‌ಪುರ ತಾಲೂಕಿನ ಭೋಸಗಾ (ಕೆ) ಗ್ರಾಮದ ಒಂದು ಹುಡೆವು ರಸ್ತೆಯ ಪಕ್ಕದಲ್ಲಿ ಬಂದಿರುವುದರಿಂದ ಅದನು ನಾಶಗೊಳಿಸಿ, ರಸ್ತೆ ನಿರ್ಮಿಸಲಾಗಿದೆ. ಅದರಂತೆ ಮುದನೂರು ಗ್ರಾಮದಲ್ಲಿರುವ ಒಂದು ಹುಡೆವು ಒಳಗಡೆ ಮಾಡಿಕೊಂಡು ಮನೆಯನ್ನು ನಿರ್ಮಿಸಲಾಗಿದೆ. ಈ ರೀತಿಯಾಗಿ ನಿರ್ಲಕ್ಷಕ್ಕೆ ಒಳಗಾಗಿರುವ ಹುಡೆವುಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಒಳಗೊಂಡಿರುತ್ತದೆ. ಇವುಗಳ ಮಾಹಿತಿ ಸಂಗ್ರಹದಲ್ಲಿ ತೊಡಗಿ ಜಿಲ್ಲೆಯ ಹಲವು ಗ್ರಾಮಗಳಿಗೆ ಬೇಟಿ ನೀಡಿ ಇವುಗಳ ಛಾಯಾಚಿತ್ರ ಮತ್ತು ಮಾಹಿತಿ ಸಂಗ್ರಹಿಸಲಾಯಿತು. ಅದರ ಮೂಲಕ ಹುಡೆವುಗಳ ವಿಶ್ಲೇಷಣೆ ನೀಡಲಾಗಿದೆ. ಕೆಲವು ಕೋಟೆಗಳು ಪುನರ್‌ನಿರ್ಮಾಣಗೊಂಡಿರುವುದರಿಂದ ಅವುಗಳ ಕಾಲ ಘಟವನ್ನು ನಿರ್ಧರಿಸುವುದು ಕಷ್ಟಕರವಾಗಿದೆ. ಇಲ್ಲಿ ಆಧಾರಗಳ ಕೊರತೆ ಎದ್ದು

ಕಾಣುತ್ತದೆ. ಇದರಿಂದ ನಿರ್ಮಾಣದ ಕಾಲಮಾನ, ನಿರ್ಮಾಪಕರು ಹಾಗೂ ರಚನಾ ಶೈಲಿಯ ಕುರಿತು ಹೆಚ್ಚಿನ ಮಾಹಿತಿಗಳು ದೊರೆವುದಿಲ್ಲ.

ಒಂದು ವೇಳೆ ಇದೆ ರೀತಿ ಸರಕಾರದ ಹಾಗೂ ಸ್ಥಳೀಯರ ನಿರ್ಲಕ್ಷ ಮುಂದುವರೆದರೆ ಹುಡೆವುಗಳು ಸಂಪೂರ್ಣವಾಗಿ ನಾಶಹೊಂದುತ್ತವೆ. ಕೆಲವು ಗ್ರಾಮಗಳಲ್ಲಿ ನಾಲ್ಕು, ಐದು ಹುಡೆವುಗಳಿದ್ದವು ಆದರೆ ಅಂತಹ ಗ್ರಾಮಗಳಲ್ಲಿ ಪ್ರಸ್ತುತ ಒಂದು ಹುಡೆವು ಮಾತ್ರ ಕಂಡು ಬರುತ್ತದೆ. ಅದು ಸಹ ಅವನತಿಯ ಹಂತದಲ್ಲಿರುತ್ತದೆ. ಆದ್ದರಿಂದ ಅವುಗಳು ಅವನತಿ ಹೊಂದುವ ಪೂರ್ವದಲ್ಲಿ ಅವುಗಳ ಕುರಿತು ಮಾಹಿತಿ ಸಂಗ್ರಹಿಸಿ ಇಲ್ಲಿ ದಾಖಲಿಸಲಾಗಿದೆ.

ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನವು **"ರಕ್ಷಣಾ ವಾಸ್ತುಶಿಲ್ಪ ಗುಲಬರ್ಗಾ ಜಿಲ್ಲೆಯ"** ಎನ್ನುವ ಶಿರೋನಾಮೆಯನ್ನು ಹೊಂದಿದ್ದು. ಜಿಲ್ಲೆಯಲ್ಲಿ ಬರುವ ಎಲ್ಲಾ ಕೋಟೆಗಳು ಗ್ರಾಮ ರಕ್ಷಣಾ ಗೋಡೆಗಳು ಹಾಗೂ ರಕ್ಷಣಾ ಸಂಬಂಧಿ ಕಟ್ಟಗಳನ್ನು ಕುರಿತು ಚರ್ಚಿಸಲಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ರಚನೆಗೊಂಡ ಎಲ್ಲಾ ರಕ್ಷಣಾ ಸ್ಮಾರಕಗಳ ನಿರ್ಮಾಣಕ್ಕೆ ಸ್ಥಳಿಯ ಸಾಮಗ್ರಿಗಳನ್ನು ಬಳಸಿಕೊಂಡು ರಕ್ಷಣಾ ಕಟ್ಟಡಗಳನ್ನು ನಿರ್ಮಿಸಿರುವುದು ವಿಶೇಷವಾಗಿದೆ. ಇಲ್ಲಿ ದೊರೆಯುವ ಮಣ್ಣು, ಇಟ್ಟಿಗೆ, ಸುಣ್ಣದ ಕಲ್ಲು, ಕಪ್ಪನೆಯ ಕಲ್ಲು, ಬೆಣಚದಕ ಲ್ಲು ಹಾಗೂ ಹಾಳು ಮಣ್ಣನ್ನು ಬಳಸಿಕೊಂಡು ಕೋಟೆಗಳನ್ನು ನಿರ್ಮಿಸಿರುವುದರಿಂದ ಇಲ್ಲಿಯ ಪರಿಸರಕ್ಕೆ ದಕ್ಕೆಯಾಗಿರುವುದಿಲ್ಲ. ಸ್ಥಳೀಯವಾಗಿ ಲಭ್ಯವಾಗುವ ವಸ್ತುಗಳನ್ನು ಬಳಸಿಕೊಂಡು ರಕ್ಷಣಾ ಸ್ಮಾರಕಗಳನ್ನು ನಿರ್ಮಿಸಿರುವುದರಿಂದ ಇವುಗಳ ನಿರ್ಮಾಣಕ್ಕೆ ಹೆಚ್ಚು ಹಣವೆಚ್ಚ ಮಾಡದಿರುವಂತೆ ಕಂಡುಬರುತ್ತದೆ. ಒಟ್ಟಾರೆ ಕೋಟೆ-ಕೊತ್ತಲಗಳು ಸ್ಥಳಿಯ ಸಾಂಸ್ಕೃತಿಕ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುತ್ತವೆ. ಆದ್ದರಿಂದ ಇವುಗಳನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.

ಗುಲಬರ್ಗಾ ಜಿಲ್ಲೆಯ ಕೋಟೆಗಳ ನಿರ್ವಹಣೆ

ಕ್ರ. ಸಂ.	ಕೋಟೆಯ ಹೆಸರು	ತಾಲೂಕು	ಪುರಾತತ್ವ ಇಲಾಖೆ		ಖಾಸಗಿ	ನಿರ್ಲಕ್ಷಿತ	ಅವನತಿ
			ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ			
೧.	ಸನ್ನತಿ	ಚಿತ್ತಾಪೂರ	✓	✓			
೨.	ಸಗರ	ಶಹಾಪೂರ	–	–	–	✓	✓
೩.	ಮಳಖೇಡ	ಸೇಡಂ	–	✓	–	–	–
೪.	ಅಲ್ಲೂರ (ಬಿ)	ಸೇಡಂ	–	–	–	✓	✓
೫.	ಸೇಡಂ	ಸೇಡಂ	–	–	–	✓	–
೬.	ಅಡಕಿ	ಸೇಡಂ	–	–	–	✓	✓
೭.	ಮುಧೋಳ	ಸೇಡಂ	–	–	–	✓	✓
೮.	ನಾಗಾವಿ	ಚಿತ್ತಾಪೂರ	–	✓	–	–	–
೯.	ದಂಡೋತಿ	ಚಿತ್ತಾಪೂರ	–	–	✓	✓	✓
೧೦.	ಅಳ್ಳೊಳ್ಳಿ	ಚಿತ್ತಾಪೂರ	–	–	–	✓	✓
೧೧.	ಕೊಲ್ಲೂರ	ಚಿತ್ತಾಪೂರ	–	–	–	✓	✓
೧೨.	ಗುಲಬರ್ಗಾ	ಗುಲಬರ್ಗಾ	✓	–	–	–	–
೧೩.	ಫಿರೋಜಾಬಾದ	ಗುಲಬರ್ಗಾ	–	–	–	✓	–
೧೪.	ಫರಹತಾಬಾದ	ಗುಲಬರ್ಗಾ	–	–	–	✓	–
೧೫.	ಹೊಳಕುಂದಾ	ಗುಲಬರ್ಗಾ	–	–	–	✓	–
೧೬.	ಶಹಪೂರ	ಶಹಾಪೂರ	–	✓	–	–	–
೧೭.	ಯಾದಗಿರ	ಯಾದಗಿರ	–	✓	–	–	–
೧೮.	ಸುರಪುರ	ಸುರಪುರ	–	–	✓	–	–
೧೯.	ವಾಗಣಗೇರಿ	ಸುರಪೂರ	–	–	✓	–	–
೨೦.	ವನದುರ್ಗ	ಶಹಾಪೂರ	–	–	✓	–	–
೨೧.	ರಾಯನಪಾಳ್ಯ	ಸುರಪೂರ	–	–	✓	–	–
೨೨.	ಚಂದನಕೇರಾ	ಸುರಪೂರ	–	–	–	✓	✓
೨೩.	ಹೊಸಕಿಲ್ಲಾ	ಸುರಪೂರ	–	–	–	✓	✓
೨೪.	ಇಜೇರಿ	ಜೇವರ್ಗಿ	–	–	–	✓	–
೨೫.	ಚಿನ್ಮಳ್ಳಿ	ಅಫಜಲಪೂರ	–	–	–	✓	–
೨೬.	ಕಾಕಲ್‌ವಾರ್	ಯಾದಗಿರ	–	–	✓	✓	✓

೨೭.	ಚಂಡ್ರಕಿ	ಯಾದಗಿರ	–	–	✓	✓	✓
೨೮.	ಗುರುಮಿಟಕಲ್	ಯಾದಗಿರ	–	–	–	✓	✓
೨೯.	ಲಾಡ್ಲಾಪೂರ	ಚಿತ್ತಾಪೂರ	–	–	–	✓	✓
೩೦.	ಪುಟಪಾಕ್	ಯಾದಗಿರ	–	–	–	✓	✓
೩೧.	ಇಟಕಲ್	ಯಾದಗಿರ	–	–	–	✓	✓
೩೨.	ಗೊಟ್ಟಂಗೊಟ್ಟಾ	ಚಿಂಚೋಳಿ	–	–	–	✓	✓
೩೩.	ಚಿಂಚೋಳಿ	ಚಿಂಚೋಳಿ	–	–	–	✓	✓
೩೪.	ಶಿಲಾರಕೋಟ	ಸೇಡಮ್	–	–	–	✓	✓
೩೫.	ಗಾಜರಕೋಟ	ಸೇಡಮ್	–	–	–	✓	✓
೩೬.	ಕೋಟಗಾಂವ	ಸೇಡಮ್	–	–	–	✓	✓
೩೭.	ಮದನಾ	ಸೇಡಮ್	–	–	–	✓	✓
೩೮.	ಕೋಡ್ಲಾ	ಸೇಡಮ್	–	–	–	✓	✓
೩೯.	ಬಂದರವಾಡ	ಅಫಜಲಪೂರ	–	–	–	✓	✓

ಗುಲಬರ್ಗಾ ಜಿಲ್ಲೆಯ ಕೋಟೆಯ ಪ್ರಕಾರಗಳು

ಕ್ರ. ಸಂ.	ಕೋಟೆಯ ಹೆಸರು	ತಾಲೂಕು	ಗಿರಿದುರ್ಗ	ಜಲದುರ್ಗ	ಸ್ಥಳದುರ್ಗ	ಗ್ರಾಮ ರಕ್ಷಣಾ ದುರ್ಗ
೧.	ಸನ್ನತಿ	ಚಿತ್ತಾಪೂರ	–	✓	–	✓
೨.	ಸಗರ	ಶಹಾಪೂರ	–	✓	–	✓
೩.	ಗೊಟ್ಟಂಗೊಟ್ಟಾ	ಸೇಡಂ	–	–	✓	–
೪.	ಮಳಖೇಡ	ಸೇಡಂ	–	✓	–	–
೫.	ಅಲ್ಲೂರ (ಬಿ)	ಸೇಡಂ	✓	–	–	–
೬.	ಸೇಡಂ	ಸೇಡಂ	–	✓	–	–
೭.	ಅಡಕಿ	ಸೇಡಂ	–	✓	–	–
೮.	ಮುಧೋಳ	ಚಿತ್ತಾಪೂರ	–	–	✓	–
೯.	ನಾಗಾವಿ	ಚಿತ್ತಾಪೂರ	–	✓	✓	–
೧೦	ದಂಡೋತಿ	ಚಿತ್ತಾಪೂರ	–	–	✓	–
೧೧	ಅಳ್ಳೊಳ್ಳಿ	ಚಿತ್ತಾಪೂರ	–	–	–	✓
೧೨	ಕೊಲ್ಲೂರ	ಗುಲಬರ್ಗಾ	–	✓	–	–
೧೩	ಗುಲಬರ್ಗಾ	ಗುಲಬರ್ಗಾ	–	✓	✓	–
೧೪	ಫಿರೋಜಾಬಾದ	ಗುಲಬರ್ಗಾ	–	✓	–	–
೧೫	ಫರಹತಾಬಾದ	ಗುಲಬರ್ಗಾ	–	–	✓	–
೧೬	ಹೊಳಕುಂದಾ	ಶಹಾಪೂರ	–	–	✓	–
೧೭	ಶಹಪೂರ	ಯಾದಗಿರ	✓	–	–	–
೧೮	ಯಾದಗಿರ	ಸುರಪುರ	✓	–	–	–
೧೯	ಸುರಪುರ	ಸುರಪೂರ	✓	–	–	–
೨೦	ವಾಗಣಗೇರಿ	ಶಹಾಪೂರ	✓	–	–	–
೨೧	ವನದುರ್ಗ	ಸುರಪೂರ	–	–	ವನದುರ್ಗ	–
೨೨	ರಾಯನಪಾಳ್ಯ	ಸುರಪೂರ	–	–	✓	–
೨೩	ಹೊಸಕಿಲ್ಲಾ	ಸುರಪೂರ	–	–	✓	–
೨೪	ಇಜೇರಿ	ಜೇವರ್ಗಿ	–	–	✓	–
೨೫	ಚಿನ್ಮಳ್ಳಿ	ಅಫಜಲಪೂರ	–	✓	–	–
೨೬	ಕಾಕಲ್‌ವಾರ್	ಯಾದಗಿರ	–	–	✓	–
೨೭	ಚಂಡ್ರಕಿ	ಯಾದಗಿರ	–	–	✓	–
೨೮	ಗುರುಮಿಟಕಲ್	ಯಾದಗಿರ	–	–	✓	–

೨೯	ಲಾಡ್ಲಾಪೂರ	ಚಿತ್ತಾಪೂರ	✓	–	–	–
೩೦	ಚಂದನಕೇರಾ	ಯಾದಗಿರ	–	–	✓	✓
೩೧	ಪುಟಪಾಗ್	ಯಾದಗಿರ	–	–	✓	✓
೩೨	ಇಟಕಲ್	ಚಿಂಚೋಳಿ	–	–	✓	✓
೩೩	ಚಿಂಚೋಳಿ	ಚಿಂಚೋಳಿ	–	✓	–	✓
೩೪	ಶಿಲಾರಕೋಟ	ಸೇಡಮ್	–	–	✓	✓
೩೫	ಗಾಜರಕೋಟ	ಸೇಡಮ್	–	–	✓	✓
೩೬	ಕೋಟಗಾಂವ	ಸೇಡಮ್	–	–	✓	✓
೩೭	ಮದನಾ	ಸೇಡಮ್	–	–	✓	✓
೩೮	ಕೋಡ್ಲಾ	ಸೇಡಮ್	–	–	✓	✓
೩೯	ಬಂದರವಾಡ	ಅಫಜಲಪೂರ	–	–	✓	✓

ಪದಕೋಶ

ಅಗಸೆ	-	ಗ್ರಾಮದ ಪ್ರವೇಶ ದ್ವಾರ
ಅಟ್ಟಾ ಕಟ್ಟಾ	-	ಶಕ್ತಿವಂತ
ಅಂಬುಗಿಂಡಿ	-	ಕೋಟೆಗೋಡೆಯಲ್ಲಿ ಬಂದುಕಗಳಿಗೆ ಬಳಸುವ ಸ್ಥಳ
ಅಗಳು	-	ತಗ್ಗಾದ ಪ್ರದೇಶ
ಅರಿ	-	ಶತ್ರು
ಅಳ್ವೇರಿ	-	ಕೋಟೆಯ ಗೋಡೆ
ಇನಾಂ	-	ಬಹುಮಾನ
ಇಳಿವೊರೆ	-	ಕೋಟೆ ಗೋಡೆಯ ಭದ್ರತೆಗಾಗಿ ಹಾಕಿರುವ ಮಣ್ಣಿನ ದಿನ್ನೆ.
ಕಟಗಿ	-	ಉರುವಲು ಸೌದೆ.
ಕಣಜ	-	ದಾನ್ಯದ ಸಂಗ್ರಹದ ಸ್ಥಳ
ಕಳಕಿ	-	ಒಣಗಿದ ಜೋಳದ ದಂಟುಗಳು
ಕಾವಣಿ	-	ಕಲನ್ನು ಹೊಡೆಯಲು ಬಳಸುವ ಹಗ್ಗ
ಕಾಜು	-	ಗ್ಲಾಸ
ಕಿಲ್ಲೆ	-	ಕೋಟೆ
ಕಿರಾತ	-	ಪರಾಕ್ರಮಿ ಬೇಟೆಗಾರ
ಕುಂಬಿ	-	ಗ್ರಾಮಗಳ ಮನೆಯ ಗೋಡೆಯ ಮೇಲಿನ ವೃತ್ತಾಕಾರದ ರಚನೆ
ಕೋಟಕಾರರು	-	ಕೋಟೆ ಕಾಯುವ ಪಡೆ .
ಕೋತ್ತಳ	-	ಬುರುಜು
ಕೈಫಿಯತ್ತು	-	ಸಮಾಚಾರ ಕೈ ಬರಹದ ಸಂಗ್ರಹ .
ಖಡೆ	-	ಕೈಯಲ್ಲಿ ಹಾಕುರ ಆಭರಣ
ಖಾನಜಾದಾ	-	ಸುಲ್ತಾನ ಮಗ ರಾಜಕುಮಾರ
ಗಡ	-	ಕೋಟೆ
ಗಡಿ	-	ಕೋಟೆ
ಗುಮ್ಮ	-	ಕೋಟೆ ಕಾಳಗದಲ್ಲಿ ಕೋಟೆಯ ಗೋಡೆಯನ್ನು ಒಡೆಯಲು ಉಪಯೋಗಿಸುವ ಆಯುಧ
ಗುಳಿ	-	ಬಾಗಿಲು ಮುಚ್ಚಲು ಬಳಸುವ ವೃತ್ತಾಕಾರದ ಕಟ್ಟಿಗೆ
ಗುಂಡು	-	ಕೋವಿ ತುಬಾಕಿ
ಗುಂಬಜ	-	ಗುಮ್ಮಟ
ಗೆಗ್ಗೆ	-	ಕೋಟೆ ಹತ್ತುವ ವಿಶೇಷ ಸಾಧನ
ಗೊಂಡು	-	ಕೋಟೆ ಗೋಡೆಯು ಒಂದಕ್ಕೊಂದು ಸಂಧಿಸುವ ಸ್ಥಳ

ಗೋರಿ	-	ಸಮಾದಿ
ಚತುರೋಪಾಯ	-	ಸಾಮ ದಾನ ಬೇದ ದಂಡ ಎಂಬ ನಾಲ್ಕು ಉಪಯಗಳು .
ಚಾಪಿಸ	-	ಬಳಪ
ಛತ್ತು	-	ಮೇಲ್ಛಾವಣಿ
ಜಮಿನ್ದಾರ	-	ಚಿಕ್ಕ ಮಾಂಡಲಿಕ
ಜೆಂಗಿ	-	ಯುದ್ಧ ಕದನ
ಝುಂಡಾ	-	ಬಾವುಟ
ಠಾಣೇದಾರ	-	ನಾಯಕೋಡಿ ಕಾರಕೂನ
ಠಾಣ್ಯ	-	ಸೈನ್ಯದ ಶಿಬಿರ
ಠೌಳಿ	-	ಶಿರಸ್ತ್ರಣ
ಡೇರೆ	-	ಬಿಡಾರ ಗುಡಾರ
ಡೆಂಕಣಿ	-	ಒಂದು ಬಗೆಯ ಆಯುಧ
ತಲಾಬ್	-	ಭಾವಿ
ತಲವಾರ	-	ಕತ್ತಿ
ತಾಕಿತ್ತು	-	ಸೂಚನೆ
ತುಕಡಿ	-	ಸೇನಾದಳದ ವಿಭಾಗ
ತುರ್ತು	-	ಬೇಗನೆ
ತೆನೆ	-	ಕೋಟೆಗೋಡೆಯ ಮೇಲೆ ನಿರ್ಮಿಸಿರುವ ಅರ್ಧವೃತ್ತಾಕಾರದ ರಚನೆ
ತೌಡಿ	-	ಕಬ್ಬಿಣದ ಗದೆ
ದಂಡು	-	ಸೇನೆ
ದರಬಾರು	-	ಕರಣಿಕರು
ದರ್ಬಾರ	-	ಸಭಾಭವನ
ದರ್ವಾಜಾ	-	ಬಾಗಿಲು
ದಿಡ್ಡಿ	-	ಉಪದ್ವಾರ
ದೆವಡಿ	-	ಬಾವಿ
ನಯಾ	-	ಹೊಸದು
ನಿಷಾನಿ	-	ಚಿನ್ಹೆ ಗುರುತು
ಪಟ	-	ಧ್ವಜ
ಪಾತರಗಿತ್ತಿ	-	ನೃತ್ಯ ಮಾಡುವ ಮಹಿಳೆಯರು
ಪೆಟ	-	ರುಮಾಲು
ಪ್ರಕಾರ	-	ಸುತ್ತಗೋಡೆ
ಫರ್ಮಾನು	-	ರಾಜಾಜ್ಞೆ ಆಜ್ಞೆ

ಫಿರಂಗಿ	-	ಗುಂಡು ಹಾರಿಸುವ ಬೃಹದ್ದಾಕಾರದ ತುಪಾಕಿ
ಪುಲುಮೊಗ	-	ಕೋಟೆಯ ಹೆಬ್ಬಾಗಿಲು
ಫೌಜು	-	ಸೇನೆ
ಬತೇರಿ	-	ಕೋಟೆಯ ಮೇಲಿನ ತೋಪುಖಾನೆ.
ಬುರುಜು	-	ಕೋಟೆ ಗೋಡೆಗೆ ಅಂಟಿಕೊಂಡು ನಿರ್ಮಿಸಿರುವ ಅರ್ಧ ವೃತ್ತಾಕಾರದ ರಚನೆ
ಮೂಡಣ	-	ಪೂರ್ವದಿಕ್ಕು
ಮಾಡಾ	-	ಗೋಡೆಯಲ್ಲಿ ನಿರ್ಮಿಸಿರುವ ಸಾಮಗ್ರಿ ಗಳನ್ನು ಇಡುವ ಸ್ಥಳ
ಮೊಕ್ಕಾಂ	-	ಬೀಡು
ಲೋಹಾರಗಲ್ಲಿ	-	ಲೋಹಗಳ ಕಾರ್ಯನಿರ್ವಹಿಸುವ ಕಾರ್ಮಿಕರ ಬಡಾವಣೆ
ಲಡಾಯಿ	-	ಯುದ್ಧ
ವಜೀರ	-	ಪ್ರಧಾನ ಮಂತ್ರಿ
ಹಗೆವು	-	ದಾನ್ಯಗಳನ್ನು ನೆಲದಲ್ಲಿ ಇಡಲು ನಿರ್ಮಿಸಿರುವ ಕಟ್ಟಡ
ಹವಾಲ್ದಾರ	-	ಕೋಟೆ ರಕ್ಷಣೆಯ ಅಧಿಕಾರಿ
ಹುಡೆ	-	ಗ್ರಾಮಗಳಲ್ಲಿ ನಿರ್ಮಿಸಿರುವ ಕಾವಲು ಗೋಪುರ

ಗ್ರಂಥ ಋಣ

ಪ್ರಾಥಮಿಕ ಆಕರಗಳು:

ಎಪಿಗ್ರಫಿಯಾ ಕರ್ನಾಟಕ, ಸಂ. ೧ ರಿಂದ ೧೭.

ಕಲಬುರ್ಗಿ ಎಂ.ಎಂ. (ಸಂ.) ೧೯೯೪, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕಲಬುರ್ಗಿ ಎಂ.ಎಂ. (ಸಂ.) ೧೯೯೮ ಮನಸೋಲ್ಲಾಸ (ಸೋಮೇಶ್ವರ), ಸಂ. ೨, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲಬುರ್ಗಿ, ಎಂ.ಎಂ. (ಸಂ.), ಬಿಜಾಪುರ ಜಿಲ್ಲೆ ಶಾಸನ ಸೂಚಿ, ಧಾರವಾಡ, ೧೯೭೬.

ಕೃಷ್ಣಭಟ್ಟ ಕೆ. (ಅನು.) ೧೯೭೨, ಕೌಟಿಲ್ಯನ ಅರ್ಥಶಾಸ್ತ್ರ, ಸಮಾಜ ಪುಸ್ತಕಾಲಯ, ಧಾರವಾಡ.

ಗೋಪಾಲ್ ಬಿ.ಆರ್. ಮತ್ತು ಇತರರು (ಸಂ.): ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ ೪, ಹಂಪಿ, ೨೦೦೦.

ದೇವರಕೊಂಡಾ ರೆಡ್ಡಿ, (ಸಂ.), ಬೀದರ ಜಿಲ್ಲೆಯ ಶಾಸನಗಳು, ೨೦೦೮.

ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ.): ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ೨, ೩, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೧೯೯೮-೨೦೦೦.

ದೇವೀರಪ್ಪ ಎಚ್. (ಸಂ.) ೧೯೯೪ - ರಾಮನಾಥ ಚರಿತ, ಸಂ. ೨ ಮತ್ತು ೩, ಮೈಸೂರ ವಿಶ್ವವಿದ್ಯಾನಿಲಯ.

ನಾಗೇಗೌಡ, ಎಚ್.ಎಲ್. : ಪ್ರವಾಸಿ ಕಂಡ ಇಂಡಿಯಾ, ಸಂಪುಟ ೧-೨, ಮೈಸೂರು ವಿಶ್ವವಿದ್ಯಾನಿಲಯ, ೧೯೬೪-೬೬.

ಬಸಪ್ಪ ಎಸ್. (ಸಂ.): ಶಿವತತ್ವ ಚಿಂತಾಮಣಿ (ಲಕ್ಕಣ್ಣ ದಂಡೇಶ), ಮೈಸೂರು ವಿಶ್ವವಿದ್ಯಾನಿಲಯ, ೧೯೭೦.

ಬಸವರಾಜ ಭೂಪಾಲ, ೧೯೯೯, ಶಿವತತ್ತ್ವ ರತ್ನಾಕರ (ಸಂ. ಮಲ್ಲೇಪುರಂ ಜಿ. ವೆಂಕಟೇಶ), ಸಂ. ೧ ಮತ್ತು ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಯಾಸಿನ್ ಎಂ. ಮತ್ತು ಸೀತಾರಾಮ ಜಾಗೀರದಾರ, ಕರ್ನಾಟಕದ ಅರೆಬಿಕ್, ಪರ್ಶಿಯನ್ ಮತ್ತು ಉರ್ದು ಶಾಸನಗಳು, ೨೦೦೧.

ವಿರುಪಾಕ್ಷ ಪಂಡಿತ, ೧೯೩೪, ಚೆನ್ನಬಸವಪುರಾಣ, ಲಿಂಗಾಯತ ವಿದ್ಯಾಭಿವೃದ್ಧಿ, ಸಂಸ್ಥೆ, ಧಾರವಾಡ.

ಶಾಮಶಾಸ್ತ್ರಿ, ಆರ್. (ಸಂ.): ಕೆಳದಿ ನೃಪವಿಜಯಂ (ಲಿಂಗಣ್ಣ ಕವಿ), ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

ಸೀತಾರಾಮಯ್ಯ ಎಂ.ವಿ. (ಸಂ.): ಕವಿರಾಜಮಾರ್ಗಂ, ಮೈಸೂರು, ಡಿ.ವಿ.ಕೆ. ಮೂರ್ತಿ ಪ್ರಕಾಶನ, ೧೯೭೫.

ಹಿರೇಮಠ ಆರ್.ಸಿ. (ಸಂ.). ೧೯೭೩, ಮೋಹನ ತರಂಗಿಣಿ (ಕನಕದಾಸರು), ಧಾರವಾಡ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು.

ಪೂರಕ ಗ್ರಂಥಗಳು

ಅಣಿ ಶಂಕರ ಎಸ್. ಮತ್ತು ಹು.ಶ್ರೀ. ಪಾಂಡುರಂಗ ಜೋಯಿಸ್, ಚಿತ್ರದುರ್ಗದ ಏಳುಸುತ್ತಿನ ಕೋಟೆ, ಚಿತ್ರದುರ್ಗ, ೧೯೮೮.

ಅಥಣಿ ಶಂಕರ ಎಸ್. ಮತ್ತು ಹು.ಶ್ರೀ. ಪಾಂಡುರಂಗ ಜೋಯಿಸ್, ಚಿತ್ರದುರ್ಗ ಕೋಟೆ ವೈಭವ, ಚಿತ್ರದುರ್ಗ, ೧೯೯೮.

ಅಲ್ಲಮ ಪ್ರಭು ಬೆಟ್ಟದೂರು ಮತ್ತು ಪಾಟೀಲ್ ಎಚ್.ಎಸ್. (ಸಂ.), ಕೊಪ್ಪಳ ಜಿಲ್ಲಾ ದರ್ಶನ, ಜಿಲ್ಲಾ ದರ್ಶನ ಮಾಲಿಕೆ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

ಅಶೋಕ ವರ್ಧನ, ಬೆಟ್ಟಗುಡ್ಡಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

ಆನಂದ ಜೆ. ಕುಲಕರ್ಣಿ, ತಾಳಿಕೋಟೆಯುದ್ಧ: ಒಂದು ಅಧ್ಯಯನ, ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ಕರ್ನಾಟಕ ಚರಿತ್ರೆ ಮಾಲೆ ಸಂಪುಟಗಳು, ಕರ್ನಾಟಕ ವಿಶ್ವವಿದ್ಯಾಲಯ, ಹಂಪಿ, ೧೯೯೭.

ಕಪಟರಾಳ ಕೃಷ್ಣರಾವ್, ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೦.

ಕಲಬುರ್ಗಿ ಎಂ.ಎಂ., (ಸಂ.), ಕರ್ನಾಟಕ ಸಿರುಮಣ ನಾಯಕನ ಸಾಂಗತ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ಕರ್ನಾಟಕ ಚರಿತ್ರೆ ಸಂಪುಟಗಳು, ೧೯೯೫-೯೭, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫-೯೭.

ಕಲಬುರ್ಗಿ ಎಂ.ಎಂ., ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಕಲಬುರ್ಗಿ ಎಂ.ಎಂ., ಮಾರ್ಗ-೪, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು, ೨೦೦೪.

ಕಲಬುರ್ಗಿ ಎಂ.ಎಂ., ಶಾಸನ ವ್ಯಾಸಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ ವೀರ ಮರಣ ಸ್ಮಾರಕಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦.

ಕರೋವ್ಕಿನ್, ಎಫ್., ಪುರಾತನ ಜಗತ್ತಿನ ಇತಿಹಾಸ, ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು, ೧೯೮೭.

ಕಾಂಬಳೆ ಎಂ.ಟಿ. ಸನ್ನತಿ: ಒಂದು ಸಾಂಸ್ಕೃತಿಕ ಅಧ್ಯಯನ (ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ), ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ಕುಲಕರ್ಣಿ ಜಿ.ಬಿ., ರಾಷ್ಟ್ರಕೂಟರು ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೧.

ಕುಮಾರಸ್ವಾಮಿ ಕೆ.ಎಸ್., ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಚಾರಿಯರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೬.

ಕೊಟ್ರೇಶ್ ಎಂ., ಕೋಟೆ ಕೊತ್ತಲಗಳು ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ), ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಕೃಷ್ಣ ಎಂ.ಎಚ್., ಕರ್ನಾಟಕದ ಪೂರ್ವ ಚರಿತ್ರೆ, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ, ೧೯೫೩.

ಕೃಷ್ಣರಾವ ಎಂ.ವಿ., ಕೇಶವಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ, ಬೆಂಗಳೂರು, ೧೯೭೦.

ಕೃಷ್ಣಮಾಚಾರ್ಯ ಬಿ., ಮರೆಯಲಾಗದ ಸುರಪುರ ರಾಜರ ಚರಿತ್ರೆ, ಶ್ರೀಮತಿ ರಂಜನಾ ಪ್ರಕಾಶ ಚಂದ, ಜೈನ ಸುರಪುರ, ೨೦೦೩.

ಕೃಷ್ಣಶರ್ಮ ಬೆಟಗೇರಿ, ಕರ್ನಾಟಕ ಜನಜೀವನ, ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು, ೧೯೮೩.

ಕೃಷ್ಣಮೂರ್ತಿ ಪಿ.ವಿ., ವಸಂತಲಕ್ಷ್ಮಿ ಕೆ. (ಸಂ.) ಸೂರ್ಯಕೀರ್ತಿ, ಬೆಂಗಳೂರು,

ಕೃಷ್ಣಮೂರ್ತಿ, ಶ.ರಾ. (ಸಂ.), ಪಾಳೆಗಾರರ ಪದಗಳು, ಜಾನಪದ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೭೫.

ಕೃಷ್ಣಸ್ವಾಮಿ, ಕೆ.ರಾ., ಚಿತ್ರದುರ್ಗದ ಇತಿಹಾಸ ಹೇಳುವ ಕೋಟೆ, ಜಾನಪದ ಅಕಾಡೆಮಿ, ಬೆಂಗಳೂರು, ೧೯೭೫.

ಕೃಷ್ಣಭಟ ಕೆ. (ಅನು.) 'ಕೌಟಿಲ್ಯನ ಅರ್ಥಶಾಸ್ತ್ರ', ಸಮಾಜ ಪುಸ್ತಕಾಲಯ, ಧಾರವಾಡ, ೧೯೨೭.

ಗೋವಿಂದಮೂರ್ತಿ ದೇಸಾಯಿ, ಸವಣೂರು ನವಾಬರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಗುರುನಾಥ ಜೋಶಿ, ಕನ್ನಡ-ಕನ್ನಡ ಶಬ್ದಕೋಶವ ಸಂಕೇಶ್ವರ ಮತ್ತು ಕಂಪನಿ, ಗದಗ, ೧೯೯೦.

ಗಿರಿಜ ಟಿ., ಚಿತ್ರದುರ್ಗ ಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ, ಮೈಸೂರು ಮಠದ ರಸ್ತೆ, ದಾವಣಗೆರೆ.

ಚೆಲುವರಾಜು, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಚನ್ನಬಸಪ್ಪ ಪಾಟೀಲ, ಕರ್ನಾಟಕದ ಕೋಟೆಗಳು ಸಂ. ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಚನ್ನಬಸಪ್ಪ, ಎಸ್.ಪಾಟೀಲ, ಕರ್ನಾಟಕದ ಕೋಟೆಗಳು, ಸಂ. ೧, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೦.

ಚಿದಾನಂದ ಮೂರ್ತಿ ಎಂ., ವೀರಗಲ್ಲುಗಳು ಮತ್ತು ಮಾಸ್ತಿ ಕಲ್ಲುಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೫.

ಚಿದಾನಂದ ಮೂರ್ತಿ ಎಂ., ಸಂಶೋಧನೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೬೭.

ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನ ಸಂಸ್ಕೃತಿಗಳ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬.

ಚಿದನಾಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ವಿಶ್ವವಿದ್ಯಾಲಯ, ೧೯೬೬.

ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೯.

ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ೧೯೭೯.

ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೦.

ಜೋಶಿ ಶಂ.ಭಾ, ಋಗ್ವೇದಸಾರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೧.

ಜೋಶಿ, ಜಿ.ಜಿ., ಕೌಟಿಲ್ಯನ ರಾಜ್ಯ ಪದ್ಧತಿಯ ಸಮೀಕ್ಷೆ, ಬೆಳಗಾವಿ, ಶರತ್ ಪ್ರಕಾಶನ, ೧೯೯೧.

ದಿವಾಕರ, ಆರ್.ಆರ್., ಕರ್ನಾಟಕದ ಪರಂಪರೆ ಭಾಗ-೧, ೨, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೨.

ದೊಡ್ಡಮನಿ ಗಂಗಾಧರ, ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜಧಾನಿ ಪಟ್ಟಣಗಳು: ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ದೇವಿರಪ್ಪ ಎಚ್. (ಸಂ.) ರಾಮನಾಥ ಚರಿತ್ರೆ ಸಂಪುಟ-೨ ಮತ್ತು ೩, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೪.

ನಂಜುಂಡಸ್ವಾಮಿ ಎಂ.ಎಸ್., ಚಾಲುಕ್ಯರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೧.

ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ ಸಂಪುಟ-೧, ೨ ಮತ್ತು ೧೧.

ಪುಲುಮತಿ ಶ್ಯಾಮರಾವ್, ವಿಜಯನಗರದ ಕಲೆ ಮತ್ತು ಸಾಹಿತ್ಯ, ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೫೬.

ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೯.

ಪಂಚಮುಖಿ ಆರ್.ಎಸ್., ಕರ್ನಾಟಕ ಇತಿಹಾಸ, ಧಾರವಾಡ, ೧೯೬೭.

ಪಂಚಮುಖಿ ಆರ್.ಎಸ್., ಕರ್ನಾಟಕ ಇತಿಹಾಸ, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೧೯೬೭.

ಪಾಟೀಲ ಮಹೇಶಕುಮಾರ, ಕರ್ನಾಟಕದ ಸಾಮಂತ ಅರಸು ಮನೆತನಗಳು ಮತ್ತು ಅವರಾಳ್ವಿಕೆಯ ಪ್ರದೇಶಗಳಲ್ಲಿ ಅವರು ಕೈಗೊಂಡ ಸಾಂಸ್ಕೃತಿಕ ಅಭಿವೃದ್ಧಿ, ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ಪಾಟೀಲ್ ಎಂ.ಬಿ., ಗುಲಬರ್ಗಾ ಜಿಲ್ಲಾ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೇಟಿಯರ್, ಬೆಂಗಳೂರು, ೧೯೯೨.

ಬಸವರಾಜ ಉಪ್ಪಿನ, ಬಾನಯ್ಯ ಗರುಡಾದ್ರಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೫.

ಬಸವರಾಜ ಎಚ್.ಎಂ., ಗುಡೆಕೋಟೆ: ಒಂದು ಚಾರಿತ್ರಿಕ ಅಧ್ಯಯನ, ಎಂ.ಫಿಲ್. ಸಂಶೋಧನಾ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ಬಡಿಗೇರ, ವಿ.ಎಸ್., ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ, ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨.

ಭಾಸ್ಕರ ಟಿ.ಎಂ. ಮತ್ತು ರಾಜಶೇಖರ ಹತಗುಂಡಿ (ಸಂ.), ಕಲಬುರ್ಗಿ ಜಿಲ್ಲಾ ದರ್ಶನ, ಪ್ರಸರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

ಮನೋಜ ಪಾಟೀಲ (ಸಂ.), ಬೆಳಗಾವಿ ಜಿಲ್ಲಾ ಮಾರ್ಗದರ್ಶಿ, ಪವನ ಪ್ರಕಾಶನ, ಬೆಳಕವಾಡಿ, ಬೆಳಗಾವಿ, ೧೯೮೭.

ಮಲ್ಲೇಪುರಂ ಜಿ. ವೆಂಕಟೇಶ (ಅನು.) ಶಿವತತ್ವ ರತ್ನಾಕರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮.

ಮಹಾಬಲೇಶ್ವರಪ್ಪ, ಬಿ.ಸಿ., ಹೈದ್ರಾಬಾದ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು (೧೯೪೬-೨೦೦೦), ಪ್ರಸಾರಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೮.

ರವೀಂದ್ರನಾಥ ಕೆ. (ಸಂ.), ಬಳ್ಳಾರಿ ಜಿಲ್ಲಾ ದರ್ಶನ, ಜಿಲ್ಲಾ ದರ್ಶನ ಮಾಲಿಕೆ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

ರಂಗರಾಜ ದೇವೇಂದ್ರಪ್ಪ, ಸುರಪುರ ಸಂಸ್ಥಾನ ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

ರಂಗರಾಜನ್ ಎಲ್.ಎನ್. (ಸಂ.), ಕೌಟಿಲ್ಯನ ಅರ್ಥಶಾಸ್ತ್ರ, ಪೆಂಗ್ವಿನ್ ಪುಸ್ತಕಾಲಯ, ಹೊಸ ದೆಹಲಿ, ೧೯೬೭.

ರಡ್ಡೆಪ್ಪ ಪಂಪಣ, ರಾಯಚೂರು ಕೋಟೆಯ ಇತಿಹಾಸ, ಎಂ.ಫಿಲ್. ಸಂಶೋಧನಾ ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೫.

ರಾಜಶೇಖರ, ಎಸ್. ವಿಜಯನಗರ ಕಾಲದ ಘಟನಾವಳಿ ಸೂಚಿ, ಧಾರವಾಡ, ಸುಜಾತ ಪಬ್ಲಿಕೇಶನ್ಸ್.

ರಾಮೇಗೌಡ, ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು, ಮೈಸೂರು, ಚಿತ್ರಕೂಟ, ೧೯೯೨.

ರಾಮಚಂದ್ರಪ್ಪ ಬರಗೂರು (ಪ್ರ.ಸಂ.): ಕನ್ನಡ ಸಾಹಿತ್ಯದಲ್ಲಿ ಯುದ್ಧ ಮತ್ತು ಶಾಂತಿ, ಬೆಂಗಳೂರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩.

ರಾಮಚಂದ್ರರಾವ್, ಎಸ್.ಕೆ., ಸಂಪ್ರದಾಯ ಶಿಲ್ಪಕಲೆ ಮತ್ತು ಚಿತ್ರಕಲೆ, ಶಿಲ್ಪಕಲಾ ಪ್ರತಿಷ್ಠಾನ, ಬೆಂಗಳೂರು, ೧೯೮೩.

ರಾಮಶೇಷನ್ ನೀ.ಕೃ. ಕರ್ನಾಟಕದ ಕೋಟೆ ಕೊತ್ತಲಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೦.

ರಾಮಶೇಷನ್ ನೀ.ಕೃ., ಕರ್ನಾಟಕ ಕೋಟೆಗಳು - ಕೊತ್ತಳಗಳು, ಬೆಂಗಳೂರು, ೧೯೮೦.

ರೇವಣಸಿದ್ದಯ್ಯ ಆರ್., ಶೋರಾಪುರ ತಾಲೂಕಾ ದಶಶನ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೮೬.

ಲಕ್ಷ್ಮಿದೇವಿ ಶಾಸ್ತ್ರಿ, ರಾಯಚೂರು ಕೋಟೆ ನರಬಲಿ ಪ್ರಸಂಗ, ಪ್ರಚಾರೋಪಾನ್ಯಸಮಾಲೆ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೩.

ಲೂಯಿಸ್ ರೈಸ್ (ಸಂ.), ಅಮರಸಿಂಹನ ಅಮರಕೋಶ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ವಜೀರಬಾಶಾ ಮ. ಬಾಗಾಯತ, ಕರ್ನಾಟಕ ಮುಸ್ಲಿಮ್ ಅರಸರ ಕಾಲದ ಚಿತ್ರಕಲೆ: ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

ವಿರೂಪಾಕ್ಷ ಪಾಟೀಲ್, ಚನ್ನಬಸವ ಪುರಾಣ, ಲಿಂಗಾಯದ ವಿದ್ಯಾ ಅಭಿವೃದ್ಧಿ ಸಂಸ್ಥೆ, ಧಾರವಾಡ, ೧೯೩೪.

ವೆಂಕಟಾಚಲಶಾಸ್ತ್ರಿ, ಟಿ.ವಿ. (ಸಂ.), ಕನ್ನಡ ಸಾಹಿತ್ಯ ಚರಿತ್ರೆ, ಸಂ. ೫, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೧.

ಶಿವತಾರಕ ಕೆ.ಬಿ. ಕರ್ನಾಟಕ ಪುರಾತತ್ವ ನೆಲೆಗಳು, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೨೦೦೧.

ಶಿವತಾರಕ, ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧.

ಶೀಲಾಕಾಂತ ಪತ್ತಾರ, ಬಾದಾಮಿ - ಒಂದು ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಶ್ರೀಧರ ಎಚ್.ಜಿ., ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ವಿವೇಕಾನಂದ ಕಾಲೇಜು, ಪುತ್ತೂರು, ೨೦೦೨.

ಶ್ರೀಧರಮೂರ್ತಿ ಎಚ್.ಜೆ., ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕತೆ, ಶಿವರಾಂ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೨೦೦೨.

ಶ್ರೀಶೈಲ ಆರಾಧ್ಯ, ಸಂಶೋಧನೆಯ ಹಾದಿಯಲ್ಲಿ, ಆರೋಹಣ ಪ್ರಕಾಶನ, ಚಿತ್ರದುರ್ಗ, ೧೯೮೩.

ಶ್ರೀಕಂಠ ಶಾಸ್ತ್ರಿ ಎಸ್., ಪುರಾತತ್ವ ಶೋಧನೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೦.

ಶ್ರೀಕಂಠಯ್ಯ ಕೆ., ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೩.

ಶುಭಾ, ಸುರಪುರ: ವಿಮೋಚನಾ ಹೋರಾಟಗಳು, ಎಂ.ಫಿಲ್. ಸಂಶೋಧನಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಶೇಷಾಶಾಸ್ತ್ರಿ, ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

ಶೇಠ, ಬಿ.ಎಸ್., ಕರ್ನಾಟಕದಲ್ಲಿ ಸತಿಪದ್ಧತಿ, ಬೆಳಗಾವಿ, ವೀರಶೈವ ಅಧ್ಯಯನ ಅಕಾಡೆಮಿ, ೧೯೯೧.

ಸಿಂದಗಿ ರಾಜಶೇಖರ, ಕರ್ನಾಟಕ ವಾಸ್ತುಶಿಲ್ಪ ಚಿತ್ರಕಲೆ, ಸುಜಾತಾ ಪಬ್ಲಿಕೇಶನ್ಸ್, ಧಾರವಾಡ, ೧೯೮೮.

ಸುಜಾತ ಮಲ್ಲಾನಗೌಡ, ರಾಯಚೂರು ಮತ್ತು ಕೊಪ್ಪಳ ಕೋಟೆಗಳು - ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಸೋಮನಾಥ ಯಾಳವಾರ ಮತ್ತು ಪ್ರೇಮಾ ಸಿರ್ಶೆ, (ಸಂ.), ಬೀದರ ಜಿಲ್ಲಾ ದರ್ಶನ, ಜಿಲ್ಲಾದರ್ಶನ ಸಮಾಲಿಕೆ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫.

ಸೋಮಶೇಖರ ಎಸ್.ವೈ., ವಿಜಯನಗರ ಕಾಲದ ಸೈನ್ಯಾ ವ್ಯವಸ್ಥೆ ಮತ್ತು ಯುದ್ಧ ನೀತಿ ಪಿಎಚ್.ಡಿ. ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಹಿರೇಮಠ ಆರ್.ಸಿ. (ಸಂ.), ಮೋಹನ ತರಂಗಿಣಿ (ಕನಕದಾಸರು), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೩.

ಲೇಖನಗಳು

೧ ಅಥಣಿ ಶಂಕರ ಎಸ್., ಚಿತ್ರದುರ್ಗ ಕೋಟೆಯ ಕೆಲವು ಬತೇರಿಗಳು, ಸತ್ಯಶುದ್ಧ ಕಾಯಕ, ಸಂಪುಟ-೨, ಸಂಚಿಕೆ-೧-೨, ಚಿತ್ರದುರ್ಗ.

೧ ಅಪರ್ಣ ಕೂ.ಸ., ಗುಲ್ಬರ್ಗ ಜಿಲ್ಲೆಯ ದೇವಾಲಯ ಸಂಬಂಧೀ ಶಾಸನಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಕುಂದಣಗಾರ ಕೆ.ಜಿ. - ಕರ್ನಾಟಕ ಸಾಹಿತ್ಯದಲ್ಲಿ ಚಿತ್ರಕಲೆ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಎಪ್ರಿಲ್, ೧೯೮೦.

ಗೋಪಾಲಕೃಷ್ಣರಾವ್ ಕೆ.ಜಿ., ವಿಜಯನಗರ ಮತ್ತು ಬಹಮನಿ ರಾಜ್ಯಗಳ ಸಂಬಂಧಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಚಳುಕಿ, ಮೆಡೋಸ್ ಟೇಲರ್, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಚಿನ್ನಸ್ವಾಮಿ ಎನ್. ಸೋಸಲೆ, ಹೈದರಾಬಾದು ವಿಮೋಚನ ಚಳವಳಿಯಲ್ಲಿ ಗುಲ್ಬರ್ಗ ಜಿಲ್ಲಾ ಶಿಬಿರಗಳ ಪಾತ್ರ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಜಯತೀರ್ಥ ಕಾಗಲಕರ, ನಶಿಸುತ್ತಿರುವ ಗರುಡಾದ್ರಿ ಪರಂಪರೆಯ ಚಿತ್ರಕಲೆ, ಸಂಯುಕ್ತ ಕರ್ನಾಟಕ, ಮೇ ೨೮, ೧೯೯೬.

ಜೋಶಿ ಎಸ್.ಕೆ. ೧೯೯೪, 'ಸನ್ನತಿದುರ್ಗದ ಪುನದರ್ಶನ' ಇತಿಹಾಸ ದರ್ಶನ ಸಂ. ೯, ಪು. ೧೫-೧೭.

ತಿಪ್ಪೇಸ್ವಾಮಿ ಪಿ.ಆರ್. - ಭಾರತೀಯ ಚಿತ್ರಕಲಾ ಪರಂಪರೆ, ಸವಿಸಂಚಯ (ಸದಾಶಿವ ಒಡೆಯರ್ ಸಂಸ್ಮರಣ ಗ್ರಂಥ), ೧೯೮೦.

ನರಸಿಂಹಮೂರ್ತಿ ಪಿ.ಎನ್., ಗುಲಬರ್ಗ ಜಿಲ್ಲೆಯಲ್ಲಿ ಜೈನಧರ್ಮ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಪಾಟೀಲ ಚನ್ನಬಸಪ್ಪ ಎಸ್. ೧೯೯೩-೧೯೯೫, ಮಾತಾನಾಡುವ ಕೋಟೆಗಳು, ದಿಕ್ಸೂಚಿ ಮಾಸಪತ್ರಿಕೆ, ಜುಲೈ ೧೯೯೩ ರಿಂದ ಜೂನ್ ೧೯೯೫ರ ವರೆಗಿನ ಸಂಚಿಕೆಗಳು, ಬೆಂಗಳೂರು.

ಪಾಟೀಲ ಚನ್ನಬಸಪ್ಪ ಎಸ್. ೧೯೯೪, ರಾಯಚೂರು ಜಿಲ್ಲೆಯ ಕೋಟೆಗಳು, ಎಡೆದೊರೆನಾಡು ಉತ್ಸವ ಸ್ಮರಣ ಸಂಚಿಕೆ, ರಾಯಚೂರು, ಪು. ೧.೧-೧.೧೧.

ಪಾಟೀಲ ಚನ್ನಬಸಪ್ಪ ಎಸ್. ೧೯೯೪, ಮಹಾನಾಡ ಪ್ರಭುಗಳ ಕೋಟೆ ಕೊತ್ತಳಗಳು, ಮಹಾನಾಡು ಪ್ರಭುಗಳು, ಬಿಜ್ಜಾವರ-ಮಧುಗಿರಿ ಅರಸು ಮನೆತನಗಳು, (ಸಂ.) ಎಂ.ಎಂ. ಕಲಬುರ್ಗಿ, ಬೆಂಗಳೂರುರು, ಪು. ೨೭-೭೮.

ಪಾಟೀಲ ಚನ್ನಬಸಪ್ಪ, ೧೯೯೫, ಹೊಯ್ಸಳರಿಗೆ ಗಿರಿದುರ್ಗಮಲ್ಲ ಮತ್ತು ಶನಿವಾರಸಿದ್ಧಿ ಬಿರುದುಗಳನ್ನಿತ್ತ ಉಚ್ಚಂಗಿದುರ್ಗವ ಇತಿಹಾಸ ದರ್ಶನ, ಸಂ. ೧೦, ಪು. ೧೫೭-೧೬೦.

ಪಾಟೀಲ ಎಸ್.ಸಿ. - ಚಿತ್ರಕಲೆಯ ಆರು ಅಂಗಲಕ್ಷಣಗಳು, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ, ಡಿಸೆಂಬರ್, ೧೯೮೬.

ಬಸವರಾಜ ಟನಕೆದಾರ, ಡಾ. ಅಂಬೇಡ್ಕರೋತ್ತರ ಸಮಾಜ ಸುಧಾರಕ: ಬಿ. ಶ್ಯಾಮಸುಂದರ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಮಲ್ಲಿಕಾರ್ಜುನ ಡಿ., ಯಾದಗಿರಿ ತಾಲ್ಲೂಕಿನ ಕೆಲವು ಹಳ್ಳಿಗಳ ಐತಿಹಾಸಿಕ ಹಿನ್ನೆಲೆ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಮಹದೇವಯ್ಯ ಎಂ.ಪಿ., ಗುಲಬರ್ಗಾ ಜಿಲ್ಲೆಯಲ್ಲಿ ಜೈನಧರ್ಮ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಮಾಡಲಗೇರಿ ಕೊಟ್ರೇಶ್, ೧೯೯೮, ಗಿರಿದುರ್ಗ ಉಚ್ಚಂಗಿ ಪ್ರದೇಶ - ಒಂದು ಪರಿಶೀಲನೆ, ಇತಿಹಾಸ ದರ್ಶನ, ಸಂ. ೧೩, ಪು. ೧೮೧-೧೮೫.

ರಾಧಾಕೃಷ್ಣಮೂರ್ತಿ, ೧೯೯೧, ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ, ಇತಿಹಾಸ ದರ್ಶನ, ಸಂ. ೬, ಪು. ೧೫೭-೧೬೨.

ರಾಜೇಶ ಶಹಬಾದಿ, ವಿನಾಶದ ಅಂಚಿನಲ್ಲಿ ವಿಶ್ವವಿಖ್ಯಾತ ಗರುಡಾದ್ರಿ ಕಲೆ, ವಿಜಯ ಕರ್ನಾಟಕ, ಸಪ್ಟೆಂಬರ್ ೨೨, ೨೦೦೦.

ಲಕ್ಷ್ಮಣ್ ತೆಲಗಾವಿ, ಸನ್ನತಿ: ಸ್ಥಳನಾಮ ವಿವೇಚನೆ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ವಾಸುದೇವ ಬಡಿಗೇರ, ಜೇವರ್ಗಿ ತಾಲ್ಲೂಕಿನ ವಾಸ್ತುಶಿಲ್ಪ ಕಲೆ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ವಾಸುದೇವನ್ ಸಿ.ಎಸ್., ಗುಲ್ಬರ್ಗ ಜಿಲ್ಲೆಯ ಆದಿ ಇತಿಹಾಸ ಕಾಲದ ನೆಲೆಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಶರಣಪ್ಪ ಎಸ್. ಚಕ್ರವರ್ತಿ, ಆಲಂದೆ ಸಾಸಿರ - ಒಂದು ಅಧ್ಯಯನ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಶಂಭುಲಿಂಗ ಎಸ್. ವಾಣಿ, ಗುಲ್ಬರ್ಗ ಕೋಟೆ ಮತ್ತು ತೋಪುಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಶ್ಯಾಮಲಾ ರತ್ನಕುಮಾರಿ ಬೆಂ.ಶಾ., ಗುಲಬರ್ಗ ಜಿಲ್ಲೆಯ ಗ್ರಾಮದೇವತೆಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಶಾಸ್ತ್ರಿ, ಬಿ.ವಿ.ಕೆ., ಮಾನಸೊಲ್ಲಾಸ, ಸುಧಾ, ಯುಗಾದಿ ವಿಶೇಷಾಂಕ, ೧೯೭೨.

ಶಾಸ್ತ್ರಿ, ಬಿ.ವಿ.ಕೆ., ಮಾನಸೋಲ್ಲಾಸದಲ್ಲಿ ಚಿತ್ರಕಲೆ, ಸುಧಾ, ಎಪ್ರಿಲ್ ೨೯, ೧೯೭೩.

ಷಡಕ್ಷರಯ್ಯ ರು.ಮ. ೧೯೯೪, "ಬಸವಕಲ್ಯಾಣದ ಕೋಟೆ", ನಾಗಾಭಿನಂದನ (ಶ್ರೀ ಎಂ.ಜಿ. ನಾಗರಾಜ್ ಅವರಿಗೆ ಅರ್ಪಿಸಿದ ಅಭಿನಂದನ ಗ್ರಂಥ), (ಸಂ.) ಎಚ್.ಎಸ್. ಗೋಪಾಲರಾವ್, ಬೆಂಗಳೂರು, ಪು. ೨೭೩-೨೮೬.

ಷಡಕ್ಷರಯ್ಯ ರು.ಮ., ಗುಲಬರ್ಗಾ ಜಿಲ್ಲೆಯ ಸ್ಮಾರಕ ಶಿಲ್ಪಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಷಡಕ್ಷರಯ್ಯ ರು.ಮ., ಗುಲ್ಬರ್ಗ ಜಿಲ್ಲೆಯ ರಾಷ್ಟ್ರಕೂಟರ ಕಾಲದ ದೇವಾಲಯಗಳು ಮತ್ತು ಶಿಲ್ಪಗಳು, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಸಂತೋಷಕುಮಾರ ಗುಲ್ವಾಡಿ, ರಾಯಚೂರಿನ ಅಪೂರ್ವ ಕಲಾ ನಿಕ್ಷೇಪ ಖಾಜಿನಗೌಡರ ಮನೆ, ಉದಯವಾಣಿ, ದೀಪಾವಳಿ ವಿಶೇಷಾಂಕ, ೧೯೭೮.

ಸೀತಾರಾಮ ಜಾಗೀರ್‌ದಾರ್, ಕರ್ನಾಟಕ ಇತಿಹಾಸ - ಕಲ್ಯಾಣದ ಚಾಳುಕ್ಯರ: ಪೂರ್ವಭಾಗ, ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು, ೨೦೦೭.

ಸುಬ್ರಹ್ಮಣ್ಯ ಕೃ.ಸು., ೧೯೯೪, "ಮೈಸೂರು ಕೋಟೆ-ನಗರ", ಇತಿಹಾಸ ದರ್ಶನ, ಸಂ. ೯, ಪು. ೯೧-೯೫.

ಸುಜಾತ ಮಲ್ಲನಗೌಡ, ೧೯೯೮, "ರಾಯಚೂರು ಕೋಟೆಯಲ್ಲಿನ ಕೊತ್ತಲಗಳು", ಇತಿಹಾಸ ದರ್ಶನ, ಸಂ. ೧೩, ಪು. ೮೫-೮೬.

ಸುಜಾತ ಮಲ್ಲನಗೌಡ, ೧೯೯೮, "ಕೃಷ್ಣದೇವರಾಯನ ರಾಯಚೂರು ದಂಡಯಾತ್ರೆ ಮತ್ತು ರಾಯಚೂರು ಕೋಟೆಯ ನವರಂಗ ದರವಾಜ", ವಿಜಯನಗರ ಅಧ್ಯಯನ, ಸಂ. ೩ (ಸಂ.) ಎಂ.ಎಲ್. ಶಿವಶಂಕರ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. ೪೭-೫೧.

ಸುಜಾಟ ಪಾಟೀಲ, ೧೯೯೯, "ಮುದುಗಲ್ಲ ಕೋಟೆ", ವಿಜಯನಗರ ಅಧ್ಯಯನ ಸಂ. ೪, (ಸಂ.) ಎಂ.ವಿ. ಕೃಷ್ಣಪ್ಪ ಮ್ತು ಚನ್ನಪಬಸಪ್ಪ ಎಸ್. ಪಾಟೀಲ, ಮೈಸೂರು, ಪು. ೫೯-೬೩.

ಹುಲ್ಲೂರು ಶ್ರೀನಿವಾಸ ಜೋಯಿಸ, ೧೯೪೩, "ದೊರವಡಿ", ಪ್ರಬುದ್ಧ ಕರ್ನಾಟಕ, ಸಂಪುಟ ೨೫, ಸಂಚಿಕೆ ೧, ಮೈಸೂರು, ಪು. ೩೭-೪೦.

ವಿಶ್ವಕೋಶಗಳು

ಇತಿಹಾಸ ದರ್ಶನ, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

ಕರ್ನಾಟಕದ ಜನಪದ ಕಲೆಗಳ ಕೋಶ.

ಕರ್ನಾಟಕದ ಕನ್ನಡ ವಿಷಯ ವಿಶ್ವಕೋಶ.

ಕನ್ನಡ ನಿಘಂಟು.

ಕನ್ನಡ ಜಾನಪದ ವಿಶ್ವಕೋಶ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಕನ್ನಡ ಕಸ್ತೂರಿ ಕೋಶ.

ಕರಕುಶಲ ಕಲೆಗಳು (ವಿಶ್ವಕೋಶ).

ಕಿರಿಯರ ಕರ್ನಾಟಕ.

ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ವಿಜಯನಗರ ಅಧ್ಯಯನ ಸಂಪುಟಗಳು, ರಾಜ್ಯ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು.

ಸಾಧನೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಜ್ಞಾನಗಂಗೋತ್ರಿ ಸಂಪುಟಗಳು.

Books

Acharya, P.K., (1927) Indian Architecture According to Silpa Sastra, Allahabad.

Alavi, R.A. (1977) Studies in the History of Medieval Deccan, Delhi.

Altekar, A.S., (1967) Rastrakutas and their times, Poona (Revised Ed.)-

Appadorai, A. (1936). Economic conditions in South India A.D. 1000-1500, Madras.

Aruni, S.K. (2001). Dakhani Chitrakale, (in Kannada), Bangalore, Lalitkala Academy.

Barrett, Douglas.1969. 'Painting at Bijapur' In R.H. Pinder-Wilson, (ed.). Paintings from Islamic Lands. Oxford: 142-159.

Basavaraj K.R. (2001) Basavesvara – His Life, Vision and Work, Dharwad.

Birce, Martin. 1990. Forts and Fortifications. London.

Blurton, R.L. 1985. 'Palace Architecture at Vijayanagara: The Archaeological Evidence'. In Frifielf & P. Sorensen. (eds.). South Asian Archaeology-7985: 426-440.

Briggs, J. 1829. History of the Rise of Mohammedan Power in India Till the Year A.D. 7602 (Translated from the original Persian Text by Mohmed Kasaim Ferishta) 3 vols. London, (reprint-1966).

Coomaraswamy, A.K. (1946) Indian Architectural Terms, London.

Coomaraswamy, A.K., (1930) "Cities and City Gates", Eastern Art, Vol. II, London.

Coomaraswamy, A.K., (1930) Early Indian Architecture, London, (Vol. I).

Coomaraswamy, A.K., (1931) Early Indian Architecture, Vol. III, Palaces, London.

Daton. R.M. 1978. Sufis ofBijapur 1300-1700: Social Roles of Sufis in Medieval India. New Jersey.

David Ayalon. 1978. Gunpowder and Firearms in the Mamulk Kingdom: A Challenge to a Medieval Society. London [new edition].

De Forest, (1985) Indian Domestic Architecture, Boston, U.S.A.

Desai P.B., (Ed) (1970) A History of Karnataka, Dharwad.

Desai, P.B. 1968b. Basaveshwar and His Times, Dharwad.

Devarai, D.V. & C.S. Patil. (eds.). 1996. Art and Architecture in Karnataka. Mysore.

Devaraj, D.V. and Talwar. H.T. 1996. Interim Report on the Excavations at Sannati 1993-93. Mysore.

Dikshitar, V.R.R., (1944) War in Ancient India, Madras.

Dutt, B.B., (1925) Town Planning in Ancient India, Calcutta.

Dutt, M.N., (Jr) (Ed.) (1896) Kamandakiya Nitisara, Calcutta.

Eaton, R.M. (1978). Sufis of Bijapur 1300-1700: Social Roles of Sufis in Medieval India, New Jersey.

Grabar, Oleg. 1991. 'Palaces, Citadels and Fortifications'. In Michell, George (ed.) Architecture of the Islamic World- its History and Social Meaning. London.

Gray, B. 1938. 'Deccani Paintings: The School of Bijapur'. Burlington Magazine 73:74-76

Grover, Satish, 1981, The Architecture of India: Islamic. New Delhi.

Gustav Oppert, (1880) On Weapons, Army Organization and Political Maxims of the Ancient Hindus, with special reference to Gun Powder and Firs arms, London, New York.

Kamalapur, J.N., (1964) Deccan Forts, Bombay.

Mate, M.S. 1968. Deccan Woodwork. Pune.

Mate, M.S., (1959) Maratha Architecture, Poona.

Merklinger, E.S. 1981. Indian Islamic Architecture: The Deccan 7347-1686. New Delhi.

Merklinger, E.S. 1986. 'Gulbarga'. In Michell George (ed.) Islamic Heritage of the Deccan, Bombay: 27-41.

Michell, George & Antoni Martinelli. 1994. The Royal Palaces of India, London.

Michell, George, (ed.) 1986. Islamic Heritage of the Deccan. Bombay : Marg Publications. Michell, George, (ed.). 1993, Temple Towns of Tamil Nadu. Mumbai.

Michell, George. & Philip. B. Wagoner. 2001. Vijayanagara- Architectural Inventory of the Sacred Centre. 3 vols. New Delhi.

Michell, George. & Richard Eaton. 1992. Firuzabad: Palace City of the Deccan, Oxford.[Oxford Studies in Islamic Art 8].

Michell, George. 1992b. 'Firozabad- Revisited'. In Maxwell, T.S. (ed.). Eastern Approaches-Essays on Asian Art and Archaeology: 176-186.

Miehell, George. & Mark Zebrowski. 1999. The New Cambridge History of India 1:7- Architecture and Art of the Deccan Sultanates. Cambridge,

Mishra, V.N., (Ed.) (1977) Man and Environment, Vol. I, Patna.

Mittal, Jagadish. 1966b. 'Deccani Painting: Golkonda and Hyderabad Schools'. In Sherwani H.K. (ed.). Dr. Ghulam Yazdani Commemoration Volume Hyderabad: 127-33.

Narasimha Murthy, A.V., (1975) Coins of Karnataka Mysore.

Nilakanta Sastri, K.A. 1966. A History of South India- from Prehistoric times to the fall of Vijayanagara. (3 edition), Oxford.

Panchamukhi, R.S., (Ed.) (1945) Progress of Kannada Research in Bombay State (1941-46) Dharwad.

Panchamukhi, R.S., (Ed.), (1940) Inscriptions of Karnataka, Vol. II, Dharwad.

Pant, G.N., (1977) Indian Archery, New Delhi.

Pant, G.N., (1978) Indian Arms and Armours, New Delhi.

Percy Brown, (1976) Indian Architecture, Part II, (Islamic Period), (Fifth Ed.) Bombay.

Poonacha, K.P. (1995). Fresh Light on the Archaeological Vestiges and Sculptural Art at Sannati: Some Observations'. In Srinivasan, L.K.; S. Nagaraju; V. Shivananda and M.V. Visweshvara (eds.). Sri Nagabhinandanam (Dr. M.S. Nagaraja Rao Festschrift): 279-294.

Rajashekara, S. 1991. Rashtrakuta Art in Karnataka. Dharwad. Sujata Publications.

Rajayyan, K. 1971. South Indian Rebellion: The First War of Independence 1800-1801. Mysore.

Ramachandra Murthy, N.S. 1996. Forts of Andhra Pradesh [From the Earliest Times up to 1o Century AD]. Delhi.

Regani, Sarojini (1963). Nizam-British Relations 1724-1857, Hyderabad.

Richards, J.F. (1993). The New Cambridge History of India 1.5: Maratha Empire, Cambridge.

Sarma, I.K. & Varaprasad Rao. 1993. Early Brahmi Inscriptions from Sannati. New Delhi.

Sharma Sastri, R., (Ed.) (1920) Abhilishitartha Chintamani, Mysore.

Sharma Shastri, R., (1958) Arthasastra of Kautilya, (Fifth Ed.) Mysore.

Sherwani, H.K. & P.M Joshi. (eds.). 1974. The History of Medieval Deccan. 2 Vols. Govt. of A.P. Hyderabad.

Sherwani, H.K. 1953. The Bahamanis of the Deccan (An Objective Study), Hyderabad.

Sherwani, H.K. 1963. 'Cultural Synthesis in Medieval India' .Journal ofIndian History 41: 239-259.

Sircar, D.C., (1979-80) (Ed.) Asokan Inscriptions, Nittur and Udegolam, Calcutta

Soundara Rajan, K.V. 1965. 'Rashtrakutas of Malkhed, Upper Variation, Phase II'. In Meister, W.M. & Dhakya, M.A. (eds.). Encyclopedia of Indian Temple Architecture- South India: Upper Dravidadesa, Early Phase. Oxford.

Taylor Meadows. P. & James Fergusson. 1866. Architecture at Beejapur - An Ancient Mahomedan Capital in the Bombay Presidency. London.

Taylor, Meadows. P. 1920. The Story of My Life. London, (new edition).

Toy, Sidney. 1957. Strongholds of India. London.

Toy, Sidney. 1965. The Fortified Cities of India. London.

Verma, D.C. 1974. History of Bijapur, New Delhi.

William Irvine, 1971. Later Mughals. 2 Vols. (re-edition), New Delhi.

Yazdani, G. (ed.). 1960. Early History of the Deccan. 2 vols. Oxford.

Yazdani, G. 1947. Bidar- Its History and Monuments. Oxford.

Zebrowski, Mark. 1983. Deccani Painting. New Delhi.

Articles

Acharya, P.K., (1927) Manascra, an Encyclopedia of Hindu Architecture, Vol. VII, Allahabad.

Apte, B.K. (1958). The Maratha Weapons of War'. Bulletin of Deccan College Research Institute 19(1-2): 106-124.

Apte, B.K., (1958). 'The Maratha Weapons of War'. Bulletin of Deccan College Research Institute 19(1-2): 106-124.

Aruni, S.K. (1996-97) 'Sagar: Provincial Headquarters of the Islamic Deccan'. Bulletin of the Deccan College PG & Research Institute 55-57: 219-232.

Aruni, S.K. 2000. 'Economy of Poligarsin the Deccan with Special Reference to Surapura Samsthana: A Post-Vijayanagara Poligar State'. The Quarterly Journal of the Mythic Society 91 (2): 27-41.

Basu, K.K. 1934. 'History of Ibrahim Adil Shah of Bijapur'. Journal of the Bihar and Orissa Research Society 22: 189-204.

Basu, K.K. 1939. 'Bijapur Court Letters'. Journal of the Bihar and Orissa Research Society 27(2): 255-62.

Bawa, V.K.; Sajjad Shahid & Vasanth Shobha. 2002. Architecture in the Deccn- The Kingdom of Golconda'. Deccan Studies. Vol. 1(1): 58-67.

Beg, Azmat Ali. 1974. Aurangzeb's Second Viceroyalty of the Deccan and His Relations with Bijapur, Islamic Culture48(l):39-47.

Cadel, Patrick Sir. (Ed.). 1884. Gazetteer of Bombay Presidency Vol. XXIII- Bijapur, (Reprint 2001).

Chandra, Satish. 1977. 'The Deccan Policy of the Mughals - A Reappraisal'. The Indian Historical Review 4 (3&4): 326-35.

Chowdari, Jogindra Nath. 1928. 'Social and Economical Conditions of the People under the Bahamani Sultanate'. Indian Historical Quarterly 4: 720-26.

Creswell, K.A.C. 1914. 'Indian Domes of Persian Origin'. Asiatic Review. 5: 475-89.

Desai, P.B. 1968a. 'A New Buddhist Centre'. Journal of the Karnataka University (Social Sciences) 4: 3-8.

Desai, P.B., (1968) "A Buddhist Centre", Journal of Karnataka University, Vol. IV, Dharwad.

Desai, Z.A. 1974a. 'Architecture: The Bahamanis'. In Sherwani, H.K. & P.M. Joshi. (eds.). History of MedievalDeccan 1295-1724. 2Vols: 227-52.

Desai, Z.A. 1974b. 'Architecture: The Bahamanis Succession States'. In Sherwani, H.K. & P.M. Joshi. (eds.). History of Medieval Deccan 1295-1724. 2Vols: 253-304.

Desai, Z.A. 1974c. 'Architecture: The Bahamanis Succession States'. In Sherwani, H.K. & P.M.Joshi. (eds.). History of Medieval Deccan 1295-1724. 2Vols: 305-14.

Desai, Z.A. 1979. 'Epigraphical Sources of the Adil Shahis of Bijapur'. The Quarterly Journal of the Mythic Society 70:173-201.

Deshpande, P.N. 1988. 'Some Silent Features of Bahamani Fort Architecture'. Samshodhak56 (3): 1-8.

Fischer, Klaus. (1955). 'Firozabad on the Bhima and its Environs'. Islamic Culture29: 246-55.

Formijne, P. (1972). 'Miniatures of the Shorapur School of fainting'. Bulletin van de Vereniging van Vrienden der Aziatische Kunst [3 Series]. 21:19-25.

Ghauri, I.A. (1966b). 'Organization of the Army Under the Sultanates of the Deccan'. Journal of the Pakistan Historical Society, 14: 147-172,

Goetz, Hermann 1940b. 'Indo-Muslim Architecture in its Islamic Setting', Journal of the University of Bombay, 8: 40-51.

Goetz, Hermann l940a. 'The Fall of Vijayanagar and The Nationalization of Muslim Art in The Dakkan'. Journal of 'Indian History 19: 249-255.

Goswamy, B.N. (1962). 'Deccani Painting', Lalit Kala 12: 41-44.

Hanumanta Rao, S. 1936. 'Hindu Religious Monuments in Medieval Deccan'. Journal of Indian History. 15:103-113.

Joshi, P.M. 1949. 'The Raichur Doab in the Deccan History- Reinterpretation of a Struggle'. Journal of the Indian History 36: 376-396.

Joshi, P.M. 1973. 'The Adil Shahis and The Barid Shahis' In Sherwani, H.K. & P.M. Joshi. (eds.) History of Medieval Deccan (1295-1724) vol. I, Hyderabad: 289-394.

Joshi, S.K. 1985. Defence Architecture of Early Karnataka, Delhi.

Jung, Nawab Framurz. 1907. Shorapur: An Ancient Beydur Raj. Madras: Higginbotham & Co.

Kale, Vivek S. & V.V. Peshwa. 1995. Bhima Basin. Bangalore.

Kamalapur, J.N. 1961. The Deccan Forts. Bombay.

Koch, Ebba, (1991). Mughal Architecture – An Outline of its History and Development, 1526-1858, Munich.

Kolhar Kulkarni, Krishna 2002. Bijapur: The Wounder Land Bijapur.

Krishna Rao, Kapataral 1970a. 'Haridasara Parampara' in Karnataka Samskritiya Samsodhana, Mysore, 271-256.

Krishna Rao, M.V. and G.S. Halappa (eds.) 1962. History of Freedom Movement in Karnataka, Vol. 1, Bangalore.

Lal, B.B., (1949) "Sisupalghar-1948, An Early Historical fort in Eastern India", A.I. No. 5, New Delhi.

Mahadevan, C. (1947). 'Bhima Series and other rocks in Gulbarga District'. Journal of the Hyderabad Geological Survey 5(1): 56-58.

Mate, M.S. 1961-62. 'Islamic Architecture of the Deccan'. Bulletin of the Deccan Research Institute. 22: 1-91.

Michell, B.D. 1993. Forts and Fortresses ofGwalior and Its Hinterland. New Delhi, -filittaljagadish. 1963a. 'Paintings of the Hyderabad School'. Marg 16(2): 43-56.

Mittal Jagadish. 1963b. 'Deccani Painting at the Samsthanas ofWanaparthy, Gadwal and Shorapur'. Marg 16(2): 58-64.

Mukherjee, S.K. 1941. 'Geology of parts of Surapur and Shahapur Taluqs, Gulbarga District'. Journal of the Hyderabad Geological Survey 4(1): 9-54.

Nilakanta Sastri, K.A.1960. 'The Chalukyas of Kalyani and Kalachuris of Kalyani' In G. Yazdani.(ed.). The Early History of the Deccan. Vol. 2: 315-468.

Norman, K.R. 1991. 'Asokan Inscriptions from Sannati'. South Asian Studies 8:101-118.

Paddayya, K. 1990. 'Towards the Archaeology of the Medieval Shorapur Doab, Deccan.' Islamic Culture44 (2-3): 75-112.

Paddayya, K. 1993. 'Ashmound Excavations at Budihal, Gulbarga District, Karnataka'. Man & Environment 18: 58-87.

Paddayya, K. 1998. 'Evidence o Neolithic Cattle-Penning at Budihal, Gulbarga District, Karnataka'. South Asian Studies 14:141-153.

Paddayya, K. 2002. 'The Problem of Ashmonds of South Deccan in the Light of Recent Research'. In Paddayya, K. (ed.). Recent Studies in Indian Archaeology. New Delhi.: 81-111.

Pinhey, Alexander. F. 1916. 'Koppal Town and Fort'. The Journal of the Hyderabad Archaeological Society for 1916(1): 92-97.

Roy, M.B. (1941). The Transfer of Capital from Delhi to Daulatabad – A New Study', Journal of Indian History 20(1&3): 159-180.

Saletore, R.N. 1939. 'The Bedars in Maratha Times', Indian Culture, 5: 167-178.

Seshadri, M., (1965-66) "Buddhist Monuments of Sannati", The Quarterly Journal of Mythic Society, Vol. LVI, No. 4, Bangalore.

Seshadri, M., (1970-71) "Excavations of a Brick Apsidant structure from Banavasi", Puratattva, Vol. IV, New Delhi.

Sherwani, H.K. 1941. 'Gangu Bahamani' Journal of Indian History 20(l&2): 95-99.

Sherwani, H.K. 1966. 'Medieval Indian Painting'. Indica: 113-124.

Sherwani, H.K. 1975. 'Culture Picture of the Deccan in the 15 Century'. In Nurul Hasan. S. et al (eds.) Medieval India: A Miscellany 3:216-233.

Sherwani, H.K. 1975. 'Culture Picture of the Deccan in the 15^{th} Century'. In NUrul Hasan S. et al., (eds.) Medieval India: A Miscellany 3: 216-233.

Sherwani, H.K. 1976. 'Town Planning and Architecture of Haidarabad under the Qutb Shahis'. Islamic Culture, 50(3): 61-68.

Siddiqi, Md. Suleman. 1990. 'Sufi-State Relationship under the Bahmanis (AD 1348-1538)'. Rivista DertiStudi Orientali64(1-2): 71-96.

Speight, E.E. 1935. 'The Coins of the Bahamani Kings of the Deccan'. Islamic Culture 9: 268-307.

Sreenivas, T. 1919-20. 'Nagai and its Remains', The Journal of the Hyderabad Archaeological Society 5 (Printed in 1921): 33-47.

Sundara, A. 1987a, 'Excavations at Sannati 1986-87'. Pumtattva 17: 21-24.

Sundara, A., (1981) A Two Thousand Year Old Town and its Architecture in Vadagaon-Madhavapura, (Belgaum) in Karnataka", Madhu: Recent Researches in Indian Archaeology and Art History, New Delhi.

Taylor, Meadows. P. 1941. Megalithic Tombs and other Ancient Remains in the Deccan (collected papers). . ' [Reprinted in 1989]. New Delhi.

Tillotson, G.H.R. 1991. 'Indian Architecture and the English Vision. *South Asian Studies*, 7: 59-74.

Yazdani, G. 1935b. 'Inscriptions of Shahapur, Gogi and Sagar, Gulbarga District'. Epigraphia Indo-Moslemica (1031-32): 1-24.

Yusuf Syed (1945). 'Gogi and its Archaeological Remains'. Proceedings of the Deccan History Conference. First Session. Hyderabad: 260-269.

Reports, Thesis and Gazetteer

Anantpur, Madras District Gazetteer, Madras, 1906.

Annual Report of the Archaeological Department of His Exalted Highness the Nizam's Dominions, Hyderabad.

Aruni, S.K. 1998. History and Culture of Surapura Samsthana, North Karnataka, A.D. 7650 to 1858. [Ph. D. thesis, University of Pune]. Pune.

Bangalore District Gazetteer

Bidar District Gazetteer.

Dayal Suchi, 1997. The Historical Archaeology of the Shorapur Doab (Pre-Medieval Period). [Unpublished Ph.D. Thesis, Poona University,]. Poona.

Deshpande, P.N. 1971. Maratha Forts [A Study of Forts with reference to the Royal period of Maratha History]. (Unpublished Ph.D. Thesis, Poona University). Poona.

Deshpande, P.N.. (1971) Maratha Forts, Ph.D. Thesis. Poona (unpublished).

Encyclopedia Americana

Encyclopedia Britannica

Encyclopedia Indian Culture

Encyclopedia Social Sciences

Friz, John & George Michell : *City of Victory,* New York

Gulbarga District Gazetteer

Gulbarga District Manual

Kulkarnee, N.H. 1972. British Relations with the Prencipality of Surapura. (Unpublished Ph.D. Thesis), Karnatak University, Dharwad.

Kulkarni, V.S., (1979) A Cultural Study of area around Basava Kalyana, Ph.D. Thesis (unpublished), Karnataka University, Dharwad.

Michell, George : *Vijayanagar : Architectural inventory of the urban core,* **Vol-I,** Mysore, Directorate of Archaeology Museums

Prakash, D.V. 1978. History of Fortification in India 3000 BC to WOO AD, [an unpublished Ph.D. Thesis, Pune University]. Pune.

Raichur District Gazetteer

Sherwani, H.K. 1945. 'Independence of the Bahamani Governors'. Proceedings of the Indian History Congress 8 Session, Annamalai: 150-162.


The Indian Antiquary

Venkataramanayya, N. 1942. The Early Muslim Expansion in South India, Madras: Madras University Press.


ಗುಲಬರ್ಗಾ ಕೋಟೆಯ ಉಪಗ್ರಹದ ನಕ್ಷೆ




ಯಾದಗಿರ ಕೋಟೆಯ ಉಪಗ್ರಹದ ನಕ್ಷೆ




ಶಹಾಪೂರ ಕೋಟೆಯ ಉಪಗ್ರಹದ ನಕ್ಷೆ



ಫಿರೋಜಾಬಾದ ಕೋಟೆಯ ಉಪಗ್ರಹದ ನಕ್ಷೆ




ಗುರಮಿಟಕಲ್ ಕೋಟೆಯ ಉಪಗ್ರಹದ ನಕ್ಷೆ




ಚಂದ್ರಕಿ ಕೋಟೆಯ ಉಪಗ್ರಹದ ನಕ್ಷೆ




ಸಗರ ಕೋಟೆಯ ರೇಖಾಚಿತ್ರ




ಮಳಖೇಡ ಕೋಟೆಯ ರೇಖಾಚಿತ್ರ




ಶಹಾಪೂರ ಕೋಟೆಯ ರೇಖಾಚಿತ್ರ




ಶಹಾಪೂರ ಕೋಟೆಯ ಬೆಟ್ಟದ ಮೇಲಿನ ಪ್ರಮುಖ ಕಟ್ಟಡಗಳ ರೇಖಾಚಿತ್ರ




ಸುರಪುರ ಕೋಟೆಯ ಅಗಸಿಗಳ ರೇಖಾಚಿತ್ರ




ವಾಗಣಗೇರಿ ಕೋಟೆಯ ರೇಖಾಚಿತ್ರ



ವನದುರ್ಗ ಕೋಟೆಯ ರೇಖಾಚಿತ್ರ



ಇಜೇರಿ ಕೋಟೆಯ ರೇಖಾಚಿತ್ರ



ಸನ್ನತಿ ಕೋಟೆ



ಇಟ್ಟಿಗೆಯ ಕೋಟೆ ಗೋಡೆ



ರಣ ಮಂಡಲ



ಕೋಟೆ ಗೋಡೆಯ ಅವನತಿಯ ಸ್ಥಿತಿ

ಸಗರ ಕೋಟೆ



ಬಡೇ ದರ್ವಾಜ



ಜಾಮಿ ಮಸೀದಿ

ಸಗರ ಮಣ್ಣಿನ ಕೋಟೆ




ಮಣ್ಣಿನ ಕೋಟೆ ಗೋಡೆ



ಕಾವಲು ಗೋಪುರ


ಮಳಖೇಡ ಕೋಟೆ



ಕೋಟೆಯ ಮೊದಲನೆಯ ಪ್ರವೇಶ ದ್ವಾರ




ಕೋಟೆಯ ಎರಡನೆ ಪ್ರವೇಶ ದ್ವಾರ



ಕೋಟೆಯ ಮೂರನೆ ಪ್ರವೇಶ ದ್ವಾರ ಮತ್ತು
ಸೈನಿಕರ ರಕ್ಷಣಾ ಸ್ಥಳಗಳು

ಮಳಖೇಡ ಕೋಟೆಯ ಕಾವಲು ಗೋಪುರಗಳು





ವಿವಿಧ ಪ್ರಕಾರದ ಕಾವಲು ಗೋಪುರಗಳು



ಚೌಕಾಕಾರ ಮತ್ತು ವೃತ್ತಾಕಾರದ ಕಾವಲು ಗೋಪುರ

ಮಳಖೇಡ ಕೋಟೆ



ಉಪಲಿ ಬುರ್ಜ



ಕಾಗಿಣಾ ನದಿಯಿಂದ ಸುತ್ತುವರಿದ ಕೋಟೆ

ಸೇಡಂ ಕೋಟೆ



ಕೋಟೆಯ ಪ್ರವೇಶ ದ್ವಾರ



ಕೋಟೆ ಗೋಡೆ



ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಾಣಗೊಂಡ ಜಾಮಿ ಮಸೀದಿ



ಕೋಟೆಯ ಮುಂಭಾಗದ ತಡೆ ಗೋಡೆ



ಎರಡು ಕೊತ್ತಳಗಳ ಮದ್ಯದ ಪ್ರವೇಶ ದ್ವಾರ

ಸೇಡಂ ತಾಲೂಕಿನ ವಿವಿಧ ಪ್ರಕಾರದ ಹುಡೆವುಗಳು



ಹುಡೆದುರ ಹುಡೆವು



ಸೇಡಂ ಕೊಡ್ಲಾ ಮಾರ್ಗದ ಹುಡೆವು



ಹಂದರಕಿ ಹುಡೆವು



ಅವರಾದ ಹುಡೆವು

ಅಡಕಿ ಕೋಟೆ



ಮೊದಲನೆಯ ಪ್ರವೇಶ ದ್ವಾರ

ಎರಡನೆ ಪ್ರವೇಶ ದ್ವಾರ








ಮೂರನೆ ಪ್ರವೇಶ ದ್ವಾರ

ರಕ್ಷಣಾ ಸಂಬಂಧಿ ಕಟ್ಟಡ

ಮುದೋಳ ಕೋಟೆ



ಚೌಕಾಕಾರದ ಕಾವಲು ಗೋಪುರ



ಪಶ್ಚಿಮ ಭಾಗದ ಕೋಟೆ ಗೋಡೆ



ದಿಡ್ಡಿ ಬಾಗಿಲು



ನೀರಿನ ಆಶ್ರಯ ತಾಣ



ಕೋಟೆ ಗೋಡೆ

ನಾಗಾವಿ ಕೋಟೆ



ಕೋಟೆ ಗೋಡೆ



ಕೋಟೆಯ ಮಧ್ಯದ ಪ್ರವೇಶ ದ್ವಾರ

ನಾಗಾವಿ ಕೋಟೆ



ನೀರಿನ ಆಶ್ರಯ ತಾಣ



ಕಾವಲು ಗೋಪುರ



ಅವನತಿ ಹೊಂದಿರುವ ಸೈನಿಕರ ನಿವಾಸಗಳು

ದಂಡೋತಿ ಕೋಟೆ



ಕೋಟೆಯ ಎರಡನೆಯ ಪ್ರವೇಶ ದ್ವಾರ



ಅರಮನೆಯ ಪ್ರವೇಶ ದ್ವಾರ

ಅಳ್ಳೊಳ್ಳಿ ಕೋಟೆ



ಅಳ್ಳೊಳ್ಳಿ ಕೋಟೆಯ ಪ್ರವೇಶ ದ್ವಾರ ಮತ್ತು ಕೊತ್ತಳ



ಇಟಕಲ್ ಕೋಟೆಯ ಪುನರ್ ರಚನೆಗೊಂಡ ಪ್ರವೇಶ ದ್ವಾರ

ಕೊಲ್ಲೂರು ಕೋಟೆ



ಮೊದಲನೆಯ ಪ್ರವೇಶ ದ್ವಾರ



ಎರಡನೆಯ ಪ್ರವೇಶ ದ್ವಾರ



ಕೋಟೆಯ ದಿಡ್ಡಿ ಬಾಗಿಲನ್ನು ಗ್ರಾಮಸ್ಥರು ಪ್ರಸ್ತುತ ಭೀಮಾ ನದಿಯ ನೀರಿಗಾಗಿ ಬಳಸುತ್ತಿರುವದು

ಕೊಲ್ಲೂರು ಕೋಟೆ



ಭೀಮಾ ನದಿಯ ದಂಡೆಯ ಮೇಲೆ ನಿರ್ಮಾಣಗೊಂಡ ಕೋಟೆ




ಚಪ್ಪಡಿ ಕಲ್ಲುಗಳ ಮೇಲೆ ಕೋಟೆಯ ನಿರ್ಮಾಣ

ಗುಲಬರ್ಗಾ ಕೋಟೆಯ ವಿವಿಧ ಪ್ರಕಾರದ ದ್ವಾರಗಳು





















ಕಾವಲುಗಾರರ ನಿವಾಸಗಳು

ಗುಲಬರ್ಗಾ ಕೋಟೆ



ಮೂರು ಸುತ್ತಿನ ಕೋಟೆ ಗೋಡೆ



ಕಂದಕ ಮತ್ತು ಕೊತ್ತಳಗಳು



ಆನೆಗಳಿಗೆ ಯುದ್ಧ ತರಬೇತಿ ನೀಡುವ ಸ್ಥಳ

ಗುಲಬರ್ಗಾ ಕೋಟೆ



೨೯ ಅಡಿ ಉದ್ದನೆಯ ಬೃಹದ್ಧಾಕಾರದ ತೋಪು



ರಣ ಮಂಡಲ

ಫಿರೋಜಾಬಾದ ಕೋಟೆಯ ವಿವಿದ ಪ್ರವೇಶ ದ್ವಾರಗಳು











೧. ಕಲಬುರ್ಗಿ ದ್ವಾರ
೨. ಭೀಮಾ ದ್ವಾರ
೩. ಶಹಾಪೂರ ದ್ವಾರ (ಕಳ್ಳ ಅಗಸಿ)
೪. ಕೋಟೆಯ ಒಳಭಾಗದ ದ್ವಾರ
೫. ಸಭಾ ಭವನದ ದ್ವಾರ

ಫಿರೋಜಾಬಾದ ಹವಾನಿಯಂತ್ರಿತ ಅರಮನೆ



ಪಿರಾಮಿಡ ಮತ್ತು ಗುಮ್ಮಟಾಕಾರದ ಅರಮನೆ



ಫರಹತಾಬಾದ ಪರೀದಾ ಬೇಗಂ ಮಹಲ್

ಫರಹತಾಬಾದ ಕಾವಲು ಗೋಪುರ



ಕಾವಲು ಗೋಪುರದ ಹಿಂಭಾಗದ ರಚನೆ



ಪಶ್ಚಿಮ ಭಾಗದ ಪ್ರವೇಶ ದ್ವಾರ



ದಕ್ಷಿಣ ಭಾಗದ ಕೋಟೆ ಗೋಡೆ



ಕುದುರೆ ಲಾಳಾಕಾರದ ಕಾವಲು ಗೋಪುರ

ಹೊಳಕುಂದಾ ಕೋಟೆ



ಜಾಮೀ ಮಸೀದಿ



ದ್ವಾರ ಬಾಗಿಲು



ಕೋಟೆ ಗೋಡೆ ಮತ್ತು ದ್ವಾರ ಬಾಗಿಲು



ಕಾವಲು ಗೋಪುರ



ಕಣಜ

ಸುಲ್ತಾನಪುರ ಅರಮನೆ





ಅರಮನೆಯ ಕೇಂದ್ರಭಾಗದ ಕಟ್ಟಡ



ಅರಮನೆಯ ವನತಿ ಹಂತದ ಪ್ರವೇಶ ದ್ವಾರ

ಶಹಾಪೂರ ಕೋಟೆಯ ಪ್ರವೇಶ ದ್ವಾರಗಳು



ಮೊದಲನೆಯ ದ್ವಾರ


ಎರಡನೆಯ ದ್ವಾರ


ಮೂರನೆಯ ದ್ವಾರ


ನಾಲ್ಕನೆಯ ದ್ವಾರ




ಪ್ರಾಚೀನ ಕೋಟೆಯ ದ್ವಾರಗಳು

ಶಹಾಪೂರ ಕೋಟೆಯ ಪ್ರವೇಶ ದ್ವಾರಗಳು



ಕೊಳ್ಳೂರು ಅಗಸಿ



ದಿಗ್ಗಿ ಅಗಸಿ

ಶಹಾಪೂರ ಕೋಟೆ



ಬೆಟ್ಟದ ಮೇಲೆ ನಿರ್ಮಾಣಗೊಂಡ ಕೋಟೆಯ ದೃಶ್ಯ



ಕೋಟೆಯ ಗೋಡೆ ಮತ್ತು ಮಂದಾಕಿನಿ ಸರೋವರ

ಶಹಾಪೂರ ಕೋಟೆಯ ರಕ್ಷಣಾ ಸಂಬಂಧಿ ಸ್ಮಾರಕಗಳು



ಮದ್ದಿನ ಮನೆ



ಕಣಜಗಳು



ಬೃಹತ ಬಂಡೆಯ ಮೇಲೆ
ನಿಮಾಣಗೊಂಡ ಕಾವಲು ಗೋಪುರ



ಕೋಟೆ ಗೋಡೆ ಮತ್ತು ಸೈನಿಕರ ನಿವಾಸಗಳು

ಶಹಾಪೂರ ಕೋಟೆಯ ರಕ್ಷಣಾ ಸಂಬಂಧಿ ಸ್ಮಾರಕಗಳು



ಸಭಾ ಭವನ



ಮಸೀದಿ



ಸಭಾ ಭವನ






ಕಾವಲು ಗೋಪುರ ಮತ್ತು ತೋಪು

ಶಹಾಪೂರ ಕೋಟೆಯ ಕೃತಕ ಮತ್ತು ನೈಸರ್ಗಿಕ ನೀರಿನ ತಾಣಗಳು











ಯಾದಗಿರ ಕೋಟೆಯ ಪ್ರವೇಶ ದ್ವಾರಗಳು



೧



೨




೩




೪



೫



೬




೭



೮

ಯಾದಗಿರ ಕೋಟೆಯ ರಕ್ಷಣಾ ಸಂಬಂಧಿ ಸ್ಮಾರಕಗಳು


ಅರಮನೆಯ ಸಮೀಪದ ಮಸೀದಿ


ಮಸೀದಿಯ ಕೇಂದ್ರ ಭಾಗ


ಮಸೀದಿ


ದೇವಾಲಯಗಳು


ಕಣಜ

ಯಾದಗಿರ ಕೋಟೆಯ ರಕ್ಷಣಾ ಗೋಡೆ



ಎರಡು ಬೆಟ್ಟಗಳನ್ನು ಜೋಡಿಸಿರುವ ರಕ್ಷಣಾ ಗೋಡೆ



ಎರಡು ಕೊತ್ತಳಗಳ ಮಧ್ಯದ ಕೊನೆಯ ದ್ವಾರ

ಯಾದಗಿರ ಕೋಟೆಯ ಕಾವಲು ಗೋಪುರಗಳು

















ಯಾದಗಿರ ಕೋಟೆಯ ತೋಪುಗಳು



ಬೃಹತ ತೋಪು



ತೋಪಿನ ಕಟ್ಟೆ



ಮುಗಿಲಟ್ಟಣಿ



ತೋಪು

ಯಾದಗಿರ ಕೋಟೆಯ ರಕ್ಷಣಾ ಸಂಬಂಧಿ ಸ್ಮಾರಕಗಳು



ತಲಾಬ



ಅಕ್ಕ-ತಂಗಿಯರ ಬಾವಿ



ತುಪ್ಪದ ಕೊಳ್ಳ



ಎಣ್ಣೆಯ ಕೊಳ್ಳ

ಸುರಪುರ ಕೋಟೆ



ದೇವಪುರ ಅಗಸಿ



ದ್ವಾರದ ಒಳಭಾಗ



ಬೆಟ್ಟಕ್ಕೆ ಆವರಿಸಿಕೊಂಡ ಕೋಟೆ ಗೋಡೆ



ಕೋಟೆ ಗೋಡೆ ಮತ್ತು ಕಾವಲು ಗೋಪುರ



ಪೂರ್ವ ಭಾಗದ ಗೋಡೆ



ಕಾವಲು ಗೋಪುರಗಳು

ಸುರಪುರ ಕೋಟೆ ಮತ್ತು ಅರಮನೆ



ಅರಮನೆಯ ಪ್ರವೇಶ ದ್ವಾರ



ಅರಮನೆ



ಅರಮನೆಯ ಹೊರಭಾಗ



ಕಟ್ಟಿಗೆಯಿಂದ ಅಲಂಕೃತಗೊಂಡ
ಅರಮನೆ

ವಾಗಣಗೇರಿ ಕೋಟೆ



ಕೋಟೆ ಗೋಡೆ




ಕೋಟೆ ಗೋಡೆ



ಬಾವಿ



ಕಾವಲು ಗೋಪುರ



ಕೋಟೆ ಗೋಡೆಯ ದೃಶ್ಯ



ಪಡು ಕೋಟೆಯ ದ್ವಾರ

ವನದುರ್ಗ ಕೋಟೆ



ಕೋಟೆಯ ಪ್ರವೇಶ ದ್ವಾರ ಮತ್ತು ಮುಂಭಾಗದ ತಡೆ ಗೋಡೆ



ಕಂದಕ ಮತ್ತು ಕೋಟೆಯ ಗೋಡೆ



ಕೋಟೆಯ ಮೊದಲನೆಯ ದ್ವಾರ

ಇಜೇರಿ ಕೋಟೆ



ಕೋಟೆಯ ಪ್ರವೇಶ ದ್ವಾರ ಮತ್ತು ಗೋಡೆ



ಮೊದಲನೆಯ ದ್ವಾರ



ಒಳಭಾಗದ ದ್ವಾರದ ರಚನೆ



'V' ಆಕಾರದ ಮೆಟ್ಟಿಲುಗಳು



ಕಲ್ಲುಗಳ ಜೋಡಣೆ

ಚಿನ್ಮಳ್ಳಿ ಕೋಟೆ



ಮೊದಲನೆಯ ಪ್ರವೇಶ ದ್ವಾರ



ದಿಡ್ಡಿ ಬಾಗಿಲು



ಕೋಟೆಯ ದಕ್ಷಿಣ ಭಾಗದ ಗೋಡೆ



ಮಲ್ಲಿಕಾರ್ಜುನ ದೇವಾಲಯ



ಕೋಟೆಯ ಉತ್ತರ ಭಾಗದ ದೇವಾಲಯ

ಕಾಕಲವಾರ ಕೋಟೆ



ಅರಮನೆಯ ಪ್ರವೇಶ ದ್ವಾರ



ಸಭಾ ಭವನ



ಗಾರೆಯಿಂದ ಅಲಂಕೃತಗೊಂಡ ದ್ವಾರ



ಕೋಟೆಯ ಪ್ರವೇಶ ದ್ವಾರ

ಕಾಕಲವಾರ ಅರಮನೆ ಹಾಗೂ ದೇಸಾಯಿಗಳ ಭಾವಚಿತ್ರ


ಕಟ್ಟಿಗೆ ಸಿಂಹಾಸನ


ದೇಶಮುಖರ ಭಾವಚಿತ್ರ


ಅರಮನೆಯ ಒಳದೃಶ್ಯ


ದೇಶಮುಖರ ವಾಸದ ಮನೆ

ಚಂದ್ರಕಿ ಕೋಟೆ



ಪ್ರವೇಶ ದ್ವಾರ



ಕೋಟೆಯ ತಡೆ ಗೋಡೆ

ಚಂದ್ರಕಿ ಮಣ್ಣಿನ ರಕ್ಷಣಾ ಸಂಬಂಧಿ ಸ್ಮಾರಕಗಳು



ಈಶ್ವರ ದೇವಾಲಯ



ಬಾವಿ



ದಿಡ್ಡಿ ಬಾಗಿಲು

ಚಂದ್ರಕಿ ಮಣ್ಣಿನ ಕೋಟೆಯ ತೆನೆಗಳು



ಮಣ್ಣಿನ ತೆನೆಗಳು



ವೀಕ್ಷಣಾ ರಂಧ್ರ



ಕಲ್ಲು ಮಣ್ಣಿನಿಂದ ನಿರ್ಮಿಸಿದ
ಕಾವಲು ಗೋಪುರ



ಕೊತ್ತಳ



ವಿವಿದ ಬಗೆಯ ವೀಕ್ಷಣಾ ರಂಧ್ರಗಳು

ಗುರುಮಿಟಕಲ್ ಕೋಟೆ



ಗ್ರಾಮದ ಪ್ರವೇಶ ದ್ವಾರ



ಕೋಟೆಯ ಪ್ರವೇಶ ದ್ವಾರ



ಕಾವಲು ಗೋಪುರ



ವೀಕ್ಷಣಾ ರಂಧ್ರಗಳು



ಕೋಟೆಯ ಒಳಭಾಗದ ದೃಶ್ಯ

ಗುರುಮಿಟಕಲ್ ಕೋಟೆ


ಸಭಾ ಭವನದ ಪ್ರವೇಶ ದ್ವಾರ


ವೀಕ್ಷಣಾಲಯ


ಅವನತಿ ಹಂತದ ಕಾವಲು ಗೋಪುರ


ತೋಪು

ಚಿಂಚೋಳಿ ಕೋಟೆ



ಕುದುರೆ ಲಾಳಾಕಾರದ ಕೊತ್ತಳ



ದೇಶಮುಖ ದೇವಡಿ (ರಾಣಿ ನಿವಾಸ)



ಕೋಟೆ ಗೋಡೆ



ದೇಶಮುಖ ದೇವಡಿಯ ಪುನರ್ ನಿರ್ಮಾಣಗೊಂಡ ರಕ್ಷಣಾ ಗೋಡೆ

ಬಂದರವಾಡ ಕೋಟೆ



ಚೌಕಾಕಾರದ ಕೊತ್ತಳದ ಮಧ್ಯದ ಪ್ರವೇಶ ದ್ವಾರ



ಕೋಟೆಯ ಒಳಭಾಗದ ದೃಶ್ಯ



ಚೌಕಾಕಾರದ ಕಾವಲು ಗೋಪುರ ಮತ್ತು ದಿಡ್ಡಿ ಬಾಗಿಲು

ಜೇವರ್ಗಿ ತಾಲೂಕಿನ ಅವರಾದ ಗ್ರಾಮದ ಹುಡೆವುಗಳು









ಗುಲಬರ್ಗಾ ಜಿಲ್ಲೆಯ ವಿವಿಧ ಪ್ರಕಾರದ ಹುಡೆವುಗಳು


















ಗುಲಬರ್ಗಾ ಜಿಲ್ಲೆಯ ವಿವಿಧ ಪ್ರಕಾರದ ಹುಡೆವುಗಳು







